

ಕೋಲಾರ ಚಿನ್ನದ ಗಣಿಗಳು



ಡಾ. ಎಂ. ವೆಂಕಟಸ್ವಾಮಿ

ಕೋಲಾರ ಚಿನ್ನದ ಗಣಿಗಳು

(ಚಾರಿತ್ರಿಕ, ಸಾಂಸ್ಕೃತಿಕ, ವೈಜ್ಞಾನಿಕ, ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನ)

ಡಾ. ಎಂ. ವೆಂಕಟಸ್ವಾಮಿ

ಸಾಹಿತ್ಯ ಸುಗ್ಗಿ
ನಂ. 40, 1ನೇ ಮುಖ್ಯರಸ್ತೆ, 2ನೇ ಹಂತ, 3ನೇ ಬ್ಲಾಕ್,
ನಾಗರಬಾವಿ, ಬೆಂಗಳೂರು - 560 072.

Kolar Gold Fields

by
Dr. M. Venkataswamy
519, 39th Block, Type-V,
CPWD Qtrs, HSR Layout,
Bangalore-560 102.
Ph : 080-22584525
E-mail : alemarimvs@gmail.com

Published by
Smt. Geetha on behalf of **Sahitya Suggi**
No.40, 1st Main Road,
2nd Stage, 3rd Block, Nagarabhavi,
Bangalore - 560 072.

First Edition : 2010
Pages : 336
Price : Rs.250/-   ಬೆಲೆ : 250/-
No. of Copies : 1000
70 GSM Maplitho - 1/8 Demy

ಗೌರವ ಸಂಪಾದಕರು : ನಿಡಸಾಲೆ ಪುಟ್ಟಸ್ವಾಮಯ್ಯ
ಮುಖಪುಟ : ಪುಂಡಲೀಕ ಕಲ್ಲಿಗನೂರು
ಮುಖಪುಟ ಛಾಯಾಚಿತ್ರ : ಆರ್. ಪಾಂಡುರಂಗ
ಅಕ್ಷರ ಜೋಡಣೆ ಹಾಗೂ ಮುದ್ರಣ :
ಜಾಗೃತಿ ಪ್ರಿಂಟರ್ಸ್
ನಂ. 56/1-6, ನರಸಿಂಹಯ್ಯ ಗಾರ್ಡನ್, ಕೊಟ್ಟಿಗೆಪಾಳ್ಯ,
ಮಾಗಡಿ ಮುಖ್ಯರಸ್ತೆ, ಬೆಂಗಳೂರು-560 091. ಫೋನ್ : 080-23583850

ಅರ್ಪಣೆ

ಕತ್ತಲ ಸುರಂಗಗಳಲ್ಲಿ ಪ್ರಾಣ ತೇದು
ನೂರಾರು ಟನ್ನು ಚಿನ್ನ ಉತ್ಪಾದಿಸಿ ದೇಶದ
ಅಭಿವೃದ್ಧಿಗೆ ಪಾತ್ರರಾದ ನಾಲ್ಕಾರು
ಪೀಳಿಗೆಗಳ ಕಾರ್ಮಿಕರಿಗೆ-

ನನ್ನ ನೆಚ್ಚಿನ ಗುರುಗಳಾದ
ಪ್ರೊ. ಜಿ.ಎಚ್. ಸಾಹುಕಾರ್,
ನಿವೃತ್ತ ಪ್ರಾಂಶುಪಾಲರು,
ಪ್ರ.ದ.ಕಾ, ಕೆ.ಜಿ.ಎಫ್-

ನನಗೆ ಜನ್ಮ ನೀಡಿದ ತಂದೆ ತಾಯಿ,
ನನ್ನನ್ನು ಸಾಕಿ ಸಲಹಿದ ನನ್ನ
ಸೋದರತ್ತೆ ಶ್ರೀಮತಿ ಚಿನ್ನಪಾಪಮ್ಮ
ಮತ್ತು ಮಾವ ಶ್ರೀ ಪಿ.ನಾಗಭೂಷಣಂ
(ರೆವಿನ್ಯೂ ಇನ್ಸ್‌ಪೆಕ್ಟರ್) ಅವರಿಗೆ

ಕೃತಜ್ಞತೆಗಳು

ಈ ಮಹಾಪ್ರಬಂಧವನ್ನು ರಚಿಸುವ ಕಾಲದಲ್ಲಿ ಎಲ್ಲಾ ರೀತಿಯಲ್ಲೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಒಂದಲ್ಲಾ ಒಂದು ರೀತಿಯಲ್ಲಿ ನೆರವಾದ ಇವರಿಗೆ:

ಪ್ರೊ. ಜಿ.ಎಚ್.ಸಾಹುಕಾರ್, ಡಾ.ಜಿ.ರಾಮಕೃಷ್ಣ, ಡಾ. ಬಿ.ಪಿ.ರಾಧಾಕೃಷ್ಣ, ಶ್ರೀ ಜರಗನಹಳ್ಳಿ ಶಿವಶಂಕರ್, ಡಾ. ನಟರಾಜ್ ಹುಳಿಯಾರ್, ಶ್ರೀ ಕೆ.ರಾಮಯ್ಯ, ಪ್ರೊ. ಬರಗೂರು ರಾಮಚಂದ್ರಪ್ಪ, ಪ್ರೊ. ಸಿದ್ದಲಿಂಗಯ್ಯ, ಪ್ರೊ. ಸಿ.ವೀರಣ್ಣ, ಶ್ರೀಮತಿ/ಶ್ರೀ ಎಂ.ಎಂ.ಸ್ವಾಮಿ, ಶ್ರೀಮತಿ ಮತ್ತು ಶ್ರೀ ಮಂಗ್ಳೂರ ವಿಜಯ್, ಶ್ರೀ ಆಲೂರು ಚಂದ್ರಶೇಖರ್, ಶ್ರೀ ಲಕ್ಷ್ಮೀಪತಿ ಕೋಲಾರ, ಶ್ರೀಮತಿ ಉತ್ತನೂರು ರಾಜಮ್ಮ, ಶ್ರೀ ಹುಲಿ ಚಂದ್ರಶೇಖರ್, ಪ್ರೊ. ನಿಜಗುಣಪ್ಪ, ಡಾ. ಚಂದ್ರಪೂಜಾರ್, ಡಾ. ಎಸ್. ಶ್ರೀನಿವಾಸರೆಡ್ಡಿ, ಡಾ. ಎಂ.ಜಯಾನಂದ, ಪ್ರೊ. ಎಸ್.ಅಂಬಿಕಾ, ಶ್ರೀ ಟಿ.ಆರ್.ಅನಂತರಾಮು. ಡಾ. ವಿಎನ್.ವಾಸುದೇವ್, ಡಾ. ಮೊಗಳ್ಳಿ ಗಣೇಶ್, ಡಾ. ಪಾಂಡುರಂಗಬಾಬು, ಕೆ. ಚಂದ್ರಶೇಖರ್, ಡಾ. ಎಚ್.ಎಸ್.ಎಮ್. ಪ್ರಕಾಶ್, ಶ್ರೀ ಹಾಲಾಡಿ ಮಾರುತಿರಾವ್, ಶ್ರೀ ಆರ್.ಜಿ.ಹಳ್ಳಿನಾಗರಾಜ್, ಶ್ರೀ ಎನ್.ಆರ್.ಪುರುಷೋತ್ತಮ, ಶ್ರೀ ಆರ್.ಪಾಂಡುರಂಗ, ಶ್ರೀ ನಿಡಸಾಲೆ ಪುಟ್ಟಸ್ವಾಮಯ್ಯ, ಶ್ರೀ ಪುಂಡಲೀಕ್ ಕಲ್ಲಿಗನೂರ್, ಶ್ರೀ ಈರಪ್ಪ ಎಂ.ಕಂಬಳಿ, ಶ್ರೀ ಪಿ. ಶ್ರೀನಿವಾಸಯ್ಯ, ಶ್ರೀ ಪಿ. ವೆಂಕಟಸ್ವಾಮಿ, ಶ್ರೀ ಪಿ. ರಾಮಚಂದ್ರಪ್ಪ, ಶ್ರೀ ಪಿ. ನಾರಾಯಣ ಸ್ವಾಮಿ, ಶ್ರೀ ಎಚ್.ಡಿ.ಶಂಕರ್, ಶ್ರೀ ವಿ.ಪ್ರಸಾದ್‌ಬಾಬು, ಶ್ರೀ ಎಂ.ವೆಂಕಟಾಚಲಪತಿ, ಶ್ರೀ ಶ್ರೀಕುಮಾರ್, ಶ್ರೀ ಎನ್. ಶಂಕರಪ್ಪ, ಶ್ರೀ ಬಿ.ಎಂ. ಶಿವಪ್ಪ, ಶ್ರೀ ಎಂ. ಜಯರಾಮಪ್ಪ ಮತ್ತು ನನ್ನ ಪ್ರೀತಿಯ ಪತ್ನಿ ಶ್ರೀಮತಿ ಸುಶೀಲ ಮತ್ತು ಮಗ ಎಂ.ವಿ. ಕ್ರಾಂತಿ.

ಈ ಕೃತಿಯನ್ನು ರಚಿಸುವಾಗ ಹಲವು ರೀತಿಯಲ್ಲಿ ಸಹಾಯ ನೀಡಿದ ಇಲ್ಲಿ ಹೆಸರಿಸಲಾಗದ ಇನ್ನೂ ಅನೇಕ ಗೆಳೆಯರಿಗೆ ಮತ್ತು ಈ ಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಂದಣಿ ಮಾಡಿದ ದಿನದಿಂದ ಡಿ.ಲಿಟ್ ಪಟ್ಟ ದೊರಕುವವರೆಗೂ ಹಿಂದೆಯೇ ಇದ್ದ ಆತ್ಮೀಯ ಗೆಳೆಯ ಶ್ರೀ ಸಿ. ವೆಂಕಟೇಶ್ ಮತ್ತು ಶ್ರೀಮತಿ ಆಶಾ ವೆಂಕಟೇಶ್ ಅವರಿಗೆ ವಿಶೇಷ ಕೃತಜ್ಞತೆಗಳು.

– ಡಾ. ಎಂ.ವೆಂಕಟಸ್ವಾಮಿ

ಪ್ರವೇಶ

ಕೋಲಾರ ಚಿನ್ನದ ಗಣಿಗಳ ಚರಿತ್ರೆ, ಭೂಮಿಯ ಸಾವಿರಾರು ಮೀಟರುಗಳ ಆಳದಲ್ಲಿ ಕತ್ತಲ ಸುರಂಗಗಳಲ್ಲಿ ಚಿನ್ನ ತೆಗೆಯುತ್ತ ಅನ್ನಕ್ಕಾಗಿ ಹೋರಾಡಿದ ಸ್ಥಳೀಯ ಜನಾಂಗಗಳ ಒಂದು ದಾರುಣ ಕತೆ. ಇಂಡಿಯಾ ಮೂಲದ ತಿರಸ್ಕೃತ ಜನಾಂಗಗಳು ಸಾಂಸ್ಕೃತಿಕ ಮತ್ತು ಸಾಮಾಜಿಕ ಸಮಾನತೆಗಾಗಿ ನಿರಂತರ ಹೋರಾಟ ನಡೆಸಿದ ಒಂದು ಅಪರೂಪದ ಕತೆಯೂ ಹೌದು. ಆಳದೊಳಗೆ ಪಾತಾಳದೊಳಗೆ ಜೀವನವಿಡೀ ಕತ್ತಲಲ್ಲಿ ಬೆವರು ಬಸಿಯುತ್ತಲೆ ಚಿನ್ನದ ತುಣುಕುಗಳನ್ನು ಹೆಕ್ಕುತ್ತಾ ಹೊರಟ ಈ ಗಣಿ ಕಾರ್ಮಿಕರ ಹೆಣ್ಣು ಮಕ್ಕಳ ಕಿವಿ-ಮೂಗುಗಳಲ್ಲಿ ಕೊನೆಯವರೆಗೂ ಒಂದೇ ಒಂದು ಚಿನ್ನದ ಎಳೆಯನ್ನೂ ಕಾಣಲು ಸಾಧ್ಯವಾಗಲಿಲ್ಲ. ಒಂದು ಹೊತ್ತಿನ ಊಟಕ್ಕಾಗಿಯೇ ಈ ಪೀಳಿಗೆಗಳು ತಮ್ಮ ಜೀವನವಿಡೀ ಹೋರಾಟ ನಡೆಸಿ ಮಣ್ಣು ಪಾಲಾದ ಕತೆಯ ವ್ಯಥೆ ಇದು. ವಸಾಹತು ಕಾಲಘಟ್ಟದಲ್ಲಿ ಬ್ರಿಟಿಷರು ಈ ಕಾರ್ಮಿಕರನ್ನು ನಡೆಸಿಕೊಂಡ ರೀತಿಯಂತೂ ಯಾವುದೇ ನಾಗರಿಕ ಜನಾಂಗ ತಲೆ ತಗ್ಗಿಸುವಂಥದ್ದು.

ಪ್ರಪಂಚದ ಮೂಲೆಮೂಲೆಯಲ್ಲಿ ಚಿನ್ನದ ಚಮಚೆಗಳನ್ನು ಬಾಯಲ್ಲಿ ಇಟ್ಟುಕೊಂಡು ಭೂಮಿಗೆ ಇಳಿದು ಬಂದ ರಾಜ-ರಾಣಿಯರು ಮತ್ತು ಅವರ ಪರಿವಾರಗಳು ಚಿನ್ನದ ನೀರಿನಲ್ಲಿ ಮುಳುಗಿ ತೇಲಾಡಿದರು. ಸ್ಥಳೀಯ ಜನರು ತಮ್ಮ ಬೆವರು ಬಸಿದು ತೆಗೆದುಕೊಟ್ಟ ಚಿನ್ನವನ್ನು ಜಗತ್ತಿನಾದ್ಯಂತ ರಾಜಾಧಿರಾಜರು ಸೃಷ್ಟಿಸಿದ ನೂರಾರು ಅದ್ಭುತ ಸ್ಮಾರಕಗಳ ಸೌಂದರ್ಯಕ್ಕೆ ಹೇರಳವಾಗಿ ಬಳಸಲಾಯಿತು. ಚಿನ್ನಕ್ಕಾಗಿ ಜಗತ್ತಿನಲ್ಲಿ ನೂರಾರು ಯುದ್ಧಗಳು ನಡೆದು ಸಾವಿರಾರು ಜನರು ಪ್ರಾಣ ಕಳೆದುಕೊಂಡರು. ಚಿನ್ನದ ವ್ಯಾಮೋಹವೇ ಹಾಗೆ. ಪಳಪಳನೆ ಹೊಳೆಯುವ ಈ ಹಳದಿ ಲೋಹ 'ರಾಜರ ಲೋಹ, ಲೋಹಗಳ ರಾಜ'ನೆಂದು ಖ್ಯಾತಿಗಳಿಸಿ ಚರಿತ್ರೆಯ ಉದ್ದಕ್ಕೂ ಮನುಷ್ಯನ ಕಣ್ಣುಗಳಿಗೆ ಆಶ್ಚರ್ಯ, ಅದ್ಭುತ ಮತ್ತು ಮಾಯಾಲೋಹವಾಗಿಯೇ ಕಾಣಿಸಿಕೊಳ್ಳುತ್ತ ಬಂದಿದೆ. ಕೆಜಿಎಫ್ ಚಿನ್ನದ ಗಣಿಗಳಿಗೆ ಸುಮಾರು 4000 ವರ್ಷಗಳ ಇತಿಹಾಸವಿದೆ. ಜೊತೆಗೆ ವಸಾಹತು ಮತ್ತು ವಸಾಹತೋತ್ತರ ಕಾಲಘಟ್ಟಗಳಲ್ಲಿ ಹನ್ನೆರಡು ದಶಕಗಳ ಕಾಲ ಕ್ರಿ.ಶ. 1880 ರಿಂದ ಕ್ರಿ.ಶ. 2001 ರವರೆಗೆ ಈ ಕಪ್ಪು ನೆಲದಲ್ಲಿ ಸದ್ದು

ಗದ್ದಲವಿಲ್ಲದೆ ನಡೆದುಹೋದ ಮೌನ ಕತೆಯೇ ಕೋಲಾರ ಚಿನ್ನದ ಗಣಿಗಳ ಈ ಕಥನ.

ಪುರಾತನ ವಸ್ತುಶಾಸ್ತ್ರ ಸಂಶೋಧನೆಗಳಿಂದ ಕೆಜಿಎಫ್ ಪ್ರದೇಶದಲ್ಲಿ 4000 ವರ್ಷಗಳ ಹಿಂದಿನಿಂದಲೂ ಚಿನ್ನಕ್ಕಾಗಿ ಗಣಿ ಚಟುವಟಿಕೆಗಳು ನಡೆದಿರುವುದಾಗಿ ತಿಳಿಯುತ್ತದೆ. ಕೆಲವು ವಸ್ತುಗಳನ್ನು ಕಾರ್ಬನ್ ಡೇಟಿಂಗ್ ವಿಶ್ಲೇಷಣೆಗೆ ಒಳಪಡಿಸಿದಾಗ ಅವು ಕ್ರಿ.ಶ. 5ನೇ ಶತಮಾನದ ವಸ್ತುಗಳಾಗಿದ್ದವು. ಕೆಜಿಎಫ್ ವ್ಯಾಪ್ತಿಯಲ್ಲಿರುವ ಚಿಗುರುಗುಂಟದ ಹಳೆ ಗಣಿಗಳಲ್ಲಿ ದೊರಕಿದ ಮರದ ಚೂರುಗಳನ್ನು ಕಾರ್ಬನ್ ಡೇಟಿಂಗ್‌ಗೆ ಒಳಪಡಿಸಿದಾಗ ಅವು 2600 ವರ್ಷಗಳ ಹಿಂದಿನ ಮರದ ಚೂರುಗಳಾಗಿದ್ದವು. ಇದೇ ವ್ಯಾಪ್ತಿಯ ಕೋರಮಂಡಲ, ಮೈಸೂರು ಗಣಿಗಳ ಒಳಗೆ 200–300 ಅಡಿಗಳ ಕೆಳಗೆ ಸುರಂಗಗಳಲ್ಲಿ ಮರದ ದಿಮ್ಮಿಗಳು, ಕಬ್ಬಿಣದ ಬಾಣಲಿ, ಕಲ್ಲಿನ ಪೀಠಗಳು, ಕಬ್ಬಿಣದ ಕುಟ್ಟಣಿಗಳು, ಕಲ್ಲಿನ ಗುಂಡುಗಳು, ಮಡಿಕೆಗಳು ಇತ್ಯಾದಿ ಪುರಾತನ ವಸ್ತುಗಳು ದೊರಕಿದ್ದವು. ಆಳದ ಸುರಂಗಗಳಲ್ಲಿ ಒಸರುತ್ತಿದ್ದ ನೀರನ್ನು ತೆಗೆಯಲು ಮಣ್ಣಿನ ಮಡಿಕೆಗಳನ್ನು ಉಪಯೋಗಿಸಲಾಗುತ್ತಿತ್ತು. ಪುರಾತನ ವಸ್ತುಗಳನ್ನು ಮೈಸೂರು ಗಣಿಗಳ ಹತ್ತಿರ ಇರುವ ಗಣಿ ಸಂಗ್ರಹಾಲಯದಲ್ಲಿ ಇಡಲಾಗಿತ್ತು; ಆದರೆ ಈಗ ಸಂಗ್ರಹಾಲಯ ಮುಚ್ಚಿದೆ.

ಜಾನ್ ಟೇಲರ್ ಗಣಿಗಳನ್ನು ಸ್ಥಾಪನೆ ಮಾಡಿದಾಗ ತನ್ನ ಜೊತೆಗೆ ಬ್ರಿಟಿಷರನ್ನು, ಇಟಾಲಿಯನ್ನರನ್ನು ಮತ್ತು ಇನ್ನಿತರ ಐರೋಪ್ಯ ದೇಶಗಳ ಜನರನ್ನು ಕರೆದು ತಂದರು. 1800–1900ರ ಮಧ್ಯೆ ಗಣಿಗಳು ಬೆಳೆಯುತ್ತಿದ್ದಾಗ ಕೆಥೋಲಿಕರು, ಪ್ರಾಟೆಸ್ಟಂಟರು, ಬೌದ್ಧರು, ಮುಸಲ್ಮಾನರು ಇಲ್ಲಿಗೆ ಬಂದು ತಮ್ಮ ಧರ್ಮಗಳ ಬಗ್ಗೆ ಪ್ರಚಾರ ಮಾಡತೊಡಗಿದರು. ಇವರ ಜೊತೆಗೆ ಶೈವರು ಮತ್ತು ವೈಷ್ಣವರು ತಮಿಳುನಾಡಿನಿಂದ ಪುರೋಹಿತರನ್ನು ಕರೆದು ತಂದು ತಮ್ಮದೇ ವಿಧಾನದಲ್ಲಿ ಪೂಜೆ ಮಾಡಿಸತೊಡಗಿದರು. ಎಲ್ಲಾ ಧರ್ಮೀಯರು ವಲಸೆ ಬಂದ ಕಾರ್ಮಿಕರನ್ನು ಮತ್ತು ಸ್ಥಳೀಯರನ್ನು ತಮ್ಮ ತಮ್ಮ ಧರ್ಮಗಳಿಗೆ ಮತಾಂತರಿಸುವಲ್ಲಿ ಸ್ವಲ್ಪ ಮಟ್ಟಿಗೆ ಸಫಲವಾದರೂ ಕೂಡ.

ಏಷಿಯಾದಲ್ಲೇ ಮೊದಲ ಬಾರಿಗೆ ಕ್ರಿ.ಶ. 1902 ರಲ್ಲಿ ಮೈಸೂರು ಮಹಾರಾಜರು ಕಾವೇರಿಕೊಳ್ಳದ ಶಿವನಸಮುದ್ರದ ಹತ್ತಿರ ಜಲವಿದ್ಯುತ್ ಸ್ಥಾವರ ನಿರ್ಮಿಸಿ ಕೆಜಿಎಫ್‌ಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿದರು. ಎರಡು ವರ್ಷಗಳ ನಂತರ ಬೆಂಗಳೂರಿಗೂ/ ಮೈಸೂರಿಗೂ ಇಲ್ಲಿಂದಲೇ ವಿದ್ಯುತ್ ಬಂದು ಅದು ದೇಶದಲ್ಲಿಯೇ ಮೊದಲ ವಿದ್ಯುತ್ ಪಡೆದ ನಗರಗಳಾದವು. ಅಮೆರಿಕಾದ ನಯಾಗರ ಜಲವಿದ್ಯುತ್ ಸ್ಥಾವರವನ್ನು ನಿರ್ಮಿಸಿದ ಜನರಲ್ ಎಲೆಕ್ಟ್ರಿಕಲ್ ಕಂಪನಿಯೇ ಶಿವನ ಸಮುದ್ರದಲ್ಲೂ ಈ ಸ್ಥಾವರವನ್ನು ರೂಪಿಸಿತ್ತು. ಆ ಕಾಲಕ್ಕೆ 140 ಕಿ.ಮೀ. ದೂರದಿಂದ ವಿದ್ಯುತ್ ಕಂಬಗಳನ್ನು ನಿಲ್ಲಿಸಿ ವಿದ್ಯುತ್

ಸಂಪರ್ಕ ಕಲ್ಪಿಸಿದ್ದು ಪ್ರಪಂಚದಲ್ಲಿಯೇ ಒಂದು ಅದ್ಭುತ ಕೆಲಸವಾಗಿತ್ತು. ಮೈಸೂರು ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಕ್ರಿ.ಶ. 1864ರಲ್ಲಿ ಬೆಂಗಳೂರು–ಮದ್ರಾಸ್ ನಡುವೆ ಬ್ರಾಡ್‌ಗೇಜ್ ರೈಲು ದಾರಿಯನ್ನು ಅಳವಡಿಸಲಾಯಿತು. ಕ್ರಿ.ಶ. 1894ರಲ್ಲಿ ಬಂಗಾರಪೇಟೆಯಿಂದ ಕೆಜಿಎಫ್ ಪ್ರದೇಶಕ್ಕೆ 16 ಕಿ.ಮೀ. ದೂರದ ಬ್ರಾಡ್‌ಗೇಜ್ ರೈಲು ರಸ್ತೆಯನ್ನು ಮಾಡಲಾಯಿತು. ಕ್ರಿ.ಶ. 1911ರಲ್ಲಿ ಕೆಜಿಎಫ್ ನಗರ ಜಿಲ್ಲೆಯಲ್ಲಿಯೇ ಹೆಚ್ಚು ಸಾಕ್ಷರತೆಯನ್ನು ಸಾಧಿಸಿತ್ತು. ರಾಜ್ಯದಲ್ಲಿಯೇ ಮೈಸೂರು ಜಿಲ್ಲೆಯ ನಂತರ ಕ್ರಿ.ಶ. 1869ರಲ್ಲಿ ಕೋಲಾರ ಜಿಲ್ಲೆಯ ಗೆಜೆಟಿಯರನ್ನು ಹೊರತರಲಾಗಿತ್ತು. ಕ್ರಿ.ಶ. 1884ರ ಸುಮಾರಿಗೆ ಪ್ರಾರಂಭವಾದ ಕೆಜಿಎಫ್ ಗಣಿ ಆಸ್ಪತ್ರೆ ದೇಶದಲ್ಲಿಯೇ ಆ ಕಾಲಕ್ಕೆ ಆಧುನಿಕ ಸವಲತ್ತುಗಳ, ಸುಸಜ್ಜಿತ ಆಸ್ಪತ್ರೆಯಾಗಿ ಹೆಸರು ಗಳಿಸಿತ್ತು.

ಒಂದು ಅಂದಾಜಿನ ಪ್ರಕಾರ ಟನ್ನಿಗೆ ಸರಾಸರಿ 3 ಗ್ರಾಂ ಚಿನ್ನ ದೊರಕುವ 7.60 ಮಿಲಿಯನ್ ಟನ್ನುಗಳಷ್ಟು ಅದಿರು ಚಾಂಪಿಯನ್ ರೀಫ್ ಗಣಿಗಳಲ್ಲಿಯೇ ಉಳಿದುಕೊಂಡಿರುವುದಾಗಿ ತಿಳಿದುಬರುತ್ತದೆ. ಚಾಂಪಿಯನ್ ರೀಫ್ ಜೊತೆಗಿರುವ ಇನ್ನಿತರ ಸಣ್ಣಪುಟ್ಟ ಲೋಡ್‌ಗಳು ಮತ್ತು ಉಳಿದ 25 ಲೋಡ್‌ಗಳಲ್ಲಿಯೂ ಸಣ್ಣ ಪ್ರಮಾಣದಲ್ಲಿ ಚಿನ್ನ ಇರುವುದಾಗಿ ತಿಳಿದು ಬರುತ್ತದೆ. ಈ ಎಲ್ಲಾ ಲೋಡ್‌ಗಳಲ್ಲಿ ಹುದುಗಿರುವ ಚಿನ್ನದ ಪ್ರಮಾಣವನ್ನು ಚಿನ್ನದ ಗಣಿಗಳನ್ನು ಮುಚ್ಚುವವರೆಗೂ ಗಣಿ ಆಡಳಿತ ಸರಿಯಾಗಿ ಲೆಕ್ಕ ಹಾಕಲೇ ಇಲ್ಲ. ಇದರ ಜೊತೆಗೆ ಮಲ್ಲಪ್ಪನಕೊಂಡ, ಚಿಗುರುಗುಂಟ, ಯಾಪಮಾನ, ಬಿಸಾನತ್ತಂ ಮತ್ತಿತರ ಗಣಿಗಳಲ್ಲಿ ಚಿನ್ನ ಇರುವುದಾಗಿ ತಿಳಿದುಬರುತ್ತದೆ.

121 ವರ್ಷಗಳಲ್ಲಿ ಪುಡಿಮಾಡಿ ಎಸೆದಿರುವ 50 ಮಿಲಿಯನ್ ಟನ್ನುಗಳ ಸಯೆನ್ಯೆಡ್ ಮಣ್ಣಿನಲ್ಲಿ 1 ಟನ್ನಿಗೆ ಸರಾಸರಿ 0.70 ರಿಂದ 1.0 ಗ್ರಾಂ ಚಿನ್ನ ಉಳಿದಿರುವುದಾಗಿ ತಿಳಿದುಬರುತ್ತದೆ. ಇದನ್ನು ಮತ್ತೊಮ್ಮೆ ಸಂಸ್ಕರಿಸಿದರೆ ಸರಾಸರಿ 1 ಟನ್ನು ಮಣ್ಣಿಗೆ 0.3 ರಿಂದ 0.7 ಗ್ರಾಂ ಚಿನ್ನವನ್ನು ಹೊರತೆಗೆಯಬಹುದು ಎನ್ನುವ ಲೆಕ್ಕಚಾರ ಇದೆ. ಆದರೆ ಕೆಜಿಎಫ್ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಈಗಾಗಲೆ ಸಯೆನ್ಯೆಡ್ ವಿಷ ಮಣ್ಣಿನಿಂದ ತುಂಬಿಹೋಗಿದ್ದು ಇನ್ನಷ್ಟು ಮಾಲಿನ್ಯಗೊಳ್ಳುತ್ತವೆ. ಮನುಷ್ಯ ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ಭಾರಿ ದುಷ್ಪರಿಣಾಮ ಬೀರುವುದರ ಜೊತೆಗೆ ಈಗಾಗಲೇ ಬೀಳುಬಿದ್ದಿರುವ ಭೂಮಿ ಇನ್ನಷ್ಟು ಬಂಜರು ಭೂಮಿಯಾಗುತ್ತದೆ.

ಪ್ರಪಂಚ ಪ್ರಖ್ಯಾತ ಕೆಜಿಎಫ್ ಚಿನ್ನದ ಗಣಿಗಳ ಬಗ್ಗೆ ಇದುವರೆಗೆ ಯಾವುದೇ ರೀತಿಯ ಒಟ್ಟಾರೆ ಒಂದು ವಸ್ತುನಿಷ್ಠ ಚಾರಿತ್ರಿಕ, ಸಾಮಾಜಿಕ, ವೈಜ್ಞಾನಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಧ್ಯಯನ ನಡೆದಿಲ್ಲ. ಕೆಜಿಎಫ್ ಗಣಿಗಳು ದೇಶದಲ್ಲೇ ಅಲ್ಲದೇ, ಪ್ರಪಂಚದ ಗಣಿ ಉದ್ದಿಮೆಯಲ್ಲಿ ವಿಶೇಷವಾದ ಒಂದು ಚಾರಿತ್ರಿಕ ಹಿನ್ನೆಲೆಯನ್ನು

ಹೊಂದಿವೆ. ಕರ್ನಾಟಕದ ಕಪ್ಪು ಶಿಲೆಗಳ ಗರ್ಭದಲ್ಲಿ ಅಡಗಿಕೊಂಡಿದ್ದ 830 ಟನ್ನುಗಳಿಗಿಂತ (ಲೆಕ್ಕ ಸಿಕ್ಕಿರುವ) ಹೆಚ್ಚು ಚಿನ್ನವನ್ನು ತೆಗೆಯಲು ಸಾವಿರಾರು ಕಾರ್ಮಿಕರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಈ ಗಣಿಗಳಲ್ಲಿ ದುಡಿದ ಕಾರ್ಮಿಕರ ದುಃಖ-ದುಮ್ಮಾನ, ನೋವು, ನಲಿವು ಸಮಗ್ರವಾಗಿ ಒಂದು ಕಡೆ ಇದುವರೆಗೆ ಎಲ್ಲಿಯೂ ದಾಖಲಾಗಿಲ್ಲ. ಈ ಕಾರ್ಮಿಕರ ಶ್ರಮ ದೇಶದ ಅಭಿವೃದ್ಧಿಗೆ ಅಪಾರವಾದ ಕೊಡುಗೆಯನ್ನು ನೀಡಿದೆ.

ಕೆಜಿಎಫ್ ಗಣಿಗಳಿಗೆ ವಿಶಿಷ್ಟ ಪಾರಂಪರಿಕ ಚರಿತ್ರೆ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿದ್ದು ಸುಮಾರು 4000 ವರ್ಷಗಳ ಹಿಂದಿನಿಂದಲೂ ಈ ಚಿನ್ನದ ಬಯಲುಗಳಲ್ಲಿ ಚಿನ್ನ ತೆಗೆಯುವ ಚಟುವಟಿಕೆಗಳು ನಡೆದಿರುವುದಾಗಿ ತಿಳಿದುಬರುತ್ತದೆ. ಆದರೆ ಆಧುನಿಕ ಚಿನ್ನದ ಗಣಿಗಳ ಕಾಲವನ್ನು ಬಿಟ್ಟರೆ ಅದಕ್ಕಿಂತ ಹಿಂದಿನ ಕಾಲದ ಯಾವುದೇ ನಿಖರವಾದ ದಾಖಲೆಗಳು ದೊರಕುವುದಿಲ್ಲ. ಪುರಾಣ ಕಾಲದಿಂದ ಹಿಡಿದು ಯೂರೋಪಿಯನ್ನರ ಆಗಮನ ಮತ್ತು ಆಧುನಿಕ ಚಿನ್ನದ ಗಣಿಗಳ ಚರಿತ್ರೆಯನ್ನು ಹಂತ ಹಂತವಾಗಿ ವೈಜ್ಞಾನಿಕ ವಿಶ್ಲೇಷಣೆಗಳೊಂದಿಗೆ ರೂಪಿಸಲಾಗಿದೆ. ವಸಾಹತು ಕಾಲಘಟ್ಟದೊಂದಿಗೆ ಪ್ರಾರಂಭವಾದ ಈ ಆಧುನಿಕ ಗಣಿ ಉದ್ದಿಮೆ ಇಲ್ಲಿನ ಜನರ ಜೊತೆಗೆ ಸಾಮಾಜಿಕ ಸಂಬಂಧಗಳನ್ನು ಹೊಂದಿದ್ದಲ್ಲದೆ ಅನೇಕ ರೀತಿಯ ಬದಲಾವಣೆಗಳಿಗೂ ಕಾರಣವಾಗಿದೆ. ಈ ಪ್ರದೇಶ ಶೈಕ್ಷಣಿಕ ಮತ್ತು ಆರ್ಥಿಕತೆಯಲ್ಲೂ ಸಾಕಷ್ಟು ಬದಲಾವಣೆಗಳನ್ನು ಕಂಡಿದ್ದು ದೇಶದ ಮೇಲೆಯೂ ಸ್ವಲ್ಪ ಮಟ್ಟಿಗೆ ಪ್ರಭಾವ ಬೀರಿದೆ. ಈ ಗಣಿ ಉದ್ದಿಮೆಯು ಸ್ವಾತಂತ್ರ್ಯ ಪೂರ್ವದಲ್ಲಿಯೇ ವಿಶೇಷವಾಗಿ ಎರಡು ವಿಶ್ವ ಮಹಾಯುದ್ಧಗಳ ಕಾಲದಲ್ಲಿ ಮತ್ತು ಅನಂತರದ ಕಾಲದಲ್ಲಿ ದೇಶದಲ್ಲಿ ಅನೇಕ ಕಾರ್ಖಾನೆಗಳು ಮತ್ತು ಕೈಗಾರಿಕಾ ಉದ್ದಿಮೆಗಳು ಸ್ಥಾಪನೆಯಾಗಲು ಕಾರಣವಾಗಿವೆ. ಹಾಗೆ ಬ್ರಿಟಿಷರು ಮತ್ತು ಅವರ ದೇಶ ಪ್ರಪಂಚದಾದ್ಯಂತ ಮೆರೆಯಲೂ ಈ ಗಣಿಗಳು ಕಾರಣವಾಗಿವೆ. ಸ್ಥಳೀಯ ಧರ್ಮಗಳು ಮತ್ತು ಜಾತಿಗಳ ಮೇಲೂ ಅಪಾರ ಪ್ರಭಾವ ಬೀರಿದವು. ಇಲ್ಲಿನ ಧರ್ಮಗಳು ಮತ್ತು ಜಾತಿಗಳ ಮೇಲೆ ಯಾವ ರೀತಿಯ ಪ್ರಭಾವ ಉಂಟಾಯಿತು? ಅದರಿಂದ ಉಂಟಾದ ಲಾಭಗಳೇನು? ನಷ್ಟಗಳ್ಯಾವು? ಇತ್ಯಾದಿಗಳನ್ನು ಅಧ್ಯಯನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಕೆಜಿಎಫ್ ಪ್ರದೇಶದಲ್ಲಿ ಮೊದಲಿನಿಂದಲೂ ಚಿನ್ನವನ್ನು ತೆಗೆಯುತ್ತಿದ್ದವರು ಸ್ಥಳೀಯರೇ ? ಅಥವಾ ಬೇರೆ ಪ್ರದೇಶಗಳಿಂದ ಬಂದವರೆ ? ಎನ್ನುವುದು ಇಂದಿಗೂ ನಿಗೂಢವಾಗಿಯೇ ಉಳಿದಿದೆ. ಇಲ್ಲಿನ ಚಿನ್ನ ಹರಪ್ಪ ಮೊಹೆಂಜೊದಾರೊ ಮತ್ತು ಈಜಿಪ್ಟ್ ನಾಗರಿಕ ತೊಟ್ಟಿಲುಗಳವರೆಗೂ ತಲುಪಿರುವ ಸೂಚನೆಗಳು ಕಂಡುಬರುತ್ತವೆ. ಇದರ ಜೊತೆಗೆ ಕೆಜಿಎಫ್ ಪ್ರಪಂಚದ ಇತರ ಭಾಗಗಳೊಂದಿಗೆ ಸಂಬಂಧ ಹೊಂದಿತ್ತೇ

? ಹೊಂದಿದ್ದರೆ ಯಾವ ಕಾಲದಿಂದ ಎನ್ನುವುದನ್ನೂ ಪರಿಶೀಲಿಸಬೇಕಾಗಿದೆ. 121 ವರ್ಷಗಳ ಆಧುನಿಕ ಚಿನ್ನದ ಗಣಿಗಳ ಚರಿತ್ರೆ ಮತ್ತು ಈ ಗಣಿಗಳಲ್ಲಿ ದುಡಿದ ಆರೇಳು ತಲೆಮಾರುಗಳ ಸಾಂಸ್ಕೃತಿಕ ನೆಲೆಗಟ್ಟನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ವಸಾಹತು ಮತ್ತು ವಸಾಹತೋತ್ತರ ಪರಿಣಾಮಗಳ ಬಗ್ಗೆ, ಬ್ರಿಟಿಷರ ಆಗಮನದ ನಂತರ ಗಣಿ ಉದ್ದಿಮೆ ಮತ್ತು ಒಟ್ಟಾರೆ ಭಾರತದ ಅಭಿವೃದ್ಧಿಯ ವಿಶ್ಲೇಷಣೆಯ ಸಂಬಂಧಗಳತ್ತ ಬೆಳಕು ಚೆಲ್ಲಬೇಕಾಗಿದೆ. ಮೇಲಿನ ವಿಷಯಗಳ ಜೊತೆಗೆ ಇನ್ನಿತರ ಚಾರಿತ್ರಿಕ, ಸಾಂಸ್ಕೃತಿಕ ಮತ್ತು ವೈಜ್ಞಾನಿಕ ವಿಷಯಗಳನ್ನು ಪರಿಶೀಲಿಸುವುದು ಈ ಅಧ್ಯಯನದ ಮೂಲ ಉದ್ದೇಶವಾಗಿದೆ.

ಈ ಅಧ್ಯಯನದಲ್ಲಿ ತೊಡಗಿಕೊಳ್ಳುವುದಕ್ಕಿಂತ ಮುಂಚಿನಿಂದಲೂ ಈ ವಿಷಯದಲ್ಲಿ ಆಸಕ್ತಿ ಇದ್ದುದರಿಂದ ಈ ಸಂಶೋಧನೆ ಸಿದ್ಧಪಡಿಸಲು ಸಹಾಯಕವಾಗುವ ಸಾಕಷ್ಟು ವಿಷಯಗಳು ನನ್ನ ಸಂಗ್ರಹದಲ್ಲಿದ್ದವು. ಈ ನೆಲದ ಬಹುಮುಖಿ ಸಂಸ್ಕೃತಿಯಿಂದ, ಈ ಅಧ್ಯಯನ ಸಾಮಾಜಿಕವಾಗಿಯೂ ಮತ್ತು ವೈಜ್ಞಾನಿಕವಾಗಿಯೂ ಗಮನ ಸೆಳೆಯುವ ಮತ್ತು ಒಂದು ಮಹತ್ವದ ಅಧ್ಯಯನವಾಗುತ್ತದೆ ಎನ್ನುವುದು ನನ್ನ ನಂಬಿಕೆ ಮತ್ತು ಆಶಯ. ಒಟ್ಟಿನಲ್ಲಿ ಒಂದು ಗಣಿಯ ಸುತ್ತಲು ಆರೇಳು ಪೀಳಿಗೆಗಳು ತಮ್ಮನ್ನು ತಾವೇ ಶ್ರೀಗಂಧದಂತೆ ಶಿಲೆಗಳ ಜೊತೆಗೆ ತೇದುಕೊಂಡು ಹೇಗೆ ಹೋರಾಟವನ್ನು ನಡೆಸಿದವು ಎನ್ನುವುದನ್ನು ಇಲ್ಲಿ ನೋಡಬಹುದಾಗಿದೆ. ಇಂತಹ ಹೋರಾಟಗಳು ವಸಾಹತು ಕಾಲಘಟ್ಟದಲ್ಲಿ ನಮ್ಮ ದೇಶದ ಅನೇಕ ಪ್ರಾಂತ್ಯಗಳಲ್ಲಿ ಮತ್ತು ಪ್ರಪಂಚದ ಮೂಲೆಮೂಲೆಗಳಲ್ಲೂ ದಾಖಲಾಗಿವೆ. ಹಲವು ದೇಶಗಳಲ್ಲಿ ಇಂದಿಗೂ ಅದು ಮುಂದುವರಿದಿದೆ. ಇಂತಹ ಕೆಲವು ವಿಶೇಷಗಳನ್ನು ಒಳಗೊಂಡ ಈ ಅಧ್ಯಯನ ಕನ್ನಡದಲ್ಲಿ ಇದೇ ಮೊದಲು ಮತ್ತು ವಿಶೇಷವಾದುದು.

ವಿಷಯ ಸಂಗ್ರಹಣೆ ಮತ್ತು ಪ್ರಬಂಧದ ವ್ಯಾಪ್ತಿ

ಚಿನ್ನದ ಗಣಿಗಳಿಗೆ ಸಂಬಂಧ ಪಟ್ಟ ಎಲ್ಲಾ ವಿಷಯಗಳನ್ನು ಮೊದಲಿಗೆ ಸಂಗ್ರಹಿಸಲು ಪ್ರಾರಂಭವಮಾಡಿದೆ. ಗಣಿಗಳ ಜೊತೆಗೆ ಸಂಬಂಧ ಇಟ್ಟುಕೊಂಡಿದ್ದ ಸಮಾಜ ಕಾರ್ಯಕರ್ತರು, ಗಣಿಗಳಲ್ಲಿ ದುಡಿದವರು, ಲೇಖಕರು ಮತ್ತು ಬುದ್ಧಿ ಜೀವಿಗಳನ್ನು ಭೇಟಿ ಮಾಡಿ ವಿಷಯಗಳನ್ನು ಸಂಗ್ರಹ ಮಾಡಿದೆ. ಕೆಜಿಎಫ್‌ನ ಗಣಿ ಪುಸ್ತಕ ಭಂಡಾರ, ಬೆಂಗಳೂರು ವಿಶ್ವವಿದ್ಯಾಲಯ, ಮಿಥಿಕ್ ಸೊಸೈಟಿ, ಐಸೆಕ್, ಐಐಎಸ್, ಕೆಎಸಿ, ಬ್ರಿಟಿಷ್ ಪುಸ್ತಕ ಭಂಡಾರಗಳಲ್ಲಿ ಮತ್ತು ವಿಧಾನಸೌದದ ಒಳಗಿರುವ ಪುಸ್ತಕ ಭಂಡಾರ ಮತ್ತು ರಾಜ್ಯ ಪಾತ್ರಾಗಾರದಲ್ಲಿ ಚಿನ್ನ ಮತ್ತು ಚಿನ್ನದ ಗಣಿಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಸಂಗ್ರಹಿಸಿದೆ.

ಕೆಜಿಎಫ್‌ನಲ್ಲಿದ್ದ ಕೆಲವು ಕಾರ್ಮಿಕರು, ಸ್ಥಳೀಯ ಪತ್ರಿಕೆಗಳು, ಆಂಗ್ಲೋ-ಇಂಡಿಯನ್ನರಿಂದಲೂ ಕೆಲವು ದಾಖಲೆಗಳನ್ನು ಸಂಗ್ರಹಿಸಿದೆ. ಚಿನ್ನದ ಗಣಿಗಳನ್ನು ಆಗಲೆ ಮುಚ್ಚಿದ್ದಿಂದ ಗಣಿ ಪುಸ್ತಕ ಭಂಡಾರ ಪೂರ್ಣವಾಗಿ ಶಿಥಿಲಗೊಂಡಿತ್ತು. ಕೆಲವು ಗೆಳೆಯರೊಂದಿಗೆ ನೀರಿನಲ್ಲಿ ನೆನೆದು, ಧೂಳಿನಲ್ಲಿ ಮುಚ್ಚಿಹೋಗಿದ್ದ ಈ ಅಮೂಲ್ಯ ದಾಖಲೆಗಳನ್ನು ಬಹಳ ಕಷ್ಟದಿಂದ ಓದಿ ಸಾಕಷ್ಟು ವಿಷಯಗಳನ್ನು ಸಂಗ್ರಹ ಮಾಡಿಕೊಂಡೆ. ಬಹುಶಃ ಬ್ರಿಟಿಷರಿದ್ದಿದ್ದರೆ ಈ ದಾಖಲೆಗಳಿಗೆ ಇಂತಹ ದುಃಸ್ಥಿತಿ ಬರುತ್ತಿರಲಿಲ್ಲವೇನೋ?. ಗಣಿ ಆಡಳಿತ ಈ ಅಮೂಲ್ಯ ದಾಖಲೆಗಳನ್ನು ಉಳಿಸುವ ಯಾವ ಪ್ರಯತ್ನಗಳನ್ನು ಮಾಡಲಿಲ್ಲ ಎನ್ನುವುದು ಬಹಳ ನೋವಿನ ವಿಷಯವಾಗಿದೆ. ವಿಧಾನಸೌದದಲ್ಲಿ ತಿಳಿದುಬಂದ ವಿಷಯವೆಂದರೆ ರಾಜ್ಯ ಸರಕಾರದ ಅಧಿಕಾರಿಗಳು ನಾಲ್ಕಾರು ಸಲ ಗಣಿ ಅಧಿಕಾರಿಗಳನ್ನು ಭೇಟಿ ಮಾಡಿ ಎಲ್ಲಾ ದಾಖಲೆಗಳನ್ನು ರಾಜ್ಯ ಸರಕಾರದ ವಶಕ್ಕೆ ನೀಡುವಂತೆ ಕೇಳಿಕೊಂಡರೂ ಗಣಿ ಆಡಳಿತ ನೀಡಲಿಲ್ಲವಂತೆ.

ಇಂಗ್ಲೆಂಡ್ ದೇಶದ ಒಂದು ವಿಶೇಷವೆಂದರೆ ಯಾವುದೇ ವಿಷಯದ ಬಗ್ಗೆ ನೀವು ದಾಖಲೆಗಳನ್ನು ಕೇಳಿದರೆ ಅವರಲ್ಲಿ ದೊರಕುವ ಮಾಹಿತಿಯನ್ನು ಬಹಳ ಪ್ರೀತಿಯಂದ ಕಳುಹಿಸಿಕೊಡುತ್ತಾರೆ. ಅವರು ಕಳುಹಿಸಿದ ಕೆಲವು ದಾಖಲೆಗಳಲ್ಲಿ ಪಿ. ಬೋಸ್‌ವರ್ತ್ ಸ್ಮಿತ್ ಅವರ ವರದಿ ವಿಶೇಷವಾದುದು. ಚಿನ್ನದ ಗಣಿಗಳ ಬಗ್ಗೆ ಕನ್ನಡದಲ್ಲಿ ಟಿ.ಆರ್. ಅನಂತರಾಮು ಅವರ (ಭೂವಿಜ್ಞಾನಿ, ಜಿಎಸ್‌ಐ) 'ರಾಜರ ಲೋಹ ಲೋಹಗಳ ರಾಜ' ಕೃತಿಯನ್ನು ಬಿಟ್ಟರೆ ಯಾವುದೇ ಒಳ್ಳೆ ದಾಖಲೆಗಳು ನನಗೆ ದೊರಕಲಿಲ್ಲ. ತಮಿಳಲ್ಲಿ ಕೆ. ಸೀತಾರಾಮನ್ (ಗಣಿಗಳಲ್ಲಿ ಸರ್ವೇಯರ್ ಆಗಿ ಕೆಲಸ ಮಾಡಿದವರು) 'ಕೋಲಾರ ತಂಗ್‌ವೈಯಲ್ ವರಲಾರು' (ಕೋಲಾರ ಚಿನ್ನದ ಗಣಿಗಳ ಚರಿತ್ರೆ) ಮತ್ತು ಜಾನಕಿ ನಾಯರ್ (ಸಮಾಜ ಶಾಸ್ತ್ರಜ್ಞೆ) ಅವರ Miners and Millhands-work, culture and politics in princely Mysore ಕೃತಿಗಳು ಮುಖ್ಯವಾದವು. ಉಳಿದಂತೆ ಎಲ್ಲವೂ ಬಿಡಿ ಬಿಡಿಯಾದ ಎಲ್ಲೆಲ್ಲೊ ಚದುರಿಹೋಗಿದ್ದ ಲೇಖನಗಳನ್ನು ಗಣಿ ಪುಸ್ತಕ ಭಂಡಾರದಲ್ಲಿ ಸಂಗ್ರಹಿಲಾಯಿತು. ಇಂಟರ್‌ನೆಟ್‌ನಲ್ಲಿ ಕೆಲವು ನಕ್ಷೆಗಳನ್ನು ಗೂಗಲ್ ಅರ್ಥ್‌ನಿಂದ ಪಡೆದುಕೊಂಡೆ. ಕೆಜಿಎಫ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಹಲವಾರು ಸಲ ಗೆಳೆಯರೊಂದಿಗೆ ಓಡಾಡಿ ಕೆಲವು ಚಿತ್ರಗಳನ್ನು ತೆಗೆದುಕೊಂಡೆ.

ವಿಷಯಗಳನ್ನು ಸಂಗ್ರಹಿಸಿದ ಮೇಲೆ ಒಂದು ಸಮಸ್ಯೆ ಪ್ರಾರಂಭವಾಗಿತ್ತು. ಇವುಗಳನ್ನೆಲ್ಲ ಯಾವ ರೀತಿ ಪೋಣಿಸಬೇಕು ಎನ್ನುವ ಭಯ. ಸಾಮಾನ್ಯವಾಗಿ ಯಾವುದೇ ವಿಷಯದ ಬಗ್ಗೆ ಪಿಎಚ್.ಡಿ ಅಥವಾ ಡಿ.ಲಿಟ್ ಸಂಶೋಧನೆ ನಡೆಸುವಾಗ ಅದೇ ವಿಷಯದಲ್ಲಿ ಹಿಂದೆ ಯಾರೂ ಸಂಶೋಧನೆ ನಡೆಸಿರಬಾರದು ಎನ್ನುವ

ಷರತ್ತಿದೆ. ಆದರೆ ಸಂಶೋಧನೆ ಮಾಡುವ ವಿಷಯದಿಂದ ಸಮಾಜಕ್ಕೆ ಏನಾದರೂ ಉಪಯೋಗವಾಗುತ್ತದಯೇ? ಯಾರಾದರೂ ಅದನ್ನು ಕೊಂಡು ಓದುತ್ತಾರೆಯೇ? ಎನ್ನುವುದರ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಈ ಕಾರಣದಿಂದಲೇ ನಾನು ಭೂವಿಜ್ಞಾನದಲ್ಲಿ ಸಂಶೋಧನೆ ನಡೆಸುವ ಗೋಜಿಗೆ ಹೋಗಲಿಲ್ಲ.

ನನ್ನ ಗುರುಗಳಾದ ಜಿ.ಎಚ್. ಸಾಹುಕಾರ್ (ಕೆಜಿಎಫ್‌ನ ಪ.ದ.ಕಾ, ನಿವೃತ್ತ ಪ್ರಾಂಶುಪಾಲರು ಮತ್ತು ಭೂವಿಜ್ಞಾನಿಗಳು) ಅವರು 'ಕೆಜಿಎಫ್ ಚಿನ್ನದ ಗಣಿಗಳ ಬಗ್ಗೆ ಒಂದು ಪುಸ್ತಕ ಯಾಕ್ ಬರೆಯಬಾರ‍್ದು ?' ಎಂದು ಒಮ್ಮೆ ನನ್ನನ್ನು ಕೇಳಿದ್ದರು. ಈ ಯೋಚನೆ ನನಗೆ ಯಾಕಾದರೂ ಹೊಳೆಯಲಿಲ್ಲ ಎನ್ನುವ ಆಲೋಚನೆ ನನ್ನನ್ನು ತುಂಬಿಕೊಂಡಿತು. ಚಿನ್ನದ ಗಣಿಗಳು ನನ್ನನ್ನು ನಿಧಾನವಾಗಿ ಆವರಿಸಿಕೊಳ್ಳುತ್ತ ಹೋದಂತೆ ಒಂದು ಕೃತಿಯನ್ನು ಬರೆಯಲೇಬೇಕು ಎನ್ನುವ ಆಸೆ ನನ್ನಲ್ಲಿ ಮತ್ತಷ್ಟು ಅಂಕುರಿಸಿತು. ಗಣಿಗಳ ಜೊತೆಗೆ ಸಂಬಂಧವಿದ್ದ ಸಾವಿರಾರು ಕಾರ್ಮಿಕರು, ಅವರ ಕುಟುಂಬಗಳು ಮತ್ತು ಕರ್ನಾಟಕ ಚಿನ್ನದ ಪರಂಪರೆಯ ಬಗ್ಗೆ ಒಂದು ಕೃತಿ ಬಂದರೆ ಅದು ಜನರನ್ನು ತಲುಪಬಹುದು ಮತ್ತು ಚಿನ್ನದ ಗಣಿಗಳ ಚರಿತ್ರೆ ಜನರಿಂದ ದೂರವಾಗುವುದಕ್ಕಿಂತ ಮುಂಚೆಯೇ ದಾಖಲೆಯಾಗಬೇಕು ಎನ್ನುವ ಕಾರಣದಿಂದ ಈ ಮಹಾಪ್ರಬಂಧ ಹುಟ್ಟಿಕೊಂಡಿತು.

ವಿಷಯಗಳನ್ನು ಸಂಗ್ರಹಿಸಿದ ಮೇಲೆ ಅದರಲ್ಲಿ ಮುಖ್ಯವಾಗಿ ಚಾರಿತ್ರಿಕ, ಸಾಂಸ್ಕೃತಿಕ, ವೈಜ್ಞಾನಿಕ, ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಿದ್ದವು. ಈ ವಿಷಯಗಳನ್ನು ಪೂರ್ಣವಾಗಿ ಬೇರೆ ಬೇರೆ ಅಧ್ಯಾಯಗಳಲ್ಲಿ ಬೇರ್ಪಡಿಸಲು ಸಾಧ್ಯವಾಗಲಿಲ್ಲ, ಎಲ್ಲವೂ ಒಂದರೊಳಗೊಂದು ಬೆರೆತು ಹೋದಂತೆ ಕಾಣಿಸಿದವು. ಆದರೆ ಯಾವುದೇ ಒಂದು ವಿಷಯಕ್ಕೆ ಧಕ್ಕೆಯಾಗದಂತೆ ಈ ಮಹಾಪ್ರಬಂಧ ಓದುವವರಿಗೆ ಎಲ್ಲವನ್ನೂ ಒಂದೇ ತಟ್ಟೆಯಲ್ಲಿ ಉಣಬಡಿಸುವಂತೆ ರೂಪಿಸಲಾಗಿದೆ ಎನ್ನುವುದು ನನ್ನ ಭಾವನೆ. ಮೇಲಿನ ಪ್ರತಿಯೊಂದು ವಿಷಯದ ಮೇಲೂ ಒಂದೊಂದು ಮಹಾಪ್ರಬಂಧವನ್ನು ರಚಿಸುವಷ್ಟು ವಿಷಯಗಳು ಈ ಚಿನ್ನದ ಗಣಿಗಳಲ್ಲಿ ಹೂತುಹೋಗಿವೆ. ಗಣಿ ತಂತ್ರಜ್ಞಾನದ ಬಗ್ಗೆಯೇ ನಾಲ್ಕಾರು ಮಹಾ ಪ್ರಬಂಧಗಳನ್ನು ರಚಿಸಬಹುದು. ಆದರೆ ಅದು ಗಣಿಗಳ ಒಂದು ಭಾಗವನ್ನು ಮಾತ್ರ ಹೇಳಿದಂತಾಗುತ್ತದೆ. ಹಾಗಾಗಿ ಗಣಿಗಳ ಬಗ್ಗೆ ಒಟ್ಟಾರೆ ಒಂದು ನೋಟವನ್ನು ಈ ಪ್ರಬಂಧದ ಮೂಲಕ ಹೇಳಲು ನಾನು ಪ್ರಾಮಾಣಿಕತೆಯಿಂದ ಪ್ರಯತ್ನಿಸಿದ್ದೇನಿ.

ಬೇರೆಬೇರೆ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಿರುವ ತಜ್ಞರಿಗೆ ಈ ಪ್ರಬಂಧ ಹೇಗೆ ಕಾಣಿಸುತ್ತದೊ ನನಗೆ ತಿಳಿಯದು. ಆದರೆ ಒಬ್ಬ ಮನುಷ್ಯ ಅಥವಾ ಒಂದು ಸಮಾಜವೆಂದರೆ ಅದಕ್ಕೆ ಒಂದು ಚಾರಿತ್ರಿಕ ಹಿನ್ನೆಲೆ, ಸಾಂಸ್ಕೃತಿಕ,

ವೈಜ್ಞಾನಿಕ, ಸಾಮಾಜಿಕ ಮತ್ತು ಆರ್ಥಿಕತೆಯ ಅಂಗಗಳು ಜೋಡಣೆಯಾಗಿರುತ್ತವೆ. ಇದೇ ನೋಟವನ್ನು ಇಟ್ಟುಕೊಂಡು ಈ ಪ್ರಬಂಧವನ್ನು ರಚಿಸಲಾಗಿದೆ. ಇದು ಈ ಪ್ರಬಂಧದ ಅಂತಿಮ ವ್ಯಾಪ್ತಿಯಲ್ಲದಿದ್ದರೂ, ಪ್ರಬಂಧಕ್ಕೆ ನಾನು ಹಾಕಿಕೊಂಡ ಚೌಕಟ್ಟು, ಈ ಮಹಾಪ್ರಬಂಧವನ್ನು ಪೂರ್ಣವಾಗಿ ನಾನೇ ನಾಲ್ಕಾರು ಸಲ ತಿದ್ದಿ, ಟೈಪ್ ಮಾಡಿ ತಯಾರಿಸಿರುತ್ತೇನೆ. ಈ ಪ್ರಬಂಧ ಈ ಮಟ್ಟಕ್ಕೆ ರೂಪಗೊಳ್ಳಲು ಅನೇಕರು ಕಾರಣರಾಗಿದ್ದಾರೆ. ಅವರೆಲ್ಲರಿಗೂ ನನ್ನ ಹೃದಯಪೂರ್ವಕ ವಂದನೆಗಳು.

– ಡಾ. ಎಂ. ವೆಂಕಟಸ್ವಾಮಿ

ಪರಿವಿಡಿ

ಅಧ್ಯಾಯ–1

ವೇದ ಪುರಾಣಗಳಲ್ಲಿ ಚಿನ್ನ

> ವೇದ ಪುರಾಣಗಳಲ್ಲಿ ಚಿನ್ನದ ಬಗೆಗಿನ ಉಲ್ಲೇಖಗಳು, ಬೈಬಲ್ ಮತ್ತು ಸಿಂಧೂ ನಾಗರಿಕ ತೊಟ್ಟಿಲಲ್ಲಿ ಕೆಜಿಎಫ್ ಚಿನ್ನ, ಈಜಿಪ್ಟ್‌ನಲ್ಲಿ ಹುಟ್ಟಿದ ರಸವಿದ್ಯೆ ಅಥವಾ ಆಲ್‌ಕೆಮಿ; ಮೆಘಸ್ತನೀಸ್, ಟೀಸಿಯಾಸ್ ಮತ್ತು ಕೌಟಿಲ್ಯನ ಅರ್ಥಶಾಸ್ತ್ರದ ಉಲ್ಲೇಖಗಳನ್ನು ನೀಡಲಾಗಿದೆ. ಭಾರತವನ್ನು ಸ್ವರ್ಣಭೂಮಿಯೆಂದು ಕರೆಯುತ್ತಿದ್ದರ ಕಾರಣ, ಪ್ರಥಮ ಗಣಿ ದಾಖಲೆ ಪಾಪರಿಸ್ ನಕ್ಷೆ ಮತ್ತು ರಾಯಚೂರಿನ ಮಸ್ಕಿಯಲ್ಲಿ ಸ್ಥಾಪನೆಗೊಂಡಿರುವ ಅಶೋಕನ ಶಿಲಾಶಾಸನದ ಬಗ್ಗೆಯೂ ವಿಶ್ಲೇಷಿಸಲಾಗಿದೆ.

ಚಿನ್ನ ಮಾನವನ ಮೊದಲ ಹುಚ್ಚು, ನಾಗರಿಕತೆಯ ಮೊದಲ ಮೆಟ್ಟಿಲು. ಸ್ವರ್ಣಂ ಸುವರ್ಣಂ ಕನಕಂ ಹಿರಣ್ಯಂ ಹೇಮ ಹಾರಕಂ ತಪನೀಯಂ ಶಾತಕುಂಭಾ ಗಂಗೇಯಂ ಭರ್ಮಕ ಕರ್ಬುರಂ ಜಾಮೀಕರಂ ಶಾತರೂಪಂ ಮಹಾರಜತಕಾಂಚ ರುಕ್ಮಂ ಕಾರ್ತಸ್ವರಂ ಜಂಬೂನದ ಮಷ್ಟಪಾದೊ ವಸುಚಂದ್ರಂತಾದುನಂ ಕಲ್ಯಾನಂ ಮತ್ತು ಭೂರಿಗ್ಯೈರಿಕಂ. ಮೇಲಿನ 20 ಹೆಸರುಗಳು ಸಂಸ್ಕೃತದಲ್ಲಿ ಕಂಡುಬರುವ ಚಿನ್ನದ ವಿವಿಧ ಹೆಸರುಗಳು.[1]

ಚಿನ್ನ ಬೇರೆ ಬೇರೆ ದೇಶಗಳಲ್ಲಿ ದೊರಕುವುದರಿಂದ ಹಲವು ರೀತಿಯ ಹೆಸರುಗಳು ಬರಲು ಕಾರಣವಾಗಿದೆ. ಈ ಹೆಸರುಗಳಲ್ಲದೆ ಅನೇಕ ದೇಶಿ ಭಾಷೆಗಳಲ್ಲಿ, ಉಪ ಭಾಷೆಗಳಲ್ಲಿ ಮತ್ತು ಬುಡಕಟ್ಟು ಭಾಷೆಗಳಲ್ಲಿ ಚಿನ್ನಕ್ಕೆ ನೂರಾರು ಹೆಸರುಗಳಿವೆ. ಋಗ್ವೇದ,

ಶಾಸ್ತ್ರಗಳು, ಪುರಾಣಗಳು, ಮಹಾಭಾರತ, ರಾಮಾಯಣ ಇತ್ಯಾದಿ ಗ್ರಂಥಗಳಲ್ಲೂ ಚಿನ್ನದ ಬಗ್ಗೆ ಹೇರಳ ಉಲ್ಲೇಖಗಳಿವೆ. ಹಿಬ್ರೂ, ಗ್ರೀಕ್ ಮತ್ತು ರೋಮನ್ ಭಾಷೆಗಳಲ್ಲೂ ಚಿನ್ನದ ಬಗ್ಗೆ ಹಲವು ರೀತಿಯ ವಿವರಗಳು ದೊರಕುತ್ತವೆ. ಚರಿತ್ರೆಯ ಉದ್ದಕ್ಕೂ ಎಲ್ಲಾ ಭಾಷೆಯ ಸಾಹಿತ್ಯದಲ್ಲೂ ಚಿನ್ನದ ಬಗ್ಗೆ ವಿಪುಲ ವಿವರಣೆಗಳು ದೊರಕುತ್ತವೆ. ಆದರೆ ಚಿನ್ನವನ್ನು ಯಾರು ತೆಗೆಯುತ್ತಿದ್ದರು? ಎಲ್ಲೆಲ್ಲಿ ಗಣಿಗಳಿದ್ದವು ಎನ್ನುವ ವಿವರಗಳು ಮಾತ್ರ ಎಲ್ಲಿಯೂ ನಿಖರವಾಗಿ ದಾಖಲಾಗಿಲ್ಲ. ಚಿನ್ನಕ್ಕೆ 6000 ವರ್ಷಗಳ ಚರಿತ್ರೆ ಇದ್ದರೂ ತೀರಾ ಇತ್ತೀಚೆಗೆ ಅಂದರೆ ಕಳೆದ 300 ವರ್ಷಗಳಲ್ಲಿ ತೆಗೆದ ಚಿನ್ನದ ಗಣಿಗಳ ವಿವರಗಳನ್ನು ಪ್ರಪಂಚದಾದ್ಯಂತ ಕೂಲಂಕಷವಾಗಿ ದಾಖಲಿಸಲಾಗಿದೆ.[2]

ಆದಿಮಾನವ ಸುಮಾರು 2800 ವರ್ಷಗಳ ಹಿಂದೆಯೇ ಲೋಹಗಳನ್ನು ಉಪಯೋಗಿಸುತ್ತಿದ್ದುದಾಗಿ ತಿಳಿದುಬಂದಿದ್ದು ಆ ಕಾಲಕ್ಕೆ ಚಿನ್ನವನ್ನು ಮನುಷ್ಯ ಉಪಯೋಗಿಸುತ್ತಿದ್ದ ಎಂಬುದಾಗಿ ನಂಬಲಾಗಿದೆ. ಆದರೆ 2800 ವರ್ಷಗಳಿಗಿಂತ ಹಿಂದೆ ಚಿನ್ನಕ್ಕಾಗಿ ಗುಂಡಿಗಳನ್ನು ಮತ್ತು ಗಣಿಗಳನ್ನು ತೋಡಿರುವ ಸೂಚನೆಗಳು ಎಲ್ಲಿಯೂ ಕಾಣಿಸುವುದಿಲ್ಲ...? ನದಿ ದಡಗಳಲ್ಲಿ ನಾಗರಿಕ ತೊಟ್ಟಿಲುಗಳು ಉದಯಿಸುತ್ತಿದ್ದ ಕಾಲದಲ್ಲಿ ಅನೇಕ ದೇಶಗಳ ಜನರು ಪಶ್ಚಿಮ ಕಡಲಿನ ಮೂಲಕ ದಕ್ಷಿಣ ಭಾರತದ ಜೊತೆಗೆ ಸಂಬಂಧಹೊಂದಿದ್ದು, ಅವರಲ್ಲಿ ಸಿಂದ್‌ಬಾದನೂ ಒಬ್ಬ. ಸಿಂದ್‌ಬಾದ್ ಮತ್ತು ಆತನ ಅರಬ್ ದೇಶಗಳ ಮಿತ್ರರು ಪಶ್ಚಿಮ ಕಡಲಿನ ಮೂಲಕ ಮಸಾಲೆ ಪದಾರ್ಥಗಳನ್ನು ಕೊಂಡೊಯ್ಯುತ್ತಿದ್ದುದಾಗಿ ತಿಳಿದುಬರುತ್ತದೆ. ಮಸಾಲೆಗಳ ಜೊತೆಗೆ ಚಿನ್ನವನ್ನು ಸಹ ಅವರು ತೆಗೆದುಕೊಂಡು ಹೋಗುತ್ತಿದ್ದರು ಎಂಬ ಉಲ್ಲೇಖಗಳು ದೊರಕುತ್ತವೆ.

ಮುಟ್ಟಿದ್ದೆಲ್ಲ ಚಿನ್ನವಾಗಬೇಕೆಂದು ವರ ಕೇಳಿ ಅನಂತರ ತಿನ್ನುವ ಅನ್ನವೇ ಚಿನ್ನವಾದಾಗ ವರವನ್ನು ಹಿಂತೆಗೆದುಕೊಳ್ಳುವಂತೆ ಮೈದಾಸ ಪರಿಪರಿಯಾಗಿ ಬೇಡಿಕೊಂಡ ಗ್ರೀಸ್ ಕತೆ ಇಡೀ ಪ್ರಪಂಚದಲ್ಲಿಯೇ ಪ್ರಖ್ಯಾತ. ಆದರೆ ಜಗತ್ತು ಇದರಿಂದ ಯಾವ ಪಾಠವನ್ನೂ ಕಲಿಯಲಿಲ್ಲ. ಕೀಳು ಲೋಹಗಳನ್ನು ಚಿನ್ನವನ್ನಾಗಿ ಮಾರ್ಪಡಿಸುವ ತಂತ್ರವನ್ನು ಹುಡುಕಲು ಹೊರಟ ಮಾನವ, ರಾಸಾಯನ ವಿಜ್ಞಾನದ ಹಲವು ಬೆಳವಣಿಗೆಗಳಿಗೆ ಕಾರಣವಾದದ್ದು ನಿಜಕ್ಕೂ ವಿಸ್ಮಯವೇ ಸರಿ. ಸೀಸ, ಪಾದರಸ, ತಾಮ್ರ ಮುಂತಾದ ಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸಲು ಹಲವು ತಂತ್ರಗಳನ್ನು ಬಳಸಿದ. ಜೊತೆಗೆ ಸ್ಪರ್ಶಮಣಿ ಎಂಬ ಕಲ್ಪನೆಯ ಕಲ್ಲನ್ನು ಹುಡುಕಲು ಹೊರಟ. ಹಾಗೆ ಮುಪ್ಪನ್ನು ಹೊಡೆದೋಡಿಸಿ ಚಿರಯೌವ್ವನ ನೀಡುತ್ತದೆಂದು ಭ್ರಮಿಸಿ ರಸವನ್ನು ಅನ್ವೇಷಿಸಲು ತೊಡಗಿಕೊಂಡ.

ಲೋಹಶಾಸ್ತ್ರದಲ್ಲಿ ಕಂಡರಿಯದ ಅತ್ಯಂತ ಶ್ರೇಷ್ಠ ಕುಸುರಿ ಕೆಲಸವನ್ನು ಚಿನ್ನದಲ್ಲಿ

ಮೊದಲಿಗೆ ಮಾಡಿದವರು ಈಜಿಪ್ಶಿಯನರು. ಚಿನ್ನದ ಗಣಿಗಳನ್ನು ಮೊದಲಿಗೆ ತೋಡಿದವರೆಂದರೆ ರೋಮನ್ನರು. ಗಣಿ ವಿದ್ಯೆಯ ಹಲವು ತಂತ್ರಗಳನ್ನು ಮಾಡಿದ್ದು ಚಿನ್ನದ ಗಣಿಗಳಲ್ಲೇ. ರಸವಿದ್ಯಾ ಪರಿಣಿತರು ಕೀಳು ಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸುವ ಅದಮ್ಯ ಉತ್ಸಾಹದಲ್ಲಿ ಚಿನ್ನದ ಬದಲಿಗೆ ಜೀವ ಉಳಿಸುವ ಅನೇಕ ಔಷಧಿಗಳನ್ನೇ ಕೊಟ್ಟರು. ನುಬಿಯರನ್ನು ಗುಲಾಮರನ್ನಾಗಿ ಈಜಿಪ್ಟ್ ಬಳಸಿಕೊಂಡಿದ್ದು ಚಿನ್ನಕ್ಕಾಗಿಯೆ. ರೋಮ್, ಸ್ಪೆಯನಿನ ಮೇಲೆ ಧಾಳಿ ಮಾಡಿದ್ದು ಚಿನ್ನಕ್ಕಾಗಿ. ಸ್ಪ್ಯಾನಿಷರು ದಕ್ಷಿಣ ಅಮೆರಿಕವನ್ನು ದೋಚಿದ್ದು ಈ ಹಳದಿ ಲೋಹಕ್ಕಾಗಿಯೇ. ರೋಮನ್ನರು ಬೇಕಾಬಿಟ್ಟಿಯಾಗಿ ಚಿನ್ನ ಬಳಸಿದ್ದರಿಂದ ಅವರ ಆರ್ಥಿಕ ವ್ಯವಸ್ಥೆಯೇ ಕುಸಿದುಹೋಯಿತು.

ಕಪ್ಪು ಸಮುದ್ರದ ದಂಡೆ 'ವರಾ' ಎನ್ನುವ ಸ್ಥಳದಲ್ಲಿ ಕ್ರಿ.ಶ. 1972ರಲ್ಲಿ ಮೊಹಿದೆ ಎಂಬ ವಿಜ್ಞಾನಿ ಹಿಂದಿನ ಕಾಲದ ಜನರು ಸಂಗ್ರಹಿಸಿದ್ದ ಚಿನ್ನದ ಒಂದು ಖಜಾನೆಯನ್ನೇ ಕಂಡುಹಿಡಿದಿದ್ದ. ಪ್ರಪಂಚದಲ್ಲಿ ಮೊದಲ ಬಾರಿಗೆ ಕಾಣಿಸಿದ ಅತ್ಯಂತ ಹಳೆಯ ಚಿನ್ನದ ತಿಜೋರಿ ಇದಾಗಿತ್ತು. ಬಲ್ಗೇರಿಯಾದ ಈ ಚಿನ್ನದ ತಿಜೋರಿಯಲ್ಲಿ ವಿವಿಧ ಆಕಾರದ ಶುದ್ಧ ಚಿನ್ನದ 2000 ಉಂಡೆಗಳು ದೊರೆಕಿದ್ದವು. ಎಲ್ಲವನ್ನು ತೂಕ ಹಾಕಿದಾಗ 5.50 ಕೆ.ಜಿ ತೂಗಿತ್ತು. ಈ ಚಿನ್ನವನ್ನು ರುಮೇನಿಯಾದ ಆಲ್ಪ್ಸ್ ಪರ್ವತಗಳ ನಡುವೆ ಟ್ರಾನ್ಸಿಲ್‌ವೇನಿಯಾ ಪ್ರದೇಶದಲ್ಲಿ ನೆಲದಲ್ಲಿ ತೋಡಿದ ಗುಂಡಿಗಳಿಂದ ತೆಗೆದಿರಬಹುದೆಂದು ಊಹಿಸಲಾಯಿತು.

ಬೈಬಲ್‌ನಲ್ಲಿ ಕೆಜಿಎಫ್ ಚಿನ್ನ :

ಮೇರು ಪರ್ವತದ ಸುತ್ತ ಹರಿಯುವ ಜಂಬೂ ನದಿಯನ್ನು ಚಿನ್ನಕ್ಕೆ ಸಂಬಂಧಪಟ್ಟಂತೆ ನಮ್ಮ ಪ್ರಾಚೀನರು ಹೆಸರಿಸಿದಂತೆ, ಬೈಬಲ್ ಕೂಡ ಚಿನ್ನಕ್ಕೆ ಮಹತ್ತರ ಸ್ಥಾನ ನೀಡಿದೆ. ಬೈಬಲ್‌ನ ಜನಿಸಿಸ್ 2–2 10^3 ರಲ್ಲಿ ಚಿನ್ನದ ನಾಡನ್ನು ಹೆಸರಿಸುತ್ತ ಈಡನ್‌ನಿಂದ ನದಿಯೊಂದು ಹರಿದು ತೋಟವನ್ನೆಲ್ಲ ತೋಯ್ದಿಸಿ ಅನಂತರ ನಾಲ್ಕು ಕವಲಾಯಿತು ಎನ್ನಲಾಗಿದೆ. ಮೊದಲ ಶಾಖೆಯ ಹೆಸರು ಪಿಶಾನ್, ಈ ನದಿಯೇ ಹಾಯ್–ಇ–ಲಾಹ್ ಎಂಬ ಪ್ರಾಂತ್ಯದಲ್ಲಿ ಹರಿಯುತ್ತದೆ. ಅದು ಚಿನ್ನದ ನಾಡಾಗಿದ್ದು ಅಲ್ಲಿ ದೊರಕುವ ಚಿನ್ನ ಉತ್ಕೃಷ್ಟವಾದದ್ದು ಎಂದು ನಮೂದಿಸಲಾಗಿದೆ.

ಇಸ್ರೇಲಿನ ದೊರೆ ಸಾಲೋಮನ್ ಅನೇಕ ವರ್ಷಗಳ ಕಾಲ ಓಫಿರ್ ದೇಶದ ಕಡೆಗೆ ತನ್ನ ದೇಶದ ವ್ಯಾಪಾರಿಗಳನ್ನು ಕಳುಹಿಸಿ ತಾನು ನಿರ್ಮಿಸುತ್ತಿದ್ದ ಅದ್ಭುತ ಕಲೆಯ ಅರಮನೆಗಳು ಮತ್ತು ದೇವಾಲಯಗಳನ್ನು ಸುಂದರಗೊಳಿಸಲು ಚಿನ್ನ, ವಜ್ರ ಮತ್ತಿತರ ವಸ್ತುಗಳನ್ನು ತರಿಸಿಕೊಳ್ಳುತ್ತಿದ್ದುದಾಗಿ ತಿಳಿದುಬರುತ್ತದೆ. ಬೈಬಲ್ಲಿನ ಅದೇ ಅಧ್ಯಾಯಗಳಲ್ಲಿ ಇಸ್ರೇಲಿನ ಚಿನ್ನದ ಭಂಡಾರದ ಬಗ್ಗೆ ಹೇರಳ ಉಲ್ಲೇಖಗಳಿವೆ.

ಸಾಲೋಮನ್‌ಗೆ (ಕ್ರಿ.ಪೂ. 973 – ಕ್ರಿ.ಪೂ. 933) ಸಿರಿಯಾದ ದೊರೆ ನೀಡುತ್ತಿದ್ದ ಕಾಣಿಕೆಯಲ್ಲಿ ಹತ್ತು ಟ್ಯಾಲೆಂಟ್ (Talent : ಪುರಾಣ ಕಾಲದ ಕಾಸಿನ) ಬೆಳ್ಳಿ ಮತ್ತು 60000 ಚೂರು ಚಿನ್ನವಿರುತ್ತಿತ್ತಂತೆ. ಟೈರೆಯ ದೊರೆ ಏರಂ, ಜೆರುಸೆಲಂನ ಮಂದಿರವನ್ನು ಅಲಂಕರಿಸಲು ದೊರೆ ಸಾಲೋಮನ್‌ಗೆ ಒಮ್ಮೆ 120 ಟ್ಯಾಲೆಂಟ್, ಮತ್ತೊಮ್ಮೆ 420 ಟ್ಯಾಲೆಂಟ್ ಚಿನ್ನವನ್ನು ಕಳುಹಿಸಿದ ಉಲ್ಲೇಖಗಳಿವೆ.

ಈ 420 ಟ್ಯಾಲೆಂಟ್ ಚಿನ್ನ ಅಂದಿಗೆ ಅಗೋಚರ ನಾಡಾದ ಓಫಿರ್‌ನಿಂದ ಬಂದ ಚಿನ್ನ ಎಂದು ತಿಳಿಯುತ್ತದೆ. ಓಫಿರ್ ಎಂದರೆ ಯಾವ ನಾಡು ಎಂಬುದು ಬಹಳ ದಿನಗಳವರೆಗೂ ನಿಗೂಢವಾಗಿತ್ತು. ಇದು ಮೊಜಾಂಬಿಕ್, ಅರೇಬಿಯ, ಇಂಡಿಯ, ಶ್ರೀಲಂಕಾ, ಮಲಯ ಇವುಗಳಲ್ಲಿ ಯಾವುದಾದರೂ ಒಂದು ದೇಶವಾಗಿರಬಹುದು ಎಂದು ಮೊದಲಿಗೆ ಊಹಿಸಲಾಗಿತ್ತು. ದೊರೆ ಸಾಲೋಮನ್, ತನಗೊಂದು ನೌಕೆಯನ್ನು ನಿರ್ಮಿಸಲು ಫಿನಿಯನ್ನರಿಗೆ ಅಪ್ಪಣೆ ಮಾಡಿದ. ಫಿನಿಯನ್ನರು ಸಾಲೋಮನ್ ದೊರೆಯ ಆಜ್ಞೆಯನ್ನು ವಿನಮ್ರ ಪೂರ್ವಕವಾಗಿ ನೆರವೇರಿಸಿದರು. ಅದನ್ನು ಪ್ರಯೋಗಾರ್ಥ ಕ್ರಿ.ಪೂ. 945 ರಲ್ಲಿ ಒಫಿರ್ ನಾಡಿಗೆ ಕೊಂಡೊಯ್ದರು. ಮರಳಿ ಬರುವಾಗ ಹೇರಳ ಚಿನ್ನ, ಆನೆ ದಂತ, ಕಪಿಗಳು, ನವಿಲುಗಳು ಮತ್ತು ಆಲ್‌ಮಗ್ ಮರಗಳನ್ನು ತಂದರು ಎಂದು ಬೈಬಲ್‌ನಲ್ಲಿ ಉಲ್ಲೇಖಿಸಲಾಗಿದೆ.

ಬೈಬಲ್‌ನಲ್ಲಿ ಬರುವ ಓಫಿರ್ ಎನ್ನುವ ಪ್ರದೇಶ ಬಹಳ ವರ್ಷಗಳ ಕಾಲ ನಿಗೂಢವಾಗಿದ್ದು ಪ್ರಖ್ಯಾತ ಭಾಷಾಶಾಸ್ತ್ರಜ್ಞ ಮ್ಯಾಕ್ಸ್‌ಮುಲ್ಲರ್ ಅವರು ಏಬ್ರೂ ಭಾಷೆಯಲ್ಲಿ ಐವರಿ, ಏಪ್, ಪಿಕಾಕ್ ಪದಗಳು ಸಂಸ್ಕೃತದಿಂದ ಬಂದವು ಎನ್ನುವುದನ್ನು ತೋರಿಸಿದ ಮೇಲೆ ಓಫಿರ್ ಎಂದರೆ ಅದು ಭಾರತ ಎನ್ನುವುದು ಸಾಬೀತಾಯಿತು. ಜೊತೆಗೆ ಆಲ್‌ಮಗ್ ಎಂದರೆ ಕರ್ನಾಟಕದಲ್ಲಿ ದೊರಕುತ್ತಿದ್ದ ಶ್ರೀಗಂಧ ಮರಗಳು ಎನ್ನುವುದು ತಿಳಿಯಿತು. ಇದರಿಂದ ಓಪಿರ್ ಎಂದರೆ ದಕ್ಷಿಣ ಭಾರತದ ಕರ್ನಾಟಕ ಪ್ರದೇಶ ಎನ್ನುವುದು ಸಾಬೀತಾಗಿತ್ತು.

ಆದರೆ ಕೆಲವು ಆಧುನಿಕ ಅರ್ಥಶಾಸ್ತ್ರಜ್ಞರು ಮೇಲಿನ ಕಲ್ಪನೆಯನ್ನು ನಿರಾಕರಿಸುತ್ತ, ಸಾಲೋಮನ್ ರಾಜನ ಕಾಲದಲ್ಲಿ (ಕಿ.ಪೂ. 950) ಭಾರತ ನಾಗರಿಕತೆಯ ಹಾದಿಯಲ್ಲಿದ್ದು, ಟಾರಿಶಿಸ್ ವ್ಯಾಪಾರಸ್ಥರು ಓಫಿರ್‌ನಿಂದ ಚಿನ್ನವನ್ನು ಒಂದು ವೇಳೆ ಪಡೆದುಕೊಳ್ಳುತ್ತಿದ್ದರು ಎಂದುಕೊಂಡರೆ, ಬದಲಿಗೆ ಕೊಡಲು ಅವರಲ್ಲಿ ಅಂತಹ ವಸ್ತುಗಳು ಏನಿದ್ದವು ಎಂದು ಪ್ರಶ್ನಿಸುತ್ತಾರೆ. ಭಾರತ ಅನೇಕ ವರ್ಷಗಳ ಕಾಲ ಚಿನ್ನವನ್ನು ತನ್ನಲ್ಲೇ ಸಂಗ್ರಹಿಸಿಟ್ಟುಕೊಂಡಿದ್ದು, ಅದು ಕ್ರಿ.ಪೂ. 400 ರವರೆಗೂ ಮುಂದುವರೆದಿತ್ತು ಮತ್ತು ಅದಕ್ಕಾಗಿಯೆ ಭಾರತ ಚಿನ್ನದ ತಳ ಎಂದೇ ಖ್ಯಾತಿ ಪಡೆದಿತ್ತು ಎನ್ನುವುದು ಕೆಲವರ ವಾದ.

ಪರ್ಷಿಯ ರಾಜ ಡಾರಿಯಸ್‌ಗೆ ಪಟ್ರಸಿ (ಭಾರತ) ದೇಶ ಮಾತ್ರ ಚಿನ್ನವನ್ನು ಕೊಡುತ್ತಿತ್ತು ಎನ್ನುವುದಾಗಿ ಕ್ರಿ.ಪೂ. 300 ವರ್ಷಗಳ ಹಿಂದೆ ಹೆರೋಡೋಟಸ್ ದಾಖಲಿಸಿದ್ದಾರೆ. ಕ್ರಿ.ಶ. 77ರಲ್ಲಿ ಪ್ಲಿನಿ ತನ್ನ ಸಂಚಿಕೆಯಲ್ಲಿ ಹೀಗೆ ದಾಖಲಿಸಿದ್ದಾರೆ. ಕಪಟಲಿಯ ಪರ್ವತಗಳ ಕೆಳಗೆ ನೈರಯ ದೇಶದಲ್ಲಿ ಇಂಡಿಯನ್ನರು ಚಿನ್ನ ಮತ್ತು ಬೆಳ್ಳಿ ತೆಗೆಯುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಕಪಟಲಿಯ ಎನ್ನುವುದು ಇಂದಿನ ಮೌಂಟ್ ಅಬು ಪರ್ವತಗಳಾದ ರಾಜಸ್ಥಾನ ಮತ್ತು ಗುಜರಾತ್ ಪರ್ವತ ಶ್ರೇಣಿಗಳಲ್ಲಿರುವ ಪ್ರದೇಶ ಎನ್ನಲಾಗಿದೆ.

ಪರ್ಷಿಯಾದ ದೊರೆ ಡೇರಿಯಸ್‌ನ (ಕ್ರಿ.ಪೂ. 522–ಕ್ರಿ.ಪೂ. 486) ಆಡಳಿತಕ್ಕೆ ಭಾರತದ ಸಿಂಧೂ ಪ್ರದೇಶದ ಸ್ವಲ್ಪ ಭಾಗ ಸೇರಿದ್ದು ಅದನ್ನು ಇಪ್ಪತ್ತು ಕ್ಷತ್ರಪಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರತಿ ಕ್ಷತ್ರಪದಿಂದಲೂ ಅವನು ಪೊಗದಿ ಪಡೆಯುತ್ತಿದ್ದ ಎಂಬುದಾಗಿ ತಿಳಿದುಬರುತ್ತದೆ. ಉಳಿದೆಲ್ಲ ದೇಶಗಳು ಬೆಳ್ಳಿಯಲ್ಲಿ ಅವನಿಗೆ ಪೊಗದಿ ನೀಡಿದರೆ ಸಿಂಧೂ ಪ್ರದೇಶ ಮಾತ್ರ ಚಿನ್ನದ ಧೂಳಿನಲ್ಲಿ ಪೊಗದಿ ಕೊಡುತ್ತಿತ್ತಂತೆ. ಇಂಡಿಯಾದಿಂದ ಅವನ ಭಂಡಾರಕ್ಕೆ ಪ್ರತಿವರ್ಷವೂ 360 ಟ್ಯಾಲೆಂಟ್ ಚಿನ್ನ ಸೇರ್ಪಡೆಯಾಗುತ್ತಿತ್ತು ಎಂದು ಚರಿತ್ರೆಯ ಪಿತಾಮಹನೆಂದು ಕರೆಸಿಕೊಂಡಿರುವ ಹೆರೋಡೋಟಸ್ ಕ್ರಿ.ಪೂ. 484ರಲ್ಲಿ ಉಲ್ಲೇಖಿಸಿದ್ದಾರೆ.

ಅಲ್ಲದೇ ಚಿನ್ನಕ್ಕಾಗಿ ಗಣಿ ಮಾಡುತ್ತಿದ್ದ ವಿಧಾನವನ್ನು ಅತ್ಯಂತ ಸೋಜಿಗದ ರೀತಿಯಲ್ಲಿ ನಿರೂಪಿಸಿದ್ದಾರೆ. ಇರುವೆಗಳು ನೆಲವನ್ನು ಬಗೆದು ಚಿನ್ನದ ರಾಶಿಯನ್ನು ಗುಡ್ಡೆ ಹಾಕುತ್ತಿದ್ದವು ಎಂದು ಅದರ ಬಗ್ಗೆ ರಸವತ್ತಾಗಿ ವರ್ಣಿಸಿದ್ದಾರೆ. ಅದರೆ ಅಂತಹ ಇರುವೆಗಳ ಬಗ್ಗೆ ಯಾವುದೇ ವೈಜ್ಞಾನಿಕ ಪುರಾವೆಗಳು ಇಲ್ಲ.

ಹೆರೋಡೋಟಸ್ :

ಇಂಡಿಯಾ ದೇಶದಲ್ಲಿನ ಚಿನ್ನದ ಬಗ್ಗೆ ಹೆರೋಡೋಟಸ್ ಹೀಗೆ ದಾಖಲಿಸಿದ್ದಾರೆ: 'ಚಿನ್ನದ ಕಾಸ್ಪಾಟಿರಸ್ (ಗಾಂಧಾರ ರಾಜ್ಯ–ಪೇಷಾವರ ಮತ್ತು ರಾವಲ್ಪಿಂಡಿಯ ನ್ನೊಳಗೊಂಡ ಭಾಗ, ಇದು ಕಾಶ್ಮೀರವೆಂಬ ಅಭಿಪ್ರಾಯವೂ ಇದೆ) ಮತ್ತು ಪತ್ರಿಕೆ (ಅಫ್‌ಘಾನಿಸ್ತಾನ) ನಾಡುಗಳಿಗೆ ಸಮೀಪದಲ್ಲಿರುವ ಇಂಡಿಯಾ ದೇಶದವರು ಬ್ಯಾಕ್ಟ್ರೀಯ ದೇಶದವರಂತೆ ಜೀವನ ನಡೆಸುತ್ತಾರೆ. ಇವರು ಇಂಡಿಯಾ ದೇಶದ ಉತ್ತರದಲ್ಲಿ ವಾಸಮಾಡುತ್ತಾರೆ. ಇಂಡಿಯಾ ದೇಶದವರಲ್ಲಿ ಹೆಚ್ಚಿನ ಸಮರೋತ್ಸಾಹಿಗಳಾದ ಇವರು ಚಿನ್ನವನ್ನು ತರಲು ಹತ್ತಿರದಲ್ಲೇ ಇರುವ ಮರಳುಗಾಡಿಗೆ ಹೋಗುತ್ತಾರೆ. ಸಿಂಧೂ ನದಿಯ ಪಶ್ಚಿಮದಲ್ಲಿರುವ ಈ ಮರಳುಗಾಡಿನಲ್ಲಿ ನಾಯಿಗಳಿಗಿಂತ ಚಿಕ್ಕದಾದ, ನರಿಗಳಿಗಿಂತ ದೊಡ್ಡದಾದ ಇರುವೆಗಳಿವೆ. ಪರ್ಷಿಯಾ ದೇಶದ ರಾಜನು ಈ

ಇರುವೆಗಳನ್ನು ಸಾಕಿಕೊಂಡಿದ್ದಾನೆ. ಗ್ರೀಸಿನ ಇರುವೆಗಳಂತೆ ಈ ಇರುವೆಗಳು ನೆಲವನ್ನು ಕೊರೆದು ಮರಳನ್ನು ಹೊರಗೆ ಗುಡ್ಡೆ ಹಾಕುತ್ತವೆ. ಈ ಮರಳಿನಲ್ಲಿ ಚಿನ್ನ ಬೆರೆತಿದ್ದು ಇಂಡಿಯನ್ನರು ಈ ಮರಳನ್ನು ಒಂಟೆಗಳ ಮೇಲೆ ಹೇರಿಕೊಂಡು ಹೋಗುತ್ತಾರೆ'.

ಮೆಘಸ್ತನೀಸ್ ಮತ್ತು ಟೇಸಿಯಾಸ್:

ಮೆಘಸ್ತನೀಸ್ (ಕ್ರಿಪೂ. 302–ಕ್ರಿಪೂ. 288) ಕೂಡ, ಪೂರ್ವದ ಗಡಿಗಳಲ್ಲಿರುವ ದರ್ದಾಯಿ ಜನರು, ಇರುವೆಗಳು ಕೂಡಿ ಹಾಕಿದ ಚಿನ್ನವನ್ನು ಸೋಸಿ ತೆಗೆದು ವ್ಯಾಪಾರಸ್ಥರಿಗೆ ಮಾರುತ್ತಾರೆಂದು ಬರೆದರು. ಅಲೆಕ್ಸಾಂಡರ್ ದಂಡಯಾತ್ರೆಗೆ ಮೊದಲು ಭಾರತದ ಬಗ್ಗೆ ಹೆಚ್ಚು ತಿಳಿವಳಿಕೆ ನೀಡಿದ್ದು ಟೇಸಿಯಾಸ್‌ರ (ಕ್ರಿಪೂ. 416) 'ಇಂಡಿಕಾ' ಎಂಬ ಪುಸ್ತಕ. ಪರ್ಷಿಯಾದಲ್ಲೇ ಕುಳಿತು ಭಾರತಕ್ಕೆ ಬರುತ್ತಿದ್ದ ವ್ಯಾಪಾರಸ್ಥರಿಂದ ಸಂಗ್ರಹಿಸಿದ ಮಾಹಿತಿಗಳ ಮೇರೆಗೆ ಬರೆದ ಈ ಗ್ರಂಥದಲ್ಲಿ ಟಿಬೆಟ್ ಪ್ರಸ್ಥಭೂಮಿಯಲ್ಲಿ ಚಿನ್ನ ದೊರೆಯುತ್ತಿದ್ದ ಉಲ್ಲೇಖವಿದೆ. ಟೇಸಿಯಾಸ್, ಮರಳಿನಲ್ಲಿ ಚಿನ್ನ ದೊರೆಯುತ್ತದೆ ಎಂದು ನಂಬಿರಲಿಲ್ಲ. ಆತನಿಗೆ ಪ್ರಸ್ಥಭೂಮಿಯಲ್ಲಿ ಗಣಿ ಮಾಡಿ ಚಿನ್ನ ತೆಗೆಯುತ್ತಿದ್ದ ವಿಷಯ ಮಾತ್ರ ತಿಳಿದಿತ್ತು. ನಾಲ್ಕು ಕಾಲಿನ ಪಕ್ಷಿಗಳು ಗ್ರಿಫಿನ್ ತೋಳಗಳಿಗಿಂತಲೂ ದೊಡ್ಡವಾಗಿದ್ದು ಅವು ಚಿನ್ನವನ್ನು ಕಾವಲು ಕಾಯುತ್ತವೆಂದು ಬ್ಯಾಕ್ಟ್ರೀಯನ್ನರು ನಂಬಿರುವುದಾಗಿ ಮತ್ತು ಇಂಡಿಯನ್ನರು ರಾತ್ರಿಯ ವೇಳೆ ಆ ಹಕ್ಕಿಗಳ ಕಣ್ಣು ತಪ್ಪಿಸಿ ನೆಲವನ್ನು ಅಗೆದು ಚಿನ್ನ ತರುತ್ತಿದ್ದರು ಎಂದು ಬರೆದಿದ್ದಾರೆ.

ಟೇಸಿಯಾಸ್ ಮುಂದುವರಿಯುತ್ತ, ಇಂಡಿಯಾ ದೇಶದಲ್ಲಿ ಒಂದು ಬಾವಿ ಇದ್ದು ಅದರಲ್ಲಿ ಪ್ರತಿವರ್ಷ ನೂರು ಗಡಿಗೆಗಳಷ್ಟು ಕರಗಿದ ಚಿನ್ನ ತುಂಬಿರುತ್ತದೆ. ಒಂದೊಂದು ಗಡಿಗೆಯಲ್ಲೂ ಒಂದೊಂದು ಟ್ಯಾಲೆಂಟ್ ತೂಕ ಚಿನ್ನವಿರುತ್ತದೆ. ಗಡಿಗೆಗಳಲ್ಲಿ ಚಿನ್ನ ಗಟ್ಟಿಯಾದ ನಂತರ ಗಡಿಗೆಗಳನ್ನು ಒಡೆದು ಹಾಕುತ್ತಾರೆ. ಬಾವಿಯ ಆಳ ಕೇವಲ ಮನುಷ್ಯ ಪ್ರಮಾಣದಷ್ಟಿದೆ ಎಂದು ವಿವರಿಸಿದ್ದಾರೆ.

ಕೌಟಿಲ್ಯರ ಅರ್ಥಶಾಸ್ತ್ರ:

ಕೌಟಿಲ್ಯರ ಅರ್ಥಶಾಸ್ತ್ರದಲ್ಲಿ ಕೌಟಿಲ್ಯರ ಗುರು ಉಪದೇಶ ನೀಡುತ್ತ, ಭೂಮಾರ್ಗದಲ್ಲಿ ದಕ್ಷಿಣಾಪಥ ಅನುಸರಿಸುವುದಕ್ಕಿಂತ ಹಿಮಾವತ್‌ಪಥ ಅನುಸರಿಸುವುದೇ ಸೂಕ್ತ. ಅಲ್ಲಿ ಆನೆ, ಕುದುರೆ, ಸುಗಂಧ, ದಂತ, ಚರ್ಮ, ಬೆಳ್ಳಿ ಮತ್ತು ಚಿನ್ನಕ್ಕೆ ಅತಿ ಹೆಚ್ಚು ಬೆಲೆ ಇದೆ ಎನ್ನುತಾರೆ. ಆದರೆ ಕೌಟಿಲ್ಯ ಈ ಹೇಳಿಕೆಯನ್ನು ಒಪ್ಪುವುದಿಲ್ಲ. ವಜ್ರ, ಕೆಂಪು, ಮುತ್ತು, ಚಿನ್ನ ಹೆಚ್ಚು ದೊರೆಯುವುದು ದಕ್ಷಿಣಾಪಥದಲ್ಲಿ ಎಂದು ದೃಢವಾಗಿ ಹೇಳುತ್ತಾರೆ. ಗಣಿಗಳೇ ರಾಜ ಭಂಡಾರದ ಮೂಲ. ಭಂಡಾರವಿದ್ದರೇ ರಾಜ್ಯ ದೃಢವಾಗಿರುತ್ತದೆ

ಎಂದು ಖಚಿತವಾಗಿ ಹೇಳುತ್ತಾರೆ. ದಕ್ಷಿಣಾಪಥದಲ್ಲಿ ಚಿನ್ನ ದೊರೆಯುವ ಬಗ್ಗೆ ಚಾಣಕ್ಯ ಸೂಚ್ಯವಾಗಿ ಹೇಳಿದ್ದಾರೆ. ಆದರೆ ಗಣಿಗಳಿರುವ ನಿರ್ದಿಷ್ಟ ಸ್ಥಳಗಳ ಬಗ್ಗೆ ಯಾವುದೇ ವಿವರಣೆಗಳನ್ನು ನೀಡಿಲ್ಲ. ಆದರೂ ಮೌರ್ಯರ ಕಾಲದಲ್ಲೇ ದಕ್ಷಿಣ ಭಾರತ ಚಿನ್ನಕ್ಕೆ ಹೆಸರಾಗಿತ್ತು ಎಂಬುದನ್ನು ಇದರಿಂದ ಊಹಿಸಬವುದು.

ಕೆಜಿಎಫ್ ಪ್ರದೇಶದ ವ್ಯಾಪ್ತಿಯಲ್ಲಿರುವ ಚಿಗುರುಗುಂಟ ಹಳೆ ಗಣಿಗಳಲ್ಲಿ ದೊರಕಿದ ಮರದ ಚೂರುಗಳನ್ನು ಕಾರ್ಬನ್ ಡೇಟಿಂಗ್‌ಗೆ ಒಳಪಡಿಸಿದಾಗ ಅವು 2600 ವರ್ಷಗಳ ಹಿಂದಿನ ಮರದ ಚೂರುಗಳಾಗಿದ್ದವು. ಮರದ ದಿಮ್ಮಿಗಳನ್ನು ಸುರಂಗಗಳಲ್ಲಿ ಶಿಲೆಗಳು ಕುಸಿಯದಂತೆ ತಡೆಗಟ್ಟಲು ಉಪಯೋಗಿಸುತ್ತಿದ್ದರು. ಈಜಿಪ್ಟ್, ಏಷಿಯಾ ಮತ್ತಿತರ ದೇಶಗಳ ಕಾರ್ಮಿಕರು ಚಿನ್ನವಿರುವ ಶಿಲಾಪುಡಿಯನ್ನು ಉದ್ದ ಕಿವಿಗಳಿರುವ ಪ್ರಾಣಿಗಳ ಚರ್ಮದ ಚೀಲಗಳಲ್ಲಿ ರವಾನಿಸುತ್ತಿದ್ದುದಾಗಿ ಕ್ರಿ.ಪೂ. 1800 ರಲ್ಲಿ ಗ್ರೀಕ್ ದೇಶದ ಜೇಸನ್ ದಾಖಲಿಸಿದ್ದಾರೆ. ಕ್ರೈಸ್ತಯುಗದ ಕೆಲವು ಶತಮಾನಗಳವರೆಗೆ ಈ ಗಣಿಗಳು ನಡೆಯುತ್ತಿದ್ದುದಾಗಿ ರೋಮನ್ ಚರಿತ್ರೆಕಾರ ಪ್ಲಿನಿ ಕ್ರಿ.ಶ. 77ರಲ್ಲಿ ದಾಖಲಿಸಿದ್ದಾರೆ. ರೋಮ್ ದೇಶದ ಜುಲಿಯಟ್ ಸೀಜ಼ರ್ ಮೊದಲಿಗೆ ಇಜಿಪ್ಟ್ ದೇಶವನ್ನು ಗೆದ್ದು ಚಿನ್ನ ದೋಚಿದ ಮೇಲೆ ಭಾರತ ದೇಶದ ಮೇಲೂ ದಂಡೆತ್ತಿ ಹೋಗಿ ಚಿನ್ನವನ್ನು ದೋಚುವುದಕ್ಕೆ ಯೋಚಿಸಿದ್ದ, ಆದರೆ ಆತನನ್ನು ಸಾಯಿಸಲಾಯಿತು.

ಈಜಿಪ್ಟ್‌ನಲ್ಲಿ ಹುಟ್ಟಿದ ರಸವಿದ್ಯೆ/ಆಲ್‌ಕೆಮಿ :

ಈಜಿಪ್ಟ್‌ನ ಅಲೆಕ್ಸಾಂಡ್ರಿಯಾದಲ್ಲಿ ಮೊದಲ ಶತಮಾನದಲ್ಲಿ ಮೊದಲ ಬಾರಿಗೆ ರಸವಿದ್ಯೆ ಪ್ರಾರಂಭವಾಯಿತು. ಆ ವೇಳೆಗೆ ಗ್ರೀಸ್ ದೇಶ ಲೋಹ ಶಾಸ್ತ್ರದಲ್ಲಿ ನೈಪುಣ್ಯ ಗಳಿಸಿತ್ತು. ಪ್ರಚಲಿತವಿದ್ದ ಲೋಹ ವಿಜ್ಞಾನದ ಹಿನ್ನೆಲೆಯಲ್ಲಿ ಈಜಿಪ್ಟ್‌ನ ಕೆಲವು ಪರಿಣತರು ಚಿನ್ನವನ್ನು ಸೃಷ್ಟಿ ಮಾಡುವ ಪ್ರಯತ್ನ ಮಾಡಿದರು. 'ಅಲ್‌ಕೆಮಿ' ಎಂಬ ಪದ ಅರಬ್ಬೀ ಭಾಷೆಯ ಮೂಲದಿಂದ ಬಂದಿದೆ ಎಂದು ಪಂಡಿತರು ಭಾವಿಸಿದ್ದಾರೆ. ಅಲ್‌ಕೆಮಿ, ಈಜಿಪ್ಟ್‌ನ ಎರೆಮಣ್ಣಿನ ಬಣ್ಣವನ್ನು ಪ್ರತಿನಿಧಿಸುವ ಶಬ್ದ. ಈಜಿಪ್ಟ್‌ನವರು, ಟ್ರಿಸ್‌ಮೆಜಿಸ್ಟಸ್ ಎಂಬ ತಂತ್ರಜ್ಞನನ್ನು ರಸವಿದ್ಯೆಯ ಪಿತಾಮಹನೆಂದು ಕರೆದಿದ್ದಾರೆ. 2ನೇ ಶತಮಾನದಲ್ಲಿ ಚೀನಾ ರಸವಿದ್ಯೆಯಲ್ಲಿ ಉಳಿದ ದೇಶಗಳಿಗಿಂತ ಮುಂದೆ ಸಾಗಿಹೋಗಿತ್ತು. 8ನೇ ಶತಮಾನದ ಹೊತ್ತಿಗೆ ಭಾರತದ ರಸವಿದ್ಯೆ ಪಾರಂಗತರೂ ಪ್ರಸಿದ್ಧಿಗೆ ಬಂದಿದ್ದರು. 12ನೇ ಶತಮಾನದಲ್ಲಿ ರಸವಿದ್ಯೆಯ ಮೂಲ ಸಿದ್ಧಾಂತಗಳನ್ನು ಬಸವಾದಿ ವಚನಕಾರರು ತಮ್ಮ ವಚನಗಳಲ್ಲಿ ಉಪಮೆಗಳಾಗಿ ಬಳಸಿದರು. 10ನೇ ಶತಮಾನದಲ್ಲಿ ಭಾರತಕ್ಕೆ ಬಂದು ನಮ್ಮ ಸಂಪ್ರದಾಯ ಆಚರಣೆಗಳನ್ನು ಗಾಢವಾಗಿ ಅಧ್ಯಯನ ಮಾಡಿ ದಾಖಲೆ ಮಾಡಿದ ಅರಬ್ಬೀ ದೇಶದ ಅಲ್‌ಬೆರೂನಿ 'ಇಂಡಿಯಾ' ಎಂಬ ಪ್ರಖ್ಯಾತ ಗ್ರಂಥ ರಚಿಸಿ

ರಸರತ್ನಾಕರ ಎಂಬ ಗ್ರಂಥ ಬರೆದ ನಾಗಾರ್ಜುನನ ಬಗ್ಗೆ ಉಲ್ಲೇಖ ಮಾಡುತ್ತಾರೆ. ಬಸವಣ್ಣ ಕ್ರಿ.ಶ. 1160ರಲ್ಲಿ 'ಪರುಷದ ಹೊರೆಯಲ್ಲಿ ಕಬ್ಬಿಣವಿದ್ದು ಹೊನ್ನಾಯ್ತು ನೋಡಿರೇ' ಎಂದು ಸ್ಪರ್ಶಮಣಿಯ ಅದ್ಭುತ ಗುಣಗಳನ್ನು ಕೊಂಡಾಡಿದರೆ, ಚನ್ನಬಸವಣ್ಣ 'ಪರುಷದ ಪರ್ವತದಲ್ಲಿ ಕಬ್ಬಿಣವುಂಟೇ'? ಎಂದೇ ಪ್ರಶ್ನಿಸುತ್ತಾರೆ.

ದಕ್ಷಿಣ ಅಮೆರಿಕದ ಒಂದು ಬುಡಕಟ್ಟು ಜನಾಂಗ ಚಿನ್ನದಿಂದಾಗಿ ಅವನತಿ ಹೊಂದಿದ ದಾರುಣ ಪ್ರಸಂಗ ಇತಿಹಾಸದಲ್ಲಿ ಅಳಿಯದ ಒಂದು ಕಪ್ಪು ಚುಕ್ಕೆಯಾಗಿದೆ. ಮಾರ್ಕೋಪೋಲೋ ಚೀನಾ ಹಾಗೂ ಭಾರತಕ್ಕೆ ಕ್ರಿ.ಶ. 1295ರಲ್ಲಿ ಭೇಟಿ ನೀಡಿ ಇಲ್ಲಿನ ಸಿರಿ ಸಂಪತ್ತುಗಳನ್ನು ಹೊಗಳಿ ಬರೆದರು. ಅದರಲ್ಲಿ ಚಿನ್ನದ ಬಗ್ಗೆ ಬರೆಯುತ್ತ ಇಲ್ಲಿನ ನದಿಗಳು ಚಿನ್ನವನ್ನೇ ಹೊತ್ತು ಹರಿಯುತ್ತಿವೆ, ಸರೋವರಗಳಲ್ಲಿ ಚಿನ್ನದ ಉಂಡೆಗಳು ಅಡಗಿವೆ ಎಂದು ವರ್ಣಿಸಿದರು. ಸ್ಪೈಯಿನಿನ ರಾಜ ಪರ್ದಿನಾಂಡ್ ಹಾಗೂ ರಾಣಿ ಇಸ್‌ಬೆಲ್ಲರನ್ನು ಮೆಚ್ಚಿಸಲು ಅಟ್ಲಾಂಟಿಕ್ ಸಾಗರಯಾನ ಮಾಡಿದ.

ಕೊಲಂಬಸ್, ವಾಣಿಜ್ಯ ಮಾರ್ಗ ಹುಡುಕುವ ಗುರಿ ಹೊಂದಿದ್ದ. ಆತ ಮಾರ್ಕೋಪೋಲೋನ ವರ್ಣನೆಯನ್ನು ಮರೆತಿರಲಿಲ್ಲ. ವೆಸ್ಟ್ ಇಂಡೀಸ್ ಮತ್ತು ಜಪಾನ್ ದೇಶಗಳು ಅವನಿಗೆ ಕಣ್ಣಾ ಮುಚ್ಚಾಲೆಯಾಡಿಸಿದವು. ಕ್ಯೂಬಾ ದೇಶವನ್ನು ಪೂರ್ವ ದೇಶದ ಒಂದು ಭಾಗ ಎಂದೇ ಕೊಲಂಬಸ್ ಮೊದಲು ತಿಳಿದಿದ್ದ. ಕ್ರಿ.ಶ. 1492ರಲ್ಲಿ ದಕ್ಷಿಣ ಅಮೆರಿಕಾಗೆ ತಲುಪಿ ಅದನ್ನು ಇಂಡಿಯಾ ದೇಶವೆಂದು ಭಾವಿಸಿದ. ಅಲ್ಲಿನ ಬುಡಕಟ್ಟು ಜನರನ್ನು ಕೊಲಂಬಸ್ ಮೊದಲು ಕೇಳಿದ ಪ್ರಶ್ನೆ 'ಚಿನ್ನ ಎಲ್ಲಿದೆ ?' ಎನ್ನುವುದು.

ಅಲ್ಲಾವುದ್ದೀನ್ ಖಿಲ್ಜಿಯ ಆಜ್ಞೆಯ ಮೇರೆಗೆ ಮಲ್ಲಿಕ್‌ಕಾಫಿರ್ ಭಾರತದ ಮೇಲೆ ದಂಡೆತ್ತಿ ಬಂದು ದೋಚಿದ ಸಂಪತ್ತು, ನಾಶಪಡಿಸಿದ ದೇವಾಲಯಗಳ ಸಂಖ್ಯೆ ಅಪಾರ. ಕ್ರಿ.ಶ. 1310 ರಲ್ಲಿ ನಡೆದ ಈ ದಂಡಯಾತ್ರೆಯಲ್ಲಿ ದಕ್ಷಿಣ ಭಾರತದ ಬಹುಪಾಲು ಸುವರ್ಣ ಭಂಡಾರ ಕೊಳ್ಳೆಯಾಯಿತು ಎಂದು ಫಿರಸ್ತ ಬರೆದಿದ್ದಾರೆ. ಮಲ್ಲಿಕ್‌ಕಾಫರ್ ಈ ದಿಗ್ವಿಜಯದಿಂದ ದೆಹಲಿಗೆ ಹಿಂದಿರುಗಿದಾಗ ಆತನೊಂದಿಗೆ 612 ಆನೆಗಳು, 20,000 ಕುದುರೆಗಳು ಮತ್ತು 96,000 ಮಣ ಚಿನ್ನ ತುಂಬಿದ ಪೆಟ್ಟಿಗೆಗಳು ಇದ್ದವು. ಆ ಕಾಲದಲ್ಲಿ ಒಂದು ಮಣ ಚಿನ್ನ ಎಂದರೆ ತಿರುವಾಂಕೂರಿನಲ್ಲಿ 19 ಪೌಂಡ್, ಅಹಮದ್ ನಗರದಲ್ಲಿ 16 ಪೌಂಡ್, ಮದರಾಸಿನಲ್ಲಿ 25 ಪೌಂಡ್ ಮತ್ತು ಬೊಂಬಾಯಿಯಲ್ಲಿ 28 ಪೌಂಡ್ ಇತ್ತು. ಫಿರಸ್ತ ದಾಖಲಿಸಿರುವ ಮಣ ಯಾವುದು ಎಂಬುದು ಗೊತ್ತಿಲ್ಲ.

ಕ್ರಿ.ಶ. 1848–1856ರ 'ಕ್ಯಾಲಿಫೋರ್ನಿಯಾ ಚಿನ್ನದ ಸುಗ್ಗಿ' ಅಮೆರಿಕಾದ ಬಣ್ಣವನ್ನೇ

ಬದಲಾಯಿಸಿತು. ಅಂದಿಗೆ ಇಡೀ ಜಗತ್ತು ಉತ್ಪಾದಿಸುತ್ತಿದ್ದ ಅರ್ಧ ಪ್ರಮಾಣದ ಚಿನ್ನವನ್ನು (7,52,400 ಕಿ.ಗ್ರಾಂ.) ಕ್ಯಾಲಿಫೋರ್ನಿಯಾ 8 ವರ್ಷಗಳಲ್ಲಿ ಸಂಗ್ರಹಿಸಿತ್ತು, ಇಲ್ಲಿನ ಜನ ಚಿನ್ನದ ಸುಗ್ಗಿಯಿಂದ ವ್ಯವಸಾಯ ಮಾಡುವುದನ್ನು ತಾತ್ಕಾಲಿಕವಾಗಿ ಮರೆತೇಹೋಗಿದ್ದರು. ಸರಕಾರ ಚಿನ್ನದ ಬೇಟೆಗೆ ಬರುವವರಿಗೆ ಯಾವುದೇ ನಿರ್ಬಂಧಗಳನ್ನು ಹೇರದೆ ಮುಕ್ತ ಅವಕಾಶವನ್ನು ನೀಡಿದ್ದರಿಂದ, ಈ ಸುವರ್ಣ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಜಗತ್ತಿನ ಮೂಲೆಮೂಲೆಯಿಂದಲೂ ಸಹಸ್ರಾರು ಜನ ಧಾವಿಸಿ ಬಂದರು. ನ್ಯೂಯಾರ್ಕ್ ಟೈಂಸ್ ಪತ್ರಿಕೆ ಇದನ್ನು 'ಅಮೆರಿಕಾದ ಸುವರ್ಣಯುಗದ ಪರಾಕಾಷ್ಠೆ' ಎಂದು ಬರೆಯಿತು. 1857ರಲ್ಲಿ ಈ ಚಿನ್ನದ ನೂಕುನುಗ್ಗಲಿನಿಂದ ಸ್ಥಳೀಯ ಜನಸಂಖ್ಯೆ 250,000 ಕ್ಕೆ ಏರಿತು.

ಚಿನ್ನವನ್ನು ಪಡೆಯುವ ಆತುರದಲ್ಲಿ ಜನರು ತಮ್ಮನ್ನು ತಾವೇ ಎಲ್ಲಾ ಸಂಕಷ್ಟಗಳಿಗೂ ಒಡ್ಡಿಕೊಂಡರು. ಇಲ್ಲಿಗೆ ಧಾವಿಸಿದ ಬಹುಪಾಲು ಜನರು ಮಾರ್ಗಗಳಲ್ಲಿ ಸಾಂಕ್ರಾಮಿಕ ರೋಗಗಳಿಗೆ ಈಡಾಗಿ, ಸ್ಥಳೀಯ ರೆಡ್ ಇಂಡಿಯನ್ ಬುಡಕಟ್ಟು ಜನರನ್ನು ದಾರಿಯ ಉದ್ದಕ್ಕೂ ಎದುರಿಸಬೇಕಾಯಿತು. ಸುಮಾರು 5000 ಮಂದಿ ಮಾರ್ಗ ಮಧ್ಯದಲ್ಲಿಯೆ ಅಸುನೀಗಿದ್ದಾಗಿ ತಿಳಿದು ಬರುತ್ತದೆ. ಕ್ರಿ.ಶ. 1860ರ ಕೊನೆಯ ಹೊತ್ತಿಗೆ ಕ್ಯಾಲಿಫೋರ್ನಿಯಾದ ಚಿನ್ನದ ಅನ್ವೇಷಕರ ಸಂಖ್ಯೆ 40,000ಕ್ಕೆ ಏರಿತ್ತು. ಕ್ರಿ.ಶ. 1853 ರಲ್ಲಿ ದೂರದ ಫ್ರಾನ್ಸ್‌ನಿಂದ 25,000 ಜನರು ಬಂದರೆ, ಆಗಲೆ 20,000 ಚೀನಿಯರು ಅಲ್ಲಿಗೆ ಧಾವಿಸಿದ್ದರು.

ಭೂಮಿಯ ಮೇಲೆ ನಾಗರಿಕತೆಯ ತೊಟ್ಟಿಲುಗಳು ಬೆಳೆಯುತ್ತಿದ್ದ ಕಾಲದಲ್ಲಿ, ಮಾನವ ಮೊದಲಿಗೆ ಖನಿಜಗಳನ್ನು ಹುಡುಕಲು ಪ್ರಾರಂಭಿಸಿದಾಗ ಅವನ ಕಣ್ಣುಗಳಿಗೆ ಬಿದ್ದ ಪ್ರದೇಶಗಳಲ್ಲಿ ಕೆಜಿಎಫ್ ಪ್ರದೇಶವೂ ಒಂದು. ಅವರು ಮೂಲವಾಗಿ ಸ್ಥಳೀಯ ನಾಗರಿಕರೇ ಅಥವಾ ಅನ್ಯ ಪ್ರದೇಶಗಳಿಂದ ಬಂದವರೇ ಎನ್ನುವುದು ಇನ್ನೂ ನಿಗೂಢ ಎನ್ನುತ್ತಾರೆ ಟಿ. ಮಿಲಿಯಮ್ಸ್ ಅವರು. ಪುರಾತನ ಶಾಸ್ತ್ರದ ವ್ಯಾಪಕ ಸಂಶೋಧನೆಯ ಅನುಭವದ ಆಧಾರದಿಂದ 4000 ವರ್ಷಗಳ ಹಿಂದೆ ಈಜಿಪ್ಟ್ ಮತ್ತು ಮೆಡಿಟರೇನಿಯ ಪ್ರದೇಶಗಳಿಂದ ಹೊರಟ ಜನರು ಪ್ರಪಂಚದ ಕೆಲವು ಪ್ರದೇಶಗಳ ಕಡೆಗೆ ಖನಿಜಗಳನ್ನು ಹುಡುಕುತ್ತ ಹೊರಟಿದ್ದಾಗಿ ತಿಳಿದುಬರುತ್ತದೆ. ಆ ಪ್ರದೇಶಗಳಲ್ಲಿ ಭಾರತವೂ ಒಂದು. ಈ ಯೋಚನೆಗೆ ಒತ್ತು ನೀಡುವ ಇನ್ನೊಂದು ಆಧಾರವೆಂದರೆ ಈ ಜನರು ನಡೆದಾಡಿದ ದಾರಿಗಳಲ್ಲಿ, ಅವರು ಹುಡುಕಾಡಿದ ಪ್ರದೇಶಗಳಲ್ಲಿ 'ಮೆಗಾಲಿಥ್ಸ್' ಎಂಬ ಪ್ರಾಚೀನ ಶಿಲೆಗಳನ್ನು ಸ್ಥಾಪಿಸಲಾಗಿದೆ. ಆ ಶಿಲೆಗಳು ದಕ್ಷಿಣ ಭಾರತದಲ್ಲಿ ಅದರಲ್ಲೂ ಮೈಸೂರು ಪ್ರಾಂತ್ಯ ಮತ್ತು ನಿಜಾಮರ ಪ್ರದೇಶಗಳಲ್ಲಿ ಸ್ಥಾಪನೆಯಾಗಿರುವುದು ಕಾಣಬರುತ್ತದೆ. ನಿಜಾಮರ ಕಾಲದಲ್ಲಿ ದಕ್ಷನ್ ಪ್ರಾಂತ್ಯದಲ್ಲಿ ಗಣಿ ಉಸ್ತುವಾರಿಯನ್ನು ವಹಿಸಿದ್ದ

ಕ್ಯಾಲಿಯೊನಾರ್ಡ್‌ಮನ್ ಎಂಬವರು ಚಿನ್ನ, ತಾಮ್ರ ಮತ್ತು ಕಬ್ಬಿಣ ದೊರಕುವ ಪ್ರದೇಶಗಳಲ್ಲಿ 'ಮೆಗಾಲಿಥ್ಸ್' ಇರುವುದನ್ನು ದಾಖಲು ಮಾಡಿದ್ದಾರೆ. ಇವು ಕೆಜಿಎಫ್ ಪ್ರದೇಶದಲ್ಲಿ ಇರುವುದನ್ನು ಉಲ್ಲೇಖಿಸಲಾಗಿದೆ. ಈ ದಾಖಲೆಗಳನ್ನು ಒಪ್ಪುವುದಾದರೆ ಕೆಜಿಎಫ್ ಗಣಿಗಳಿಗೆ ಸುಮಾರು 4000 ವರ್ಷಗಳ ಚಾರಿತ್ರಿಕ ಹಿನ್ನೆಲೆ ಇದೆ.

ಸ್ವರ್ಣಭೂಮಿ ಭಾರತ :

ಭಾರತದ ಚಿನ್ನದ ಪರಂಪರೆ ವಿದೇಶಿಯರ ಕಣ್ಣುಗಳಿಗೆ ಸದಾ ಅದ್ಭುತಗಳ ತವರಾಗಿ ಕಂಡಿದೆ. ಭಾರತವನ್ನು ಋಷಿಗಳ ಪುಣ್ಯಭೂಮಿ ಮತ್ತು ಸಾಧುಸಂತರ ನಾಡೆಂದು ಕರೆದರು. ಭಾರತಕ್ಕೆ 'ಸ್ವರ್ಣಭೂಮಿ' ಎನ್ನುವ ಹೆಸರು ಮೊದಲಿನಿಂದಲೂ ಇದೆ. ಪ್ರಾಚೀನರು ಚಿನ್ನಕ್ಕೆ ಬಹಳ ದೊಡ್ಡ ಸ್ಥಾನವನ್ನು ಕೊಟ್ಟಿದ್ದಾರೆ. ವೇದಗಳಲ್ಲೂ ಚಿನ್ನ ಅಮೂಲ್ಯ ಸ್ಥಾನವನ್ನು ಪಡೆದುಕೊಂಡಿದೆ. ಪುರಾಣಗಳಲ್ಲಂತೂ ಚಿನ್ನವನ್ನು ದೈವಲೋಹವೆಂದು ಸಾರುವ ಅನೇಕ ಕತೆ ಮತ್ತು ಉಪಕತೆಗಳೂ ಇವೆ. ವೇದಕಾಲದಿಂದಲೂ ಭಾರತೀಯರಿಗೆ ಚಿನ್ನ ಶ್ರೇಷ್ಠ ಲೋಹವಾಗಿ ಕಂಡಿದೆ. ಋಗ್ವೇದದ ಶ್ರೀಸೂಕ್ತದ ಹಲವು ಋಕ್ಕುಗಳು ಚಿನ್ನದ ಹಿರಿಮೆಯನ್ನು ಎತ್ತಿ ಹಿಡಿಯುತ್ತವೆ. ಶ್ರೀಸೂಕ್ತದ ಮೊದಲ ಋಕ್ ಪ್ರಾರಂಭವಾಗುವುದೇ ಲಕ್ಷ್ಮಿಯನ್ನು ಸ್ತುತಿಸುವುದರ ಮೂಲಕ. ಹಿರಣ್ಯವರ್ಣಾಂ ಹರಿಣೀಂ ಸುವರ್ಣ ರಜತಸ್ರಜಾಂ ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ಸಮಸ್ತವನ್ನು ತಿಳಿದಿರುವ ಎಲೈ ಅಗ್ನಿಯೇ, ನೀನು ಚಿನ್ನದಂತಿರುವ ಶರೀರ ಕಾಂತಿಯಿಂದ ಬೆಳಗುತ್ತಿರುವವಳೂ, ಗೌರವ ವರ್ಣವುಳ್ಳವಳೂ ಅಥವಾ ಹೆಣ್ಣು ಜಿಂಕೆ ರೂಪ ಧರಿಸಿದವಳೂ, ಚಂದ್ರನಂತೆ ಆಹ್ಲಾದಕರ ಕಾಂತಿಯುಳ್ಳವಳೂ, ಸುವರ್ಣಮಯವಾದ ಶರೀರವುಳ್ಳವಳೂ, ಸಮಸ್ತ ಲಕ್ಷಣಗಳಿಂದ ಕೂಡಿದವಳೂ ಆದ ಶ್ರೀ ದೇವಿಯೆಂಬ ದೇವತೆಯನ್ನು ನನ್ನ ಬಳಿಗೆ ಕರೆದುಕೊಂಡು ಬಾ ಎಂಬುದಾಗಿ.

ಆರ್ಯ ಋಗಳು ಲಕ್ಷ್ಮಿಯ ಕಟಾಕ್ಷದಿಂದ ಸುವರ್ಣ, ಗೋವು, ಅಶ್ವ ಸಂಪತ್ತುಗಳನ್ನು ಬೇಡಿದರು. ಲಕ್ಷ್ಮಿಯನ್ನು ಹಿರಣ್ಮಯೀ ಎಂದು ಸ್ತುತಿಸಿದರು. ಚಿನ್ನದ ಆಕರ್ಷಕ ಬಣ್ಣ ವೇದ ಕಾಲದ ಋಗಳ ಗಮನವನ್ನು ಸೆರೆ ಹಿಡಿದಿತ್ತು. ಚಿನ್ನ ಕೇವಲ ಅಲಂಕಾರದ ಆಭರಣವಾಗದೆ ಉಪಮೆಯಾಗಿಯೂ ಬಳಕೆಯಾಯಿತು. ಋಗ್ವೇದದಲ್ಲಿ ಅನೇಕ ಲೋಹಗಳ ಪ್ರಸ್ತಾಪ ಮಾಡುವುದರ ಜೊತೆಗೆ ಅವುಗಳನ್ನು ಸಂಸ್ಕರಿಸುವ ವಿಧಾನವನ್ನೂ ಕೂಡ ತಿಳಿಸಿದೆ. ಯಜ್ಞ ಯಾಗಾದಿಗಳಲ್ಲಿ ನೀಡುತ್ತಿದ್ದ ಅಶ್ವ ಬಲಿಯಲ್ಲಿ, ಬಲಿ ನೀಡಿದ ನಂತರ ಬಲಿಯನ್ನು ಚಿನ್ನದ ಸೂಜಿಯಲ್ಲಿ ಚುಚ್ಚುತ್ತಿದ್ದುದನ್ನು ಶತಪಥ ಬ್ರಾಹ್ಮಣದಲ್ಲಿ ಉಲ್ಲೇಖಿಸಿದೆ. ಚಿನ್ನದ ಅಮೂಲ್ಯ ಗುಣ ಅದನ್ನು ದೊಡ್ಡ ಸ್ಥಾನಕ್ಕೆ ಏರಿಸಿತ್ತು. ಚಿನ್ನವನ್ನು ಕಳವು ಮಾಡಿದರೆ ಮರಣ ದಂಡನೆ ಮತ್ತು ಘೋರ ಶಿಕ್ಷೆಗಳನ್ನು ವಿಧಿಸಲು ಆಪಸ್ತಂಭ

ಗೌತಮ ಋಗಳು ಸೂಚಿಸಿದ್ದರು. ಚಿನ್ನದ ಆಭರಣವನ್ನು ಧರಿಸುವುದೇ ಶೋಭಾಯಮಾನ, ಅದು ಅಂತಸ್ತು ಗೌರವವನ್ನು ಹೆಚ್ಚಿಸುತ್ತದೆ, ರೋಗ ಪರಿಹಾರಕ ಎಂಬ ಭಾವನೆಯೂ ಇದೆ.

ಪಂಜಾಬಿನ ನದಿಗಳ ಮೆಕ್ಕಲು ಮಣ್ಣಿನಲ್ಲಿ ಚಿನ್ನವನ್ನು ಸೋಸುತ್ತಿದ್ದರ ಬಗ್ಗೆ ಶತಪಥ ಬ್ರಾಹ್ಮಣದಲ್ಲಿ (ಶುಕ್ಲ ಯಜುರ್ವೇದ) ಸ್ಪಷ್ಟವಾಗಿ ದಾಖಲಿಸಲಾಗಿದೆ. ಋಗ್ವೇದ ಒಂದರಲ್ಲೇ ಚಿನ್ನಕ್ಕೆ 16 ಹೆಸರುಗಳಿವೆ. ಆಭರಣಗಳು ತಯಾರಿಸುವುದರಿಂದ ಹಿಡಿದು ಹೋಮಗಳಲ್ಲಿ ಉಪಯೋಗಿಸುತ್ತಿದ್ದ ಮಡಿಕೆ, ಕುಡಿಕೆ, ಚಮಚ ಇತ್ಯಾದಿಗಳನ್ನು ತಯಾರಿಸುವಾಗಲೂ ಚಿನ್ನವನ್ನು ಉಪಯೋಗಿಸಲಾಗುತ್ತಿತ್ತು. ವೇದ ಕಾಲದ ಋಷಿಗಳು ಹಿಮಾಲಯದಲ್ಲಿ ಹುಟ್ಟುವ ನದಿಗಳನ್ನು ಸ್ವರ್ಣ ನದಿಗಳೆಂದೇ ಕರೆದರು. ಋಗ್ವೇದದಲ್ಲಿ ಸಿಂಧೂ ನದಿಯನ್ನು ಹಿರಣ್ಯಾನಿ, ಹಿರಣ್ಯವರ್ಣಿ ಎಂದೇ ಸಂಬೋಧಿಸಲಾಗಿದೆ.

ಪುರಾಣಗಳು ಮೇರು ಪರ್ವತವನ್ನು ಚಿನ್ನದ ಪರ್ವತವೆಂದೇ ಹೊಗಳಿವೆ. ಹಿಮಾಲಯದ ಉತ್ತರಕ್ಕಿರುವ ಮಂಗೋಲಿಯ ಭಾಗದ 'ಆಲ್‌ತೈ' ಪ್ರದೇಶವೇ ಈ ಮೇರು ಪರ್ವತ ಎನ್ನುವುದು ಕೆಲವು ಪಂಡಿತರ ಊಹೆ. ಆ ಪ್ರದೇಶದಲ್ಲಿ ಚಿನ್ನ ದೊರೆಯುವುದಲ್ಲದೆ, ಜಂಬೂ ನದಿಯೂ ಇದೆ. ಚಿನ್ನ ದೇವತೆಗಳ ಅಲಂಕಾರಕ್ಕೆ ಯೋಗ್ಯವಾದುದು. ಇಂದ್ರಗೋಪವೆಂಬ ಹುಳುವಿನಂತೆ ಪ್ರಕಾಶಯುಕ್ತವಾದದ್ದು. ಹೀಗೆಂದು ಮತ್ಸ್ಯ ಪುರಾಣ ಚಿನ್ನದ ಪ್ರಾದೇಶಿಕತೆಯನ್ನು ವಿವರಿಸುತ್ತದೆ. ಇದರಲ್ಲಿ ಬರುವ ತ್ರಿಪುರೋಪಾಖ್ಯಾನದಲ್ಲಿ ತ್ರಿಪುರಾಸುರರು, ಬ್ರಹ್ಮನನ್ನು ದೇವತೆಗಳು ಭೇದಿಸಲಾರದಂತಹ ಕೋಟೆ ಕಟ್ಟಲು ವರವನ್ನು ಕರುಣಿಸುವಂತೆ ಕೇಳುವ ಪ್ರಸಂಗವಿದೆ. ಶಿಲ್ಪಿ ಅವರಿಗಾಗಿ ಭೂಮಿಯ ಮೇಲೆ ಕಬ್ಬಿಣದ ಪಟ್ಟಣವನ್ನು, ಆಕಾಶದಲ್ಲಿ ಬೆಳ್ಳಿಯ ಪಟ್ಟಣವನ್ನು, ಅದರ ಮೇಲೆ ಚಿನ್ನದ ಪಟ್ಟಣವನ್ನು ನಿರ್ಮಿಸಿದನಂತೆ. ಒಂದೊಂದು ಪಟ್ಟಣವೂ ನೂರು ಯೋಜನೆ ಉದ್ದ ಮತ್ತು ನೂರು ಯೋಜನೆ ಅಗಲ. ಪುರಾಣಗಳು ಏನೇ ಹೇಳಲಿ, ಅವುಗಳನ್ನು ರಚಿಸುವ ಕಾಲಕ್ಕೆ ಚಿನ್ನ, ಬೆಳ್ಳಿ, ಕಬ್ಬಿಣ ಇನ್ನಿತರ ಲೋಹಗಳನ್ನು ಮಾನವರು ಉಪಯೋಗಿಸುತ್ತಿದ್ದರು ಎನ್ನುವುದು ನಿರ್ವಿವಾದ.

ಭಾರತದಲ್ಲಿ ಕ್ರಿ.ಪೂ. 4000– ಕ್ರಿ.ಪೂ. 2000 ರ ನಡುವೆ ಕೆಜಿಎಫ್ ಮತ್ತು ಮಧ್ಯ ಏಷಿಯಾದ ಪ್ರದೇಶಗಳಲ್ಲಿ ನೆಲದ ಮೇಲೆ ಮೆಕ್ಕಲು ಮಣ್ಣಿನಲ್ಲಿ ಅಥವಾ ಕ್ವಾರ್ಟ್ಝ್ (ಬೆಣಚು) ಶಿಲೆಗಳಿಂದ ಚಿನ್ನವನ್ನು ತೆಗೆದಿರಬಹುದೆಂದು ಕವನಾಫ್ (1968) ಗುರುತಿಸುತ್ತಾರೆ. ಕ್ರಿ.ಪೂ. 2000– ಕ್ರಿ.ಪೂ. 1000ರ ನಡುವೆ ಭೂವಿಜ್ಞಾನದ ಪ್ರಕ್ರಿಯೆಗಳ ಜೊತೆಗೆ ಚಿನ್ನವನ್ನು ಗುರುತಿಸುವ ಕಲ್ಪನೆ ಹುಟ್ಟಿಕೊಂಡಿರುವ ಸೂಚನೆಗಳು ಕಂಡುಬಂದಿವೆ. ಕ್ರಿ.ಪೂ. 450ರ ಸುಮಾರಿಗೆ ಹೆರೋಡೋಟಸ್ ಚಿನ್ನ ಮತ್ತು ಕ್ವಾರ್ಟ್ಝ್ ಶಿಲೆಗಳ ನಡುವಿನ ಸಂಬಂಧವನ್ನು ಗುರುತಿಸಿದರು.

ಸಿಂಧೂ ನಾಗರಿಕ ತೊಟ್ಟಿಲಲ್ಲಿ ಕೆಜಿಎಫ್ ಚಿನ್ನ :

ಹೈದರಾಬಾದ್ ನಿಜಾಮರ ಕಾಲದ ಅಧಿಕಾರಿ ಕ್ಯಾಪ್ಟನ್ ಲಿಯೋನಾರ್ಡ್ ಮನ್ ಹೇಳುವ ಹಾಗೆ ದಕ್ಷಿಣ ಭಾರತದಲ್ಲಿ ಚಿನ್ನ ತೆಗೆಯುವ ಕೆಲಸದಲ್ಲಿ ತೊಡಗಿಕೊಂಡವರೆಲ್ಲ ಸ್ಥಳೀಯರೆ. ಭಾರತದಾದ್ಯಂತ ಅಶೋಕ ಚಕ್ರವರ್ತಿ ಸ್ಥಾಪಿಸಿದ 23 ಶಿಲಾಶಾಸನಗಳಿದ್ದು, ಅವುಗಳಲ್ಲಿ 11 ಶಾಸನಗಳು ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿವೆ. ವೀಲರ್ ಚಿನ್ನದ ಬಳಕೆಯನ್ನು ಕುರಿತಂತೆ ಹೊಸ ದೃಷ್ಟಿಕೋನವನ್ನೇ ತಳೆದರು. ಚಿನ್ನದ ಗಣಿಯ ಪ್ರಾಚೀನತೆಯನ್ನು ಪ್ರಾಚ್ಯ ಶೋಧಕರು ಸಿಂಧೂನದಿಯ ನಾಗರಿಕತೆಯವರೆಗೂ ವಿಸ್ತರಿಸುತ್ತಾರೆ. ಸಿಂಧೂ ನಾಗರಿಕತೆಯಲ್ಲಿ ಬಳಸಿದ ಬಹುಪಾಲು ಚಿನ್ನ ತಿಳಿವರ್ಣದಿಂದ ಕೂಡಿದ್ದು ಹೆಚ್ಚು ಬೆಳ್ಳಿಯ ಅಂಶವನ್ನು ಹೊಂದಿದೆ. ಈ ಚಿನ್ನ ಕೆಜಿಎಫ್ ಮತ್ತು ಹಟ್ಟಿ (ರಾಯಚೂರು ಜಿಲ್ಲೆ) ಚಿನ್ನಕ್ಕೆ ತಾಳೆಯಾಗುತ್ತದೆ ಎನ್ನುವುದೇ ಇಲ್ಲಿನ ವಿಶೇಷ. ಈ ಎರಡು ಚಿನ್ನದ ಗಣಿಗಳನ್ನು ಬಿಟ್ಟರೆ, ಆ ಕಾಲಕ್ಕೆ ಭಾರತದಲ್ಲಿ ಯಾವ ಚಿನ್ನದ ಗಣಿಗಳೂ ಕಂಡುಬರುವುದಿಲ್ಲ. ದೇಶದ ಮೆಕ್ಕಲು ಮಣ್ಣಿನಲ್ಲಿ ತೆಗೆದ ಚಿನ್ನ ಕೆಜಿಎಫ್ ಮತ್ತು ಹಟ್ಟಿ ಚಿನ್ನಕ್ಕಿಂತ ಭಿನ್ನವಾದುದು. ಪ್ರೊ॥ ಆಲ್ಚಿನ್ ಮತ್ತು ಎಸ್.ಆರ್. ರಾವ್ ಅವರು ಇದೇ ವಿಷಯವನ್ನು ಎತ್ತಿ ಹಿಡಿಯುತ್ತಾರೆ.

ಕ್ರಿ.ಶ. 1906 ರಲ್ಲೇ ಮೆಕ್ಲೇರನ್ ಎಂಬ ಭೂವಿಜ್ಞಾನಿ ಈ ಭಾಗದಲ್ಲಿ ಸಮೀಕ್ಷೆ ನಡೆಸಿ ಪುರಾತನ ಚಿನ್ನದ ಗಣಿಗಳ ಬಗ್ಗೆ ವಿವರವಾಗಿ ದಾಖಲಿಸಿದ್ದಾರೆ. ಕೆಜಿಎಫ್ ಪ್ರದೇಶದಲ್ಲಿ ಚಿನ್ನದ ಅನ್ವೇಷಣೆಯ ಬಗ್ಗೆ ನಿಖರವಾದ ದಾಖಲೆಗಳು ದೊರೆಯುವುದು ಕ್ರಿ.ಶ. 1802 ರಿಂದ. ಇದೇ ಸಮಯದಲ್ಲಿ ಪ್ಲಿನಿ ಇನ್ನೊಂದು ನಿಖರವಾದ ಸ್ಥಳದ ಬಗ್ಗೆ ಹೀಗೆ ದಾಖಲಿಸಿದ್ದಾರೆ. ರಾಯಚೂರಿನ ಸುತ್ತಮುತ್ತಲ ಪ್ರದೇಶಗಳಲ್ಲಿ ನವಶಿಲಾಯುಗದ ಅವಶೇಷಗಳು ಪತ್ತೆಯಾದಾಗ ವೀಲರ್ ಅವರ ಈ ಅಭಿಪ್ರಾಯಕ್ಕೆ ಪೂರಕವಾಗುವ ಅನೇಕ ಆಧಾರಗಳನ್ನು ಪ್ರಾಚ್ಯ ಸಂಶೋಧಕರು ನೀಡಿದ್ದಾರೆ. ಪ್ರೊ॥ ಆಲ್ಚಿನ್ ಅವರು ಇಂತಹ ಆಧಾರಗಳನ್ನಾಧರಿಸಿ, ಹಟ್ಟಿ ಚಿನ್ನದ ಗಣಿಯ ಸುತ್ತಮುತ್ತಲು ನವ ಶಿಲಾಯುಗದ ಅನೇಕ ಅವಶೇಷಗಳು ಪತ್ತೆಯಾಗಿರುವುದರ ಹಿನ್ನೆಲೆಯಲ್ಲಿ ಬಹುಶ: ಚಿನ್ನ ಈ ಭಾಗದಿಂದಲೇ ಅಲ್ಲಿಗೆ ಪೂರೈಕೆಯಾಗಿರಬಹುದು' ಎಂದು ಬರೆದರು. ಈ ವಾದವನ್ನು ಎತ್ತಿ ಹಿಡಿದು ಎಸ್.ಆರ್. ರಾವ್ ಅವರು, ಹಟ್ಟಿ ಮತ್ತು ಕೆಜಿಎಫ್ ಗಣಿಗಳ ಚಿನ್ನ ಲೋತಲ್ ಮತ್ತು ಸಿಂಧೂ ಕಣಿವೆಗೆ ಪೂರೈಕೆ ಆಗಿದ್ದು; ಮಸ್ಕಿ, ಪಿಕ್ಲಿಹಾಲ್, ತೆಕ್ಕಲಕೋಟೆ, ಉತ್ತನೂರು (ಕ್ರಿ.ಪೂ. 2000) ಪ್ರದೇಶಗಳಲ್ಲಿ ದೊರೆಯುವ ಬಳಪದ ಕಲ್ಲಿನ ಮಣಿ ಮಾಲೆಗಳು ಹರಪ್ಪ ನಾಗರಿಕತೆಗೆ ರವಾನೆಯಾಗಿವೆ ಎನ್ನುವುದನ್ನು ಸಾರಿ ಹೇಳುತ್ತವೆ, ಎಂದರು.

ತೆಕ್ಕಲಕೋಟೆ :

ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯಲ್ಲಿ ಮಾಡಿದ ಉತ್ಖನನದಲ್ಲಿ ಅತ್ಯಂತ ಪುರಾತನ ಚಿನ್ನದ ಒಡವೆಗಳು ದೊರೆತಿವೆ. ಇವು ಕರ್ನಾಟಕದಲ್ಲಿ ದೊರೆತ ಅತಿ ಪುರಾತನ ಚಿನ್ನದ ಒಡವೆಗಳು. ಆದರೆ ಇದಕ್ಕಾಗಿ ಬಳಸಿರುವ ಚಿನ್ನ ಇದೇ ಗಣಿಗಳಿಂದಲೇ ಬಂದದ್ದು ಎಂದು ಹೇಳಲು ಸಾಧ್ಯವಾಗದು. ಪ್ರಾಯಶಃ ಪಶ್ಚಿಮ ಕರಾವಳಿಯ ಪ್ರಮುಖ ಬಂದರಾದ ಹೊನ್ನಾವರದ ಮೂಲಕ ಸಿಂಧೂ ಕಣಿವೆಗೆ ಸಾಗರ ಮಾರ್ಗವಾಗಿ ಚಿನ್ನ ಪೂರೈಕೆಯಾಗಿರಬಹುದು ಎಂದು ಊಹಿಸಲಾಯಿತು. ಹೊನ್ನಾವರದ ಹೆಸರೇ ಚಿನ್ನವನ್ನು ಸೂಚಿಸುತ್ತದೆ ಎಂದು ಸಿಂಧೂ ನಾಗರಿಕತೆ ಕುರಿತಂತೆ ಎಸ್.ಆರ್. ರಾವ್ ಅವರು ಹೇಳಿದ್ದಾರೆ.

ಕೆಜಿಎಫ್ ಅಥವಾ ಹಟ್ಟಿ ಗಣಿಗಳಿಂದ ದೂರದ ಸಿಂಧೂ ಕಣಿವೆಗೆ ಚಿನ್ನ ಪೂರೈಕೆಯಾಗಿರುವುದರ ಬಗ್ಗೆ ಪ್ರತ್ಯಕ್ಷ ಪುರಾವೆಗಳಿಲ್ಲ. ಕೆಜಿಎಫ್ ಚಿನ್ನದಲ್ಲಿ ಸಹಜವಾಗಿಯೆ ಬೆಳ್ಳಿ ಬೆರೆತಿದೆ. ಇದನ್ನು ಎಲೆಕ್ಟ್ರಂ ಎನ್ನುತ್ತಾರೆ. ಕೆಜಿಎಫ್‌ನಲ್ಲಿ ಉತ್ಪಾದಿಸಿದ ಚಿನ್ನದಲ್ಲಿ 1000 ದಲ್ಲಿ 930 ಭಾಗ ಚಿನ್ನ ಮತ್ತು 65 ಭಾಗ ಬೆಳ್ಳಿ ಇರುತ್ತದೆ. ಇದು ತಿಳಿ ಬಣ್ಣದ ಚಿನ್ನ. ಈ ಚಿನ್ನ ಮತ್ತು ಸಿಂಧೂ ನಾಗರಿಕತೆಯಲ್ಲಿ ದೊರಕುವ ತಿಳಿ ಬಣ್ಣದ ಚಿನ್ನದ ನಡುವೆ ಹೋಲಿಕೆ ಇದೆ ಎನ್ನುವುದನ್ನು ಮಾತ್ರ ಒಪ್ಪಿಕೊಳ್ಳಲೇಬೇಕಿದೆ.

ಅಶೋಕ ಚಕ್ರವರ್ತಿ ಸ್ಥಾಪಿಸಿದ 11 ಶಿಲಾಶಾಸನಗಳು :

ಅಶೋಕ ಚಕ್ರವರ್ತಿಯ ಕಾಲದಲ್ಲಿ ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಸ್ಥಾಪಿಸಿರುವ 11 ಶಿಲಾ ಶಾಸನಗಳು ಚಿನ್ನ ಮತ್ತು ಬಹುಲೋಹಗಳು ದೊರಕುವ ಸ್ಥಳಗಳಲ್ಲಿ ಇರುವುದು ಒಂದು ವಿಶೇಷ. ಇವುಗಳಲ್ಲಿ 9 ಶಾಸನಗಳು ಕರ್ನಾಟಕದಲ್ಲಿಯೇ ಇವೆ. ಅವು, ಬ್ರಹ್ಮಗಿರಿ, ಸಿದ್ದಾಪುರ, ಜಾಟೂಂಗ, ರಾಮೇಶ್ವರ (ಚಿತ್ರದುರ್ಗ ಜಿಲ್ಲೆ), ಮಸ್ಕಿ (ರಾಯಚೂರು ಜಿಲ್ಲೆ), ನಿಟ್ಟೂರು, ಉಡುಗೋಲಂ (ಬಳ್ಳಾರಿ ಜಿಲ್ಲೆ), ಪಾಲಕ್ಕಿಗುಂಡಿ ಮತ್ತು ಗವಿಮಠ (ಕೊಪ್ಪಳ ಜಿಲ್ಲೆ). ಮೇಲಿನ ಸ್ಥಳಗಳು ಬಹುಲೋಹಗಳು ದೊರಕುವ ಪ್ರದೇಶಗಳಾಗಿದ್ದು ಅವು ಹೆಚ್ಚು ಜನರು ವಾಸಿಸುತ್ತಿದ್ದ ಪ್ರದೇಶಗಳೂ ಆಗಿದ್ದವು. ಮಧ್ಯಯುಗದಲ್ಲಿ ಅಂದರೆ 16ನೇ ಶತಮಾನದಲ್ಲಿ ಶ್ರೀಕೃಷ್ಣದೇವರಾಯರ ಕಾಲದಲ್ಲಿ, ಅನಂತರ ಹೈದರಾಲಿ/ಟಿಪ್ಪುಸುಲ್ತಾನರ ಕಾಲದಲ್ಲೂ ಕೆಜಿಎಫ್ ಪ್ರದೇಶದಲ್ಲಿ ಚಿನ್ನ ತೆಗೆದಿರುವ ಕುರುಹುಗಳು ಕಂಡುಬಂದಿವೆ.

ಟುರಿನ್ ಪಾಪರಿಸ್ ನಕ್ಷೆ :

1820 ರಲ್ಲಿ ವಾಡಿ ಹಮಾಮತ್ ಪ್ರದೇಶದ ಕಲ್ಲುಗಣಿ ಕ್ವಾರಿ ಒಂದರಲ್ಲಿ ಬೆರನಾರ್ಡಿನೊ

ಡ್ರೋವೆಟ್ಟಿ ಎಂಬ ವಿಜ್ಞಾನಿ ಈ ನಕ್ಷೆಯನ್ನು ಕಂಡುಹಿಡಿದರು. ಈ ಪ್ರದೇಶ ಮಧ್ಯೆ ಪೂರ್ವ ಇಜಿಪ್ಟ್‌ನ ಮರಳುಗಾಡು ಪ್ರದೇಶದಲ್ಲಿದೆ. ಈ ನಕ್ಷೆಯನ್ನು 4ನೇ ರಾಜ ರಾಮಸಿಸ್‌ನ ಕಾಲದಲ್ಲಿ (ಕ್ರಿ.ಪೂ. 1115–1145 ರಲ್ಲಿ) ತಯಾರಿಸಲಾಗಿದೆ ಎಂದು ತಿಳಿಯಲಾಗಿದೆ. ಅಂದರೆ ಈ ನಕ್ಷೆ ಸುಮಾರು 3100 ವರ್ಷಗಳ ಹಿಂದಿನದು. ಈ ನಕ್ಷೆಯಲ್ಲಿ ಅಗ್ನಿ ಶಿಲೆಗಳು, ಜಲಜ ಶಿಲೆಗಳು ಮತ್ತು ರೂಪಾಂತರಿತ ಶಿಲೆಗಳ ವ್ಯತ್ಯಾಸಗಳನ್ನು ಬಣ್ಣಗಳ ಮೂಲಕ; ಬೆಟ್ಟ, ಕಣಿವೆ, ತಗ್ಗು ಪ್ರದೇಶಗಳನ್ನು, ಗಣಿ ಪ್ರದೇಶದ ಜೊತೆಗೆ ನಾಲ್ಕು ಸುರಂಗಗಳು, ಒಂದು ಬಾವಿ ಮತ್ತು ಕೆಲಸಗಾರರು ವಾಸಿಸುತ್ತಿದ್ದ ಪ್ರದೇಶವನ್ನು ತೋರಿಸಲಾಗಿದೆ.

ಬಿರ್ ಉಮ್ ಪವಾಕಿರ್ ಪ್ರದೇಶದ ಚಿನ್ನದ ಪುರಾಣ ಗಣಿಗಳು ಮತ್ತು ಬೆಕನ್ ಎಂಬ ಕಲ್ಲು ಗಣಿಗಳು ಮತ್ತು ಅಲ್ಲಿ ಕೆಲಸ ಮಾಡುತ್ತಿದ್ದವರ ಗುಡಾರಗಳನ್ನು ನಕ್ಷೆಯಲ್ಲಿ ಅತ್ಯಂತ ಆಧುನಿಕ ರೀತಿಯಲ್ಲಿ ತೋರಿಸಲಾಗಿದೆ. ಇಂತಹ ವಿವರಗಳುಳ್ಳ ನಕ್ಷೆಗಳನ್ನು ಫ್ರಾನ್ಸ್ ಮತ್ತು ಜರ್ಮನಿಯ ವಿಜ್ಞಾನಿಗಳು 1750ರ ಸುಮಾರಿಗೆ ತಯಾರಿಸುತ್ತಿದ್ದರು. 0.41 x 2.8ಮೀ. ಉದ್ದದ ಈ ನಕ್ಷೆ ಪೂರ್ಣವಾಗಿ ಕಾಲದ ಹೊಡೆತದಲ್ಲಿ ಜೀರ್ಣಗೊಂಡು ಮುಟ್ಟಲಾರದಷ್ಟು ಶಿಥಿಲವಾಗಿತ್ತು. ಛಿದ್ರಗೊಂಡಿದ್ದ ನಕ್ಷೆಯನ್ನು ಹಲವು ಭಾಗಗಳಲ್ಲಿ ವಿಭಾಗಿಸಿ, ಜೋಡಿಸಿ ಅದಕ್ಕೆ ಒಂದು ರೂಪ ನೀಡಲಾಯಿತು. ಈ ನಕ್ಷೆಯನ್ನು ತಯಾರಿಸಿದವರು ಇಪ್ಪೆಯೆ ಎಂಬವನ ಮಗ ಅಮೆನ್ ಕ್ಟೇ ಎನ್ನಲಾಗಿದೆ. ತಿಬನ್ ನೆಕ್ರೋಪೋಲಿಷ್‌ನಲ್ಲಿರುವ ಒಂದು ಗೋರಿಯ ಶಿಲಾಶಾಸನದಲ್ಲಿ ಕೆತ್ತಿರುವಂತೆ ಇದು 4ನೇ ರಾಜ ರಾಮಸಿಸ್‌ನ ಕಾಲದಲ್ಲಿ ನಿರ್ಮಾಣವಾಗಿದೆ. ಇದಕ್ಕೆ ಮುಖ್ಯ ಆಧಾರವೆಂದರೆ ನಕ್ಷೆಯ ಕೆಳಗಿನ ಪಠ್ಯವನ್ನು ಅಮೆನ್ ಕ್ಟೇ ತನ್ನ ಕೈಬರಹದಲ್ಲಿ ಬರೆದಿರುವುದು. ಈ ಶಾಸನವನ್ನು ಅಮೆನ್ ಕ್ಟೇ ಕುಟುಂಬದ ಗೋರಿಯೊಂದರಿಂದ ಡೀರ್–ಎಲ್–ಮೀರ ಎಂಬಲ್ಲಿ ಸಂಗ್ರಹಿಸಲಾಗಿತ್ತು. ಪ್ರಪಂಚದ ಅತ್ಯಂತ ಪುರಾತನ ಪಾಪಾರಿಸ್ ನಕ್ಷೆ ಪ್ರಸ್ತುತ ಟುರಿನ್ ನಗರ ಸಂಗ್ರಹಾಲಯದಲ್ಲಿದೆ.[6]

ಕ್ರಿ.ಪೂ. 2000–ಕ್ರಿ.ಪೂ. 1000 ರವರೆಗೆ ಸಂಗ್ರಹಿಸಿದ ಚಿನ್ನ ಹಿಂದಿನ ಕಾಲದಲ್ಲಿ ಸಂಗ್ರಹಿಸಿದ್ದ ಚಿನ್ನಕ್ಕಿಂತ ಮೂರು ಪಟ್ಟು ಹೆಚ್ಚೆಂದು ತಿಳಿದುಬರುತ್ತದೆ. ರಾಜಾ ಸಾಲೊಮನ್, ಚಿನ್ನ ಸಂಗ್ರಹಿಸುತ್ತಿದ್ದ ಬುಡುಕಟ್ಟು ಜನರಿಂದ ವರ್ಷಕ್ಕೆ 18 ಟನ್ನು ಚಿನ್ನವನ್ನು ಕಪ್ಪ ಕಾಣಿಕೆಯಾಗಿ ಪಡೆಯುತ್ತಿದ್ದುದಾಗಿ ತಿಳಿದು ಬರುತ್ತದೆ. ಕ್ರಿ.ಶ. 1532 ರಲ್ಲಿ ಸ್ಪೈಯಿನ್ ದೇಶದ ರಾಜ ಅಟೋಲ್ಪ ಒಂದು ಕೋಣೆ ತುಂಬಾ ತುಂಬಿದ್ದ 6 ಟನ್ನು ಚಿನ್ನವನ್ನು ಸಾಲೋಮನ್ ರಾಜನಿಗೆ ಕಾಣಿಕೆಯಾಗಿ ನೀಡಿದ ಉಲ್ಲೇಖಗಳಿವೆ. ಕ್ರಿ.ಶ. 1522 ರಿಂದ ಕ್ರಿ.ಶ. 1547 ರವರೆಗೆ ಮೆಕ್ಸಿಕೊದಿಂದ ಸ್ಪೈಯಿನ್ ದೇಶಕ್ಕೆ ಸಾಗಿಸಿದ ಚಿನ್ನ 30 ಮೆಟ್ರಿಕ್ ಟನ್ನುಗಳಷ್ಟು ಎನ್ನುವ ವಿವರಣೆ ದೊರಕುತ್ತದೆ. ಒಂದು ಲೆಕ್ಕಾಚಾರದಂತೆ

ನಮ್ಮ ದೇಶದಲ್ಲಿ ತಾಮ್ರ ಯುಗದಲ್ಲಿ (ಕ್ರಿ.ಪೂ. 3900–ಕ್ರಿ.ಪೂ. 2100) 100 ಟನ್ನು, ಕಂಚಿನ ಯುಗದಲ್ಲಿ (ಕ್ರಿ.ಪೂ. 2100–ಕ್ರಿ.ಪೂ. 1200) 250 ಟನ್ನು, ಕಬ್ಬಿಣ ಯುಗದಲ್ಲಿ (ಕ್ರಿ.ಪೂ. 1200–ಕ್ರಿ.ಪೂ. 50) 425 ಟನ್ನು, ರೋಮನ್ ಕಾಲದಲ್ಲಿ (ಕ್ರಿ.ಪೂ. 50–ಕ್ರಿ.ಶ. 500) 125 ಟನ್ನು, ಒಟ್ಟು 900 ಟನ್ನು ಚಿನ್ನದ ಸಂಗ್ರಹವಿತ್ತು ಎನ್ನಲಾಗಿದೆ. ಬಚ್ಚೆ ಎನ್ನುವ ಚರಿತ್ರೆಕಾರ (1997) ಭಾರತದಲ್ಲಿ ಕ್ರಿ.ಪೂ. 3900 ರಿಂದ ಕ್ರಿ.ಶ. 500 ರವರೆಗೆ ಸುಮಾರು 990 ಟನ್ನು ಚಿನ್ನದ ಸಂಗ್ರಹವಿತ್ತು ಎನ್ನುತ್ತಾರೆ.

ಕ್ರಿ.ಶ. 500 ರಿಂದ ಕ್ರಿ.ಶ. 1500 ರವರೆಗೆ 145 ಟನ್ನು, ಕ್ರಿ.ಶ. 1500 ರಿಂದ ಕ್ರಿ.ಶ. 1997ರವರೆಗೆ 830 ಟನ್ನು ಚಿನ್ನ ಭಾರತದಲ್ಲಿ ದಾಸ್ತಾನಾಗಿತ್ತು ಎಂದು ಅಂದಾಜು ಮಾಡಲಾಗಿದೆ. ಕ್ರಿ.ಶ. 1977 ರಿಂದ ಕ್ರಿ.ಶ. 1980ರವರೆಗೆ ಕೆಜಿಎಫ್ ಗಣಿಗಳಲ್ಲಿ 19 ಟನ್ನು, ರಾಮಗಿರಿ (ಆಂಧ್ರಪ್ರದೇಶ) ಗಣಿಗಳಿಂದ 2 ಟನ್ನು, ಹಟ್ಟಿ (ರಾಯಚೂರು ಜಿಲ್ಲೆ) 21 ಟನ್ನು ಮತ್ತು ತಾಮ್ರದ ಗಣಿಗಳಿಂದ 5 ಟನ್ನು ಚಿನ್ನ, ಒಟ್ಟು 47 ಟನ್ನು ಚಿನ್ನ ಸಂಗ್ರಹವಾಗಿತ್ತು. ಸುಮೇರಿಯಾ, ಈಜಿಪ್ಟ್, ಹರಪ್ಪ ಮಹೊಂಜೊದಾರೋ ನಾಗರಿಕ ತೊಟ್ಟಿಲುಗಳ ಆಧಾರದಿಂದಲೂ ಕ್ರಿ.ಪೂ. 3000 ವರ್ಷಗಳ ಮುಂಚಿನಿಂದಲೂ ಚಿನ್ನ ತೆಗೆದಿರುವ ಕುರುಹುಗಳಿವೆ. ಕ್ರಿ.ಶ. 2ನೇ ಶತಮಾನದಲ್ಲಿ ಗಂಗರ 2ನೇ ಮಾಧವ ತನ್ನ ರಾಜ್ಯದಲ್ಲಿ ಚಿನ್ನ ದೊರಕಿರುವುದರ ಬಗ್ಗೆ ಶಿಲಾಶಾಸನಗಳಲ್ಲಿ ಕೆತ್ತಿಸಿದ್ದಾನೆ.

ಕೆಜಿಎಫ್ ಪ್ರದೇಶದ ನಂದಿದುರ್ಗ ಕೋಟೆಯಲ್ಲಿ ಚಿನ್ನ ಮತ್ತು ವಜ್ರಗಳು ಇದ್ದವು ಎಂಬುದಾಗಿ ತಿಳಿದುಬರುತ್ತದೆ. ಮುಂದಿನ ದಿನಗಳಲ್ಲಿ ನಂದಿ ಗುಡ್ಡವನ್ನು ಅಗೆದು ನಂದಿದುರ್ಗ ಗಣಿ ಮಾಡಲಾಯಿತು ಎನ್ನಲಾಗಿದೆ.[7] ಪುರಾಣ ಕಾಲದಲ್ಲಿ ಸಂಗ್ರಹಿಸಿದ್ದ ಚಿನ್ನ 495 ಟನ್ನುಗಳಾದರೆ, 5 ಸಾವಿರ ವರ್ಷಗಳಲ್ಲಿ ಗಣಿಗಳಿಂದ ಹೊರತೆಗೆಯಲಾದ ಚಿನ್ನ ಸುಮಾರು 1500 ಟನ್ನುಗಳು. ಕ್ರಿ.ಶ. 1870 ಮತ್ತು ಕ್ರಿ.ಶ. 1940ರ ಮಧ್ಯೆ ಕೆಜಿಎಫ್, ಹಟ್ಟಿ, ಗದಗ ಮತ್ತು ರಾಮಗಿರಿ ಚಿನ್ನದ ಗಣಿಗಳಿಂದ ತೆಗೆದ 665 ಟನ್ನು ಚಿನ್ನವನ್ನು ಭಾರತದಿಂದ ಇಂಗ್ಲೆಂಡಿಗೆ ಕೊಂಡೊಯ್ಯಲಾಯಿತು.

ಸ್ವರ್ಣಗಿರಿ (ಮಸ್ಕಿ) :

ರಾಯಚೂರು ಜಿಲ್ಲೆಯ ಲಿಂಗಸ್ಗೂರು ತಾಲೂಕಿನ ಮಸ್ಕಿ ಬಳಿ ಅಶೋಕನ ಕಾಲದ ಶಿಲಾ ಶಾಸನ ಇದೆ. ಅಲ್ಲಿನ ಉತ್ಖನನದಲ್ಲಿ ಅಶೋಕನ ಕಾಲದ ಪ್ರಾಚ್ಯ ಅವಶೇಷಗಳನ್ನು ಮನ್ ಪತ್ತೆ ಹಚ್ಚಿ ತೋರಿಸಿದರು. ಉತ್ಖನನ ಮಾಡಿದಾಗ ಮಡಿಕೆ ಮತ್ತು ಇಟ್ಟಿಗೆ ಚೂರುಗಳು, ಶಂಖದ ಚಿಟ್ಟಿನ ಮಾಲೆ ಇತ್ಯಾದಿ ಪುರಾತನ ವಸ್ತುಗಳು ದೊರೆತವು. ಬ್ರಹ್ಮಗಿರಿ ಶಿಲಾ ಶಾಸನದಲ್ಲಿ ಸುವರ್ಣಗಿರಿಯ ಹೆಸರಿದ್ದು, ಇದೆಲ್ಲದರ ಆಧಾರದಿಂದ. ಅಶೋಕನ ದಕ್ಷಿಣ ಭಾರತದ ರಾಜಧಾನಿ ಸ್ವರ್ಣಗಿರಿ (ಮಸ್ಕಿ),

ಏಕಿರಬಾರದು ಎಂದು ಮನ್ ಪ್ರಶ್ನಿಸಿದ್ದಾರೆ. ರಾಜಸ್ಥಾನದ ಸೀಸ, ಸತು ಗಣಿಗಳ ತಾಣವಾದ ಅಗುಚಾದ ಬಳಿ ಮೌರ್ಯರ ಕಾಲದ ಅವಶೇಷಗಳು ಪತ್ತೆಯಾಗಿವೆ. ಬಹುಶಃ ಈ ಶಾಸನಗಳನ್ನು ಗಣಿಯ ಪ್ರಾಮುಖ್ಯತೆಯನ್ನಾಧರಿಸಿ ಅಥವಾ ಹೆಚ್ಚೆಚ್ಚು ಜನರು ವಾಸಿಸುತ್ತಿದ್ದ ಕಾರಣದಿಂದ ಬೌದ್ಧ ಧರ್ಮ ಪ್ರಚಾರಕ್ಕಾಗಿ ಕೆತ್ತಿರಬೇಕು.[8] ಮಸ್ಕಿ ಮುಖ್ಯವಾದ ಶಿಲಾಶಾಸನವಾಗಿದ್ದು ಖುದ್ದು ಅಶೋಕನ ಆದೇಶದ ಮೇರೆಗೆ ಇದನ್ನು ಕೆತ್ತಲಾಗಿದೆ. ಕ್ರಿ.ಪೂ. 4ನೇ ಶತಮಾನದವರೆಗೂ ಮೌರ್ಯರ ಆಡಳಿತ ನಡೆದಿತ್ತು. ಆಲ್ಚಿನ್ ಅವರ ಹೇಳಿಕೆಯಂತೆ ಇದೇ ಕಾಲದಲ್ಲಿ ಹಟ್ಟಿ ಚಿನ್ನದ ಗಣಿಗಳು 200 ಮೀ. ಆಳ ಇಳಿದಿದ್ದು ಆ ಕಾಲಕ್ಕೆ ಈ ಗಣಿಗಳು ಪ್ರಪಂಚದಲ್ಲಿ ಅತಿ ಆಳಕ್ಕೆ ಇಳಿದ ಗಣಿಗಳು. ಆಂಧ್ರ ಪ್ರದೇಶದ ವಜ್ರಕರೂರಿನಲ್ಲೂ ಅಶೋಕನ ಕಾಲದ ಶಿಲಾಶಾಸನಗಳಿವೆ. ಆದರೆ ಕೆಜಿಎಫ್ ಪ್ರದೇಶದಲ್ಲಿ ಯಾವ ಶಾಸನಗಳು ಕಂಡು ಬರುವುದಿಲ್ಲ; ಮೌರ್ಯರ ಆಡಳಿತ ಇಲ್ಲಿಯವರೆಗೆ ತಲುಪದೆ ಇದ್ದುದ್ದೆ ಕಾರಣವಿರಬೇಕು.[9]

ಚರಿತ್ರೆ, ಶಾಸನಗಳು ಮತ್ತು ಇನ್ನಿತರ ಯಾವುದೇ ದಾಖಲೆಗಳು ಚಿನ್ನದ ಗಣಿಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡಿಲ್ಲ. ಅಷ್ಟೇ ಅಲ್ಲ, ವಿಜಯನಗರದ ಸಾಮ್ರಾಜ್ಯಕ್ಕೆ ಭೇಟಿ ನೀಡಿದ ಡಾಮಿಂಗೋ ಪಾಯಸ್ (ಕ್ರಿ.ಶ. 1530–22) ನುನಿಜ್ (ಕ್ರಿ.ಶ. 1535–37) ಅಬ್ದುಲ್ ರಜಾಕ್ (ಕ್ರಿ.ಶ. 1442) ದೋಆರ್ತೆ ಬರ್ಬೋಜಾ (1503) ನಿಕೊಲೋ ಡಿ ಕೊಂಟೆ (1420) ಇವರ್‍ಯಾರೂ ಚಿನ್ನದ ಗಣಿಗಳ ಬಗ್ಗೆ ಯಾವ ಹೇಳಿಕೆಗಳನ್ನೂ ನೀಡಲಿಲ್ಲ. ಬಹುಶಃ ಆ ಕಾಲಕ್ಕೆ ಚಿನ್ನದ ಗಣಿಗಳು ಸ್ಥಗಿತವಾಗಿರಬಹುದು ಅಥವಾ ಇನ್ನಾವುದೋ ಕಾರಣವಿರಬೇಕು?

ವೀಲರ್ ಈ ರೀತಿಯ ಹೇಳಿಕೆ ನೀಡಿದ್ದರು: 'ಚಿನ್ನ ಗಾಂಧಾರ, ಆಫ್‌ಘಾನಿಸ್ತಾನ ಮತ್ತು ಸಾಧಾರಣ ಮಟ್ಟದಲ್ಲಿ ಪರ್ಷಿಯಾದಲ್ಲೂ ದೊರೆಯುತ್ತದೆ. ಚಿನ್ನವನ್ನು ಭಾರತದ ದೊಡ್ಡ ದೊಡ್ಡ ನದಿಗಳಲ್ಲಿ ಜಾಲಿಸಿ ತೆಗೆದಿದ್ದಾರೆ. ದಕ್ಷಿಣ ಭಾರತದಲ್ಲಿ ಹೇರಳ ಚಿನ್ನ ದೊರೆಯುತ್ತದೆ, ಅದರಲ್ಲೂ ಮೈಸೂರಿನಲ್ಲಿ ಚಿನ್ನದ ಗಣಿಗಳನ್ನು ಮಾಡಿದ್ದಾರೆ. ಮಣಿಹಾರಗಳಿಗಾಗಿ ಹಾಗೂ ಇತರ ಒಡವೆಗಳಿಗಾಗಿ ಹರಪ್ಪನ್ನರು ಬಳಸಿರುವ ಚಿನ್ನದ ಒಂದು ಭಾಗವಾದರೂ ದಕ್ಷಿಣ ಭಾರತದಿಂದ ಬಂದಿರುವ ಸಾಧ್ಯತೆಗಳಿವೆ'.

✦

1. ಲೆವಿಸ್ ರೈಸ್ 1988, ಅಮರಸಿಂಹನ ಅಮರಕೋಶ, ನವದೆಹಲಿ
2. ರಾಜರ ಲೋಹ ಲೋಹಗಳ ರಾಜ: ಟಿ.ಆರ್. ಅನಂತರಾಮು, ನವಕರ್ನಾಟಕ, ಪಬ್ಲಿಕೇಶನ್, 1999
3. ಬೈಬಲ್‌ನ ಜನಿಸಿಸ್ 2–2 10ರಲ್ಲಿ
4. ರಾಜರ ಲೋಹ ಲೋಹಗಳ ರಾಜ: ಟಿ.ಆರ್. ಅನಂತರಾಮು, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, 1999
5. ಮೆಗಾಲಿಥ್: (ಕೋಡು ಶಿಲೆಗಳು) ಎಂಬ ಪ್ರಾಚೀನ ಶಿಲೆಗಳನ್ನು ಸ್ಥಾಪಿಸಲಾಗಿದೆ, ಈ ಶಿಲೆಗಳು ಕೆಜಿಎಫ್ ಪ್ರದೇಶದಲ್ಲೂ ಕಂಡುಬಂದಿವೆ.
6. The world's oldest survey geological map:The 1150BC, Turin papyrus from Egypt, James A Harrel and V.Max brown, Dept. of geology, The university of Toledi, Ohio.
7. ಫಾದರ್ ರೆವರೆಂಡ್, ಕೋಲಾರ ತಂಗವೈಯಿಲ್ ವರಲಾರು (ತಮಿಳು), ಸೀತಾರಾಮನ್, ಪುಟ 17
8. ಸ್ವರ್ಣಗಿರಿ (ಮಸ್ಕಿ) ಹಟ್ಟಿ ಚಿನ್ನದ ಗಣಿಗಳ ದಕ್ಷಿಣಕ್ಕೆ 30 ಕಿ.ಮೀ. ದೂರದಲ್ಲಿದೆ
9. ಕೆ.ಆರ್. ರಘುನಂದನ್, ದಖ್ಖನ್ ಹೆರಾಲ್ಡ್, 15.2.2004

ಅಧ್ಯಾಯ–2

ಕರ್ನಾಟಕದ ಚಿನ್ನದ ಪರಂಪರೆ

ರಾಮಾಯಣದಲ್ಲಿ ಬರುವ ಒಂದು ಪ್ರಸಂಗಕ್ಕೆ ಕೆಜಿಎಫ್ ಚಿನ್ನದ ಗಣಿ ಪ್ರದೇಶಗಳನ್ನು ಜೋಡಿಸಿರುವ ಕಥೆ, ಮಧ್ಯೆಯುಗದಲ್ಲಿ ಸ್ಥಳೀಯರು ಮಾಡಿದ ಚಿನ್ನದ ಗಣಿಗಳು, ಅವುಗಳ ಅನ್ವೇಷಣೆ; ಕೆಜಿಎಫ್ ಮತ್ತು ರಾಯಚೂರಿನ (ಹಟ್ಟಿ) ಚಿನ್ನದ ಗಣಿಗಳ ಕಾಲವನ್ನು ಒಳಗೊಂಡ ಕಾರ್ಬನ್ ಡೇಟಿಂಗ್ ವಿಶ್ಲೇಷಣೆಯನ್ನು ನೀಡಲಾಗಿದೆ. ವಿಶೇಷವಾಗಿ ಈ ವಲಯದಲ್ಲಿ ನಿಜಾಮರ ಕಾಲದಲ್ಲಿ ಕ್ಯಾ. ಲಿಯೋನಾರ್ಡ್ ಮಸ್ ನಡೆಸಿದ ಸಂಶೋಧನೆಗಳನ್ನು ಉಲ್ಲೇಖಿಸಲಾಗಿದೆ.

ಶ್ರೀರಾಮನು ತನ್ನ ಪತ್ನಿ ಸೀತಾದೇವಿ ಮತ್ತು ತಮ್ಮ ಲಕ್ಷ್ಮಣನ ಜೊತೆಗೆ 14 ವರ್ಷಗಳ ವನವಾಸದಲ್ಲಿ ಇಂದಿನ ಆವಣಿಯ ಹತ್ತಿರ (ಮುಳಬಾಗಿಲು ತಾಲೂಕು) ದಟ್ಟ ಕಾಡುಗಳಲ್ಲಿ ಕುಟೀರ ಕಟ್ಟಿಕೊಂಡು ವಾಸ ಮಾಡುತ್ತಿದ್ದನಂತೆ. ಕೆಜಿಎಫ್‌ನಿಂದ ಈಶಾನ್ಯಕ್ಕೆ 10 ಕಿ.ಮೀ. ದೂರದಲ್ಲಿ ಈ ಪಟ್ಟಣ ಇದೆ. ಆವಣಿ ತಲುಪಿದ ಲಂಕೇಶ್ವರನ ತಂಗಿ ಶೂರ್ಪನಖಿ ರಾಮನನ್ನು ಸಂಧಿಸಿ ತನ್ನನ್ನು ಮದುವೆ ಮಾಡಿಕೊಳ್ಳಲು ಒತ್ತಾಯ ಮಾಡಿದಳಂತೆ. ಮರ್ಯಾದಾ ಪುರುಷೋತ್ತಮ ರಾಮನು ನಿರಾಕರಿಸಿದಾಗ ಆಕೆ ಲಕ್ಷ್ಮಣನ ಹಿಂದೆ ಬಿದ್ದಳಂತೆ, ಮಹಾ ಮುಂಗೋಪಿಯಾದ ಲಕ್ಷ್ಮಣನು ಕೋಪಗೊಂಡು ಶೂರ್ಪನಖಿಯ ಮೂಗು ಕೊಯ್ದು ಕಳುಹಿಸಿದ.

ವಿಷಯ ತಿಳಿದ ರಾವಣನು ರಾಮನ ಮೇಲೆ ಸೇಡು ತೀರಿಸಿಕೊಳ್ಳಲು ಮಾರೀಚನನ್ನು ಚಿನ್ನದ ಜಿಂಕೆಯ ರೂಪದಲ್ಲಿ ಸೀತೆ ಇರುವ ಕುಟೀರದ ಹತ್ತಿರಕ್ಕೆ ಕಳುಹಿಸಿದಾಗ, ಜಿಂಕೆಯನ್ನು ನೋಡಿದ ಸೀತೆ ಆ ಜಿಂಕೆ ತನಗೆ ಬೇಕೇಬೇಕೆಂದು ಹಠ ಹಿಡಿದಳು. ರಾಮನು ಮಾಯಾ ಜಿಂಕೆಯನ್ನು ಅಟ್ಟಿಸಿಕೊಂಡು ಹಿಂದೆಯೇ ಹೋದ. ಜಿಂಕೆ ರಾಮನನ್ನು ಇಂದಿನ ಕೆಜಿಎಫ್ ಪ್ರದೇಶದವರೆಗೂ ಕರೆದುಕೊಂಡು ಹೋಯಿತು. ರಾಮನು ಕೊನೆಗೂ ಜಿಂಕೆಯನ್ನು ಜೀವಸಮೇತ ಹಿಡಿಯಲಾಗದೆ ಯರ್ರಕೊಂಡ ಬೆಟ್ಟದಲ್ಲಿ ಒಂದು ಕಾಲೂರಿ ಇನ್ನೊಂದು ಕಾಲನ್ನು ಮಲ್ಲಪ್ಪನ ಬೆಟ್ಟದ ಮೇಲೆ ಮಡಿಚಿಕೊಂಡು (ಮೊಣಕಾಲೂರಿ) ಜಿಂಕೆಯನ್ನು ಬಾಣದಲ್ಲಿ ಹೊಡೆದು ಸಾಯಿಸಿಬಿಟ್ಟ, ಆ ಜಿಂಕೆ ಸಾಯುವಾಗ 'ಹಾ ಲಕ್ಷ್ಮಣಾ... ಹಾ ಲಕ್ಷ್ಮಣಾ...' ಎಂದು ರಾಮನ ಧ್ವನಿಯಲ್ಲಿ ಕೂಗಿಕೊಳ್ಳುತ್ತದೆ. ಇಲ್ಲಿ ತನ್ನನ್ನು ಕಾವಲು ಕಾಯುತ್ತಿದ್ದ ಲಕ್ಷ್ಮಣನನ್ನು ಕುರಿತು ಸೀತೆ, 'ರಾಮನಿಗೆ ಏನೊ ತೊಂದರೆಯಾಗಿದೆ ಹೋಗಿ ನೋಡು' ಎನ್ನುತ್ತಾಳೆ. ಲಕ್ಷ್ಮಣ 'ಅದೆಲ್ಲ ರಾವಣನ ಮೋಸ' ಎನ್ನುತ್ತಾನೆ. ಆದರೆ ಸೀತಾದೇವಿ ಲಕ್ಷ್ಮಣನನ್ನು ನಿಂದಿಸಿ ಕಳುಹಿಸುತ್ತಾಳೆ. ಲಕ್ಷ್ಮಣ ಆ ಕಡೆಗೆ ಹೋಗಿದ್ದೆ, ರಾವಣಾಸುರನು ಸೀತೆ ಇದ್ದಲ್ಲಿಗೆ ಬಂದು ಸೀತೆಯನ್ನು ಪುಷ್ಪಕ ವಿಮಾನದಲ್ಲಿ ಹಾರಿಸಿಕೊಂಡು ಹೋಗುತ್ತಾನೆ... ರಾಮನ ಮೊಣಕಾಲಿನ ಒತ್ತಡದಿಂದ ಮಲ್ಲಪ್ಪನ ಬೆಟ್ಟದ ಉತ್ತರ ಭಾಗ ಅರ್ಧಚಂದ್ರನ ರೀತಿಯಲ್ಲಿ ರೂಪಗೊಂಡಿತು.

ಕನ್ನಡ ನಾಡು ಚಿನ್ನದ ಬೀಡು :

ಕನ್ನಡದ ಕಣ್ವ ಆಚಾರ್ಯ ಶ್ರೀ. ಬಿ.ಎಂ.ಶ್ರಿಕಂಠಯ್ಯನವರು ಕನ್ನಡ ನಾಡನ್ನು 'ಚಿನ್ನದ ನಾಡು, ಗಂಧದ ಬೀಡು' ಎಂದು ಹೊಗಳಿದ್ದಾರೆ. ಕನ್ನಡ ನಾಡಿನ ಸೊಬಗನ್ನು ಅನೇಕ ಕವಿಗಳು ಕೊಂಡಾಡಿದ್ದಾರೆ, ಶಿಲ್ಪ ಕಲೆಗಳ ಬೀಡು ಎಂದಿದ್ದಾರೆ. ರನ್ನ, ಪಂಪರ ನಾಡೆಂದಿದ್ದಾರೆ. ಕನ್ನಡನಾಡಿನ ಸೊಬಗು ಕೇವಲ ಬಾಹ್ಯಾಡಂಬರವಲ್ಲ. ಕರ್ನಾಟಕದ ನೆಲ ಚಿನ್ನದ ಭಂಡಾರವನ್ನೇ ತನ್ನ ಸಿರಿ ಗರ್ಭದಲ್ಲಿ ತುಂಬಿಕೊಂಡಿದೆ. ಸಹಸ್ರಾರು ವರ್ಷಗಳ ಇತಿಹಾಸವಿರುವ ಚಿನ್ನದ ಗಣಿಗಳಿರುವುದು ಕರ್ನಾಟಕದಲ್ಲಿ ಮಾತ್ರ, ಕರ್ನಾಟಕದಲ್ಲಿ ಚಿನ್ನದ ಇತಿಹಾಸ ಪ್ರಾರಂಭವಾಗುವುದು ಇಂದಿನ ಕೆಜಿಎಫ್ ಪ್ರದೇಶದಿಂದಲೆ. ಹಾಗೆಯೇ ರಾಯಚೂರಿನ ಹಟ್ಟಿ ಚಿನ್ನದ ಗಣಿಗಳು ಕೂಡ ಗಣಿ ಉದ್ದಿಮೆ ದೃಷ್ಟಿಯಿಂದ ಅಷ್ಟೇ ಪ್ರಾಮುಖ್ಯತೆಯನ್ನು ಗಳಿಸಿವೆ.

4ನೇ ಮೈಸೂರು ಯುದ್ಧದಲ್ಲಿ ಕರ್ನಾಟಕದ ಹುಲಿ ಟಿಪ್ಪುಸುಲ್ತಾನ್ ಬ್ರಿಟಿಷರ ವಿರುದ್ಧ ಹೋರಾಡಿ ವೀರಸಾವನ್ನಪ್ಪಿದ ಮೇಲೆ ಬ್ರಿಟಿಷರ ಸೈನ್ಯ ಬೆಂಗಳೂರಿನ ದಂಡು ಪ್ರದೇಶದಲ್ಲಿ ಬೀಡುಬಿಟ್ಟಿತು. ಸೈನಿಕರಲ್ಲಿ ಮೂಲವಾಗಿ ಅನೇಕ ರೀತಿಯ ವೃತ್ತಿಪರರಿದ್ದು

ಯುದ್ಧಗಳು ಇಲ್ಲದಿದ್ದಾಗ ಅವರಿಂದ ಸುಮ್ಮನೆ ಕೂರಲಾಗುತ್ತಿರಲಿಲ್ಲ. ಸೈನಿಕರಿಗೆ ಈ ಜಾಗ ಎಲ್ಲಾ ಅನುಕೂಲಗಳನ್ನು ಕಲ್ಪಿಸಿತ್ತು, ಜೊತೆಗೆ ಅವರೇ ಧಣಿಗಳು. ಸೈನಿಕರಲ್ಲಿ ಕೆಲವರು ಉದಕಮಂಡಲದ ತಂಪು ತಾಣದತ್ತ ಸಾಗಿ ಕಾಫಿ ಪ್ಲಾಂಟರುಗಳಾದರೆ ಇನ್ನೂ ಕೆಲವರು ನೆಲದ ಸಿರಿಯನ್ನು ಅರಸುತ್ತಾ ಅದೃಷ್ಟದ ಬೆನ್ನೇರಿದರು.

ವೈನಾಡಿನ ಪೆರಿಯಾರ್ ನದಿಯ ಮರಳಿನಲ್ಲಿ ಚಿನ್ನ ಇರುವುದನ್ನು ತಿಳಿದುಕೊಂಡ ಕೆಲವು ಮಂದಿ ಇಲ್ಲಿಗೆ ಧಾವಿಸಿದರು. ವೈನಾಡು ಪ್ರದೇಶದಲ್ಲಿ ಚಿನ್ನದ ಉತ್ಪಾದನೆ ಹೆಚ್ಚು ಫಲಕಾರಿಯಾಗದ ಕಾರಣ, ಅವರ ಗಮನವೆಲ್ಲ ಕೆಜಿಎಫ್ ಪ್ರದೇಶದ ಕಡೆಗೆ ಹರಿಯಿತು. ಹಲವು ನೂರು ವರ್ಷಗಳ ಹಿಂದೆಯೇ ಇಲ್ಲಿ ಚಿನ್ನಕ್ಕಾಗಿ ಪುರಾತನ ಕಾಲದ ಜನರು ಗಣಿಗಳನ್ನು ತೋಡಿ ಬಿಟ್ಟಿದ್ದ ವಿಷಯ ತಿಳಿದಿದ್ದೇ ಕೆಜಿಎಫ್ ಪ್ರದೇಶದ ಕಡೆಗೆ ಧಾವಿಸಿ ಬಂದರು.[1]

ಮಧ್ಯಯುಗದ ಗಣಿಗಳು :

ಕೆಜಿಎಫ್‌ನ ಮೈಸೂರು ಗಣಿಗಳನ್ನು ಪ್ರಾಚೀನರು 300 ಅಡಿ ಆಳದವರೆಗೂ ಇಳಿಸಿದ್ದರು. ಅನೇಕ ಕಡೆ ಈ ಆಳದ ಗಣಿಗಳಲ್ಲಿ ಮಡಿಕೆ/ಕುಡಿಕೆ ಚೂರುಗಳು, ಮರದ ದಿಮ್ಮಿಗಳು, ಹಗ್ಗ, ಕಬ್ಬಿಣ ಕುಟ್ಟಣಿಗಳು ಮತ್ತಿತರ ವಸ್ತುಗಳು ದೊರಕಿವೆ. ಕ್ರಿ.ಶ. 1906 ರಲ್ಲಿ ಮೆಕ್ಲೇರನ್ ಎಂಬ ಭೂವಿಜ್ಞಾನಿ ಈ ಭಾಗದಲ್ಲಿ ಸಮೀಕ್ಷೆ ನಡೆಸಿ ಪುರಾತನ ಚಿನ್ನದ ಗಣಿಗಳ ಬಗ್ಗೆ ವಿವರವಾಗಿ ದಾಖಲಿಸಿದ್ದಾರೆ. ಮೆಕ್ಲೇರನ್ ಹಟ್ಟಿ ಗಣಿ ಪ್ರದೇಶಗಳಲ್ಲೂ ಸಮೀಕ್ಷೆ ನಡೆಸಿ ಚಿನ್ನ ತೆಗೆದಿರುವ ಸುಮಾರು 300 ಪುರಾತನ ಚಿನ್ನದ ಗಣಿಗಳು/ಗುಂಡಿಗಳನ್ನು ಪತ್ತೆ ಮಾಡಿದರು. ಇದೇ ಗಣಿಗಳಲ್ಲಿ ಬಳಸಿದ ಕಬ್ಬಿಣ ಬಾಣಲೆ, ಕಲ್ಲಿನ ಪೀಠ, ನೀರು ಎತ್ತಲು ಬಳಸುತ್ತಿದ್ದ ಮಡಿಕೆ ಚೂರುಗಳು ಇತ್ಯಾದಿ ದೊರಕಿದ್ದವು. 16ನೇ ಶತಮಾನದ ಶ್ರೀಕೃಷ್ಣದೇವರಾಯರ ಕಾಲದಲ್ಲಿ, ಅನಂತರ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲೂ ಚಿನ್ನವನ್ನು ತೆಗೆದಿರುವ ಸೂಚನೆಗಳು ಈ ಪ್ರದೇಶದಲ್ಲಿ ದೊರಕುತ್ತವೆ. ರಾಜಾ ರಾಮಚಂದ್ರ ಎಂಬ ಗಣಿ ತಜ್ಞ ಟಿಪ್ಪೂ ಸುಲ್ತಾನರ ನೆರವಿನಿಂದ ಚಿನ್ನ ತೆಗೆದಿರುವ ಉಲ್ಲೇಖಗಳು ದಾಖಲಾಗಿವೆ.[2]

ಪೂರ್ವಕಾಲದಲ್ಲಿ ಚಿನ್ನವಿದ್ದ ಶಿಲೆಗಳನ್ನು ಬೆಂಕಿ ಇಟ್ಟು ಕಾಯಿಸಿ ಪದರು ಪದರಾಗಿ ಬೇರ್ಪಡಿಸುತ್ತಿದ್ದರು. ಅನಂತರ ಶಿಲೆಗಳನ್ನು ಪುಡಿಮಾಡಿ, ಸಣ್ಣಸಣ್ಣ ಗುಣಿಗಳು ಮಾಡಿರುವ ಇಳಿಜಾರು ಕಲ್ಲುಗಳ ಮೇಲೆ ಪುಡಿಯ ಮೇಲೆ ನೀರು ಹಾಯಿಸಿದಾಗ ಹೆಚ್ಚು ಸಾಂದ್ರತೆ ಇರುವ ಚಿನ್ನ ಗುಣಿಗಳಲ್ಲಿ ಸಂಗ್ರವಾಗುತ್ತಿತ್ತು. ಆಗ ಚಿನ್ನವನ್ನು ಬೇರ್ಪಡಿಸುತ್ತಿದ್ದರು. ಕೆಜಿಎಫ್ ಪ್ರದೇಶದ ಕೋರಮಂಡಲ ಗಣಿ ಒಳಗೆ 200 ಅಡಿಗಳ ಕೆಳಗೆ ಸುರಂಗಗಳಲ್ಲಿ ಪುರಾತನ ಮಡಿಕೆ ಚೂರುಗಳು, ಸುರಂಗಗಳು ಕುಸಿಯದಂತೆ ತಡೆ ಹಿಡಿಯಲು

ಉಪಯೋಯೊಗಿಸುತ್ತಿದ್ದ ಮರದ ದಿಮ್ಮಿಗಳು ಮತ್ತು ಶಿಲೆಗಳನ್ನು ಪುಡಿಮಾಡಲು ಉಪಯೋಗಿಸುತ್ತಿದ್ದ ಕಬ್ಬಿಣ ಕುಟ್ಟಣಿಗಳು ಹೇರಳವಾಗಿ ದೊರಕಿದ್ದವು. ಅನೇಕ ಕಡೆ ಶಿಲೆಗಳನ್ನು ಪುಡಿ ಮಾಡುತ್ತಿದ್ದ ಕಲ್ಲು ಗುಂಡುಗಳು ಮತ್ತು ಗಟ್ಟಿಯಾದ ಆಂಫಿಬೋಲೈಟ್ ಮತ್ತು ಬಸಾಲ್ಟ್[3] (ರೂಪಾಂತರ ಹೊಂದಿದ) ಶಿಲೆಗಳ ಮೇಲೆ ಸವೆದಿರುವ ಸಾಲು ಸಾಲು ಗುಣಿಗಳು ಇಂದಿಗೂ ದೊರಕುತ್ತವೆ.

ಹಟ್ಟಿ ಚಿನ್ನದ ಗಣಿಗಳು :

ಕ್ಯಾಲಿಯೋನಾರ್ಡ್ ಮನ್ ಮತ್ತು ಪ್ರೊ. ಆಲ್ಚಿನ್

ಹಟ್ಟಿ ಪುರಾತನ ಚಿನ್ನದ ಗಣಿಗಳ ಬಗ್ಗೆ ಗಣಿ ತಂತ್ರಜ್ಞ ಕ್ಯಾ. ಲಿಯೋನಾರ್ಡ್ ಮನ್ ಹೀಗೆ ದಾಖಲಿಸಿದ್ದಾರೆ: 'ದಕ್ಷಿಣ ಭಾರತದ ಪುರಾತನ ಚಿನ್ನದ ಗಣಿಗಳಿಂದ ಒಂದು ಅಂಶ ಸ್ಪಷ್ಟವಾಗಿ ತಿಳಿಯುತ್ತದೆ. ಎಲ್ಲೆಲ್ಲಿ ಚಿನ್ನಭರಿತ ಶಿಲೆಗಳಿವೆಯೋ ಅಲ್ಲಿ ಎರಡು ಮೂರು ಔನ್ಸ್‌ಗಿಂತ ಹೆಚ್ಚಾಗಿರುವ ಚಿನ್ನದಿಂದ ಕೂಡಿದ ಯಾವೊಂದು ಶಿಲಾಸ್ತರ-ಶಿರವೂ ಪ್ರಾಚೀನರ ಕಣ್ಣಿನಿಂದ ತಪ್ಪಿಸಿಕೊಂಡಿಲ್ಲ. ಶಿಲೆಗಳಿಗೆ ಬೆಂಕಿ ಹಾಕಿ ಕಾವು ಕೊಟ್ಟು ಗಣಿ ಮಾಡುವ ತಂತ್ರವನ್ನು ಅವರು ರೂಢಿಸಿಕೊಂಡಿದ್ದರು. ಅನೇಕ ಕಡೆ ಅಂತರ್ಜಲ ಮಟ್ಟಕ್ಕಿಂತ ಕೆಳಗೆ ಅವರು ಗಣಿಗಳನ್ನು ಮುಂದುವರಿಸಲಾಗಲಿಲ್ಲ. ಆದರೆ ಎಲ್ಲಾ ಕಡೆಯೂ ಹಾಗಾಗಲಿಲ್ಲ. ರಾಯಚೂರಿನ ಹಟ್ಟಿ ಗಣಿಗಳಲ್ಲಿ ಚಿನ್ನಭರಿತ ಬೆಣಚು ಕಲ್ಲಿನ ಶಿರದಲ್ಲಿ ಪ್ರಾಚೀನರು 640 ಅಡಿಗಳವರೆಗೆ ಗಣಿ ಮಾಡಿದ್ದಾರೆ. ಇದು ಭಾರತದಲ್ಲೇ ಅಲ್ಲದೇ ಜಗತ್ತಿನಲ್ಲೇ ಒಂದು ದಾಖಲೆಯಾಗಿದೆ'.[4]

ಪ್ರಖ್ಯಾತ ಪ್ರಾಚ್ಯ ಸಂಶೋಧಕ ಪ್ರೊ. ಆಲ್ಚಿನ್ ಅವರು ಈ ಪುರಾವೆಗಳನ್ನಾಧರಿಸಿ ಪ್ರಾಯಶಃ 'ಇವು ಮೊದಲ ಶತಮಾನದ ಪೂರ್ವ ಭಾಗಕ್ಕೆ ಸೇರಿದವು' ಎಂದು ಅಭಿಪ್ರಾಯ ಪಟ್ಟರು. ಇಂತವೇ ಕಬ್ಬಿಣದ ಬಾಣಲೆಗಳು ಕೆಜಿಎಫ್ ಗಣಿಗಳಲ್ಲೂ ಪತ್ತೆಯಾದವು. ಯಾರು ಈ ಪ್ರಾಚೀನರು? ಗಣಿ ತಂತ್ರಜ್ಞಾನ ಬಲ್ಲ ಈ ಮಂದಿ ಯಾರೆಂಬುದು ಇಂದಿಗೂ ಚರ್ಚೆಯ ವಿಷಯವಾಗಿದೆ. ಅಷ್ಟೊಂದು ಪರಿಣತಿ ಹೊಂದಿದ್ದ ಇವರಿಗೆ ಚಿನ್ನಭರಿತ ಶಿಲೆಗಳ ಬಗ್ಗೆ ಸ್ಪಷ್ಟ ತಿಳಿವಳಿಕೆ ಇರುವುದು ಕಂಡುಬರುತ್ತದೆ. ಮನ್ ಇನ್ನೊಂದು ಕಡೆ ಈ ರೀತಿ ದಾಖಲಿಸಿದ್ದಾರೆ. '640 ಅಡಿಗಳ ಆಳದ ಗಣಿಗಳನ್ನು ತೋಡಲು ಅವರಿಗಿದ್ದ ಅನುಕೂಲಗಳಾದರೂ ಏನು? ಆ ಕಾಲಕ್ಕೆ ಇಷ್ಟು ಆಳಕ್ಕೆ ಇಳಿದು ಕೆಲಸ ನಿರ್ವಹಿಸಿದ ರೀತಿಯಾದರು ಹೇಗೆ? ಇದು ಎಷ್ಟು ವರ್ಷಗಳ ಶ್ರಮ?' ಎಂದು ತಬ್ಬಿಬ್ಬಾಗಿ ಪ್ರಶ್ನಿಸಿದ್ದಾರೆ.

ಹಟ್ಟಿಯ ಗಣಿಗಳಲ್ಲಿ ಹಿಂದೆ ಗಣಿ ಮಾಡಲು ಬಳಸುತ್ತಿದ್ದ ಹಗ್ಗಗಳು ಗಣಿಯ

ಗೋಡೆಗಳಿಗೆ ತಾಕಿ ಅವು ಸವೆದಿರುವ ಕುರುಹುಗಳು ಪತ್ತೆಯಾಗಿವೆ. ಕೆಲವು ಮರದ ದಿಮ್ಮಿಗಳು ಗರಗಸದಿಂದ ಕೊಯ್ಯಲಾಗದಷ್ಟು ಗಟ್ಟಿಯಾಗಿವೆ. ಗಣಿಗಳ ಸುತ್ತಮುತ್ತಲು ಮತ್ತು ಸುರಂಗಗಳಲ್ಲಿ ನೂರಾರು ಉರುಳು ಕಲ್ಲುಗಳು, ಕಲ್ಲಿನ ಕುಟ್ಟಣಿಗಳು ಮತ್ತು ಒರಳು ಕಲ್ಲುಗಳು ಪತ್ತೆಯಾಗಿವೆ. ಅದಿರಿನಿಂದ ಚಿನ್ನವನ್ನು ಪ್ರತ್ಯೇಕಿಸಲು ಯಾವುದೇ ವಿಶೇಷ ತಂತ್ರಜ್ಞಾನವನ್ನು ಪ್ರಾಚೀನರು ಬಳಸುತ್ತಿರಲಿಲ್ಲ. ಶಿಲೆಗಳನ್ನು ಗುಂಡು ಕಲ್ಲುಗಳಿಂದ ಅರೆದು ನುಣ್ಣಗೆ ಪುಡಿ ಮಾಡಿ, ನದಿ ತೊರೆಗಳ ಬಳಿಗೆ ಒಯ್ದು ನೀರಿನಿಂದ ಜಾಲಿಸಿ ತಳದಲ್ಲಿ ಕೂತ ಚಿನ್ನವನ್ನು ಸಂಗ್ರಹಿಸುತ್ತಿದ್ದರು. ತಾಮ್ರ, ಕಬ್ಬಿಣಗಳನ್ನು ಪಡೆಯಲು ಲೋಹ ಸಂಸ್ಕರಿಸುವ ತಂತ್ರಜ್ಞಾನದ ಅವಶ್ಯಕತೆಯೇ ಕಾಣಲಿಲ್ಲ. ಇಲ್ಲಿನ ಚಟುವಟಿಕೆಗಳನ್ನು ನೋಡಿದ ಕೂಡಲೆ ದೊಡ್ಡ ಪ್ರಮಾಣದಲ್ಲಿ ನಡೆದಿರುವ ಉದ್ದಿಮೆ ಗೋಚರಿಸುತ್ತದೆ. ಕೋಲಾರ, ಹಟ್ಟಿ ಚಿನ್ನದ ಗಣಿಗಳೂ ಸೇರಿದಂತೆ ಕರ್ನಾಟಕದಲ್ಲಿ 50 ಕ್ಕೂ ಹೆಚ್ಚು ಸ್ಥಳಗಳಲ್ಲಿ ಪುರಾತನ ಚಿನ್ನದ ಗಣಿಗಳಿವೆ. ಹಾಸನದ ಚನ್ನರಾಯಪಟ್ಟಣದ ಬಳಿ ಇರುವ ಕೆಂಪಿನಕೋಟೆ ಪುರಾತನ ಚಿನ್ನದ ಗಣಿ ಏಷಿಯಾದಲ್ಲೇ ಅತಿ ದೊಡ್ಡ ಪ್ರಾಚೀನ ಗಣಿ ಎಂದು ಹೆಸರು ಪಡೆದಿದೆ. ಇಂತಹ ಗಣಿಗಳನ್ನು ತೋಡುವುದು ಒಂದೆರಡು ವರ್ಷಗಳ ಅವಧಿಯಲ್ಲಿ ಅಸಾಧ್ಯವಾದುದು, ಇವುಗಳನ್ನು ತೋಡಲು ದಶಕಗಳೆ ಹಿಡಿದಿರಬೇಕು.

ಎಲಿಯೆಟ್ಸ್ ಸ್ಮಿತ್ ಎಂಬ ಗಣಿ ತಜ್ಞ, 'ಈ ಗಣಿಗಳನ್ನು ತೋಡಿರುವ ಜನರು ಪ್ರಾಯಶಃ ಈಜಿಪ್ಟ್‌ನಿಂದ ಬಂದವರು ಅಥವಾ ಅವರೊಂದಿಗೆ ನೇರ ಸಂಪರ್ಕವಿದ್ದವರು' ಎಂದಿದ್ದಾರೆ. ಹೊರಗಿನಿಂದ ಬಂದ ಜನರಿಗೆ ಇಷ್ಟೊಂದು ವ್ಯಾಪಕವಾಗಿ ಗಣಿ ಕಾರ್ಯಾಚರಣೆಯಲ್ಲಿ ತೊಡಗಿಕೊಳ್ಳಲು ಕಾಲವಾದರೂ ಎಲ್ಲಿತ್ತು ? ಇವರು ಈಜಿಪ್ಟ್‌ನ ಮೂಲದವರು ಎನ್ನುವುದಕ್ಕೆ ಕಬ್ಬಿಣ ಯುಗಕ್ಕೆ ಸಂಬಂಧಿಸಿದ ಅನೇಕ ಪ್ರಾಚ್ಯ ವಸ್ತುಗಳನ್ನು ಎಲಿಯೆಟ್ಸ್ ಸ್ಮಿತ್ ಅವರು ಹೆಸರಿಸುತ್ತಾರೆ. ಅವುಗಳಲ್ಲಿ ಕೋಡುಗಲ್ಲು ನೆಡುವ ಸಂಪ್ರದಾಯ, ವೃತ್ತಾಕಾರದ ಸಮಾಧಿ, ಕಲ್ಲು ನೆಡುವುದು ಇತ್ಯಾದಿಗಳನ್ನು ಮುಖ್ಯ ಕುರುಹುಗಳೆಂದು ಅವರು ಬೊಟ್ಟು ಮಾಡಿ ತೋರಿಸುತ್ತಾರೆ. ಆದರೆ ಇಂತಹ ಕುರುಹುಗಳು ಕೇವಲ ಚಿನ್ನದ ಗಣಿ ಪ್ರಾಂತ್ಯಗಳಿಗಷ್ಟೆ ಸೀಮಿತವಾಗಿಲ್ಲ. ನಾಡಿನ ಉದ್ದಗಲಕ್ಕೂ ಹರಡಿವೆ ಎಂದ ಮೇಲೆ ಅವರು ಈಜಿಪ್ಟ್‌ನಿಂದ ಬಂದ ಗಣಿ ಕಾರ್ಮಿಕರೆಂದು ಹೇಳುವುದು ತಪ್ಪು ಅಭಿಪ್ರಾಯ ಎಂದಿದ್ದಾರೆ ಕ್ಯಾ. ಲಿಯೊನಾರ್ಡ್‌ಮನ್.

ಕ್ಯಾ. ಲಿಯೊನಾರ್ಡ್‌ಮನ್ (ಕ್ರಿ.ಶ. 1936) ಇಂತಹ ಸಿದ್ಧಾಂತಗಳನ್ನು ಸಾರಾಸಗಟಾಗಿ ತಿರಸ್ಕರಿಸಿದರು. ಹಾಗಾದರೆ ಈ ಗಣಿ ಕಾರ್ಮಿಕರು ಎಲ್ಲಿಯವರು? ಮನ್, 'ಈ ಗಣಿ ಕಾರ್ಮಿಕರು ಹೊರಗಿನಿಂದ ಬಂದವರಲ್ಲ, ಅವರೆಲ್ಲ ಸ್ಥಳೀಯರು' ಎನ್ನುತ್ತಾರೆ. ರೋಡೇಷಿಯಾದಲ್ಲೂ ಕರ್ನಾಟಕದಲ್ಲಿರುವಂತಹ ಪುರಾತನ ಚಿನ್ನದ

ಗಣಿಗಳು ಆ ನಾಡಿನ ಉದ್ದಗಲಕ್ಕೂ ಪತ್ತೆಯಾಗಿವೆ. ಅಲ್ಲಿಯೂ ಪುರಾತನ ವಸ್ತುಗಳು ದೊರೆತಿವೆ. ನಮ್ಮ ಗಣಿಗಳಂತೆ ಅಲ್ಲಿನ ಪುರಾತನ ಗಣಿಗಳೂ ಆಳಕ್ಕಿಳಿದಿವೆ. ಹೆಚ್ಚೂ ಕಡಿಮೆ ಅದೇ ವಿನ್ಯಾಸ. ಗಣಿ ಕೊರೆದಿರುವ ರೀತಿಯೂ ಇಲ್ಲಿನ ಗಣಿಗಳನ್ನೇ ಹೋಲುತ್ತವೆ. ರೋಡೇಷಿಯಾದ ಪುರಾತನ ಚಿನ್ನದ ಗಣಿಗಳ ಸುತ್ತ ಮುತ್ತಲು ಪ್ರದೇಶಗಳಲ್ಲಿ ಬೆಳೆದಿರುವ ಕಾಡುಹತ್ತಿ ಮತ್ತು ಹುಣಿಸೆ ಮರಗಳೂ ಕೂಡ. ರೋಡೇಷಿಯಾದ ಭೂವೈಜ್ಞಾನಿಕ ಸಮೀಕ್ಷೆಯ ಬಗ್ಗೆ ಅಲ್ಲಿನ ಸದಸ್ಯ ಮೇಜರ್ ಡಿ. ಲಿತ್‌ಪುಟ್ ಎಂಬ ತಜ್ಞನಿಗೆ ಮನ್ ಪತ್ರ ಬರೆದು ವರದಿ ಕೇಳಿದರು. ಅದಕ್ಕೆ ಉತ್ತರವಾಗಿ ಲಿತ್‌ಪುಟ್ ಹೀಗೆ ಉತ್ತರ ಬರೆದರು.

'ನನ್ನ ಸ್ವಂತ ಅನುಭವದಿಂದ ಹೇಳುವುದಾದರೆ ರೋಡೇಷಿಯಾದ ಪುರಾತನ ಚಿನ್ನದ ಗಣಿಗಳು ಹೈದರಾಬಾದಿನ (ಹಿಂದೆ ರಾಯಚೂರು, ದೊಅಬ್ ಎಂಬ ಹೆಸರಿನಲ್ಲಿ ನಿಜಾಮ್ ಸರ್ಕಾರದ ಆಡಳಿತದಲ್ಲಿತ್ತು) ಗಣಿಗಳಂತೆಯೇ ಇವೆ. ಹಟ್ಟಿ ಗಣಿಗಳ ಬಳಿ ದೊರೆತಿರುವ ಒರಳುಕಲ್ಲಿನ ಛಾಯಾಚಿತ್ರಗಳು ಇಲ್ಲಿನ ಚಿತ್ರಗಳೊಂದಿಗೆ ಹೋಲುತ್ತವೆ. ನೀವು ತಿಳಿಸಿರುವ ಪುರಾತನ ಗಣಿಗಳ ಸುತ್ತಮುತ್ತಲು ಇರುವ ಮರಗಳಲ್ಲದೆ ಇಲ್ಲಿ ಮಹೊಮೊಹೊಬೋ ಮತ್ತು ಕಾಡು ನಿಂಬೆ ಗಿಡಗಳು ಇವೆ. ಆದರೆ ಕಾಡುಹತ್ತಿ ಸ್ಥಳೀಯ ಗಿಡಗಳಲ್ಲ'.

ಕ್ರಿ.ಶ. 1898ರಲ್ಲಿ ಸೆಸಿಲ್ ರೋಡ್ಸ್ ಎಂಬ ಗಣಿತಜ್ಞ ಭಾರತದಲ್ಲಿ ದೊರಕಿದ ಎಲ್ಲಾ ಆಧಾರಗಳನ್ನು ಯುರೋಪ್ ಉನ್ನತ ತಾಂತ್ರಿಕ ಪರಿಣತರ ಮುಂದಿಟ್ಟಾಗ 'ಇಂತಹ ಗಣಿಗಳಿಗೆ ನಿಜಕ್ಕೂ ಇಂಡಿಯಾ ದೇಶವೇ ಮೂಲ' ಎನ್ನುವ ಒಮ್ಮತ ಮೂಡಿತು. ಇದರ ಜೊತೆಗೆ ನೀಗ್ರೊಗಳು ಅಲ್ಲಲ್ಲಿ ಸಣ್ಣಮಟ್ಟ ಗಣಿಗಳನ್ನು ಮಾಡಿರಬೇಕು ಎನ್ನುವ ಮಾತುಗಳನ್ನು ಪರಿಣತರು ಆಡಿದರು. ಇವುಗಳ ಆಧಾರದ ಮೇಲೆ ಮನ್, 'ಕರ್ನಾಟಕದ ಚಿನ್ನದ ಗಣಿ ಉದ್ದಿಮೆ ಯಾವ ಕಾಲದಿಂದ ಪ್ರಾರಂಭವಾಗಿದ್ದರೂ ಅದು ಕಬ್ಬಿಣ ಯುಗದವರೆಗೂ ಮುಂದುವರಿದಿದೆ, ಎಂದು ಬರೆದರು.

ಅಚ್ಚ ಕನ್ನಡದ ನುಡಿಗಳಾದ ಚಿನ್ನ ಮತ್ತು ಹೊನ್ನು ಹೆಸರಿಗೆ ಸಂಬಂಧಪಟ್ಟ ಹೆಸರುಗಳು ಕರ್ನಾಟಕದ ಅನೇಕ ಸ್ಥಳಗಳಲ್ಲಿವೆ. ಚಿನ್ನದ ಗಣಿಗಳ ಸಮೀಪವಿರುವ ಹಳ್ಳಿಗಳ ಹೆಸರು ಕೂಡ ಪ್ರಾಮುಖ್ಯವೆಂದು ಭಾಷಾ ಶಾಸ್ತ್ರದ ದೃಷ್ಟಿಯಿಂದ ಚಿನ್ನದ ಗಣಿಗಳ ಮೂಲವನ್ನು ತಿಳಿದುಕೊಳ್ಳಲು ಮನ್ ಪ್ರಯತ್ನಿಸಿದರು. ಹೊನ್ನುಗಲ್ಲು, ಹೊನ್ನಾಳಿ, ಹೊನ್ನಬೆಟ್ಟ, ಹೊನ್ನೇಬಾಗಿ, ಹೊನ್ನೇಹಟ್ಟಿ, ಹೊನ್ನುಕುಣಿ, ಹೊನ್ನದೊಣ್ಣೆ ಇವೆಲ್ಲವೂ ಪುರಾತನ ಚಿನ್ನದ ಗಣಿಗಳಿಗೆ ಹೆಸರಾಗಿರುವ ಸ್ಥಳಗಳೆಂಬುದು ಗೊತ್ತಾಗುತ್ತದೆ.

❖❖❖

ಲಿಯೋನಾರ್ಡ್‌ಮನ್ ಪುರಾತನ ಚಿನ್ನದ ಗಣಿಗಳ ಬಗ್ಗೆ ವಿವರಿಸುವುದರ ಜೊತೆಗೆ ಹಳೆ ಗಣಿಗಳ ಹತ್ತಿರದಲ್ಲೇ ಕಂಡುಬಂದ ರುಬ್ಬುಗಲ್ಲು, ಪುಡಿಮಾಡಲು ಬಳಸುತ್ತಿದ್ದ ಒರಳುಕಲ್ಲು, ಕುಟ್ಟುಕಲ್ಲು ಇವುಗಳನ್ನು ವಿವರಿಸಿದ್ದಾರೆ. ಇವೆಲ್ಲವೂ, ಸುತ್ತಲೂ ರಾಶಿಯಾಗಿ ಬಿದ್ದಿರುವ ಬೂದಿ ಗುಡ್ಡಗಳಿಂದಲೇ ಬಂದವೆಂದು ದೀರ್ಘ ಟಿಪ್ಪಣಿ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಯಾವುದೇ ರೀತಿಯ ಹೊಸ ಪರಿಶೋಧನೆಗಳು ಇತ್ತೀಚೆಗೆ ನಡೆದಿಲ್ಲ ಎಂದೇ ಹೇಳಬಹುದು. ಬೂದಿ ರಾಶಿಗೂ ಚಿನ್ನದ ಗಣಿಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಪ್ರೊ.ಆಲ್ಚಿನ್ ಸ್ಪಷ್ಟವಾಗಿ ನುಡಿದಿದ್ದಾರೆ. ಅಲ್ಲದೆ ಅಂತಹ ಬೂದಿರಾಶಿ ನವ ಶಿಲಾಯುಗದಲ್ಲಿ ಸಗಣಿ ಸುಡುತ್ತಿದ್ದರ ಫಲ ಎಂದು ವಿವರಿಸಿದ್ದಾರೆ. ನವ ಶಿಲಾಯುಗದ ಅವಶೇಷಗಳನ್ನು ಪತ್ತೆ ಮಾಡಿರುವ ಆಲ್ಚಿನ್ ಅವರು ರಾಯಚೂರಿನ ಈ ಭಾಗದಲ್ಲಿ ಚಿನ್ನದ ಗಣಿಗಾರಿಕೆ ನವ ಶಿಲಾಯುಗದಲ್ಲೇ ಪ್ರಾರಂಭವಾಗಿಬೇಕು ಎಂದು ವಾದಿಸಿದ್ದಾರೆ. ಆ ಕಾಲದಲ್ಲಿ ಅತ್ಯಂತ ಆಳಕ್ಕೆ ಗಣಿ ಇಳಿದಿರುವ ಕುರುಹುಗಳು ದೊರೆಕಿಲ್ಲ. ನೆಲದ ಮೇಲೆ ಕಂಡು ಬಂದ ಶಿಲೆಗಳಲ್ಲಿನ ಚಿನ್ನವನ್ನು ಮಾತ್ರ ತೆಗೆದಿರಬಹುದು. ಏಕೆಂದರೆ ಆಳ ಮಾಡುವ ತಾಂತ್ರಿಕತೆಯ ಸಲಕರಣೆಗಳು ಆಗ ಇರಲಿಲ್ಲ. ಮುಂದೆ ನಾಗರಿಕತೆ ಕಬ್ಬಿಣ ಯುಗಕ್ಕೆ ಕಾಲಿಟ್ಟಾಗ ಗಣಿಗಳನ್ನು ಆಳ ಮಾಡಲು ಸಾಧ್ಯವಾಗಿರಬಹುದು. ಪುರಾತನ ಗಣಿಗಳಲ್ಲಿ ದೊರೆತಿರುವ ಕಬ್ಬಿಣ ಸಲಕರಣೆಗಳು ಆ ವಾದಕ್ಕೆ ಪುಷ್ಠಿ ನೀಡುತ್ತವೆ. ಮೌರ್ಯರ ಕಾಲದಲ್ಲಿ ಕರ್ನಾಟಕದಲ್ಲಿ ಚಿನ್ನದ ಗಣಿಗಳ ಅಭಿವೃದ್ಧಿಯಾಗಿ ಮತ್ತು ಅನಂತರ ಶಾತವಾಹನರ ಕಾಲದಲ್ಲಿ ಗಣಿಗಳ ಆಳ ಮುಂದುವರೆದಿರಬೇಕು ಎನ್ನುವುದು ಆಲ್ಚಿನ್ ಅಭಿಪ್ರಾಯ.

ಬಹುತೇಕ ಪುರಾತನ ಗಣಿಗಳಿದ್ದ ಸ್ಥಳಗಳು ಈಗ ಗುರುತು ಸಿಕ್ಕದಂತಾಗಿವೆ. ಎಷ್ಟೋ ಗಣಿಗಳು ವ್ಯವಸಾಯದಿಂದ ಮುಚ್ಚಿಹೋಗಿದ್ದರೆ ಕೆಲವು ಕುಸಿದುಬಿದ್ದು ಕಲ್ಲು ಮಣ್ಣು ತುಂಬಿಕೊಂಡಿವೆ. ಮನ್ ಅವರು ಹಟ್ಟಿ ಚಿನ್ನದ ಗಣಿಗಳ ಸುತ್ತಮುತ್ತ ಕೂಲಂಕಷ ಅಧ್ಯಯನದಲ್ಲಿ ತೊಡಗಿದ್ದಾಗಲೆ ಬಹುತೇಕ ಗಣಿಗಳು ಮುಚ್ಚಿಹೋಗಿದ್ದವು. ಕೆಲವು ಗಣಿಗಳಿಗೆ ಗುಂಡು ಕಲ್ಲುಗಳನ್ನು ಉರುಳಿಸಿ ಮುಚ್ಚಲಾಗಿತ್ತು. ಗಣಿಗಳಲ್ಲಿ ಹಸು ಕುರಿಗಳು ಮತ್ತು ಮಕ್ಕಳು ಬೀಳದಂತೆ ಅಥವಾ ಪರಕೀಯರ ಕಣ್ಣಿಗೆ ಬೀಳದಿರಲೆಂದು ಮುಂಜಾಗ್ರತೆಯಿಂದ ಅವುಗಳನ್ನು ಮುಚ್ಚಿರಲೂಬಹುದು. ಮುಸಲ್ಮಾನರ ಆಕ್ರಮಣಕ್ಕೆ ತುತ್ತಾದಾಗ ಹೀಗೆ ಮಾಡಿರಬಹುದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

❖❖❖

ಹಳೆಯ ತಲೆಮಾರಿನ ಜನ ತಾವು ಮಾಡಿದ ಕಾರ್ಯಗಳಿಗೆಲ್ಲ ಪುರಾವೆಗಳನ್ನು ಬಿಟ್ಟು ಹೋಗಿಲ್ಲ. ಶಾಸನ, ದಾಖಲೆ, ಚರಿತ್ರೆಯ ಮೂಲಕ ಹಿಂದಿನ ಎಲ್ಲ ಸಂಗತಿಗಳನ್ನೂ ಅರಿಯುವುದು ಸಾಧ್ಯವಿಲ್ಲದ ಮಾತು. ಗಣಿಗಳ ಚರಿತ್ರೆಯೂ ಇದೇ ಸಮಸ್ಯೆಯನ್ನು

ಎದುರಿಸುತ್ತಿವೆ. ಪ್ರಾಚೀನರು ಬಳಸುತ್ತಿದ್ದ ಪಾತ್ರೆ, ಪದಾರ್ಥ, ಸಾಧನ ಸಾಮಗ್ರಿಗಳು, ಮಡಿಕೆ ಕುಡಿಕೆಗಳು ಮುಂತಾದ ಸಲಕರಣೆಗಳನ್ನು ಆಧರಿಸಿ ಗಣಿ ಮಾಡಿದ ಕಾಲವನ್ನು ಸ್ಥೂಲವಾಗಿ ತಿಳಿಯಬಹುದು. ಆದರೆ ನಿರ್ದಿಷ್ಟವಾಗಿ ಕಾಲದ ನಿಷ್ಕರ್ಷೆಗೆ ಇಂತಹ ಪರಿಕರಗಳು ಹೆಚ್ಚೆಚ್ಚು ನೆರವಿಗೆ ಬರಲಾರವು. ಹಟ್ಟಿ ಚಿನ್ನದ ಗಣಿಗಳನ್ನು ಅಭಿವೃದ್ಧಿ ಮಾಡುವ ಹಂತದಲ್ಲಿ ಆಳದ ಸುರಂಗಗಳಲ್ಲಿ ಶಿಲೆಗಳು ಕುಸಿಯದಂತೆ ತಡೆಯಲು ಆಧಾರ ಸ್ತಂಭಗಳನ್ನು ಕೊಟ್ಟಿದ್ದರು. ಬಹುಪಾಲು ಇಂತಹ ಕಂಬಗಳಿಗಾಗಿ ಜಾಲಿ ಮರಗಳನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಏಕೆಂದರೆ ಜಾಲಿಮರ ಸ್ವಭಾವತಃ ಗಟ್ಟಿ ಮರ. ಗಣಿಯ ಪ್ರಾಚೀನತೆಯನ್ನು ಅರಿಯಲು ವಿಜ್ಞಾನಿಗಳಿಗೆ ಇದು ಅಮೂಲ್ಯ ವಸ್ತುವಾಯಿತು. ಜಾಲಿಮರ ಕಾಲವನ್ನು ಹೇಗೆ ತಿಳಿಸುತ್ತದೆ? ಇದನ್ನರಿಯಲು ನಾವು ನಿಸರ್ಗದ ಮೂಲವಸ್ತುಗಳ ಒಳರಚನೆಯನ್ನು ಸಂಕ್ಷಿಪ್ತವಾಗಿ ಅರಿಯುವುದು ಅವಶ್ಯಕ. ಪ್ರತಿ ಧಾತುಗಳಿಗೂ ನಿರ್ದಿಷ್ಟ ಸಂಖ್ಯೆಯ ಪರಮಾಣುಗಳಿರುತ್ತವೆ. ಪರಮಾಣುವಿನ ತಿರುಳೇ ನ್ಯೂಕ್ಲಿಯಸ್. ಇದು ಹಣ್ಣಿನ ಒಳಗೆ ಬೀಜವಿದ್ದಂತೆ. ಈ ಬೀಜದಲ್ಲಿ ನಿರ್ದಿಷ್ಟ ಮೊತ್ತದ ಪ್ರೋಟಾನು, ನ್ಯೂಟ್ರಾನುಗಳಿರುತ್ತವೆ. ಈ ಬೀಜವನ್ನು ಎಲೆಕ್ಟ್ರಾನ್‌ಗಳು ಗ್ರಹಗಳಂತೆ ಸುತ್ತುತ್ತಿರುತ್ತವೆ. ಪರಮಾಣುವಿನ ಪ್ರೋಟಾನು ಸಂಖ್ಯೆ ನೂಕ್ಲಿಯಸ್‌ನ್ನು ಸುತ್ತುವ ಎಲೆಕ್ಟ್ರಾನ್ ಸಂಖ್ಯೆಗೆ ಸಮವಾಗಿರುತ್ತದೆ. ಇದನ್ನೇ ಆ ಧಾತುವಿನ ಪರಮಾಣು ಸಂಖ್ಯೆ ಎಂದು ಕರೆಯುತ್ತಾರೆ. ನೂಕ್ಲಿಯಸ್‌ನ ಪ್ರೋಟಾನು ಮತ್ತು ನ್ಯೂಟ್ರಾನುಗಳ ಸಂಖ್ಯೆ ಪರಮಾಣುವಿನ ತೂಕವನ್ನು ತಿಳಿಸುತ್ತದೆ. ಪರಮಾಣುಗಳಲ್ಲಿ ನ್ಯೂಟ್ರಾನ್‌ನ ಸಂಖ್ಯೆ ಸದಾ ಒಂದೇ ಪ್ರಮಾಣದಲ್ಲಿರುವುದಿಲ್ಲ.

ಉದಾ : ಮೂಲವಸ್ತುವಾದ ಇಂಗಾಲವನ್ನೇ ತೆಗೆದುಕೊಳ್ಳಬಹುದು.

ಕಾರ್ಬನ್ ಡೇಟಿಂಗ್ :

ಕಾರ್ಬನ್ 12ರ ನ್ಯೂಕ್ಲಿಯಸ್‌ನಲ್ಲಿ 6 ಪ್ರೋಟಾನು ಮತ್ತು 6 ನ್ಯೂಟ್ರಾನುಗಳಿರುತ್ತವೆ. ಇದು ಕಾರ್ಬನ್ನಿನ ಒಂದು ಸಮಸ್ಥಾನಿ. ಕಾರ್ಬನ್ 13ರ ನ್ಯೂಕ್ಲಿಯಸ್‌ನಲ್ಲಿ 6 ಪ್ರೋಟಾನು 7 ನ್ಯೂಟ್ರಾನುಗಳಿರುತ್ತವೆ. ಕಾರ್ಬನ್ 14ರ ನೂಕ್ಲಿಯಸ್‌ನಲ್ಲಿ 6 ಪ್ರೋಟಾನು ಮತ್ತು 8 ನ್ಯೂಟ್ರಾನ್‌ಗಳಿರುತ್ತವೆ. ಇವುಗಳ ಪೈಕಿ ಕಾರ್ಬನ್ 14 ಅಸ್ಥಿರವಾದದ್ದು. ವಿಕಿರಣ ಸೂಸಿಯಿಂದ ಅದು 5760 ವರ್ಷಗಳಲ್ಲಿ ಮೂಲದಿಂದ ಅರ್ಧ ಪ್ರಮಾಣಕ್ಕೆ ಇಳಿಯುತ್ತದೆ. ಉದಾಹರಣೆಗೆ 1 ಗ್ರಾಮ್ ಕಾರ್ಬನ್ 5760 ವರ್ಷಗಳಲ್ಲಿ 0.5 ಗ್ರಾಮ್‌ಗೆ ಇಳಿಯುತ್ತದೆ. ಅಂತಿಮವಾಗಿ ಸಂಪೂರ್ಣವಾಗಿ ಕರಗಿ ಸಸಾರಜನಕವಾಗಿ ಪರಿವರ್ತನೆಯಾಗುತ್ತದೆ ಇದರಿಂದ ಕಾಲವನ್ನು ನಿಖರವಾಗಿ ಅಳೆಯಬಹುದು. ಇದೇ ತಂತ್ರವನ್ನು ಬಳಸಿ ಗಣಿಗಳಲ್ಲಿ ಉಪಯೋಗಿಸುವ ಮರದ ದಿಮ್ಮಿ, ತೊಲೆ ಮುಂತಾದವುಗಳಲ್ಲಿ ಕಾರ್ಬನ್

14ರ ವಿಧಾನ ಅಳವಡಿಸಿ ಅವುಗಳ ಕಾಲವನ್ನು ನಿರ್ಧಾರ ಮಾಡಬಹುದು. ಕೆಜಿಎಫ್ ಮತ್ತು ಹಟ್ಟಿ ಚಿನ್ನದ ಗಣಿಗಳಲ್ಲಿ ಪ್ರಾಚೀನರು ಬಳಸಿದ ಮರದ ದಿಮ್ಮಿ, ಇದ್ದಿಲು ಇವುಗಳ ಮಾದರಿ ತೆಗೆದು ಗಣಿ ಮಾಡಿದ ಕಾಲವನ್ನು ನಿರ್ಧರಿಸಲಾಯಿತು. ಈ ತಂತ್ರವನ್ನು ಮೊದಲ ಬಾರಿಗೆ ವಿಜ್ಞಾನ ಕ್ಷೇತ್ರದಲ್ಲಿ ಅಳಡಿಸಿದ ಡಾಃಲಿಬ್ಬಿ ಅವರಿಗೆ 1960 ರಲ್ಲಿ ನೊಬೆಲ್ ಪ್ರಶಸ್ತಿ ದೊರೆಯಿತು.

ಕರ್ನಾಟಕದ ಚಿನ್ನದ ಗಣಿಗಳ ಪ್ರಾಚೀನತೆ (ಕಾರ್ಬನ್ 14ರ ತಂತ್ರ[5] ಅನ್ವಯಿಸಿ).

ಗಣಿ	ಮಾದರಿ	ಸ್ಥಳ	ಕಾಲ
1. ಕೆಜಿಎಫ್	ಟಿ.ಎಫ್. 1199	ಗಣಿಯ ಮೇಲ್ಭಾಗ	1290+90 ವರ್ಷ (ಕ್ರಿ.ಶ. 660 ರಿಂದ 860)
2. ಕೆಜಿಎಫ್	ಟಿ.ಎಫ್.879	ಛಾಂಪಿಯನ್ ಗಣಿ	1500+115 ವರ್ಷ 50 ಮೀ. ಆಳ (ಕ್ರಿ.ಶ. 430 ರಿಂದ 660)
3. ಹಟ್ಟಿ ಚಿನ್ನದ ಗಣಿ	ಕ್ರ.ಸಂ. 2	ಒಕ್ಲೆ ಶ್ಯಾಫ್ಟ್ ಹಟ್ಟಿ ಗಣಿ	1945+70 ವರ್ಷ 80 ಮೀ. ಆಳ
4. ಹಟ್ಟಿ ಚಿನ್ನದ ಗಣಿ	ಕ್ರ.ಸಂ. 2	ಒಕ್ಲೆ ಶ್ಯಾಫ್ಟ್ ಹಟ್ಟಿ ಗಣಿ	1865+70 ವರ್ಷ

ಈ ಮೇಲಿನ ಅಂಕಿ ಅಂಶಗಳು ಗಣಿಯನ್ನು ಅಭಿವೃದ್ಧಿ ಪಡಿಸಿದ ಕಾಲ ನಿಷ್ಕರ್ಷೆಗೆ ಸಹಾಯಕವಾಗುತ್ತವೆ. ಆದರೆ ಗಣಿ ಪ್ರಾರಂಭವಾದ ಕಾಲವನ್ನು ಇವು ನಿಖರವಾಗಿ ತಿಳಿಸುವುದಿಲ್ಲ. ಈ ಮಾಹಿತಿಯಂತೆ 1700 ವರ್ಷಗಳ ಹಿಂದೆಯೇ ಕೆಜಿಎಫ್ ಗಣಿಗಳನ್ನು ಪ್ರಾಚೀನರು ಆಳಕ್ಕಿಳಿಸಿದ್ದರು. ಕ್ರಿ.ಶ. 1ನೇ ಶತಮಾನದಲ್ಲಿಯೇ ಹಟ್ಟಿ ಚಿನ್ನದ ಗಣಿಗಳೂ ಕೆಜಿಎಫ್ ಗಣಿಗಳಂತೆ ಆಳಕ್ಕಿಳಿದಿದ್ದವು. ಚಿತ್ರದುರ್ಗದ ಬಳಿ ಇರುವ ಇಂಗಳದಾಳಿನ ಪುರಾತನ ತಾಮ್ರದ ಗಣಿಗಳಲ್ಲಿ ದೊರಕಿದ ಪುರಾತನ ವಸ್ತುಗಳನ್ನು ಕಾಲ ನಿಷ್ಕರ್ಷಗೆ ಒಳಪಡಿಸಲಾಯಿತು. ಇದರಿಂದ ಸುಮಾರು 2000 ವರ್ಷಗಳ ಹಿಂದೆಯೇ ಶಾತವಾಹನರ ಕಾಲದಲ್ಲಿ ಈ ಗಣಿಗಳನ್ನು ಮಾಡಿರುವ ಸೂಚನೆಗಳು ಕಂಡುಬಂದಿವೆ. ಸೋಜಿಗವೆಂದರೆ ಯಾವ ಶಾಸನಗಳಲ್ಲೂ ಈ ಗಣಿಗಳ ಬಗ್ಗೆ ಉಲ್ಲೇಖವಿಲ್ಲ.[6] ಹಟ್ಟಿ ಗಣಿಗಳ ಪ್ರದೇಶದಲ್ಲಿರುವ ಊಟಿ ತೆರೆದ ಗಣಿಗಳಲ್ಲಿ ಸಂಗ್ರಹಿಸಿದ ಮರದ ತುಂಡನ್ನು ಕಾರ್ಬನ್ 14 ರ ತಂತ್ರಕ್ಕೆ ಅಳವಡಿಸಿದಾಗ ಅದು ಕ್ರಿ.ಶ. 660 ರಿಂದ 780 ಮಧ್ಯ ಕಾಲಕ್ಕೆ ಸೇರಿರುವುದಾಗಿ ತಿಳಿಯಿತು.[7]

✦

1. ಟಿ.ಆರ್. ಅನಂತರಾಮು, ರಾಜರಲೋಹ ಲೋಹಗಳ ರಾಜ, ನವಕರ್ನಾಟಕ ಪಬ್ಲಿಕೇಶನ್, 1999
2. ಟಿ.ಆರ್. ಅನಂತರಾಮು, ರಾಜರ ಲೋಹ ಲೋಹಗಳ ರಾಜ: ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು
3. ಆಂಫಿಬೋಲೈಟ್ ಮತ್ತು ಬಸಾಲ್ಟ್ ಶಿಲೆಗಳ ಮಧ್ಯ ಹಾಸಿಕೊಂಡಿರುವ ಕ್ವಾರ್ಟ್ಸ್‌ರೀಫ್ (ಬೆಣಚು ಶಿಲೆಗಳು)
4. ಕ್ಯಾ. ಲಿಯೋನಾರ್ಡ್ ಮನ್ ಇಂದಿಗೂ ಈ ಪ್ರದೇಶದಲ್ಲಿ 'ಬಾವಡಿಸಾಬ್' (ಸಾವಿರ ಬಾವಿಗಳ ಸರದಾರ) ಎಂದೇ ಪ್ರಖ್ಯಾತ.
5. ಟಿ.ಪಿ. ಅಗರವಾಲ್ ಮತ್ತು ಮಾರ್ಗ್‌ಬಂಧು–ಪುರಾತತ್ವ ಸಂಚಿಕೆ ಸಂಖ್ಯೆ 8, 1975–76
6. ಟಿ.ಆರ್. ಅನಂತರಾಮು, ರಾಜರ ಲೋಹ ಲೋಹಗಳ ರಾಜ : ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು ಪುಟ, 86,89
7. Dr. Nagabhusana et.al, Ancient gold mining activity in the Hutti-Maski shist belt, Karnataka, current science, vol,95, No,3.08.2008.

ಅಧ್ಯಾಯ–3

ಆಧುನಿಕ ಚಿನ್ನದ ಗಣಿಗಳು

> ಕೆಜಿಎಫ್‌ನಲ್ಲಿ ಪ್ರಾರಂಭವಾದ ಆಧುನಿಕ ಚಿನ್ನದ ಗಣಿಗಳ (12 ದಶಕಗಳ) ಚರಿತ್ರೆಯನ್ನು ಕಟ್ಟಿಕೊಡಲಾಗಿದೆ. ಚಿನ್ನದ ಅನ್ವೇಷಣೆಯಲ್ಲಿ ತೊಡಗಿದ ಬ್ರಿಟಿಷರು, ಗಣಿಗಳ ಪ್ರಾರಂಭಿಕ ದಿನಗಳು, ಗಣಿಗಳ ಮೂಲಯೋಜನೆಗಳು ಮತ್ತು ಗಣಿಗಳ ಒಳಗಿನ ತೊಂದರೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಜಾನ್ ವಾರನ್, ಮೈಕೆಲ್ ಲ್ಯಾವೆಲ್ಲೇ ಮತ್ತು ಆಧುನಿಕ ಗಣಿಗಳ ಪಿತಾಮಹ ಜಾನ್ ಟೈಲರ್ ಮತ್ತು ಇಂಗ್ಲೆಂಡಿನ ಆಡಳಿತವನ್ನು ವಿವರಿಸಲಾಗಿದೆ.

ಇಂದಿನ ಕೋಲಾರ ಪಟ್ಟಣವನ್ನು ಮೊದಲು ಕೋಲಾಹಲ, ಕುವಲಾಲ ಅಥವಾ ಕೊಳಲ ಎಂದು ಕರೆಯುತ್ತಿದ್ದು, ಹೆಸರಿನ ಬಗ್ಗೆ ಹಲವು ರೀತಿಯ ಕಥೆಗಳಿವೆ. ಕಾರ್ತವೀರಾರ್ಜುನನ ಸೈನ್ಯವನ್ನು ಪರಶುರಾಮ ಛಿದ್ರ ಛಿದ್ರ ಮಾಡುತ್ತಿದ್ದಾಗ ಸೈನಿಕರ ಕೋಲಾಹಲ ಸುತ್ತಲಿದ್ದ ಬೆಟ್ಟಗಳಿಗೆ ಅಪ್ಪಳಿಸಿ ಕೋಲಾರ ಹೆಸರು ಬಂದಿರುವುದಾಗಿ ಹೇಳಲಾಗುತ್ತದೆ. ಗಂಗರು ಈ ಪ್ರದೇಶವನ್ನು ಆಳುತ್ತಿದ್ದಾಗ ಕೋಲಾರ ಪಟ್ಟಣವನ್ನು ಸ್ಥಾಪಿಸಿದರೆಂದು, ಅಂದಿನ ಕುವಲಾಲಪುರವರೇಶ್ವರ ದೇವಸ್ಥಾನದಿಂದ ಈ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ನೆಲದಲ್ಲಿ ಮುಚ್ಚಿಹೋಗಿದ್ದ ಸಂಪತ್ತನ್ನು ಕೋಲಾ ಎಂಬ ಹಸು ಕಾಯುವ ಹುಡುಗ ತೋರಿಸಿದ ಮೇಲೆ ಅದೇ ಸ್ಥಳದಲ್ಲಿ ಉತ್ತಮನೆಂಬ ಚೋಳ ರಾಜನು ಅಲ್ಲಿ ದೊರಕಿದ ನಿಧಿಯಲ್ಲಿ ದೇವಾಲಯವನ್ನು ಕಟ್ಟಿಸಿ ಕೋಲಾರ ಪಟ್ಟಣವನ್ನು ಸ್ಥಾಪಿಸಿದನಂತೆ. ಗಂಗರ 18ನೇ ರಾಜ ಕೋಲಾಹಲ ಈ ಪಟ್ಟಣವನ್ನು

ಸ್ಥಾಪನೆ ಮಾಡಿದ ಎಂಬುದಾಗಿ ಕೆಲವು ಶಿಲಾ ಶಾಸನಗಳಿಂದ ತಿಳಿದುಬರುತ್ತದೆ. ಗಂಗರು ತಮ್ಮ ರಾಜ್ಯ ವಿಸ್ತಾರಗೊಂಡ ನಂತರ ಕೋಲಾರ ಪಟ್ಟಣವನ್ನು ಬಿಟ್ಟು ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಗಂಗರ ರಾಜಧಾನಿಯನ್ನು ಚೋಳರು ಕ್ರಿ.ಶ. 1004ರಲ್ಲಿ ಆಕ್ರಮಿಸಿಕೊಂಡರು. ಅನಂತರ ಕ್ರಿ.ಶ. 1117ರಲ್ಲಿ ಹೊಯ್ಸಳರು, ಚೋಳರನ್ನು ಸೋಲಿಸಿ ರಾಜ್ಯವನ್ನು ಸ್ಥಾಪಿಸಿದರು.

ಇದಕ್ಕೆ ಮುಂಚೆ ಚೋಳರಾಜನ ಕನಸಿನಲ್ಲಿ ಕೋಲಾರಮ್ಮನ ರೂಪದಲ್ಲಿ ಬಂದ ರೇಣುಕಾದೇವಿ ತನ್ನ ಹೆಸರಿನಲ್ಲಿ ದೇವಾಲಯವನ್ನು ಸ್ಥಾಪಿಸುವಂತೆ ಆಜ್ಞೆ ಮಾಡಿದಳಂತೆ. ಈ ಪ್ರದೇಶ 14ನೇ ಶತಮಾನದಲ್ಲಿ ವಿಜಯನಗರದ ಆಳ್ವಿಕೆಗೆ ಒಳಪಟ್ಟಿತ್ತು. 17ನೇ ಶತಮಾನದಲ್ಲಿ ಇದೇ ಪ್ರದೇಶ ಬಿಜಾಪುರ ಜಾಗೀರ್‌ದಾರರ ಕೈ ಸೇರಿ ಅಲ್ಲಿಂದ ಸ್ವಲ್ಪ ಕಾಲ ಮೊಗಲರ ವಶವಾಗಿ, ಹೈದರಾಲಿ ಕೋಲಾರದ ಫೌಜಿದಾರರಾದರು. ಕ್ರಿ.ಶ. 1799ರಲ್ಲಿ ಟಿಪ್ಪುಸುಲ್ತಾನ್ ಯುದ್ಧದಲ್ಲಿ ಸಾವನ್ನಪ್ಪಿದ ನಂತರ ಪೂರ್ಣಯ್ಯ ಸ್ವಲ್ಪ ಕಾಲ ಈ ಪ್ರದೇಶವನ್ನು ನೋಡಿಕೊಂಡರು. ಅನಂತರ ಈ ಪ್ರದೇಶ ಮೈಸೂರು ರಾಜರ ವಶಕ್ಕೆ ಬಂದಿತು. ಕ್ರಿ.ಶ. 1862–67 ಮಧ್ಯ ಮಿ. ಬೌವ್‌ರಿಂಗ್ ಇಲ್ಲಿನ ಕಮಿಶ್‌ನರ್ ಆಗಿ ಕೆಲವು ಸುಧಾರಣೆಗಳನ್ನು ತಂದರು.

ಬೆಂಗಳೂರಿನಿಂದ ಪೂರ್ವಕ್ಕೆ 70 ಕಿ.ಮೀ. ದೂರ ಸಾಗಿದರೆ ಕೋಲಾರ ಪಟ್ಟಣ ದೊರಕುತ್ತದೆ. ಅಲ್ಲಿಂದ ದಕ್ಷಿಣಕ್ಕೆ 30 ಕಿ.ಮೀ. ದೂರ ಸಾಗಿದರೆ ಪ್ರಪಂಚ ಪ್ರಖ್ಯಾತ ಕೆಜಿಎಫ್ ಗಣಿ ಪ್ರದೇಶಗಳು ಸಿಗುತ್ತವೆ. ಐರೋಪ್ಯ ದೇಶಗಳ ಜನರು ಚಿನ್ನವನ್ನು ಹುಡುಕಿಕೊಂಡು ಈ ಪ್ರದೇಶಕ್ಕೆ ಬಂದ ಮೇಲೆಯೇ ಈ ಪ್ರದೇಶಕ್ಕೆ ಕೋಲಾರ್ ಗೋಲ್ಡ್ ಫೀಲ್ಡ್ಸ್ (ಕೆಜಿಎಫ್) ಎಂಬ ಹೆಸರು ಬಂದಿತು. ತೀರ ಇತ್ತೀಚೆಗೆ 60ರ ದಶಕದಲ್ಲಿ ಈ ಪ್ರದೇಶದಲ್ಲಿ ಬಿಇಎಮ್‌ಎಲ್ ಕಾರ್ಖಾನೆ ಸ್ಥಾಪನೆಯಾಗಿ ಕನ್ನಡಿಗರ ಸಂಖ್ಯೆ ಹೆಚ್ಚಾದ ಮೇಲೆ ಕೆಜಿಎಫ್ ನಗರವನ್ನು ಕೋಲಾರ ಚಿನ್ನದ ಗಣಿಗಳು (ಕೋಚಿಗ) ಎಂದು ಕರೆಯಲಾಯಿತು. ಕ್ರಿ.ಶ. 1880ರ ನಂತರ ಚಿನ್ನದ ಗಣಿ ಉದ್ದಿಮೆ ಬೆಳೆಯುತ್ತಾ ಹೋದಂತೆ ಕೆಜಿಎಫ್ ಪ್ರದೇಶದಲ್ಲಿ ಇಂದಿನ ರಾಬರ್ಟ್‌ಸನ್‌ಪೇಟೆ, ಆಂಡ್ರ್ಸನ್‌ಪೇಟೆ ಮತ್ತು ಉರಿಗಾಂಪೇಟೆ ಬಡಾವಣೆಗಳು ಬಂದವು.[1]

ಕೆಜಿಎಫ್ 78^0 14' 33" ಇಂದ 78^0 17' 32" ಪೂರ್ವ ರೇಖಾಂಶ ಮತ್ತು 12^0 54' 53" ಇಂದ 12^0 58' 30"ಉತ್ತರ ಅಕ್ಷಾಂಶದ ಒಳಗಿದ್ದು, ಸಮುದ್ರ ಮಟ್ಟದಿಂದ 904.4 (3080 ಅಡಿ) ಮೀ. ಎತ್ತರದಲ್ಲಿದೆ. ಕೆಜಿಎಫ್ ಸುತ್ತಮುತ್ತಲ ಪ್ರದೇಶ ಸಾಧಾರಣವಾದ ಹಳ್ಳಕೊಳ್ಳಗಳಿಂದ ಕೂಡಿದ್ದು ದಕ್ಷಿಣ ಭಾಗದಲ್ಲಿ ಯರ್ರಕೊಂಡ (ಕೆಂಪು ಬಣ್ಣದ ಪಟ್ಟೆ ಪಟ್ಟೆ ಕಬ್ಬಿಣ ಪದರು ಶಿಲೆಗಳಿಂದ ಕೂಡಿದ್ದರಿಂದ ಈ ಹೆಸರು ಬಂದಿದೆ) ಬ್ಯಾಟರಾಯನಸ್ವಾಮಿ ಬೆಟ್ಟ ಪೂರ್ವ ಪಶ್ಚಿಮ ದಿಕ್ಕಿನಲ್ಲಿ ಚಾಚಿಕೊಂಡು ಮಲಗಿದೆ. ಈ

ಬೆಟ್ಟದ ತುತ್ತ ತುದಿಯಲ್ಲಿರುವ ಬ್ಯಾಟರಾಯನಸ್ವಾಮಿ ದೇವಸ್ಥಾನ ಸಮುದ್ರ ಮಟ್ಟದಿಂದ 3357 ಅಡಿ ಎತ್ತರದಲ್ಲಿದೆ.

ಕೆಜಿಎಫ್, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಗಡಿಗಳು ಕೂಡುವ ಪ್ರದೇಶದಲ್ಲಿದ್ದು, ಚಿನ್ನದ ಗಣಿಗಳು ಚಲಾವಣೆಯಲ್ಲಿದ್ದ ಕಾಲದಲ್ಲಿ ಈ ನಗರ 'ಲಿಟ್ಲ್ ಇಂಗ್ಲೆಂಡ್' ಎಂದು ಪ್ರಪಂಚದಾದ್ಯಂತ ಖ್ಯಾತಿ ಪಡೆದಿತ್ತು. ಈ ನಗರದ ಸುತ್ತಮುತ್ತಲು ಇರುವ ಹಳ್ಳಿಗಳಲ್ಲಿ ತೆಲುಗು ಭಾಷೆ ಮಾತನಾಡುವವರೆ ಇಂದಿಗೂ ಹೆಚ್ಚಾಗಿದ್ದು ಗಣಿಗಳು ಪ್ರರಂಭವಾದಾಗ, ಸ್ಥಳೀಯರು ಗಣಿಗಳಲ್ಲಿ ಕೆಲಸ ಮಾಡಲು ನಿರಾಕರಿಸಿದ್ದರಿಂದ ತಮಿಳುನಾಡಿನಿಂದ ಅಸಂಖ್ಯೆ ತಮಿಳರು ಬಂದು ಗಣಿಗಳಲ್ಲಿ ಕೆಲಸಕ್ಕೆ ಸೇರಿಕೊಂಡರು.[2]

ಲೆ. ಜಾನ್ ವಾರನ್ :

ಕೆಜಿಎಫ್ ಪ್ರದೇಶದಲ್ಲಿ ಚಿನ್ನದ ಅನ್ವೇಷಣೆಯ ಬಗ್ಗೆ ಮೊದಲ ಲಿಖಿತ ದಾಖಲೆ ದೊರೆಯುವುದು ಕ್ರಿ.ಶ. 1802ರಲ್ಲಿ. ಹಿಂದಿನ ಮೈಸೂರು ಹೆಸರಿನ ಗಣಿಯ ಬಗ್ಗೆ ಬ್ರಿಟಿಷರಿಗೂ ಸ್ಪಷ್ಟವಾದ ತಿಳಿವಳಿಕೆ ಇರಲಿಲ್ಲ. ಟಿಪ್ಪು ಸುಲ್ತಾನ್ ಯುದ್ಧದಲ್ಲಿ ಮರಣ ಹೊಂದಿದ ನಂತರ ಮೈಸೂರಿನ ಪೂರ್ವ ಗಡಿಯನ್ನು ಸಮೀಕ್ಷೆ ಮಾಡಲು ಈಸ್ಟ್ ಇಂಡಿಯಾ ಕಂಪನಿ, ಹೆಚ್‌ಎಂ 33ನೇ ರೆಜಿಮೆಂಟ್‌ನ ಲೆಫ್ಟಿನೆಂಟ್ ಜಾನ್ ವಾರನ್ ಎಂಬುವರನ್ನು ನೇಮಿಸಿತು. ಈಗಿನ ಕೆಜಿಎಫ್ ಪ್ರದೇಶದ ದಕ್ಷಿಣಕ್ಕಿರುವ ಯರ್ರಕೊಂಡ ಬೆಟ್ಟದಿಂದಲೇ ವಾರನ್ ಸಮೀಕ್ಷಾ ಕಾರ್ಯವನ್ನು ಪ್ರಾರಂಭಿಸಿದರು.

ವಾರನ್ ಸಮೀಕ್ಷೆಯಿಂದ ಆಗಿನ ಮೈಸೂರು ರಾಜ್ಯದ ಭೌಗೋಳವೆ ಬದಲಾಗಿಹೋಯಿತು. ಒಂದು ವೇಳೆ ಪೂರ್ವ ಗಡಿಯನ್ನು ವಾರನ್ ಆ ಭಾಗದಲ್ಲಿ ಗುರುತಿಸದೇ ಹೋಗಿ ಅದನ್ನು ಸ್ವಲ್ಪ ಪಶ್ಚಿಮಕ್ಕೆ ಹಾಕಿದ್ದರೆ ಕನ್ನಡ ನಾಡಿಗೆ ಇಂದಿನ ಚಿನ್ನದ ನಾಡೆನ್ನುವ ಪಟ್ಟ ದೊರಕುತ್ತಿರಲಿಲ್ಲ. ಅದು ತಮಿಳುನಾಡಿನ ಸಿರಿಯನ್ನು ತುಂಬುತ್ತಿತ್ತು. ವಾರನ್, ವೃತ್ತಿಯಿಂದ ಭೂವಿಜ್ಞಾನಿಯಲ್ಲ, ಆದರೆ ಆ ಭಾಗದಲ್ಲಿ ಕಂಡ ಎಲ್ಲಾ ಅಂಶಗಳನ್ನೂ ಒಪ್ಪವಾಗಿ ಬರೆದು ಕಂಡದ್ದನ್ನು ಕಂಡಂತೆಯೇ ದಾಖಲಿಸಿದ್ದರು. ಯರ್ರಕೊಂಡ ಹತ್ತಿರಕ್ಕೆ ಬಂದಾಗ ಅಲ್ಲಿನ ಉರಿಗಾಂ ಹಾಗೂ ಮಾರಿಕುಪ್ಪಂ ಪ್ರದೇಶಗಳ ಬಳಿ ಚಿನ್ನ ದೊರೆಯುತ್ತದೆ ಎನ್ನುವ ಸುದ್ದಿ ವಾರನ್ ಕಿವಿಗೆ ತಲುಪಿತು. ಸಮೀಕ್ಷೆ ಮುಂದುವರೆಸಿದ ವಾರನ್ ಚಿನ್ನದ ಅನ್ವೇಷಣೆಯ ಬಗ್ಗೆ 1804 ರಲ್ಲಿ ಸುದೀರ್ಘ ಮಾಹಿತಿಯನ್ನು 'ರಾಯಲ್ ಏಷ್ಯಾಟಿಕ್' ಪತ್ರಿಕೆಯಲ್ಲಿ ಪ್ರಕಟಿಸಿದರು.

ಸುತ್ತಲಿನ ಹಳ್ಳಿ ಜನ ಕಪ್ಪು ಶಿಲೆಗಳ ನಡುವೆ ಹಾಸಿಕೊಂಡಿದ್ದ ಬೆಣಚು ಶಿಲೆಗಳನ್ನು ತೆಗೆದು ಪುಡಿಮಾಡಿ ಚಿನ್ನ ತೆಗೆಯುತ್ತಿದ್ದರು. ಲೆ. ಜಾನ್ ವಾರನ್ ಮಾರಿಕುಪ್ಪಂ ಹತ್ತಿರ ಹಳೆ ಗಣಿಯ ಸುತ್ತಲು ಬಿದ್ದದ್ದ ಅದಿರನ್ನು ಪರೀಕ್ಷಿಸಲು ನಿರ್ಧರಿಸಿದಾಗ, 'ತೇರು'

ಮತ್ತು 'ತೇಡು' ಎಂಬ ಅಸ್ಪೃಶ್ಯ ಜನಾಂಗಗಳ 12 ಜನರು ಕೆಲಸ ಮಾಡಲು ಮುಂದೆ ಬಂದರು. ಮೂವರಿಗೆ ಒಂದು ದಿನಕ್ಕೆ 1 ಕಂಠರಾಯ (ಒಂದು ಬೆಳ್ಳಿ ಕಾಸು) ಕೂಲಿ. ಗಣಿಯ ಒಳಗೆ 12 ದಿನ ಕೆಲಸ ಮಾಡಲು 3 ಕಂಠರಾಯ ಬೆಲೆಯ ಸೀಮೆ ಎಣ್ಣೆ, ಹಾರೆ ಗುದ್ದಲಿಗಳಿಗೆ 2 ಕಂಠರಾಯ, ಮಡಿಕೆ ಬಿದಿರು ಮಕ್ಕರಿ ಹಗ್ಗಕ್ಕೆ 1 ಕಂಠರಾಯ ಖರ್ಚಾಗುತ್ತಿತ್ತು. ಇಷ್ಟು ಖರ್ಚುಮಾಡಿ ತಿಂಗಳಿಗೆ 30 ಪಗೋಡಾ ಚಿನ್ನ ಹೊರತೆಗೆದರು (ಒಂದು ಪಗೋಡ : ಒಂದು ನಾಣ್ಯದಷ್ಟು ಚಿನ್ನ?). ಆ ಕಾಲದಲ್ಲಿ ಸಾಮಾನ್ಯವಾಗಿ 10–12 ಮಂದಿ ಕೂಲಿಕಾರರು ಇಂತಹ ಕೆಲಸದಲ್ಲಿ ತೊಡಗಿ ಬಾಣಲೆಗಳ ಮೂಲಕ ಅದಿರನ್ನು ತೆಗೆಯುತ್ತ ಸುಮಾರು 30 ಅಡಿ ಆಳದವರೆಗೂ ಇಳಿಯುತ್ತಿದ್ದರು. ಮಹಿಳೆಯರು ಸಾಮಾನ್ಯವಾಗಿ ಅದಿರನ್ನು ಗಟ್ಟಿ ಕಲ್ಲುಗಳ ಪುಡಿ ಮಾಡಿ ಚಿನ್ನ ಸೋಸುವ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದರು. ಈ ವಿಷಯ ತಿಳಿದ ಮೇಲೆ ಪ್ರಪಂಚದ ನಾನಾ ಕಡೆಯಿಂದ ಹಣ ತೊಡಗಿಸಲು ವ್ಯಾಪಾರಿಗಳು ಬರತೊಡಗಿದರು.[3] ಯರ್ರಕೊಂಡ ಹತ್ತಿರ ಚಿನ್ನವನ್ನು ತೋರಿಸಿದವರಿಗೆ ಬಹುಮಾನ ನೀಡುವುದಾಗಿ ಜಾನ್ ವಾರನ್ ಒಂದು ಹೇಳಿಕೆ ಕೊಟ್ಟರು. ಇದನ್ನು ಕೇಳಿದ ಒಬ್ಬ ದಲಿತ ಜನಾಂಗದ ಆಳು ಉರಿಗಾಂನಿಂದ ಚಿನ್ನವಿರುವ ಶಿಲೆಗಳನ್ನು ತಂದುಕೊಟ್ಟು ಬೇರೆ ಕಡೆ ಸಿಕ್ಕಿದರೂ ತಂದು ಕೊಡುವುದಾಗಿ ಹೇಳಿ ಹೋದ. ಅನಂತರ ವಾರನ್ ಕೂಲಿಯವರ ಸಹಾಯದಿಂದ ಕೆಲವು ದಿನಗಳು ನೆಲದ ಮೇಲಿನ ಮಣ್ಣನ್ನು ಜಾಲಾಡಿಸಿ ಸ್ವಲ್ಪ ಚಿನ್ನ ತೆಗೆಯತೊಡಗಿದರು. ಅಲ್ಲಿಂದ 6.4 ಕಿ.ಮೀ. ದಕ್ಷಿಣಕ್ಕೆ ಮಾರಿಕುಪ್ಪಂನಲ್ಲಿ ಚಿನ್ನ ದೊರಕುತ್ತದೆ ಎಂದು ತಿಳಿದು ಅಲ್ಲಿಗೆ ಹೋಗಿ ನೋಡಿದಾಗ 30 ಅಡಿ ಆಳದ ಬಾವಿ ಕಾಣಿಸಿತು. ಅದರಲ್ಲಿ ಇಳಿದು ನೋಡಿದರೆ ಉತ್ತರ–ದಕ್ಷಿಣಕ್ಕೆ ಸುರಂಗಗಳು ಕಾಣಿಸಿದವು. ಅದರಲ್ಲಿ ಇಳಿದು ಚಿನ್ನದ ಅದಿರನ್ನು ಮೇಲಕ್ಕೆ ತಂದು ಮಹಿಳೆಯರಿಂದ ಪುಡಿ ಮಾಡಿಸಿ, ಅದಕ್ಕೆ ಪಾದರಸ ಬೆರೆಸಿ ಚಿನ್ನವನ್ನು ಬೇರ್ಪಡಿಸಲಾಯಿತು.

ಜಾನ್ ವಾರನ್ ಹತ್ತಿರದ ಬೇತಮಂಗಲದ ಅಮಲ್‌ದಾರ್‌ರ ಹತ್ತಿರಹೋಗಿ ಸಮೀಕ್ಷೆ ನಡೆಸುವುದರ ಬಗ್ಗೆ ಮತ್ತು ಚಿನ್ನ ಇರುವುದರ ವಿಷಯ ಹೇಳಿದಾಗ, ಅಮಲ್‌ದಾರರು 'ಅದು ನನಗೆ ಮೊದಲೇ ಗೊತ್ತಿದೆ. ಟಿಪ್ಪುಸುಲ್ತಾನ್ 1789 ರಲ್ಲಿಯೇ ತನ್ನಲ್ಲಿದ್ದ ಒಬ್ಬ ಬ್ರಾಹ್ಮಣನನ್ನು ಕರೆಸಿ ಆ ಪ್ರದೇಶದಲ್ಲಿ ಚಿನ್ನ ತೆಗೆಯುವುದರ ಬಗ್ಗೆ ವಿವರಗಳನ್ನು ಕೇಳಿದನಂತೆ. ಆ ಬ್ರಾಹ್ಮಣ ಅದಕ್ಕೆ ಹೆಚ್ಚು ಹಣ ಬೇಕಾಗುತ್ತದೆ, ಅದಕ್ಕಿಂತ ಕೊಂಡುಕೊಳ್ಳುವುದೇ ಸರಿ ಎಂದು ಹೇಳಿದ' ಎಂಬುದಾಗಿ ಜಾನ್ ವಾರನ್‌ಗೆ ತಿಳಿಸಿದರು.[4] ಅನಂತರ ವಾರನ್ ಮದ್ರಾಸ್ ಪ್ರೆಸಿಡೆನ್ಸಿಯ ರಾಜ್ಯಪಾಲ ವಿಲಿಯಂ ಬೆಂಟಿಂಕ್‌ರನ್ನು ಭೇಟಿಯಾದಾಗ ಮೈಸೂರು ದರಬಾರಿನಲ್ಲಿದ್ದ ಬ್ರಿಟಿಷ್ ರೆಸಿಡೆನ್ಸಿ ಮಿ. ವೆಬ್ ಅವರನ್ನು ನೋಡುವಂತೆ ಸೂಚಿಸಿದರು. ವಾರನ್, ವೆಬ್‌ರನ್ನು ನೋಡಿದ ಮೇಲೆ ಸಂಶೋಧನೆಯಲ್ಲಿ

ತೊಡಗಿಕೊಂಡರು. ಆಗ ಪೂರ್ಣಯ್ಯನವರು ಮೈಸೂರು ದಿವಾನರಾಗಿದ್ದರು. ಆ ಕಾಲದಲ್ಲಿ ಹಣವನ್ನು ತಮಿಳುನಾಡಿನಲ್ಲಿ 'ಪಣಂ' ಎಂದು ಕರೆದರೆ ಮೈಸೂರಿನಲ್ಲಿ 'ಮಿಲಿ' ಎಂದು ಕರೆಯುತ್ತಿದ್ದರು.

❖❖❖

ಚಿನ್ನಕ್ಕೆ ಸಾಂದ್ರತೆ ಹೆಚ್ಚಿರುವುದರಿಂದ ಹೊಳೆ ಅಥವಾ ಬಾವಿಯ ಹತ್ತಿರ ಹೋಗಿ ಚಿನ್ನವಿರುವ ಮಣ್ಣನ್ನು ಜಾಲಿಸಿ ಚಿನ್ನ ಸೋಸುತ್ತಿದ್ದರು. ಜಲಗಾರ ಜನಾಂಗದವರು ಈ ಕೆಲಸವನ್ನು ಸಾಕಷ್ಟು ಪರಿಣತಿಯಿಂದಲೇ ಮಾಡುತ್ತಿದ್ದರು. ಸಾಮಾನ್ಯವಾಗಿ ಕೆಲಸಗಾರರ ತಂಡದ ಮೇಲ್ವಿಚಾರಕ ನವಿಲು ಸಾಗಿರುವ ಹಾದಿಯಲ್ಲಿ ಚಿನ್ನದ ಜಾಡು ಸಾಗಿದೆಯೆಂದು ತಿಳಿಸಿ ಆ ನಿಟ್ಟಿನಲ್ಲಿ ಗಣಿ ಮಾಡಲು ಸೂಚಿಸುತ್ತಿದ್ದನಂತೆ. ವಾಸ್ತವವಾಗಿ ಆ ಕಾಲದಲ್ಲಿ ಚಿನ್ನದ ಗಣಿಯನ್ನು ಸರ್ಕಾರಿ ಅಧಿಕಾರಿಗಳಿಗೆ ತೋರಿಸದೆ ಸ್ಥಳೀಯರು ಗಣಿಗಾರಿಕೆಯನ್ನು ರಹಸ್ಯವಾಗಿಯೇ ಇಡುತ್ತಿದ್ದರು. ಜಾನ್ ವಾರನ್ ಅವರಿಗೂ ಮೊದಮೊದಲು ಸ್ಥಳೀಯರು ಚಿನ್ನ ದೊರಕುತ್ತಿದ್ದ ಸ್ಥಳಗಳನ್ನು ತೋರಿಸಲಿಲ್ಲ. ಜೊತೆಗೆ ಆ ಕಾಲಕ್ಕೆ ಚಿನ್ನ ತೆಗೆಯಲು ಉಪಯೋಗಿಸುತ್ತಿದ್ದ ಸಾಮಾನು ಸರಂಜಾಮುಗಳ ಬೆಲೆ ದುಬಾರಿಯಾಗಿದ್ದುದರಿಂದ ಚಿನ್ನ ತೆಗೆಯುವ ಕೆಲಸ ಅಂತಹ ಆಕರ್ಷಕ ಕೆಲಸವೇನೂ ಆಗಿರಲಿಲ್ಲ.

12 ಮಂದಿ ದಿನವೆಲ್ಲ ಕೆಲಸ ಮಾಡಿದರೆ ಒಂದು ಸಾಧಾರಣ ಗುಂಡಿ ತೋಡಬಹುದಾಗಿತ್ತು. ಜಾನ್ ವಾರನ್ ಸಂಗ್ರಹಿಸಿದ್ದ ಚಿನ್ನದ ಪರಿಶುದ್ಧತೆಯನ್ನು ತಿಳಿದುಕೊಳ್ಳಲು ಮದ್ರಾಸಿನ ಟಂಕಸಾಲೆಗೆ ಕಳುಹಿಸಿಕೊಟ್ಟರು. ಚಿನ್ನವನ್ನು ಪರೀಕ್ಷಿಸಿದ ಮದ್ರಾಸ್ ಟಂಕಸಾಲೆ ಅದು ಅತ್ಯುತ್ತಮ ದರ್ಜೆಯ ಚಿನ್ನವೆಂದು ತಿಳಿಸಿತು. ಮಾರಿಕುಪ್ಪಂ ದಾಟಿ ಚಿನ್ನದ ಜಾಡು ಸಾಗಿದೆಯೆಂದು ದೃಢವಾಗಿ ನಂಬಿದ್ದ ವಾರನ್, ಸರ್ಕಾರ ಇದನ್ನು ಕೈಗೆತ್ತಿಕೊಳ್ಳಬೇಕೆಂದು ಶಿಫಾರಸು ಮಾಡಿದರು. ಆದರೆ ಆಗ ಸರ್ಕಾರ ಈ ಬಗ್ಗೆ ಆಸಕ್ತಿ ತೋರಲಿಲ್ಲ. ಚಿನ್ನದ ಗಣಿಗಾರಿಕೆ ರಹಸ್ಯವಾಗಿ ನಡೆಯುತ್ತಿದೆ ಎಂದು ತಿಳಿದ ಮೇಲೆ ಕಮಿಶ್‌ನರ್ ಮಾರ್ಕ್ ಕಬ್ಬನ್ ಅದನ್ನು ನಿಲ್ಲಿಸಲು ಒಂದು ಶಾಸನವನ್ನೇ ಹೊರಡಿಸಿದರು.[5]

ಮೈಕೇಲ್ ಲ್ಯಾವೆಲ್ಲೇ :

ಕರ್ನಾಟಕದಲ್ಲಿ ಚಿನ್ನಕ್ಕೂ ಸೈನ್ಯಾಧಿಕಾರಿಗಳಿಗೂ ಬಿಡಿಸಲಾಗದ ನಂಟು. ಜಾನ್ ವಾರನ್ ಮಾರಿಕುಪ್ಪಂ ಬಳಿ ಚಿನ್ನ ಸಂಗ್ರಹಿಸಿದ ಸಂಗತಿ ಬೆಂಗಳೂರಿನಲ್ಲಿ ನೆಲೆಸಿದ್ದ ಐರಿಷ್ ಸೈನಿಕ ಮೈಕೇಲ್ ಲ್ಯಾವೆಲ್ಲೇ[6] ಎಂಬುವರ ಕಿವಿಗೆ ಬಿದ್ದಿತು. ಕ್ರಿ.ಶ. 1864ರಲ್ಲಿ ಲ್ಯಾವೆಲ್ಲೇ ನ್ಯೂಜಿಲೆಂಡಿನ ಮಯೋರಿ ಅಂತರ್ ಯುದ್ಧದಲ್ಲಿ ಪಾಲ್ಗೊಂಡಿದ್ದವರು.

ಇವರು ನ್ಯೂಜಿಲ್ಯಾಂಡ್‌ನಲ್ಲಿದ್ದಾಗ ಚಿನ್ನದ ಶೋಧನೆಯಲ್ಲಿ ಪರಿಣತಿ ಪಡೆದುಕೊಂಡದ್ದು ಅಲ್ಲಿ ಯುದ್ಧ ನಿಂತ ಮೇಲೆ ಬೆಂಗಳೂರಿಗೆ ಬಂದು ನೆಲೆಸಿದ್ದರು. ಅನಂತರ ಕೆಜಿಎಫ್ ಪ್ರದೇಶದಲ್ಲಿ ಚಿನ್ನ ದೊರಕುವ ವಿಷಯ ತಿಳಿದು ಲ್ಯಾವಲ್ಲೇ ತನ್ನ ಅದೃಷ್ಟದ ಪರೀಕ್ಷೆಗಾಗಿ ಕೆಜಿಎಫ್ ಪ್ರದೇಶ ತಲುಪಿದರು. ಕ್ರಿ.ಶ. 1871 ರಲ್ಲಿ ಈ ಪ್ರದೇಶದಲ್ಲೆಲ್ಲ ಸದ್ದಿಲ್ಲದೆ ಅಲೆದಾಡಿ ಸಮೀಕ್ಷೆ ನಡೆಸಿದ ಲ್ಯಾವೆಲ್ಲೇ ಬೆಂಗಳೂರಿಗೆ ಮರಳಿ ಬಂದರು. ಕ್ರಿ.ಶ. 1873 ರಲ್ಲಿ ಚಿನ್ನದ ಗಣಿ ಮಾಡುವುದಾಗಿ ಅರ್ಜಿ ಸಲ್ಲಿಸದೆ, ಕಲ್ಲಿದ್ದಲಿಗಾಗಿ ಪರವಾನಗಿ ಬೇಡಿ ಮೈಸೂರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರು.

ಕ್ರಿ.ಶ. 1874 ಏಪ್ರಿಲ್ 14 ರಂದು ಸರ್ಕಾರ ಲ್ಯಾವೆಲ್ಲೇಗೆ ಕಲ್ಲಿದ್ದಲನ್ನು ಮಾತ್ರ ಗಣಿ ಮಾಡಲು ಪರವಾನಗಿ ನೀಡಿತು. ಕೆಜಿಎಫ್‌ನ ಈ ಭಾಗದಲ್ಲಿ ಕಲ್ಲಿದ್ದಲು ದೊರೆಯುವುದಿಲ್ಲ ಎನ್ನುವುದು ಸರಕಾರಕ್ಕೂ ಗೊತ್ತಿದ್ದು, ಲ್ಯಾವೆಲ್ಲೇ ಸರ್ಕಾರವನ್ನು ವಂಚಿಸಲು ಈ ಯೋಜನೆ ಹೂಡಿದ್ದರು ಎನ್ನುವುದು ಅರ್ಥವಾಗಿತ್ತು. ಚಿನ್ನ ತೆಗೆಯುವುದೇ ಲ್ಯಾವಲ್ಲೇ ಅವರ ಗುರಿಯಾಗಿದ್ದರಿಂದ ಸರ್ಕಾರದ ಈ ಪರವಾನಗಿಯನ್ನು ಲ್ಯಾವಲ್ಲೇ ಒಪ್ಪದೆ ದೀರ್ಘ ಪತ್ರ ವ್ಯವಹಾರ ನಡೆಸಿದರು. ಕೊನೆಗೆ ಕ್ರಿ.ಶ. 1875ರ ಫೆಬ್ರವರಿ 22 ರಂದು ಮೈಸೂರು ಸರ್ಕಾರ ಲ್ಯಾವೆಲ್ಲೇಗೆ ಚಿನ್ನದ ಗಣಿ ಮಾಡಲು ಪರವಾನಗಿ ನೀಡಿತು. ಈ ಪರವಾನಗಿಯಲ್ಲಿ ಚಿನ್ನದ ಗಣಿಗಾಗಿ 3 ವರ್ಷ ಗುತ್ತಿಗೆ ನೀಡಿ, 2 ಚದರ ಮೈಲಿಗಳ 10 ಸ್ಥಳಗಳಲ್ಲಿ ಪರಿಶೋಧಿಸುವ ಹಕ್ಕನ್ನು ನೀಡಲಾಗಿತ್ತು. ಅನಂತರ ಆಯ್ಕೆ ಮಾಡಿದ ಪ್ರತಿ ಸ್ಥಳದಲ್ಲೂ ಮುಂದೆ 20 ವರ್ಷ ಗುತ್ತಿಗೆ ಪಡೆಯುವ ಹಕ್ಕನ್ನು ಪಡೆದರು. ಈ ಹಕ್ಕನ್ನು ಪಡೆಯಲು ಲ್ಯಾವೆಲ್ಲೇ ಸರ್ಕಾರದ ಮೇಲೆ ಒತ್ತಡ ತರಲು ಅನೇಕ ಬಾರಿ ಬೆಂಗಳೂರಿಗೆ ಬಂದು ಹೋಗಬೇಕಾಯಿತು. ಲ್ಯಾವಲ್ಲೇ ಹಣದ ಮುಗ್ಗಟ್ಟು ಮತ್ತು ಸಾಕಷ್ಟು ತೊಂದರೆಗಳನ್ನು ಅನುಭವಿಸಿಬೇಕಾಯಿತು. ಕೆಜಿಎಫ್ ಗಣಿ ಬಗ್ಗೆ ಎಫ್.ಈ. ಪೆರ‍್ರಿ ಬರೆದ 'ಲಿವಿಂಗ್ ಡೇಂಜರಸ್ಲಿ' ಎಂಬ ಪುಸ್ತಕದಲ್ಲಿ ಲ್ಯಾವೆಲ್ಲೇ ಬಗ್ಗೆ ಮನೋಜ್ಞವಾಗಿ ಚಿತ್ರಿಸಲಾಗಿದೆ.

ಮೆರ್ವಿನ್ ಸ್ಮಿತ್ :

ಹಲವು ದೇಶಗಳಲ್ಲಿ ಚಿನ್ನದ ಗಣಿಗಳನ್ನು ನೋಡಿದ ಅನುಭವದಿಂದ ಭಾರತಕ್ಕೆ ಬಂದ ಮೆರ್ವಿನ್ ಸ್ಮಿತ್ ಈ ಪ್ರದೇಶದ ಪುರಾತನ ಗಣಿಗಳನ್ನು ನೋಡಿ ತಾನು ಹೋದ ಕಡೆಯಲ್ಲೆಲ್ಲ ಕೆಜಿಎಫ್ ಗಣಿಗಳ ಬಗ್ಗೆ ಪ್ರಸಾರ ಮಾಡಿದರು. ಇದರಿಂದ ಅನೇಕ ಕಂಪನಿಗಳು ಕೆಜಿಎಫ್ ಪ್ರದೇಶಕ್ಕೆ ಬರಲು ಕಾರಣವಾಯಿತು.

ಕೋಲಾರ್ ಕನ್‌ಸೆಪ್ಷನರೀಸ್ :

ಲ್ಯಾವೆಲ್ಲೇ ಬಹುಕಾಲ ಚಿನ್ನದ ಬೆನ್ನು ಹತ್ತಿದರೂ ಕ್ರಿ.ಶ. 1876ರಲ್ಲಿ ತನ್ನ ಗಣಿ ಹಕ್ಕನ್ನು ಮದ್ರಾಸ್‌ನ ಸ್ಟೆಫ್ ಕಾರ್ಪ್ಸ್‌ನ ಜನರಲ್ ಡಿ.ಎಲ್. ಬಿರಸ್‌ಫರ್ಡ್ ಮತ್ತು ಅರ್ಬುತನಾಥ್ ಕಂಪನಿಯ ಎ. ಮೆಕೆಂಜಿ ಅವರಿಗೆ ಮಾರಿ ಕೈ ತೊಳೆದುಕೊಂಡುಬಿಟ್ಟರು. ಮರುವರ್ಷ ಮೆಕೆಂಜಿ, ಬಿರಸ್‌ಫರ್ಡ್‌ಗೆ ಗಣಿಗಾರಿಕೆಯನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟುಬಿಟ್ಟರು. ಆಗ ಬಿರಸ್‌ಫರ್ಡ್ ಒಂದು ಸಿಂಡಿಕೇಟ್ ಮಾಡಿಕೊಂಡು ಅದಕ್ಕೆ 'ಕೋಲಾರ್ ಕನ್‌ಸ್ಷನರೀಸ್' ಎಂಬ ಹೆಸರು ಕೊಟ್ಟು ಅದರ ಮೇಲೆ 5000 ಪೌಂಡ್ ಬಂಡವಾಳ ಹೂಡಿದರು. ಈ ಸಿಂಡಿಕೇಟ್, ಆಸ್ಟ್ರೇಲಿಯಾದಿಂದ ಇಬ್ಬರು ಗಣಿ ತಜ್ಞರನ್ನು ನೇಮಕ ಮಾಡಿಕೊಂಡು ಗಣಿ ಕೆಲಸ ಪ್ರಾರಂಭಿಸಿತು. ಆದರೆ ಬಂಡವಾಳ ಬಹುಬೇಗ ಚಿನ್ನದಂತೆ ಕರಗಿಹೋಯಿತು. ಮತ್ತೆ ಬಂಡವಾಳ ಎತ್ತಿ ಗಣಿ ಮುಂದುವರೆಸಿದಾಗ ಸ್ವಲ್ಪ ತೃಪ್ತಿದಾಯಕ ಫಲ ದೊರಕಿ ಕ್ರಿ.ಶ. 1879ರಲ್ಲಿ ಸ್ವಲ್ಪ ಪ್ರಮಾಣದ ಚಿನ್ನ ದೊರೆಯಿತು. ಇದರಿಂದ ಉತ್ತೇಜನಗೊಂಡ ಮದ್ರಾಸಿನ ಉರಿಗಾಂ ಕಂಪನಿ 10000 ಪೌಂಡ್ ಬಂಡವಾಳದೊಡನೆ ಅಸ್ತಿತ್ವಕ್ಕೆ ಬಂದಿತು. ಈ ವಿಷಯ ತಿಳಿದಿದ್ದೆ ಅತ್ತ ವೈನಾಡಿನಲ್ಲಿ ಚಿನ್ನದ ಮೇಲೆ ಹಣ ತೊಡಗಿಸಿ ಕೈ ಸುಟ್ಟುಕೊಂಡಿದ್ದ ಅನೇಕ ಮಂದಿ ಕೆಜಿಎಫ್ ಪ್ರದೇಶದ ಕಡೆಗೆ ಧಾವಿಸಿ ಬಂದರು.

ಕ್ರಿ.ಶ. 1880 ರಲ್ಲಿ ಮೈಸೂರು ಗಣಿ ಕಂಪನಿ 1,35,000 ಪೌಂಡ್ ಬಂಡವಾಳ ಹೂಡಿದರೆ, ನಂದಿದುರ್ಗ ಕಂಪನಿ 1,00,000 ಪೌಂಡ್ ಬಂಡವಾಳದೊಂದಿಗೆ ತಲೆ ಎತ್ತಿತು. ಇವುಗಳು ಕಾರ್ಯಾಚರಣೆ ನಡೆಯುತ್ತಿದ್ದುದು ಲಂಡನ್‌ನಲ್ಲಿ. 11 ಕಂಪನಿಗಳು ಈ ಪ್ರದೇಶದಲ್ಲಿ ಗಣಿಗಳನ್ನು ಮಾಡಲು ತೊಡಗಿಸಿದ ಒಟ್ಟು ಬಂಡವಾಳ 1,200,000 ಪೌಂಡ್. ಕ್ರಿ.ಶ. 1880ರ ಡಿಸೆಂಬರ್ ತಿಂಗಳಲ್ಲಿ ಉರಿಗಾಂ ಕಂಪನಿ 20 ಟನ್ ಕಲ್ಲು ಅರೆದು 42 ಔನ್ಸ್ 7 ಚಿನ್ನ ಉತ್ಪಾದಿಸಿ ಕರ್ನಾಟಕದಲ್ಲಿ ಚಿನ್ನದ ಉದ್ದಿಮಕ್ಕೆ ನಾಂದಿ ಹಾಡಿತು. ಒಂದು ಔನ್ಸ್ : 28.32 ಗ್ರಾಂ.

ಜಾನ್ ಟೇಲರ್ : ಆಧುನಿಕ ಗಣಿಗಳ ಪಿತಾಮಹ :

ಬ್ರಿಟನ್ನಿನ ಜಾನ್ ಟೇಲರ್ ಆಧುನಿಕ ಗಣಿಗಳ ಪಿತಾಮಹ. ಕೆಜಿಎಫ್ ಉದ್ದಿಮೆ ಪ್ರಾರಂಭವಾದ ಕೆಲವೇ ವರ್ಷಗಳಲ್ಲಿ ನೆಲ ಕಚ್ಚುವ ಪರಿಸ್ಥಿತಿಯನ್ನು ತಲುಪಿತ್ತು. ಕ್ರಿ.ಶ. 1883ರಲ್ಲಿ ಲಂಡನ್ನಿನ ಕನಾಟ್ ಸ್ಟ್ರೀಟ್ ಹೋಟಲಿನಲ್ಲಿ ಜರುಗಿದ ಶೇರುದಾರರ ಸಭೆಯಲ್ಲಿ ಮೈಸೂರು ಚಿನ್ನದ ಗಣಿ ವಿಷಯ ಮುಚ್ಚುವ ಹಂತ ತಲುಪಿತ್ತು. ಆಗ ಉಳಿದಿದ್ದ ಬಡವಾಳ ಕೇವಲ 13000 ಪೌಂಡ್ ಮಾತ್ರ. ಆದರೆ ಗಣಿಗಳ ಮುಖ್ಯಸ್ಥ ಜಾನ್ ಟೇಲರ್ ಉಳಿದಿದ್ದ ಬಂಡವಾಳವನ್ನು ಹಂಚುವುದಕ್ಕೆ ಅವಕಾಶ ಕೊಡದೆ,

ಮೈಸೂರು ಗಣಿಯನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಲು ಪ್ರೇರೇಪಿಸಿದರು. ಆ ಸಭೆಯಲ್ಲಿ ಗಣಿ ತಜ್ಞ ಕ್ಯಾ. ಪ್ಲೂಮರ್ ಕೂಡ ಇದ್ದು ಅವರು ತಮ್ಮ ಕೆಲವು ಹೊಸ ಆಲೋಚನೆಗಳನ್ನು ಸಭೆಯಲ್ಲಿ ಹೇಳಿ ಶೇರುದಾರರನ್ನು ಒಪ್ಪಿಸುವಲ್ಲಿ ಸಫಲರಾಗಿ ಜಾನ್ ಟೇಲರ್ ಅವರಿಗೆ 'ಕೆಜಿಎಫ್‌ಗೆ ಒಳ್ಳೆ ದಿನಗಳು ಬರಲಿವೆ' ಎಂಬ ಭವಿಷ್ಯವನ್ನು ನುಡಿದರು. ಮುಂದೆ ಜಾನ್ ಟೇಲರ್, ಕ್ಯಾ.ಪ್ಲೂಮರ್ ಮತ್ತು ಗಣಿ ಎಂಜಿನಿಯರ್ ಡಬ್ಲ್ಯೂ. ಬೆಲ್‌ಡೇವಿಸ್‌ರನ್ನು ಕೆಜಿಎಫ್‌ಗೆ ಕರೆದುಕೊಂಡು ಬಂದಾಗ ಬಾಲ್ಘಾಟ್ ಗಣಿಯ ಹಳೆ ಸುರಂಗದಲ್ಲಿ ಚಿನ್ನದ ಅದಿರಿನ ಕ್ವಾರ್ಟ್‌ಝ್ ಶಿಲೆ ದೊರಕಿತ್ತು.

❖❖❖

ಮಾರಿಕುಪ್ಪಂನ ಹಳೆ ಗಣಿ ಒಂದರಲ್ಲಿ 173 ಅಡಿಗಳ ಕೆಳಗೆ ಪ್ಲೂಮರ್ ಹಿಂದಿನ ತಂತ್ರಜ್ಞರು ಮಾಡಿಸಿದ್ದ ಸುರಂಗಗಳಿಗೆ ವಿರುದ್ಧ ದಿಕ್ಕಿನಲ್ಲಿ ಒಂದು ಸುರಂಗ ತೋಡಿಸಿದರು. ಆ ಸುರಂಗ ಒಂದು ಹಳೆ ಗಣಿಗೆ ದಾರಿಯಾಗಿತ್ತು. ಸುರಂಗಗಳು ಕುಸಿಯದಂತೆ ಸ್ಟೋಪ್‌ಗಳಲ್ಲಿ ಶಿಲಾಸ್ತಂಭಗಳನ್ನು ಬಿಟ್ಟಿದ್ದು ಆ ಸ್ತಂಭಗಳಲ್ಲಿ ಟನ್ನಿಗೆ 4 ಔನ್ಸ್ ಚಿನ್ನ ಇರುವ ಅದಿರು ಶಿಲೆಗಳು ಇದ್ದವು. ಅದನ್ನು ತೆಗೆದುಕೊಂಡು ಗಣಿಗಳನ್ನು ಇನ್ನಷ್ಟು ಆಳಕ್ಕೆ ಇಳಿಸಲಾಯಿತು. ಇಲ್ಲಿಂದ ಕೆಜಿಎಫ್ ಚಿನ್ನದ ಗಣಿಗಳ ಭಾಗ್ಯದ ಬಾಗಿಲು ತೆರೆದುಕೊಂಡಿತು. ಕ್ರಿ.ಶ. 1885ರ ಹೊತ್ತಿಗೆ 24000 ಪೌಂಡ್ ಮೌಲ್ಯದ 6,000 ಔನ್ಸ್ ಚಿನ್ನವನ್ನು ಈ ಗಣಿಗಳಿಂದ ಉತ್ಪಾದಿಸಲಾಯಿತು. ಕ್ರಿ.ಶ. 1902 ರಲ್ಲಿ ಜಾನ್ ಟೇಲರ್ ನಿವೃತ್ತಿಯಾದಾಗ ಅವರಿಗೆ 50 ಔನ್ಸ್[7] ತೂಕ ಚಿನ್ನದ ಕಾಫಿ ಬಟ್ಟಲನ್ನು ನೆನಪಿನ ಕಾಣಿಕೆಯಾಗಿ ಸಂಸ್ಥೆಯಿಂದ ನೀಡಲಾಯಿತು.

ಲಿಟ್ಲ್ ಇಂಗ್ಲೆಂಡ್ :

ಕೆಜಿಎಫ್ ಪ್ರದೇಶವನ್ನು ಬ್ರಿಟಿಷರು ಮೊದಲಿಗೆ 'ಲಿಟ್ಲ್ ಇಂಗ್ಲೆಂಡ್' ಎಂದು ಕರೆದರು. ಕಾರಣ ಇಲ್ಲಿನ ತಂಪು ಹವಾಮಾನ ಮತ್ತು ಭೌಗೋಳ ಬ್ರಿಟನ್ ಮಾದರಿಯಲ್ಲೇ ಇತ್ತು. ಬ್ರಿಟಿಷರ ಸಾಮ್ರಾಜ್ಯ 'ಸೂರ್ಯ ಮುಳುಗದ ಸಾಮ್ರಾಜ್ಯ' ಎಂಬ ಬಿರುದು ಪಡೆಯಲು ಕೋಲಾರ ಚಿನ್ನವೂ ಕಾರಣವಾಗಿತ್ತು. ಅಂದರೆ ಬ್ರಿಟಿಷ್ ದೇಶ, ಬ್ರಿಟಿಷ್ ರಾಜರು ಮತ್ತು ರಾಣಿಯರು ಪ್ರಪಂಚದಾದಂತ್ಯ ಮೆರೆಯಲು ಕೆಜಿಎಫ್ ಚಿನ್ನ ಕಾರಣವಾಗಿತ್ತು. ಆ ಚಿನ್ನವನ್ನು ಮೊಗೆದು ಕೊಟ್ಟವರು ಕೆಜಿಎಫ್‌ನ ಕಪ್ಪು ಕಾರ್ಮಿಕರು. ಒಂದು ಶತಮಾನಕ್ಕಿಂತ ಹೆಚ್ಚು ಕಾಲ ಬ್ರಿಟನ್ ದೇಶದ ರಾಜ–ರಾಣಿಯರನ್ನು ಈ ಕಪ್ಪು ಜನರು ಚಿನ್ನದಿಂದ ಸಿಂಗರಿಸಿದ ಡೋಳಿಯಲ್ಲಿ ಹೊತ್ತು ಪ್ರಪಂಚದಾದ್ಯಂತ ಮೆರೆಸಿದ್ದರು. ಕಾಕತಾಳೀಯವೆಂಬಂತೆ ಭಾರತಕ್ಕೆ ಸ್ವಾತಂತ್ರ್ಯ ನೀಡಿ ಇಲ್ಲಿಂದ ಕಾಲುಕಿತ್ತ ಬ್ರಿಟಿಷ್ ಸಾಮ್ರಾಜ್ಯ ಅನಂತರದ ದಿನಗಳಲ್ಲಿ ತನ್ನ ವರ್ಚಸ್ಸನ್ನು ಕಳೆದುಕೊಂಡಿತ್ತು. ಒಟ್ಟಾರೆ

ಕೆಜಿಎಫ್ ಚಿನ್ನದಿಂದ ಭಾರತ ದೇಶದ ಅಭಿವೃದ್ಧಿಗಿಂತ ಬ್ರಿಟನ್ ದೇಶ ಅಭಿವೃದ್ಧಿ ಹೊಂದಿದ್ದೇ ಹೆಚ್ಚು. ದಾಖಲೆಗಳ ಪ್ರಕಾರ ಉತ್ಪಾದನೆಯಾದ 800 ಟನ್ನುಗಳ ಚಿನ್ನದಲ್ಲಿ ಬ್ರಿಟನ್ ಹೊತ್ತೊಯ್ದ ಚಿನ್ನ 650 ಟನ್ನುಗಳು.

ಸರ್. ಹಾಜಿ ಇಸ್ಮೈಲ್ ಸೇಠ್ :

ಮೊದಲಿಗೆ ಬ್ರಿಟಿಷರ ಮನೆಗಳಿಗೆ ಎಲ್ಲಾ ರೀತಿಯ ವಸ್ತುಗಳನ್ನು ಸರಬರಾಜು ಮಾಡುತ್ತಿದ್ದ ಇವರು, ಚಾಂಪಿಯನ್ ರೈಲು ನಿಲ್ದಾಣದ ಹಿಂದೆ ಇಂಗ್ಲೆಂಡ್ ವೇರ್‌ಹೌಸ್‌ನ್ನು ಸ್ಥಾಪಿಸಿದ್ದರು. ಇಂಗ್ಲೆಂಡಿನಿಂದ ಎಲ್ಲಾ ರೀತಿಯ ಫ್ಯಾನ್ಸಿ ವಸ್ತುಗಳು, ಬಟ್ಟೆ, ಲಿಕ್ಕರ್, ಎಲೆಕ್ಟ್ರಾನಿಕ್ ಮತ್ತು ಇನ್ನಿತರ ಸಾಮಾನುಗಳು ಬರುತ್ತಿದ್ದವು. ಇದರಿಂದ ಸಾಕಷ್ಟು ಹಣ ಮಾಡಿದ ಸೇಠ್ ಬೆಂಗಳೂರಿನ ಇಂದಿರಾನಗರದಲ್ಲಿ ಟಿಬಿ ಆಸ್ಪತ್ರೆ, ವೈಟ್ ಫೀಲ್ಡ್ ಹತ್ತಿರ ಮಸೀದಿ, ಕೆಜಿಎಫ್‌ನಲ್ಲಿ ಒಂದು ಕನ್ನಡ ಶಾಲೆ, ಮುನಿಸಿಪಲ್ ಮೈದಾನ ಮಾಡಿಸಿದರು. ಗುತ್ತಿಗೆ ಪಡೆದು ಮೈನಿಂಗ್ ಮನೆಗಳನ್ನು ಕಟ್ಟಿಸಿದರು. 1895 ರಲ್ಲಿ ದೊಡ್ಡ ಕ್ಷಾಮ ತಲೆದೋರಿದಾಗ ಬಡವರಿಗೆ ಗಂಜಿ ಕೇಂದ್ರಗಳನ್ನು ಸ್ಥಾಪಿಸಿದ್ದರು. ದವಸ ಧಾನ್ಯಗಳನ್ನು ಬೇರೆ ದೇಶಗಳಿಂದ ತರಿಸಿ ಕಡಿಮೆ ಬೆಲೆಗೆ ವಿತರಿಸಿದ್ದರು. ಸೇಠ್ ಸ್ವತಃ ಅನಕ್ಷರಸ್ತರಾದರೂ 13 ಐರೋಪ್ಯ ಭಾಷೆಗಳು ಮತ್ತು ಭಾರತದ ಎಲ್ಲಾ ಭಾಷೆಗಳನ್ನು ಮಾತನಾಡುತ್ತಿದ್ದರು ಎನ್ನಲಾಗಿದೆ. ಇವರಿಗೆ ಸರ್. ನೈಟ್‌ಹುಡ್ ಜೊತೆಗೆ ಅನೇಕ ಬಿರುದುಗಳನ್ನು ನೀಡಿ ಗೌರವಿಸಲಾಗಿತ್ತು. ಮದನಪಲ್ಲಿಯಲ್ಲಿ ಸೇಠ್ ಅವರು ತಾವೇ ಸ್ಥಾಪಿಸಿದ್ದ ಸ್ಯಾನಿಟೋರಿಯಂ ಆಸ್ಪತ್ರೆಯಲ್ಲಿ 1940ರಲ್ಲಿ ಸಾವನ್ನಪ್ಪಿದರು.

ಗಣಿಗಳ ಪ್ರಾಥಮಿಕ ದಿನಗಳು :

ಆಧುನಿಕ ಕೆಜಿಎಫ್ ಗಣಿಗಳು ಪ್ರಾರಂಭವಾದಾಗ ಇಲ್ಲಿ ಯಾವ ಮೂಲ ಸೌಕರ್ಯಗಳೂ ಇರಲಿಲ್ಲ. ಕಪ್ಪು ಸುರಂಗಗಳಲ್ಲಿ ಕಾರ್ಯನಿರ್ವಹಿಸುವಾಗ ಮುಖ್ಯವಾಗಿ ಗಾಳಿ, ಬೆಳಕು ಇರಲೇಬೇಕು. ಗಣಿಗಳು ಆಳಕ್ಕೆ ಇಳಿದಂತೆ ಆಮ್ಲಜನಕ ಕಡಿಮೆಯಾಗುತ್ತಾ ಹೋಗಿ ಒತ್ತಡ ಹೆಚ್ಚುತ್ತದೆ. ಈ ಕಾರಣದಿಂದ ಸರಾಸರಿ 100 ಮೀ. ಆಳಕ್ಕೆ ಒಂದು ಸೆಂಟಿಗ್ರೇಡ್ ಉಷ್ಣತೆ ಹೆಚ್ಚುತ್ತದೆ. ಪ್ರಾರಂಭದಲ್ಲಿ ಕಾರ್ಮಿಕರು ಸುರಂಗಗಳಲ್ಲಿ ಬಟ್ಟೆಗಳಿಲ್ಲದೆ ಬರೀ ದೇಹಗಳಲ್ಲಿ ಹರಳೆಣ್ಣೆ ಮತ್ತು ಹೊಂಗೆ ಎಣ್ಣೆ ದೀಪಗಳನ್ನು ಉರಿಸುತ್ತ ಉಳಿಗಳಿಂದ ಜಂಪರ್ ಹೊಡೆಯುತ್ತ ಕೆಲಸ ಮಾಡುತ್ತಿದ್ದರು. ಅನಂತರ ಅದರಲ್ಲಿ ಗನ್ ಪುಡಿಯನ್ನು ತುಂಬಿ ಬ್ಲಾಸ್ಟಿಂಗ್ ಮಾಡಿ ಶಿಲೆಗಳನ್ನು ಸಿಡಿಸುತ್ತಿದ್ದರು. ಎಣ್ಣೆ ದೀಪಗಳ ನಂತರ ಕ್ಯಾಂಡಲುಗಳು, ಅನಂತರ ಕಾರ್ಬೈಡ್ ಲ್ಯಾಂಪ್‌ಗಳು, ಕೊನೆಯದಾಗಿ ಹೆಲ್ಮೆಟ್‌ಗಳ ಮೇಲೆ ಸಿಕ್ಕಿಸಿಕೊಳ್ಳುವ ಬ್ಯಾಟರಿ ಲ್ಯಾಂಪುಗಳು ಬಂದವು.

ಕಾರ್ಮಿಕರಿಗಾಗಿ ಆಸ್ಪತ್ರೆ, ಶಾಲೆ, ಕಾಲೇಜುಗಳು, ಪುಸ್ತಕ ಭಂಡಾರಗಳು, ಆಟದ ಮೈದಾನಗಳು, ನಿರ್ಮಿಸಲಾಯಿತು. ಕೆಜಿಎಫ್ ಗಣಿಗಳಲ್ಲಿ ಯಾವುದೇ ಕಾಲದಲ್ಲೂ 18 ವರ್ಷಗಳ ಒಳಗಿನ ಯುವಕರನ್ನು ಗಣಿಗಳ ಒಳಗೆ ಕೆಲಸ ಮಾಡಲು ಬಿಡಲಿಲ್ಲ. ಗಣಿಗಳಿಂದ ವಿಷ ಅನಿಲ ಹೊರಹೊಮ್ಮುತ್ತಿದೆಯೇ ಎಂಬುದನ್ನು ಪರೀಕ್ಷಿಸಲು ಪಾರಿವಾಳಗಳನ್ನು ಬುಟ್ಟಿಯಲ್ಲಿ ಹಾಕಿ ಗಣಿಗಳ ಒಳಗೆ ಒಯ್ಯಲಾಗುತ್ತಿತ್ತು. ಒಂದು ಗಂಟೆಯ ಬಳಿಕ ಬುಟ್ಟಿಯನ್ನು ಮೇಲಕ್ಕೆ ತಂದಾಗ ಪಾರಿವಾಳಗಳು ಸುರಕ್ಷಿತವಾಗಿದ್ದರೆ ಮಾತ್ರ ಕಾರ್ಮಿಕರನ್ನು ಗಣಿಗಳ ಒಳಕ್ಕೆ ಇಳಿಸಲಾಗುತಿತ್ತು. ಗುತ್ತಿಗೆದಾರರು ಕೆಲಸದ ವೇಳೆಯನ್ನು ನಿಗದಿಪಡಿಸಿರಲಿಲ್ಲ. ಸಾಮಾನ್ಯವಾಗಿ ಸೂರ್ಯ ಮೂಡುವ ಮುನ್ನ ಪ್ರತಿಯೊಬ್ಬರೂ ಗುಂಪಿನ ಜೊತೆಗೆ ಹೋಗಿ ಸಾಯಂಕಾಲದ ಹೊತ್ತಿಗೆ ಗಣಿಗಳಿಂದ ಮೇಲಕ್ಕೆ ಬರುತ್ತಿದ್ದರು.

ಆ ಕಾಲಕ್ಕೆ ಕೆಲಸಗಾರರನ್ನು ಮತ್ತು ಚಿನ್ನದ ಅದಿರನ್ನು ಹೊತ್ತೊಯ್ಯುತ್ತಿದ್ದ ಕಬ್ಬಿಣ ಬಕ್ಕೆಟ್ಟುಗಳು ಸುರಕ್ಷಿತವಾಗಿರಲಿಲ್ಲ. ಎಷ್ಟೋ ವರ್ಷಗಳ ನಂತರ ಕಬ್ಬಿಣ ಪಂಜರಗಳು ಮತ್ತು ಉಕ್ಕಿನ ರಾಟೆಗಳು ಬಂದವು. ಶಿಲಾಸ್ಫೋಟಗಳ ಭಯವಂತೂ ಕಾರ್ಮಿಕರನ್ನು ಯಾವಾಗಲೂ ಕಾಡುತ್ತಲೇ ಇರುತ್ತಿತ್ತು. ಗಣಿಗಳ ಒಳಗೆ ಕೆಲಸ ನಿರ್ವಹಿಸುವ ಕೂಲಿಕಾರರು ಯಾವುದೇ ತರಬೇತಿ ಇಲ್ಲದೆ ಕೆಲಸವನ್ನು ನಿರ್ವಹಿಸುವುದು ಇನ್ನಷ್ಟು ಅಪಾಯವಾಗಿತ್ತು. ಗುತ್ತಿಗೆದಾರರು ಮತ್ತು ಮೇಲ್ವಿಚಾರಕರು ಕೂಲಿಕಾರರ ಸುರಕ್ಷತೆಗಿಂತ ಕೆಲಸದ ಬಗ್ಗೆಯೆ ಹೆಚ್ಚು ನಿಗಾವಹಿಸುತ್ತಿದ್ದರು. ಆ ಕಾಲಕ್ಕೆ ಕಾರ್ಮಿಕರ ಕಲ್ಯಾಣ ಸಂಘಗಳು ಅಥವಾ ಗಣಿ ಕಾನೂನುಗಳು ಇಲ್ಲದ ಕಾರಣದಿಂದ ಕಾರ್ಮಿಕರು ಅಪಘಾತಕ್ಕೊಳಗಾದರೂ, ಪ್ರಾಣ ಕಳೆದುಕೊಂಡರೂ ಯಾವುದೇ ಪರಿಹಾರ ದೊರಕುತ್ತಿರಲಿಲ್ಲ.

❖❖❖

ಗಣಿ ಮಾಡುವುದೆಂದರೆ ಕಷ್ಟದ ಕೆಲಸ. ನೆಲದ ಕೆಳಗೆ ಅದೊಂದು ಕತ್ತಲ ಜಗತ್ತು. ಅಲ್ಲಿ ನೂರಾರು ಸುರಂಗಗಳು, ಅನೇಕ ರೀತಿಯ ಯಂತ್ರ ಸಂಕೀರ್ಣಗಳು, ಎಲೆಕ್ಟ್ರಿಕ್ ಜನರೇಟರುಗಳು, ತಂಪು ಸ್ಥಾವರಗಳು, ನೀರನ್ನು ಮೇಲಕ್ಕೆ ಎತ್ತಲು ಹಲವು ಹಂತಗಳಲ್ಲಿ ಕೂರಿಸಿರುವ ಹೆಚ್ಚು ಸಾಮರ್ಥ್ಯದ ಪಂಪುಗಳು, ವಿದ್ಯುತ್ ಕೇಬಲುಗಳು, ನೀರಿನ ಪೈಪುಗಳು, ವೆಂಟಿಲೇಟರುಗಳು ಹೀಗೆ ಇನ್ನೂ ಅನೇಕ ರೀತಿಯ ಸಾಧನಗಳಿರುತ್ತವೆ. ಒಟ್ಟಿನಲ್ಲಿ ಅತ್ಯಂತ ಗಟ್ಟಿ ಶಿಲೆಗಳಾದ ಆಂಫಿಬೋಲೈಟ್ ಮಧ್ಯೆ ಸಿಕ್ಕಿಕೊಂಡಿರುವ ಬೂದು ಬಣ್ಣದ ಕ್ವಾರ್ಟ್ಝ್ ಶಿಲೆಗಳ ಜೊತೆಗೆ ಸಾವಿರಾರು ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುತ್ತಾರೆ.

ಇಷ್ಟು ಮಾಡುವುದಕ್ಕೆ ಮುಂಚೆ ಶ್ಯಾಫ್ಟ್‌ಗಳನ್ನು ಆಳಕ್ಕೆ ಇಳಿಸಿ ಗಟ್ಟಿಯಾದ ಮರ ಅಥವಾ ಇಟ್ಟಿಗೆಗಳಿಂದ ಲೈನಿಂಗ್ ಮಾಡಬೇಕು. ಕೆಲವು ಶ್ಯಾಫ್ಟ್‌ಗಳು ಪ್ರಪಂಚದಲ್ಲೇ ಅತ್ಯಂತ ಆಳವಾದವು. ಈ ಶ್ಯಾಫ್ಟ್‌ಗಳಲ್ಲಿ ನೂರು ಅಡಿಗಳಿಗೊಂದು ನಿಲ್ದಾಣವಿದ್ದು ಇಲ್ಲಿಂದ ದಿಕ್ಕುದಿಕ್ಕುಗಳಿಗೆ ಸುರಂಗಗಳು ತೆರೆದುಕೊಳ್ಳುತ್ತವೆ. ಸುರಂಗಗಳನ್ನು ಮಾಡುತ್ತಿದ್ದಂತೆ ಗೋಡೆಗಳಿಗೆ ಕಬ್ಬಿಣ ಮತ್ತು ಉಕ್ಕು ಪಟ್ಟಿಗಳು, ರಿವೆಟ್‌ಗಳು, ಮರದ ದಿಮ್ಮಿಗಳನ್ನು ಆಧಾರವಾಗಿ ಕೊಡಲಾಗುತ್ತಿತ್ತು. ಪ್ರತಿಯೊಂದು ಶ್ಯಾಫ್ಟ್ ಮೇಲೆಯೂ ದೈತ್ಯಾಕಾರದ ಉಕ್ಕು ಚಕ್ರಗಳು, ಸುತ್ತುವ ಉಕ್ಕು ಹಗ್ಗಗಳು, ಅದಕ್ಕೆ ಕಟ್ಟಿದ ಉಕ್ಕು ಪಂಜರಗಳು ನಿರಂತರ ಕೆಲಸದಲ್ಲಿ ತೊಡಗಿರುತ್ತಿದ್ದವು. ಈ ಪಂಜರಗಳು ಕಾರ್ಮಿಕರನ್ನು ಮತ್ತು ಯಂತ್ರಗಳನ್ನು ಗಣಿಗಳ ಒಳಗಿಂದ ಮೇಲಕ್ಕೆ, ಮೇಲಿಂದ ಕೆಳಕ್ಕೆ ಹಗಲು ರಾತ್ರಿ ಎನ್ನದೇ ಸಾಗಿಸುತ್ತಲೇ ಇರುತ್ತವೆ. ಹಾಗೆ ಪ್ರತಿ ದಿನವೂ ಸಾವಿರಾರು ಟನ್ನುಗಳ ಅದಿರನ್ನು ಭೂಗರ್ಭದಿಂದ ಹೊರಕ್ಕೆ ಸಾಗಿಸುತ್ತಿರುತ್ತವೆ.

ಕತ್ತಲ ಜಗತ್ತನ್ನು ಸೀಳಿಕೊಂಡು ಬೆಳಕೇ ಕಾಣದ ಭೂಗರ್ಭದಲ್ಲಿ ಮೇಣದ ಬತ್ತಿ, ಕಾರ್ಬೈಡ್ ಲ್ಯಾಂಪು/ಹೆಡ್‌ಲ್ಯಾಂಪ್‌ಗಳ ಮೂಲಕ ಬೆವರು ಬಸಿಯುವ ಕಾರ್ಮಿಕರು ಕತ್ತಲಲ್ಲಿ ಅವರವರ ದಾರಿಗಳಲ್ಲಿ ತೆವಳುತ್ತಾ, ನುಸುಳುತ್ತಾ ಚಿನ್ನವಿರುವ ಶಿಲೆಗಳನ್ನು ಡ್ರಿಲ್ ಮಾಡಿ, ಸಿಡಿಮದ್ದನ್ನು ತುರುಕಿ, ಸ್ಫೋಟಮಾಡಿ ಶಿಲೆಗಳನ್ನು ಬಾಚಿ ಟ್ರ್ಯಾಲಿಗಳು ಮತ್ತು ರೈಲುಗಳಲ್ಲಿ ತುಂಬಿ ತುಂಬಿ ಸಾಗಿಸುತ್ತಿರುತ್ತಾರೆ. ಪ್ರಾರಂಭದ ದಿನಗಳಲ್ಲಿ ಎತ್ತಿನ ಗಾಡಿಗಳನ್ನು ಕಟ್ಟಿ ಮಿಲ್ಲುಗಳಿಗೆ ಅದಿರನ್ನು ಸಾಗಿಸಿ ದೊಡ್ಡ ದೊಡ್ಡ ರುಬ್ಬ ಕಲ್ಲುಗಳಿಂದ ರುಬ್ಬಲಾಗುತ್ತಿತ್ತು. ಅನಂತರದ ದಿನಗಳಲ್ಲಿ ವಿದ್ಯುತ್ ಟ್ರ್ಯಾಲಿಗಳನ್ನು ಮತ್ತು ಹೊಸ ಮಿಲ್ಲನ್ನು ಸ್ಥಾಪಿಸಲಾಯಿತು.

ಮೇಲಿಂದ ತಂಪು ಸ್ಥಾವರಗಳು ಎಷ್ಟೇ ತಂಪು ಗಾಳಿಯನ್ನು ಗಣಿಗಳ ಒಳಕ್ಕೆ ದೂಡಿದರೂ ಆ ಗಾಳಿ ಸುರಂಗಗಳನ್ನು ತಲುಪುವುದರೊಳಗೆ 55 ಡಿಗ್ರಿ ಸೆಲ್ಸಿಯಸ್ ಬಿಸಿ ಏರುತ್ತಿತ್ತು. ಯಾವುದೇ ಗಣಿಯಲ್ಲೂ ಪಂಜರಗಳು ಕೊನೆಯ ಹಂತದವರೆಗೂ ಇಳಿಯುವ ಸೌಕರ್ಯವಿರಲಿಲ್ಲ. ಹಾಗಾಗಿ ಕೊನೆ ಹಂತಗಳಲ್ಲಿ ಕೆಲಸ ಮಾಡುವವರು ಇನ್ನಷ್ಟು ಆಳ ಬಕ್ಕೆಟ್ಟುಗಳಲ್ಲಿ, ಏಣಿಗಳ ಮೂಲಕ, ಉಯ್ಯಾಲೆ, ತೊಟ್ಟಿಲುಗಳು, ಸಂದು-ಗೊಂದಿಗಳು, ಬಿರುಕು-ನೆರಿಕೆಗಳಲ್ಲಿ ತೆವಳಿ, ಬಿಸಿ ನೀರಿನಲ್ಲಿ ಹಾಯ್ದು ಕೆಲಸ ಮಾಡುವ ಸ್ಥಳಕ್ಕೆ ತಲುಪಬೇಕಿತ್ತು. ಹೀಗೆ ಹೋಗುವಾಗ ಶಿಲೆಗಳಿಗೆ ತಲೆ ಬಡಿದು, ಇಲ್ಲ ಶಿಲೆಗಳು ಉರುಳಿ ಬಿದ್ದು, ಜಾರಿಬಿದ್ದು ಕಾರ್ಮಿಕರು ಸಾಯುವುದು ಸರ್ವೆಸಾಮಾನ್ಯವಾಗಿತ್ತು.

❖❖❖

ಮೊದಲಿಗೆ ತರಬೇತಿ ಇಲ್ಲದ ಕಾರ್ಮಿಕರು ನಡೆಸುವ ಯಂತ್ರಗಳಿಂದ, ಗಣಿಗಳ

ಒಳಗೆ ಕುಸಿಯುವ ಶಿಲೆಗಳಿಂದ, ಶಿಲಾಸ್ಫೋಟಗಳಿಂದ ಮತ್ತು ಇನ್ನಿತರ ಅಜಾಗರೂಕತೆಗಳಿಂದ ಕಾರ್ಮಿಕರು ಪ್ರಾಣ ಕಳೆದುಕೊಳ್ಳುತ್ತಿದ್ದರು. ಅನಂತರ ಸಾರ್ವಜನಿಕರ ಸಹಕಾರ ಮತ್ತು ಅಧಿಕಾರಿಗಳ ಜೊತೆಗಿನ ಮಾತುಕತೆಗಳಿಂದ ಕೆಲವು ಮುಂಜಾಗರೂಕತೆಯ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಕ್ರಿ.ಶ. 1898 ರಲ್ಲಿ ರಾಜ್ಯ ಸರಕಾರ ಮತ್ತು ಗಣಿ ಆಡಳಿತ ಒಟ್ಟುಗೂಡಿ ಕೆಲವು ಸುರಕ್ಷಿತ ಕಾಯಿದೆಗಳನ್ನು ನಿಗದಿಪಡಿಸಿತು. ಆದರೂ ಅದು ಚಾಲನೆಗೆ ಬಂದಿದ್ದು ಕ್ರಿ.ಶ. 1932 ರಲ್ಲಿ. ಬ್ರಿಟನ್ ತನ್ನ ದೇಶದಲ್ಲಿ ಸುರಕ್ಷಿತ ಕಾನೂನನ್ನು ಕ್ರಿ.ಶ. 1842 ರಿಂದಲೇ ಅಳವಡಿಸಿಕೊಂಡಿತ್ತು. ಇದಾದ ಎಷ್ಟೋ ವರ್ಷಗಳ ನಂತರ ಬ್ರಿಟಿಷ್, ಭಾರತದಲ್ಲಿ ಕ್ರಿ.ಶ. 1901 ರಲ್ಲಿ ಗಣಿ ಅನುಸಂಧಾನವನ್ನು ಅನುಷ್ಠಾನಕ್ಕೆ ತಂದಿತು. ಭಾರತವನ್ನು, ಬ್ರಿಟಿಷ್ ಸರಕಾರ ಆಳುತ್ತಿದ್ದರೂ ಮೈಸೂರು ಪ್ರಾಂತ್ಯ ರಾಜರ ಆಡಳಿತದಲ್ಲಿತ್ತು. ಮೈಸೂರು ರಾಜ್ಯ ದೇಶದಲ್ಲಿಯೇ ಪ್ರಥಮ ಬಾರಿಗೆ ಮೇಲಿನ ಕಾನೂನನ್ನು ಅಳವಡಿಸಿಕೊಂಡಿತು.

ಮೈಸೂರು ಡಿಪಾರ್ಟ್‌ಮೆಂಟ್ ಆ್ಯಕ್ಟ್‌ನ್ನು ಗಣಿ ಮತ್ತು ಭೂವಿಜ್ಞಾನ ವಿಭಾಗದ ಕೆಳಗೆ ಅಳವಡಿಸಿಕೊಳ್ಳಲಾಯಿತು. ಈ ವಿಭಾಗದಿಂದ ಒಬ್ಬ ಅಧಿಕಾರಿಯನ್ನು ಕೆಜಿಎಫ್‌ನಲ್ಲಿ ಖಾಯಂ ಆಗಿ ನೇಮಿಸಿಕೊಳ್ಳಲಾಯಿತು. ದಿನಗಳು ಕಳೆದಂತೆ ಅನೇಕ ಹೊಸ ಹೊಸ ನಿಯಮಗಳನ್ನು ಅಳವಡಿಸಿಕೊಳ್ಳುತ್ತ ಅಧಿಕಾರಿಗಳು ಮತ್ತು ಸಹಾಯಕರನ್ನು ನೇಮಿಸಿಕೊಳ್ಳಲಾಯಿತು. ಮುಖ್ಯ ಅಧಿಕಾರಿಯ ದರ್ಜೆಯನ್ನು ಚೀಫ್ ಇನ್‌ಸ್ಪೆಕ್ಟರ್ ಆಫ್ ಮೈನ್ಸ್ ಆಂಡ್ ಎಕ್ಸ್‌ಪ್ಲೋರೇಷನ್ ಎಂದು ಕರೆಯಲಾಯಿತು. ಕೆಜಿಎಫ್‌ನಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರಿಗೆ ದೇಶದಲ್ಲಿಯೇ ಪ್ರಥಮ ಬಾರಿಗೆ ಕಾರ್ಮಿಕರ ಸುರಕ್ಷತಾ ಹೆಲ್ಮೆಟ್‌ಗಳು, ಬೂಟುಗಳು, ಕನ್ನಡಕಗಳು, ಸಮವಸ್ತ್ರಗಳು ಇನ್ನಿತರ ವಸ್ತುಗಳನ್ನು ನೀಡಲಾಯಿತು. ಅಲ್ಲಲ್ಲಿ ಸುರಂಗಗಳಲ್ಲಿ ದೊಡ್ಡದೊಡ್ಡ ಫ್ಯಾನುಗಳನ್ನು ಅಳವಡಿಸಲಾಯಿತು.

ದಕ್ಷಿಣ ಆಫ್ರಿಕಾದ ಟ್ರಾನ್ಸ್‌ವಾಲ್ ಚಿನ್ನದ ಗಣಿಗಳಲ್ಲಿ ಸಂಭವಿಸುತ್ತಿದ್ದ ಅಪಘಾತಗಳ ಪಟ್ಟಿಯನ್ನು ಅನುಕರಿಸಿ ಕೆಜಿಎಫ್‌ನಲ್ಲಿ ಪಟ್ಟಿಯನ್ನು ತಯಾರಿಸಲಾಯಿತು. ಕೆಜಿಎಫ್ ಗಣಿಗಳ ಮೇಲೆ ಮತ್ತು ಒಳಗೆ ನಡೆದ ಅಪಘಾತಗಳನ್ನು ದಕ್ಷಿಣ ಆಫ್ರಿಕಾದ ಚಿನ್ನದ ಗಣಿ ಕಾರ್ಮಿಕರ ಅಪಘಾತಗಳಿಗೆ ಹೋಲಿಸಿ ನೋಡಲಾಯಿತು. ಮೈನ್ಸ್ ಇನ್‌ಸ್ಪೆಕ್ಟರ್, ಡಾ॥ ಜೆ. ಡಬ್ಲೂ ಇವಾನ್ಸ್ ಒಂದು ಕಡೆ ಹೀಗೆ ದಾಖಲಿಸಿದ್ದಾರೆ. 'ಆಫ್ರಿಕಾದ ಕಾರ್ಮಿಕರು ಕಡಿಮೆ ಓದಿದವರಾಗಿದ್ದು, ತಮ್ಮ ದೃಢ ದೇಹದಾರ್ಢ್ಯದಿಂದ ಹೆಚ್ಚು ಉತ್ಪಾದನೆಯನ್ನು ಮಾಡಿದರೆ, ಕೆಜಿಎಫ್ ಕಾರ್ಮಿಕರು ತಮ್ಮ ಕುಶಲತೆಯಿಂದ ಅದಕ್ಕಿಂತ ಹೆಚ್ಚು ಗುಣಮಟ್ಟನ್ನು ಕಾಯ್ದುಕೊಂಡಿದ್ದಾರೆ. ಜೊತೆಗೆ ಇಲ್ಲಿ ಅಪಘಾತಗಳು ಕೂಡ ಕಡಿಮೆ'. ದೇಶಕ್ಕೆ ಸ್ವಾತಂತ್ರ್ಯ ಬಂದು ರಾಜರ ಆಡಳಿತ ಕೊನೆಗೊಂಡ ಮೇಲೆ ಸುರಕ್ಷಿತ ಕಾನೂನುಗಳು ಕೇಂದ್ರ ಆಡಳಿತಕ್ಕೆ ಒಳಪಟ್ಟವು. ಕ್ರಿ.ಶ. 1952 ರಲ್ಲಿ ಕೆಜಿಎಫ್‌ನ[illegible] ವಲಯ ಕಚೇರಿ ಪ್ರಾರಂಭವಾಗಿ

ಚೀಫ್ ಇನ್ಸ್‌ಪೆಕ್ಟರನ್ನು ನೇಮಿಸಲಾಯಿತು. ಅನಂತರ ಇವರನ್ನು ಚೀಫ್ ಇನ್ಸ್‌ಪೆಕ್ಟರ್ ಆಫ್ ಮೈನ್ಸ್ ಎಂದು ಕರೆಯಲಾಯಿತು.

❖❖❖

ಕೆಜಿಎಫ್ ಗಣಿಗಳಲ್ಲಿ ಚಾಂಪಿಯನ್ ಗಣಿಗಳು ಅತ್ಯಂತ ಆಳವಾದ ಗಣಿಗಳಾಗಿದ್ದು, 3,230 ಮೀ. ಆಳ ಇಳಿದಿವೆ. ಕೆಜಿಎಫ್‌ನ ಎಲ್ಲಾ ಶ್ಯಾಫ್ಟ್‌ಗಳು, ಸುರಂಗಗಳು, ಹಿಂಜುಗಳು ಮತ್ತು ರೈಸುಗಳನ್ನು ಒಟ್ಟು ಕೂಡಿಸಿದಾಗ 1647 ಕಿ.ಮೀ. ಉದ್ದವಾಗುತ್ತದೆ. ಒಂದು ಸುರಂಗದಿಂದ ಇನ್ನೊಂದು ಸುರಂಗಕ್ಕೆ ಹೋಗುವ ಒಟ್ಟು ಒಳದಾರಿಗಳ ಉದ್ದ 200 ಕಿ.ಮೀ. ನೆಲದ ಮೇಲೆ 55 ಶ್ಯಾಫ್ಟ್‌ಗಳಿದ್ದು ಗಣಿಗಳ ಒಳಗೆ 26 ಒಳಶ್ಯಾಫ್ಟ್‌ಗಳು ಇರುವುದಾಗಿ ತಿಳಿದುಬರುತ್ತದೆ. ಈ ಎಲ್ಲಾ ಗಣಿಗಳು 8 ಕಿ.ಮೀ ಉದ್ದ ಮತ್ತು 2 ಕಿ.ಮೀ ಅಗಲವಾಗಿ ನೆಲದಿಂದ 100 ಅಡಿಗಳು ಕೆಳಗೆ ಹಾಸಿಕೊಂಡಿವೆ. ಮೇಲೆ 100 ಅಡಿ ನೆಲವನ್ನು ಮಾತ್ರ ಬಿಡಲಾಗಿದೆ. ಉತ್ತರದ ಗೋಲ್ಕೊಂಡ ಗಣಿಯಲ್ಲಿ ಇಳಿದರೆ 8 ಕಿ.ಮೀ ದೂರದಲ್ಲಿರುವ ದಕ್ಷಿಣದ ಚಾಂಪಿಯನ್ ಗಣಿಯಲ್ಲಿ ಮೇಲಕ್ಕೆ ಬರಬಹುದು. ಗಣಿಗಳ ಚರಿತ್ರೆಯಲ್ಲಿ ಸುಮಾರು 7000 ಕಾರ್ಮಿಕರು ಅಸುನೀಗಿರುವುದಾಗಿ ತಿಳಿದುಬರುತ್ತದೆ. ಸುಮಾರು 16,000 ಕಾರ್ಮಿಕರು ಅಪಘಾತಗಳಲ್ಲಿ ತೀವ್ರವಾಗಿ ಗಾಯಗೊಂಡು ಅಂಗವಿಕಲರಾಗಿದ್ದಾರೆ.

ಗಣಿಗಳ ಮೂಲ ಯೋಜನೆ :

ಮೊದಲಿಗೆ ದಕ್ಷಿಣದ ಬಿಸಾನತ್ತಂನಿಂದ ಉತ್ತರದ ಕೃಷ್ಣಾಪುರಂವರೆಗೆ 40 ಹಳೆ ಗಣಿಗಳನ್ನು ಕಂಡುಹಿಡಿದು ಅವುಗಳನ್ನು 5 ಮುಖ್ಯ ವಲಯಗಳಾಗಿ ವಿಭಾಗಿಸಿ ಅವುಗಳ ವ್ಯಾಪ್ತಿಯನ್ನು ನೆಲದ ಮೇಲೆ ಮತ್ತು ಭೂಮಿಯ ಒಳಗೆ ಗುರುತಿಸಲಾಯಿತು. ಅನಂತರ ಈ ಗಣಿಗಳಿಗೆ ಪ್ರತ್ಯೇಕ ಯಂತ್ರಗಳು, ಹೆಡ್‌ಗಿಯರ್, ಮಿಲ್ಲು, ಲ್ಯಾಬೊರೇಟರಿ ಮತ್ತು ಪ್ರತ್ಯೇಕ ಆಡಳಿತಗಳನ್ನು ಸ್ಥಾಪಿಸಲಾಯಿತು. ಎಲ್ಲಾ ಗಣಿಗಳನ್ನು ಸಂಪರ್ಕಿಸಲು ರಸ್ತೆಗಳನ್ನು ಮಾಡಲಾಯಿತು. ಈ ರಸ್ತೆಗಳಿಗೆ ಬ್ರಿಟಿಷ್ ಅಧಿಕಾರಿಗಳು ಮತ್ತು ಶೇರುದಾರರ ಹೆಸರುಗಳನ್ನು ನೀಡಲಾಯಿತು. 1859 ರಲ್ಲಿ ಕರ್ನಲ್ ಮಾರ್ಕ್‌ಕಬ್ಬನ್ ಜ್ವಾಲಾರಪೇಟೆ–ಬೆಂಗಳೂರಿನ ಮಧ್ಯೆ ರೈಲು ಹಳಿಗಳನ್ನು ಹಾಕಿ ಕೆಜಿಎಫ್‌ಗೆ ಹತ್ತಿರವಿದ್ದ ಒಂದು ಸ್ಥಳದಲ್ಲಿ ನಿಲ್ದಾಣವನ್ನು ಸ್ಥಾಪಿಸಿದರು. ಈ ಸ್ಥಳವೇ ಈಗಿನ ಬಂಗಾರಪೇಟೆ. ಈ ಪ್ರದೇಶದಲ್ಲಿ ಆಡಳಿತ ನಡೆಸುತ್ತಿದ್ದ ಕಮೀಷನರ್ ಲೆವಿನ್ ಬೆಂಥಮ್ ಬೌರಿಂಗ್ ಅವರ ಹೆಸರೇ ಈ ಪಟ್ಟಣಕ್ಕೆ ಅಂಟಿಕೊಂಡಿತು. ಮೊದಲಿಗೆ ಬೌರಿಂಗ್‌ಪೇಟೆ ಎಂದು ಕರೆಯುತ್ತಿದ್ದ ಪಟ್ಟಣ ಅನಂತರ ಬಂಗಾರಪೇಟೆ ಆಯಿತು.

ಇಂಗ್ಲೆಂಡಿನಿಂದ ಬಂದ ಯಂತ್ರಗಳನ್ನು ಬಂಗಾರಪೇಟೆ ಮತ್ತು ಕಾಮಸಮುದ್ರಂ

ರೈಲು ನಿಲ್ದಾಣಗಳಿಂದ ಉಕ್ಕಿನಗಾಲಿ ಬಂಡಿಗಳಲ್ಲಿ ಹತ್ತಾರು ಜೊತೆ ಎತ್ತುಗಳನ್ನು ಕಟ್ಟಿ ಕೆಜಿಎಫ್ ಪ್ರದೇಶಕ್ಕೆ ತರಲಾಯಿತು. ಗಣಿಗಳನ್ನು ಮೊದಲಿಗೆ ಬಾವಿಗಳ ರೀತಿಯಲ್ಲಿ ತೋಡಲಾಯಿತು. ಗಣಿಗಳ ಮೇಲೆ ಹೆಡ್‌ಗಿಯರನ್ನು ತೇಗು ಮರಗಳಲ್ಲಿ ನಿರ್ಮಿಸಲಾಗುತ್ತಿತ್ತು. ಶಾಫ್ಟ್‌ಗಳು ಮೊದಲಿಗೆ (incline) ಇಳಿಜಾರು ರೀತಿಯಲ್ಲಿದ್ದು ಕಾರ್ಮಿಕರು ಗಣಿಗಳ ಒಳಗೆ ಇಳಿಯುವುದು, ಹತ್ತುವುದು, ಅದಿರು ಸಾಗಿಸುವುದು ತುಂಬಾ ಕಷ್ಟವಾಗುತ್ತಿತ್ತು. ಅನಂತರ 18 ಅಡಿ ಸುತ್ತಳತೆಯ (vertical) ನೇರವಾದ ಶ್ಯಾಫ್ಟ್‌ಗಳನ್ನು ಮಾಡಲಾಯಿತು. ಒಳಗಡೆ ಸುರಂಗಗಳಲ್ಲಿ ಅದಿರನ್ನು ಸಣ್ಣ ಸಣ್ಣ ರೈಲುಗಳಲ್ಲಿ ಸಾಗಿಸಿ ಮೇಲಕ್ಕೆ ತರಲಾಯಿತು. ಮೊದಲ 20 ವರ್ಷಗಳಲ್ಲಿ ಕಂಪನಿಗೆ ಬೇಕಾದ ಕಬ್ಬಿಣ, ಉಕ್ಕು, ಮರ, ಕಲ್ಲಿದ್ದಲು, ಸುಣ್ಣ, ಕಟ್ಟಡಗಳಿಗೆ ಬೇಕಾದ ಸಾಮಾನುಗಳನ್ನು ದೇಶದ ಮೂಲೆಮೂಲೆಗಳಿಂದ ತರಸಿಕೊಳ್ಳಲಾಯಿತು. ಯಂತ್ರಗಳು, ಆಹಾರ ಪದಾರ್ಥಗಳು, ಬಟ್ಟೆ, ಲಿಕ್ಕರ್ ಮಾತ್ರ ಇಂಗ್ಲೆಂಡಿನಿಂದಲೇ ಬರುತ್ತಿತ್ತು.

ಗಣಿಗಳು ಪ್ರಾರಂಭವಾದಾಗ ಗಣಿಗಳನ್ನು ಎಲ್ಲಿ ತೆಗೆಯಬೇಕು? ಹೇಗೆ ಮಾಡಬೇಕು? ಮಣ್ಣು ಮತ್ತು ಶಿಲೆಗಳು ಕುಸಿಯದಂತೆ ಇರಲು ಯಾವ ವಸ್ತುಗಳನ್ನು ಆಧಾರ ಕೊಡಬೇಕು? ಎನ್ನುವುದು ಗೊತ್ತಿಲ್ಲದೆ ಅನೇಕ ಅಪಘಾತಗಳು ಸಂಭವಿಸಿ ನೂರಾರು ಕಾರ್ಮಿಕರು ಸಾವನ್ನಪ್ಪಿದ್ದರು. 1897 ರಲ್ಲಿ ಜಾನ್ ಟೇಲರ್ ಹೆಸರಿನ ಶ್ಯಾಫ್ಟ್‌ನಲ್ಲಿ ಶಿಲೆಗಳ ಕುಸಿತದಿಂದ ಒಂದೇ ಸಲಕ್ಕೆ 52 ಕಾರ್ಮಿಕರು ಅಗಾಧ ಶಿಲೆಗಳ ಕೆಳಗೆ ಸಿಕ್ಕಿಕೊಂಡರು. ಎಷ್ಟೋ ದಿನಗಳು ಕಾರ್ಮಿಕರನ್ನು ಗಣಿ ಒಳಗಿನಿಂದ ತೆಗೆಯಲು ಸಾಧ್ಯವಾಗಲಿಲ್ಲ. ಹಲವು ತಿಂಗಳು ಆ ಶ್ಯಾಫ್ಟ್‌ನ್ನು ಮುಚ್ಚಲಾಗಿತ್ತು. ಕಾರ್ಮಿಕರ ಹೆಣ್ಣುಮಕ್ಕಳು, ಮತ್ತು ಅವರ ಕುಟುಂಬದವರು ಆ ಶ್ಯಾಫ್ಟ್ ಹತ್ತಿರ ದಿನಗಟ್ಟಲೆ ಅತ್ತೂಕರೆದು ಗೋಳಾಡಿ ಸುಮ್ಮನಾಗಿದ್ದರು.

ಈ ಅಪಘಾತದ ನಂತರ ಹಲವು ತಿಂಗಳು ಕಾಲ ಕೆಲಸಕ್ಕೆ ಯಾರೂ ಬರಲಿಲ್ಲ. ಇದರಿಂದ ಕಂಪನಿಗೆ ಬಹಳ ನಷ್ಟವಾಗಿ ಚೀನಾ, ದಕ್ಷಿಣ ಆಫ್ರಿಕಾ, ಜಾಂಬಿಯಾ ದೇಶಗಳಿಂದ ಏಜಂಟರ ಮೂಲಕ ಕಾರ್ಮಿಕರನ್ನು ತರಲು ವ್ಯವಸ್ಥೆ ಮಾಡಲಾಯಿತು. ಈ ಏಜಂಟರು ಪ್ರಪಂಚದಾದ್ಯಂತ ಬ್ರಿಟಿಷ್ ವಸಾಹತು ಕಾಲೋನಿಗಳಿಗೆ ಕೂಲಿಗಳನ್ನು ಸರಬರಾಜು ಮಾಡುತ್ತಿದ್ದರು. ಬೇರೆ ದೇಶಗಳಿಂದ ಕಾರ್ಮಿಕರು ಬರುವ ವಿಷಯ ತಿಳಿದ ಕೆಜಿಎಫ್ ಕಾರ್ಮಿಕರು ವಿಧಿಯಿಲ್ಲದೆ ಮತ್ತೆ ಕೆಲಸಕ್ಕೆ ಹಾಜರಾದರು. ಚೀನಾ ಮತ್ತು ಆಫ್ರಿಕಾ ದೇಶಗಳಿಂದ ಕಾರ್ಮಿಕರು ಬರದಂತೆ ತಡೆ ಹಿಡಿಯಲಾಯಿತು. ಒಂದು ವೇಳೆ ಅವರೆಲ್ಲ ಬಂದಿದ್ದರೆ ಕೆಜಿಎಫ್‌ನಲ್ಲಿ ಆಂಗ್ಲೋ-ಇಂಡಿಯನ್ನರ ಬದಲಿಗೆ ಇಂಡೋ-ಚೀನಾ, ಇಂಡೋ-ಆಫ್ರಿಕಾ ಪ್ರಭೇಧಗಳ ಜನರು ಹುಟ್ಟಿಕೊಳ್ಳುತ್ತಿದ್ದರು.

ಬೆಂಕಿಯೊಡನೆ ಹೋರಾಟ :

ನೆಲದಿಂದ 110 ಅಡಿ ಆಳ ಗಣಿಯ ಒಳಗೆ ಇಳಿದರೆ ಉಷ್ಣಾಂಶ 1 ಡಿಗ್ರಿ ಫ್ಯಾ ಲೀಟ್ ಹೆಚ್ಚುತ್ತದೆ. 10,000 ಅಡಿ ಆಳದಲ್ಲಿ ಸರಾಸರಿ ಉಷ್ಣಾಂಶ 71 ಡಿಗ್ರಿ ಸೆಲ್ಸಿಯಸ್ ಇರುತ್ತದೆ. 1 ಗಂಟೆ ಸಮಯ ಕೆಲಸ ಮಾಡುವುದೂ ಅಸಾಧ್ಯ. ನೆಲದ ಮೇಲಿನಿಂದ ಹೆಚ್ಚು ಸಾಮರ್ಥ್ಯದ ಕಾಂಪ್ರೆಸರ್‌ಗಳಿಂದ ವೆಂಟಿಲೇಟರ್‌ಗಳ ಮೂಲಕ ತಂಪು ಹವೆಯನ್ನು ದೂಡಲಾಗುತ್ತಿತ್ತು. ಆದರೆ ಆ ಹವೆ ನೂರಾರು ಅಡಿಗಳ ಆಳದ ಅಂಕುಡೊಂಕು ಸುರಂಗಗಳ ಮೂಲಕ 10,000 ಅಡಿ ಆಳ ತಲುಪುವಷ್ಟರಲ್ಲಿ ಬೆಂಕಿಯಾಗುತ್ತಿತ್ತು. ಎಷ್ಟೋ ಕಾರ್ಮಿಕರು ಬೆವರು, ಸೆಕೆ ಮತ್ತು ಆಯಾಸದಿಂದ ಮೂರ್ಛೆ ಹೋಗುತ್ತಿದ್ದರು. ಈ ಕಾರಣದಿಂದಲೂ ಅಪಘಾತಗಳು ಸಂಭವಿಸುತ್ತಿದ್ದವು. ಗಣಿ ಸುರಕ್ಷತೆಯ ಬಗ್ಗೆ ಸ್ವಲ್ಪ ತಿಳಿವಳಿಕೆ ಬಂದಿದ್ದೆಂದರೆ 1937ರ ನಂತರ. ಇದೇ ವರ್ಷ ಎಲ್.ಹೆಚ್. ಮೇಫಳಗನ್ ಎಂಬವರು ಗಣಿ ಕಾರ್ಮಿಕರ ಮೇಲೆ ಒಂದು ಸಾಕ್ಷ್ಯ ಚಿತ್ರವನ್ನು ತೆಗೆದಿದ್ದರು. ಅದರಲ್ಲಿ ಕಾರ್ಮಿಕರು ಗಣಿ ಒಳಗೆ ಹೇಗೆ ಇಳಿಯಬೇಕು? ಒಳಗೆ ಸುರಕ್ಷಿತವಾಗಿ ಕೆಲಸ ಮಾಡಿ ಮತ್ತೆ ಹೇಗೆ ಹಿಂದಿರುಗಬೇಕು ಎಂದು ತೋರಿಸಲಾಗಿತ್ತು.

ಉಷ್ಣದ ಬಗ್ಗೆ ಮೊದಲ ಬಾರಿಗೆ ರೋಂ ದೇಶದ ಅಧಿಕಾರಿಗಳು 2000 ವರ್ಷಗಳ ಹಿಂದೆ ವಿವಿಧ ಪರಿಸ್ಥಿತಿಗಳಲ್ಲಿ ಯೋಧರು ದೇಹದ ಉಷ್ಣತೆಯನ್ನು ಮೀರಿ ಹೊರಗಿನ ಹವಾಗುಣಕ್ಕೆ ಹೊಂದಿಕೊಳ್ಳಲು ಏನು ಮಾಡಬೇಕೆಂದು ಯೋಚಿಸಿದ್ದರು. ಹಿಪೋಕ್ರೆಟ್ ಕೂಡ ಅದೇ ಕಾಲಕ್ಕೆ ಮನುಷ್ಯ ದೇಹ ಮತ್ತು ವಾತಾವರಣದ ನಡುವಿನ ವ್ಯತ್ಯಾಸದ ಬಗ್ಗೆ ವಿವರಿಸಲು ಪ್ರಯತ್ನ ಪಟ್ಟಿದ್ದರು. ಗಣಿ ವಿಜ್ಞಾನದ ಮೊದಲ ಕೃತಿ 'ಮೆಟಲಿಕಾ' ದಲ್ಲಿ ಅಗ್ರಿಕೋಲಾ ಡಿ–ರಿ ಅವರು 'ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಒಳ್ಳೆ ಗಾಳಿ ಮತ್ತು ವಿಶ್ರಾಂತಿಗಾಗಿ ನಿಲ್ದಾಣಗಳು ಇರಬೇಕು' ಎಂದಿದ್ದಾರೆ.

19ನೇ ಶತಮಾನದ ಪ್ರಾರಂಭದಲ್ಲಿ ಕೆಲಸ ನಡೆಯುವ ಕಾರ್ಖಾನೆಗಳ ಸ್ಥಳಗಳಲ್ಲಿ ತೇವಾಂಶದ ಪ್ರಮಾಣ ಎಷ್ಟಿರಬೇಕೆಂದು ವಿಚಾರ ಮಾಡಲಾಯಿತು. 20ನೇ ಶತಮಾನದ ಮೊದಲ ಭಾಗದಲ್ಲಿ ಗಣಿಗಳ ಒಳಗೆ ತೇವಾಂಶ ಎಷ್ಟಿದ್ದರೆ ಕೆಲಸ ಮಾಡಲು ಸಾಧ್ಯ ಎಂದು ನಿರ್ಧರಿಸಲಾಯಿತು. ಗಣಿಗಳು ಆಳ ಹೋದಷ್ಟೂ ಉಷ್ಣತೆ ಹೆಚ್ಚುತ್ತಾ ಹೋಗುತ್ತದೆ. ಕಾರ್ಮಿಕರ ಉಸಿರಾಟದಿಂದ ಆಮ್ಲಜನಕ, ಕಾರ್ಬನ್ ಡೈಯಾಕ್ಸೈಡ್ ಆಗಿ ಪರಿವರ್ತನೆಯಾಗುತ್ತದೆ. ಗಣಿಗಳ ಒಳಗೆ ಶಿಲಾ ಒತ್ತಡದಿಂದಲೂ ಉಷ್ಣಾಂಶ ಹೆಚ್ಚುತ್ತದೆ. ಅದು ಕೆಜಿಎಫ್‌ನಲ್ಲಿ ಮೊದಲ 5000 ಅಡಿಗಳವರೆಗೆ 170 ಅಡಿಗಳಿಗೆ 1 ಡಿಗ್ರಿ ಫ್ಯಾ ಲೀಟ್ ಮತ್ತು 5000–9000 ಅಡಿಗಳವರೆಗೆ ಪ್ರತಿ 115 ಅಡಿಗಳಿಗೆ 1 ಡಿಗ್ರಿ ಫ್ಯಾ ಲೀಟ್ ಹೆಚ್ಚುತ್ತಾ ಹೋಗುತ್ತದೆ.

ಮನುಷ್ಯನ ದೇಹದಲ್ಲಿ ಶಕ್ತಿ ಪರಿವರ್ತನೆಯಾಗಲು ಸಾಕಷ್ಟು ಉಷ್ಣತೆ ಬೇಕಾಗುತ್ತದೆ. ಮನುಷ್ಯ ಸುಮ್ಮನೆ ಇದ್ದಾಗಲೂ ದೇಹದಲ್ಲಿ ಪ್ರಕ್ರಿಯೆಗಳು ನಡೆಯುತ್ತಿದ್ದು, ಶ್ರಮದ ಕೆಲಸದಲ್ಲಿ ತೊಡಗಿದ್ದಾಗ ದೇಹದಲ್ಲಿ ಇನ್ನೂ ಹೆಚ್ಚು ಉಷ್ಣತೆ ಉತ್ಪನ್ನವಾಗುತ್ತದೆ. ಸಾಧಾರಣ ಸಮಯದಲ್ಲಿ ದಿನಕ್ಕೆ 2500–3000 ಕೆ–ಕಾಲ್ ಉಷ್ಣವಿದ್ದರೆ, ದುಡಿಯುತ್ತಿದ್ದಾಗ ದಿನಕ್ಕೆ ಅದು 6000 ಕೆ–ಕಾಲ್‌ವರೆಗೂ ಹೆಚ್ಚುತ್ತದೆ. ದೇಹದಿಂದ ಉಷ್ಣ ಹೊರಕ್ಕೆ ಹೋಗದೆ ಇದ್ದಾಗ 1 ಗಂಟೆಗೆ 1 ಡಿಗ್ರಿ ಸೆ. ಗ್ರೇಡ್ ಉಷ್ಣ ಹೆಚ್ಚುತ್ತದೆ. ಒಬ್ಬ ಸಾಮಾನ್ಯ ಮನುಷ್ಯನ ದೇಹದ ಉಷ್ಣ 37 ಡಿಗ್ರಿ ಸೆಲ್ಸಿಯಸ್ ಇರುತ್ತದೆ. ಕಾರ್ಮಿಕರ ದೇಹದಿಂದ ಉಷ್ಣ ಹೊರ ಹೊಮ್ಮುವುದರಿಂದ ಸುತ್ತಲಿನ ವಾತಾವರಣದಲ್ಲೂ ಉಷ್ಣ ಹೆಚ್ಚುತ್ತದೆ. ದೇಹದ ಒಳಗಿನ ಉಷ್ಣವನ್ನು ರಕ್ತ ಸ್ವಲ್ಪ ಮಟ್ಟಿಗೆ ತೆಗೆದುಕೊಂಡರೆ, ರಕ್ತದ ಉಷ್ಣವನ್ನು ಚರ್ಮ ತೆಗೆದುಕೊಳ್ಳುತ್ತದೆ. ಕೊನೆಗೆ ಚರ್ಮದ ಉಷ್ಣವೂ ವಾತಾವರಣ ಸೇರುತ್ತದೆ. ಉಸಿರಾಟದಿಂದಲೂ ಉಷ್ಣತೆ ಹೊರಹೊಮ್ಮುತ್ತದೆ. ಇದೆಲ್ಲ ಕಾರಣಗಳಿಂದ ಸುರಂಗಗಳಲ್ಲಿ ಉಷ್ಣ ಹೆಚ್ಚುತ್ತದೆ.

ದೇಹದಲ್ಲಿ ಉತ್ಪತ್ತಿಯಾಗುತ್ತಿರುವ ತಾಪಮಾನಕ್ಕಿಂತ ಹೆಚ್ಚು ತಾಪಮಾನ ಹೊರಹೊಮ್ಮಿದಾಗ ಚರ್ಮ ಹೊರಹೋಗದಂತೆ ತಡೆಯುತ್ತದೆ. ಆಗ ದೇಹ ಚಳಿಯನ್ನು ತಡೆದುಕೊಳ್ಳಲು ದೇಹದ ತಾಪಮಾನವನ್ನು ಹೆಚ್ಚಿಸಿಕೊಳ್ಳುತ್ತದೆ. ಕೆಲಸ ಮಾಡುವ ಸ್ಥಳ 0 ಡಿಗ್ರಿಯಿಂದ ಕೂಡಿದ್ದಾಗ ದೇಹದ ಉಷ್ಣತೆ ಹೆಚ್ಚುವುದಿಲ್ಲ. ಆದರೆ 15 ನಿಮಿಷ ಅದೇ ಸ್ಥಳದಲ್ಲಿದ್ದರೆ ದೇಹದ ತಾಪಮಾನ 39 ಡಿಗ್ರಿ ಸೆಲ್ಸಿಯಸ್ ಹೆಚ್ಚುತ್ತದೆ. ಆಗ ಅಲ್ಲಿಂದ ಬೇರೆ ಸ್ಥಳಕ್ಕೆ ಹೋಗಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಆಳದ ಗಣಿಗಳಲ್ಲಿ 8 ಗಂಟೆ ಕೆಲಸ ಮಾಡುವುದು ಶೋಚನೀಯ. ಕಾಪ್ಲಾನ್ ಮತ್ತು ಲಿಂಡ್ಸೆ ಸಂಶೋಧನೆಯ ಪ್ರಕಾರ ಸ್ಥಳೀಯ ಕಾರ್ಮಿಕರು ಉಷ್ಣತೆ ಮತ್ತು ತೇವಾಂಶದೊಳಗೆ ಕೆಲಸ ಮಾಡುವುದನ್ನು ಕೆಳಗಿನಂತೆ ವಿವರಿಸಿದ್ದರು.

ಉಷ್ಣಾಂಶ ಸೆ. ಡಿಗ್ರಿಗಳಲ್ಲಿ	ಕಾರ್ಯ ಸಮರ್ಥತೆ ೮ ಗಂಟೆ ಶೇಕಡ
೩೦.೨–೨೯.೬	೯೦
೩೨.೫–೩೧.೨	೮೦
೩೩.೭–೩೨.೨	೭೦
೩೪.೭–೩೩.೦	೬೦
೩೫.೫–೩೪.೭	೫೦
೩೬.೨–೩೪.೩	೪೦
೩೬.೭–೩೫.೯	೩೦

೩೭.೨-೩೫.೩	೨೦
೩೭.೨-೩೫.೮	೧೦
೩೭.೨-೩೬.೨	೦

37.2 ಸೆ. ಡಿಗ್ರಿ ಉಷ್ಣಾಂಶದಲ್ಲಿ ಕಾರ್ಮಿಕರು 8 ಗಂಟೆಗಳಲ್ಲಿ 1 ಗಂಟೆಗಿಂತ ಹೆಚ್ಚು ಕೆಲಸ ಮಾಡಲು ಅಸಾಧ್ಯ. ಈ ಪರಿಸ್ಥಿತಿಯಲ್ಲಿ ಕಾರ್ಮಿಕರಿಗೆ ಪ್ರತಿ ದಿನ ಖನಿಜಗಳ ಸಲೈನ್ ಮಿಶ್ರಿತ ನೀರು ನೀಡಬೇಕೆಂದು ಇದೇ ವರದಿಯಲ್ಲಿ ಕಾಪ್ಲಾನ್ ಮತ್ತು ಲಿಂಡ್ಸೆ ಅವರು ಹೇಳಿದ್ದರು. ಆದರೆ ಕಂಪನಿ ಯಾವ ಕಾಲದಲ್ಲೂ ನೀಡಲಿಲ್ಲ.[9] ಕಾರ್ಮಿಕರಿಗೆ ದೊರಕುತ್ತಿದ್ದ ಟಾನಿಕ್‌ಗಳೆಂದರೆ ಸಾರಾಯಿ ಮತ್ತು ಗಂಜಿನೀರು.

ಪಿ. ಬೋಸ್‌ವರ್ತ್ ಸ್ಮಿತ್ (1888–89)[10] :

1902ರಲ್ಲಿ ಜಾನ್ ವಾರನ್ ಉರಿಗಾಂ ಮತ್ತು ಮಾರಿಕುಪ್ಪಂ ಹಳೆ ಗಣಿಗಳನ್ನು ಸಮೀಕ್ಷೆ ನಡೆಸುತ್ತಿದ್ದಾಗ 300 ಅಡಿ ಆಳದ ಗಣಿಗಳನ್ನು ಪರೆಯ (ಅಸ್ಪೃಶ್ಯ) ಜನಾಂಗದವರು ಮಾಡಿದ್ದರು ಎನ್ನುವ ವಿಷಯ ತಿಳಿದುಬಂದಿತ್ತು. ಟಿಪ್ಪು ಸುಲ್ತಾನ್ ಈ ಗಣಿಗಳನ್ನು ಆಳ ಮಾಡಲು ಪ್ರಯತ್ನಿಸಿ ಕೈಬಿಟ್ಟರು ಎನ್ನುವ ಉಲ್ಲೇಖಗಳು ದೊರಕಿವೆ. ಕೆಜಿಎಫ್‌ನಲ್ಲಿ ಮೂರು ಮುಖ್ಯ ಚಿನ್ನದ ನಿಕ್ಷೇಪಗಳನ್ನು ಮೊದಲಿಗೆ ಗುರುತಿಸಲಾಯಿತು. ಚಾಂಪಿಯನ್, ಓರಿಯಂಟಲ್ ಮತ್ತು ಓರಿಯಂಟಲ್ ಪೂರ್ವ. ಈ ಲೋಡುಗಳ ಮಧ್ಯೆ ನೂರಾರು ಶೂಟ್ಸ್ (ಚಿನ್ನಯುಕ್ತ ಕ್ವಾರ್ಟ್ಝ್ ಶಿಲೆಗಳು) ಮತ್ತು ಪೈಪ್‌ಗಳು (ಚಿನ್ನಯುಕ್ತ ಕ್ವಾರ್ಟ್ಝ್ ಶಿಲೆಗಳು) ಮೈದಳೆದಿದ್ದವು. ಇವುಗಳ ಮೇಲೆ ಸ್ಥಳೀಯರು ಚಿನ್ನವನ್ನು ತೆಗೆದಿರುವ ನೂರಾರು ಗುಂಡಿಗಳು, ಆಳದ ಶ್ಯಾಫ್ಟ್‌ಗಳು ಮತ್ತು ಸುರಂಗಗಳ ಬಗ್ಗೆ ಇಡೀ ವಲಯದಲ್ಲಿ ಪಿ.ಬೋಸ್‌ವರ್ತ್ ಸ್ಮಿತ್ (1888–89 ರಲ್ಲಿ) ಕ್ಷೇತ್ರ ಸಮೀಕ್ಷೆ ನಡೆಸಿದರು.[11] ಕೆಜಿಎಫ್‌ನ ಉತ್ತರ ಭಾಗದಿಂದ ಇಂದಿನ ಆಂಧ್ರ ಮತ್ತು ಹಳೆ ಮದ್ರಾಸ್ ಪ್ರೆಸಿಡೆನ್ಸಿಯ (ಉ. ಆರ್ಕಾಟ್ ಮತ್ತು ಸೇಲಮ್ ಜಿಲ್ಲೆಗಳ) ಗಡಿ ಭಾಗದವರೆಗೂ ನೂರಾರು ಗುಂಡಿಗಳನ್ನು, ಆಡಿಟ್‌ಗಳನ್ನು, ಶ್ಯಾಫ್ಟ್‌ಗಳನ್ನು ಹಲವು ಹಂತಗಳಲ್ಲಿ ಎರಡು ವರುಷ ಕಾಲ ಸಂಶೋಧನೆ ಮಾಡಿದ ಸ್ಮಿತ್ ಅವರು ಸುರಂಗಗಳನ್ನು, ಸ್ಟೋಪ್‌ಗಳನ್ನು ಬಹಳ ವಿಶೇಷವಾಗಿ ದಾಖಲಿಸಿದ್ದಾರೆ. ಈ ಎಲ್ಲವೂ ಶಿಷ್ಟ್ ಪಟ್ಟಿಯ ಉದ್ದಗಲಕ್ಕೂ ಹಳ್ಳಕೊಳ್ಳ, ಕಾಡುಮೇಡು, ಬೆಟ್ಟಗುಡ್ಡಗಳ ಸಾಲು ಮತ್ತು ನದಿಗಳ ಜಾಡಿನಲ್ಲಿದ್ದವು. ಕಂಗುಂದ, ಬಿಸಾನತ್ತಂ, ಚಿಗುರುಗುಂಟ, ಮಾಲಪ್ಪಕೊಂಡ, ಗುವ್ವಲಗುಂತ, ಮಾಲವನಕೊತ್ತೂರು, ಯರ್‍ರಕೊಂಡ, ಬಾಲ್ಘಾಟ್, ನಂದಿದುರ್ಗ, ಉರಿಗಾಂ, ಮೈಸೂರು ಹೊಲಗಮಾದಿಕೊಂಡ, ಗಂಗಮ್ಮ ಗುಡಿಘಟ್ಟ, ಅತ್ತಿನೆತ್ತಂ, ನಾರೆಮ್ಮನಕೊಂಡ, ಗೌಡಸಾನಿ, ಮರಿಮಾನಕೊಂಡ, ಗರಿಡಿಕೊಂಡ, ಅದಕೊಂಡ,

ವೇಪನಪಲ್ಲಿ, ಕೊತ್ತೂರು, ನಂದಿಮಡುಗು, ಚಿಗುರಮರ್ಗನಹಳ್ಳಿ, ಗುಲಗುಂಟೂರ್‌ಗುಡ್ಡ, ಸಾಕಲಗುಂತ, ಕರಿಕುಪ್ಪಂ, ಬಂಗಾರಗುಂತ[13] ಇತ್ಯಾದಿ ಹಳ್ಳಿಗಳು ಮತ್ತು ತಪ್ಪಲುಗಳ ಹೆಸರುಗಳು ಈ ಚಿನ್ನದ ಶಿಲೆಗಳ ಜೊತೆಗೆ ದಾಖಲುಗೊಂಡಿವೆ. ಈ ಹಳೆ ಗುಂಡಿಗಳ ಸುತ್ತಲು ಹೇರಳ ಕಲ್ಲು–ಮಣ್ಣು ರಾಶಿ ಬಿದ್ದಿದ್ದು ಚಿನ್ನವನ್ನು ಜಾಲಿಸಿ ಬಿಸಾಕಿರುವ ಮಣ್ಣು ಗುಡ್ಡೆಗಳು ಅದರಲ್ಲೂ ನದಿ ಜಾಡುಗಳಲ್ಲಿ ರಾಶಿ ರಾಶಿಯಾಗಿ ಬಿದ್ದಿವೆ. ಈ ಹೆಸರುಗಳೆಲ್ಲ 1888–89 ರಲ್ಲಿ ದಾಖಲಿಸಿರುವ ಸ್ಮಿತ್ ಅವರ ವರದಿಯಲ್ಲಿ ಕಾಣಿಸುತ್ತವೆ. ಈ ಹೆಸರುಗಳನ್ನು ಒಮ್ಮೆ ಅವಲೋಕನ ಮಾಡಿ ನೋಡಿದಾಗ ಎಲ್ಲವೂ ತೆಲಗು ಪ್ರಧಾನ ಹೆಸರುಗಳಾಗಿ ತೋರ್ಪಡುತ್ತವೆ. ಬಾಲ್ಘಾಟ್, ನಂದಿದುರ್ಗ, ಉರಿಗಾಂ ಯಾವ ಭಾಷೆಯ ಹೆಸರುಗಳು ಎನ್ನುವುದು ಸ್ವಲ್ಪ ಗೊಂದಲವಾಗುತ್ತದೆ.

ಯರ್ರಕೊಂಡ ಬೆಟ್ಟದವರೆಗೂ ಹರಡಿಕೊಂಡಿದ್ದ ಚಿನ್ನದ ಶಿಲಾಪಟ್ಟಿಯ ಒಂದು ಭಾಗ ಎರಡು ಹೋಳಾಗಿ ಒಡೆದುಕೊಂಡು ನೈಸಸ್ ಶಿಲೆಗಳ ಮಧ್ಯೆ ಕರಗಿಹೋಗಿತ್ತು. ಅದೇ ರೀತಿ ಇನ್ನೊಂದು ಭಾಗ ಮಾಲಪ್ಪನಕೊಂಡ ತಲುಪಿದ್ದೆ (ಆಗಿನ ಸೇಲಂ ಜಿಲ್ಲೆ) ನೈಸಸ್ ಶಿಲೆಗಳ ಮಧ್ಯೆ ಮಾಯವಾಗಿತ್ತು. ಬ್ರಿಟಿಷರು ಮೊದಲು ಗಣಿಗಳನ್ನು ಆರಂಭಿಸಿದಾಗ ಸ್ಥಳೀಯರು ತೋಡಿರುವ ಹಳೆ ಗಣಿಗಳ ಮಧ್ಯದಲ್ಲಿ ಶ್ಯಾಫ್ಟ್‌ಗಳನ್ನು ತೋಡಲು ಯೋಚಿಸಿದ್ದರು. ಮೊದಲಿಗೆ 100 ಅಡಿಗಳಲ್ಲಿ ಚಿನ್ನ ದೊರಕದಿದ್ದರೆ ಅಲ್ಲಿಂದ ಪೂರ್ವ ಮತ್ತು ಪಶ್ಚಿಮದ ಕಡೆಗೆ ಕ್ರಾಸ್ ಕಟ್‌ಗಳನ್ನು ಮಾಡುವುದಾಗಿ ತೀರ್ಮಾನಿಸಿದರು. ಹೊಸ ಶ್ಯಾಫ್ಟ್‌ಗಳನ್ನು ತೋಡಿದಾಗ ಹೆಚ್ಚು ಕಡೆ ಚಿನ್ನದ ರೀಫುಗಳು ದೊರಕದೇ ನೆಲದಲ್ಲಿ ರೀಫುಗಳನ್ನು ಹುಡುಕಿ ಅವುಗಳಲ್ಲಿ ಶ್ಯಾಫ್ಟ್‌ಗಳನ್ನು ಇಳಿಸಲು ಬಹಳಷ್ಟು ಸಮಯ ಪೋಲಾಗುತ್ತಿತ್ತು.[12] ಕ್ವಾರ್ಟ್ಝ್ ಶಿಲೆಗಳು ನೆಲದ ಮೇಲೆ ಕಾಣಿಸದೆ ಮಣ್ಣು ಮುಚ್ಚಿಕೊಂಡಿದ್ದರಿಂದ ಸಾಕಷ್ಟು ಸಮಯ ಶ್ಯಾಫ್ಟ್‌ಗಳನ್ನು ನಿರ್ಮಿಸುವುದು ಕಠಿಣವಾದ ಕೆಲಸವಾಗಿತ್ತು. ಸರಿಯಾದ ರೀಫು ಸಿಕ್ಕಿ ಅದರ ಮೇಲೆ ಶ್ಯಾಫ್ಟ್ ಮಾಡಿದರೆ ಸಾಕಷ್ಟು ಸಮಯ ಮತ್ತು ಹಣ ಉಳಿತಾಯವಾಗುತ್ತಿತ್ತು. ಶ್ಯಾಫ್ಟ್‌ಗಳನ್ನು ತೋಡಿ, ಚಿನ್ನವಿರುವ ರೀಫುಗಳು ಸಿಕ್ಕಿದ ಮೇಲೆ ದೊಡ್ಡ ದೊಡ್ಡ ಯಂತ್ರೋಪಕರಣಗಳನ್ನು ಗಣಿಗಳ ಒಳಕ್ಕೆ ಇಳಿಸಲಾಗುತ್ತಿತ್ತು.

❖❖❖

1888–89ರಲ್ಲಿ ಬೊಸ್‌ವರ್ತ್‌ಸ್ಮಿತ್ ಅವರು ಹಳೆ ಗಣಿಗಳಲ್ಲಿ ದೊರಕಿದ ಸಲಕರಣೆಗಳನ್ನು ತಮ್ಮ ವರದಿಯಲ್ಲಿ ವಿವರಿಸಿದ್ದಾರೆ. ವಿಲಿಯಂ ಪ್ರೆಚ್‌ವಿಲ್ಲೆ ಎಂಬವರು ಓರಿಯಂಟಲ್ ಹಳೆ ಗಣಿಯೊಂದರಲ್ಲಿ ಕಬ್ಬಿಣ ಸಲಕರಣೆಯನ್ನು ಸಂಗ್ರಹಿಸಿದ್ದು ಅದರ ತಲೆ ಮುರಿದಿತ್ತು. ಅದನ್ನು ಗಣಿಗಳಲ್ಲಿ ಯಾವ ಕೆಲಸಕ್ಕಾಗಿ ಉಪಯೋಗಿಸುತ್ತಿದ್ದರು ಎನ್ನುವುದನ್ನು ಸರಿಯಾಗಿ ಗ್ರಹಿಸಲಾಗಲಿಲ್ಲ. ಅದು 11 ಇಂಚು ಉದ್ದ ಇದ್ದು, ಮೇಲೆ

ಒಂದು ತೂತಿದ್ದ ಸಲಿಕೆಯಂತೆ ಕಾಣಿಸುತ್ತಿತ್ತು. ಇನ್ನೊಂದು ಕಡೆ ಅಗಲ ಕಿರಿದಾಗಿ ಬಹುಶಃ ಆ ತೂತಿನಲ್ಲಿ ಮರದ ಕೈ ಹಾಕಿ ಮಣ್ಣನ್ನು ಬಾಚಲು ಉಪಯೋಗಿಸುತ್ತಿರಬಹುದು ಎನ್ನಲಾಗಿದೆ.

ಇನ್ನೊಂದು ಸಲಕರಣೆ ಉರಿಗಾಂ ಗಣಿಗಳಲ್ಲಿ ದೊರಕಿದ್ದು ಅದು ತೂಕದ ಸುತ್ತಿಗೆ ಆಗಿದ್ದು ವಿಪರೀತ ಹೊಡೆತಗಳನ್ನು ತಿಂದು ಅದರ ತಲೆ ಜಜ್ಜಿಹೋಗಿತ್ತು. ಅನೇಕ ಶ್ಯಾಫ್ಟ್‌ಗಳಲ್ಲಿ ನೂರಾರು ಮಣ್ಣಿನ ಮಡಿಕೆ ಚೂರುಗಳು ಅದರಲ್ಲೂ ನೀರಿರುವ ಶ್ಯಾಫ್ಟ್‌ಗಳಲ್ಲಿ ಹೆಚ್ಚೆಚ್ಚು ದೊರಕಿದ್ದವು. ಮೈಸೂರು ಮತ್ತು ಉರಿಗಾಂ ಗಣಿಗಳಲ್ಲಿ ಅನೇಕ ಮರದ ದಿಮ್ಮಿಗಳು ದೊರಕಿದ್ದವು. ಈ ಮರಗಳು ಗಟ್ಟಿಯಾಗಿ ಕಠ್ರಾಗಿ ಅಬಸಾನಿ ಮರಗಳನ್ನು ಹೋಲುತ್ತಿದ್ದವು. ಇವುಗಳ ಜೊತೆಗೆ ಕವಲೊಡೆದ ಕೋಲುಗಳು ಸಾಕಷ್ಟು ದೊರಕಿದ್ದವು. (ಬಹುಶಃ ಮಡಿಕೆಯಲ್ಲಿ ರಾಗಿಮುದ್ದೆ ಮಾಡಲು ಈ ರೀತಿಯ ಕೋಲುಗಳನ್ನು ಉಪಯೋಗಿಸಿರಬೇಕು ?; ಇದನ್ನು ಈಗಲೂ ಈ ಪ್ರದೇಶಗಳಲ್ಲಿ ಉಪಯೋಗಿಸುತ್ತಾರೆ) ಇದರ ಜೊತೆಗೆ ಇದ್ದಿಲು-ಬೂದಿ ಎಲ್ಲೆಲ್ಲೂ ದೊರಕಿತ್ತು. ಇದರಿಂದ ಶಿಲೆಗಳ ಮೇಲೆ ಬೆಂಕಿ ಹಾಕಿ ಕಾಯಿಸಿ ಅನಂತರ ದಿಢೀರನೆ ನೀರು ಚೆಲ್ಲುತ್ತಿದ್ದ ತಂತ್ರ ಕಂಡುಬರುತ್ತದೆ. ಬರಗೂರು ಹತ್ತಿರ ಸಾಕಲುಗುಂತದ ಹಳೆ ಗುಂಡಿಯನ್ನು ಸ್ವಚ್ಛ ಮಾಡಿ ತೆಗೆದಾಗ ಇದ್ದಿಲು-ಬೂದಿ, ಕೆಲವು ಎಲುಬುಗಳು ಮತ್ತು ಒಂದು ಹಳೆ ಎಣ್ಣೆ ದೀಪ ದೊರಕಿತ್ತು. ಮಣ್ಣಿನ ದೀಪ 30 ಅಡಿಗಳ ಆಳದಲ್ಲಿ ದೊರಕಿದ್ದು ಅದು ಹಳ್ಳಿಗಳಲ್ಲಿ ಇಂದಿಗೂ ಎಣ್ಣೆ ಬತ್ತಿ ಹಾಕಿ ಉರಿಸುವ ಮಾದರಿಯೆ ಇತ್ತು. ಅದಕ್ಕೆ ಕಾಂಡದಂತ ಕೈ ಹಿಡಿತ ಇದ್ದು ಅದು ಮೇಲೆ ಬಾಗಿ ಹೊಗೆಯಿಂದ ಕಪ್ಪಾಗಿತ್ತು.[14]

ಉರಿಗಾಂ ಹಳೆ ಗಣಿಗಳಲ್ಲಿ ಎರಡು ಮಡಿಕೆ ಚೂರುಗಳು ದೊರಕಿದ್ದು, ಅವುಗಳಲ್ಲಿ ಚಿನ್ನದ ಧೂಳು ಹಾಗೆ ಮೆತ್ತಿಕೊಂಡಿತ್ತು. ಬಹುಶಃ ಇದನ್ನು ಪಾದರಸ ಉಪಯೋಗಿಸಿ ಬೇರ್ಪಡಿಸಿದ ಮೇಲೆ ಮರೆತು ಹಾಗೆ ಬಿಟ್ಟಿರಬೇಕು. ಇದೆಲ್ಲದರ ಮೇಲೆ ಈ ಶ್ಯಾಫ್ಟ್‌ಗಳನ್ನು ಗಮನಿಸಿದಾಗ ತಂಬಾ ವ್ಯವಸ್ಥಿತವಾಗಿಯೆ ಗಣಿಗಳನ್ನು ಮಾಡಿರುವುದು ತಿಳಿಯುತ್ತದೆ. ಒಂದೇ ಒಂದು ಸಮಸ್ಯೆ ಎಂದರೆ ಹೆಚ್ಚು ನೀರು ಗುಂಡಿಗಳಿಗೆ, ಶ್ಯಾಫ್ಟ್‌ಗಳಿಗೆ ನುಗ್ಗಿದಾಗ ನೀರನ್ನು ಖಾಲಿ ಮಾಡುವ ವಿಧಾನ ಪರಿಣಾಮಕಾರಿಯಾಗಿ ಇರಲಿಲ್ಲ. ನೀರಿನ ಸಮಸ್ಯೆ ಮತ್ತು ಅದಿರು ಕಡಿಮೆಯಾದಾಗ ಸ್ಥಳೀಯರು ಬೇರೆ ಕಡೆ ಚಿನ್ನದ ರೀಫುಗಳನ್ನು ಹುಡುಕಿಕೊಳ್ಳುತ್ತಿದ್ದರು. ಗಟ್ಟಿ ಶಿಲೆಗಳ ಈ ಹಳೆ ಗಣಿಗಳನ್ನು 200-300 ಅಡಿಗಳವರೆಗೂ ತೋಡಲಾಗಿತ್ತು. ಬ್ರಿಟನ್ ಮತ್ತು ಇಟಲಿ ಕಾರ್ಮಿಕರು 2 ಅಡಿ ಆಳ ಮಾಡಲು ಒಂದು ವಾರ ತೆಗೆದುಕೊಳ್ಳುತ್ತಿದ್ದರು. ಶಿಲೆಗಳನ್ನು ಡ್ರಿಲ್ ಮಾಡಿದರೂ ವಾರಕ್ಕೆ 5 ಅಡಿ ತೋಡಬಲ್ಲರು. ಆದರೆ ಇಲ್ಲಿ ಕೆಜಿಎಫ್‌ನಲ್ಲಿ ತೋಡಿರುವ ಗುಂಡಿಗಳು ಮತ್ತು ಗಣಿಗಳನ್ನು ನೋಡಿದಾಗ ಯಾರಾದರೂ ಆಶ್ಚರ್ಯಚಕಿತರಾಗುತ್ತಾರೆ.[15]

ದೊಡ್ಡದಾದ ಗುಂಡಿಗಳನ್ನು ತೋಡುವಾಗ ಮಧ್ಯದಲ್ಲಿ ಗೋಡೆಯಂತೆ ಒಂದೋ ಎರಡೋ ಗೋಡೆಗಳನ್ನು ಬಿಟ್ಟಿರುವುದು ಸರ್ವೆಸಾಮಾನ್ಯ. ಆಳವಾದ ಶ್ಯಾಫ್ಟ್‌ಗಳಲ್ಲೂ ಇದನ್ನು ನೋಡಬಹುದು. ಇದು ಶಿಲೆಗಳು ಕುಸಿಯದಂತೆ ತಡೆಹಿಡಿಯುವ ತಂತ್ರ. ಜೊತೆಗೆ ಗಾಳಿಯ ಸಂಚಾರ ಇದ್ದು ನೀರನ್ನು ತೆಗೆಯುವುದು ಸುಲಭವಾಗುತ್ತದೆ. ತಳಮಟ್ಟದ ಶಿಲೆಗಳ ಮೇಲೆ ಬೆಂಕಿ ಹಾಕುವುದಕ್ಕಿಂತ ಓರೆಯಾಗಿರುವ ಶಿಲೆಗಳ ಮೇಲೆ ಬೆಂಕಿ ಹಾಕುವುದು ಸುಲಭ ಮತ್ತು ಬೇಗನೆ ಬಿಸಿ ತಟ್ಟುತ್ತದೆ. ಆಳಕ್ಕಿಂತ ನೆಲದ ಮೇಲೆ ಕಡಿಮೆ ಆಳದ ಗುಂಡಿಗಳನ್ನು ಅಗಲ ಮತ್ತು ಉದ್ದವಾಗಿ ತೋಡಿರುವುದು ಕಾಣಿಸುತ್ತದೆ. ಕೆಜಿಎಫ್ ಗಣಿಗಳನ್ನು ಬ್ರಿಟಿಷರು ಪ್ರಪಂಚದ ಆಧುನಿಕ ಗಣಿಗಳನ್ನಾಗಿ ಪರಿವರ್ತಿಸಿದ್ದು ನಿಜ. ಆದರೆ ಇವೆಲ್ಲವೂ ನೂರಾರು ವರ್ಷಗಳ ಕಾಲ ಸ್ಥಳೀಯರು ತೋಡಿಬಿಟ್ಟಿದ್ದ ಹಳೆ ಗಣಿಗಳ ಮೇಲಿನ ಗಣಿಗಳೇ ಆಗಿದ್ದವು. ನೆಲದ ಮೇಲೆ ಹಳೆ ಗುಂಡಿಗಳಿಲ್ಲದ ಒಂದೇ ಒಂದು ಹೊಸ ಗಣಿಯನ್ನು ಕಂಡುಹಿಡಿಯಲೂ ಬ್ರಿಟಿಷರಿಗೆ ಸಾಧ್ಯವಾಗಲಿಲ್ಲ. ಅಂದರೆ ಸ್ಥಳೀಯರು ಭೂಮಿಯ ಮೇಲೆ ಮತ್ತು ಒಳಗಿನ ಒಂದೇ ಒಂದು ಚಿನ್ನದ ರೀಫನ್ನೂ ಬಿಡದೆ ಜಾಲಾಡಿ ಅವುಗಳ ಮೇಲೆ ಗುಂಡಿಗಳನ್ನು ತೋಡಿಬಿಟ್ಟಿದ್ದರು. 1888–89 ರಲ್ಲಿ ಬ್ರಿಟಿಷರ ಕಂಪನಿಗಳು ಮಾಡುತ್ತಿದ್ದ ಗಣಿಗಳು ಮತ್ತು ಅವುಗಳ ಆಳ ಇನ್ನಿತರ ವಿವರಗಳನ್ನು ಪಿ. ಬೋಸ್‌ವರ್ತ್‌ಸ್ಮಿತ್ ಅವರು ತಮ್ಮ ವರದಿಯಲ್ಲಿ ವಿಶೇಷವಾಗಿ ದಾಖಲಿಸಿದ್ದಾರೆ.

ಮೈನಿಂಗ್ ಕಂಪನಿಗಳು

ನೈನ್ ರೀಫ್ ಗೋಲ್ಡ್ ಮೈನಿಂಗ್ ಕಂಪನಿ :

4 ಶ್ಯಾಫ್ಟ್‌ಗಳು : ಮೇನ್ ಶ್ಯಾಫ್ಟ್–254 ಅಡಿ, ಬೇನಾರ್ಡ್ ಶ್ಯಾಫ್ಟ್–182 ಅಡಿ, ಮೋರಿಸನ್ಸ್ ಶ್ಯಾಫ್ಟ್–142 ಅಡಿ ಮತ್ತು ವ್ಯಾಯನ್ ಶ್ಯಾಫ್ಟ್–158 ಅಡಿ. ಒಟ್ಟು ಡ್ರೈವ್ಸ್ ಮತ್ತು ಕಟ್ಸ್–993 ಅಡಿ. 1888ರ ಫೆಬ್ರವರಿವರೆಗೆ ಬ್ರಿಟನ್‌ಗೆ ಕಳುಹಿಸಿದ ಚಿನ್ನ–176 ಔನ್ಸ್. ತಿಂಗಳಿಗೆ ತಗಲುತ್ತಿದ್ದ ಖರ್ಚು 13,000 ರೂ.

ಬಾಲ್ಘಾಟ್ ಗೋಲ್ಡ್ ಮೈನಿಂಗ್ ಕಂಪನಿ :

2 ಶ್ಯಾಫ್ಟ್‌ಗಳು : ಉತ್ತರ ಇಂಜಿನ್ ಶ್ಯಾಫ್ಟ್–365 ಅಡಿ, ದಕ್ಷಿಣ ಇಂಜಿನ್ ಶ್ಯಾಫ್ಟ್–245 ಅಡಿ, ಇತರೆ 5 ಶ್ಯಾಫ್ಟ್‌ಗಳಿದ್ದು ಅವುಗಳನ್ನು ಮುಚ್ಚಲಾಗಿತ್ತು. ಡ್ರೈವ್ಸ್ ಮತ್ತು ಕಟ್ಸ್–1657 ಅಡಿ. ತಿಂಗಳಿಗೆ ತಗಲುತ್ತಿದ್ದ ಖರ್ಚು 13,000 ರೂ.

ಗೋಲ್ಡ್ ಫೀಲ್ಡ್ಸ್ ಆಫ್ ಮೈಸೂರ್ ಕಂಪನಿ :

ವಿಸ್ತಾರ 13 ಚ.ಕಿ.ಮೀ. 7 ಶ್ಯಾಫ್ಟ್‌ಗಳು : ಮೇನ್ ಬ್ರಿಡ್ಜ್ ಶ್ಯಾಫ್ಟ್–101 ಅಡಿ,

ಮಿಡ್ಲ್ ಶ್ಯಾಫ್ಟ್–152 ಅಡಿ, ಏಲ್ ಶ್ಯಾಫ್ಟ್–110 ಅಡಿ, ನಾರ್ಥ್ ಶ್ಯಾಫ್ಟ್–130 ಅಡಿ, ಕೋರ್‌ಮಂಡಲ್ ಶ್ಯಾಫ್ಟ್–115 ಅಡಿ, ಪ್ರಾಸ್ಪೆಕ್ಟ್ ಶ್ಯಾಫ್ಟ್–83 ಅಡಿ ಮತ್ತು ರೋಡ್ ಶ್ಯಾಫ್ಟ್–117 ಅಡಿ. ತಿಂಗಳಿಗೆ ತಗಲುತ್ತಿದ್ದ ಖರ್ಚು 800 ಪೌಂಡ್ಸ್.

ನಂದಿದುರ್ಗ್ ಗೋಲ್ಡ್ ಮೈನಿಂಗ್ ಕಂಪನಿ :

2 ಶ್ಯಾಫ್ಟ್‌ಗಳು : ವೆಬ್ಸ್ ಶ್ಯಾಫ್ಟ್–342 ಅಡಿ ಮತ್ತು ಟೇಲರ್ಸ್ ಶ್ಯಾಫ್ಟ್–300 ಅಡಿ. ಡ್ರೈವ್ಸ್ ಮತ್ತು ಕಟ್ಸ್–23000 ಅಡಿ. ಬ್ರಿಟನ್‌ಗೆ ತಲುಪಿದ ಚಿನ್ನ–2646 ಔನ್ಸ್. ತಿಂಗಳಿಗೆ ತಗಲುತ್ತಿದ್ದ ಖರ್ಚು 8000 ರೂ.

ಉರಿಗಾಂ ಗೋಲ್ಡ್ ಮೈನಿಂಗ್ ಕಂಪನಿ :

4 ಶ್ಯಾಫ್ಟ್‌ಗಳು : ಪ್ರೋಬಿನ್ಸ್ ಶ್ಯಾಫ್ಟ್–196 ಅಡಿ, ಲೋಸ್ ಶ್ಯಾಫ್ಟ್–270 ಅಡಿ, ನಾರ್ಥ್‌ಬ್ಯಾಟರಿ ಶ್ಯಾಫ್ಟ್–127 ಅಡಿ ಮತ್ತು ಮಂಡಿ ಶ್ಯಾಫ್ಟ್–212 ಅಡಿ. ಡ್ರೈವ್ಸ್ ಮತ್ತು ಕಟ್ಸ್–1381 ಅಡಿ. ತಿಂಗಳಿಗೆ ತಗಲುತ್ತಿದ್ದ ಖರ್ಚು 15000 ರೂ.

ಮೈಸೂರ್ ವೆಸ್ಟ್ ಆಂಡ್ ಮೈಸೂರ್ ಗೋಲ್ಡ್ ಮೈನಿಂಗ್ ಕಂಪನಿ :

3 ಶ್ಯಾಫ್ಟ್‌ಗಳು : ವಾಕರ್ ಶ್ಯಾಫ್ಟ್–225 ಅಡಿ, ವೆಂಟಿಲೇಶನ್ ಶ್ಯಾಫ್ಟ್–159 ಅಡಿ ಮತ್ತು ಟ್ಯಾಂಕ್ ಶ್ಯಾಫ್ಟ್–50 ಅಡಿ. ಇತರ 6 ಶ್ಯಾಫ್ಟ್‌ಗಳಲ್ಲಿ 4 ಶ್ಯಾಫ್ಟ್‌ಗಳು 100 ಅಡಿ ಮತ್ತು 2 ಶ್ಯಾಫ್ಟ್‌ಗಳು 69 ಮತ್ತು 55 ಅಡಿ ಆಳ ಇಳಿದಿವೆ. ತಿಂಗಳಿಗೆ ತಗಲುತ್ತಿದ್ದ ಖರ್ಚು 6000 ರೂ.

ಈಸ್ಟರ್ನ್ ಮೈಸೂರ್ ಗೋಲ್ಡ್ ಮೈನಿಂಗ್ ಕಂಪನಿ :

6 ಶ್ಯಾಫ್ಟ್‌ಗಳು : ರೆನ್ನೀಸ್ ಶ್ಯಾಫ್ಟ್–112 ಅಡಿ, ಮೈಸೂರ್ ಶ್ಯಾಫ್ಟ್–60 ಅಡಿ, ನೋರಾ ಶ್ಯಾಫ್ಟ್–87 ಅಡಿ, ಥಾಮಸ್ ಶ್ಯಾಫ್ಟ್–86 ಅಡಿ ಮತ್ತು ಹೆಮ್ಮರ್‌ಸನ್ಸ್ ಶ್ಯಾಫ್ಟ್–76 ಅಡಿ. ಡ್ರೈವ್ಸ್ ಮತ್ತು ಕಟ್ಸ್–1360 ಅಡಿ. ತಿಂಗಳಿಗೆ ತಗಲುತ್ತಿದ್ದ ಖರ್ಚು 7000 ರೂ.

ಮೈಸೂರ್ ಗೋಲ್ಡ್ ಮೈನಿಂಗ್ ಕಂಪನಿ :

10 ಶ್ಯಾಫ್ಟ್‌ಗಳು : ಶೆಫರ್ಡ್ಸ್ ಶ್ಯಾಫ್ಟ್–152 ಅಡಿ, ಫಾಸ್ ಶ್ಯಾಫ್ಟ್–220 ಅಡಿ, ಮೆಕ್ ಟಗ್ಗರ್ಟ್ಸ್ ಶ್ಯಾಫ್ಟ್–152 ಅಡಿ, ಬ್ಲೇರ್ಸ್ ಶ್ಯಾಫ್ಟ್–134 ಅಡಿ. ವಿಲಿಯಮ್ಸ್ ಶ್ಯಾಫ್ಟ್–173 ಅಡಿ, ಪ್ಲೂಮರ್ ಶ್ಯಾಫ್ಟ್–362 ಅಡಿ, ಫುಟ್‌ವೇ ಶ್ಯಾಫ್ಟ್–135 ಅಡಿ, ಟೇಲರ್ಸ್ ಶ್ಯಾಫ್ಟ್–444 ಅಡಿ, ಹೆನ್ರಿಸ್ ಶ್ಯಾಫ್ಟ್–113 ಅಡಿ ಮತ್ತು ಟೆನೆಂಟ್ಸ್ ಶ್ಯಾಫ್ಟ್–135 ಅಡಿ. ಡ್ರೈವ್ಸ್ ಮತ್ತು ಕಟ್ಸ್–16200 ಅಡಿ.

ತಿಂಗಳಿಗೆ ತಗಲುತ್ತಿದ್ದ ಖರ್ಚು 15000 ರೂ. 70,000 ಚದರ ಅಡಿ ಶಿಲೆಗಳನ್ನು ಹೊರತೆಗೆಯಲಾಗಿದೆ. ಬ್ರಿಟನ್‌ಗೆ ಕಳುಹಿಸಿದ ಚಿನ್ನ–39432 ಔನ್ಸ್.

ಇಂಡಿಯನ್ ಕನ್ಸಾಲಿಡೇಟೆಡ್ ಗೋಲ್ಡ್ ಮೈನಿಂಗ್ ಕಂಪನಿ :

2 ಶ್ಯಾಫ್ಟ್‌ಗಳು : ಡೆವಿಸ್ ಶ್ಯಾಫ್ಟ್–45 ಅಡಿ ಮತ್ತು ನಂಬರ್ ಫೈವ್ ಶ್ಯಾಫ್ಟ್–250. ಡ್ರೈವ್ಸ್ ಮತ್ತು ಕಟ್ಸ್–1200 ಅಡಿ. ತಿಂಗಳಿಗೆ ತಗಲುತ್ತಿದ್ದ ಖರ್ಚು 13000 ರೂ. ಬ್ರಿಟನ್‌ಗೆ ಕಳುಹಿಸಿದ ಚಿನ್ನ–818 ಔನ್ಸ್.

ಕೋಲಾರ್ ಗೋಲ್ಡ್ ಮೈನಿಂಗ್ ಕಂಪನಿ :

4 ಶ್ಯಾಫ್ಟ್‌ಗಳು : ಲೋಸ್ ಶ್ಯಾಫ್ಟ್–170 ಅಡಿ, ಡಾರ್ಲಿಂಗ್‌ಟನ್ಸ್ ಶ್ಯಾಫ್ಟ್–168 ಅಡಿ, ಅಂಡರ್‌ಲೈ ಶ್ಯಾಫ್ಟ್–1170 ಅಡಿ ಮತ್ತು ಪ್ರಾಸ್ಪೆಕ್ಟ್ ಶ್ಯಾಫ್ಟ್–440 ಅಡಿ. ತಿಂಗಳಿಗೆ ತಗಲುತ್ತಿದ್ದ ಖರ್ಚು 3500 ರೂ.

ಮೈಸೂರ್ ರೀಫ್ಸ್ ಗೋಲ್ಡ್ ಮೈನಿಂಗ್ ಕಂಪನಿ :

4 ಶ್ಯಾಫ್ಟ್‌ಗಳು : ಕಾಕ್ಸ್‌ಬರ್ನ್ಸ್ ಶ್ಯಾಫ್ಟ್–282 ಅಡಿ, ಹಾರ್ವೆಷ್ಟ್ ಶ್ಯಾಫ್ಟ್–245 ಅಡಿ, ನಾರ್ಥ್ ಶ್ಯಾಫ್ಟ್–282 ಅಡಿ ಮತ್ತು ಟೇಲರ್ಸ್ ಶ್ಯಾಫ್ಟ್–122 ಅಡಿ. ತಿಂಗಳಿಗೆ ತಗಲುತ್ತಿದ್ದ ಖರ್ಚು 13000 ರೂ.[16]

ಮೇಲಿನ ವಿವರಗಳಂತೆ 1888–89 ರಲ್ಲಿ 48 ಶ್ಯಾಫ್ಟ್‌ಗಳಲ್ಲಿ ಗಣಿಗಾರಿಕೆ ತೀವ್ರ ಸ್ವರೂಪದಲ್ಲಿ ನಡೆಯುತ್ತಿತ್ತು. ಚಿನ್ನದ ಗಣಿಗಳ ಬಗ್ಗೆ ಇಂತಹ ಒಂದು ಅಪರೂಪವಾದ ದಾಖಲೆ ದೊರಕುವುದು ಇದೇ ಮೊದಲಿನದು. ಇದರಿಂದ ನಮಗೆ ಕಾಣುವ ಒಂದು ಸತ್ಯವೆಂದರೆ ಭಾರತದಲ್ಲಿ ಎಷ್ಟೋ ವರ್ಷಗಳ ಹಿಂದಿನಿಂದಲೂ ಚಿನ್ನದ ಗಣಿಗಾರಿಕೆ ನಡೆದಿದ್ದರೂ ವೈಜ್ಞಾನಿಕ ರೀತಿಯಲ್ಲಿ ನಮೂದಾಗಿರುವ ಒಂದೇ ಒಂದು ದಾಖಲೆಯೂ ದೊರಕುವುದಿಲ್ಲ. ಆಧುನಿಕ ರೀತಿಯಲ್ಲಿ ಚಿನ್ನ ತೆಗೆದಿರುವ ಒಂದೂ ಗಣಿಯೂ ಕಾಣಿಸುವುದಿಲ್ಲ. ಎಲ್ಲೆಲ್ಲೂ ಇಲಿಗಳಂತೆ ತೋಡಿ ಬಿಟ್ಟಿರುವ ಗುಂಡಿಗಳನ್ನು, ಕೆಲವು ಕಡೆ ಆಳದ ಶ್ಯಾಫ್ಟ್‌ಗಳನ್ನು ಮತ್ತು ಅವ್ಯವಸ್ಥಿತವಾದ ಸುರಂಗಗನ್ನು ಮಾತ್ರ ಕಾಣಬಹುದು. ಬ್ರಿಟಿಷರು ಭಾರತಕ್ಕೆ ಬಂದ ಮೇಲೆಯೇ ವ್ಯವಸ್ಥಿತವಾದ ಆಧುನಿಕ ಗಣಿಗಾರಿಕೆ ಪ್ರಾರಂಭವಾಗಿದ್ದು. ಅದೇ ರೀತಿ ಅವರು ಎಲ್ಲವನ್ನೂ ಸಂಶೋಧಿಸುತ್ತ ದಾಖಲೆ ಮಾಡುತ್ತಾ ಹೋದರು. ಜೊತೆ ಜೊತೆಗೆ ಅದಕ್ಕೆ ತಕ್ಕಂತೆ ಆಧುನಿಕ ಯಂತ್ರ, ಸಲಕರಣೆಗಳು ಮತ್ತು ತಂತ್ರಜ್ಞಾನವೂ ಭಾರತವನ್ನು ಪ್ರವೇಶಿಸಿತ್ತು. ಒಟ್ಟಾರೆ ಇಲ್ಲಿನ ಗಣಿ ಪ್ರದೇಶ ಅಭಿವೃದ್ಧಿ ಪಥದತ್ತ ಹೆಜ್ಜೆಗಳನ್ನಿಡುತ್ತಾ ಪ್ರಪಂಚದ ಗಣಿ ಚರಿತ್ರೆಯಲ್ಲಿ ಕೆಜಿಎಫ್ ಚಿನ್ನದ ಗಣಿಗಾರಿಕೆ ಒಂದು ಆಧುನಿಕ ಗಣಿ ಮಾದರಿ ಉದ್ದಿಮೆಯಾಗಿ ಬೆಳೆದು ನಿಂತಿತ್ತು.

✦

1. K.S.Seetharaman, Kolar Thangavail Varalaru,p.97
2. ಅದೇ ಕೃತಿ.
3. Ibidem, P.21
4. Ibidem, P.22
5. ಬೆಂಗಳೂರಿನ ಕಬ್ಬನ್ ಪಾರ್ಕ್ ಇವರ ಹೆಸರಿನದೇ.
6. ಬೆಂಗಳೂರು ಮತ್ತು ಕೆಜಿಎಫ್‌ನಲ್ಲಿ ಲ್ಯಾವಲ್ಲೇ ಹೆಸರಿನ ರಸ್ತೆಗಳು ಇವೆ
7. ಒಂದು ಔನ್ಸ್ ಚಿನ್ನಕ್ಕೆ 28.26 ಗ್ರಾಂ
8. KGF Mining and metallurgy Quarterly Bulletin, (KGF bulletin), 24 July, 1928, p.238. B.K.Sengupta, heat stress in Mine, p-437, Kolar Gold Mines Centenary celebration, Seminar recent trends in Gold mines practice, vol-2
9. B.K.Sengupta, heat stress in Mines, p-437, Kolar Gold Mines Centenary celebrations, Seminar on Recent trends in Gold mines practice, vol-2
10. Report on the Kolar Gold Fields and its southern extension P. Bosworthsmith, Govt. mineralogist to the Madras Presidency, 1889
11. Ibidem,P.36
12. Report on the Kolar Gold Fields and its southern extension P.Bosworth-smith, Govt. min. Madras Presidency, 1889.P3
13. Ibidem,P.38
14. Ibidem,P.36-37
15. Report on the Kolar Gold Fields and its southern extension, P.Bosworthsmith, Govt. mineralogist to the Madras Presidency, 1889.P.36-P45
16. Ibidem, P.36

ಅಧ್ಯಾಯ–4

ಕರ್ನಾಟಕ ಭೂವಿಜ್ಞಾನ ಮತ್ತು ಗಣಿಗಾರಿಕೆ

> ಕರ್ನಾಟಕದ ಭೂವಿಜ್ಞಾನ-ಗಣಿಗಾರಿಕೆ; ಚಿನ್ನದ ವ್ಯಾಮೋಹ, ಉತ್ಪಾದನೆಯ ವಿವರಗಳು, ಗಣಿಗಳಲ್ಲಿ ಚಿನ್ನದ ಕಳ್ಳತನ, ಕೆಲವು ಕುತೂಹಲಕರ ಘಟನೆಗಳು ಮತ್ತು ಬಿಳಿ ಅಧಿಕಾರಿಗಳ ನಿಷ್ಠೆಯನ್ನು ವಿವರಿಸಲಾಗಿದೆ. ಜೊತೆಗೆ ಚಿನ್ನದ ದಾಸ್ತಾನು, ಕರೆನ್ಸಿ, ಹಣದುಬ್ಬರ ಮತ್ತು ಗಣಿ ಕಾರ್ಮಿಕರ ಕಷ್ಟಗಳನ್ನು ವಿಶ್ಲೇಷಿಸಲಾಗಿದೆ.

ಕರ್ನಾಟಕ ಭೂವಿಜ್ಞಾನದ ಬಗ್ಗೆ ತಿಳಿದುಕೊಳ್ಳುವುದಕ್ಕಿಂತ ಮುಂಚೆ ವಿಶ್ವದ ಸೃಷ್ಠಿಯ ಬಗ್ಗೆ ಸ್ವಲ್ಪ ತಿಳಿದುಕೊಳ್ಳುವುದು ಸೂಕ್ತವೆನಿಸುತ್ತದೆ. ಆಗ ಕರ್ನಾಟಕ ಭೂವಿಜ್ಞಾನ ಅರ್ಥವಾಗುತ್ತದೆ. ವಿಶ್ವ ಅರ್ಥಾತ್ ಬ್ರಹ್ಮಾಂಡ ಸುಮಾರು 1400–1500 ಕೋಟಿ ವರ್ಷಗಳ ಹಿಂದೆ ಬಿಗ್‌ಬ್ಯಾಂಗ್ ಮಹಾ ಸ್ಫೋಟದಿಂದ ಸೃಷ್ಟಿಯಾಯಿತು ಎಂದು ವಿಜ್ಞಾನಿಗಳು ನಂಬಿದ್ದಾರೆ. ಆಗ ಇಡೀ ವಿಶ್ವ ಬರೀ ಜಲಜನಕದಿಂದ ಕೂಡಿದ ಅನಿಲ ರಾಶಿಯಾಗಿತ್ತು. ಅನಂತರ ಅದು ಹೀಲಿಯಂ ಅನಿಲವಾಗಿ ಪರಿವರ್ತನೆಯಾಯಿತು. ವಿಶ್ವದ ಸೃಷ್ಠಿಗೆ ಮೂಲ ಎಲೆಕ್ಟ್ರಾನ್, ಪ್ರೋಟಾನ್ ಮತ್ತು ನ್ಯೂಟ್ರಾನ್ ಅಣುಗಳು. ಬ್ರಹ್ಮಾಂಡದ ವಿಸ್ತಾರ ಎಷ್ಟು? ಆಕಾಶ ಗಂಗೆಗಳು ನಿಖರವಾಗಿ ಎಷ್ಟಿವೆ? ನಕ್ಷತ್ರಗಳ ಸಂಖ್ಯೆ ಎಷ್ಟು? ಎನ್ನುವುದು ಇದುವರೆಗೂ ಯಾವ ವಿಜ್ಞಾನಿಯ ಲೆಕ್ಕಕ್ಕೂ ಸಿಕ್ಕಿಲ್ಲ. ನಕ್ಷತ್ರಗಳಿಂದ ಹೊರಸೂಸುವ ಬೆಳಕು 1 ಸೆಕೆಂಡಿಗೆ 3 ಲಕ್ಷ ಕಿ.ಮೀ. ವೇಗದಲ್ಲಿ ಸಾಗುತ್ತದೆ. ಅದೇ ವೇಗದಲ್ಲಿ ಬೆಳಕು 1 ವರ್ಷ ಸಾಗಿದರೆ ಅದನ್ನು ಜ್ಯೋತಿರ್ವರ್ಷ

ಎಂದು ಕರೆಯುತ್ತಾರೆ. ನಕ್ಷತ್ರಗಳ ಬೆಳಕು ಭೂಮಿಯನ್ನು ತಲುಪಲು ನೂರಾರು ಸಾವಿರಾರು ಜ್ಯೋತಿರ್ವರ್ಷಗಳು ತೆಗೆದುಕೊಳ್ಳುತ್ತದೆ. ಅಂದರೆ ವಿಶ್ವದ ವ್ಯಾಪ್ತಿ ಎಷ್ಟು ಎನ್ನುವುದು ವಿಜ್ಞಾನಿಗಳಿಗೆ ಸವಾಲಾಗಿದೆ.

ಕಾಲಾಂತರದಲ್ಲಿ ವಿಶ್ವದಲ್ಲಿ ಕೋಟ್ಯಾಂತರ ಆಕಾಶಗಂಗೆಗಳು ಸೃಷ್ಟಿಯಾದವು. ಜೊತೆಜೊತೆಗೆ ನಕ್ಷತ್ರಗಳು, ಗ್ರಹಗಳು, ಉಪಗ್ರಹಗಳು, ಕ್ಷುದ್ರ ಗ್ರಹಗಳು, ಧೂಮಕೇತುಗಳು, ಉಲ್ಕೆಗಳು ಕಾಣಿಸಿಕೊಂಡವು. ಪ್ರತಿಯೊಂದು ನಕ್ಷತ್ರದ ಕಕ್ಷೆಯಲ್ಲೂ ಗ್ರಹಗಳು ಮತ್ತು ಉಪಗ್ರಹಗಳು ಪ್ರದಕ್ಷಿಣೆ ಮಾಡುತ್ತಿರುತ್ತವೆ. ಅಂತಹ ನಕ್ಷತ್ರಗಳಲ್ಲಿ ನಮ್ಮ ಸೂರ್ಯನೂ ಒಬ್ಬ. ನಮ್ಮ ಸೂರ್ಯಮಂಡಲದಲ್ಲಿ 8 (ಪ್ಲೂಟೊ ಗ್ರಹವನ್ನು ಇತ್ತೀಚೆಗೆ ಕೈಬಿಡಲಾಗಿದೆ) ಗ್ರಹಗಳು, 30 ಉಪಗ್ರಹಗಳು ಸುತ್ತುತಿವೆ. ಇವುಗಳಲ್ಲಿ ನಮ್ಮ ಭೂಮಿಯೂ ಒಂದು. ಇದುವರೆಗೂ ದೊರಕಿರುವ ಮಾಹಿತಿಯಂತೆ ಇಡೀ ವಿಶ್ವದಲ್ಲಿ ಜೀವ ಜಗತ್ತನ್ನು ಹೊಂದಿರುವ ಏಕೈಕ ಜೀವಗ್ರಹ ನಮ್ಮ ಭೂಮಿ. ಆದರೆ ಜೀವಜಾಲ ಎಲ್ಲಾದರು ಇರಬಹುದು ಎನ್ನುವ ಶೋಧನೆ ನಿರಂತರವಾಗಿ ಮುಂದುವರಿದಿದೆ.

ವಿಶ್ವದಲ್ಲಿ ಸೂರ್ಯನು ಒಂದು ರೂಪ ಪಡೆದಿದ್ದು ಸುಮಾರು 800 ಕೋಟಿ ವರ್ಷಗಳ ಹಿಂದೆ ಎನ್ನಲಾಗಿದೆ. ಸೂರ್ಯನಿಂದ ಭೂಮಿ ಬೇರ್ಪಟ್ಟಿದ್ದು ಸರಿಸುಮಾರು 460 ಕೋಟಿ ವರ್ಷಗಳ ಹಿಂದೆ. ಭೂಮಿ ತನ್ನ ಎಳೆ ವಯಸ್ಸಿನಲ್ಲಿ ಅಸಂಖ್ಯ ವಿಪ್ಪತ್ತುಗಳನ್ನು ಎದುರಿಸಬೇಕಾಯಿತು. ಇಂದು ನಮ್ಮ ಸುತ್ತಲೂ ಕಾಣಿಸುವ ಬೆಟ್ಟಗುಡ್ಡಗಳು ಮಿಲಿಯಾಂತರ ವರ್ಷಗಳ ಕಾಲ ಭೂಗರ್ಭದಿಂದ ಸ್ಫೋಟಗೊಂಡ ಲಾವಾರಸ. ಭೂಮಿ ತಣ್ಣಗಾಗುತ್ತಿದ್ದಂತೆ ಭೂಮಿಯ ಹೊರಚಿಪ್ಪು ಗಟ್ಟಿಗೊಳ್ಳುತ್ತಾ ಹೋಯಿತು. ಸುತ್ತಲಿನ ಅನಿಲ ಮೋಡಗಳು ತಣ್ಣಗೆ ಹನಿಯಾಗಿ ಮಳೆ ಸುರಿಯುತ್ತಿದ್ದಂತೆ ನೀರು ತಗ್ಗು ಪ್ರದೇಶಗಳಿಗೆ ಹರಿದು ಸಮುದ್ರಗಳು ಸೃಷ್ಟಿಯಾದವು. ಭೂಮಿಯ ಸುತ್ತಲು ವಾಯುಗೋಳವೂ ರೂಪಗೊಂಡಿತು. ಬೆಳಕು, ಗಾಳಿ ಮತ್ತು ನೀರಿನ ಲಭ್ಯದಿಂದ ಭೂಮಿಯ ಮೇಲೆ ಜೀವಸಂಕುಲ ಹುಟ್ಟು ಪಡೆಯಿತು. ಆದರೆ ಭೂಮಿಯ ಮಧ್ಯಭಾಗ, ಭೂಗರ್ಭ ಇಂದಿಗೂ 4000–6000 ಡಿಗ್ರಿ ಸೆಂ. ಉಷ್ಣದಿಂದ ಕುದಿಯುತ್ತಲೇ ಇದೆ.

ಭೂಮಿ ನೂರಾರು ಧಾತುಗಳ ಒಂದು ಮುದ್ದೆ. ಅಂದರೆ ಭೂಮಿಯಲ್ಲಿ ಇದುವರೆಗೆ 118 ಧಾತುಗಳನ್ನು ಗುರುತಿಸಲಾಗಿದೆ. ಶಿಲೆಗಳು ಕಾಲಾಂತರದಲ್ಲಿ ಗಾಳಿ, ಬೆಳಕು ಮತ್ತು ಮಳೆಯಿಂದ ಸವಕಳಿಯಾಗಿ ಮಣ್ಣು ರೂಪಗೊಳ್ಳುತ್ತದೆ. ಮಣ್ಣಿನಲ್ಲಿರುವ ಧಾತುಗಳನ್ನು ನೀರಿನ ಮೂಲಕ ಹೀರಿಕೊಂಡು ಬೆಳಕಿನ ಸಹಾಯದಿಂದ ಸಸ್ಯ ಜಗತ್ತು ಸೃಷ್ಟಿಯಾಗಿದೆ. ಪಕ್ಷಿ, ಪ್ರಾಣಿಗಳು ಮತ್ತು ಮಾನವನಿಗೆ ಸಸ್ಯ ಜಗತ್ತೇ ಆಧಾರವಾಯಿತು. ಚಿಕ್ಕ ಪ್ರಾಣಿಗಳನ್ನು ದೊಡ್ಡ ಪ್ರಾಣಿಗಳು ತಿನ್ನುವುದು, ಮನುಷ್ಯ ಸಸ್ಯಗಳು ಮತ್ತು ಪ್ರಾಣಿಗಳನ್ನು ತಿನ್ನುವುದು ನಡೆಯಿತು. ಅಂದರೆ ಎಲ್ಲಕ್ಕೂ ಮೂಲ

ಮಣ್ಣು, ಅರ್ಥಾತ್ ಶಿಲೆಗಳು. ಭೂಮಿಯ ಮೇಲಿರುವ ಪ್ರತಿಯೊಂದು ಗಿಡ ಮರ, ಪಕ್ಷಿ, ಪ್ರಾಣಿ ಮತ್ತು ಮಾನವನ ದೇಹದಲ್ಲಿರುವುದು ಮಣ್ಣಿನಲ್ಲಿರುವ 118 ಧಾತುಗಳೇ. ಎಲ್ಲವೂ ಮಣ್ಣಿನಿಂದಲೇ ರೂಪುಗೊಂಡು ಪಂಚಭೂತಗಳ ಚಕ್ರದಲ್ಲಿ ಪ್ರವಹಿಸುತ್ತಿರುತ್ತವೆ.

68 ಕೆ.ಜಿ. ತೂಕದ ಒಬ್ಬ ಮನುಷ್ಯನಲ್ಲಿ 44.23 ಕೆ.ಜಿ. ಆಮ್ಲಜನಕ, 12.25 ಕೆ.ಜಿ. ಕಾರ್ಬನ್, 6.8 ಕೆ.ಜಿ. ಜಲಜನಕ, 2.04 ಕೆ.ಜಿ. ಸಾರಜನಕ, 1.09 ಕೆ.ಜಿ. ಕ್ಯಾಲ್ಸಿಯಂ, 680 ಗ್ರಾಂ. ಪಾಸ್ಫರಸ್, 204ಗ್ರಾಂ. ಸೋಡಿಯಂ, 204 ಗ್ರಾಂ. ಕ್ಲೋರಿನ್, 170ಗ್ರಾಂ. ಸಲ್ಫರ್, 348 ಗ್ರಾಂ. ಮ್ಯಾಗ್ನಿಶಿಯಂ, 2.78 ಗ್ರಾಂ. ಕಬ್ಬಿಣ. ಉಳಿದ ಎಲ್ಲಾ ಧಾತುಗಳು ಸೇರಿ 377 ಗ್ರಾಂ. ಇರುತ್ತದೆ.

ದೇಶದಲ್ಲಿಯೇ ಕರ್ನಾಟಕ ಅತ್ಯಂತ ಪುರಾತನವಾದ ಮತ್ತು ಅಪರೂಪವಾದ ಶಿಲೆಗಳಿಂದ ರೂಪುಗೊಂಡಿದೆ. ಹಾಸನ ಜಿಲ್ಲೆಯಲ್ಲಿ ದೊರಕುವ (ಸರ್ಗೂರ) ಶಿಲೆಗಳು 3.3 ಬಿಲಿಯನ್ ವರ್ಷಗಳ ಹಿಂದೆ ರೂಪುಗೊಂಡವು. ಇನ್ನೂ ವಿಶೇಷವಾದ ಸಂಗತಿ ಎಂದರೆ ಕರ್ನಾಟಕ ಅತ್ಯಂತ ಸುರಕ್ಷಿತ ಸ್ಥಳದಲ್ಲಿ ರೂಪುಗೊಂಡಿದ್ದು, ಈ ಪ್ರದೇಶದಲ್ಲಿ ಭೂಕಂಪನ, ಚಂಡಮಾರುತ, ಸುನಾಮಿ ಇತ್ಯಾದಿ ವಿದ್ವಂಸಕ ಘಟನೆಗಳು ಸಂಭವಿಸುವುದು ತೀರ ಅಪರೂಪ. ಭೂಮಿ ಪೂರ್ವದಿಂದ ಪಶ್ಚಿಮಕ್ಕೆ ತಿರುಗುತ್ತಿದ್ದು ಬಂಗಾಳಕೊಲ್ಲಿಯಲ್ಲಿ ಉದ್ಭವಿಸುವ ಯಾವುದೇ ಸುನಾಮಿ ಕರ್ನಾಟಕಕ್ಕೆ ಅಪ್ಪಳಿಸುವುದಿಲ್ಲ. ಅರಬ್ಬಿ ಸಮುದ್ರದಲ್ಲಿ ಸುನಾಮಿ ಚಂಡಮಾರುತಗಳು ಸಂಭವಿಸಿದರೂ ಭೂಮಿ ತಿರುಗುತ್ತಿರುವ ವಿರುದ್ಧ ದಿಕ್ಕಿಗೆ ಅಷ್ಟೊಂದು ವೇಗವಾಗಿ ಗಾಳಿ ಬೀಸಿ ಪಶ್ಚಿಮ ತಟಕ್ಕೆ ಅಪ್ಪಳಿಸುವುದಿಲ್ಲ. ದಕ್ಷಿಣ ಭಾರತ ಅತ್ಯಂತ ಪುರಾತನ ಪರ್ಯಾಯ ಶಿಲಾಪೀಠದಿಂದ ಕೂಡಿದ್ದು ಭೂಕಂಪನಗಳಿಂದ ಮುಕ್ತವೆಂದೇ ಹೇಳಬಹುದು.

ಬಾಬಾಬುಡನ್‌ಗಿರಿ ಪರ್ವತ ಶ್ರೇಣಿಗಳಲ್ಲಿರುವ ಮುಳ್ಳಯ್ಯನಗಿರಿ ಶಿಖರ ಕರ್ನಾಟಕದಲ್ಲಿ 6297 ಅಡಿ ಇದ್ದು ಅತಿ ಎತ್ತರದ ಶಿಖರವಾಗಿದೆ. ನಿತ್ಯ ಹರಿದ್ವರ್ಣದ ಪಶ್ಚಿಮ ಘಟ್ಟಗಳ ಸೊಬಗು ವರ್ಣಿಸಲಾಗದಷ್ಟು ಸೊಗಸು. ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಆಗುಂಬೆ ಕರ್ನಾಟಕದ ಚಿರಾಪುಂಜಿ ಎಂದೇ ಖ್ಯಾತಿ. ಇಲ್ಲಿ ವರ್ಷಕ್ಕೆ ಸರಾಸರಿ 8275 ಮಿ.ಮೀ. ಮಳೆ ಸುರಿಯುತ್ತದೆ. ಶಿವಮೊಗ್ಗ ಜಿಲ್ಲೆಯ ಗೇರುಸೊಪ್ಪೆ-ಜೋಗ್ ಮತ್ತು ಶಿವನಸಮುದ್ರದ ಬ್ಲಫ್ ಜಲಪಾತಗಳು ರಮಣೀಯ. ಉಡುಪಿಯ ಹತ್ತಿರ ಇರುವ ಸೆಂಟ್ ಮೇರೀಸ್ ದ್ವೀಪದಲ್ಲಿ 85 ಮಿಲಿಯ ವರ್ಷಗಳ ಹಿಂದೆ ರೂಪುಗೊಂಡಿರುವ ಸ್ತಂಭಾಕೃತಿ ಶಿಲೆಗಳು ಅಪರೂಪವಾದವು. ಕೃಷ್ಣಾ, ಕಾವೇರಿ, ಭೀಮಾ, ತುಂಗಾ-ಭದ್ರಾ, ಹೇಮಾವತಿ, ವೇದಾವತಿ, ಶರಾವತಿ, ಮಲಪ್ರಭ ಮತ್ತು ಘಟಪ್ರಭ ನದಿಗಳು ಹರಿಯುವುದು ಕರ್ನಾಟಕದಲ್ಲಿಯೇ.

ಕರ್ನಾಟಕ ಒಟ್ಟು 1,91,794 ಚದರ ಕಿ.ಮೀ. ಭೂ ವಿಸ್ತೀರ್ಣ ಹೊಂದಿದ್ದು ಎಲ್ಲಾ ರೀತಿಯ ಶಿಲೆಗಳಿಂದ ರೂಪಗೊಂಡಿದೆ. ಪರ್ಯಾಯ ದ್ವೀಪದ ನೈಸಸ್ ಸಂಕೀರ್ಣ, ಧಾರವಾಡ ಮಹಾಸಮೂಹದ ಶಿಲೆಗಳು, ಚಾರ್ನೋಕೈಟ್, ಖೋಂಡೋಲೈಟ್ ಶಿಲೆಗಳು, ಕ್ವಾರ್ಟ್‌ಜೈಟ್, ಛರ್ಟ್, ಜಲಜ ಶಿಲೆಗಳು, ಮಿಗ್ಮಟೈಟ್ ಮತ್ತು ನೂರಾರು ಮಾದರಿಯ ಗ್ರಾನೈಟ್ ಶಿಲೆಗಳು, ಪ್ರತ್ಯಾಮ್ಲೀಯ ಮತ್ತು ಅತಿಪ್ರತ್ಯಾಮ್ಲೀಯ, ದಖನ್ ಟ್ರ್ಯಾಪ್, ಡೈಕ್ ಮತ್ತು ಸಿಲ್ ಇತ್ಯಾದಿ ಶಿಲೆಗಳು ರೂಪುಗೊಂಡಿವೆ. ಬೇಲೂರು, ಹಳೆಬೀಡು, ಬಾದಾಮಿ, ಐಹೊಳೆ, ಪಟ್ಟದಕಲ್ಲು ವಿಶೇಷವಾಗಿ ಕರ್ನಾಟಕದಲ್ಲಿ ದೊರಕುವ ಸೋಪ್ ಸ್ಟೋನ್ ಶಿಲೆಗಳಲ್ಲಿ ನಿರ್ಮಿತವಾದವು. ಹಂಪಿ ದೇವಾಲಯಗಳು ಮತ್ತು ಶ್ರವಣಬೆಳಗೊಳದ ಗೊಮ್ಮಟೇಶ್ವರನ ವಿಗ್ರಹ ಗ್ರಾನೈಟ್ ಶಿಲೆಗಳಲ್ಲಿ ರೂಪುಗೊಂಡಿವೆ.

ಕರ್ನಾಟಕವನ್ನು ಭೂವೈಜ್ಞಾನಿಕವಾಗಿ ನಾಲ್ಕು ಮುಖ್ಯ ವಿಭಾಗಗಳಾಗಿ ವಿಂಗಡಿಸಲಾಗಿದೆ. ಪಶ್ಚಿಮ ಕಡಲದಂಡೆಗಳು, ಪಶ್ಚಿಮ ಘಟ್ಟಗಳು, ಉತ್ತರ ಮತ್ತು ದಕ್ಷಿಣ ಕರ್ನಾಟಕ ಬಯಲುಗಳು (ಮಧ್ಯೆ ಮಧ್ಯೆ ರೇಖೀಯವಾಗಿ ಗ್ರಾನೈಟ್ ಪರ್ವತಗಳು ಉತ್ತರ ದಕ್ಷಿಣ ದಿಕ್ಕಿನಲ್ಲಿ ಎದ್ದು ನಿಂತಿವೆ.) ಮತ್ತು ಕರ್ನಾಟಕದ ಮಧ್ಯೆ ಭಾಗದಲ್ಲಿ ಕ್ಲೋಸ್‌ಪೇಟ್ ಗ್ರಾನೈಟ್ ಶಿಲೆಗಳು, ರಾಮನಗರದಿಂದ ಹೊಸ್‌ಪೇಟ್‌ವರೆಗೆ ಸೀಳಿಕೊಂಡು ಎದ್ದುನಿಂತಿವೆ. ಜೊತೆಗೆ ರಾಜ್ಯದ ಉದ್ದಗಲಕ್ಕೂ ನೈಸಸ್ ಮತ್ತು ಗ್ರಾನೈಟ್ ಶಿಲೆಗಳ ನಡುವೆ ಅಲ್ಲಲ್ಲಿ ಚಿನ್ನ, ಬೆಳ್ಳಿ, ತಾಮ್ರ ನಿಕ್ಷೇಪಗಳನ್ನು ಹೊಂದಿರುವ ಹಸಿರು ಶಿಲಾ ಶಿಷ್ಟ್ ಪಟ್ಟಿಗಳು (ಗ್ರೀನ್‌ಸ್ಟೋನ್ ಶಿಸ್ಟ್‌ಬೆಲ್ಟ್‌ಗಳು) ಇವೆ. ಇವುಗಳಲ್ಲಿ ಮುಖ್ಯವಾದವು ಆಂಫಿಬೋಲೈಟ್ ಮತ್ತು ರೂಪಾಂತರಿತ ಬಸಾಲ್ಟ್ ಶಿಲೆಗಳು. ಮೇಲಿನ ಶಿಲೆಗಳ ಜೊತೆಗೆ ಕರ್ನಾಟಕದಾದ್ಯಂತ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಖನಿಜ ನಿಕ್ಷೇಪಗಳು ಇವೆ. ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿಗಳು ಪ್ರಪಂಚದಲ್ಲಿಯೇ ಹೆಸರುವಾಸಿ. ಚಿನ್ನದ ಜೊತೆಗೆ ತಾಮ್ರ, ಬೆಳ್ಳಿ, ಪಚ್ಚೆ, ಯುರೇನಿಯಂ, ಕಬ್ಬಿಣ, ಮ್ಯಾಂಗನೀಸ್, ಕ್ರೋಮೈಟ್, ಗ್ರಾನೈಟ್, ಡಾಲೋಮೈಟ್, ಸುಣ್ಣದ ಶಿಲೆಗಳು, ಸಿಲಿಕಾ, ಅಸ್‌ಬೆಸ್ಟಾಸ್, ಸಿರಾಮಿಕ್ಸ್ ಹೀಗೆ ವೈವಿಧ್ಯಮಯ ಖನಿಜಗಳ ದೊಡ್ಡ ಪಟ್ಟಿಯೇ ಇದೆ.

2003–2004ರ ಅಂಕಿ ಅಂಶಗಳಂತೆ ಕರ್ನಾಟಕದಲ್ಲಿ ಒಟ್ಟು 229 ಗಣಿಗಳ ಉದ್ದಿಮೆ ನಡೆಯುತ್ತಿತ್ತು. ಅದರಲ್ಲಿ ಮುಖ್ಯವಾಗಿ 3 ಚಿನ್ನ, 56 ಸುಣ್ಣ, 34 ಸಿಲಿಕಾ, 37 ಕಬ್ಬಿಣ 17 ಮ್ಯಾಂಗನೀಸ್ ಗಣಿಗಳು ನಡೆಯುತ್ತಿದ್ದವು. ಗ್ರಾನೈಟ್ ಕ್ವಾರಿಗಳಂತೂ ಲೆಕ್ಕಕ್ಕೆ ದೊರಕುವುದಿಲ್ಲ. ಆ ವರ್ಷ ಗಣಿಗಾರಿಕೆಯಿಂದ ಕರ್ನಾಟಕ ನಡೆಸಿದ ಒಟ್ಟು ಆರ್ಥಿಕ ವ್ಯವಹಾರ 13,63,57,57,000 ಕೋಟಿ ರೂಪಾಯಿಗಳು.[1]

ಕರ್ನಾಟಕದಲ್ಲಿ ಒಟ್ಟು 13 ಹಸಿರು ಶಿಲಾಪಟ್ಟಿಗಳಿದ್ದು ಅವುಗಳಲ್ಲಿ ಸುಮಾರು 50 ಪ್ರದೇಶಗಳಲ್ಲಿ ಪುರಾತನ ಕಾಲದಿಂದ ಇಂದಿನವರೆಗೂ ಚಿನ್ನವನ್ನು ತೆಗೆದಿರುವ ಗುಂಡಿಗಳು ಮತ್ತು ಹಳೆ ಗಣಿಗಳನ್ನು ನೋಡಬಹುದು. ಕೆಜಿಎಫ್ ಪ್ರದೇಶದಲ್ಲಿರುವ ರೂಪಾಂತರ ಹೊಂದಿದ ಶಿಷ್ಟ್ (ಬಸಾಲ್ಟ್ ಮತ್ತು ಆಂಫಿಬೋಲೈಟ್) ಶಿಲೆಗಳು 2900 ಮಿಲಿಯ ವರ್ಷಗಳ ಹಿಂದೆ ಭೂಗರ್ಭದಿಂದ ಲಾವಾರೂಪದಲ್ಲಿ ಜ್ವಾಲಾಮುಖಿಗಳಾಗಿ ಹೊರಹೊಮ್ಮಿ ನೆಲದ ಮೇಲೆಲ್ಲ ಹಾಸಿಕೊಂಡ ಶಿಲೆಗಳು. ಈ ಶಿಲೆಗಳ ಮಧ್ಯೆ ಅನಂತರದ ಕಾಲದಲ್ಲಿ ಭೂಗರ್ಭದಿಂದ ತೂರಿ ಬಂದ ಶೂಟ್ಸ್ ಮತ್ತು ಪೈಪ್ಸ್ (ಈ ಶಿಲೆಗಳನ್ನು ಲೋಡ್ಸ್ ಎಂದೂ ಕರೆಯಲಾಗುತ್ತದೆ) ರೀತಿಯ ಕ್ವಾರ್ಟ್ಸ್ ಶಿಲೆಗಳಲ್ಲಿ ಚಿನ್ನವು ಬೆರೆತುಕೊಂಡಿತ್ತು. ಈ ಹಸಿರು ಶಿಷ್ಟ್ ಪಟ್ಟಿ, ಪರ್ಯಾಯ ದ್ವೀಪದ ನೈಸಸ್ ಶಿಲೆಗಳ ನಡುವೆ ಉತ್ತರ-ದಕ್ಷಿಣಾಭಿಮುಖವಾಗಿ 80 ಕಿ.ಮೀ. ಉದ್ದಕ್ಕೆ ಚಾಚಿಕೊಂಡಿದೆ.

ದಕ್ಷಿಣದಲ್ಲಿ ಆಂಧ್ರದ ಚಿತ್ತೂರು ಜಿಲ್ಲೆಯ ಮಲ್ಲಪ್ಪನಕೊಂಡದಿಂದ ಹಿಡಿದು ಉತ್ತರದಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರದವರೆಗೆ ಇರುವ ಈ ಶಿಲೆಗಳ ನಡುವೆ ದಕ್ಷಿಣದಲ್ಲಿ ಬಿಸಾನತ್ತಂ (ಹಳ್ಳಿ) ಗ್ರಾನೈಟ್ ಮತ್ತು ಉತ್ತರದಲ್ಲಿ ಪಟ್ನ (ಹಳ್ಳಿ) ಗ್ರಾನೈಟ್ ಶಿಲೆಗಳು ಶಿಷ್ಟ್ ಶಿಲೆಗಳನ್ನು ಸೀಳಿಕೊಂಡು ಬಂದಿದ್ದು, ಚಿನ್ನದ ನಿಕ್ಷೇಪಗಳಿರುವ ಕ್ವಾರ್ಟ್ಸ್ ಶಿಲೆಗಳು ಈ ಎರಡೂ ಗ್ರಾನೈಟ್ ಶಿಲೆಗಳ ನಡುವೆ ಮಾತ್ರ ದೊರಕುತ್ತವೆ. ಅದೂ ಕೂಡ ದಕ್ಷಿಣ ಭಾಗವಾದ ಕೆಜಿಎಫ್ ಪ್ರದೇಶದಲ್ಲಿ. 8 ಕಿ.ಮೀ. ಉದ್ದ ಮತ್ತು 1.5 ಕಿ.ಮೀ. ಅಗಲದಲ್ಲಿ ಚಿನ್ನವಿರುವ 26 ಲೋಡ್‌ಗಳು ಮೈದಳೆದಿದ್ದು ಈ ಲೋಡುಗಳ ಮೇಲೆಲ್ಲ ಗಣಿಗಳನ್ನು ತೋಡಲಾಗಿತ್ತು.[2]

ಚಿನ್ನವಿರುವ ಪ್ರದೇಶಗಳನ್ನು ಸಾಮಾನ್ಯವಾಗಿ ಕೆಳಗಿನ ಆಧಾರಗಳಿಂದ ಗುರುತಿಸಬಹುದು. ಹಳೆ ಕಾಲದಲ್ಲಿ ಚಿನ್ನಕ್ಕಾಗಿ ತೋಡಿರುವ ಗುಂಡಿಗಳು ಮತ್ತು ಆಳದ ಗಣಿಗಳು. ಈ ಗಣಿಗಳ ಸುತ್ತಮುತ್ತಲು ಬಿದ್ದಿರುವ ಚಿನ್ನದ ಅದಿರಿನ ಮಣ್ಣು ಗುಡ್ಡೆಗಳು. ಹರಿದು ಬರುವ ನೀರಿನ ಮೂಲಕ ಮೆಕ್ಕಲು ಮಣ್ಣಿನಲ್ಲಿ ಸಂಗ್ರಹವಾಗಿ ಮನುಷ್ಯನ ಕಣ್ಣುಗಳಿಗೆ ಕಾಣಿಸಿಕೊಳ್ಳುವ ಚಿನ್ನ.

❖❖❖

ಚಿನ್ನ ಸ್ವಾಭಾವಿಕವಾಗಿಯೇ ಮುಖ್ಯವಾಗಿ ಕೆಳಗಿನ ಶಿಲಾಮಾದರಿಗಳಲ್ಲಿ ದೊರಕುತ್ತದೆ.

1. ಲೋಡ್ ಚಿನ್ನ-ಕ್ವಾರ್ಟ್ಸ್-ಕಾರ್ಬೋನೇಟ್ ಮಾದರಿ : ಹಸಿರು ಶಿಲಾ ಶಿಷ್ಟ್ ಪಟ್ಟಿಗಳಾದ ರೂಪಾಂತರಿತ ಜ್ವಾಲಾಮುಖಿ ಶಿಲೆಗಳಲ್ಲಿ. ಈ ಶಿಲೆಗಳೆಲ್ಲ ಆರ್ಕೇಯನ್ (3.5 ಬಿಲಿಯನ್ ವರ್ಷ) ಕಲ್ಪಕ್ಕೆ ಸೇರಿದ ಕ್ವಾರ್ಟ್ಸ್ ಶಿಲೆಗಳಾಗಿದ್ದು ಸೀಳು ಮತ್ತು ಬಿರುಕುಗಳಲ್ಲಿ ಅಂತಸ್ಸರಣಗೊಂಡಿವೆ. ನಮ್ಮ ದೇಶದಲ್ಲಿ ಇಂತಹ

ಶಿಲೆಗಳಲ್ಲಿಯೇ ಹೆಚ್ಚು ಚಿನ್ನ ದೊರಕುತ್ತದೆ. ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿ ಪ್ರದೇಶಗಳಲ್ಲಿ ಇದೇ ಶಿಲೆಗಳು ಮೈದಳೆದಿವೆ.

2. ಪದುರು ಸಲ್ಫೈಡ್ ಮಾದರಿ : ಬಸಾಲ್ಟ್/ಆಂಫಿಬೋಲೈಟ್ ಶಿಷ್ಟ್ ಮತ್ತು ಪಟ್ಟೆ ಕಬ್ಬಿಣ ಕ್ವಾರ್ಟ್ಝ್ ಶಿಲೆಗಳಲ್ಲಿ ಚಿನ್ನ ದೊರಕುತ್ತದೆ. ಈ ಶಿಲೆಗಳೂ ಆರ್ಕೀಯನ್ ಕಲ್ಪಕ್ಕೆ ಸೇರಿದವು.

3. ಗ್ರಾನ್ಯೂಲೈಟ್ ಪಟ್ಟೆ ಶಿಲೆಗಳಲ್ಲಿ : ಕ್ವಾರ್ಟ್ಝ್-ಕಾರ್ಬೋನೇಟ್ ಮತ್ತು ಪದುರು ಸಲ್ಫೈಡ್ ಮಾದರಿಯಾದರೂ ಚಿನ್ನ ದೊರಕುವುದು ಗ್ರಾನ್ಯೂಲೈಟ್ ಪಟ್ಟೆ ಶಿಲೆಗಳಲ್ಲಿ.

4. ಡಿಸ್ಸೆಮಿನೇಟೆಡ್ ಮಾದರಿ : ಜ್ವಾಲಾಮುಖಿ ಅಥವಾ ಅಂತಸ್ಸರಣಗೊಂಡ ಶಿಲೆಗಳಲ್ಲಿ ಸುಣ್ಣನೆ ಚಿನ್ನದ ಪುಡಿ ದೊರಕುತ್ತದೆ. ಈ ಮಾದರಿ ಶಿಲೆಗಳಲ್ಲಿ ಚಿನ್ನದ ಅಂಶ ತೀರ ಕಡಿಮೆ ಇದ್ದು ತೆರೆದ ಗಣಿಗಳನ್ನು ಮಾಡಿ ಚಿನ್ನ ತೆಗೆಯಬಹುದು. ಉದಾ: ತುಮಕೂರು ಜಿಲ್ಲೆಯ ಅಜ್ಜನಹಳ್ಳಿ ತೆರೆದ ಗಣಿಗಳು.

5. ಜ್ವಾಲಾಮುಖಿ ಶಿಲೆಗಳಲ್ಲಿ ದೊರಕುವ ವಿವಿಧ ಖನಿಜ ನಿಕ್ಷೇಪಗಳು : ಈ ಮಾದರಿಯ ನಿಕ್ಷೇಪಗಳಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಸತು, ಸೀಸ ಇತ್ಯಾದಿ ಖನಿಜಗಳು ಒಟ್ಟಾಗಿ ದೊರಕುತ್ತವೆ. ರಾಜಸ್ಥಾನದಲ್ಲಿ ಇಂತಹ ಹಲವಾರು ಗಣಿಗಳಿವೆ.

6. ಪೆಂಟೆಶಿಲೆ ಮತ್ತು ಕ್ವಾರ್ಟ್ಝ್ ಶಿಲೆಗಳಲ್ಲಿ : ನೈಸಸ್ ಮತ್ತು ಶಿಷ್ಟ್ ಶಿಲೆಗಳ ಮಧ್ಯೆ ಶಿಥಿಲಿಕರಣವಾಗಿ ಕ್ರೋಢೀಕರಣಗೊಂಡು ದೊರಕುವ ಚಿನ್ನ. ಆರ್ಕೀಯನ್ ಮತ್ತು ಪ್ರೊಟೆರೋಜೋಯಿಕ್ (3.5–3.0 ಬಿಲಿಯನ್ ವರ್ಷ) ಶಿಲಾಗಡಿಗಳಲ್ಲಿ ಈ ಮಾದರಿ ಚಿನ್ನ ರೂಪಗೊಂಡಿರುತ್ತದೆ.

ಚಿನ್ನ ಎಂಬ ಮಾಯಾಲೋಹ :

ಚಿನ್ನವು ಭೌತಿಕ ಮತ್ತು ರಾಸಾಯನಿಕ ಸಮ್ಮಿಲನದ ಅದ್ಭುತ ಗುಣಗಳನ್ನು ಹೊಂದಿರುವ ಲೋಹ. ಸೂರ್ಯನಂತೆ ಫಳಫಳನೆ ಹೊಳೆಯುವ ಚಿನ್ನದ ಸಾಂದ್ರತೆ 19.3. ಅದರ ಗಟ್ಟಿತನ ಮೊಹರ್ ಪಟ್ಟಿಯಲ್ಲಿ ಕೇವಲ 3.0 (ಚಿನ್ನದ ಗಟ್ಟಿತನವನ್ನು ಅಳತೆಮಾಡುವ ಒಂದು ಅಳತೆಗೋಲು). ಚಿನ್ನ 1060 ಡಿಗ್ರಿ ಉಷ್ಣತೆಯಲ್ಲಿ ಕರಗಿದರೆ, 2966 ಡಿಗ್ರಿ ಉಷ್ಣತೆಯಲ್ಲಿ ನೀರಿನಂತೆ ಕುದಿಯುತ್ತದೆ. ತೀರ ಮೃದುವಾದ ಚಿನ್ನದಲ್ಲಿ ವಿದ್ಯುತ್ ಕೂಡ ಹಾಯುತ್ತದೆ. ಚಿನ್ನದ ರಾಸಾಯನಿಕ ಚಿಹ್ನೆ Au, ಅಣುಸಂಖ್ಯೆ 79, ಅಣುತೂಕ 196.967, ವಾಲ್ಯೂಮ್ (ಆವರಿಸಿಕೊಳ್ಳುವ ಸ್ಥಳ) 10.2, ಚಿನ್ನ ಸಣ್ಣ ಕಣಗಳಾಗಿ, ರೇಖುಗಳಾಗಿ, ಉಂಡೆಗಳಾಗಿ ಎಲ್ಲಾ ರೀತಿಯ ರೂಪಗಳಲ್ಲೂ ನೈಸರ್ಗಿಕವಾಗಿ ದೊರಕುತ್ತದೆ.

1 ಗ್ರಾಂ ಚಿನ್ನದಿಂದ 2.5ಕಿ.ಮೀ. ಉದ್ದದ ಎಳೆಯನ್ನು ತೆಗೆಯಬಹುದು. ಹಾಗೆ 1 ಔನ್ಸ್ ಚಿನ್ನದಿಂದ 0.000001 ಅಂಗುಲ ದಪ್ಪದ 68 ಚದರ ಅಡಿಗಳ ಅಗಲದ ಫಿಲ್ಮ್‌ಗಳನ್ನು ತಯಾರಿಸಬಹುದು. ಚಿನ್ನ ಹೆಚ್ಚು ಸಾಂದ್ರತೆ ಹೊಂದಿರುವುದರಿಂದ 1 ಚದರ ಅಡಿ ಚಿನ್ನ ಅರ್ಧ ಟನ್ನಿನಷ್ಟು ತೂಕವಿರುತ್ತದೆ. ಚಿನ್ನ ಗುರುತ್ವಾಕರ್ಷಣೆಗೆ ಒಳಗಾಗುವುದಿಲ್ಲ. ಚಿನ್ನದ ಒಡವೆ ಅಥವಾ ಕಾಸುಗಳನ್ನು ನೆಲದಲ್ಲಿ ಅಥವಾ ಸಮುದ್ರದ ಕೆಳಗೆ ಸಾವಿರಾರು ವರ್ಷಗಳು ಹೂತಿಟ್ಟರೂ ಯಾವುದೇ ರೀತಿಯಲ್ಲೂ ತನ್ನ ಗುಣಗಳನ್ನು ಕಳೆದುಕೊಳ್ಳುವುದಿಲ್ಲ, ಅದು ಮತ್ತಷ್ಟು ಹೊಚ್ಚ ಹೊಸದಾಗಿ ಮಿರಮಿರನೆ ಹೊಳೆಯುತ್ತದೆ. ಚಿನ್ನ ಸೂರ್ಯನ ಕಿರಣಗಳಿಗೆ ಮತ್ತು ಇನ್ಫ್ರಾರೆಡ್ ಕಿರಣಗಳಿಗೆ ಪ್ರತಿಫಲಿಸುತ್ತದೆ.[3]

ಚಿನ್ನ ಪ್ರಕೃತಿಯಲ್ಲಿ ಹಲವು ರೀತಿಯ ಲೋಹಗಳ ಜೊತೆಗೆ ಬೆರೆತ್ತಿದ್ದು. ಚಿನ್ನ ಶುದ್ಧವಾಗಿ ದೊರಕುವುದಿಲ್ಲ. ಭೂರಾಸಾಯನಿಕ ಪ್ರಕ್ರಿಯೆಗಳಿಂದ ಲೋಹಗಳು ಹಾಗೂ ಸಿಲಿಕಾ ಜೊತೆ ಅದು ಹೆಚ್ಚಾಗಿ ಬೆಳ್ಳಿ, ತಾಮ್ರ, ಕಬ್ಬಿಣ, ಟೈಟೆನಿಯಂ, ಸತು, ಅಲ್ಯೂಮಿನಿಯಂ, ಆಂಟಿಮನಿ, ಪಾದರಸ, ವೆನಿಡಿಯಂ, ಬಿಸ್‌ಮತ್, ಮ್ಯಾಂಗನೀಸ್ ಜೊತೆಗೆ ಬೆರೆತಿರುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ಚಿನ್ನದ ಕೊಡುಗೆ ಅಪಾರ. ಮಧ್ಯಯುಗದಲ್ಲಿ ಲೋಹತಜ್ಞರು ಚಿನ್ನದ ಆಕರ್ಷಣೆಯಿಂದ ನಡೆಸಿದ ಅಪಾರ ಸಂಶೋಧನೆಗಳಿಂದ ಹಲವು ಮುಖ್ಯ ಲೋಹಗಳು ಬೆಳಕಿಗೆ ಬಂದವು. ರಾಸಾಯನಿಕ ಶಾಸ್ತ್ರ, ಲೋಹಶಾಸ್ತ್ರ ಹುಟ್ಟಿದ್ದೇ ಚಿನ್ನದ ಸಂಶೋಧನೆಗಳಿಂದ. ಇದರ ಜೊತೆಗೆ ಅನೇಕ ಜೀವ ಉಳಿಸುವ ಔಷಧಿಗಳು ಸೃಷ್ಟಿಯಾದವು. ಆಧುನಿಕ ಸಂಶೋಧನೆಗಳಾದ ಔಷಧಿ, ಗಣಿತ, ಖಗೋಳಶಾಸ್ತ್ರ ಮತ್ತು ಬಾಹ್ಯಾಕಾಶದಲ್ಲೂ ಚಿನ್ನದ ಬಳಕೆಯಾಗುತ್ತದೆ.

ಚಿನ್ನದ ಉತ್ಪಾದನೆ :

ಮೇ. ಜಾನ್ ಟೇಲರ್ ಕಂಪನಿ ಪ್ರಾರಂಭವಾಗುವುದಕ್ಕಿಂತ (ಕ್ರಿ.ಶ. 1880ಕ್ಕೂ) ಮುಂಚೆ ಒಂದು ಅಂದಾಜಿನ ಪ್ರಕಾರ, ಸುಮಾರು 6200 ಕೆ.ಜಿ. ಚಿನ್ನವನ್ನು ಕೆಜಿಎಫ್ ಪುರಾತನ ಗಣಿಗಳಿಂದ ತೆಗೆಯಲಾಗಿದೆ ಎಂದು ತಿಳಿದುಬರುತ್ತದೆ. ಆದರೆ ಇದಕ್ಕೆ ಯಾವುದೇ ಲಿಖಿತ ದಾಖಲೆಗಳಿಲ್ಲ. ಗುಂಡಿಗಳ ಆಳ, ಅಗಲ ಮತ್ತು ಇಲ್ಲಿನ ಶಿಲೆಗಳಲ್ಲಿ ದೊರಕುತ್ತಿದ್ದ ಚಿನ್ನದ ಅಂಶದ ಆಧಾರದ ಮೇಲೆ ಇದನ್ನು ಹೇಳಲಾಗಿದೆ.

ವರ್ಷ	ಚಿನ್ನ ಕೆ.ಜಿ.ಗಳಲ್ಲಿ
೧೮೮೦–೧೮೮೧	--
೧೮೮೧–೧೮೮೨	--
೧೮೮೨–೧೮೮೩	--
೧೮೮೩–೧೮೮೪	೪.೫೨

ವರ್ಷ	ಚಿನ್ನ ಕೆ.ಜಿ.ಗಳಲ್ಲಿ
೧೮೮೪-೧೮೮೫	೩೪.೭೪
೧೮೮೫-೧೮೮೬	೧೮೧.೩೧
೧೮೮೬-೧೮೮೭	೪೫೯.೭೩
೧೮೮೭-೧೮೮೮	೪೧೭.೮೪
೧೮೮೮-೧೮೮೯	೯೪೦.೦೪
೧೮೮೯-೧೮೯೦	೨೧೭೯.೯೨
೧೮೯೦-೧೮೯೧	೨೯೮೭.೧೬
೧೮೯೧-೧೮೯೨	೩೬೭೮.೫೮
೧೮೯೨-೧೮೯೩	೪೫೩೮.೦೯
೧೮೯೩-೧೮೯೪	೫೭೨೪.೭೭
೧೮೯೪-೧೮೯೫	೫೮೦೫.೧೮
೧೮೯೫-೧೮೯೬	೭೧೦೧.೫೭
೧೮೯೬-೧೮೯೭	೮೯೬೪.೮೨
೧೮೯೭-೧೮೯೮	೧೨೧೦೮.೪೪
೧೮೯೮-೧೮೯೯	೧೨೮೪೩.೨೪
೧೮೯೯-೧೯೦೦	೧೩೮೮೮.೯೪
೧೯೦೦-೧೯೦೧	೧೫೮೩೮.೩೫
೧೯೦೧-೧೯೦೨	೧೬೪೮೭.೪೧
೧೯೦೨-೧೯೦೩	೧೬೫೯೧.೬೦
೧೯೦೩-೧೯೦೪	೧೮೫೯೪.೧೯
೧೯೦೪-೧೯೦೫	೧೮೮೯೫.೬೭
೧೯೦೫-೧೯೦೬	೧೯೧೮೧.೧೭
೧೯೦೬-೧೯೦೭	೧೭೫೭೭.೪೬
೧೯೦೭-೧೯೦೮	೧೬೬೪೧.೧೪
೧೯೦೮-೧೯೦೯	೧೬೬೫೮.೮೦
೧೯೦೯-೧೯೧೦	೧೬೫೯೫.೧೧
೧೯೧೦-೧೯೧೧	೧೭೦೩೪.೯೦
೧೯೧೧-೧೯೧೨	೧೭೨೬೦.೮೪
೧೯೧೨-೧೯೧೩	೧೭೪೪೯.೧೨

ವರ್ಷ	ಚಿನ್ನ ಕೆ.ಜಿ.ಗಳಲ್ಲಿ
೧೯೧೩-೧೯೧೪	೧೭೩೯೧.೦೫
೧೯೧೪-೧೯೧೫	೧೭೪೮೯.೨೪
೧೯೧೫-೧೯೧೬	೧೭೭೬೪.೨೮
೧೯೧೬-೧೯೧೭	೧೭೨೩೮.೭೬
೧೯೧೭-೧೯೧೮	೧೬೬೮೬.೯೮
೧೯೧೮-೧೯೧೯	೧೫೬೮೭.೨೧
೧೯೧೯-೧೯೨೦	೧೫೦೯೧.೨೧
೧೯೨೦-೧೯೨೧	೧೫೦೧೯.೯೯
೧೯೨೧-೧೯೨೨	೧೩೧೪೦.೧೭
೧೯೨೨-೧೯೨೩	೧೩೩೫೯.೨೮
೧೯೨೩-೧೯೨೪	೧೧೮೫೦.೯೦
೧೯೨೪-೧೯೨೫	೧೨೨೦೯.೧೭
೧೯೨೫-೧೯೨೬	೧೨೨೩೮.೨೨
೧೯೨೬-೧೯೨೭	೧೧೯೦೮.೧೫
೧೯೨೭-೧೯೨೮	೧೧೮೭೧.೫೮
೧೯೨೮-೧೯೨೯	೧೧೬೯೩.೦೭
೧೯೨೯-೧೯೩೦	೧೧೩೧೨.೩೪
೧೯೩೦-೧೯೩೧	೧೦೨೩೬.೦೬
೧೯೩೧-೧೯೩೨	೧೦೨೭೬.೫೯
೧೯೩೨-೧೯೩೩	೧೦೨೪೯.೭೫
೧೯೩೩-೧೯೩೪	೧೦೪೪೨.೫೪
೧೯೩೪-೧೯೩೫	೯೮೯೮.೨೩
೧೯೩೫-೧೯೩೬	೧೦೧೪೨.೪೮
೧೯೩೬-೧೯೩೭	೧೦೩೨೦.೭೨
೧೯೩೭-೧೯೩೮	೧೦೨೮೫.೦೮
೧೯೩೮-೧೯೩೯	೯೯೮೬.೬೫
೧೯೩೯-೧೯೪೦	೯೭೮೦.೯೮
೧೯೪೦-೧೯೪೧	೮೯೯೫.೪೨
೧೯೪೧-೧೯೪೨	೮೮೮೯.೪೦

ವರ್ಷ	ಚಿನ್ನ ಕೆ.ಜಿ.ಗಳಲ್ಲಿ
೧೯೪೨-೧೯೪೩	೮೦೯೪.೪೧
೧೯೪೩-೧೯೪೪	೭೮೪೩.೨೦
೧೯೪೪-೧೯೪೫	೫೮೪೧.೪೫
೧೯೪೫-೧೯೪೬	೫೨೩೪.೯೦
೧೯೪೬-೧೯೪೭	೪೦೯೬.೪೨
೧೯೪೭-೧೯೪೮	೫೩೩೯.೭೪
೧೯೪೮-೧೯೪೯	೫೫೯೯.೨೪
೧೯೪೯-೧೯೫೦	೫೦೦೬.೮೨
೧೯೫೦-೧೯೫೧	೫೮೯೪.೧೯
೧೯೫೧-೧೯೫೨	೬೭೧೫.೭೭
೧೯೫೨-೧೯೫೩	೭೫೬೨.೯೪
೧೯೫೩-೧೯೫೪	೬೫೫೮.೬೭
೧೯೫೪-೧೯೫೫	೬೮೫೪.೭೮
೧೯೫೫-೧೯೫೬	೬೦೩೨.೩೭
೧೯೫೬-೧೯೫೭	೫೯೫೨.೩೫
೧೯೫೭-೧೯೫೮	೫೦೭೮.೮೧
೧೯೫೮-೧೯೫೯	೫೩೨೦.೭೪
೧೯೫೯-೧೯೬೦	೫೦೯೬.೫೨
೧೯೬೦-೧೯೬೧	೪೮೬೦.೩೦
೧೯೬೧-೧೯೬೨	೪೧೯೫.೦೦
೧೯೬೨-೧೯೬೩	೪೨೯೨.೦೦
೧೯೬೩-೧೯೬೪	೩೩೭೩.೦೦
೧೯೬೪-೧೯೬೫	೩೭೪೧.೦೦
೧೯೬೫-೧೯೬೬	೩೩೪೧.೦೦
೧೯೬೬-೧೯೬೭	೨೭೯೭.೦೦
೧೯೬೭-೧೯೬೮	೨೨೪೩.೦೦
೧೯೬೮-೧೯೬೯	೨೩೪೮.೦೦
೧೯೬೯-೧೯೭೦	೨೧೩೪.೦೦
೧೯೭೦-೧೯೭೧	೧೯೭೮.೦೦

ವರ್ಷ	ಚಿನ್ನ ಕೆ.ಜಿ.ಗಳಲ್ಲಿ
೧೯೭೧-೧೯೭೨	೧೮೭೬.೦೦
೧೯೭೨-೧೯೭೩	೨೩೪೫.೦೦
೧೯೭೩-೧೯೭೪	೨೦೮೯.೦೦
೧೯೭೪-೧೯೭೫	೧೭೬೫.೦೦
೧೯೭೫-೧೯೭೬	೧೫೪೦.೦೦
೧೯೭೭-೧೯೭೮	೧೫೬೩.೦೦
೧೯೭೯-೧೯೮೦	೧೩೪೨.೦೦
೧೯೮೧-೧೯೮೨	೧೪೨೦.೦೦
೧೯೮೨-೧೯೮೩	೧೩೬೮.೦೦
೧೯೮೩-೧೯೮೪	೧೧೮೬.೦೦
೧೯೮೪-೧೯೮೫	೧೦೬೬.೦೦
೧೯೮೫-೧೯೮೬	೮೪೭.೦೦
೧೯೮೬-೧೯೮೭	೬೯೦.೦೦
೧೯೮೭-೧೯೮೮	೭೫೭.೦೦
೧೯೮೮-೧೯೮೯	೮೧೨.೦೦
೧೯೮೯-೧೯೯೦	೫೮೯.೦೦
೧೯೯೦-೧೯೯೧	೬೫೯.೦೦
೧೯೯೧-೧೯೯೨	೬೭೧.೭೨
೧೯೯೨-೧೯೯೩	೬೫೮.೧೪
೧೯೯೩-೧೯೯೪	೬೭೨.೧೮
೧೯೯೪-೧೯೯೫	೬೫೦.೨೮
೧೯೯೫-೧೯೯೬	೬೪೯.೭೭
೧೯೯೬-೧೯೯೭	೬೯೨.೩೨
೧೯೯೭-೧೯೯೮	೫೧೪.೧೭
೧೯೯೮-೧೯೯೯	೫೩೧.೨೮
೧೯೯೯-೨೦೦೦	೪೩೩.೫೧

2001 ಫೆಬ್ರವರಿ ತಿಂಗಳ ಕೊನೆ ದಿನ ಗಣಿಗಳನ್ನು ಪೂರ್ಣವಾಗಿ ಮುಚ್ಚಲಾಯಿತು.

5/6

ಸೋರಿ ಹೋದ ಚಿನ್ನ :

ಲೆಕ್ಕಕ್ಕೆ ಸಿಕ್ಕಿರುವ ಒಟ್ಟು 800 ಟನ್ನು ಮತ್ತು 6200 ಕೆ.ಜಿ. ಚಿನ್ನದ ಉತ್ಪಾದನೆಯ ಜೊತೆಗೆ ಭ್ರಷ್ಟ ಅಧಿಕಾರಿಗಳು, ಗೋಸುಂಬೆ ರಾಜಕಾರಣಿಗಳು, ಕಾರ್ಮಿಕ ಸಂಘಟನೆಗಳ ಮುಖಂಡರು ಮತ್ತು ಕಾರ್ಮಿಕರು ಎಷ್ಟು ಚಿನ್ನವನ್ನು ದೋಚಿದರು ಎಂಬುದು ಲೆಕ್ಕಕ್ಕೆ ದೊರಕುವುದಿಲ್ಲ. ಅಧಿಕಾರಿಗಳು, ರಾಜಕಾರಣಿಗಳು, ಕಾರ್ಮಿಕರು ಚಿನ್ನವನ್ನು ಕಳ್ಳತನ ಮಾಡುತ್ತಿದ್ದಾಗ ಸಿಕ್ಕಿಬಿದ್ದಿರುವ ದಾಖಲೆಗಳಿವೆ. ಸುರಂಗಗಳಿಂದ, ಮಿಲ್ಲುಗಳಿಂದ, ಮತ್ತು ಸಯೆನೈಡ್ ಮಣ್ಣಿನಿಂದ ತಂದ ಅದಿರನ್ನು ಮನೆಗಳಲ್ಲಿ ಪುಡಿ ಮಾಡಿ, ಪಾದರಸ ಬೆರೆಸಿ ಚಿನ್ನವನ್ನು ಬೇರ್ಪಡಿಸಲಾಗುತ್ತಿತ್ತು. ಮುಚ್ಚಿರುವ ಗಣಿಗಳಲ್ಲಿ ಮತ್ತು ಬೀಗಹಾಕಿರುವ ಮಿಲ್ಲುಗಳಲ್ಲಿ ಅದಿರನ್ನು ಕಳ್ಳತನ ಮಾಡಲಾಗುತ್ತಿತ್ತು. ಕೆಲವು ಕಾರ್ಮಿಕ ನಾಯಕರ ಮನೆಗಳಲ್ಲಿ ಪ್ರತಿ ಸಾಯಂಕಾಲವೂ ಕೆಲವು ನೂರು ಗ್ರಾಂ. ಚಿನ್ನ ತಯಾರಾಗುತ್ತಿತ್ತಂತೆ. ಒಟ್ಟಿನಲ್ಲಿ ಕಳ್ಳತನವಾದ ಚಿನ್ನದ ಪ್ರಮಾಣ ನಿಖರವಾಗಿ ಯಾವ ಕಾಲಕ್ಕೂ ದೊರಕುವ ಸಾಧ್ಯತೆಗಳಿಲ್ಲ.

1980ರ ಸುಮಾರಿಗೆ ಉತ್ಪಾದನೆ ತೀರಾ ಕಡಿಮೆಯಾಗಿ ಚಿನ್ನದ ಗಣಿಗಳು ನಷ್ಟದಲ್ಲಿ ಸಾಗುತ್ತಿದ್ದವು. ಆಳವಾಗಿ ಇಳಿದಿದ್ದ ಚಾಂಪಿಯನ್ ಗಣಿಗಳಲ್ಲಿ ಕೆಲಸ ನಿಲ್ಲಿಸಲಾಯಿತು. ಸುಮಾರು 500 ರಿಂದ 1000 ಜನರು ನಿರಂತರವಾಗಿ ಚಿನ್ನದ ಕಳ್ಳತನದಲ್ಲಿ ತೊಡಗಿರುವುದಾಗಿ ತಿಳಿದುಬಂದಿತ್ತು. ಕಳ್ಳತನ ಮಾಡುವವರು, ವ್ಯಾಪಾರಿಗಳು, ಏಜಂಟರು ಮತ್ತು ಮಾಫಿಯಾಗಳ ಜೊತೆಗಿರುವ ಸಂಬಂಧಗಳನ್ನು ಅಲ್ಲಗೆಳೆಯಬೇಕು ಎಂದು ಆಚಾರಿಯವರು ತಮ್ಮ ವರದಿಯಲ್ಲಿ ಹೇಳಿದ್ದರು. ಇದರ ಜೊತೆಗೆ ಗಣಿ ಪ್ರದೇಶದಲ್ಲಿ ಎಲ್ಲಾ ರೀತಿಯ ಸಾಮಾನುಗಳನ್ನು ಕಳ್ಳತನ ಮಾಡಲಾಗುತ್ತಿತ್ತು. ಇದಕ್ಕೆಲ್ಲ ಕಾರಣ ನಿರುದ್ಯೋಗ, ಸಾಮಾಜಿಕ ಮತ್ತು ಆರ್ಥಿಕ ಮುಗ್ಗಟ್ಟು ಎನ್ನುವುದು ಸತ್ಯವಾಗಿತ್ತು.

ಗಣಿಗಳು ಕ್ರಿ.ಶ. 1950ರವರೆಗೆ ಲಾಭದಲ್ಲಿಯೇ ನಡೆದಿದ್ದವು. ಅಂದಿಗೆ 13000 ಅಡಿ ಆಳದ ಗಣಿಗಳು ಪ್ರಪಂಚದಲ್ಲಿಯೇ ಅತ್ಯಂತ ಆಳವಾದ ಚಿನ್ನದ ಗಣಿಗಳಾಗಿದ್ದು, ವಿಶೇಷ ತಂತ್ರಜ್ಞಾನ ಮತ್ತು ಪರಿಣತಿಯಿಂದ ಪ್ರಪಂಚದಲ್ಲಿಯೇ ಹೆಸರು ಪಡೆದಿದ್ದವು. ಪ್ರಪಂಚದಲ್ಲಿಯೇ ಹೆಚ್ಚು ಪರಿಣತಿ ಪಡೆದ ಮೈನಿಂಗ್ ಎಂಜಿನಿಯರುಗಳು, ಲೋಹತಜ್ಞರು, ತಂತ್ರಜ್ಞರು ಕೆಲಸವನ್ನು ನಿರ್ವಹಿಸಿದ ಹೆಗ್ಗಳಿಕೆ ಈ ಚಿನ್ನದ ಗಣಿಗಳಿಗೆ. ಅನಂತರದ ದಿನಗಳಲ್ಲಿ ಗಣಿಗಳು ಇನ್ನಷ್ಟು ಆಳವಾಗಿ ಚಿನ್ನದ ಖಜಾನೆ ಖಾಲಿಯಾಗುತ್ತ ಹೋಯಿತು. ಜೊತೆಗೆ ಆಳದ ಸುರಂಗಗಳಲ್ಲಿ ಕೆಲಸ ನಿರ್ವಹಿಸುವುದು ಹೆಚ್ಚೆಚ್ಚು ಅಪಾಯಕಾರಿಯಾಗಿ ಪರಿಣಮಿಸಿತು. ಶಿಲಾಸ್ಫೋಟಗಳಂತೂ ಲೆಕ್ಕವಿಲ್ಲದಷ್ಟು ಸಂಭವಿಸುತ್ತಿದ್ದವು. ಕೆಲವೊಮ್ಮೆ ಸಣ್ಣ ಪ್ರಮಾಣದ ಭೂಕಂಪನಗಳೂ ಘಟಿಸುತ್ತಿದ್ದವು.

ಕ್ರಿ.ಶ. 1880ರಲ್ಲಿ ಪ್ರಾರಂಭಗೊಂಡ ಈ ಗಣಿಗಳು ಮೊದಲನೇ ದಶಕದಲ್ಲಿ ಆರು ಕಂಪನಿಗಳು ಒಟ್ಟುಗೂಡಿ 1,58,000 ಟನ್ನು ಅದಿರುನಿಂದ 47.5 ಕಿ.ಗ್ರಾ. ಚಿನ್ನವನ್ನು ಉತ್ಪಾದನೆ ಮಾಡಿದ್ದವು. ಈ ದಶಕದಲ್ಲಿ ಶಿಲೆಗಳನ್ನು ಪುಡಿಮಾಡಿ ಗುರುತ್ವದ ಕ್ರೋಢೀಕರಣದಿಂದ ಮತ್ತು ಪಾದರಸದಿಂದ ಚಿನ್ನವನ್ನು ಪ್ರತ್ಯೇಕಿಸುವ ವಿಧಾನವನ್ನು ಅನುಸರಿಸಿದ್ದರು. ಅನಂತರ ಸಯೆನೈಡ್ ಪ್ರೊಸೆಸ್ ಪದ್ಧತಿಯನ್ನು ಅನುಸರಿಸಲಾಯಿತು. ಮೊದಲ ಎರಡು ದಶಕಗಳಲ್ಲಿ ಗಳಿಸಿದ ಲಾಭದ ಹಣವನ್ನೆಲ್ಲ ಗಣಿಗಳ ಅಭಿವೃದ್ಧಿಗೆ ಮತ್ತೊಮ್ಮೆ ತೊಡಗಿಸಲಾಯಿತು. ಅಲ್ಲಿಂದ ವರ್ಷಕ್ಕೆ 6,00,000 ಟನ್ನು ಅದಿರುನಿಂದ ಟನ್ನಿಗೆ ಸರಾಸರಿ 1 ಔನ್ಸ್ ಚಿನ್ನ ಉತ್ಪಾದನೆಯಾಗಿ ವರ್ಷಕ್ಕೆ 15–20 ಟನ್ನು ಚಿನ್ನ ಉತ್ಪಾದನೆಯಾಗತೊಡಗಿತು. ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾದ ಕೆಜಿಎಫ್ ಗಣಿಗಳು ಪ್ರಪಂಚದಲ್ಲಿಯೇ ಪ್ರಖ್ಯಾತ ಮತ್ತು ಲಾಭದಾಯಕ ಗಣಿಗಳಾಗಿ ಬೆಳೆಯತೊಡಗಿದವು.

ಗಣಿ ಕಂಪನಿಗಳು, ಮೊದಲ ಐದು ದಶಕಗಳು ಕಾಲ ಪ್ರತಿವರ್ಷವೂ ತಾವು ಪಡೆದ ಲಾಭದ ಒಂದು ಭಾಗವನ್ನು ಅಂದಿನ ಮೈಸೂರು ಸರಕಾರಕ್ಕೆ ನೀಡುತ್ತಾ, ಮೈಸೂರು ಸರಕಾರ ಅಭಿವೃದ್ಧಿಗೆ ಸಹಾಯಕವಾಗಿ ನಿಂತಿದ್ದವು. ಕೆಜಿಎಫ್‌ನ ಮೊದಲ ಮತ್ತು ಕೊನೆಯ ಕೆಲವು ವರ್ಷಗಳನ್ನು ಬಿಟ್ಟರೆ ಉಳಿದ 121 ವರ್ಷಗಳ ಇತಿಹಾಸದಲ್ಲಿ ಕಡಿಮೆಯೆಂದರೆ 13,000 ಕಾರ್ಮಿಕರು ಹೆಚ್ಚೆಂದರೆ 34,400 ಕಾರ್ಮಿಕರು ದುಡಿಯುತ್ತಿದ್ದ ದಾಖಲೆಗಳಿವೆ. ಗಣಿಗಳು ತನ್ನ ಅಂತಿಮ ಕಾಲವನ್ನು ಸಮೀಪಿಸುವುದಕ್ಕೆ ಕೇವಲ ಮೂರು ನಾಲ್ಕು ವರ್ಷಗಳ ಹಿಂದೆಯೂ 13,000 ಕಾರ್ಮಿಕರು ಈ ಗಣಿಗಳಲ್ಲಿ ದುಡಿಯುತ್ತಿದ್ದರು.

ಈ ಚಿನ್ನದ ಗಣಿಗಳಲ್ಲಿ ತರಬೇತಿ ಪಡೆದ ಕಾರ್ಮಿಕರು, ಎಂಜಿನಿಯರುಗಳು, ತಂತ್ರಜ್ಞರು, ಲೋಹತಜ್ಞರು ದೇಶದಲ್ಲಿ ಅನೇಕ ಗಣಿಗಳು ಮತ್ತು ಕಾರ್ಖಾನೆಗಳು ಪ್ರಾರಂಭವಾಗಲು ಕಾರಣರಾಗಿದ್ದಾರೆ. ಈ ಕಾರಣದಿಂದ ಕೆಜಿಎಫ್ ಗಣಿಗಳನ್ನು 'ತಾಯಿ ಗಣಿಗಳು' ಎಂದು ಕರೆಯುತ್ತಾರೆ. ಗಣಿಗಳು 100 ವರ್ಷಗಳನ್ನು ಪೂರೈಸಿ ತನ್ನ ಶತವರ್ಷಗಳ ಗತವೈಭವವನ್ನು ಕ್ರಿ.ಶ. 1980ರಲ್ಲಿ ಆಚರಣೆ ಮಾಡಿಕೊಂಡ ಮೇಲೆ ನಷ್ಟದಲ್ಲಿ ನಡೆಯಿತೊಡಗಿದವು. ಇದು ಮುಂದಿನ ಎರಡು ದಶಕಗಳಲ್ಲಿ ವರ್ಷಕ್ಕೆ 50 ಕೋಟಿ ರೂಪಾಯಿಗಳ ನಷ್ಟವನ್ನು ತಲುಪಿದಾಗ ಕೇಂದ್ರ ಸರಕಾರ ಗಣಿಗಳನ್ನು ಮುಚ್ಚುವ ನಿರ್ಧಾರವನ್ನು ತೆಗೆದುಕೊಂಡಿತು. ಚಿನ್ನದ ಉತ್ಪಾದನೆಯನ್ನು ಹೆಚ್ಚಿಸಲು ನಡೆಸಿದ ಪ್ರಯತ್ನಗಳೆಲ್ಲ ವಿಫಲವಾದವು. ಸುತ್ತಮುತ್ತಲು ಹೆಚ್ಚು ಚಿನ್ನ ದೊರಕುವ ಯಾವುದೇ ನಿಕ್ಷೇಪಗಳು ದೊರಕದೆ ಹೋದವು. 20ನೇ ಶತಮಾನದ ಕೊನೆ ದಶಕದಲ್ಲಿ ಅಭಿವೃದ್ಧಿಗೊಳಿಸಿದ ಚಿಗುರುಗುಂಟ–ಮಲ್ಲಪ್ಪನಕೊಂಡ ಗಣಿಗಳಿಂದಲೂ ಯಾವುದೇ ಪ್ರಯೋಜನವಾಗಲಿಲ್ಲ.

ಕೆಜಿಎಫ್ ಗಣಿಗಳ ಉಸ್ತುವಾರಿಯಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಮಗಿರಿ ಗಣಿಗಳನ್ನು ಮತ್ತೆ ತೆರೆಯಲಾಯಿತು. ಈ ಗಣಿಗಳಿಂದಲೂ ಯಾವುದೇ ಪ್ರಯೋಜನವಾಗಲಿಲ್ಲ. ಇದೇ ಕಾಲಕ್ಕೆ ಅಂದರೆ ಕ್ರಿ.ಶ. 1999ರಲ್ಲಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ತೀರ ತಳಕ್ಕೆ ಕುಸಿದುಹೋಯಿತು. ಕ್ರಿ.ಶ. 2001ರ ಫೆಬ್ರವರಿ 28 ರಂದು ಚಿನ್ನದ ಗಣಿಗಳನ್ನು ಸಂಪೂರ್ಣವಾಗಿ ಮುಚ್ಚಲಾಯಿತು. ಈಗ ಚಿನ್ನದ ಗಣಿಗಳ ಚರಿತ್ರೆ ಏನಿದ್ದರೂ 'ಲಿಟ್ಲ್ ಇಂಗ್ಲೆಂಡ್' ಎನ್ನುವ ಒಂದು ಸಿಹಿ ನೆನಪಿನ ಗತವೈಭವ ಮಾತ್ರ. 3 ಕಿ.ಮೀ. ಗಿಂತಲೂ ಆಳವಾದ ಶ್ಯಾಫ್ಟ್‌ಗಳು ಮತ್ತು ಒಟ್ಟು 1670 ಕಿ.ಮೀ. ಉದ್ದದ ಸುರಂಗಗಳು ನಿಧಾನವಾಗಿ ಅಂತರ್ಜಲದಿಂದ ತುಂಬಿಹೋದವು. ಪ್ರಪಂಚ ಪ್ರಖ್ಯಾತ ಈ ಚಿನ್ನದ ಗಣಿಗಳು ಮತ್ತೆ ಪುನರಾರಂಭವಾಗುತ್ತವೆಯೇ? ಅಥವಾ ಎಂದೆಂದಿಗೂ ಮಣ್ಣಿನಲ್ಲಿ ಮುಚ್ಚಿಹೋಗುತ್ತವೆಯೇ ಎನ್ನುವ ಪ್ರಶ್ನೆ ಇಲ್ಲಿನ ಜನರನ್ನು ಇಂದಿಗೂ ಕಾಡುತ್ತಲೇ ಇದೆ. ಮುಂದಿನ ದಿನಗಳಲ್ಲಿ ಆಧುನಿಕ ತಂತ್ರಜ್ಞಾನದಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚು ಚಿನ್ನವನ್ನು ತೆಗೆಯುವ ಕಾಲ ಬಂದರೆ ಈ ಚಿನ್ನದ ಗಣಿಗಳು ಮತ್ತೆ ಪ್ರಾರಂಭವಾದರೂ ಆಶ್ಚರ್ಯವಲ್ಲ. ಕೆಜಿಎಫ್‌ನ ಮುಖ್ಯ ಗಣಿಗಳನ್ನು ಬಿಟ್ಟರೂ, ಸುತ್ತಮುತ್ತಲಿನ ಗಣಿಗಳನ್ನು ಯಾವಾಗಲಾದರೂ ಪ್ರಾರಂಭಿಸಬಹುದು.

ಕಾವಲುಪಡೆ ಮತ್ತು ಕಳ್ಳತನ :

ಗಣಿ ಸಂಪತ್ತನ್ನು ಮೊದಮೊದಲು ಪೋಲೀಸ್ ಸೂಪರಿನ್ಟೆಂಡೆಂಟ್ ಅಧಿಕಾರಿಯ ಕೆಳಗೆ ಕಾವಲು ಪಡೆ ರಕ್ಷಣೆ ಮಾಡುತ್ತಿತ್ತು. ಮುಂದಿನ ದಿನಗಳಲ್ಲಿ 'ಗಣಿ ಸಂಪತ್ತನ್ನು ಯಾವ ರೀತಿ ಸಂರಕ್ಷಿಸಬೇಕು ಮತ್ತು ಚಿನ್ನದ ಕಳ್ಳತನವನ್ನು ಹೇಗೆ ತಡೆಗಟ್ಟಬೇಕು' ಎಂದು ಸರ್. ಜಾನ್ ಲ್ಯಾಂಬರ್ಟ್ ಎನ್ನುವ ಕೆಸಿಐಇ ಅಧಿಕಾರಿಯನ್ನು ಗಣಿ ಕಂಪನಿ ಕೇಳಿಕೊಂಡು ಆತನನ್ನೇ ಅದರ ಉಸ್ತುವಾರಿ ನೋಡುಕೊಳ್ಳುವಂತೆ ಕೇಳಿಕೊಂಡಿತು.

ಸ್ಥಳೀಯ ಕಾವಲುಗಾರರಿಂದ ಚಿನ್ನದ ಕಳ್ಳತನವನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದು ತಿಳಿದುಕೊಂಡ ಲ್ಯಾಂಬರ್ಟ್, ರಾಜ್ಯದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಮತ್ತು ಮಿಲಿಟರಿ ಅಧಿಕಾರಿಗಳ ಸಹಾಯದಿಂದ 80 ಪಂಜಾಬಿ (ನಿವೃತ್ತಿ ಹೊಂದಿದ್ದ ಪಂಜಾಬಿ ಪೊಲೀಸ್ ಮತ್ತು ಮಿಲಿಟರಿ) ಕಾವಲುಗಾರರನ್ನು ನೇಮಿಸಿಕೊಂಡರು. ಮುಂದಿನ ನಾಲ್ಕೈದು ತಲೆಮಾರುಗಳು ಕಾಲ ಪಂಜಾಬಿಗಳು ಚಿನ್ನದ ಗಣಿಗಳಲ್ಲಿ ಮುಖ್ಯ ಕಾವಲುಗಾರರಾಗಿ ಕೆಲಸ ನಿರ್ವಹಿಸಿದರು.

ಒಂದು ಹಂತದಲ್ಲಿ ಕಾವಲು ಪಡೆಯನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿತ್ತು. ಯೂರೋಪ್ ದೇಶಗಳ ಮೇಲ್ವಿಚಾರಕ ಅಧಿಕಾರಿಗಳು, ಪಂಜಾಬಿಗಳು ಮತ್ತು ಸ್ಥಳೀಯರು. ಇವರ ಕೆಳಗೆ ಮದ್ರಾಸ್ ಪ್ರಾಂತ್ಯದಿಂದ ವಲಸೆ ಬಂದಿದ್ದ

ಕಾವಲುಗಾರರು. ಗಣಿಗಳ ಕಾವಲು ಉಸ್ತುವಾರಿಯಲ್ಲಿ ಮುಖ್ಯವಾಗಿ ಪಂಜಾಬಿಗಳೇ ಹೆಚ್ಚಾಗಿದ್ದು ಯಾವುದೇ ಆಯಕಟ್ಟು ಪ್ರದೇಶದಲ್ಲಿ ಪಂಜಾಬಿ ಮತ್ತು ಮದ್ರಾಸಿ ಕಾವಲುಗಾರರು ಇರುತ್ತಿದ್ದರು. ಮುಖ್ಯವಾಗಿ ಗಣಿ, ಶ್ಯಾಫ್ಟ್, ಮಿಲ್ಲು ದೊಡ್ಡ ದೊಡ್ಡ ಯಂತ್ರಗಳಿದ್ದ ಸ್ಥಳಗಳಲ್ಲಿ ಮತ್ತು ಇನ್ನಿತರ ಸ್ಥಳಗಳಲ್ಲಿ ಇವರನ್ನು ನೇಮಿಸಲಾಗಿತ್ತು.

ಅನಂತರದ ದಿನಗಳಲ್ಲಿ ರಾಜಸ್ಥಾನ, ಹರಿಯಾಣ ಮತ್ತು ಹಿಮಾಚಲ ಪ್ರದೇಶದಿಂದ ಬಂದವರು ವಿಶೇಷವಾಗಿ ಕಾವಲು ಕಾಯುವ ಕೆಲಸವನ್ನು ವಹಿಸಿಕೊಂಡರೆ, ದಕ್ಷಿಣ ಭಾರತದ ಕಾವಲುಗಾರರು ಸಾಮಾನ್ಯ ಕಾವಲುಗಾರರಾಗಿ ಕೆಲಸ ನಿರ್ವಹಿಸುತ್ತಿದ್ದರು. ಇವರಲ್ಲಿ ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಯಿಂದ ಬಂದ ತಮಿಳರೇ ಹೆಚ್ಚಾಗಿದ್ದರು. ಕಂಪನಿ ದೊಡ್ಡದಾಗುತ್ತ ಹೋದಂತೆ ಹೊಸ ಹೊಸ ಶ್ಯಾಫ್ಟ್‌ಗಳು, ಮಿಲ್ಲುಗಳು, ಕಾರ್ಯಾಗಾರದ ಕಟ್ಟಡಗಳು ಮತ್ತು ಬಂಗಲೆಗಳನ್ನು ಕಟ್ಟಲಾಗುತ್ತಿತ್ತು. ಜೊತೆ ಜೊತೆಗೆ ಕಾವಲು ಪಡೆಯಲ್ಲೂ ಅನೇಕರನ್ನು ನೇಮಿಸಿಕೊಳ್ಳಲಾಯಿತು.

1904ರಲ್ಲಿ ಮಿ. ಸಿಡ್ನಿ ಎಂ. ಪ್ರಿಚರ್ಡ್ ಎಂಬ ಬ್ರಿಟಿಷ್ ಅಧಿಕಾರಿಯನ್ನು ಮುಖ್ಯ ಮೇಲ್ವಿಚಾರಕರನ್ನಾಗಿ ನೇಮಿಸಿಕೊಳ್ಳಲಾಯಿತು. ಅವರ ನಂತರ ಮಿ. ಅರ್ಥರ್ ಆರ್. ಜೋನ್ಸ್, ಮೇಜರ್ ಡಿ.ಎನ್. ಫಿಟ್‌ಕುರ್ನ್ ಮತ್ತು ಲೆ. ಕಲೊನಲ್ ಜೆ.ಎನ್. ಲಾರ್ ಕೊಂಬೆ ಮುಖ್ಯರು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ 1954 ರಲ್ಲಿ ಮೊದಲ ಬಾರಿಗೆ ಭಾರತೀಯ ಮೆ। ಕೆ.ಆರ್.ಎ. ಗೌಡ ಮುಖ್ಯ ಅಧಿಕಾರಿಯಾಗಿ ನೇಮಕಗೊಂಡರು.[7]

ಕೆಲವು ಕುತೂಹಲಕಾರಿ ಘಟನೆಗಳು :

ಕಾವಲುಪಡೆಯ ನೋಂದಣಿ ಪುಸ್ತಕಗಳಲ್ಲಿ ದಾಖಲಾಗಿರುವ ಕೆಲವು ಕುತೂಹಲಕಾರಿ ಘಟನೆಗಳು ಹೀಗಿವೆ: ಒಂದು ಸಲ ಡ್ರಿಲ್ಲಿಂಗ್ ರಾಡ್ಸ್ ಇಟ್ಟಿದ್ದ ಕೋಣೆಯ ದೊಡ್ಡ ಬೀಗವನ್ನು ತೆಗೆದ ಕಳ್ಳರ ಗುಂಪೊಂದು ರಾಡ್ಸ್‌ಗಳನ್ನು ಕಳವು ಮಾಡಿತು. ಅನಂತರ ಸಿಕ್ಕಿಬಿದ್ದ ಕಳ್ಳರನ್ನು ಅದೇ ಸ್ಥಳಕ್ಕೆ ಕರೆದುಕೊಂಡು ಬಂದು 'ಬೀಗವನ್ನು ಹೇಗೆ ತೆಗೆದಿರಿ ತೋರಿಸಿ' ಎಂದಾಗ, ಅವರಲ್ಲೊಬ್ಬ ತನ್ನ ಕೈಯಲ್ಲಿದ್ದ ಸಾಧಾರಣ ಸೇಫ್ಟಿ ಪಿನ್ ತೆಗೆದುಕೊಂಡು ಬಾಗಿಲಿಗೆ ಹಾಕಿದ್ದ ದೊಡ್ಡ ಬೀಗವನ್ನು ಯಾವ ಪ್ರಯಾಸವು ಇಲ್ಲದೇ ಸಲೀಸಾಗಿ ತೆಗೆದುಬಿಟ್ಟನಂತೆ. ಇನ್ನೊಂದು ಸಲ ಗೋಡೆ ಹತ್ತಿ ಮಳಿಗೆ ಒಳಕ್ಕೆ ಇಳಿದು ಕಳ್ಳತನ ಮಾಡುತ್ತಿದ್ದುದ್ದನ್ನು ನೋಡಿದ ಕಾವಲುಗಾರ, ಮಳಿಗೆಗೆ ಹಾಕಿದ್ದ ಬೀಗವನ್ನು ನಿಧಾನವಾಗಿ ತೆಗೆದು ಮಳಿಗೆಯ ಒಳಗೆ ಹೋಗುವಷ್ಟರಲ್ಲಿ ಕಳ್ಳ ಮತ್ತೆ ಮಳಿಗೆ ಮೇಲಕ್ಕೆ ಹತ್ತಿ ಹೊರಕ್ಕೆ ಇಳಿದುಬಿಟ್ಟನಂತೆ. ಅವನನ್ನು ಮತ್ತೆ ಹೇಗೋ ಹಿಡಿದು ತಂದು 'ಅಷ್ಟು ಬೇಗನೆ ಗೋಡೆಯನ್ನು ಹೇಗೆ ಹತ್ತಿದೆ ತೋರಿಸು' ಎಂದರಂತೆ. ಅವನು ಎರಡು ಗೋಡೆಗಳ ಮೂಲೆಯಲ್ಲಿ ನಿಂತು ಕೈ ಕಾಲುಗಳನ್ನು

ಅಗಲವಾಗಿಸಿಕೊಂಡು ಹಲ್ಲಿಯಂತೆ ಗೋಡೆಯನ್ನು ಒತ್ತಿಕೊಂಡು ಕೆಲವೇ ಕ್ಷಣಗಳಲ್ಲಿ ಮಳಿಗೆಯ ಮೇಲಕ್ಕೆ ಹತ್ತಿಬಿಟ್ಟನಂತೆ.

ಇನ್ನೊಂದು ಶ್ಯಾಫ್ಟ್ ಹತ್ತಿರದಲ್ಲಿದ್ದ ಸಣ್ಣ ಕೋಣೆಯಲ್ಲಿ ಡ್ರಿಲ್ಲಿಂಗ್ ರಾಡ್ಸ್‌ಗಳನ್ನು ಇಟ್ಟಿದ್ದು ಯಾವಾಗಲೂ ಕಾವಲುಗಾರ ಅದರ ಎದುರುಗಡೆಯೆ ಕಾವಲು ನಿಂತಿರುತ್ತಿದ್ದ. ಒಂದು ದಿನ ಬಾಗಿಲು ತೆಗೆದು ನೋಡಿದಾಗ ಎಲ್ಲವೂ ಕಳ್ಳತನವಾಗಿ ಕೆಲವು ರಾಡುಗಳು ಮಾತ್ರ ಉಳಿದಿದ್ದವು. ಕಳ್ಳನನ್ನು ಹಿಡಿದುಕೊಂಡು ಬಂದು ಒಳಕ್ಕೆ ಹೇಗೆ ಹೋದೆ ತೋರಿಸು ಎಂದಿದ್ದೆ ಸಣ್ಣ ತಲೆಯ ಕಳ್ಳ ದೇಹವನ್ನು ಹಾವಿನಂತೆ ಮಾಡಿಕೊಂಡು ರಾಡುಗಳನ್ನು ಇಟ್ಟಿದ್ದ ಕೋಣೆಯ ಉಕ್ಕು ಬಾಗಿಲಲ್ಲಿ ಗಾಳಿಯಾಡಲು ಬಿಟ್ಟಿದ್ದ 7x8 ಇಂಚು ಅಗಲ ಸಂದಿಯಲ್ಲಿ ಒಳಕ್ಕೆ ಹೊರಕ್ಕೆ ನಿರಾಯಾಸವಾಗಿ ಸರ್ಕಸ್‌ನವರ ರೀತಿ ಹೋಗಿಬಂದನಂತೆ.

❖❖❖

ಶ್ಯಾಫ್ಟ್‌ಗಳು, ಮಿಲ್ಲುಗಳು ಮತ್ತು ಕಾರ್ಯಾಗಾರಗಳಲ್ಲಿ ತಾಮ್ರ, ಹಿತ್ತಾಳೆ, ಉಕ್ಕು, ಕಬ್ಬಿಣ ಇತ್ಯಾದಿ ಸಲಕರಣೆಗಳನ್ನು ಯಾವುದೋ ರೀತಿಯಲ್ಲಿ ಕಳ್ಳರು ಅನಾಯಾಸವಾಗಿ ದೋಚಿಕೊಂಡು ಹೋಗುತ್ತಿದ್ದು, ಅನೇಕರು ಕಳ್ಳತನ ಮಾಡಿ ಆಗಾಗ ಸಿಕ್ಕಿಕೊಳ್ಳುತ್ತಿದ್ದರಂತೆ. ಮಿಲ್ಲುಗಳಲ್ಲಿ, ಸುರಂಗಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಕೆಲವರು ಚಿನ್ನದ ಉಂಡೆಗಳನ್ನು ಮತ್ತು ಚಿನ್ನವಿರುವ ಅದಿರನ್ನು ತಮ್ಮ ಗುದದ್ವಾರಗಳಲ್ಲಿ ಅಡಗಿಸಿಕೊಂಡು ಹೊರಕ್ಕೆ ಬರುತ್ತಿದ್ದರು. ಒಬ್ಬ ಕಾರ್ಮಿಕನ ಮೇಲೆ ಸಂದೇಹ ಬಂದು, ಆತನನ್ನು ಆಸ್ಪತ್ರೆಗೆ ಸಾಗಿಸಿ ಕ್ಷ-ಕಿರಣ ಪರೀಕ್ಷೆ ನಡೆಸಿದರೆ, ಅವನ ಗುದುದ್ವಾರದಲ್ಲಿ 2x2 ಇಂಚಿನ ಸುತ್ತಳತೆಯಲ್ಲಿ ಒಂದು ಕಪ್ಪು ವಸ್ತು ಕಾಣಿಸಿಕೊಂಡಿತು. ಅದನ್ನು ಹೊರತೆಗೆದಾಗ ಚಿನ್ನದ ಪುಡಿಯನ್ನು ಬಟ್ಟೆಯಲ್ಲಿ ಸುತ್ತಿ ಇಟ್ಟುಕೊಂಡಿರುವುದು ತಿಳಿಯಿತು. ಇದೇ ರೀತಿ ಕಳ್ಳತನ ಮಾಡುತ್ತಿದ್ದ ಅನೇಕರನ್ನು ಪತ್ತೆ ಹಚ್ಚಲಾಯಿತು. ಕೆಲವರ ಗುದದ್ವಾರಗಳು ಗಾಯಗೊಂಡಿದ್ದರೆ, ಇನ್ನೂ ಕೆಲವರ ಗುದದ್ವಾರಗಳು ರೋಗಪೀಡಿತವಾಗಿದ್ದವು. ಕೆಲವು ಕಾರ್ಮಿಕರು ಎಲೆ ಅಡಿಕೆ ಹಾಕುವಂತೆ ಯಾವಾಗಲೂ ದವಡೆಗಳನ್ನು ಉಬ್ಬಿಸಿಕೊಂಡಿರುತ್ತಿದ್ದರಂತೆ. ಇವರಲ್ಲಿ ಕೆಲವರು ಎಲೆ ಅಡಿಕೆ ಸುಣ್ಣದ ಜೊತೆಗೆ ಚಿನ್ನದ ಪುಡಿ, ಚಿನ್ನದ ಅದಿರನ್ನು ಬಾಯಿಗೆ ಹಾಕಿಕೊಂಡು ಸಿಕ್ಕಿಬಿದ್ದಿದ್ದರು. ಇನ್ನೂ ಕೆಲವರು ಚಿನ್ನವಿರುವ ಅದಿರಿನ ಚೂರುಗಳನ್ನು ನುಂಗಿ ಮನೆಗೆ ಬಂದು ಭೇದಿ ಮಾತ್ರೆ ತೆಗೆದುಕೊಳ್ಳುತ್ತಿದ್ದರಂತೆ. ಮುಖ್ಯ ಗಣಿ ಪ್ರದೇಶಗಳಿಂದ ದೂರವಿದ್ದ ಪ್ರದೇಶಗಳಲ್ಲಿರುವ ಕಾವಲುಗಾರರನ್ನು ಎಷ್ಟೋ ಸಲ ಥಳಿಸಿ ದೋಚಿದ ಪ್ರಸಂಗಗಳೂ ಉಂಟು.

ಗಣಿ ಪ್ರದೇಶಗಳ ಸುತ್ತಮುತ್ತಲು ಬಿದ್ದಿರುವ ರಾಶಿರಾಶಿ ಅದಿರನ್ನು ಸ್ಥಳೀಯರು

ತಮ್ಮ ಮನೆಗಳಿಗೆ ಸಾಗಿಸಿ ಕುಟ್ಟಿ ಪುಡಿಮಾಡಿ ಅದಕ್ಕೆ ಪಾದರಸವನ್ನು ಬೆರೆಸಿ ಚಿನ್ನವನ್ನು ಶೋಧಿಸುವುದು ಇಂದಿಗೂ ನಡೆಯುತ್ತಲೇ ಇದೆ. ಕಳ್ಳರು ಎರಡು ಮೂರು ದಿನಗಳಿಗಾಗುವಷ್ಟು ಬುತ್ತಿ ಕಟ್ಟಿಕೊಂಡು ಮುಚ್ಚಿದ ಗಣಿಗಳಲ್ಲಿ ಇಳಿದು ಒಂದೆರಡು ದಿನ ಗಣಿಗಳಲ್ಲೇ ಇದ್ದು ಚಿನ್ನದ ಅದಿರನ್ನು ಗೋಣಿ ಚೀಲಗಳಲ್ಲಿ ತುಂಬಿ ತರುತ್ತಿದ್ದರು. ಇವರು ಏಣಿಗಳು, ಚಿನ್ನ ತೆಗೆದಿರುವ ಇಳಿಜಾರುಗಳು ಮತ್ತು ಗಾಳಿಯಾಡಲು ಬಿಟ್ಟಿರುವ ವೆಂಟಿಲೇಟರುಗಳ ಮೂಲಕ ಗಣಿಗಳ ಒಳಕ್ಕೆ ಇಳಿಯುತ್ತಿದ್ದರು. ಈ ರೀತಿಯ ಕಳ್ಳತನದಲ್ಲಿ ಎಷ್ಟೋ ಜನರು ಪ್ರಾಣ ಕಳೆದುಕೊಂಡಿದ್ದೂ ಉಂಟು.

ಕೆಲವು ವರ್ಷಗಳ ಹಿಂದೆ ನಮ್ಮ ಊರಿಗೆ ಹೋದಾಗ (ಯರ್ರಕೊಂಡ ಬ್ಯಾಟರಾಯನಹಳ್ಳಿ) ಯುವಕನೊಬ್ಬ ಆಸ್ಪತ್ರೆಯಲ್ಲಿ ಇರುವುದಾಗಿ ತಿಳಿಯಿತು. ವಿಷಯ ಏನು ಎಂದಾಗ ಅವನು ಚಿನ್ನವಿರುವ ಶಿಲೆಗಳನ್ನು ತರಲು ಒಂದು ರಾತ್ರಿ ಶ್ಯಾಫ್ಟ್ ಇದ್ದ ಕಾಂಪೌಂಡ್ ಒಳಕ್ಕೆ ನುಗ್ಗಿ ಶಿಲಾರಾಶಿಯ ಮಧ್ಯೆ ಹೇಗೋ ಸೇರಿಕೊಂಡನಂತೆ. ಆಗ ಸರಸರ ಶಬ್ದವನ್ನು ಕೇಳಿಸಿಕೊಂಡ ಪಂಜಾಬಿ ಕಾವಲುಗಾರ ತನ್ನ ಕೈಯಲ್ಲಿದ್ದ ಗನ್ನಿನಿಂದ ಒಂದೆರಡು ಸುತ್ತ ಗುಂಡು ಹಾರಿಸಿ, ಗುಂಡುಗಳು ಶಿಲಾರಾಶಿಗೆ ಬಿದ್ದು ಹಿಂತಿರುಗಿದ ವೇಗಕ್ಕೆ ಅವನ ತೊಡೆಯ ಒಳಕ್ಕೆ ತೂರಿಕೊಂಡಿದ್ದವು. ಉಸಿರುಬಿಡದೆ ಕುಳಿತಿದ್ದ ಯುವಕ ಹೇಗೋ ಅಲ್ಲಿಂದ ತಪ್ಪಿಸಿಕೊಂಡು ಆಸ್ಪತ್ರೆ ಸೇರಿಕೊಂಡಿದ್ದ.

ಆತ್ಮಹತ್ಯೆ ಮಾಡಿಕೊಂಡ ಬಿಳಿ ಅಧಿಕಾರಿಗಳು :

ಗಣಿಗಳ ಒಳಗೆ ಕಾರ್ಮಿಕರಿಗೆ ಟೀ, ಕಾಫಿಯನ್ನು ಸರಬರಾಜು ಮಾಡಲಾಗುತ್ತಿತ್ತು. ಆದರೆ ಬ್ರಿಟಿಷ್ ಅಧಿಕಾರಿಗಳು ತಮಗಾಗಿ ವಿಶೇಷ ಟೀ ಬಾಯ್‌ಗಳನ್ನು ನೇಮಿಸಿಕೊಂಡಿದ್ದರು. ಒಮ್ಮೆ ಚಾಂಪಿಯನ್ ರೀಫ್ ಗಣಿಗಳ ಕ್ಯಾ. ಮಿಲಿಯಂ ರಿಚರ್ಡ್ಸ್ ತನ್ನ ಟೀ ಬಾಯ್‌ನೊಂದಿಗೆ ಗಣಿಯೊಳಗೆ ಇಳಿದಿದ್ದರು. ಆ ಹುಡುಗ ವಾಪಸ್ ಬರುವಾಗ ಚಿನ್ನವಿರುವ ಶಿಲೆಯೊಂದನ್ನು ಜೇಬಿಗೆ ಹಾಕಿಕೊಂಡುಬಿಟ್ಟಿದ್ದ. ಇದನ್ನು ಗಮನಿಸಿದ ಭದ್ರತಾ ಸಿಬ್ಬಂದಿ ಟೀ ಬಾಯ್‌ನನ್ನು ಶಿಕ್ಷೆಗೆ ಗುರಿಪಡಿಸಿದರು. ಈ ತಪ್ಪು ಆಗಿದ್ದು ನನ್ನಿಂದಲೇ ಎಂದು ಭಾವಿಸಿದ ವಿಲಿಯಂ ರಿಚರ್ಡ್ಸ್ ತಮ್ಮ ಬಂಗಲೆಗೆ ಹೋಗಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡುಬಿಟ್ಟರು.[8]

ಇನ್ನೊಬ್ಬ ಬ್ರಿಟಿಷ್ ಅಧಿಕಾರಿ 3 ತಿಂಗಳು ರಜೆ ಹಾಕಿ ಊರಿಗೆ ತೆರಳಿದ್ದರು. ತೆರಳುವ ಮುನ್ನ ತನ್ನ ಕೆಳಗಿನ ಇನ್ನೊಬ್ಬ ಬ್ರಿಟಿಷ್ ಅಧಿಕಾರಿಗೆ ಎಲ್ಲ ಉಸ್ತುವಾರಿಯನ್ನು ವಹಿಸಿ, ತಾನು ಬರುವವರೆಗೆ ಎಲ್ಲವನ್ನೂ ಸರಿಯಾಗಿ ನೋಡಿಕೊಳ್ಳುವಂತೆ ಹೇಳಿ ಹೋಗಿದ್ದರು. ಊರಿನಲ್ಲಿ ಕೆಲಸ ಮುಗಿದ ಕಾರಣದಿಂದ ಅಧಿಕಾರಿ ಒಂದು ತಿಂಗಳು ಮುಂಚಿತವಾಗಿಯೆ ಹಿಂದಿರುಗಿ ಬಂದಿದ್ದರು. ತನ್ನ ಕೆಳಗಿನ ಅಧಿಕಾರಿಯ ಅನನುಭವ

ಮತ್ತು ಆತನ ಕೆಳಗಿನವರ ನಿರ್ಲಕ್ಷ್ಯದಿಂದ ಕಂಪನಿಗೆ ಸಾಕಷ್ಟು ನಷ್ಟ ಉಂಟಾಗಿತ್ತು. ಇದರಿಂದ ಬಹಳ ನೊಂದುಕೊಂಡ ಅಧಿಕಾರಿ, ತನಗೆ ಕಂಪನಿ ವಹಿಸಿದ್ದ ಕೆಲಸವನ್ನು ತಾನು ಸರಿಯಾಗಿ ನಿರ್ವಹಿಸಲಿಲ್ಲ ಮತ್ತು ತಾನು ಯಾವುದಕ್ಕೂ ಪ್ರಯೋಜನ ಇಲ್ಲದವನಾಗಿಬಿಟ್ಟೆನಲ್ಲ ಎಂದು ತನ್ನ ಬಂಗಲೆಯಲ್ಲಿ ತಲೆಗೆ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡುಬಿಟ್ಟರಂತೆ. ಯಾರೇ ತಪ್ಪು ಮಾಡಿದರೂ ಬ್ರಿಟಿಷ್ ಆಡಳಿತ ಅವರನ್ನು ಅವರ ಊರಿಗೆ ಕಳುಹಿಸಿಬಿಡುತ್ತಿತ್ತು. ಕಳಂಕ ಹೊತ್ತ ಅಧಿಕಾರಿಗಳು ಯಾರೂ ತಮ್ಮ ಊರಿಗೆ ಹಿಂದಿರುಗಿ ಹೋಗಲು ಬಯಸುತ್ತಿರಲಿಲ್ಲ.[9]

ಚಿನ್ನದ ದಾಸ್ತಾನು, ಕರೆನ್ಸಿ ಮತ್ತು ಹಣದುಬ್ಬರ :

ಪ್ರಪಂಚದಲ್ಲಿಯೇ ಹೆಚ್ಚು ಚಿನ್ನವನ್ನು ಉಪಯೋಗಿಸುವುದು ನಮ್ಮ ದೇಶದಲ್ಲಿಯೆ. ಅನಂತರ ಅಮೆರಿಕಾ, ಗಲ್ಫ್ ದೇಶಗಳು ಎರಡು ಮತ್ತು ಮೂರನೇ ಸ್ಥಾನ ಪಡೆಯುತ್ತವೆ. ಕೇವಲ ಕೆಲವು ದಶಕಗಳ ಹಿಂದೆ ಯಾವುದೇ ದೇಶ ತನ್ನಲ್ಲಿರುವ ಚಿನ್ನದ ದಾಸ್ತಾನಿಗಿಂತ ಹೆಚ್ಚು ಬೆಲೆಯ ಕರೆನ್ಸಿಯನ್ನು ಮುದ್ರಿಸುವಂತಿರಲಿಲ್ಲ. ಆ ದೇಶ ಹೊಂದಿರುವ ಚಿನ್ನದ ಬೆಲೆಗಿಂತ ಹೆಚ್ಚು ಕರೆನ್ಸಿಯನ್ನು ಮುದ್ರಿಸಿದರೆ, ಹಣದುಬ್ಬರ ಏರುತ್ತದೆ ಎನ್ನುವ ನಂಬಿಕೆ ಇತ್ತು. ಅಂದರೆ ಯಾವುದೇ ಒಂದು ದೇಶದ ಐಶ್ವರ್ಯ, ಅಭಿವೃದ್ಧಿಗೆ ಚಿನ್ನದ ದಾಸ್ತಾನೇ ಆಧಾರವಾಗಿತ್ತು. ಮುಂದಿನ ದಶಕಗಳಲ್ಲಿ ಯಾವುದೇ ದೇಶ ಮುದ್ರಿಸುವ ಕರೆನ್ಸಿಯ ಶೇಕಡ. 40 ರಷ್ಟು ಚಿನ್ನದ ಸಂಗ್ರಹ ಇರಬೇಕು ಎನ್ನುವ ಪರಿಪಾಠವಾಯಿತು. ಚಲಾವಣೆಯಲ್ಲಿರುವ ಹಣದ ಶೇಕಡ 20–30 ಬೆಲೆಯ ಚಿನ್ನವಾದರೂ ಸರಕಾರದ ದಾಸ್ತಾನಿನಲ್ಲಿ ಇರಬೇಕು ಎನ್ನುವ ವಾದವು ಕೆಲವು ದಶಕಗಳಲ್ಲಿತ್ತು. ಅದೂ ಕೂಡ ಮುಂದಿನ ದಿನಗಳಲ್ಲಿ ಸಂಪೂರ್ಣವಾಗಿ ಮುರಿದುಬಿದ್ದಿತು.

ಕ್ರಿ.ಶ. 1987 ರಲ್ಲಿ ಭಾರತ ಸರಕಾರದ ವಶದಲ್ಲಿದ್ದ ಚಿನ್ನ 320 ಟನ್ನು, ಆಗ ಚಲಾವಣೆಯಲ್ಲಿದ್ದ ಕರೆನ್ಸಿ 55,50,000 ಕೋಟಿ ರೂ. ಒಂದು ಅಂದಾಜಿನ ಪ್ರಕಾರ ಆಗ ಭಾರತದಲ್ಲಿ 20,000 ಟನ್ನು ಚಿನ್ನವಿದ್ದು ಅದೆಲ್ಲ ಖಾಸಗಿ ಚಿನ್ನ. ಪ್ರಸ್ತುತ ಭಾರತದಲ್ಲಿ ಖಾಸಗಿ ಚಿನ್ನದ ಲೆಕ್ಕ ನಿಖರವಾಗಿ ಯಾವ ಊಹೆಗೂ ದೊರಕ್ಕುತ್ತಿಲ್ಲ ಎಂದೇ ಹೇಳಬೇಕು. ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ 400 ಟನ್ನು ಚಿನ್ನವಿದ್ದರೆ ವರ್ಲ್ಡ್ ಬ್ಯಾಂಕ್ ಮತ್ತು ಐಎಮ್‌ಎಫ್ ಬ್ಯಾಂಕ್‌ನಲ್ಲಿ 40,000 ಟನ್ನು ಚಿನ್ನ ಇತ್ತು. ಅಂದರೆ ಪ್ರಪಂಚದ ಶೇಕಡ 1 ಭಾಗ ಮಾತ್ರ ನಮ್ಮ ದೇಶದಲ್ಲಿದೆ. ಇದು 1980 ರ ಲೆಕ್ಕಾಚಾರ.

ಕ್ರಿ.ಶ. 1990 ರಲ್ಲಿ ಚಿನ್ನದ ಮಾರಾಟದ ಮೇಲಿನ ನಿಷೇಧವನ್ನು ಪ್ರಪಂಚದಾದ್ಯಂತ ಹಿಂದಕ್ಕೆ ತೆಗೆದುಕೊಳ್ಳಲಾಯಿತು, ಅನಂತರ ಇನ್ನಷ್ಟು ಸರಳೀಕರಣವನ್ನು ಮಾಡಲಾಗಿ

ಇಂದು ಪ್ರಪಂಚದಾದ್ಯಂತ ಹೆಚ್ಚೂ ಕಡಿಮೆ ಆಯಾ ದೇಶದ ಕರೆನ್ಸಿಗೆ ಅನುಗುಣವಾಗಿ ಒಂದೇ ಬೆಲೆಯಲ್ಲಿ ಚಿನ್ನ ದೊರಕುತ್ತದೆ. ಹೆಚ್ಚೆಂದರೆ ಕೆಲವು ದೇಶಗಳಲ್ಲಿ ಅಂತರಾಷ್ಟ್ರೀಯ ಮಾರುಕಟ್ಟೆಗಿಂತ ಶೇಕಡ 6 ರಷ್ಟು ಹೆಚ್ಚಿನ ಬೆಲೆಯನ್ನು ಮಾತ್ರ ಕೊಡಬೇಕಾಗುತ್ತದೆ. ಇದರಿಂದ ಚಿನ್ನದ ಕಳ್ಳಸಾಗಾಣಿಕೆ ತಾನಾಗಿಯೆ ನಿಂತುಹೋಯಿತು. ಹೇರಳವಾಗಿ ಚಿನ್ನವನ್ನು ದಾಸ್ತಾನು ಮಾಡಿರುವ ದೇಶಗಳು ತಮಗೆ ಕಷ್ಟ ಬಂದಾಗ, ಅಥವಾ ಇಷ್ಟ ಬಂದಂತೆ ಆಗಾಗ ಟನ್ನುಗಟ್ಟಲೆ ಚಿನ್ನವನ್ನು ಅಂತರಾಷ್ಟ್ರೀಯ ಮಾರುಕಟ್ಟೆಗೆ ತಂದು ಸುರಿದುಬಿಡುತ್ತವೆ. ಆಗ ಚಿನ್ನದ ಬೆಲೆ ಇದ್ದಕ್ಕಿದ್ದಂತೆ ಪಾತಾಳಕ್ಕೆ ಕುಸಿದು ಹೋಗುತ್ತದೆ. ಆಫ್ರಿಕಾದ ಜೋಹಾನ್ಸ್‌ಬರ್ಗ್ ಗಣಿ ಒಂದರಿಂದಲೇ ದಿನಕ್ಕೆ 3 ಟನ್ನು ಚಿನ್ನ ಉತ್ಪಾದನೆಯಾಗುತ್ತಿದ್ದು, ಇದರಿಂದ ಬರುತ್ತಿರುವ ಹೆಚ್ಚು ಲಾಭ ಆ ಗಣಿಗಳನ್ನು ನಡೆಸುತ್ತಿರುವ ಬಹುಮಿಲಿಯ ಕಂಪನಿಗಳು ಪಡೆಯುತ್ತಿವೆ. ನೂರಾರು ವರ್ಷಗಳ ಹಿಂದಿನಿಂದಲೂ ತೃತೀಯ ಜಗತ್ತಿನ ದೇಶಗಳ ಎಲ್ಲಾ ಸಂಪತ್ತನ್ನು ಮುಂದುವರಿದ ದೇಶಗಳು ಲಪಟಾಯಿಸುತ್ತಿವೆ.

ಭಾರತ ಅಭಿವೃದ್ಧಿ ಹೊಂದುತ್ತಿರುವ ಮತ್ತು ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ. ಜೊತೆಗೆ ಚಿನ್ನವನ್ನು ಹೆಚ್ಚಾಗಿ ಪ್ರೀತಿಸುತ್ತಿರುವ ದೇಶವೂ ಹೌದು. ಇಲ್ಲಿ ಬಡವ-ಬಲ್ಲಿದ ಎನ್ನುವ ಬೇಧವಿಲ್ಲದೆ, ಎಲ್ಲರೂ ಚಿನ್ನದ ವ್ಯಾಮೋಹಗಳೆ. ಕ್ರಿ.ಶ. 1997 ರ ಒಂದು ವರ್ಷವನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಆ ವರ್ಷದಲ್ಲಿ ನಮ್ಮ ದೇಶದ ಜನರು ಒಟ್ಟು 737 ಟನ್ನು ಚಿನ್ನವನ್ನು ಉಪಯೋಗಿಸಿರುವುದಾಗಿ ತಿಳಿದುಬರುತ್ತದೆ. ಈ ಚಿನ್ನದಲ್ಲಿ ಹೆಚ್ಚು ಭಾಗವನ್ನು ಒಡವೆ ಮಾಡಲು ಉಪಯೋಗಿಸಲಾಗಿದೆ. ಉಳಿದದ್ದು ಕಾರ್ಖಾನೆ, ಔಷಧಿ ಮತ್ತು ಶೇರು ಬಂಡವಾಳದಲ್ಲಿ ತೊಡಗಿಸಲಾಯಿತು. ಈ 737 ಟನ್ನು ಚಿನ್ನದಲ್ಲಿ 527 ಟನ್ನು ಚಿನ್ನವನ್ನು ಹೊರ ದೇಶಗಳಿಂದ ಆಮದು ಮಾಡಿಕೊಂಡರೆ, 100 ಟನ್ನು ಹಳೆ ಚಿನ್ನವನ್ನು ಕರಗಿಸಿ ಒಡವೆಗಳನ್ನು ಮಾಡಲಾಯಿತು. 107 ಟನ್ನು ಚಿನ್ನ ಹೊರ ದೇಶಗಳಿಂದ ಕಳ್ಳತನವಾಗಿ ದೇಶದ ಒಳಕ್ಕೆ ಬಂದರೆ ಕೇವಲ 3 ಟನ್ನು ಚಿನ್ನವನ್ನು ದೇಶದಲ್ಲಿ ಉತ್ಪಾದಿಸಲಾಯಿತು.[10]

ಕ್ರಿ.ಶ. 1914 ರಿಂದ ಬ್ಯಾಂಕ್ ಆಫ್ ಇಂಗ್ಲೆಂಡಿನ ಆದೇಶದ ಮೇರೆಗೆ ಚಿನ್ನವನ್ನು ಮುಂಬೈಯಿನ ಟಂಕಸಾಲೆಗೆ ಕಳುಹಿಸಲಾಗುತ್ತಿತ್ತು. ಬೆಲೆ ಮಾತ್ರ ಅದೇ, 1 ಔನ್ಸ್‌ಗೆ 3.17 ಪೌಂಡ್. ಈ ಬೆಲೆಯನ್ನು ಕಂಪನಿಗಳಿಗೆ ಸ್ಟರ್ಲಿಂಗ್ ಮೌಲ್ಯದಲ್ಲಿ ಕೊಡಬೇಕಾಗಿತ್ತು. ಕ್ರಿ.ಶ. 1921 ರಲ್ಲಿ ಚಿನ್ನವನ್ನು ಇಂಗ್ಲೆಂಡಿಗೆ ಕಳುಹಿಸುವುದನ್ನು ನಿಲ್ಲಿಸಿ ಮುಂಬೈಯಿನ ಮಾರುಕಟ್ಟೆಗೆ ಕಳುಹಿಸಲು ಅನುಮತಿ ನೀಡಲಾಯಿತು. ಕೆಜಿಎಫ್‌ನಿಂದ ಮುಂಬೈ ಟಂಕಸಾಲೆಗೆ ಹದಿನೈದು ದಿನಗಳಿಗೊಮ್ಮೆ ಚಿನ್ನದ ಗಟ್ಟಿಗಳನ್ನು ಕಳುಹಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಆಗ 20 ತೊಲ (1 ತೊಲ 11.60 ಗ್ರಾಂ) ಮತ್ತು 250 ತೊಲದ

ಗಟ್ಟಿಗಳನ್ನು ಟಂಕಸಾಲೆ ಎರಕ ಹೊಯ್ಯುತ್ತಿತ್ತು. ಚಿನ್ನದ ಗಟ್ಟಿಗಳ ಮೇಲೆ 'ಇಂಡಿಯನ್ ಮೈನ್ಸ್ ಗೋಲ್ಡ್' ಎಂಬ ಛಾಪು ಬೀಳುತ್ತಿತ್ತು. ಪರಿಷ್ಕರಿಸಿದ ಚಿನ್ನದ ಗಟ್ಟಿಗಳನ್ನು ಕಂಪನಿಯ ಏಜೆಂಟರ ಮೂಲಕ ಮುಂಬೈಯಿನ ಚಿನಿವಾರ ಪೇಟೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಇದಕ್ಕಾಗಿ ನ್ಯಾಷನಲ್ ಬ್ಯಾಂಕ್ ಶೇಕಡ 1.8 ಕಮೀಶನ್ ಪಡೆಯುತ್ತಿತ್ತು. ಚಿನ್ನದ ಉದ್ದಿಮೆ ಆಗಿನ ಮೈಸೂರು ಸರ್ಕಾರವನ್ನು ವಿಶೇಷವಾಗಿ ಆರ್ಕಸಿತು. ಅದನ್ನು ರಾಷ್ಟ್ರೀಕರಿಸುವುದು ಅಗತ್ಯವೆಂದು ಮನಗಂಡ ಮೈಸೂರ ಸರ್ಕಾರ ಕ್ರಿ.ಶ. 1956 ನವೆಂಬರ್ 29 ರಂದು ಮೂರು ಕಂಪನಿಗಳನ್ನು ರಾಷ್ಟ್ರೀಕರಣ ಮಾಡಿ ನೇರ ಹತೋಟಿಗೆ ತಂದುಕೊಂಡಿತು. ಇದಕ್ಕಾಗಿ ಚಿನ್ನದ ಕಂಪನಿಗಳಿಗೆ ನೀಡಿದ ಪರಿಹಾರ 164 ಲಕ್ಷ ರೂ.

ಚಿನ್ನದ ಬಗ್ಗೆ ಆಗಿನ ಕೇಂದ್ರ ಸರ್ಕಾರದ ನಿಲುವು ಗಣಿ ಉದ್ದಿಮೆಯ ದಿಕ್ಕನ್ನೇ ಬದಲಾಯಿಸಿತು. ಕ್ರಿ.ಶ. 1958ರಲ್ಲಿ ಚಿನ್ನದ ಗಣಿ ಉದ್ದಿಮೆ ಮೈಸೂರು ಸರ್ಕಾರದ ಕೈಗೆ ಬಂದ ಮೇಲೂ ಚಿನ್ನದ ಪೂರೈಕೆಯ ವ್ಯವಸ್ಥೆಯಲ್ಲಿ ಅಂತಹ ಬದಲಾವಣೆಯೇನೂ ಕಾಣಲಿಲ್ಲ. ಕ್ರಿ.ಶ. 1958ರವರೆಗೆ ಮುಂಬೈ ಟಂಕಸಾಲೆಯಲ್ಲಿ ಚಿನ್ನದ ವಹಿವಾಟು ನಡೆಯುತ್ತಿತ್ತು. ಕ್ರಿ.ಶ. 1958ರ ಮೇಲೆ ಮೈಸೂರು ಸರಕಾರ ನಿಗದಿ ಪಡಿಸಿದ ಬೆಲೆಗೆ ಚಿನ್ನವನ್ನು ಕೇಂದ್ರ ಸರ್ಕಾರ ಕೊಳ್ಳಬೇಕಾಯಿತು. ಆಗ 1 ಔನ್ಸ್ ಚಿನ್ನಕ್ಕೆ 34 ಡಾಲರ್ ಅಥವಾ 1 ತೊಲಕ್ಕೆ 62.5 ರೂ. ಈ ಬೆಲೆಗೆ ಚಿನ್ನ ಮಾರಿದರೆ ಮೈಸೂರು ಸರ್ಕಾರಕ್ಕೆ ಕೈ ಸುಟ್ಟುಕೊಳ್ಳುವ ಪರಿಸ್ಥಿತಿ ಉಂಟಾಗಿ ತೀವ್ರ ಮುಜುಗರ ಎದುರಾಗಿ, ಕೇಂದ್ರ ಸರ್ಕಾರವೇ ಈ ಗಣಿಗಳ ವಹಿವಾಟನ್ನು ನೋಡಿಕೊಳ್ಳಲು ಮುಂದೆ ಬಂದಿತು. ಕ್ರಿ.ಶ. 1962ರ ಡಿಸೆಂಬರ್‌ನಲ್ಲಿ ಗಣಿ ಉದ್ದಿಮೆಯನ್ನು ಕೇಂದ್ರ ಸರ್ಕಾರವೇ ವಹಿಸಿಕೊಂಡಿತು.

ಹಣಕಾಸು ಸಚಿವಾಲಯುದ ಆರ್ಥಿಕ ವಹಿವಾಟು ಇಲಾಖೆ ಇದರ ಉಸ್ತುವಾರಿಯನ್ನು ನೋಡಿಕೊಳ್ಳತೊಡಗಿತು. ಮೈಸೂರು ಸರ್ಕಾರ ತನ್ನ ಒಡೆತನ ಬಿಟ್ಟುಕೊಡಲು ಕೇಂದ್ರ ಸರ್ಕಾರದಿಂದ ಪರಿಹಾರ ಧನವಾಗಿ 305.32 ಲಕ್ಷ ರೂ. ಪಡೆಯಿತು. ಕ್ರಿ.ಶ. 1966ರಲ್ಲಿ ಅಂತರರಾಷ್ಟ್ರೀಯ ಚಿನ್ನದ ಬೆಲೆ ದಿಢೀರ್ ಎಂದು ಮೇಲೇರಿತು. ಅಂತರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆ ಕೂಡ 10 ಗ್ರಾಂ ಚಿನ್ನದ ಬೆಲೆಯನ್ನು 53.52 ರೂ. ನಿಂದ 84.40 ರೂ. ಗೆ ಏರಿಸಿತು. (1 ಔನ್ಸ್‌ಗೆ 262.50 ರೂಪಾಯಿ) ಜೊತೆಗೆ ರೂಪಾಯಿಯ ಮೌಲ್ಯವು ದಿಢೀರನೆ ಕುಸಿದುಹೋಯಿತು. ಗಣಿ ಸಂಸ್ಥೆಗಳು ಕೇಂದ್ರ ಸರಕಾರದಿಂದ ಸುಮಾರು 2 ಕೋಟಿ ರೂ. ರಾಜಧನವಾಗಿ ಪಡೆದವು. ಹಟ್ಟಿ ಚಿನ್ನದ ಗಣಿಗಳು 10 ಗ್ರಾಂ ಚಿನ್ನಕ್ಕೆ 106 ರೂ. ಆಗ ಮಾರಾಟ ಮಾಡುತ್ತಿದ್ದ ಬೆಲೆಯನ್ನು ಅನುಸರಿಸಿ ಶೇಕಡ 7 ಭಾಗವನ್ನು ಗಣಿಗಳು ಕೊಡಬೇಕಾಗಿ ಬಂದಿತು. ಕ್ರಿ.ಶ. 1965ರಲ್ಲಿ ಮೈಸೂರು ಗಣಿಗಳು ಚಾಂಪಿಯನ್ ಗಣಿಗಳೊಂದಿಗೆ

ವಿಲೀನವಾದವು. ಕ್ರಿ.ಶ. 1972ರಲ್ಲಿ 'ಕೋಲಾರ ಗೋಲ್ಡ್ ಮೈನಿಂಗ್ ಅಂಡರ್‌ಟೇಕಿಂಗ್' ಸ್ವಾಮ್ಯವನ್ನು 'ಭಾರತ್ ಗೋಲ್ಡ್ ಮೈನಿಂಗ್ ಲಿಮಿಟೆಡ್' ಎನ್ನುವ ಕೇಂದ್ರ ಸರ್ಕಾರ ಸಂಸ್ಥೆ ವಹಿಸಿಕೊಂಡಿತು.

ಆಗ ಈ ಸಂಸ್ಥೆಗೆ ಸರ್ಕಾರ ವಹಿಸಿದ ಬಂಡವಾಳ 15 ಕೋಟಿ ರೂ. ಕ್ರಿ.ಶ. 1978ರಲ್ಲಿ ಈ ಮೂಲ ಬಂಡವಾಳವನ್ನು 25 ಕೋಟಿ ರೂ. ಗೆ ಏರಿಸಲಾಯಿತು. ಇದರ ಜೊತೆಗೆ ಸರ್ಕಾರ ಈ ಗಣಿ ಉದ್ದಿಮೆ ಸಂಸ್ಥೆಗೆ ಹಲವಾರು ಷರತ್ತುಗಳನ್ನು ವಿಧಿಸಿತು. ಈ ಷರತ್ತುಗಳಲ್ಲಿ ಗಣಿ ಉತ್ಪಾದಿಸುವ ಚಿನ್ನವನ್ನು ಕೇಂದ್ರ ಸರ್ಕಾರಕ್ಕೆ ಅಂತರರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆ ವಿಧಿಸಿದ್ದ ಬೆಲೆಗೆ ಅನುಗುಣವಾಗಿ ಮಾರಬೇಕು ಎಂಬುದೂ ಒಂದು. ಆಗ ಮಾರುಕಟ್ಟೆ ಬೆಲೆಗೂ ಅಂತರರಾಷ್ಟ್ರೀಯ ನಿಧಿ ಸಂಸ್ಥೆ ನಿಗದಿಪಡಿಸಿದ ಬೆಲೆಗೂ ಅಜಗಜಾಂತರ ಅಂತರವಿತ್ತು. ಈ ವ್ಯತ್ಯಾಸವನ್ನು ಕೇಂದ್ರ ಸರ್ಕಾರವೇ ತುಂಬಿ ಕೊಡಬೇಕಾಗಿ ಬಂದಿತು. ಕ್ರಿ.ಶ. 1979–80ರ ನಡುವೆ ಚಿನ್ನದ ವಹಿವಾಟಿನಲ್ಲಿ 377.38 ಲಕ್ಷ ರೂ. ಆದಾಯ ಬಂದಿತು. ಮುಂದಿನ ದಿನಗಳು ಆಗಿನ ಭಾರತ ಸರ್ಕಾರಕ್ಕೆ ಕೆಜಿಎಫ್ ಗಣಿಗಳು ಚಿನ್ನದ ಮೊಟ್ಟೆಗಳಿಡುವ ಬಾತುಕೋಳಿಗಳಾದವು.

❖❖❖

ಕ್ರಿ.ಶ. 1880ರಿಂದ ಗಣಿಗಳು ಉತ್ಪಾದಿಸುತ್ತಿದ್ದ ಚಿನ್ನದ ಮೇಲೆ ಶೇ. 5 ಲಾಭಾಂಶವನ್ನು ಮೈಸೂರು ಸರಕಾರಕ್ಕೆ ರಾಜಧನವಾಗಿ ನೀಡುತ್ತಿದ್ದವು. ಕ್ರಿ.ಶ. 1910ರಿಂದ ಚಿನ್ನ ಮಾರಾಟ ತಂದ ಲಾಭಾಂಶದ ಮೇಲೆ ಶೇ. 2 ಕರವನ್ನು ಹೇರಲಾಯಿತು. ಎರಡನೆ ಮಹಾಯುದ್ಧದ ಬಿಸಿಯು ಚಿನ್ನದ ಬೆಲೆಯನ್ನು ಗಗನಕ್ಕೇರಿಸಿದಾಗ, ಮೈಸೂರು ಸರ್ಕಾರ ಚಿನ್ನದ ಮೇಲೆ ಇನ್ನಷ್ಟು ಕರ ವಿಧಿಸಿತು. 1 ಔನ್ಸ್ ಬೆಲೆ 100 ರೂ. ಮೀರಿದರೆ ಹೆಚ್ಚುವರಿ ಬೆಲೆಯ ಶೇ. 75 ಭಾಗ ರಾಜ್ಯದ ಬೊಕ್ಕಸ ತುಂಬುತ್ತಿತ್ತು. ಕ್ರಿ.ಶ. 1949ರಲ್ಲಿ ಚಿನ್ನದ ಬೆಲೆ 1 ಔನ್ಸ್‌ಗೆ 306 ರೂ. ದಾಟಿತು. ಇದು ಕೂಡ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಹಣವನ್ನು ತುಂಬಿಸತೊಡಗಿತು. ಇಷ್ಟೊಂದು ಮೊತ್ತವನ್ನು ನೀಡುತ್ತಿದ್ದರೂ ಗಣಿ ಉದ್ದಿಮೆ ಲಾಭದಾಯಕವಾಗಿ ನಡೆಯುತ್ತಿತ್ತು. ಜೊತೆಗೆ ಶೇರುದಾರರಿಗೆ ಅಧಿಕ ಪ್ರಮಾಣದ ಲಾಭಾಂಶವನ್ನು ನೀಡುತ್ತಿದ್ದವು. ಕ್ರಿ.ಶ. 1940ರಿಂದ ಕ್ರಿ.ಶ. 1955ರವರೆಗೆ ಚಿನ್ನದ ಮೇಲಿನ ಕರದಿಂದ ಮೈಸೂರು ಸರಕಾರ 12.5 ಕೋಟಿ ರೂ. ಪಡೆಯಿತು.

ಕ್ರಿ.ಶ. 1988ರವರೆಗೆ ಕೆಜಿಎಫ್ ಗಣಿಗಳಲ್ಲಿ ಉತ್ಪನ್ನವಾದ ಚಿನ್ನ ಅಂತರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆ ನಿಗದಿ ಪಡಿಸಿದ ಬೆಲೆಗೆ ಕೇಂದ್ರ ಸರಕಾರಕ್ಕೆ ಮಾರಾಟವಾಗುತ್ತಿತ್ತು. ಅನಂತರ ಲಂಡನ್ನಿನ ಚಿನಿವಾರ ಪೇಟೆಯ ಚಿನ್ನದ ಬೆಲೆಯನ್ನು ಅನುಸರಿಸಿ ಅದಕ್ಕೆ ಶೇ. 30 ಭಾಗ ಸೇರಿಸಿ ಸರ್ಕಾರ ಚಿನ್ನವನ್ನು ಕೊಳ್ಳುತ್ತಿತ್ತು. ಇದರಿಂದ 'ಭಾರತ್

ಗೋಲ್ಡ್ ಮೈನಿಂಗ್ ಲಿಮಿಟೆಡ್' ಸಂಸ್ಥೆಯ ನಷ್ಟದ ಪ್ರಮಾಣ ಸ್ವಲ್ಪ ಮಟ್ಟಿಗೆ ಕುಗ್ಗಿತು. ಕ್ರಿ.ಶ. 1988ರಲ್ಲಿ ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು 'ಭಾರತ್ ಗೋಲ್ಡ್ ಮೈನಿಂಗ್ ಲಿಮಿಟೆಡ್' ಸಂಸ್ಥೆಗೆ ಚಿನ್ನವನ್ನು ಪರವಾನಗಿ ಪಡೆದ ಚಿನ್ನದ ವ್ಯಾಪಾರಿಗಳಿಗೆ ಮಾರಲು ಅನುಮತಿ ಕೊಟ್ಟಿತು. ಅನಂತರ ಕ್ರಿ.ಶ. 1989ರಲ್ಲಿ ಈ ಸವಲತ್ತನ್ನು ಕೆಲವು ಕೈಗಾರಿಕಾ ಬಳಕೆದಾರರಿಗೂ ವಿಸ್ತರಿಸಲಾಯಿತು. ಆದರೆ ಆಳದ ಗಣಿಗಳಿಂದ ಅದಿರು ಮೇಲಕ್ಕೆ ತಂದು ಚಿನ್ನ ಸಂಸ್ಕರಿಸುವ ಉದ್ದಿಮೆ ನಷ್ಟದಲ್ಲಿ ನಡೆಯತೊಡಗಿತ್ತು. 10ಗ್ರಾಂ ಚಿನ್ನದ ಬೆಲೆ ಮಾರುಕಟ್ಟೆಯಲ್ಲಿ ಸುಮಾರು 4300 ರೂ. ಗಳಿದ್ದರೆ 'ಭಾರತ್ ಗೋಲ್ಡ್ ಮೈನಿಂಗ್ ಲಿಮಿಟೆಡ್' ಸಂಸ್ಥೆ 10 ಗ್ರಾಂ ಚಿನ್ನ ಪಡೆಯಲು ಸರಿಸುಮಾರು 11,000 ರೂ. ಖರ್ಚು ಮಾಡತೊಡಗಿತು.

ಪಾತಾಳದ ಕಡೆಗೆ ಪಯಣ :

ಇಡೀ ಕೆಜಿಎಫ್ ನಗರ 3.23 ಕಿ.ಮೀ. ಆಳದ ಬಹುಮಹಡಿಯ ಕಟ್ಟಡಗಳೆಂದರೆ ಉತ್ಪ್ರೇಕ್ಷೆಯಾಗದು. ಶ್ಯಾಫ್ಟ್‌ಗಳಲ್ಲಿ ಕೆಳಕ್ಕೆ ಇಳಿಯುವಾಗ ಪ್ರತಿ 100 ಅಡಿಗಳಿಗೆ ಒಮ್ಮೆ ಸುರಂಗಗಳು ಎದುರಾಗಿ ಜೊತೆಗೆ ಜಗ್ಗನೆ ಬೆಳಕು ಕಾಣಿಸಿಕೊಳ್ಳುತ್ತದೆ. ಅದು ಪ್ರತಿ ಗಣಿಯನ್ನು ಅಭಿವೃದ್ಧಿಪಡಿಸಿರುವ ಒಂದೊಂದು ಹಂತ. ಕೆಜಿಎಫ್‌ನ ಅತ್ಯಂತ ಆಳವಾದ ಚಾಂಪಿಯನ್ ಗಣಿಯ 70ನೇ ಹಂತ ತಲಪುವವರೆಗೆ ಈ ಬೆಳಕಿನ ಕಣ್ಣಾಮುಚ್ಚಾಲೆ ನಡೆಯುತ್ತಲೆ ಇರುತ್ತದೆ. ಅನಂತರ ಕೊಲ್ಕತ್ತೆಯ ಮೆಟ್ರೊ ರೈಲಿನ ಸುರಂಗದಲ್ಲಿ ಇಳಿದಂತೆ ಭಾಸವಾಗುತ್ತದೆ. ಇಲ್ಲಿ ಧಾರಾಳ ವಿದ್ಯುತ್ ಬೆಳಕಿದ್ದು, ಕಾರ್ಮಿಕರ ಓಡಾಟದಿಂದ ರೈಲು ನಿಲ್ದಾಣದ ಗಜಿಬಿಜಿಯಂತೆ ಕಾಣಿಸುತ್ತದೆ. ಅದಿರು ಸಾಗಿಸುವ ಬಂಡಿಗಳು ಆ ಕಡೆಯ್ಲಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಸಾಗುತ್ತಿರುತ್ತವೆ. ಇಲ್ಲಿ ಯಂತ್ರ ಸಾಮಗ್ರಿಗಳ ದುರಸ್ತಿ ಮಾಡುವ ಕಾರ್ಯಾಗಾರವೂ ಇದೆ. ಈ ಕಾರ್ಯಾಗಾರ ದೊಡ್ಡ ಕಾರ್ಖಾನೆಯನ್ನೇ ನೆನಪಿಸುತ್ತದೆ. ಇದು ಪ್ರತಿಯೊಂದು ಗಣಿಯ ನೆಲಮಾಳಿಗೆಯ ಚಿತ್ರಣವಾಗಿದ್ದು ತುಂಬು ಚಟುವಟಿಕೆಗಳ ಕೇಂದ್ರವಾಗಿರುತ್ತದೆ. ಗಣಿಯ ಮೇಲೆ ವಿಶಾಲವಾದ ಪ್ರಾಂಗಣದಲ್ಲಿ ಎತ್ತರದ ಕಟ್ಟೆ ಇದ್ದು ಅದನ್ನು ಹತ್ತಲು ಮೆಟ್ಟಿಲುಗಳಿದ್ದು ಅಲ್ಲಿ ಕೇಜ್ ಸದಾ ಬಾಯಿ ತೆರೆದುಕೊಂಡೆ ಇರುತ್ತದೆ. ರಾಟೆಗೆ ಸುತ್ತಿದ ಕಬ್ಬಿಣದ ತುದಿಯು ಕೇಜನ್ನು ಶ್ಯಾಫ್ಟ್‌ನ ಒಳಕ್ಕೆ ಇಳಿಸುತ್ತದೆ. ಒಮ್ಮೆ ಹದಿನೈದು ಇಪ್ಪತ್ತು ಮಂದಿ ಸರಾಗವಾಗಿ ಇದರ ಮೂಲಕ ಗಣಿಯ ಒಳಗಿಳಿಯಬಹುದು. ಒಂದೂಕಾಲು ಟನ್ನು ಭಾರವನ್ನು ಸರಾಗವಾಗಿ ಇದು ಹೊತ್ತು ಜರ್ರನೆ ಇಳಿಯುತ್ತದೆ. ಇಂತಹದೇ ಕೇಜುಗಳು ಎಲ್ಲಾ ಗಣಿಗಳಲ್ಲೂ ಇರುತ್ತವೆ. 1159 ಮೀ. ಆಳವಿರುವ ಮೈಸೂರು ಗಣಿಯ ಕೇಜಿನ ಹೆಸರು ಎಡ್‌ಗೇರ್. ಹಾಗೆಯೇ ನಂದಿದುರ್ಗದ ಕೇಜಿನ ಹೆಸರು ಹೆನ್ರಿ, ಇದರ ಆಳ

1273 ಮೀ. ಇನ್ನೂ ಆಳ ಇಳಿಯಬೇಕೆಂದರೆ ಸುರಂಗಗಳಲ್ಲಿ ಸ್ವಲ್ಪ ದೂರ ನಡೆದು ಇನ್ನೊಂದು ನಿಲ್ದಾಣ ತಲುಪಿ ಅಲ್ಲಿಂದ ಬೇರೆ ಕೇಜ್‌ಗಳನ್ನು ಆಶ್ರಯಿಸಬೇಕು.

ಚಾಂಪಿಯನ್ ಗಣಿಯೊಂದರಲ್ಲೇ ಕೊರೆದಿರುವ ಸುರಂಗಗಳನ್ನೆಲ್ಲ ಒಂದರ ಹಿಂದೆ ಒಂದರಂತೆ ಜೋಡಿಸಿದರೆ ಅದು ಚನ್ನೈ ನಗರವನ್ನು ದಾಟಿಹೋಗುತ್ತದೆ. ಕೆಜಿಎಫ್‌ನ ಎಲ್ಲಾ ಸುರಂಗಗಳನ್ನು ಒಟ್ಟು ಕೂಡಿಸಿದರೆ ಅದು ಬೆಂಗಳೂರಿನಿಂದ ಮುಂಬುವರೆಗೆ ಮೆಟ್ರೂ ರೈಲಿನ ಹಾದಿಯಾಗಬಲ್ಲದು. ಆಳದ ಗಣಿಗಳಲ್ಲಿ ನೀರು ಸದಾ ಒಸರುತ್ತಿರುತ್ತದೆ. ಚಾಂಪಿಯನ್ ಗಣಿಯೊಂದರಿಂದಲೇ 1 ನಿಮಿಷಕ್ಕೆ 500 ಗ್ಯಾಲನ್ ನೀರನ್ನು ಮೇಲಕ್ಕೆ ಪಂಪು ಮಾಡಲಾಗುತ್ತಿತ್ತು. ಕ್ರಿ.ಶ. 1966 ರಲ್ಲಿ 4 ತಿಂಗಳು ಕಾಲ ಸತತವಾಗಿ ಮಳೆ ಬಿದ್ದಾಗ ಚಾಂಪಿಯನ್ ಗಣಿಯ ತಳ ನೀರಿನಿಂದ ಆವೃತವಾಗಿ ಚಿನ್ನದ ಉತ್ಪಾದನೆ ಪೂರ್ಣವಾಗಿ ಇಳಿದುಹೋಗಿತ್ತು. ಚಾಂಪಿಯನ್ ಗಣಿಯ 70ನೇ ಹಂತದ ಮೇಲಿರುವ ಸುರಂಗದಲ್ಲೇ ಸಾಗಿದರೆ, ಅದು ನೇರವಾಗಿ ಮೈಸೂರು ಗಣಿಗೇ ಕೊಂಡೊಯ್ಯುತ್ತದೆ. ಹಾಗೆಯೇ ನೇರವಾಗಿ 10,900 ಅಡಿ ದೂರ ನಡೆದರೆ ಅದು ನಂದಿದುರ್ಗ ಗಣಿಯ 57 ನೇ ಹಂತ. ಇದು ಇಲ್ಲಿನ ಚಿನ್ನದ ಗಣಿಗಳ ಅತ್ಯಂತ ಉದ್ದನೆಯ ಸುರಂಗ.[11]

❖❖❖

ಬಳ್ಳಾರಿ, ಗುಲ್ಬರ್ಗ, ರಾಯಚೂರು ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ತಾಪಮಾನ 48 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪುತ್ತದೆ. ಈ ತಾಪಮಾನಕ್ಕೆ ಮನುಷ್ಯನ ದೇಹ ಸುಲಭವಾಗಿ ಒಗ್ಗುವುದಿಲ್ಲ. ಹೊರಗಿನ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ಏರಿದರೆ ಸಾಕು ಅದನ್ನು ನಿಭಾಯಿಸಲು ನಮ್ಮ ದೇಹ ಹೋರಾಟ ನಡೆಸಬೇಕಾಗುತ್ತದೆ. ಅತ್ಯಂತ ಆಳದ ಚಾಂಪಿಯನ್ ಗಣಿಯಲ್ಲಿ 60 ಡಿಗ್ರಿ ಸೆಲ್ಸಿಯಸ್ ತಾಪಮಾನವಿರುತ್ತದೆ. ಇಲ್ಲಿನ ಸುರಂಗಗಳಲ್ಲಿರುವ ಶಿಲೆಗಳನ್ನು ಮುಟ್ಟಿದರೆ ಕೈ ಸುಡುತ್ತದೆ. ಈ ಬಿಸಿಯನ್ನು ನಿಭಾಯಿಸಲು ಅಲ್ಲಿಯವರೆಗೆ ಶಕ್ತಿಯುತ ಪಂಪುಗಳ ಮೂಲಕ ತಂಪು ಗಾಳಿಯನ್ನು ಹಾಯಿಸಲಾಗುತ್ತದೆ. ಇದರಿಂದ ಗಣಿಯ ಎಪ್ಪತ್ತನೆಯ ಹಂತದಲ್ಲಿ ನಿಂತಾಗಲೂ ಗಾಳಿ ತಣ್ಣಗೆ ಬೀಸುತ್ತದೆ. ಚಾಂಪಿಯನ್ ಗಣಿಯ ಮೇಲ್ಭಾಗದಲ್ಲಿರುವ ಗಾಳಿ ದೂಡುವ ಯಂತ್ರ, ಹವೆಯನ್ನು 4 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸಿ ನಿಮಿಷವೊಂದಕ್ಕೆ 3,30,000 ಘನ ಅಡಿ ಹವೆಯನ್ನು ಗಣಿಯೊಳಕ್ಕೆ ದೂಡುತ್ತದೆ. ಇಲ್ಲಿಂದ ದೂಡುವ ಈ ಶೈತ್ಯದ ಹವೆ 40 ನಿಮಿಷಗಳಲ್ಲಿ 8 ಕಿ.ಮೀ. ಉದ್ದದ ಗಣಿ ಸುರಂಗಗಳೆಲ್ಲವನ್ನು ಸುತ್ತಿಕೊಂಡು ಹೊರ ಬರುತ್ತದೆ.[12]

ಅದಿರಿನ ಸಂಸ್ಕರಣೆ :

10 ಗ್ರಾಂ. ಚಿನ್ನವನ್ನು ಪಡೆಯಬೇಕಾದರೆ ಕೊನೆಯ ಪಕ್ಷ 3 ರಿಂದ 4 ಟನ್ನು

ಶಿಲೆಯನ್ನು ಪುಡಿ ಮಾಡಬೇಕಾಗುತ್ತದೆ. ದಿನಕ್ಕೆ 3000 ಟನ್ನು ಚಿನ್ನದ ಅದಿರನ್ನು ಸಂಸ್ಕರಿಸುವ ಸ್ಥಾವರಗಳು ಕೆಜಿಎಫ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದವು. ಉಕ್ಕಿನ ತೊಟ್ಟಿಗಳ ಮೂಲಕ ಹೊರತಂದ ಅದಿರನ್ನು ಸಾಗುಪಟ್ಟಿಯ ಮೂಲಕ ಪುಡಿಮಾಡುವ ಹಲ್ಲುಗಳಿರುವ ಯಂತ್ರಕ್ಕೆ ಉಣಿಸಲಾಗುತ್ತಿತ್ತು. ಅಲ್ಲಿಂದ ಪುಡಿ ಶಂಖಾಕೃತಿಯ ಯಂತ್ರಕ್ಕೆ ಹೋಗಿ ಬೀಳುತ್ತಿತ್ತು. ಇಲ್ಲಿಂದ ಹೊರಟ ಅದಿರಿನ ನುಣ್ಣನೆಯ ಹಿಟ್ಟು, ಉರುಟು ಕಲ್ಲುಗಳನ್ನು ಹಾಕಿದ ಮತ್ತೊಂದು ಯಂತ್ರಕ್ಕೆ ಬಂದು ಬೀಳುತ್ತದೆ. ಅಲ್ಲಿ ಅದಿರು ಮತ್ತಷ್ಟು ನುಣ್ಣಣೆಯ ಪುಡಿಯಾಗುತ್ತದೆ. ಹಿಂದಿನ ಕಾಲದಲ್ಲಿ ಅದಿರನ್ನು ಪುಡಿ ಮಾಡಲು 4 ಮಣ ತೂಕದ ಉಕ್ಕಿನ ಒನಕೆಗಳನ್ನು ಬಳಸುತ್ತಿದ್ದರು. ಪುಡಿ ಮಾಡಿದ ಹಿಟ್ಟು ಕಂಬಳಿ ಹಾಸಿರುವ ಇಳಿಜಾರು ಮೇಜುಗಳ ಮೇಲೆ ಹರಿಯುತ್ತದೆ. ಹೀಗೆ ಜಾರುವಾಗ ಸಹಜವಾಗಿಯೆ ಹೆಚ್ಚು ಸಾಂದ್ರತೆಯಿರುವ ಚಿನ್ನದ ರೇಖುಗಳು ಕಂಬಳಿಯ ಒರಟು ಮೈಗೆ ಅಂಟಿಕೊಳ್ಳುತ್ತವೆ. ಉಳಿದ ಅದಿರಿನ ಪುಡಿ ಇಳಿಜಾರು ಮೇಜಿನಿಂದ ಕೆಳಕ್ಕೆ ಜಾರುತ್ತದೆ. ಮತ್ತೊಮ್ಮೆ ಈ ಪುಡಿಯನ್ನು ಇಳಿಜಾರು ಮೇಜಿನ ಮೇಲೆ ಹರಿಯಬಿಡುತ್ತಾರೆ. ಅಳಿದುಳಿದ ಚಿನ್ನದ ಅತ್ಯಲ್ಪ ಅಂಶ ಕೂಡ ಇಲ್ಲಿ ಶೇಖರಣೆಯಾಗುತ್ತದೆ. ಹೀಗೆ ಶೇಖರಿಸಿದ ಚಿನ್ನದ ರೇಖುಗಳನ್ನು ಸಂಗ್ರಹಿಸಿ ಅದಕ್ಕೆ ಪಾದರಸ ಬೆರೆಸುತ್ತಾರೆ. ಪಾದರಸ ಚಿನ್ನದ ರೇಖುಗಳನ್ನು ಪೂರ್ಣವಾಗಿ ಆವರಿಸಿಕೊಳ್ಳುತ್ತದೆ. ನಿರ್ದಿಷ್ಟ ಅವಧಿಗೊಮ್ಮೆ ಹರಿದುಬಂದ ಚಿನ್ನವನ್ನು ಸಂಗ್ರಹಿಸಿ ಗ್ರಾಫೈಟ್ ಮೂಸೆಯಲ್ಲಿಟ್ಟು ಫರ್ನೇಸ್ ಮೇಲೆ 1663 ಶೆಲ್ಶಿಯಸ್‌ಗಿಂತ ಹೆಚ್ಚು ಉಷ್ಣತೆಯಿಂದ ಕಾಯಿಸುತ್ತಾರೆ. ಆಗ ಪಾದರಸ ಆವಿಯಾಗಿ ಚಿನ್ನ ಮಾತ್ರ ಉಳಿಯುತ್ತದೆ. ಇದನ್ನೇ ಎರಕಹೊಯ್ದು ಚಿನ್ನದ ಗಟ್ಟಿಗಳನ್ನಾಗಿ ಪರಿವರ್ತಿಸುತ್ತಾರೆ. ಕಂಬಳಿಯಲ್ಲಿ ಉಳಿದ ರೊಜ್ಜೆಯನ್ನು ತೆಗೆದು ಕಡಾಯಿಯಲ್ಲಿ ಶೇಖರಿಸಿ ಅದರೊಳಗೆ ಸೋಡಿಯಂ ಸೈನೈಡ್ ಬೆರೆಸುತ್ತಾರೆ. ಅದನ್ನು ಮಿಶ್ರ ಮಾಡಲು ಕಡೆಯುತ್ತಿದ್ದಂತೆ ಅದು ಮೊಸರಿನಂತಾಗುತ್ತದೆ. ಇದು ಚಿನ್ನದ ಸಯೆನೇಡ್‌ನ ತಿರುಳು. ಈ ದ್ರಾವಕವನ್ನು ಸತುವಿನ ತಗಡಿರುವ ಪೆಟ್ಟಿಗೆಗೆ ಹಾಕುತ್ತಾರೆ. ಆಗ ಚಿನ್ನ ಕಪ್ಪು ಬಣ್ಣದ ಗಸಿಯಾಗುತ್ತದೆ. ಚಿನ್ನ ಮತ್ತು ಸತುವಿನ ಪ್ರಕ್ಷೇಪಯಿವನ್ನು ಗಂಧಕ ಮತ್ತು ನೈಟ್ರಿಕ್ ಆಮ್ಲದಿಂದ ತೋಯಿಸಿ ಬೋರಾಕ್ಸ್ ನೈಟರ್ ಮತ್ತು ಮ್ಯಾಂಗನೀಸ್ ಆಕ್ಸೈಡ್‌ನ್ನು ಮರಳಿನಲ್ಲಿ ಮಿಶ್ರಣ ಮಾಡಿ ಕುಲುಮೆಗಿಟ್ಟು ಕಾಯಿಸುತ್ತಾರೆ. ಈ ವಿಧಾನದಿಂದ ಚಿನ್ನದ 70 ಭಾಗ ಶೇಖರಣೆಯಾಗುತ್ತದೆ. ಇದನ್ನೇ ಗ್ರಾಫೈಟ್ ಮೂಸೆಯಲ್ಲಿ ಕಾಯಿಸಿ ಚಿನ್ನದ ಗಟ್ಟಿಗಳಾಗಿಸುತ್ತಾರೆ. ಈಗ ಚಿನ್ನವನ್ನು ಬೇಕಾದ ರೂಪದಲ್ಲಿ ಎರಕ ಹೊಯ್ದು ಚಿನ್ನದ ಪರಿಶುದ್ಧತೆಯ ಆಧಾರದ ಮೇಲೆ ಮುದ್ರೆ ಒತ್ತುತ್ತಾರೆ. ಬೇರೆ ಬೇರೆ ಗಾತ್ರದ ಬೇರೆ ಬೇರೆ ತೂಕದ ಚಿನ್ನದ ಗಟ್ಟಿಗಳು ಪೇಟೆಯಲ್ಲಿ ಮಾರಾಟಕ್ಕೆ ಸಿದ್ಧವಾಗುತ್ತವೆ.[13]

✦

1. ಇಂಡಿಯನ್ ಮಿನರಲ್ಸ್, ಐಬಿಎಮ್, ಹೊಸದೆಲ್ಲಿ, 2003–04.
2. Gold resources of India, GSI,series A, Economic geology, no38, part-1:text by M.Ziauddin & S.Narayanaswamy (1974).
3. Geo chemistry.
4. Gold resources of India, GSI,series A, Economic geology, no 38, part-1:text by M.Ziauddin & S.Narayanaswamy (1974)
5. Ibedum
6. Bharat gold mines Ltd. by K.S.R.Chari, formerly Secretary, Dept. of Mines, Govt. of India, New Delhi, sept. 1985. (confidential) pege 56
7. ಮೇ.ಕೆ.ಆರ್.ಗೌಡ, ಇತರರು, Centenary souvenir 1980, BGML, KGF, 1980
8. ಟಿ.ಆರ್.ಅನಂತರಾಮು, ರಾಜರಲೋಹ ಲೋಹಗಳ ರಾಜ, ನವಕರ್ನಾಟಕ ಪಬ್ಲಿಕೇಶನ್, 1999
9. Mining journals, 1936
10. Mining and Minerals, 1998
11. ಟಿ.ಆರ್. ಅನಂತರಾಮು, ರಾಜರ ಲೋಹ ಲೋಹಗಳ ರಾಜ: ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, 1999 ಪುಟ–58
12. Ibedum P 94-95
13. Centenary souvenir 1980, BGML, KGF

ಅಧ್ಯಾಯ–5

ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಿವರ್ತನೆ

> ಶೈವ–ವೈಷ್ಣವ, ಬೌದ್ಧ ಮತ್ತು ಕ್ರೈಸ್ತ ಧರ್ಮಗಳ ನಡುವಿನ ಘರ್ಷಣೆಗಳು, ಆಂಗ್ಲೋ–ಇಂಡಿಯನ್ನರ ಸಮಸ್ಯೆಗಳು, ಕಾರ್ಮಿಕರು ಕಟ್ಟಿದ ಕೆಲವು ಹಾಡುಗಳು ಮತ್ತು ಕಾರ್ಮಿಕರ ನಡುವಿನ ಸಾಮಾಜಿಕ ಸಮಸ್ಯೆಗಳನ್ನು ನೀಡಲಾಗಿದೆ. ಸ್ವಾತಂತ್ರ್ಯ ಪೂರ್ವ ಮತ್ತು ಅನಂತರ ಕೆಜಿಎಫ್ ನಲ್ಲಿ ಸ್ಥಾಪಿಸಿದ ವಿದ್ಯಾಲಯಗಳ ವಿವರಗಳೂ ಇವೆ.

ಕೆಜಿಎಫ್‌ನ ಪಿಡುಗು ದೇವತೆ, ಪಿಡಾರಿಯಮ್ಮನ ದೇವಸ್ಥಾನವನ್ನು ಮೊದಲಿಗೆ ಇಟ್ಟಿಗೆಗಳಲ್ಲಿ ಕಟ್ಟಲಾಗಿದ್ದು, ಅನಂತರ ಚೋಳರ ರಾಜರಾಜೇಂದ್ರನ ಕಾಲದಲ್ಲಿ ಅದನ್ನು ಕೆಡವಿ ಕಲ್ಲುಗಳಿಂದ ಕಟ್ಟಲಾಯಿತು ಎಂದು ತಿಳಿದುಬರುತ್ತದೆ. ಕ್ರಿ.ಶ. 1070 ರಲ್ಲಿ ರಾಜೇಂದ್ರ ಚೋಳನು, ಚಾಲುಕ್ಯರ ಹಿಕ್ಕಾಲ ರಾಜನನ್ನು ಮುಳುಬಾಗಿಲುನಿಂದ ತುಂಗಾಭದ್ರಾ ನದಿಯವರೆಗೂ ಓಡಿಸಿಕೊಂಡು ಹೋದನಂತೆ. ಈ ಯುದ್ಧದಲ್ಲಿ ಹಿಕ್ಕಾಲನು ಓಡಿದ ದೂರದವರೆಗೂ ನೂರಾರ ಆನೆಗಳು ಮತ್ತು ಕುದುರೆಗಳು ಸತ್ತು ಬಿದ್ದಿದ್ದವು ಎಂದು ಹೇಳಲಾಗಿದೆ.

ಶ್ರೀವಿಷ್ಣುವಿನ ಅವತಾರಗಳಲ್ಲಿ ವರಾಹ ಒಂದು ಅವತಾರ. ಈ ದೇವರನ್ನು ಪೂಜಿಸುತ್ತಿದ್ದ ಚೋಳರು ಚಿನ್ನದ ನಾಣ್ಯಗಳ ಮೇಲೆ ವರಾಹ ಮುದ್ರೆಯನ್ನು ಒತ್ತುತ್ತಿದ್ದರು. ಈ ಕಾರಣದಿಂದಲೇ ಚಿನ್ನದ ನಾಣ್ಯಗಳಿಗೆ ವರಹಗಳು ಎಂಬ ಹೆಸರು ಬಂದಿತು

ಎಂದು ಹೇಳಲಾಗಿದೆ. 1880ರಲ್ಲಿ ಬ್ರಿಟಿಷ್ ರಾಣಿ ಎಲಿಜಿಬತ್ ಟೇಲರ್ ಅವರ ಚಿತ್ರವಿರುವ ಶುದ್ಧ ಬೆಳ್ಳಿ ನಾಣ್ಯಗಳನ್ನು ಮುದ್ರಿಸಲಾಯಿತು. 1880–1900 ರವರೆಗೆ 13 ಬೆಳ್ಳಿ ಕಾಸುಗಳಿಗೆ 8 ಗ್ರಾಂ ಚಿನ್ನ ದೊರಕುತ್ತಿತ್ತು.[1]

ಶೈವರಾದ ಹೊಯ್ಸಳ ರಾಜನಾದ ಬಿಟ್ಟಿದೇವರು ಶ್ರೀರಾಮಾನುಜಚಾರ್ಯರ ಪ್ರೇರಣೆಯಿಂದ ವೈಷ್ಣವ ಧರ್ಮಕ್ಕೆ ಸೇರಿ ವಿಷ್ಣುವರ್ಧನ ಎಂದು ಹೆಸರು ಬದಲಿಸಿಕೊಂಡು ಇದೇ ಪ್ರದೇಶವನ್ನು ಆಳುತ್ತಿದ್ದರು. ವಿಷ್ಣುವರ್ಧನರ ನಂತರ ಬಂದ ನರಸಸಿಂಹ ಎಂಬ ರಾಜ ಮತ್ತು ಅವರ ದಳಪತಿ ಸೊಕ್ಕಿಮಯ್ಯ ಕ್ರಿ.ಶ. 1155ರಲ್ಲಿ ನಂಗಲಿಯಲ್ಲಿ ನೆಲೆ ನಿಂತರು. ಪಾಲಾರ್ ನದಿಗೆ ಅಡ್ಡವಾಗಿ ಕಟ್ಟಿರುವ ವಿಜಯಸತ್ಯಮಂಗಳಂ (ಈಗಿನ ಬೇತಮಂಗಲ) ಕೆರೆ ಒಡೆದುಹೋದಾಗ ಸೊಕ್ಕಿಮಯ್ಯ ಅದನ್ನು ಸರಿ ಮಾಡಿಸಿದರು.

ಕ್ರಿ.ಶ. 1336–1565ರವರೆಗೆ ವಿಜಯನಗರ ಆಡಳಿತದ ಕೆಳಗೆ ಬೇರೆ ಬೇರೆ ಸಂಸ್ಥಾನಗಳ ರಾಜರು ಮತ್ತು ಪಾಳೆಗಾರರು ಈ ಪ್ರದೇಶಗಳಲ್ಲಿ ಆಡಳಿತ ನಡೆಸುತ್ತಿದ್ದರು. ಅಕ್ಬರ್‌ನ ಆಸ್ಥಾನ ಮಂತ್ರಿ ತೊಡರ್‌ಮಲ್, ಮುಳುಬಾಗಿಲಿನ ಪ್ರಖ್ಯಾತ ಆಂಜನೇಯ ಮೂರ್ತಿಯನ್ನು ದರ್ಶನ ಮಾಡಿದ ಮೇಲೆ ದೇವಾಲಯದ ಸುತ್ತಲಿನ ಪ್ರದೇಶವನ್ನು ಗುಡಿಗೆ ಮಾನ್ಯವಾಗಿ ನೀಡಿ ಹೊರಟುಹೋದ. ಮುಳುಬಾಗಿಲಿಂದ 6 ಕಿ.ಮೀ. ದೂರದಲ್ಲಿ ಸುಂದರವಾದ ಸೋಮಸುಂದರೇಶ್ವರನ ದೇವಸ್ಥಾನವಿದ್ದು, ಹತ್ತಿರ ಆವಣಿ ಬೆಟ್ಟಗಳಲ್ಲಿ ಶಿವ ಮತ್ತು ಶಕ್ತಿದೇವತೆಗಳ ದೇವಾಲಯಗಳಿವೆ. ಬೆಟ್ಟದ ಮೇಲೆ ಸೀತಾದೇವಿಯ ಮಂದಿರವಿದ್ದು, ಲವ–ಕುಶರು ಇಲ್ಲಿಯೆ ಹುಟ್ಟಿದರು ಎನ್ನುವ ಪ್ರತೀತಿಯು ಇದೆ. ರಾಮನು ಅಯೋಧ್ಯೆಯಿಂದ ಅಶ್ವಮೇಧ ಯಾಗಕ್ಕಾಗಿ ಕುದುರೆಗಳನ್ನು ಬಿಟ್ಟಾಗ ಅವನ ಮಕ್ಕಳಾದ ಲವ–ಕುಶರು ಇಲ್ಲಿ ಅದೇ ಕುದುರೆಗಳನ್ನು ಕಟ್ಟಿಹಾಕಿದ ಮೇಲೆ ತಂದೆ ಮಕ್ಕಳಿಗೆ ಯುದ್ಧ ನಡೆದುದಾಗಿಯೂ ಹೇಳಲಾಗುತ್ತದೆ. 1799ರಲ್ಲಿ ಟಿಪ್ಪು ಸುಲ್ತಾನ್ ಬ್ರಿಟಿಷರ ಜೊತೆಗೆ ಯುದ್ಧದಲ್ಲಿ ಹೋರಾಡಿ ಸತ್ತ ನಂತರ ಈ ಪ್ರದೇಶ 3 ನೇ ಚಾಮರಾಜ ಒಡೆಯರ ಆಡಳಿತಕ್ಕೆ ಬಂದಿತು. 1831–1881ರ ತನಕ ಮೈಸೂರು ರಾಜ್ಯವನ್ನು ಬ್ರಿಟಿಷರು ಆಳುತ್ತಿದ್ದು, ಈ ಪ್ರದೇಶದಲ್ಲಿ ಅನೇಕ ಮಾರ್ಪಾಡುಗಳನ್ನು ತಂದರು. ಕೆಜಿಎಫ್‌ಗೆ 15 ಕಿ.ಮೀ. ದೂರದಲ್ಲಿರುವ ಬೂದಿಕೋಟೆ ಮೈಸೂರು ಹುಲಿ ಟಿಪ್ಪುಸುಲ್ತಾನ್ ತಂದೆ ಹೈದರಾಲಿ ಹುಟ್ಟಿದ ಊರು. 17ನೇ ಶತಮಾನದಲ್ಲಿ ತಂದೆ–ಮಗ ಇಬ್ಬರೂ ಈ ಪ್ರದೇಶವನ್ನು ಆಳಿದ್ದರು.

ಧರ್ಮಗಳು ಮತ್ತು ದೇವತೆಗಳು :

ಮೊದಲಿಗೆ ಇಲ್ಲಿನ ಜನ ಸ್ಥಳೀಯ ದೇವತೆಗಳಾದ ಮಾರಿಯಮ್ಮ, ಗಂಗಮ್ಮ, ಪಟಾಲಮ್ಮ, ಬ್ಯಾಟರಾಯನಸ್ವಾಮಿ ಮುಂತಾದ ದೇವತೆಗಳನ್ನು ಪೂಜಿಸುತ್ತಿದ್ದರು.

ಕಾಲರಾ, ಸಿಡುಬು, ಪ್ಲೇಗು ಇತ್ಯಾದಿ ರೋಗಗಳು ಬಂದಾಗ ಈ ದೇವತೆಗಳಿಗೆ ಪೂಜೆ ಮಾಡಿ ಜನರಿಗೆ ಗಂಜಿ ಪೂರೈಸುತ್ತಿದ್ದರು. ಕೆಲವು ಮುಖ್ಯ ದಿನಗಳಲ್ಲಿ ಪ್ರಾಣಿಗಳ ಬಲಿಯೂ ನಡೆಯುತ್ತಿತ್ತು. ಈ ದೇವತೆಗಳೆಲ್ಲ ದ್ರಾವಿಡ ಸಂಸ್ಕೃತಿಯ ದೇವತೆಗಳಾಗಿದ್ದು ಗಣಿ ಕಾಲೋನಿಗಳ ಜನರ ರಕ್ಷಣೆ ನೀಡುವ ದೇವತೆಗಳಾಗಿದ್ದರು.[2]

1875ಕ್ಕೆ ಮುಂಚೆಯೇ ಮಾರಿಕುಪ್ಪಂನಲ್ಲಿ ಮಾರಿಯಮ್ಮನ (ತೆಲುಗು ಮಾತನಾಡುವವರ) ದೇವಾಲಯ ಸಣ್ಣದಾಗಿ ಇರುವುದಾಗಿ ತಿಳಿದುಬರುತ್ತದೆ. ಉತ್ತರ ಆರ್ಕಾಟ್‌ನಿಂದ ಬಂದ ಚಲ್ಲಪ್ಪ ಎಂಬವರು ಒಂದು ದಿನ ಬೆಳಗ್ಗೆ ಗುಡಿಯ ಎದುರಲ್ಲಿ ನಿಂತು, ಒಳ್ಳೆ ಕೆಲಸ ಸಿಕ್ಕಿದರೆ ಗುಡಿಯನ್ನು ದೊಡ್ಡದಾಗಿ ಕಟ್ಟುವುದಾಗಿ, ದೇವತೆಯಲ್ಲಿ ಪ್ರಾರ್ಥನೆ ಮಾಡಿಕೊಂಡರಂತೆ. ಮುಂದೆ ಚಲ್ಲಪ್ಪ ದೊಡ್ಡ ಗುತ್ತಿಗೆದಾರನಾಗಿ, ಹೇಳಿದ ಮಾತಿನಂತೆ ಚಲ್ಲಪ್ಪ ಗುಡಿಯ ಮೇಲೆ ದೊಡ್ಡ ಗೋಪುರ ಕಟ್ಟಿಸಿದರು. ಬಹುಶಃ ಮೂಲವಾಗಿ ಈ ದೇವಿ ಇಲ್ಲಿ ಮಾರಮ್ಮನಾಗಿದ್ದು, ಅನಂತರ ತಮಿಳರು ಈ ಪ್ರದೇಶದಲ್ಲಿ ನೆಲೆಸಿದ ಮೇಲೆ ಮಾರಿಯಮ್ಮ, ಮುತ್ತುಮಾರಿಯಮ್ಮನಾಗಿ ಹೆಸರಾಗಿರಬೇಕು? ಆಂಡ್ರಸನ್‌ಪೇಟೆಯಲ್ಲಿರುವ 'ಚಲ್ಲಪ್ಪ ಶಾಲೆ'ಯನ್ನು ಸ್ಥಾಪಿಸಿದವರು ಇದೇ ಚಲ್ಲಪ್ಪ.[3]

ಗಣಿ ಕಾಲೋನಿಗಳಲ್ಲಿ ಶಿವ, ವಿಷ್ಣು, ರಾಮ ಮತ್ತು ಕೃಷ್ಣರ ಭಜನೆಗಳನ್ನು ಮಾಡುವುದರ ಜೊತೆಗೆ ಸ್ಥಳೀಯ ದೇವತೆಗಳ ಆರಾಧನೆಯೂ ಒಟ್ಟೊಟ್ಟಿಗೆ ನಡೆಯುತ್ತಿತ್ತು. ಹಲವು ಆದಿ ದ್ರಾವಿಡರು ಶೈವ ಮತ್ತು ವೈಷ್ಣವ ಆರಾಧಕರಾಗಿ ವೈದಿಕ ಪದ್ಧತಿಗಳನ್ನು ರೂಢಿಸಿಕೊಳ್ಳುತ್ತ ವಿಶಾಲ ಮನೋಭಾವನೆ ಬೆಳೆಸಿಕೊಳ್ಳಲು ಪ್ರಯತ್ನ ನಡೆಸಿದ್ದರು. ಮುರುಗನ್ (ಕುಮಾರಸ್ವಾಮಿ) ನನ್ನು ಪ್ರಾರ್ಥನೆ ಮಾಡುವುದರ ಜೊತೆಗೆ ವಿನಾಯಕ, ಶ್ರೀರಾಮ, ಶ್ರೀಕೃಷ್ಣರ ಪಾವಿತ್ರ್ಯದ ಬಗ್ಗೆಯೂ ಹೇಳುತ್ತಿದ್ದರು. ಹಾಗೆಯೇ ಉದ್ದಂಡ್‌ಮ್ಮಾಳ್ ಮತ್ತು ಕಾಟೇರಿ ದೇವತೆಗಳನ್ನು ಪೂಜೆ ಮಾಡುತ್ತಿದ್ದರು.[4]

ಶ್ರೀ. ಪಿಳ್ಳೈ ಎಂಬವರು, ನಂಪರ್‌ಮಾಳ್ ದೇವಾಲಯದ ಹತ್ತಿರ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿ ಆದಿ ದ್ರಾವಿಡರ ಮಕ್ಕಳಿಗೆ ಪಾಠ ಮಾಡುತ್ತಿದ್ದರು. ಕಟ್ಟಿಗೆ ಮಂಡಿ ವ್ಯಾಪಾರಿ ರಾಮಾನುಜಲುನಾಯಿಡು ರಾಬರ್ಟ್‌ಸನ್‌ಪೇಟೆಯಲ್ಲಿ ತಮ್ಮ ಮನೆಯ ಹತ್ತಿರ ಸಭೆಗಳನ್ನು ನಡೆಸಿ ಭಜನೆಮಾಡಿಸಿ, ಆಧ್ಯಾತ್ಮದ ಕಡೆಗೆ ಜನರನ್ನು ಆರ್ಕಸುವಲ್ಲಿ ಸಫಲರಾಗಿದ್ದರು. ಇವರು 1908 ರಲ್ಲಿ ರಾಬರ್ಟ್‌ಸನ್‌ಪೇಟೆಯಲ್ಲಿ ಕೋದಂಡರಾಮಸ್ವಾಮಿ ದೇವಾಲಯುವನ್ನು ಸ್ಥಾಪಿಸಿದರು. ಈ ದೇವಾಲಯ ಕೆಜಿಎಫ್‌ನಲ್ಲಿ ಮುಖ್ಯ ದೇವಸ್ಥಾನವಾಗಿದ್ದು ಇಂದಿಗೂ ಸಾವಿರಾರು ಭಕ್ತರನ್ನು ಆರ್ಕಸುತ್ತಿದೆ. ಎಲ್ಲಾ ಜನಾಂಗಗಳ ಜನರೂ ಸೇರಿ ಒಂಬತ್ತು ದಿನಗಳು ಕಾಲ ಜಾತ್ರೆಯನ್ನು ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ.

ಶೈವ ಮತ್ತು ವೈಷ್ಣವ ಧರ್ಮಗಳು :

ತಮಿಳುನಾಡಿನ ಕಡೆಯಿಂದ ಬಂದ ಶೈವರು ಪ್ರಾಣಿ ಬಲಿ ಕೊಡುವುದು ಸರಿಯಲ್ಲ ಎಂದು ಆಗಾಗ ಉಪನ್ಯಾಸಗಳನ್ನು ನೀಡಿ, ಪ್ರಾಣಿ ಬಲಿ ನೀಡುವುದನ್ನು ಸ್ವಲ್ಪಮಟ್ಟಿಗೆ ತಡೆ ಹಿಡಿದರು. ಇವರನ್ನು ನೋಡಿದ ಕೆಲವು ಆದಿ ದ್ರಾವಿಡ ಜನಾಂಗದವರು ಹಣೆ ಕೈ, ಕಾಲು, ಮೈ ಮೇಲೆಲ್ಲ ವಿಭೂದಿ ಪಟ್ಟೆಗಳನ್ನು ಹಚ್ಚಿಕೊಂಡರೂ ಜಾತಿ ಮತ್ತು ಅಸ್ಪೃಶ್ಯತೆ ಎಂಬ ಪಿಡುಗು ಮಾತ್ರ ಅವರನ್ನು ಬಿಡಲಿಲ್ಲ.

ವೈಷ್ಣವ ಅನುಯಾಯಿ ಚಿನ್ನಸ್ವಾಮಿ ತಮ್ಮ ಪ್ರಚಾರದಲ್ಲಿ ಶೈವರಾಗಿ ಮತಾಂತರ ಹೊಂದಿದ ಅನುಯಾಯಿಗಳನ್ನು ಗೇಲಿಮಾಡುತ್ತ ಶಿವನನ್ನು ನಂಬಿದವರು ನಿಜವಾಗಿಯೂ ಘೋರ ವಿಧಿಬರಹ ಪಡೆಯುವುದಾಗಿ, ಕುರುಡರಾಗಿ ಅತ್ಯಂತ ದಾರುಣ ಸಾವನ್ನು ಅನುಭವಿಸುತ್ತಾರೆ ಎಂದು ಪ್ರಚಾರ ಮಾಡಿದರು.[6] ಹಣೆಯಲ್ಲಿ ಪಟ್ಟೆ, ಮೀಸೆ ಮತ್ತು ತಲೆ ಬೋಳಿಸಿಕೊಂಡು ಬ್ರಾಹ್ಮಣರನ್ನು ಅನುಕರಿಸುವವರು ಶಿವನನ್ನು ಗೇಲಿ ಮಾಡುವಂತೆ, ಅಬ್ರಾಹ್ಮಣ ಪದ್ಧತಿಗಳನ್ನು ನಡೆಸಿ ತಮ್ಮನ್ನು ಅಗೌರವಿಸಿಕೊಂಡಂತೆ ಎಂದು ಪ್ರಚಾರ ಮಾಡುತ್ತಿದ್ದರು.

ಮತಾಂತರಗೊಂಡ ಆದಿ ದ್ರಾವಿಡರ ಸಂಖ್ಯೆ ಕಡಿಮೆ ಇದ್ದರೂ ಆತ್ಮಗೌರವವನ್ನು ಬೆಳೆಸಿಕೊಂಡಿದ್ದರು. 'ತಮಿಳನ್' ಪತ್ರಿಕೆಯಲ್ಲಿ ಜಿ. ಅಪ್ಪಾದೊರೆಯಾರ್ ಅವರು ಬ್ರಾಹ್ಮಣರ ದಂತಕತೆಗಳಲ್ಲಿದ್ದ ಮೂಢನಂಬಿಕೆ ಮತ್ತು ತಪ್ಪುಗಳನ್ನೆಲ್ಲ ಎತ್ತಿ ತೋರಿಸುತ್ತಿದ್ದರು. 'ಪರಮೇಶ್ವರನಿಗೆ ಒಂದು ಬಹಿರಂಗ ಪತ್ರ' ಎಂಬ ಶೀರ್ಷಿಕೆಯನ್ನು ಬ್ರಾಹ್ಮಣರ ಹಿಂದೂಧರ್ಮದ ಬಗ್ಗೆ ಇದೇ ಪತ್ರಿಕೆಯಲ್ಲಿ ಪ್ರಕಟಿಸಿದಾಗ ಆ ಪತ್ರಿಕೆಗೆ ಕೆಜಿಎಫ್‌ನಲ್ಲಿ ಸಹಜವಾಗಿಯೇ ಬಾರಿ ಬೇಡಿಕೆ ಹುಟ್ಟಿಕೊಂಡಿತು.[9] ಬೌದ್ಧರ ಅನುಯಾಯಿ ಎಂ.ಪಿ. ಶಂಕರಸ್ವಾಮಿ ಇತರ ಧರ್ಮಗಳ ನಾಯಕರ ಜೊತೆಗೆ ಚರ್ಚೆಗಳನ್ನು ಏರ್ಪಡಿಸಿ ಪತ್ರಿಕೆಯಲ್ಲಿ (1928) ಹಿಂದೂ ಧರ್ಮ ಪಂಚಮರ ಸ್ವಧರ್ಮವಲ್ಲ (ಪಂಚಮಕ್ಕು ಹಿಂದೂ ಮಥಂ ಸೊಂಥಂ ಇಲ್ಲೈ) ಮತ್ತು ಅದನ್ನು ತಪ್ಪೆಂದು ನಿರೂಪಿಸುವುದಾದರೆ ಹಣದ ಬಹುಮಾನ ನೀಡುವುದಾಗಿ ತಿಳಿಸಲಾಗಿತ್ತು.[10] 1939ರಲ್ಲಿ ಚಾಂಪಿಯನ್ ಗಣಿಗಳ ಜಿ.ಟಿ. ತಂಗರಾಜು 'ತಾಯಿತಪಟ್ಟವರ್‌ಗಳ್ ಹಿಂದೂಗಳ್ ಅಲ್ಲೆ' (ತುಳಿತಕ್ಕೆ ಒಳಪಟ್ಟವರು ಹಿಂದೂಗಳಲ್ಲ) ಎಂಬ ಪುಸ್ತಕ ಪ್ರಕಟಿಸಿದರು.

ಮಾರಿಕುಪ್ಪಂ ಮತ್ತು ಚಾಂಪಿಯನ್ ರೀಫ್‌ನ ಬೌದ್ಧ ಮಂಡಲಿಗಳು 'ತಮಿಳನ್' ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದ ಲೇಖನಗಳು ಜನರಲ್ಲಿ ಹೊಸ ಆಲೋಚನೆಗಳನ್ನು ಸೃಷ್ಟಿಸುವುದರಲ್ಲಿ ಸಫಲವಾಗಿದ್ದವು. ಇದೆಲ್ಲದರಿಂದ ಇಲ್ಲಿನವರು ಮುಂದಿನ ದಿನಗಳಲ್ಲಿ ಪೆರಿಯಾರ್ ರಾಮಸ್ವಾಮಿಯವರ ದ್ರಾವಿಡ ಆಂದೋಲನದ ಜೊತೆಗೆ ಗುರುತಿಸಿಕೊಳ್ಳಲು

ಸಹಾಯಕವಾಯಿತು. ವೈಷ್ಣವರು ಸ್ವಲ್ಪಮಟ್ಟಿಗೆ ಭೀತಿಗೊಳಗಾಗುವಷ್ಟು ಬೌದ್ಧ ಧರ್ಮ ಪ್ರಸಿದ್ಧಿ ಪಡೆಯಿತು.[11] ಕೆಜಿಎಫ್‌ನ ಕೆಲವು ಅಸ್ಪೃಶ್ಯ ಜನಾಂಗಗಳ ಬದುಕು ತುಸು ಆಶಾದಾಯಕವಾಗಿ ಬದಲಾಗಿತ್ತು. ಗಣಿಗಳಿಗೆ ಅಗತ್ಯವಿದ್ದ ಕಾರ್ಮಿಕರು ಮತ್ತು ಗಣಿಗಳಿಗೆ ಬೇಕಾಗಿದ್ದ ಜಲ್ಲಿಕಲ್ಲು, ಇಟ್ಟಿಗೆ ಸರಬರಾಜು ಮಾಡುತ್ತಿದ್ದವರು ಹೆಚ್ಚಾಗಿ ಆದಿ ದ್ರಾವಿಡರೆ ಆಗಿದ್ದರು. ಕೃಷ್ಣಗಿರಿಯಿಂದ ಬಂದ ವೆಂಕಟರಮಣ ಮೇಸ್ತ್ರಿ ಚಾಂಪಿಯನ್ ಗಣಿಗಳಿಗೆ ಮರಳು ಒದಗಿಸುತ್ತಿದ್ದು ತಿಂಗಳಿಗೆ 1000ರೂ ಲಾಭ ಸಂಪಾದಿಸುತ್ತಿದ್ದರು.[12]

ವೈ. ಮುರುಗೇಶನ್ ಮತ್ತು ಎಂ.ಸಿ. ಮದುರೈ ಪಿಳ್ಳೈ ಮೊದಲಿಗೆ ಗುತ್ತಿಗೆದಾರರಾಗಿದ್ದು ಅನಂತರ ಆದಿ ದ್ರಾವಿಡ ಕಾರ್ಮಿಕರ ನಾಯಕರಾದರು. 1900–1920ರ ನಡುವೆ ಪಿಳ್ಳೈ, ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದರು. 1899ರಲ್ಲಿ ಶ್ರೀರಂಗಂ ತೆರಳಿದ ಪಿಳ್ಳೈ ಅಲ್ಲಿನ ವೈಷ್ಣವ ಗುರುಗಳಾದ ಶ್ರೀಮದ್ ಅರುಳ್ ಮಾರಿ ಸ್ವಾಮಿಗಳ ಆಶೀರ್ವಾದ ಪಡೆದು ಅವರನ್ನು ಕೆಜಿಎಫ್‌ಗೆ ಕರೆದು ತಂದು, ಹಲವು ಆದಿ ದ್ರಾವಿಡರನ್ನು ವೈಷ್ಣವ ಧರ್ಮಕ್ಕೆ ಮತಾಂತರ ಮಾಡಿಸುವುದರಲ್ಲಿ ಸಫಲರಾಗಿದ್ದರು. ಎಂ.ಎಲ್.ಸಿ ಆಗಿ ಆಯ್ಕೆಯಾಗಿದ್ದ ಪಿಳ್ಳೈ ಮದ್ರಾಸಿನ ಗೌರವ ನ್ಯಾಯಾಧೀಶರಾಗಿಯೂ ಕಾರ್ಯ ನಿರ್ವಹಿಸಿ 1935ರಲ್ಲಿ ಇಹಲೋಕ ತ್ಯಜಿಸಿದರು.[13]

1900–1920ರ ನಡುವೆ ಕೆಲಸ ನಿರ್ವಹಿಸಿದ ಮತ್ತೊಬ್ಬ ಗುತ್ತಿಗೆದಾರ ಕುಪ್ಪುಸ್ವಾಮಿ ಗಳಿಸಿದ ಹಣವನ್ನೆಲ್ಲ ಕಳೆದುಕೊಂಡರು. ಆತನ ಉದಾರತೆ ಮತ್ತು ವೈಷ್ಣವ ಪ್ರಸಾರವನ್ನು ಜನರು ಇಂದಿಗೂ ನೆನೆದುಕೊಳ್ಳುತ್ತಾರೆ. ಎಂ.ವೈ. ಮುರುಗೇಶನ್ ಕೂಡ ಗುತ್ತಿಗೆ ಕೆಲಸದಿಂದ ಅಪಾರ ಹಣ ಗಳಿಸಿದ್ದರು. ಇವರು ಶೈವ ಧರ್ಮ ಬಿಟ್ಟು ಬೌದ್ಧ ಧರ್ಮವನ್ನು ಅಪ್ಪಿಕೊಂಡಿದ್ದರಿಂದ ಕಾರ್ಮಿಕರಲ್ಲಿ ಒಂದು ಹೊಸ ಆಲೋಚನೆ ಸೃಷ್ಟಿಯಾಗಿತ್ತು.[14] ಅದೇ ರೀತಿ ಆರ್.ಎಸ್. ದಾಸ್ ಕೂಡ ಪ್ರಖ್ಯಾತ ಗುತ್ತಿಗೆದಾರರಾಗಿದ್ದು, ಆದಿದ್ರಾವಿಡ ಮಹಾಜನ ಸಭೆಯ ಅಧ್ಯಕ್ಷರಾಗಿದ್ದ ಇವರು ಮೈಸೂರು ಅಸೆಂಬ್ಲಿಯ ಸದಸ್ಯರಾಗಿಯೂ ಆಯ್ಕೆಯಾಗಿದ್ದರು.[15] ನಾಗಪ್ಪ ಮೇಸ್ತ್ರಿ ತಾನು ಗಳಿಸಿದ ಹಣವನ್ನೆಲ್ಲ ಭಿಕ್ಷುಕರಿಗೆ ಮತ್ತು ಅನಾಥರಿಗೆ ನೀಡಿದರು.

ಒಬ್ಬ ಕಾರ್ಮಿಕನ ಹಾಡು :

ದಲಿತ ಕಾರ್ಮಿಕರನ್ನು ಯಾವುದೇ ಧರ್ಮದ ಜನರು ಪ್ರೀತಿಯಿಂದ ನಡೆಸಿಕೊಳ್ಳುತ್ತಿರದ ಕಾರಣ ಹಲವು ಧರ್ಮಗಳ ಅಂಚಿನಲ್ಲಿ ಗಿರಕಿ ಹೊಡೆಯುತ್ತಿದ್ದ ಅವರು ಸ್ವಲ್ಪ ಮಟ್ಟಿಗೆ ನಾಸ್ತಿಕ ಮನೋಭಾವ ಬೆಳೆಸಿಕೊಂಡಿದ್ದರು. ಇಂತಹ ಸಮಯದಲ್ಲಿ ಕಾರ್ಮಿಕರು ಸಮಾಜದ ವಿರುದ್ಧ ಅನೇಕ ಹಾಡುಗಳನ್ನು ಸೃಷ್ಟಿಸಿದ್ದರು.

ಜನರು ನಮ್ಮನ್ನು ಇಷ್ಟಪಡದೇ ಬದುಕಿ ಪ್ರಯೋಜನಗಳೇನು?
ಸನ್ಯಾಸಿಗಳಾದರೂ ಸ್ವರ್ಗ ಸೇರುವುದಿಲ್ಲ.
ಕಠೋರ ತಪಸು ಮಾಡಿದರೂ
ಸ್ವರ್ಗದಲ್ಲಿ ಸ್ಥಳ ಇರುವುದಿಲ್ಲ...
ಕಾಶಿಗೆ ಹೋದರೂ ಪ್ರಯೋಜನವಿಲ್ಲ.

ಇಂತಹ ಹಾಡುಗಳು ಜನರನ್ನು ಪ್ರಚೋದಿಸುತ್ತಿದ್ದವು. ಮಹಾಭಾರತ ಒಂದು ಸುಳ್ಳಿನ ಕಂತೆಯಾದರೆ, ರಾಮಾಯಣ ಇನ್ನೂ ಮಹಾಸುಳ್ಳಿನ ಪುರಾಣ. ದೇವರು ಇದ್ದಾನೆಂದರೆ, ಆತ ಒಬ್ಬ ಒಳ್ಳೆಯ ಗೆಳೆಯನಾಗಿ ಕಷ್ಟದಲ್ಲಿರುವ ಕಾರ್ಮಿಕರ ಪರವಾಗಿ ನಿಲ್ಲಬೇಕಾಗಿತ್ತು.

ನಮಗೆ ಗೊತ್ತಿಲ್ಲ...
ನಾವು ಇಲ್ಲಿಗೆ ಹೇಗೆ ಬಂದೆವೊ
ಹೇಗೆ ಹಿಂದಕ್ಕೆ ಹೋಗುವೆವೊ
ನಮಗೆ ತಿಳಿದಿದ್ದರೆ
ದೇವರಿಗೆ ಪತ್ರ ಕಳುಹಿಸುತ್ತಿದ್ದೆವು
ಕಳ್ಳು ನೀಡುತ್ತಿದ್ದೆವು...
ಗೆಳೆಯನಿಗೆ ಕೊಡುವಂತೆ ಸಿಗರೇಟ್ ಕೊಡುತ್ತಿದ್ದೆವು
ಆದರೆ ನಮ್ಮ ಸ್ಥಿತಿ ಸತ್ತವನು ಬದುಕಿ ಬಂದಂತಿದೆ.

ಬೌದ್ಧ ಧರ್ಮ :

ಮದ್ರಾಸ್ ಅಡಿಯಾರ್ ಥಿಯಾಸಫಿಕಲ್ ಸೊಸೈಟಿಯ ಕರ್ನಲ್ ಓಲ್ಕಾಟ್ ಅವರ ಪ್ರಭಾವದಿಂದ ಆಯೋತಿರಾವ್ ಎಂಬವರು ಬೌದ್ಧ ಧರ್ಮ ಅಪ್ಪಿಕೊಂಡರು. ಇವರು 1895ರಲ್ಲಿ ಕೆಜಿಎಫ್‌ಗೆ ಬಂದು ಬೌದ್ಧ ಧರ್ಮದ ಬಗ್ಗೆ ಪ್ರಚಾರ ಮಾಡತೊಡಗಿದರು. ಬರ್ಮಾ, ಶ್ರಿಲಂಕಾದಿಂದಲೂ ಕೆಲವರನ್ನು ಕರೆಸಿ ಬೌದ್ಧ ಧರ್ಮ ವಿಚಾರವನ್ನು ಪ್ರಸಾರ ಮಾಡಲಾಯಿತು. ಸ್ಥಳೀಯ ಶಿವಕೇಶವ ಎಂಬವರು ತಾವು ಮೊದಲು ಸ್ಥಾಪಿಸಿದ್ದ ಅದ್ವೈತ ಸಭೆಯನ್ನು ಬುದ್ಧ ಸಂಘವನ್ನಾಗಿ ಮಾರ್ಪಡಿಸಿದರು. ಇದಕ್ಕೆ ಎಂ.ಐ. ಮುರುಗೇಷ್ ಎಂಬವರು ಆರ್ಥಿಕ ಸಹಾಯ ಮಾಡಿದ್ದರು.

ಕ್ರೈಸ್ತ ಮತ್ತು ಮುಸ್ಲಿಮ್ ಧರ್ಮಗಳ ಪ್ರಚಾರದಿಂದ ಬೌದ್ಧ ಮತ್ತು ಹಿಂದೂ ಧರ್ಮಗಳಿಗೆ ಸಾಕಷ್ಟು ಹಾನಿಯಾಗಿ, 1905ರಲ್ಲಿ ಶೈವ ಧರ್ಮಿಗಳು ಶಿವಕೇಶವ ಅದ್ವೈತ ಸಭೆಯನ್ನು ಕೆಜಿಎಫ್‌ನಲ್ಲಿ ಸ್ಥಾಪಿಸಿ ತಮ್ಮ ಧರ್ಮದ ಬಗ್ಗೆ ಪ್ರಚಾರ ಪ್ರಾರಂಭಿಸಿದರು. ಶೈವ ಮತ್ತು ವೈಷ್ಣವ ಧರ್ಮಗಳ ಪ್ರಚಾರಕರು ಎಂದಿನಂತೆ ಒಬ್ಬರ ಬಗ್ಗೆ ಇನ್ನೊಬ್ಬರು

ಅಪಪ್ರಚಾರ ಮಾಡುತ್ತ, ಅವರ ಅನುಯಾಯಿಗಳ ನಡುವೆ ಚರ್ಚೆಗಳನ್ನು ಏರ್ಪಡಿಸುತ್ತಿದ್ದರು.[18] ಐಯೋಧಿದಾಸ್ ಪಂಡಿತ್ ಅವರು ಬೌದ್ಧ ಧರ್ಮವನ್ನು ಪುನರ್ಜೀವಿತಗೊಳಿಸುವ ಸಮಯದಲ್ಲಿ ಹಲವು ಶೈವ ಧರ್ಮ ಅನುಯಾಯಿಗಳ ಸಹಾಯವನ್ನು ಪಡೆದುಕೊಂಡಿದ್ದರು.[19]

ಯಾವುದೇ ಧರ್ಮದ ಅನುಯಾಯಿಗಳಿಗಿಂತ ಅವರ ಮುಖ್ಯಸ್ಥರನ್ನು ಮತಾಂತರ ಮಾಡುವುದು ಹೆಚ್ಚು ಕಷ್ಟದ ಕೆಲಸವಾಗಿತ್ತು. 19ನೇ ಶತಮಾನದ ಕೊನೆಯಲ್ಲಿ ಆಯೋಧಿದಾಸ್ ಪಂಡಿತರ್ ನಡೆಸಿದ ಪ್ರಯತ್ನ ಮತ್ತು ಎಂ. ರಾಘವನ್ ಕೆಜಿಎಫ್‌ನ ಉದ್ದಗಲಕ್ಕೂ (1903–1907) ಪ್ರಚಾರ ಮಾಡಿದ ಫಲವಾಗಿ ಶಿವಕೇಶವ ಅದ್ವೈತ ಸಭೆಯ ಎಂ.ಐ. ಮುರುಗೇಶ್ ಮತ್ತು ಸಿ. ಗುರುಸ್ವಾಮಿಯವರ ಮನಸನ್ನು ಪರಿವರ್ತಿಸಿದಾಗ ಬೌದ್ಧ ಧರ್ಮ ಹೆಚ್ಚು ಪ್ರಸಿದ್ಧಿ ಪಡೆಯಿತು.[20] ಶಿವಕೇಶವರ ಶಿಕ್ಷಣ ಶಾಲೆಯನ್ನು ದಕ್ಷಿಣ ಭಾರತ ಶಾಕ್ಯ ಬೌದ್ಧ ಮಂಡಲಿಯ ಭವನವನ್ನಾಗಿ ಪರಿವರ್ತಿಸಿದಾಗ ಕೆಜಿಎಫ್ ಭಾರತದ ಮುಖ್ಯ ಬೌದ್ಧ ಕೇಂದ್ರವಾಯಿತು. ಮರುಗೇಶ್ ಮತ್ತು ಗುರುಸ್ವಾಮಿಯ ಜೊತೆಗೆ ಎ.ಪಿ. ಪೆರಿಯಸ್ವಾಮಿ ಪುಲವರ್ ಅವರು 1907ರಲ್ಲಿ ಪಂಚಶೀಲ ಪ್ರತಿಜ್ಞೆ ಸ್ವೀಕರಿಸಿದರು. ಶ್ರೀಲಂಕಾ, ಬರ್ಮಾ, ಥಾಯ್‌ಲ್ಯಾಂಡ್ ದೇಶಗಳಿಂದ ಬರುತ್ತಿದ್ದ ಭಿಕ್ಷುಗಳು ಕೆಜಿಎಫ್‌ನಲ್ಲಿ ಬೌದ್ಧ ಧರ್ಮದ ಪ್ರವಚನ ಮಾಡುತ್ತಿದ್ದರು. ಮೊದಲಿಗೆ ಶೈವರು ಮತ್ತು ವೈಷ್ಣವರ ನಡುವೆ ನಡೆಯುತ್ತಿದ್ದ ವೈಷಮ್ಯ ಈಗ ಬೌದ್ಧರ ಜೊತೆಗೂ ಪ್ರಾರಂಭವಾಗಿತ್ತು. ಅದು ಬರೀ ದೈವಜ್ಞಾನದ ಪರಾಮರ್ಶೆಯಲ್ಲದೆ ಇತರ ವಿಷಯಗಳಿಗೂ ತಿರುಗಿಕೊಂಡಿತ್ತು.[21]

ಆಗ ನಿಜವಾಗಿಯೂ ಶಾಕ್ಯ ಸಭೆಯಲ್ಲಿ ಬುದ್ಧನ್ ಮತ್ತು ಮುದ್ಧನ್ ಎಂಬುದರ ನಡುವೆ ವಾಗ್ವಾದ ಹುಟ್ಟಿಕೊಂಡಿತ್ತು. ಮಾಮೂಲಿಯಾಗಿ ಅರಮನೆಯಲ್ಲಿ ಎಲ್ಲರಂತೆ ಹುಟ್ಟಿದ ರಾಜಕುಮಾರನನ್ನು ಪೂಜಿಸುವುದು ಸರಿಯೆ? ಎನ್ನುವ ಪ್ರಶ್ನೆ ಹುಟ್ಟುಕೊಂಡಿತು. 'ಒಂದು ಪೈಸೆ ತಮಿಳನ್' ವಾರ ಪತ್ರಿಕೆಯನ್ನು ಐಯೋಧಿದಾಸ್ ಪಂಡಿತರ್ 1907–1916ರವರೆಗೆ ಮದ್ರಾಸ್‌ನಲ್ಲಿ ಪ್ರಕಟಿಸಿದರು. 1926–1934ರ ಮಧ್ಯ ಅದೇ ಪತ್ರಿಕೆಯನ್ನು 'ತಮಿಳನ್' ಹೆಸರಲ್ಲಿ ಕೆಜಿಎಫ್‌ನಲ್ಲಿ ಪ್ರಕಟಿಸಿದರು. ಸಿದ್ಧಾರ್ಥ ಎಂಬ ಮುದ್ರಣ ಸ್ಥಾಪಿಸಿ ತಮ್ಮ ವಾರ ಪತ್ರಿಕೆಯಲ್ಲಿ ಬೌದ್ಧ ಧರ್ಮದ ಸಿದ್ಧಾಂತಗಳನ್ನು ಮತ್ತು ತಮಿಳು ಚರಿತ್ರೆಯ ಬಗ್ಗೆ ಬರೆಯಲಾಗುತ್ತಿತ್ತು. ಪತ್ರಿಕೆಯ ಸಂಪಾದಕರಾದ ಐ.ಎನ್. ಐಯ್ಯಾಕಣ್ಣು ಪುಲವರ್ ಅವರು ಪತ್ರಿಕೆಯಲ್ಲಿ ವೈಚಾರಿಕತೆ, ಆತ್ಮಗೌರವ ಮತ್ತು ಭಾರತೀಯ ರಾಷ್ಟ್ರೀಯತೆಯ ಬಗ್ಗೆ ವಿಚಾರಾತ್ಮಕ ಲೇಖನಗಳನ್ನು ಬರೆಯುತ್ತಿದ್ದರು.[22]

1917ರಲ್ಲಿ ಮೊದಲ ಬಾರಿಗೆ ಬೌದ್ಧ ಮಂಡಲಿಗಳು ಆತ್ಮಗೌರವದ ಮದುವೆಗಳನ್ನು ಸುಸೂತ್ರವಾಗಿ ಮತ್ತು ಸರಳವಾಗಿ ನಡೆಸಿದವು.[23] ಮದುವೆಯಾದ ದಂಪತಿಗಳು

ಸಾಂಪ್ರದಾಯಿಕ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಿದ್ದರು. 1945ರಲ್ಲಿ ಬೌದ್ಧರ ಮದುವೆಗಳಲ್ಲಿ ಹೆಣ್ಣಿಗೆ ಗಂಡು ತಾಳಿ ಕಟ್ಟುವ ಬದಲು ಒಂದು ಪದಕ ಅಥವಾ ಸರವನ್ನು ನೀಡುವುದೆಂದು ತೀರ್ಮಾನಿಸಲಾಯಿತು. ತಾಳಿ ಹೆಣ್ಣಿನ ಗುಲಾಮಗಿರಿಯನ್ನು ಬಿಂಬಿಸುತ್ತದೆ ಎಂದು ನಿರಾಕರಿಸಲಾಗಿತ್ತು. ಆದರೆ ಇದು ಯಾವುದೇ ಬ್ರಾಹ್ಮಣ ಪದ್ಧತಿಯನ್ನು ಹೀಯಾಳಿಸುವ ಕ್ರಮವಲ್ಲ ಎಂದು ಬೌದ್ಧ ಮಂಡಳಿ ತಿಳಿಸಿತ್ತು.[24] 1932ರಲ್ಲಿ ಜಿ. ಅಪ್ಪಾದೊರೆಯಾರ್ ಮಗಳಾದ ಜಿ. ಅನ್ನಪೂರ್ಣ ಮತ್ತು ರತ್ನಸಭಾಪತಿಗೆ ಬೌದ್ಧ ಮಂಡಳಿ, ಹಿಂದೂ ವಿಧಿವಿಧಾನಗಳಂತೆ ಮದುವೆ ಮಾಡಿಸಿತು. 1910–1920ರ ನಡುವೆ ಪ್ರಸಿದ್ಧಿಗೆ ಬಂದಿದ್ದ ಬೌದ್ಧ ಧರ್ಮವು ಅನಂತರ ಪರಿಶಿಷ್ಟ ಜಾತಿಗಳ ಮೂಲಕ ರಾಜಕೀಯ ತಿರುವುಗಳನ್ನು ಪಡೆದುಕೊಳ್ಳತೊಡಗಿತು. 1921ರ ಜನಗಣತಿ ಪ್ರಕಾರ ಮೈಸೂರು ಸಂಸ್ಥಾನದಲ್ಲಿ 1319 ಬೌದ್ಧ ಧರ್ಮಿಯರಿದ್ದು ಅದರಲ್ಲಿ 1002 ಜನರು ಕೆಜಿಎಫ್‌ನಲ್ಲಿದ್ದರು.[25] 1931ರಲ್ಲಿ 920 ಮತ್ತು 1941ರ ಜನಗಣತಿಯಲ್ಲಿ ಅದು 852ಕ್ಕೆ ಬಂದು ನಿಂತಿತ್ತು.[26]

ಕ್ರೈಸ್ತ ಧರ್ಮ :

ಮಾರಿಕುಪ್ಪಂನ ಹ್ಯಾನ್ಸ್‌ಕಾಕ್ಸ್ ಕಾಲೋನಿಯಲ್ಲಿ ಸ್ಥಾಪಿಸಿದ ಆಂಟೋನಿ ಭಜನೆ ಮಂದಿರ ಕೆಜಿಎಫ್‌ನ ಮೊದಲ ಚರ್ಚ್ ಆಯಿತು. ಅನಂತರ ರೆವೆರಂಡ್ ಫಾದರ್ ಬೆಸಿನ್ ಎಂಬವರು ಚಾಂಪಿಯನ್ ರೈಲು ನಿಲ್ದಾಣದ ಹತ್ತಿರ ಜಯಮಾತಾಲಯಮ್ಮ ಎಂಬ ಕೆಥೋಲಿಕ್ ಚರ್ಚ್‌ನ್ನು ಸ್ಥಾಪಿಸಿದರು. ಚರ್ಚ್‌ನ ಒಂದು ಭಾಗದಲ್ಲಿಯೆ ಶಾಲೆಯನ್ನು ಪ್ರಾರಂಭಿಸಿ, ಕಾರ್ಮಿಕರ ಮನೆ ಮನೆಗೂ ಹೋಗಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಕೇಳಿಕೊಂಡರು. ಮಾರಿಕುಪ್ಪಂನ ಮಿಶನ್ ಬ್ಲಾಕ್ ಹತ್ತಿರ ವೆಸ್ಲಿಯನ್ ಚರ್ಚ್ ಕೆಜಿಎಫ್‌ನ ಮೊದಲ ಪ್ರಾಟೆಸ್ಟಂಟ್ ಚರ್ಚ್ ಆಯಿತು.

ಆದಿದ್ರಾವಿಡರು ಕೆಲವರು ಸಾಮಾಜಿಕ ಸಮಾನತೆಗಾಗಿ ಮನೆಗಳಲ್ಲಿ ಜೀಸಸ್ ಕ್ರೈಸ್ತನು ಮತ್ತು ಮೇರಿಮಾತಾ ಫೋಟೋಗಳನ್ನು ಹಾಕಿಕೊಂಡು ಚರ್ಚ್‌ಗಳಿಗೂ ಹೋಗಿಬರುತ್ತಿದ್ದರು. ಆದರೆ ಶಾಲೆ, ಕಾಲೇಜು ಮತ್ತು ಕೆಲಸಕ್ಕೆ ಸೇರಿಕೊಳ್ಳುವಾಗ ಮಾತ್ರ ತಮ್ಮ ಜಾತಿಗಳನ್ನು ಮರೆಮಾಚುತ್ತಿರಲಿಲ್ಲ. ಪ್ರಾರಂಭದಲ್ಲಿ ಮಿಶನರಿಗಳ ಮೂಲಕ ರೋಮನ್ ಕೆಥೋಲಿಕ್ ಮತ್ತು ಪ್ರಾಟೆಸ್ಟಂಟ್ ಕ್ರಿಶ್ಚಿಯನರಾಗಿ ಮತಾಂತರ ಹೊಂದಿದವರು ಮತ್ತು ಬ್ರಿಟಿಷರ ಸಂಪರ್ಕದಿಂದ ಅಂತಾರಾಷ್ಟ್ರೀಯ ಮದುವೆಗಳಾದವರು (ಆಂಗ್ಲೋ-ಇಂಡಿಯನ್ನರು) ಮೀಸಲಾತಿಯನ್ನು ಯಾವಾಗಲೂ ಕೇಳಲಿಲ್ಲ. ಕೆಲವು ಉನ್ನತ ಜಾತಿಯ ಜನರು ಕಳ್ಳತನವಾಗಿ ಆದಿದ್ರಾವಿಡರೆಂದು ಜಾತಿ ಬದಲಾಯಿಸಿ ಮೀಸಲಾತಿಯ ಲಾಭವನ್ನು ಪಡೆದುಕೊಂಡರು. ಗಣಿಗಳು ಪ್ರಾರಂಭವಾದ ದಿನದಿಂದಲೂ ಕೆಳವರ್ಗದ ಜನರನ್ನು ತಮ್ಮ ಕಡೆಗೆ ಆಕರ್ಷಿಸಲು ಕೆಲವು ಧರ್ಮಗಳು ಪ್ರಯತ್ನ ಮಾಡುತ್ತಲೆ

ಬಂದಿದ್ದವು. ಕಂಪನಿಗಳು ಕೂಡ ಅವರಿಗೆ ಗುಡಿ, ಚರ್ಚುಗಳನ್ನು ಕಟ್ಟಲು ಹಣವನ್ನು ನೀಡುತ್ತಿದ್ದವು.[27] 1941ರಲ್ಲಿ ಇಲ್ಲಿ ಹೆಚ್ಚು ಕ್ರೈಸ್ತ ಧರ್ಮಿಯರಿದ್ದು ಅವರಲ್ಲಿ ಶೇಕಡ 18 ಆದಿ ದ್ರಾವಿಡರು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ್ದರು. ಶೇಕಡ 8 ಮುಸ್ಲಿಮರು, ಬೌದ್ಧರು ಮತ್ತು ಹಿಂದುಳಿದವರ ಸಂಖ್ಯೆ ಶೇಕಡ 44. ಆದರೆ ಕೆಳವರ್ಗ ಮತ್ತು ಮೇಲ್ವರ್ಗದ ಜನರ ಪದ್ಧತಿಗಳು ವ್ಯತ್ಯಾಸವಾಗಿಯೇ ಉಳಿದುಕೊಂಡಿದ್ದವು. ಕೆಳವರ್ಗದ ಜನರನ್ನು ಸೆಳೆದುಕೊಳ್ಳುವುದಕ್ಕೆ ಅಥವಾ ಅವರನ್ನು ಇತರ ಧರ್ಮಗಳಿಗೆ ಸೇರಿಸಿಕೊಳ್ಳುವುದಕ್ಕೆ ಅನೇಕ ಧಾರ್ಮಿಕ ಗುರುಗಳು ಮತ್ತು ನಾಯಕರು ಪ್ರಯತ್ನಪಡುತ್ತಲೆ ಇದ್ದರು.

ಗಣಿಗಳು ಪ್ರಾರಂಭವಾದ ಕಾಲದಲ್ಲಿಯೆ ಆಗಮಿಸಿದ ಕೆಥೋಲಿಕ್ ಮತ್ತು ಪ್ರಾಟೆಸ್ಟಂಟ್ ಕ್ರೈಸ್ತರು ಸ್ಥಳೀಯರನ್ನು ಮತಾಂತರ ಮಾಡಲು ಪ್ರಯತ್ನಿಸಿ ಸಫಲರಾಗಿದ್ದರು. ಆದರೆ ಆದಿ ದ್ರಾವಿಡ ಕ್ರೈಸ್ತರನ್ನು ಐರೋಪ್ಯ ಕ್ರೈಸ್ತರು ಹತ್ತಿರಕ್ಕೂ ಸೇರಿಸಿಕೊಳ್ಳುತ್ತಿರಲಿಲ್ಲ. 1894–95ರಲ್ಲಿ ಮೊದಲು ಪ್ರಾರಂಭವಾದ ಆಂಗ್ಲೋ ಚರ್ಚು ತಮಿಳು ಮತ್ತು ಇಂಗ್ಲಿಷ್‌ನಲ್ಲಿ ಕ್ರೈಸ್ತದೇವನ ಸುವಾರ್ತೆ ಪ್ರಸಾರ ಮಾಡತೊಡಗಿತ್ತು. 1905ರಲ್ಲಿ ಐರೋಪ್ಯರು ಇಲ್ಲಿ ಪ್ರತ್ಯೇಕವಾಗಿ ಪ್ರಾರ್ಥನೆ ಮಾಡತೊಡಗಿದರು. 1887ರಲ್ಲಿ ಮೆಥಾಡಿಸ್ಟ್ ಮಿಶನ್, ಕೂಲಿ ಮಾಡುವವರು ಮತ್ತು ಸೇವಕರ ಮಕ್ಕಳಿಗಾಗಿ ಮೊದಲಿಗೆ ಶಾಲೆಯನ್ನು ಪ್ರಾರಂಭಿಸಿತ್ತು. ಕೆಥೋಲಿಕ್ ಮಿಶನ್‌ನವರೆ ಅಂಥೋಣಿ ಭಜನೆ ಚರ್ಚನ್ನು ಸ್ಥಾಪಿಸಿದ್ದರು. 1914ರಲ್ಲಿ ಇಂಡಿಯನ್ ಇವಾಂಜೆಲಿಕಲ್ ಲುಥೆರನ್ ಮಿಷಿನ್ ತನ್ನ ಪ್ರಸಾರವನ್ನು ಪ್ರಾರಂಭಿಸಿತ್ತು.

70 ಮತ್ತು 80ನೇ ದಶಕಗಳಲ್ಲಿ ಕೆಜಿಎಫ್‌ನಲ್ಲಿ ವೈದಿಕ ಪದ್ಧತಿಗಳು ಪೂರ್ಣವಾಗಿ ಮಾಯವಾಗಿ ಹೆಚ್ಚೆಚ್ಚು ಕ್ರೈಸ್ತ ಧರ್ಮೀಯರಾಗಿ ಮಾರ್ಪಟ್ಟಿದ್ದರು. ಬಹಳಷ್ಟು ಕುಟುಂಬಗಳು ಹಿಂದೂ ಮತ್ತು ಕ್ರೈಸ್ತ ಧರ್ಮಗಳ ಮಧ್ಯೆ ಸಿಲುಕಿಕೊಂಡು ಎರಡೂ ಪದ್ಧತಿಗಳನ್ನು ಅನುಸರಿಸುತ್ತಿದ್ದವು. ಶಾಲಾ ಕಾಲೇಜುಗಳಲ್ಲಿ ಆದಿ ದ್ರಾವಿಡ ಹಿಂದೂ (ಎಡಿಎಚ್) ಎಂದು ದಾಖಲಿಸಿದ್ದರೆ ಹೊರಗಡೆ ಚರ್ಚ್‌ಗಳಿಗೆ ಹೋಗುತ್ತ ಚಾರ್ಲ್ಸ್, ರಾಬರ್ಟ್, ಅಂಥೋಣಿ, ಕೆನಡಿ, ಲಿಂಕನ್ ಇತ್ಯಾದಿ ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದರು. ಅಪ್ಪನ ಹೆಸರು ಅಯ್ಯಾಸ್ವಾಮಿಯಾದರೆ ಮಗನ ಹೆಸರು ಚಾರ್ಲ್ಸ್ ಇಲ್ಲ ರಾಬರ್ಟ್ ಎಂದು ಇರುತ್ತಿತ್ತು. ಇದರಿಂದ ಶಾಲಾ ಕಾಲೇಜುಗಳಲ್ಲಿ ಮತ್ತು ಆಡಳಿತ ನಡೆಸುವ ಸರಕಾರಿ ಅಧಿಕಾರಿಗಳ ಕಣ್ಣುಗಳಲ್ಲಿ ಇವರೆಲ್ಲ ನಗೆಪಾಟಲಿಗೆ ಗುರಿಯಾಗಿದ್ದರು. 1919ರಲ್ಲಿ ಅಂಜುಮನ್–ಇ–ಇಸ್ಲಾಮಿಯ ಸೊಸೈಟಿ ಮತ್ತು ಮಜ್ಲಸ್–ಇ–ಇಸ್ಲಾಮಿಯ ಸೊಸೈಟಿಯವರು ರಾಬರ್ಟ್‌ಸನ್‌ಪೇಟೆಯಲ್ಲಿ ತಮ್ಮ ಧರ್ಮ ಪ್ರಚಾರವನ್ನು ಪ್ರಾರಂಭಿಸಿದರು. ಕುಡಿಯುವುದು ಮತ್ತು ಇತರೆ ಧರ್ಮೀಯರ ಜೊತೆಗೆ ಮದುವೆಯಾಗುವುದನ್ನು ಪ್ರಾರಂಭದಲ್ಲಿಯೆ ನಿಷೇಧಿಸಿದ್ದರು.

ಚರ್ಚ್‌ಗಳು ಮತ್ತು ಆಂಗ್ಲೋ-ಇಂಡಿಯನ್ನರು :

ಪರಂಗಿಯವರು ಕೆಜಿಎಫ್‌ನಲ್ಲಿ ನೆಲೆಸುತ್ತಿದ್ದಂತೆ ಚರ್ಚು, ಬಂಗಲೆ, ಕ್ಲಬ್ಬುಗಳನ್ನು ಕಟ್ಟಿದರು. ಹೀಗೆ ಕಟ್ಟಿದ ಪ್ರತಿಯೊಂದಕ್ಕೂ ತನ್ನದೇ ಆದ ಚರಿತ್ರೆ ಇದ್ದು, ಇಲ್ಲಿ ಸುಮಾರು 100 ಚರ್ಚುಗಳಿವೆ ಎಂದು ತಿಳಿಯುತ್ತದೆ. ವರ್ಣ ಮತ್ತು ಆರ್ಥಿಕ ಆಧಾರದ ಮೇಲೆ ಚರ್ಚ್‌ಗಳನ್ನು ವಿಭಾಗಿಸಲಾಗಿತ್ತು. ಸಿನಿಮಾ ಹಾಲುಗಳು ಮತ್ತು ಶಾಪಿಂಗ್ ಕಾಂಪ್ಲೆಕ್ಸ್‌ಗಳಲ್ಲಿ ಈ ಭೇದವಿರುತ್ತಿತ್ತು. ಕೆಜಿಎಫ್‌ನ ಜನಸಂಖ್ಯೆಯಲ್ಲಿ 1/10 ಭಾಗದಷ್ಟು ಜನರು ಭಾರತೀಯ ಕ್ರೈಸ್ತರಾಗಿದ್ದರು. ಇವರೆಲ್ಲ ಮೂಲವಾಗಿ ಮತಾಂತರ ಹೊಂದಿದ ಕೆಳಜಾತಿಗಳಿಗೆ ಸೇರಿದ ಜನರಾಗಿದ್ದರು. ಇವರಲ್ಲಿ ಹೆಚ್ಚು ಪ್ರಾಟೆಸ್ಟಂಟ್ ಮತದ ಕಡೆಗೆ ಒಲವು ಹೊಂದಿದವರಾಗಿದ್ದರು. ಬ್ರಿಟಿಷ್ ಪ್ರಾಟೆಸ್ಟಂಟ್‌ರು ತಮ್ಮದೇ ಪ್ರತ್ಯೇಕ ಚರ್ಚ್‌ನ್ನು ಹೊಂದಿದ್ದರು. ಐರೋಪ್ಯರ ಕೆಥೋಲಿಕ್ ಚರ್ಚ್ ಮೇಲೆ ಶಿಲುಬೆ ಇಡಲಾಗುತ್ತಿತ್ತು. ಚರ್ಚ್‌ನ ಒಳಗೆ ಒಂದು ಕಡೆ ಐರೋಪ್ಯರು ಮತ್ತೊಂದು ಕಡೆ ಆಂಗ್ಲೋ-ಇಂಡಿಯನ್ನರು ನಿಂತುಕೊಳ್ಳುತ್ತಿದ್ದರು. ಎರಡು ಭಾಗಗಳು ಸಂಧಿಸುವ ಕೆಳಭಾಗದಲ್ಲಿ ಬಾಗಿಲು ಹತ್ತಿರ ಮತಾಂತರ ಹೊಂದಿದ ಸ್ಥಳೀಯ ಕ್ರೈಸ್ತರು ನಿಂತುಕೊಳ್ಳುತ್ತಿದ್ದರು.[28]

❖❖❖

ಕೆಜಿಎಫ್‌ನ ಮುಖ್ಯ ಚರ್ಚ್‌ಗಳಲ್ಲಿ ವಿಕ್ಟರಿ ಚರ್ಚು ವಿಶೇಷವಾದುದು. ಇದರ ಗೋಪುರದಲ್ಲಿ ಅಳವಡಿಸಿರುವ ಗಂಟೆಯ ಶಬ್ದ 10 ಕಿ.ಮೀ. ದೂರದವರೆಗೂ ಕೇಳಿಸುತ್ತದೆ. 1952ರಲ್ಲಿ ಈ ಚರ್ಚ್‌ನಲ್ಲಿ ಸಂಭವಿಸಿದ ರೋಚಕ ಘಟನೆಯನ್ನು ಜನರು ಇಂದಿಗೂ ಮೆಲಕು ಹಾಕುತ್ತಾರೆ. 23.01.1952ರ ಮುಂಜಾನೆ ಚರ್ಚ್‌ನಲ್ಲಿ ಪ್ರಾರ್ಥನೆ ನಡೆಯುತ್ತಿದ್ದು ಮಕ್ಕಳು, ಮಹಿಳೆಯರ ಸಮೇತ ಚರ್ಚ್ ತುಂಬಿಕೊಂಡಿತ್ತು. ಅದೇ ಸಮಯದಲ್ಲಿ ಗಣಿಯ ಒಳಗೆ ಭಾರಿ ಶಿಲಾಸ್ಫೋಟ ಸಂಭವಿಸಿ ಇಡೀ ನಗರ ಭೂಕಂಪನದಿಂದ ತತ್ತರಿಸಿಹೋಗಿತ್ತು. ಚರ್ಚ್ ಒಳಗಿದ್ದ ಹೂದಾನಿಗಳು ಕೆಳಗೆ ಬಿದ್ದು ಉರುಳಾಡಿ, ಗೋಡೆಗಳಿಗೆ ನೇತಾಕಿದ್ದ ಚಿತ್ರ ಪಟಗಳು ರಪ ರಪನೆ ನೆಲದ ಮೇಲೆ ಬಿದ್ದು ಕಿಟಕಿಗಳು ಗಡಗಡನೆ ಅದುರಿದವು. ಇದ್ಯಾವುದರ ಅರಿವೇ ಇಲ್ಲದ ಜನರು ಪ್ರಾರ್ಥನೆಯಲ್ಲಿ ಮಗ್ನರಾಗಿದ್ದರು. ಪ್ರಾರ್ಥನೆ ಮುಗಿದ ಮೇಲೆ ಎಲ್ಲರೂ ಹೊರಗೆ ಬಂದು ನೋಡುತ್ತಾರೆ. ಚರ್ಚ್‌ನ ಇಡೀ ಗೋಪುರ ಕೆಳಗೆ ಕುಸಿದುಬಿದ್ದಿದೆ. ಅಷ್ಟೇ ಅಲ್ಲ ಇಡೀ ಕಟ್ಟಡ ಐದು ಅಡಿ ಪಕ್ಕಕ್ಕೆ ಸರಿದು ನಿಂತಿತ್ತು. ಗೋಡೆಗಳ ತುಂಬಾ ಬಿರುಕುಗಳು, ಕಟ್ಟಡ ಮಾತ್ರ ಅಚಲವಾಗಿ ನಿಂತೇ ಇತ್ತು. ಕಟ್ಟಡ ಕುಸಿದು ಬಿದ್ದಿದ್ದರೆ ನೂರಾರು ಜನರು ಚರ್ಚ್ ಒಳಗೆಯೆ ಪ್ರಾಣ ಕಳೆದುಕೊಳ್ಳುತ್ತಿದ್ದರು. ನಗರದಲ್ಲಿ ಬಹುತೇಕ ಮನೆಗಳು ಉರುಳಿ ಬಿದ್ದಿದ್ದವು. ಚರ್ಚ್‌ನ ಪಕ್ಕದಲ್ಲಿಯೇ ಇದ್ದ ಚಾಂಪಿಯನ್ ರೈಲುನಿಲ್ದಾಣ ಕೂಡ ಜಖಂಗೊಂಡಿತ್ತು. ಈ ಚರ್ಚ್‌ನ್ನು ಮತ್ತೆ ನಿರ್ಮಾಣ

ಮಾಡಲಾಯಿತು. ಇಂದಿಗೂ ಇದು ಕೆಜಿಎಫ್‌ನಲ್ಲಿ ಪ್ಯಾರಿಸ್ ಕ್ಯಾಥೋಲಿಕ್ ಚರ್ಚ್ ಎಂದೇ ಪ್ರಸಿದ್ಧಿ.

❖❖❖

ಗಣಿಗಳು ಪ್ರಾರಂಭವಾದ ಕಾಲದಲ್ಲಿ ಬ್ರಿಟಿಷ್ ಅಧಿಕಾರಿಗಳ ಸಹಾಯಕ್ಕಾಗಿ ಗೋವಾ, ಕೇರಳ ಮತ್ತಿತರ ಪ್ರದೇಶಗಳಿಂದ ಸುಮಾರು 1500 ಕುಟುಂಬಗಳು ಕೆಜಿಎಫ್ ಪ್ರದೇಶಕ್ಕೆ ಬಂದು ನೆಲೆಸಿದ್ದಾಗಿ ತಿಳಿದುಬರುತ್ತದೆ. ಇವರು ಆಂಗ್ಲರ ವೈಬಣ್ಣವನ್ನಷ್ಟೆ ಹೋಲದೆ, ಅವರ ಸಂಸ್ಕೃತಿಯನ್ನೂ ಧರ್ಮವನ್ನೂ ಅನುಸರಿಸುತ್ತಿದ್ದರಿಂದ ಇವರಿಗೆ ಸಹಜವಾಗಿಯೇ ಗಣಿ ಉದ್ದಿಮೆಯಲ್ಲಿ ಉದ್ಯೋಗ, ಶಿಕ್ಷಣ, ಇನ್ನಿತರ ಸೌಲಭ್ಯಗಳು ದೊರೆತವು. ಇವರಿಗಾಗಿ ಪ್ರತ್ಯೇಕವಾದ ಕಾಲೋನಿಗಳು ತಲೆ ಎತ್ತಿದವು. ಕೆಜಿಎಫ್‌ನಲ್ಲಿ ಕ್ರಿಸ್‌ಮಸ್ ಹಬ್ಬಗಳು ವಿಜೃಂಭಣೆಯಿಂದ ನಡೆಯಲು ಆಂಗ್ಲೋ–ಇಂಡಿಯನ್ನರು ಮುಖ್ಯ ಕಾರಣರಾಗಿದ್ದರು. ಕೆಜಿಎಫ್ ನಗರ ಪ್ರತಿ ವರ್ಷವೂ ಕ್ರಿಸ್‌ಮಸ್ ಹಬ್ಬಕ್ಕಾಗಿ ಒಂದು ತಿಂಗಳು ಮುಂಚೆಯೆ ಅಣಿಯಾಗುತ್ತಿದ್ದು, ಎಲ್ಲ ಕಡೆಯಿಂದಲೂ ಅವರ ಬಂಧು ಬಾಂಧವರು ಆಗಮಿಸುತ್ತಿದ್ದರು. ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಸಂಗೀತ ಗಾಯನಗಳು ನಡೆಯುತ್ತಿದ್ದವು. ಮನರಂಜನಾ ಕೂಟಗಳು, ಕೇಕ್ ಪ್ರದರ್ಶನ, ಆಟೋಟ ಸ್ಪರ್ಧೆಗಳು ಯಥೇಚ್ಛವಾಗಿ ನಡೆಯುತ್ತಿದ್ದವು. ಇಡೀ ಕೆಜಿಎಫ್ ಕ್ರಿಸ್‌ಮಸ್ ಸಮಯದಲ್ಲಿ ರಂಗುರಂಗಾಗಿ ಸಂಭ್ರಮಿಸುತ್ತಿತ್ತು.

ಕ್ರಿಸ್‌ಮಸ್ ವೈಭವದಂತೆಯೇ ಅವರ ಬದುಕೂ ಸಾಗುತ್ತಿತ್ತು. ಅವರ ಮಕ್ಕಳು ವಿದೇಶಗಳಲ್ಲಿ ಉತ್ತಮ ಶಿಕ್ಷಣ ಪಡೆದು ಇಂಗ್ಲೆಂಡ್, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ನೌಕರಿಗಾಗಿ ವಲಸೆ ಹೋದರು. ಬ್ರಿಟಿಷರಂತೆ ಐಷಾರಾಮ ಜೀವನ ನಡೆಸುತ್ತಿದ್ದ ಆಂಗ್ಲೋ–ಇಂಡಿಯನ್ನರು ಭಾರತದ ಸ್ವಾತಂತ್ರ್ಯಾನಂತರ ಕಳೆಗುಂದಿದರು. ಅಧಿಕಾರ ಹಸ್ತಾಂತರವಾದ ಮೇಲೆ ಅವರಿಗೆ ದೊರಕುತ್ತಿದ್ದ ಸೌವಲತ್ತುಗಳು ದೊರಕದೇ ಹಿಂದಿದ್ದ ಪ್ರಾಧಾನ್ಯ ಇಲ್ಲದಂತಾಯಿತು. ಚಿನ್ನದ ಗಣಿಗಳ ಮೇಲಿದ್ದ ಬಿಗಿ ಮುಷ್ಟಿ ತಪ್ಪುತ್ತಿದ್ದಂತೆ ಬಿಳಿಯರು ಕ್ರಮೇಣ ಕೆಜಿಎಫ್ ತೊರೆದರು. ಪಲವು ಕುಟುಂಬಗಳು ಇಂಗ್ಲೆಂಡ್‌ಗೆ ಹಿಂದಿರಿಗಿದವು. ಕೆಲವು ಆಂಗ್ಲೋ–ಇಂಡಿಯನ್ನರ ಕುಟುಂಬಗಳು ಇವರನ್ನು ಹಿಂಬಾಲಿಸಿದವು. ವೈಷ್ಣವರಾಗಿ ಮತ್ತು ಕೆಲವರು ಬೌದ್ಧರಾಗಿ ಮಾರ್ಪಟ್ಟಿದ್ದರು. ಮಿಕ್ಕವರು ಇಲ್ಲೇ ನೆಲೆ ನಿಂತರು.

ಇಂಗ್ಲೆಂಡ್ ಅಥವಾ ಆಷ್ಟ್ರೇಲಿಯಾಗಳಲ್ಲೂ ಆಂಗ್ಲೋ–ಇಂಡಿಯನ್ನರನ್ನು ಸಂಪೂರ್ಣವಾಗಿ ಸ್ವೀಕರಿಸಲಿಲ್ಲ. ಭಾರತದಲ್ಲೂ ಇವರನ್ನು ಒಪ್ಪಿಕೊಳ್ಳಲಿಲ್ಲ. ಬ್ರಿಟಿಷ್ ರಾಜ್ಯಾಡಳಿತದ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿದ್ದ ಇವರು ಸ್ವಾತಂತ್ರ್ಯದ ನಂತರ

ಒಂದು ರೀತಿಯಲ್ಲಿ ಅನಾಥರಾದರು. ಕೆಜಿಎಫ್‌ನ ಪ್ರತಿಷ್ಠಿತ ಕಾಲೋನಿ, ಆಂಗ್ಲೋ-ಇಂಡಿಯನ್ನರ ಕಾಲೋನಿ ಇಂದು ಮಾಮೂಲಿ ಹಿಂದೂ ಕಾಲೋನಿಯಾಗಿದೆ. ಬಹುತೇಕ ಎಲ್ಲರೂ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಕೆಲವು ಕುಟುಂಬಗಳಿಗೆ ಮಕ್ಕಳು ಕಳುಹಿಸುವ ಒಂದಷ್ಟು ಹಣವೇ ಆಧಾರ. ವಯಸ್ಸಾದವರ ಸ್ಥಿತಿಯಂತೂ ಇನ್ನೂ ಶೋಚನೀಯ. ಅವರು ಧರಿಸುವ ಬಟ್ಟೆ, ಆಡುವ ಮಾತು ಮತ್ತು ಅವರ ವರ್ತನೆಯಲ್ಲಿ ಬದಲಾವಣೆಗಳೇನೂ ಕಾಣಿಸದಿದ್ದರೂ ಅವರ ಮನೆಗಳನ್ನು ನೋಡಿದಾಗ ನಿಜವಾಗಿಯೂ ಅವರು ತೀರ ಸಂಕಷ್ಟದಲ್ಲಿದ್ದಾರೆ ಎನ್ನುವುದು ತಿಳಿಯುತ್ತದೆ. ಗಂಡು ಮಕ್ಕಳು ಮದುವೆಯಾದ ಮೇಲೆ ಹೆತ್ತವರೊಂದಿಗೆ ಆರ್ಥಿಕ ಸಂಬಂಧವನ್ನು ಕಡಿದುಕೊಳ್ಳುವ ಪರಿಪಾಠವಿದ್ದು ಇದರಿಂದ ಬಹಳಷ್ಟು ಕುಟುಂಬಗಳು ನೆರವಿಲ್ಲದಂತಾಗಿವೆ.

ದೂರದ ಊರುಗಳಲ್ಲಿ ನೆಲೆಸಿರುವ ಹೆಣ್ಣು ಮಕ್ಕಳು ಕಳುಹಿಸುವ ಹಣದಿಂದಲೋ, ಬ್ಯಾಂಕ್‌ನಲ್ಲಿ ಕೂಡಿಟ್ಟ ಹಣದಿಂದ ದೊರಕುವ ಅಲ್ಪ ಮೊತ್ತದ ಬಡ್ಡಿಯಿಂದಲೋ ಆಂಗ್ಲೋ-ಇಂಡಿಯನ್ ವೃದ್ಧ, ವೃದ್ಧೆಯರು ತಮ್ಮ ಸಂಧ್ಯಾಕಾಲವನ್ನು ನೂಕುತ್ತಿದ್ದಾರೆ. ಹಬ್ಬಗಳಲ್ಲಿ ನೃತ್ಯ ಕೂಟಗಳಲ್ಲಿ ಕೇಕೆ, ಕುಣಿತಗಳಿಂದ ಮೈ ಮರೆಯುತ್ತಿದ್ದ ಯುವ ಜೋಡಿಗಳು ಈಗ ಬಹಳ ಅಪರೂಪ. ಇದಕ್ಕೆ ಬದಲಾಗಿ ಚರ್ಚ್‌ಗೆ, ಮಾರುಕಟ್ಟೆಗೆ, ವೈದ್ಯರ ಹತ್ತಿರಕ್ಕೆ ಮತ್ತು ಸಂಜೆ ವಾಕಿಂಗ್‌ಗೆ ಬರುವವರಲ್ಲಿ ವಯಸ್ಸಾದ ವೃದ್ಧರೆ ಹೆಚ್ಚು. ಕೆಲವರಿಗೆ ಸ್ವಂತ ಮನೆಗಳಿದ್ದು ಒಂದಷ್ಟು ಭಾಗವನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಉತ್ತಮ ಸ್ಥಿತಿಯಲ್ಲಿದ್ದಾಗ ಮತಾಂತರ ಹೊಂದಿದ್ದ ಭಾರತೀಯ ಕ್ರೈಸ್ತರನ್ನು ಮದುವೆಯಾಗಲು ಹಿಂದೇಟು ಹಾಕುತ್ತಿದ್ದ ಆಂಗ್ಲೋ-ಇಂಡಿಯನ್ನರಿಗೆ ಇಂದು ನೆರವಾಗುತ್ತಿರುವವರು ಇದೇ ಭಾರತೀಯ ಕ್ರೈಸ್ತರು.

ಚಿನ್ನದ ಗಣಿಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಬ್ರಿಟಿಷರೊಂದಿಗೆ ಮೇಲ್ವಿಚಾರಣೆ ಕೆಲಸಗಳನ್ನು ಮಾಡುತ್ತಿದ್ದ ಇವರು ಹಲವು ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ್ದರು. ಚಿನ್ನ ಹೊರ ತೆಗೆಯುವ ಕಾಯಕದಲ್ಲಿ ಅನೇಕ ಹೊಸ ಹೊಸ ಆವಿಷ್ಕಾರಗಳನ್ನು ತಂದ ಕೀರ್ತಿ ಇವರದು. ಇದಕ್ಕಾಗಿ ಇವರು ಪಡೆದ ಬಹುಮಾನ, ಪಾರಿತೋಷಕಗಳನ್ನು ಹೆಮ್ಮೆಯಿಂದ ತೋರಿಸಿ ಇಂದಿಗೂ ನೆನಪು ಮಾಡಿಕೊಳ್ಳುತ್ತಾರೆ. ಹಾಡು, ಸಂಗೀತ, ಕುಣಿತದಲ್ಲೂ ಇವರದು ಎತ್ತಿದ ಕೈ. ಇಲ್ಲಿನ ಆಂಗ್ಲೋ-ಇಂಡಿಯನ್ನರ ಬ್ಯಾಂಡ್ ತಂಡ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲೂ ಪ್ರಶಸ್ತಿ ಗಳಿಸಿತ್ತು. ಸೈನ್ಯ, ಕ್ರೀಡೆಗಳಲ್ಲೂ ಇವರು ಹೆಸರುವಾಸಿ. ಅಂತಾರಾಷ್ಟ್ರೀಯ ಕ್ರಿಕೆಟ್ ಆಟಗಾರ ರೋಜರ್ ಬಿನ್ನಿ ಮೂಲತಃ ಕೆಜಿಎಫ್ ನವರು. ಖ್ಯಾತ ಅಥ್ಲೆಟ್ ಕೆನೆತ್ ಪೋವೆಲ್ ಕೂಡ ಇಲ್ಲಿನವರೆ.

ಎಲ್ಲಾ ರಂಗಗಳಲ್ಲೂ ಈಗ ಅವಕೃಪೆಗೆ ಒಳಗಾಗಿರುವ ಆಂಗ್ಲೋ-ಇಂಡಿಯನ್ನರು

ತಮ್ಮ ಮಕ್ಕಳಿಗೆ ಹಿಂದಿನಂತೆ ಉತ್ತಮ ಶಿಕ್ಷಣ ಕೊಡಿಸಲಾಗುತ್ತಿಲ್ಲ. ಅಲ್ಲಿ ಇಲ್ಲಿ ಟೈಪಿಂಗ್ ಇಲ್ಲ ಸ್ಟೆನೊಗ್ರಾಫರ್‌ಗಳಾಗಿ ಕೆಲಸ ಮಾಡುತ್ತಿರುವ ಇವರಲ್ಲಿ ಕೆಲವರು ಶಿಕ್ಷಕರಾಗಿಯೂ ದುಡಿಯುತ್ತಿದ್ದಾರೆ. ಹೆಚ್ಚಿನವರು ಸ್ಥಳೀಯ ಮಾರವಾಡಿ, ಲೇವಾದೇವಿಗಾರರ ಬಳಿ ಸಹಾಯಕರಾಗಿ ದುಡಿಯುತ್ತಿದ್ದಾರೆ. ಕೆಲವರು ಈಗೀಗ ಕನ್ನಡ ಭಾಷೆ ಕಲಿತುಕೊಂಡು ರಾಜ್ಯ ಸರಕಾರದ ವಿಭಾಗಗಳಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ. ಕೆಜಿಎಫ್‌ನಲ್ಲಿ ಈಗ ಕೇವಲ 50–60 ಕುಟುಂಬಗಳು ಮಾತ್ರ ಉಳಿದುಕೊಂಡಿವೆ.

❖❖❖

ಹಿಂದಿನ ತಲೆಮಾರುಗಳ ಜನರು ಈಗಲೂ ಚಿನ್ನದ ಗಣಿಗಳ ಬಗ್ಗೆ ಈ ರೀತಿಯಾಗಿ ನೆನಪು ಮಾಡಿಕೊಳ್ಳುತ್ತಾರೆ: ಪರಂಗಿಯವರ ಕಾಲವೇ ಚೆನ್ನಾಗಿತ್ತು. ಪ್ರತಿಯೊಂದು ಗಣಿ ಕಾಲೋನಿಗಳು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದವು. ಯಥೇಚ್ಛವಾಗಿ ನೀರು ಸರಬರಾಜಾಗುತ್ತಿತ್ತು. ರಸ್ತೆಗಳನ್ನು ಗುಡಿಸುವ ವ್ಯವಸ್ಥೆ ಇತ್ತು. ಎಲ್ಲಾ ಗಣಿ ಕಾರ್ಮಿಕರಿಗೂ ಪಡಿತರ ದೊರಕುತ್ತಿತ್ತು. ಗಣಿ ಕ್ಯಾಂಟೀನ್‌ಗಳಲ್ಲಿ ಅತ್ಯುತ್ತಮ ತಿಂಡಿ, ಕಾಫಿ ಮತ್ತು ಊಟ ತೀರ ಕಡಿಮೆ ಬೆಲೆಗೆ ದೊರಕುತ್ತಿತ್ತು.

ಚಿನ್ನದ ಗಣಿ ಆಡಳಿತ ಬ್ರಿಟಿಷರಿಂದ ಮುಕ್ತವಾದ ಮೇಲೆ ಎಲ್ಲಾ ತೊಂದರೆಗಳೂ ಒಂದೊಂದಾಗಿ ಪ್ರಾರಂಭವಾದವು. ಸ್ವಾತಂತ್ರ್ಯಾ ನಂತರ ನಮ್ಮದೇ ಸರಕಾರ ಬಂದ ಮೇಲೆ ಚಿನ್ನದ ಗಣಿಗಳು ವ್ಯವಸ್ಥಿತವಾಗಿ ನಮ್ಮವರಿಂದಲೇ ಲೂಟಿಯಾಯಿತು. ಚಿನ್ನದ ಉತ್ಪಾದನೆ ಲೆಕ್ಕವನ್ನು ಅಪರಾ–ತಪರಾ ಮಾಡಿ ಕಳ್ಳತನವಾಗಿ ಆಡಳಿತ ವರ್ಗದವರೇ ಅದನ್ನು ದೆಹಲಿವರೆಗೂ ಮುಟ್ಟಿಸುವ ವ್ಯವಸ್ಥೆ ಮಾಡಿ, ಚಿನ್ನದ ಗಣಿ ಅವನತಿ ಹೊಂದುವಂತೆ ಮಾಡಿದರು. ಬಿಳಿಯರು ಇದ್ದಾಗ ಚಿನ್ನದ ಗಣಿ ಪ್ರದೇಶದಲ್ಲಿ ಜೀವಕಳೆ ತುಂಬಿತ್ತು. ವಾರಾಂತ್ಯದಲ್ಲಿ ಇಲ್ಲಿನ ಬಿಜಿಎಮ್‌ಎಲ್ ಕ್ಲಬ್‌ನಲ್ಲಿ ಹಬ್ಬದ ವಾತಾವರಣವೇ ಸೃಷ್ಟಿಯಾಗುತ್ತಿತ್ತು. ಎಲ್ಲಾ ಅಧಿಕಾರಿಗಳು ತಮ್ಮ ಕುಟುಂಬದ ಸಮೇತ ಇಲ್ಲಿ ಸೇರುತ್ತಿದ್ದರು. ಈಗ ಎಲ್ಲಾ ಸ್ತಬ್ದಗೊಂಡಿದೆ. ಬಂಗಲೆಗಳೆಲ್ಲ ಭೂತ ಬಂಗಲೆಗಳಾಗಿವೆ.

ಈಗ ಆಂಡ್ರಸನ್‌ಪೇಟೆಯ ಲಕ್ಷ್ಮಿ ಮಂದಿರಕ್ಕೆ ಬೀಗ ಹಾಕಿ ವರ್ಷಗಳೆ ಕಳೆದಿವೆ. ನಗರದ ಹೃದಯ ಭಾಗದಲ್ಲಿದ್ದ ಶ್ರೀಕೃಷ್ಣ ಟಾಕೀಸನ್ನು ಕೆಡವಿ ಆಧುನಿಕ ಮಾದರಿಯ ಜೈನ್ ಕಾಲೇಜ್ ಕಟ್ಟಲಾಗಿದೆ. ಬೆಮಲ್ ನಗರದಲ್ಲಿದ್ದ ಉಮಾ ಚಿತ್ರಮಂದಿರ ಕಲ್ಯಾಣ ಮಂಟಪವಾದರೆ, ಗೇ ಚಿತ್ರ ಮಂದಿರದ ಸ್ಥಳದಲ್ಲಿ ಪೆಟ್ರೋಲ್ ಡಿಪೊ ಬಂದಿದೆ. ಒಂದು ಕಾಲದಲ್ಲಿ ಇಂಗ್ಲಿಷ್, ತಮಿಳು, ತೆಲುಗು, ಹಿಂದಿ, ಕನ್ನಡ ಮತ್ತು ಮಲಯಾಳಿ ಭಾಷೆಗಳ ಸಿನಿಮಾಗಳು ಯಾವ ಅಡೆತಡೆಯೂ ಇಲ್ಲದೆ ಎಲ್ಲಾ ಸಿನಿಮಾ ಹಾಲುಗಳಲ್ಲೂ ದಿನಕ್ಕೆ 4–5 ಷೋಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದವು. ಉರಿಗಾಂನಲ್ಲಿದ್ದ ಸಿನಿಮಾ ಹಾಲ್‌ನಲ್ಲಿ ಇಂಗ್ಲಿಷ್ ಸಿನಿಮಾಗಳನ್ನು ಮಾತ್ರ ತೋರಿಸಲಾಗುತ್ತಿತ್ತು.

ರಾಬರ್ಟ್‌ಸನ್‌ಪೇಟೆ ಮಾರುಕಟ್ಟೆಯಲ್ಲಿ ಎರಡು ಭಾಗಗಳಿದ್ದು ಒಂದು ಭಾಗದಲ್ಲಿ ವಿಶಾಲ ರಸ್ತೆಗಳು ಮತ್ತು ಸ್ವಚ್ಛವಾಗಿ ಸುಂದರಗೊಳಿಸಿದ್ದ ಅಂಗಡಿಗಳಲ್ಲಿ ಎಲ್ಲಾ ರೀತಿಯ ಪದಾರ್ಥಗಳು, ತರಕಾರಿಗಳನ್ನು ಮಾರಲಾಗುತ್ತಿತ್ತು. ಇಲ್ಲಿಗೆ ಬ್ರಿಟಿಷರು, ಹಣವಂತರು, ಗುತ್ತಿಗೆದಾರರು ಮತ್ತು ಮಾರವಾಡಿ ಜನರು ಬರುತ್ತಿದ್ದರು. ಹಿಂದಿನ ಇನ್ನೊಂದು ಭಾಗದಲ್ಲಿದ್ದ ಇಕ್ಕಟ್ಟಾದ ಭಾಗದಲ್ಲಿ ಕೊಳೆತುಹೋದ ತರಕಾರಿ, ಗುಜರಿ ಬಟ್ಟೆಗಳು, ಕಲಬೆರಕೆ ವಸ್ತುಗಳನ್ನು ಕಾರ್ಮಿಕರಿಗೂ ಮತ್ತು ಬಡವರಿಗಾಗಿ ಮಾರಲಾಗುತ್ತಿತ್ತು. ಇದರ ಸುತ್ತಲು ಗಬ್ಬು ವಾಸನೆ ನಾರುತ್ತಿತ್ತು. ಗಣಿಗಳು ಬೆಳೆದಂತೆ ಸುತ್ತಮುತ್ತಲಿನ ಹಳ್ಳಿಗಳ ಆರ್ಥಿಕತೆಯೂ ಸ್ವಲ್ಪ ಸ್ವಲ್ಪವಾಗಿ ಬೆಳೆಯುತ್ತಾ ಹೋಯಿತು. ಅವರು ಬೆಳೆದ ತರಕಾರಿ ದವಸ ಧಾನ್ಯಗಳಿಗೆ ಬೆಲೆ ದೊರಕುತ್ತಿತ್ತು. ಕೆಜಿಎಫ್‌ಗೆ 10 ಕಿ.ಮೀ. ದೂರದಲ್ಲಿ ಬೆಂಗಳೂರು–ಮದ್ರಾಸ್ ರೈಲು ರಸ್ತೆಯ ಮೇಲಿದ್ದ ಬಂಗಾರಪೇಟೆ ಜಂಕ್‌ಶನ್ ಪಟ್ಟಣವಾಗಿ ಬೆಳೆಯಿತು.

ಮಡಗಾಸ್ಕರ್ ದ್ವೀಪದ ಗುಲ್‌ಮೊಹರ್ :

ಮೇ ತಿಂಗಳು ಬಂತೆಂದರೆ ಸಾಲು ಸಾಲು ಗುಲ್‌ಮೊಹರ್ ಮರಗಳ ಮೈಯೆಲ್ಲ ಒಂದು ಎಲೆಯೂ ಇಲ್ಲದೆ ಕೆಂಪಾಗಿ ಹೋಗುತ್ತವೆ. ಅದಕ್ಕಾಗಿಯೆ ಈ ಮರಗಳು 'ಮೇ ಫ್ಲವರ್' ಎಂಬ ಹೆಸರನ್ನು ಪಡೆದಿವೆ. ಈ ಅಂದವಾದ ಮರಗಳು ಸಾವಿರಾರು ಕಿ.ಮೀ. ದೂರದ ಮಡಗಾಸ್ಕರ್ ದ್ವೀಪದಿಂದ ಕೆಜಿಎಫ್‌ಗೆ ನಡೆದು ಬಂದಿವೆ. ಗಣಿಗಳು ಪ್ರಾರಂಭವಾದ ದಿನಗಳಲ್ಲಿ ಜಾನ್ ಟೇಲರ್ ಅವರು ಬ್ರಿಟನ್ ಮತ್ತು ಐರೋಪ್ಯ ದೇಶಗಳಿಂದ ಅನೇಕ ಅಧಿಕಾರಿಗಳನ್ನು ಕರೆದು ತರುವ ವ್ಯವಸ್ಥೆಯಲ್ಲಿ ತೊಡಗಿದ್ದರು. ಈ ಅಧಿಕಾರಿಗಳು ಇಂಗ್ಲೆಂಡಿಗೆ ಹಡಗಿನಲ್ಲಿ ಹೋಗಿ ಬರುವಾಗ ಆಫ್ರಿಕಾದ ಗುಡ್‌ಹೋಪ್ ಭೂಶಿರ ದಾಟಿ ಭಾರತಕ್ಕೆ ಬರಬೇಕಿತ್ತು. ಆದರೆ ಒಂದು ಸಲ ಬಿರುಗಾಳಿಯ ದೆಸೆಯಿಂದ ಹಡುಗು ಮಡಗಾಸ್ಕರ್ ದ್ವೀಪದ ಹತ್ತಿರಕ್ಕೆ ಹೋಗಿ ನಿಂತುಕೊಂಡಿತು.

ಹಲವಾರು ದಿನಗಳ ಕಾಲ ಅಧಿಕಾರಿಗಳು ಅಲ್ಲಿಯೆ ಉಳಿದುಕೊಳ್ಳಬೇಕಾಗಿ ಬಂದಾಗ ಅವರು ಕಾಲ ಕಳೆಯಲು ಹಡಗಿನಿಂದ ಇಳಿದು ದ್ವೀಪದಲ್ಲಿ ಸುತ್ತಿಬರಲು ಹೋದರು. ಆಗ ಮೇ ತಿಂಗಳ ಕಾಲವಾದರಿಂದ ಗುಲ್‌ಮೊಹರ್ ಮರಗಳು ಹೂವುಗಳಿಂದ ಕಂಗೊಳಿಸುತ್ತದ್ದವು. ಈ ಮರಗಳ ಅಂದವನ್ನು ಕಂಡು ಬೆರಗಾದ ಅಧಿಕಾರಿಗಳು ಅಲ್ಲಿನ ಜನರನ್ನು ಕಾಡಿ ಬೇಡಿ ಮರಗಳ ಬೀಜಗಳನ್ನು ತಂದು ಕೆಜಿಎಫ್ ಬಂಗಲೆಗಳ ಸುತ್ತಲು ನೆಟ್ಟರು. ಅನಂತರ ನಗರದ ರಸ್ತೆಗಳ ಇಕ್ಕೆಲಗಳಲ್ಲಿ ಬೆಳೆಸುವಂತೆ ಮಾಡಿದರು. ಈ ಮರಗಳು ಇಲ್ಲಿಂದ ಕೋಲಾರ ಜಿಲ್ಲೆ, ಅನಂತರ ಮೈಸೂರು ರಾಜ್ಯ ಕೊನೆಗೆ ದೇಶವನ್ನೆಲ್ಲ ಹರಡಿಕೊಂಡವು ಎನ್ನಲಾಗಿದೆ.[31]

ಜಂಖಾನಾ ಮೈದಾನ :

ಒಂದು ಕಾಲದಲ್ಲಿ ಕೆಜಿಎಫ್‌ನಲ್ಲಿದ್ದಷ್ಟು ಫುಟ್ಬಾಲ್ ಮೈದಾನಗಳು ದೇಶದಲ್ಲಿ ಎಲ್ಲಿಯೂ ಇರಲಿಲ್ಲ ಎಂದು ತಿಳಿದುಬರುತ್ತದೆ. ಸುಮಾರು 100 ಫುಟ್ಬಾಲ್ ಮೈದಾನಗಳಿದ್ದವು ಎನ್ನಲಾಗಿದೆ. ಗಣಿಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಬಿಜಿಎಮ್‌ಎಲ್‌ನ ಜಂಖಾನ ಮೈದಾನ ಅತಿ ವಿಜೃಂಭಣೆಯಿಂದ ಮೆರೆಯುತ್ತಿತ್ತು. ಈ ಮೈದಾನಕ್ಕೆ ಭಾರತ ಫುಟ್ಬಾಲ್ ಫೆಡರೇಷನ್‌ನಿಂದ ಮಾನ್ಯತೆ ಸಿಕ್ಕಿತ್ತು. ಪ್ರತಿ ವರ್ಷ ಇಲ್ಲಿ ರಾಷ್ಟ್ರಮಟ್ಟದ ಫುಟ್ಬಾಲ್ ಪಂದ್ಯಾವಳಿಗಳು ನಡೆಯುತ್ತಿದ್ದವು. ಇಲ್ಲಿ ನಡೆಯುತ್ತಿದ್ದ ಟೂರ್ನಿಯಲ್ಲಿ ರಾಷ್ಟ್ರದ ಪ್ರತಿಷ್ಠಿತ ತಂಡಗಳಾದ ಮೋಹನ್‌ಬಗಾನ್, ಮೊಹಮ್ಮಡನ್ ಸ್ಪೋರ್ಟ್ಸ್, ಐಎಫ್, ಐಐಎಮ್, ಐಟಿಐ, ಎಚ್‌ಎಮ್‌ಟಿ ಮುಂತಾದ ತಂಡಗಳು ಭಾಗವಹಿಸುತ್ತಿದ್ದವು. ಕೆಜಿಎಫ್‌ನಲ್ಲಿ ಫುಟ್ಬಾಲ್‌ನ ವ್ಯಾಮೋಹ ಬಹಳವಾಗಿತ್ತು. ಪಂದ್ಯಗಳನ್ನು ನಡೆಸುವ ಉಸ್ತುವಾರಿಯನ್ನು ಬಿಜಿಎಮ್‌ಎಲ್ ಆಡಳಿತ ವರ್ಗವೇ ವಹಿಸಿಕೊಳ್ಳುತ್ತಿತ್ತು. ರಾಷ್ಟ್ರಮಟ್ಟದ ಪಂದ್ಯಗಳ ಜೊತೆಗೆ ಅನೇಕ ರಾಜ್ಯಮಟ್ಟದ ಪಂದ್ಯಗಳೂ ಕೆಜಿಎಫ್‌ನಲ್ಲಿ ನಿರಂತರವಾಗಿ ನಡೆಯುತ್ತಲೇ ಇರುತ್ತಿದ್ದವು. ಜಂಖಾನಾ ಮೈದಾನದಲ್ಲಿ ರಾಷ್ಟ್ರಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಂಬೂರಿ ಮತ್ತು ಬಿಜಿಎಮ್‌ಎಲ್‌ನ ಶತಮಾನೋತ್ಸವದ ಆಚರಣೆಯನ್ನು ನಡೆಸಲಾಗಿತ್ತು. ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಇನ್ನೂ ಅನೇಕ ಗಣ್ಯರು ಈ ಶತಮಾನೋತ್ಸವದಲ್ಲಿ ಪಾಲ್ಗೊಂಡಿದ್ದರು.

ವಿದ್ಯಾದಾನಿಗಳು ಮತ್ತು ವಿದ್ಯಾಮಂದಿರಗಳು :

1892–95ರ ಮಧ್ಯೆ ರೆವರೆಂಡ್ ಫಾದರ್ ಪೆಸ್ಸಿಯನ್ ಜಯಮಾತಾ ಚರ್ಚ್ ಜೊತೆಗೆ ಸೆಂಟ್ ಸೆಬಾಸ್ಟಿಯನ್ ಮತ್ತು ಸೆಂಟ್ ಅಂಥೋಣಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದರು. 1902ರಲ್ಲಿ ಪ್ರಾಟೆಸ್ಟೆಂಟ್ ಮಿಶನರಿಯವರು ಮೆಥೊಡಿಸ್ಟ್ ಶಾಲೆಯನ್ನು ಸ್ಥಾಪಿಸಿದರು. 1914ರಲ್ಲಿ ರಾಬರ್ಟ್‌ಸನ್‌ಪೇಟೆಯಲ್ಲಿ ಡಿಸಿಎಮ್ ಪ್ರಾಥಮಿಕ ಶಾಲೆಯನ್ನು ರೆವರೆಂಡ್ ಫಾದರ್ ಪ್ರೆಸ್ಸಿಯನ್ ಮತ್ತು ಬ್ರಿಟಿಷ್ ಪೋಲೀಸ್ ಅಧಿಕಾರಿ ಎಂ. ಪ್ರಚರ್ಸ್ ಸ್ಥಾಪಿಸಿದರು. ಕೆಜಿಎಫ್‌ನಲ್ಲಿ ಮೊದಲ ಬಾರಿಗೆ ಇದೆ ಶಾಲೆಯಲ್ಲಿ ಸರ್.ಬಾಡನ್ ಪೊವೆಲ್ ಸ್ಕೌಟ್ ಪ್ರಾರಂಭಿಸಿ ಅದನ್ನು 'ಫರ್ಸ್ಟ್ ರಾಬರ್ಟ್‌ಸನ್‌ಪೇಟ್ ಟ್ರೂಪ್' ಎಂದು ಹೆಸರಿಸಲಾಗಿತ್ತು. 1919ರಲ್ಲಿ ಮಧುರೈ ಪಿಳ್ಳೈ ರಾಬರ್ಟ್‌ಸನ್‌ಪೇಟೆಯಲ್ಲಿ ಡಿಸಿಎಮ್ ಮತ್ತು ನಂಪರ್‌ಮಾಳ್ ಪ್ರಾಥಮಿಕ ಶಾಲೆಗಳನ್ನು, ಆಂಡ್ರಸನ್‌ಪೇಟೆಯಲ್ಲಿ ನಂಪರ್‌ಮಾಳ್ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿದರು. 1926ರಲ್ಲಿ ಇದು ಮಾಧ್ಯಮಿಕ ಶಾಲೆಯಾಗಿ ಇದರಲ್ಲಿ 320 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. 1924ರಲ್ಲಿ ಪ್ರಾರಂಭವಾದ ಸೆಂಟ್ ಮೇರಿಸ್ ಪ್ರಾಥಮಿಕ ಶಾಲೆ 1944ರಲ್ಲಿ ಹೈಸ್ಕೂಲ್ ಆಯಿತು.

ಮೈಸೂರು ಸರಕಾರ 1910ರಲ್ಲಿ ಸರಕಾರಿ ಪ್ರೈಮರಿ ಶಾಲೆಯನ್ನು, 1936ರಲ್ಲಿ ಸ್ಯಾನಿಟರಿಬೋರ್ಡ್ ಬಾಯ್ಸ್ ಹೈಸ್ಕೂಲನ್ನು ರಾಬರ್ಟ್‌ಸನ್‌ಪೇಟೆಯಲ್ಲಿ ಸ್ಥಾಪಿಸಿತ್ತು.[32]

1906 ರಲ್ಲಿ ಚಾಂಪಿಯನ್ ರೀಫ್ಸ್ ಬಳಿ ಚಲ್ಲಪ್ಪ ಪ್ರಾಥಮಿಕ ಶಾಲೆಯನ್ನು ಸ್ಥಾಪನೆ ಮಾಡಲಾಯಿತು. 1917 ರಲ್ಲಿ ಮಾರಿಕುಪ್ಪಂನಲ್ಲಿ ಬೌದ್ಧರ ಸಂಘ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿತು. 1936 ರವರೆಗೂ ಕೆಜಿಎಫ್‌ನಲ್ಲಿ ಪ್ರಾಥಮಿಕ ಶಾಲೆಗಳು ಅಂದರೆ 6ನೇ ತರಗತಿಯವರೆಗೆ ಮಾತ್ರ ಇದ್ದವು. ಹೈಸ್ಕೂಲ್‌ಗೆ ಹೋಗಬೇಕೆಂದರೆ ಬಂಗಾರಪೇಟೆ, ಕೋಲಾರ ಅಥವಾ ಬೆಂಗಳೂರಿಗೆ ಹೋಗಬೇಕಾಗಿತ್ತು. 1936ರಲ್ಲಿ ರಾಬರ್ಟ್‌ಸನ್‌ಪೇಟೆಯಲ್ಲಿ ಮೊದಲಿಗೆ ಹೈಸ್ಕೂಲ್ ಪ್ರಾರಂಭವಾಗಿತ್ತು.

ಚಲ್ಲಪ್ಪನ ವಿದ್ಯಾದೇಗುಲ :

ಮಾರಕುಪ್ಪಂ ಹತ್ತಿರ ಇರುವ ಚಲ್ಲಪ್ಪ ಶಾಲೆಗೆ ನೂರು ವರ್ಷಗಳು ತುಂಬಿವೆ. ಈ ಶಾಲೆಯಲ್ಲಿ ವಿದ್ಯೆ ಪಡೆದ ಅನೇಕ ವಿದ್ಯಾರ್ಥಿಗಳು ಐಎಎಸ್, ಐಪಿಸ್ ಮತ್ತು ಪ್ರಖ್ಯಾತ ವಿಜ್ಞಾನಿ, ತಂತ್ರಜ್ಞರಾಗಿದ್ದಾರೆ. ಆದರೆ ಈ ಶಾಲೆಯನ್ನು ಸ್ಥಾಪಿಸಿದ ಚಲ್ಲಪ್ಪನು ಮಾತ್ರ ಅನಕ್ಷರಸ್ಥ, ಹೆಬ್ಬೆಟ್ಟು ಒತ್ತುತ್ತಿದ್ದ ಒಬ್ಬ ಸಾಧಾರಣ ಕೂಲಿ ಕಾರ್ಮಿಕ. ಜಾನ್ ಟೇಲರ್ ಹತ್ತಿರ ಗುತ್ತಿಗೆದಾರನಾಗಿ ಬಡ್ತಿ ಪಡೆದ ಚಲ್ಲಪ್ಪ ತಮಿಳು ನಾಡಿನಿಂದ ಸಾವಿರಾರು ಜನರನ್ನು ಗಣಿಗಳಲ್ಲಿ ಕೆಲಸ ಮಾಡಲು ಕರೆದು ತಂದಿದ್ದು ಅವರ ಮಕ್ಕಳಿಗೆ ಶಾಲೆ ಇರಲಿಲ್ಲ. ಸ್ಥಳೀಯ ಹಿಂದೂಗಳು ತಮ್ಮ ಮಕ್ಕಳಿಗಾಗಿ ಮನೆಗಳಲ್ಲೇ ಪಾಠಶಾಲೆಗಳನ್ನು ಹೊಂದಿದ್ದು ಬ್ರಿಟಿಷರು ನಡೆಸುತ್ತಿದ್ದ ಶಾಲೆಗಳಲ್ಲಿ ಸ್ಥಳಿಯರಿಗೆ ಪ್ರವೇಶವಿರಲಿಲ್ಲ. ಜಾನ್ ಟೇಲರ್‌ರಿಂದ ಅನುಮತಿ ಪಡೆದ ಚಲ್ಲಪ್ಪ ತಮ್ಮ ಮನೆಯ ಪಕ್ಕದ ವಿಶಾಲ ಮೈದಾನದಲ್ಲಿಯೇ ಮೊದಲಿಗೆ ಶಾಲೆಯನ್ನು ಪ್ರಾರಂಭಿಸಿದರು. ಒಂದು ಕಾಲಕ್ಕೆ ಈ ಶಾಲೆಯಲ್ಲಿ 2000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಬ್ರಿಟಿಷ್ ಮತ್ತು ಆಂಗ್ಲೋ-ಇಂಡಿಯನ್ ಅಧ್ಯಾಪಕರನ್ನು ನೇಮಿಸಿದ್ದ ಈ ಶಾಲೆಯ ವಿದ್ಯಾಭ್ಯಾಸ ಕೆಜಿಎಫ್‌ನ ಯಾವುದೇ ಕ್ರಿಶ್ಚಿಯನ್ ಶಾಲೆಯ ವಿದ್ಯಾಭ್ಯಾಸದ ಗುಣಮಟ್ಟಕ್ಕೆ ಸರಿಸಾಟಿಯಾಗಿತ್ತು. ಚೆಲ್ಲಪ್ಪನ ನಿಧನದ ನಂತರ ಈ ಶಾಲೆಯ ಆಡಳಿತವನ್ನು ಬಿಜಿಎಮ್‌ಎಲ್ ವಹಿಸಿಕೊಂಡಿತ್ತು.

ಉರಿಗಾಂನಲ್ಲಿದ್ದ ಕೆಜಿಎಫ್ ಕಾನ್ವೆಂಟ್ ಶಾಲೆಯಲ್ಲಿ ಬ್ರಿಟಿಷರು ಮತ್ತು ಆಂಗ್ಲೋ-ಇಂಡಿಯನ್ನರ ಮಕ್ಕಳನ್ನು ಮಾತ್ರ ಸೇರಿಸಿಕೊಳ್ಳಲಾಗುತ್ತಿತ್ತು. ಚಾಂಪಿಯನ್ ರೀಫ್‌ನಲ್ಲಿದ್ದ ಸೆಂಟ್ ಜೋಸೆಫ್ ಕಾನ್ವೆಂಟ್ ಶಾಲೆಯಲ್ಲಿ ಐರೋಪ್ಯ ಮತ್ತು ಇತರರ ಮಕ್ಕಳಿಗೆ ಬೇರೆ ಬೇರೆ ವಿಭಾಗಗಳಿದ್ದವು. ಅನಂತರ ಆಂಡ್ರಸನ್‌ಪೇಟೆಯಲ್ಲಿದ್ದ ಸೆಂಟ್ ಮೇರಿ ವೆರ್ನಾಕ್ಯುಲರ್ ಶಾಲೆಯಲ್ಲಿ, ರಾಬರ್ಟ್‌ಸನ್‌ಪೇಟೆಯ ಸರಕಾರಿ ಶಾಲೆ ಮತ್ತು ಹಲವು ಮಿಶನರಿ

ಶಾಲೆಗಳಲ್ಲಿ ಸ್ಥಳೀಯರ ಮಕ್ಕಳನ್ನು ಸೇರಿಸಿಕೊಳ್ಳಲಾಯಿತು.

❖❖❖

ಬ್ರಿಟಿಷರು ಮೊದಲಿಗೆ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಯೋಚಿಸಲಿಲ್ಲ. ಕೆಲವು ವರ್ಷಗಳ ಕಾಲ ಹೊರಗಿನಿಂದ ಬಂದವರು ತಮ್ಮ ಮಕ್ಕಳಿಗೆ ತಾವೇ ಅಕ್ಷರ ಕಲಿಸುತ್ತಿದ್ದರು, ಅಥವಾ ಅಧ್ಯಾಪಕರನ್ನು ನೇಮಿಸಿ ಮನೆ ಪಾಠ ಕಲಿಸುತ್ತಿದ್ದರು. ಹೀಗೆ ಹೊರಗಿನವರನ್ನು ನೋಡಿದ ಮೇಲೆ ಸ್ಥಳೀಯರಿಗೂ ವಿದ್ಯೆಯ ಮಹತ್ವದ ಬಗ್ಗೆ ತಿಳಿಯಿತು. ಕಾರ್ಮಿಕರೆಲ್ಲ ಹೆಬ್ಬೆಟ್ಟಿನ ಮೂಲಕವೇ ವ್ಯವಹಾರ ನಡೆಸುತ್ತಿದ್ದು, ಇದು 1900 ರವರೆಗೂ ಮುಂದುವರೆದಿತ್ತು. ಅದೇ ವರ್ಷದಲ್ಲಿ ಮೊದಲು ಬಾರಿಗೆ ಹೊಸ ಬಡಾವಣೆ ರಾಬರ್ಟ್‌ಸನ್‌ಪೇಟೆಯಲ್ಲಿ ಕ್ರೈಸ್ತ ಮಿಶನರಿ ಮತ್ತು ಸರಕಾರದಿಂದ ಒಂದೊಂದು ಶಾಲೆ ಪ್ರಾರಂಭಗೊಂಡಿತು. ಈ ಶಾಲೆಗಳಲ್ಲಿ ಬೋಧಿಸುತ್ತಿದ್ದ ಪುಸ್ತಕಗಳು ಮದ್ರಾಸ್‌ನಲ್ಲಿ ಮುದ್ರಿತವಾಗುತ್ತಿದ್ದು ಅವುಗಳಲ್ಲಿ ಮೊದಲ ಮತ್ತು ಎರಡನೇ ವಿಶ್ವ ಮಹಾಯುದ್ಧಗಳಲ್ಲಿ ಪಾಲ್ಗೊಂಡಿದ್ದ ಬ್ರಿಟಿಷರನ್ನೇ ನಾಯಕರಂತೆ ಬಿಂಬಿಸಲಾಗಿತ್ತು. ರಾಷ್ಟ್ರಗೀತೆಯು ಬ್ರಿಟಿಷ್ ದೇಶದ್ದೇ ಆಗಿತ್ತು. ಇಡೀ ಭಾರತದಲ್ಲಿ ಸ್ವಾತಂತ್ರ್ಯದ ಬಗ್ಗೆ ಹೋರಾಟಗಳು, ಸಂಘರ್ಷಗಳು ನಡೆಯುತ್ತಿದ್ದರೂ, ಕೆಜಿಎಫ್‌ನಲ್ಲಿ ಅದರ ಲಕ್ಷಣಗಳೇ ಕಾಣಿಸಲಿಲ್ಲ. ಕಾರಣ ಈ ಪ್ರಾಂತ್ಯದಲ್ಲಿ ಬ್ರಿಟಿಷರು ಸ್ಥಳೀಯರನ್ನು ಸಂಪೂರ್ಣವಾಗಿ ಹತೋಟಿಯಲ್ಲಿ ಇಟ್ಟಿದ್ದರು. ಯಾರಾದರೂ ಸ್ವಾತಂತ್ರ್ಯದ ಹೋರಾಟಗಳಲ್ಲಿ ಪರೋಕ್ಷವಾಗಿ ಪಾಲ್ಗೊಂಡರೆ, ಅಕ್ಕಪಕ್ಕದ ಜನರೆ ಬ್ರಿಟಿಷರಿಗೆ ವಿಷಯ ತಲುಪಿಸಿಬಿಡುತ್ತಿದ್ದರು. ಈ ಕಾರಣದಿಂದ ಅನೇಕ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿ, ಶಿಕ್ಷೆಯನ್ನು ನೀಡಲಾಗಿತ್ತು.

1921ರ ಜನಗಣತಿಯ ಪ್ರಕಾರ ಕೆಜಿಎಫ್‌ನಲ್ಲಿ ಶೇಕಡ 22.8 ಮಕ್ಕಳು 5–15 ವರ್ಷಗಳ ನಡುವಿನವರಾಗಿದ್ದರು. ಇವರಲ್ಲಿ 13700 ಮಕ್ಕಳು ಕಾರ್ಮಿಕರ ಮಕ್ಕಳಾಗಿದ್ದು ಅವರಲ್ಲಿ ಕೇವಲ 4000 ಮಕ್ಕಳು ಮಾತ್ರ ಗಣಿ ವ್ಯಾಪ್ತಿ ಮತ್ತು ಹೊರವಲಯದ ಶಾಲೆಗಳಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದರು. ಐರೋಪ್ಯರ ಮಕ್ಕಳಿಗೆ 4 ಪ್ರತ್ಯೇಕ ಶಾಲೆಗಳಿದ್ದು ಉಳಿದವರ ಮಕ್ಕಳಿಗೆ 47 ಶಾಲೆಗಳಿದ್ದವು. ಇವುಗಳಲ್ಲಿ 12 ಸರಕಾರಿ, 6 ಕಂಪನಿ, 20 ಮಿಶನರಿ, 4 ಖಾಸಗಿ/ಅನುದಾನಿತ ಮತ್ತು 13 ಖಾಸಗಿ ಶಾಲೆಗಳಿದ್ದವು. ಗಂಡು ಮತ್ತು ಹೆಣ್ಣು ಮಕ್ಕಳು 3:1 ಅನುಪಾತ ಇದ್ದರೆ, 3/4 ಭಾಗದಷ್ಟು ತಮಿಳು ಮಾತನಾಡುವ ಮಕ್ಕಳಿದ್ದರು. ಇವರಲ್ಲಿ ಶೇಕಡ 40 ಮಕ್ಕಳು ಆದಿ ದ್ರಾವಿಡ ಜನಾಂಗಕ್ಕೆ ಸೇರಿದವರಾಗಿದ್ದರು.[33]

ಶ್ರೀನಿವಾಸನ್ ತಮ್ಮ ವರದಿಯಲ್ಲಿ ಒಂದು ಕಡೆ ಹೀಗೆ ದಾಖಲಿಸಿದ್ದಾರೆ. ಕ್ಯಾಂಪ್ ಮನೆಗಳ ಮುಂದೆ ಸಿಕ್ಕಿದ ಕೆಲವು ಮಕ್ಕಳ ಹೊಳೆಯುವ ಕಣ್ಣುಗಳು ನನ್ನನ್ನು ಆಕರ್ಷಿಸಿದ

ಕಾರಣ, ನಾನು ಅವರ ಪೋಷಕರನ್ನು 'ಶಾಲೆ ಹತ್ತಿರದಲ್ಲಿದ್ದರೂ ಮಕ್ಕಳನ್ನು ಯಾಕೆ ಕಳುಹಿಸುತ್ತಿಲ್ಲ' ಎಂದು ಪ್ರಶ್ನಿಸಿದೆ. ಗಣಿ ಒಳಗೆ ಕೆಲಸ ಮಾಡುವ ಆತ ತಲೆಯನ್ನು ಕೆರೆದುಕೊಳ್ಳುತ್ತ ನನ್ನ ಮುಖವನ್ನು ನೋಡಿನೋಡದಂತೆ ಪಕ್ಕಕ್ಕೆ ನೋಡತೊಡಗಿದ. ಪಕ್ಕದಲ್ಲಿದ್ದ ಆತನ ಪತ್ನಿಗೂ ಅದೇ ಪ್ರಶ್ನೆಹಾಕಿದೆ, ಆಕೆ ತನ್ನ ಮಕ್ಕಳು ಬೆತ್ತಲಾಗಿರುವುದರ ಬಗ್ಗೆ ಹೇಳುತ್ತ, 'ಇದು ನೋಡಿ ಅವರಪ್ಪನ ಹರಿದ ಶರ್ಟ್ ಹಾಕಿಕೊಂಡಿದೆ; ಅದೂ ಬರೀ ಲಂಗೋಟಿಯಲ್ಲಿದೆ. ಇವರನ್ನು ಯಾವ ರೀತಿಯಲ್ಲಿ ಶಾಲೆಗೆ ಕಳುಹಿಸುವುದು? ಸ್ಲೇಟುಗಳು ಮುರಿದುಬಿದ್ದಿವೆ. ನೋಟುಪುಸ್ತಕ ಎಲಿಂದ ಕೊಂಡುಕೊಳ್ಳುವುದು?' ಎನ್ನುತ್ತ ಉಳಿದ ನಾಲ್ಕು ಮಕ್ಕಳ ಮೂಗುಗಳನ್ನು ತನ್ನ ಸೀರೆ ಸೆರಗಿನಿಂದ ಒರೆಸತೊಡಗಿದಳು. ಆತ ನಗುತ್ತ, 'ನಿನ್ನ ಕೆಲಸ ನೀನ್ ನೋಡ್ಕೊ. ಸುಮ್ಮನೆ ಬಾಯಿ ಮಾಡ್ಬೇಡ', ಎಂದು ಪತ್ನಿಯನ್ನು ಗದರಿದ. ಅನಂತರ ತನ್ನ ದೊಡ್ಡ ಮಗನಿಗೆ ಗಣಿಯಲ್ಲಿ ಯಾವುದಾದರೂ ಕೆಲಸ ಕೊಡಿಸುವಂತೆ ಕೇಳಿಕೊಂಡ. ಬಹಳಷ್ಟು ಕಾರ್ಮಿಕರ ಕುಟುಂಬಗಳ ಸ್ಥಿತಿ ಇದೇ ರೀತಿಯದು.[34]

ಬಿಜಿಎಮ್ಎಲ್ ಇಂಗ್ಲಿಷ್ ಶಾಲೆ :

1899 ರಲ್ಲಿ ಬ್ರಿಟಿಷರಿಂದ ಪ್ರಾರಂಭವಾದ ಈ ಶಾಲೆಯಲ್ಲಿ 1965ರವರೆಗೆ ಬ್ರಿಟಿಷರು, ಆಂಗ್ಲೋ-ಇಂಡಿಯನ್ನರು ಮತ್ತು ಹಣವಂತರ ಮಕ್ಕಳಿಗೆ ಮಾತ್ರ ಪ್ರವೇಶ ನೀಡಲಾಗುತ್ತಿತ್ತು. 1973 ರಿಂದ ರಾಜ್ಯ ಸರಕಾರದಿಂದ ಈ ಶಾಲೆಗೆ ಗ್ರ್ಯಾಂಟ್ ದೊರಕಿತ್ತು. 1990 ರವರೆಗೆ ಈ ಶಾಲೆಯ ಮಕ್ಕಳು 10ನೇ ತರಗತಿಯಲ್ಲಿ ಫೇಲ್ ಎನ್ನುವ ವಿಷಯವನ್ನೇ ಕೇಳಿರಲಿಲ್ಲ. 1990ರ ನಂತರ ಗಣಿಗಳು ನಷ್ಟ ಅನುಭವಿಸುತ್ತಿದ್ದಂತೆ (ಪೋಷಕರಿಗೆ ಸರಿಯಾಗಿ ಸಂಬಳ ದೊರಕದ ಕಾರಣ) ಮಕ್ಕಳ ಬುದ್ಧಿವಮತ್ತೆಯೂ ಕಡಿಮೆಯಾಗುತ್ತಾಹೋಯಿತು. ಇದಕ್ಕೆ ಕಾರಣ ಅವರಿಗೆ ದೊರಕುತ್ತಿದ್ದ ಸವಲತ್ತುಗಳು ಕಡಿತಗೊಂಡಿದ್ದು, ಶಾಲೆಯ ಹೆಡ್‌ಮಾಸ್ಟರ್ ವೇಣುಗೋಪಾಲರಾವ್ ಅವರು ಮಕ್ಕಳಬಗ್ಗೆ ಹೀಗೆ ಹೇಳುತ್ತಾರೆ. 'ಶಾಲೆಗೆ ಬರುವ ಶೇಕಡ 20ರಷ್ಟು ಮಕ್ಕಳು ತೀರಾ ಬಡವರ ಮಕ್ಕಳು, ಅವರ ಹತ್ತಿರ ನೋಟು ಪುಸ್ತಕಗಳೂ ಇರುವುದಿಲ್ಲ. ಇನ್ನೂ ವಿಷಾದದ ಸಂಗತಿ ಎಂದರೆ ಬಹಳಷ್ಟು ಮಕ್ಕಳು ಹಸಿದ ಹೊಟ್ಟೆಯಲ್ಲೆ ಶಾಲೆಗೆ ಬರುತ್ತಾರೆ. ಹಸಿದು ಹೊಟ್ಟೆಯಲ್ಲಿ ಸಾಲಾಗಿ ನಿಂತು ಪ್ರಾರ್ಥನೆ ಮಾಡುತ್ತಾರೆ. ಯೂನಿಫಾರಂ ಹಿಂದಿನ ವರ್ಷದ್ದೆ ಆಗಿರುತ್ತವೆ. ಇವರು ಎರಡು ಅಥವಾ ಮೂರನೆ ಪೀಳಿಗೆಯ ಕಾರ್ಮಿಕರ ಮಕ್ಕಳು.[35]

ಅವರ ಪೋಷಕರು ಹತ್ತಿರದ ಮೆನೇಜಿಂಗ್ ಡೈರೆಕ್ಟರ್ ಬಂಗಲೆ ಮುಂದೆ ನಿಂತು ತಮ್ಮ ತೊಂದರೆಗಳನ್ನು ತೋಡಿಕೊಳ್ಳುತ್ತ ಪ್ರತಿಭಟಿಸುತ್ತಿದ್ದರೆ, ಮಧ್ಯದಲ್ಲಿ

ಪೊಲೀಸರು ಸಮಾಧಾನ ಮಾಡುತ್ತಿರುವ ದೃಶ್ಯ ಕಂಡುಬರುತ್ತದೆ. ಹೆಣ್ಣುಮಕ್ಕಳು ಉರಿಗಾಂ, ಚಾಂಪಿಯನ್ ಅಥವಾ ಮಾರಿಕುಪ್ಪಂ ರೈಲು ನಿಲ್ದಾಣಗಳಲ್ಲಿ ಬೆಂಗಳೂರಿನಿಂದ ಬರುವ ರೈಲಿಗಾಗಿ ಪ್ಲಾಸ್ಟಿಕ್ ಕೊಡಗಳನ್ನು ಹಿಡಿದುಕೊಂಡು ಕಾಯುತ್ತಿರುತ್ತಾರೆ. ಕುಡಿಯಲು ನೀರಿಲ್ಲದ ಕಾರಣ ಅವರೆಲ್ಲ ರೈಲಿನ ಟಾಯ್‌ಲೆಟ್‌ಗಳಿಂದ ನೀರು ತೆಗೆದುಕೊಳ್ಳಲು ನಿಂತಿರುತ್ತಾರೆ. ಗಣಿಗಳು ಮುಚ್ಚಿದ ಮೇಲೆ ಕಾಲೋನಿಗಳಲ್ಲಿ ನೀರಿನ ಪೈಪುಗಳು ಮತ್ತು ವಿದ್ಯುತ್‌ನ್ನು ಕಡಿತಗೊಳಿಲಾಯಿತು.

ಕೆಜಿಎಫ್ ಪ್ರಥಮ ದರ್ಜೆ ಕಾಲೇಜು :

1962ರಲ್ಲಿ ರಾಬರ್ಟ್‌ಸನ್‌ಪೇಟೆಯಲ್ಲಿ ಮಹಾತ್ಮ ಗಾಂಧೀಜಿ ಪುತ್ಥಳಿಯನ್ನು ಅನಾವರಣಗೊಳಿಸಲು ರಾಜ್ಯದ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ, ಶಿಕ್ಷಣ ಮಂತ್ರಿ ಎಸ್.ಆರ್. ಕಂಠಿ ಮತ್ತು ಕಂದಾಯ ಮಂತ್ರಿ ಎಂ.ವಿ. ಕೃಷ್ಣಪ್ಪ ಬಂದಿದ್ದರು. ಈ ಸಮಯದಲ್ಲಿ ಎಂ.ವಿ. ಕೃಷ್ಣಪ್ಪ, 'ಕೆಜಿಎಫ್ ಕಾರ್ಮಿಕರ ಮಕ್ಕಳು ಮತ್ತು ಸುತ್ತಮುತ್ತಲ ಹಳ್ಳಿ ಮಕ್ಕಳಿಗೆ ಕಾಲೇಜಿಲ್ಲದ ಕಾರಣ ಹೈಸ್ಕೂಲ್ ನಂತರ ವಿದ್ಯಾಭ್ಯಾಸವನ್ನು ಮುಂದುವರೆಸಲು ಆಗುತ್ತಿಲ್ಲ. ಸರಕಾರ ಕಾಲೇಜನ್ನು ಸ್ಥಾಪಿಸಲು ಅನುಮತಿ ನೀಡಬೇಕೆಂದು', ಕೇಳಿಕೊಂಡರು. ಮುಖ್ಯಮಂತ್ರಿ ಮತ್ತು ಶಿಕ್ಷಣ ಮಂತ್ರಿಗಳು 'ನೀವು ಒಂದು ಸಮಿತಿ ಮಾಡಿಕೊಂಡು ಸರಕಾರಕ್ಕೆ ಮನವಿ ಬರೆದುಕೊಳ್ಳಿ ನಾವು ಕೂಡಲೇ ಗ್ರ್ಯಾಂಟ್ ನೀಡುವ ವ್ಯವಸ್ಥೆ ಮಾಡುತ್ತೇವೆ ಮತ್ತು ಕಾಲೇಜು ಅಭಿವೃದ್ಧಿಯನ್ನು ಮಾತ್ರ ನೀವೇ ನೋಡಿಕೊಳ್ಳಬೇಕು' ಎಂದರು.[36]

ಸ್ಯಾನಿಟರಿ ಬೋರ್ಡ್‌ನ ಅಧ್ಯಕ್ಷರಾದ ಐಎಎಸ್ ಅಧಿಕಾರಿ ಪಾರ್ಥಸಾರಥಿ ಸಮಿತಿಯ ಅಧ್ಯಕ್ಷರಾಗಿ ಬಾಪ್ನ, ಜೆ.ಟಿ.ಗೋಪಾಲಕೃಷ್ಣ, ಕೆಲವು ಗಣಿ ಮ್ಯಾನೇಜ್‌ಮೆಂಟ್ ಅಧಿಕಾರಿಗಳು ಮತ್ತು ಕಾರ್ಮಿಕ ಸಂಘಗಳ ಮುಖ್ಯಸ್ಥರು ಸಮಿತಿ ಸದಸ್ಯರಾದರು. ಸರಕಾರದಿಂದ ಕೂಡಲೆ ಕಾಲೇಜು ಸ್ಥಾಪಿಸಲು ಅನುಮತಿ ದೊರಕಿತು. ಕಾಲೇಜ್ ಅಭಿವೃದ್ಧಿಗೆ ಗಣಿ ಕಂಪನಿ 3 ನೇ 2 ಭಾಗ ಮತ್ತು ಸ್ಯಾನಿಟರಿ ಬೋರ್ಡ್ 2 ನೇ 1 ಭಾಗದ ಹಣ ನೀಡುವುದಾಗಿ ಒಪ್ಪಿಕೊಂಡಿತು. ಜುಲೈ 7, 1962 ರಂದು ಖಾಲಿ ಇದ್ದ ಒಂದು ಬಂಗಲೆಯಲ್ಲಿ ಕಾಲೇಜು ಪ್ರಾರಂಭವಾಯಿತು. ಗಣಿ ಕಾರ್ಮಿಕರು ತಮ್ಮ ಒಂದು ದಿನದ ಸಂಬಳವನ್ನು ಕಾಲೇಜಿಗೆ ನೀಡಿದರು. ಅನಂತರ ಪಕ್ಕದಲ್ಲಿ ಖಾಲಿಯಾದ ಇನ್ನೊಂದು ಬಂಗಲೆಯನ್ನು ಕಾಲೇಜಿಗೆ ನೀಡಲಾಯಿತು. ಅನಂತರ ಪಕ್ಕದಲ್ಲಿ ಖಾಲಿಯಾದ ಮತ್ತೊಂದು ಬಂಗಲೆಯನ್ನು ಎನ್.ಸಿ.ಸಿ ಹುಡುಗರ ಸಹಾಯದಿಂದ ರಾತ್ರಿ ಹೊತ್ತು ಅದರ ಬೇಲಿ ಕಿತ್ತು ಹಾಕಿಸಿದ ಜಿ.ಎಚ್. ಸಾಹುಕಾರ್ ಅವರು ಕಾಲೇಜಿಗೆ ಸೇರಿಸಿಕೊಂಡರು.

1955ರಲ್ಲಿ ಪಾರಂಭಗೊಂಡಿದ್ದ ಸ್ಕೂಲ್ ಆಫ್ ಮೈನ್ಸ್ ಶಾಲೆಯಲ್ಲಿ ಪ್ರಾಂಶುಪಾಲರಾಗಿದ್ದ ಡಾ. ತಿಮ್ಮಯ್ಯ (ಕೆಂಗಲ್ ಹನುಮಂತಯ್ಯನವರ ಅಳಿಯ) ಅವರನ್ನು ಕಾಲೇಜಿನ ಹಂಗಾಮಿ (ಹೆಚ್ಚುವರಿ) ಪ್ರಾಂಶುಪಾಲರಾಗಿ ನೇಮಿಸಿ ಕಾಲೇಜನ್ನು ನೋಡಿಕೊಳ್ಳುವಂತೆ ಸರಕಾರ ಕೇಳಿಕೊಂಡಿತು. ಭೂಗರ್ಭಶಾಸ್ತ್ರದಲ್ಲಿ ಇಂಗ್ಲೆಂಡಿನಲ್ಲಿ ಪಿ.ಎಚ್‌ಡಿ ಮುಗಿಸಿ ಬಂದಿದ್ದ ತಿಮ್ಮಯ್ಯನವರು ಮೈನ್ಸ್ ಕಾಲೇಜಿನಿಂದ ಮೊದಲಿಗೆ ಕೆಲವು ಕುರ್ಚಿ ಮೇಜುಗಳು, ಡಸ್ಟರು ಮತ್ತು ಸೀಮೆ ಸುಣ್ಣದ ತುಂಡುಗಳನ್ನು ತಂದು ಕೊಟ್ಟರು. ಸಾಹುಕಾರ್ ಭೂಗರ್ಭಶಾಸ್ತ್ರದ ಮುಖ್ಯಸ್ಥರಾಗಿ ಆಗಲೇ ಒಡತಿ ಹೊಂದಿದ್ದರು.

ಇಲ್ಲಿಂದ ತಿರುಗಿ ನೋಡದ ಪದವಿ ಪೂರ್ವ ಕಾಲೇಜು, ಪ್ರಥಮ ದರ್ಜೆ ಕಾಲೇಜಾಗಿ ಬೆಳೆಯುತ್ತಾ ಹೋಯಿತು. ಕಲೆ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳ ಎಲ್ಲಾ ವಿಷಯಗಳು ಕೆಲವೇ ವರ್ಷಗಳಲ್ಲಿ ಪ್ರಾರಂಭಗೊಂಡಿದ್ದವು. 1967ರಲ್ಲಿ ಉಪ ಪ್ರಾಂಶುಪಾಲರಾಗಿ ಆಯ್ಕೆಗೊಂಡ ಸಾಹುಕಾರ್ 1972ರಲ್ಲಿ ಪ್ರಾಂಶುಪಾಲರಾದರು. ತಿಮ್ಮಯ್ಯ ಮೊದಲೆರಡು ವರ್ಷಗಳು ಎಲ್ಲವನ್ನು ತಿಳಿಸಿ ಕೊಟ್ಟು ಮುಂದೆ ಎಲ್ಲವನ್ನೂ ನೀವೇ ನೋಡಿಕೊಳ್ಳಿ ಎಂದು ಸಾಹುಕಾರ್ ಅವರಿಗೆ ಬಿಟ್ಟುಬಿಟ್ಟರು. ಮುಂದಿನ ದಿನಗಳಲ್ಲಿ ಸಾಹುಕಾರ್ ಅವರ ಕಟ್ಟುನಿಟ್ಟಿನ ಪರಿಶ್ರಮದಿಂದ ರಾಜ್ಯದಲ್ಲಿಯೇ ಒಂದು ಅತ್ಯುತ್ತಮ ಕಾಲೇಜಾಗಿ ಬೆಳೆದು ನಿಂತಿತು. ಗೋಲ್ಡನ್ ವ್ಯಾಲಿ ಎಜ್ಯುಕೇಶನಲ್ ಟ್ರಸ್ಟ್, ಗಣಿಗಳಲ್ಲಿ ಮತ್ತು ಬಿ.ಇ.ಎಮ್.ಎಲ್ ಕಾರ್ಖಾನೆಯಲ್ಲಿ ದಿನದಲ್ಲಿ ಸಮಯ ದೊರಕದ ಯುವಕರಿಗಾಗಿ ಸಂಜೆ ಕಾಲೇಜನ್ನು ಸ್ಥಾಪನೆ ಮಾಡಿತು. ಅನಂತರ ಹೊಸ ಕಟ್ಟಡವನ್ನು ಕಟ್ಟಿ ಒಳ್ಳೆ ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲಾಯಿತು.

ಕಾಲೋನಿಗಳಲ್ಲಿ ವಿದ್ಯುತ್ ದೀಪಗಳಿಲ್ಲದ ಕಾರಣ ವಿದ್ಯಾರ್ಥಿಗಳು ಓದಿಕೊಳ್ಳಲು ಕಾಲೇಜಿನ ಗ್ರಂಥಾಲಯವನ್ನು ರಾತ್ರಿ ಹೊತ್ತು ತೆರೆದಿಡುವ ವ್ಯವಸ್ಥೆಯನ್ನು ಮಾಡಲಾಯಿತು. ಮಧ್ಯೆ ಅವರಿಗಾಗಿ ಒಂದು ಕಪ್ಪು ಚಹಾದ ವ್ಯವಸ್ಥೆಯನ್ನು ಸಾಹುಕಾರರು ಮಾಡಿದ್ದರು. ಇಂತಹ ಪ್ರೊಫೆಸರ್ ಒಮ್ಮೆ ಅಮೆರಿಕಾದ ಒಂದು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಪೋಲೀಸ್ ಜೀಪು ಪಕ್ಕದಲ್ಲಿಯೇ ಬಂದು ನಿಂತುಕೊಂಡಿತು. ಅಮೆರಿಕಾದಲ್ಲಿ ಯಾವ ಗ್ರಹಚಾರ ಎಂದುಕೊಂಡ ಸಾಹುಕಾರರು ತಬ್ಬಿಬ್ಬಾಗಿ ನೋಡತೊಡಗಿದರು. ಜೀಪಿನಿಂದ ಕೆಳಗಿಳಿದ ಪೋಲಿಸ್ ಅಧಿಕಾರಿ ಕೆಜಿಎಫ್ ಶೈಲಿಯ ಒಂದು ತಗಡಾ ಸೆಲ್ಯೂಟ್ ಹೊಡೆದು 'ಸಾರ್ ನಾನು ನಿಮ್ಮ ಹಳೆ ವಿದ್ಯಾರ್ಥಿ ಸಾರ್' ಎಂದ. ಅಮೆರಿಕಾಗೆ ಬಂದಿದ್ದು ಸಾರ್ಥಕ ಆಯಿತು ಎಂದುಕೊಂಡರು ಪ್ರೊಫೆಸರ್.

ಪಿಯುಸಿಯಲ್ಲಿ ಪಾಸಾದ ಬಹಳಷ್ಟು ವಿದ್ಯಾರ್ಥಿಗಳು ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ನೇರವಾಗಿ ಸೀಟುಗಳನ್ನು ಪಡೆಯುತ್ತಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಲ್ಲೂ ಸಿಂಹ ಪಾಲು ಸೀಟುಗಳನ್ನು ಕೆಜಿಎಫ್

ವಿದ್ಯಾರ್ಥಿಗಳೆ ಪಡೆಯುತ್ತಿದ್ದರು. ಇನ್ನು ಭೂಗರ್ಭಶಾಸ್ತ್ರ ವಿಭಾಗದ ಅರ್ಧ ಸೀಟುಗಳನ್ನು ಇವರೇ ಪಡೆಯುತ್ತಿದ್ದರು. ಇವರಲ್ಲಿ ಮೀಸಲಾತಿ ಮತ್ತು ಜನರಲ್ ಕ್ಯಾಟಗರಿಯ ವಿದ್ಯಾರ್ಥಿಗಳು ಇರುತ್ತಿದ್ದರು. ಇದನ್ನು ಸಹಿಸಲಾರದ ಕೆಲವು ಸಿಂಡಿಕೇಟ್ ಸದಸ್ಯರು 'ಇವರೆಲ್ಲ ದಲಿತರಲ್ಲ ಕ್ರಿಶ್ಚಿಯನ್ನರು ಎನ್ನುವ ತಗಾದೆಯನ್ನು ತೆಗೆದಿದ್ದರು. ಅದೇ ಸಿಂಡಿಕೇಟ್ ಸಭೆಯಲ್ಲಿ ಸಾಹುಕಾರ್ ಅವರು 'ಅದೆಲ್ಲ ನಮಗೆ ಗೊತ್ತಿಲ್ಲ. ಅವರ ಬಳಿ ಪರಿಶಿಷ್ಟ ಜಾತಿ ಸರ್ಟಿಫಿಕೇಟ್ ಇದೆ. ಜೊತೆಗೆ ಕಾನೂನು ಇದೆ' ಎಂದು ಅವರ ಬಾಯಿ ಮುಚ್ಚಿಸಿದ್ದರು.

ಬೆಂಗಳೂರಿನ ಸಾಹುಕಾರ್ ಅವರ ಮನೆಯಲ್ಲಿ 19.11.2006ರಂದು ಅವರ ಜೊತೆಗೆ ಕೂತು ಮಾತನಾಡುವಾಗ 'ನಾನು ಚೇಂಬರ್‌ನಿಂದ ಹೊರಗೆ ಬಂದರೆ ಸಾಕು! ಎಂತಹ ವಿದ್ಯಾರ್ಥಿಗಳು ಓಡಿಹೋಗಿ ಅಲ್ಲಿ ಇಲ್ಲಿ ಅಡಗಿಕೊಂಡುಬಿಡ್ತಿದ್ದರು. ಪರೀಕ್ಷೆಯಲ್ಲಿ ಕಾಪಿ ಹೊಡೆಯುವುದಾಗಲಿ, ಏನಾದರೂ ತಪ್ಪು ಮಾಡಿದರೆಂದರೆ ಹೊಡೆದು ಬಿಡ್ತಾ ಇದ್ದೆ. ಆಗ ದೊಡ್ಡ ಗೂಂಡಾ ನಾನು. (ಮಧ್ಯದಲ್ಲಿ ನಾನೂ ನೋಡಿದ್ದೀನಿ ಸಾರ್ ಎಂದೆ. ಅವರ ನಿವೃತ್ತ ಅಸಿಸ್ಟೆಂಟ್ ದೊರೆಸ್ವಾಮಿ ದೂರದಲ್ಲಿ ನಿಂತು ನಗುತ್ತಿದ್ದರು) ನನ್ನ ಮಗ್ನ್, ನನ್ನ ಮಗ್ಳ್ನ ಯಾಕೆ ಹೊಡ್ದೆ ಅಂತ ಒಂದು ದಿನಾನೂ ಯಾವ ತಂದೆ ತಾಯಿನೂ ಬಂದು ನನ್ನನ್ನ ಕೇಳ್‌ಲಿಲ್ಲ. ಕಾಲೇಜು ಬೆಳೆದಿದ್ದು ನನ್ನ ಒಬ್ಬನಿಂದಾನೇ ಅಲ್ಲ. ಅದರಲ್ಲಿ ಪ್ರತಿಯೊಬ್ಬ ಮಾಲಿ-ಪ್ಯೂನ್ ಶ್ರಮಾನೂ ಇದೆ' ಕಾಲೇಜು ದಿನಗಳನ್ನು ಜ್ಞಾಪಿಸಿಕೊಳ್ಳುತ್ತಾ... 'ಅದರಿಂದಾನೆ ಇರ್ಬೇಕು ದೇಶದಲ್ಲೇ ಅಲ್ಲ... ಪ್ರಪಂಚದಲ್ಲೆಲ್ಲ ನನ್ನ ವಿದ್ಯಾರ್ಥಿಗಳಿದ್ದಾರೆ...' ಎಂದು ಬೀಗುತ್ತಾ ನನ್ನ ಜೊತೆಗೆ ಬಾಗಿಲುವರೆಗೂ ಹೆಜ್ಜೆಹಾಕುತ್ತಾ ಬಂದರು.[37]

❖❖❖

1. K.S.Seetharaman, Kolar Thanagavail Varalaru,p.97
2. Wesleyan methodist Report, as cited in T.I.Baktavachsalam,The origion and development of the protestant Mission in KGF, unpub. BD thesis,1976,united theological college, Bangalore (Miners and Millhands-work, culture and politics in princely Mysore- Janaki Nair, sage publication, New Delhi).
3. K.S.Seetharaman,Kolar Thangvail Varalaru, p.252.
4. Ibidem,p.46
5. Petition of G.Ramanjulu Naidu,7 July 1913. File no.73-13,Slno. 1-9, Police, (Karnataka State Archievs) KSA.
6. Valzinadai Nondichindu, p.7
7. Ibidem,166/144l.
8. K.S.Seetharaman, Kolar Thangavail Varalaru, pp.336-38.
9. Loganathan, The Revival of Buddhism in SI, pp.99.
10. Ibidem,
11. K.S.Seetharaman, Kolar Thangavail Varalaru, pp.316-17.
12. Valzinadai Nondichindu pp.12-14.
13. Ibidem,pp.12-14 K.S. Seetharaman, Kolar Thanagavil Varalaru, pp.312-13.
14. Valzinadai Nondichindu pp.12-14 K.S.Seetharaman, Kolar Thanagavail Varalaru, pp.312-13. Loganathan, the Revival of Buddhism in 19th Century
15. K.N.Kadams,ed.,Dr.B.R.Ambedkar:The Emancipator of the Oppressed (Bombay: popular prakasan),p.94.
16. Valzinadai Nondichindu, p.8
17. Ibidem
18. Ibidem,p.30
19. Loganathan, The Revival of Buddhism,p.94. South India Buddhist Association(SIBA), Annual report,1916.
20. Ibidem

21. Loganathan, The Revival of Buddhism,p.94. South India Buddhist Association(SIBA), Annual report,1916.
22. A small example of such reinterpretation is provided in the SIBA .Annual report.
23. Perumal, Revival of Tamil Buddhism, p.11.
24. Resolution of the fifth SIBA meeting, 1st April, 1945.
25. Census of India, 1921, vol.xxiii, part-2, tables.
26. Statistical abstract of Mysore 1923-48, tabe-6.
27. Miners and Millhands-work, culture and politics in princely Mysore- Janaki Nair,.p.146.
28. ibedam p.111
29. Fortnightly report of the resident of Mysore, 4Feb,1922,CRR,KSA.
30. ಎನ್.ಆರ್.ಪುರುಷೋತ್ತಮ್ ಮತ್ತು ಜಗನ್ನಾಥ ಪ್ರಕಾಶ್, ಸಂಯುಕ್ತ ಕರ್ನಾಟಕ, ಬೆಂಗಳೂರು,2002.
31. ಎನ್.ಆರ್.ಪುರುಷೋತ್ತಮ್ ಮತ್ತು ಜಗನ್ನಾಥ್‌ಪ್ರಕಾಶ್, ಸಂಯುಕ್ತ ಕರ್ನಾಟಕ, ಬೆಂಗಳೂರು, 2002.
32. Interview with K.S.Seetharaman by Vinodhkumar, july 1997, Kolar gold mines: An unfinished Biography of Colonialism by Vinodhkumar C.P, Revathi P.G and Rammohan, K.T., Economic and political weekly, une 13,1998.
33. Labour in India, socioeconomic conditions of workers in Kolar gold mines, M.A.Sreenivasan, Vikas publishing house, Pvt.Lmt, New Delhi.
34. ಅದೇ ವರದಿ, ಪುಟ 3–6
35. Labour in India, socioeconomic conditions of workers in Kolar gold mines, M.A.Sreenivasan, vikas publishing house, Pvt.Lmt, New Delhi
36. ಇಂಡಿಯನ್ ಎಕ್ಸ್‌ಪ್ರೆಸ್, 31.7.2001
37. ಪ್ರೊ॥ ಜಿ.ಎಚ್. ಸಾಹುಕಾರ್ ಅವರ ಮನೆಯಲ್ಲಿ ನಡೆದ ಸಂದರ್ಶನದಲ್ಲಿ, ಬೆಂಗಳೂರು, 19.11.2006.

ಅಧ್ಯಾಯ–6

ಕಾರ್ಮಿಕರು ಮತ್ತು ಅವರ ಸಮಸ್ಯೆಗಳು

> ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ವಿಶ್ಲೇಷಿಸಲಾಗಿದೆ. ಕಾರ್ಮಿಕರು ಮತ್ತು ಅಧಿಕಾರಿಗಳ ಸಂಖ್ಯೆ, ದಿನಗೂಲಿ ಮತ್ತು ಸಂಬಳ, ಬೆಲೆಗಳು, ಆಶ್ರಯ ಮತ್ತು ಸ್ವಾಸ್ಥ್ಯಪಾಲನೆ. ಕಾರ್ಮಿಕರ ಕುಡಿತ ಮತ್ತು ಆರೋಗ್ಯ, ಸಿಲಿಕೋಸಿಸ್ ಮತ್ತು ಸಾಂಕ್ರಾಮಿಕ ರೋಗಗಳು. ಗಣಿಗಳಲ್ಲಿ ಸಂಭವಿಸುವ ಅಪಘಾತಗಳು, ಸುರಕ್ಷತೆ, ಪರಿಹಾರ ಇತ್ಯಾದಿ ವಿಷಯಗಳನ್ನು ದಾಖಲಿಸಲಾಗಿದೆ.

ಗಣಿಗಳಲ್ಲಿ 100ಕ್ಕೆ ಶೇಕಡ 50ರಷ್ಟು ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಯಾವುದೇ ಕಾಲದಲ್ಲೂ ಗಣಿ ಕಾರ್ಮಿಕರಿಗೆ ಕೊರತೆ ಇರಲಿಲ್ಲ. 1887ರಲ್ಲಿ ಹಾಂಗ್‌ಕಾಂಗ್(ಚೀನಾ)ನಿಂದ ಕಾರ್ಮಿಕರನ್ನು ಕರೆತರುವುದರ ಬಗ್ಗೆ ಆಲೋಚಿಸಲಾಗಿತ್ತು. ಚೀನಾ ದೇಶದಿಂದ ಕಾರ್ಮಿಕರು ಬಂದರೆ ಇಲ್ಲಿನ ಯುರೋಪಿಯನ್ನರು, ಏಷಿಯನ್ನರು ಮತ್ತು ಸ್ಥಳೀಯರಿಗೆ ಕೆಲಸ ದೊರಕದೇ ಹೋಗಬಹುದು ಮತ್ತು ದಕ್ಷಿಣ ಆಫ್ರಿಕಾ ಕಡೆಗೆ ಇವರೆಲ್ಲ ವಲಸೆ ಹೋಗಬೇಕಾಗುತ್ತದೆ ಎನ್ನುವ ಭಯದಿಂದ ಚೀನಿಯರನ್ನು ಬರದಂತೆ ಕೊನೆ ಘಳಿಗೆಯಲ್ಲಿ ತಡೆಯಲಾಯಿತು.[1]

1930ರಲ್ಲಿ ಕೆಜಿಎಫ್ ಗಣಿಗಳು ರಾಜ್ಯದಲ್ಲಿಯೆ ದೊಡ್ಡ ಉದ್ದಿಮೆಯಾಗಿದ್ದು ಪ್ರಪಂಚದ ಶೇಕಡ 1.8 ಭಾಗದಷ್ಟು ಚಿನ್ನವನ್ನು ಉತ್ಪಾದನೆ ಮಾಡುತ್ತಿತ್ತು. ಗಣಿ ಪ್ರದೇಶ 14.88 ಚದರ ಕಿ.ಮೀ ವ್ಯಾಪ್ತಿಯಲ್ಲಿ ಹರಡಿದ್ದು 50,000 ಜನಸಂಖ್ಯೆ ಹೊಂದಿತ್ತು.

1930ರಲ್ಲಿ ಎಲ್ಲಾ ಕಂಪನಿಗಳಲ್ಲೂ ಒಟ್ಟು 18514 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಇವರಲ್ಲಿ 330 ಯುರೋಪಿಯನ್ನರು, 379 ಆಂಗ್ಲೋ-ಇಂಡಿಯನ್ನರಿದ್ದು, ಉಳಿದ 17805 ಜನರು ಇಂಡಿಯನ್ನರು. ಇವರಲ್ಲಿ 5,032 ಕಾರ್ಮಿಕರು ಗಣಿ ಕಾಲೋನಿ ಪ್ರದೇಶಗಳ ಹೊರಗೆ ಉಳಿದುಕೊಂಡಿದ್ದರು. ಬೌರಿಂಗ್‌ಪೇಟೆ ತಾಲೂಕಿನಲ್ಲಿ 80 ಹಳ್ಳಿಗಳಿದ್ದು, ಕೆಜಿಎಫ್ ಸುತ್ತಮುತ್ತಲು ಹಳ್ಳಿಗಳು ಸ್ಯಾನಿಟರಿಬೋರ್ಡಿನ ವ್ಯಾಪ್ತಿಗೆ ಸೇರಿದ್ದವು. ಇವುಗಳ ಒಟ್ಟು ಜನಸಂಖ್ಯೆ 87,682. ಗಣಿ ಕಾರ್ಮಿಕರಿಂದ ಅವರ ಕುಟುಂಬಗಳ ಒಟ್ಟು 67,000 ಜನರು ಆಧಾರ ಪಟ್ಟಿದ್ದರು. ಮೈಸೂರು ಸರಕಾರಕ್ಕೆ ಸೇರಿದ ಪೊಲೀಸರು ಮತ್ತಿತರ ವಿಭಾಗಗಳ ಅಧಿಕಾರಿಗಳು ಮತ್ತು ಅವರ ಕುಟುಂಬಗಳು ಈ ಲೆಕ್ಕದಲ್ಲಿ ಸೇರಿಲ್ಲ. ಕೆಜಿಎಫ್‌ನ ಗಂಡು-ಹೆಣ್ಣಿನ ಶೇಕಡವಾರು ಸರಾಸರಿ 6:5. ಬೌರಿಂಗ್‌ಪೇಟೆ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ 20,000 ಜನರು ಕೃಷಿಯ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರು. ಇವರಲ್ಲಿ ಗಂಡು-ಹೆಣ್ಣಿನ ಅನುಪಾತ ಸಮವಾಗಿತ್ತು.

ಕರ್ನಾಟಕದ ದಕ್ಷಿಣ-ಪೂರ್ವದಲ್ಲಿರುವ ಕೆಜಿಎಫ್ ಆಂಧ್ರ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಗೆ ಹತ್ತಿರವಾದ ಪ್ರದೇಶ. ಕಾರ್ಮಿಕರಲ್ಲಿ ಅರ್ಧಭಾಗಕ್ಕಿಂತ ಹೆಚ್ಚು ಜನರು ಮದ್ರಾಸ್ ಪ್ರೆಸಿಡೆನ್ಸಿಯಿಂದ ಬಂದಿದ್ದು ಅದರಲ್ಲೂ ಹೆಚ್ಚಾಗಿ ಬರ ಪ್ರದೇಶಗಳಾದ ಉತ್ತರ ಆರ್ಕಾಟ್, ದಕ್ಷಿಣ ಆರ್ಕಾಟ್, ಮದ್ರಾಸ್-ಸೇಲಮ್, ಮಲಬಾರ್-ಕೊಚ್ಚಿನ್, ಕಡೆಗೆ ಸೇರಿದವರು. 1/5 ಭಾಗದಷ್ಟು ಜನರು ಆಂಧ್ರದ ನೆಲ್ಲೂರು ಕಡೆಯವರಾಗಿದ್ದು ಸ್ಯಾನಿಟೇಶನ್ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಕನ್ನಡ, ಉರ್ದು, ಮತ್ತು ಮಲೆಯಾಳಿ ಮಾತನಾಡುವವರ ಒಟ್ಟು ಸಂಖ್ಯೆ 1/5 ಭಾಗ. ಮೈಸೂರ ರಾಜ್ಯದಿಂದ ಶೇಕಡ 14.41 ಮತ್ತು 3.3 ರಷ್ಟು ಜನರು ಇತರ ಪ್ರದೇಶಗಳಿಂದ ಬಂದವರಿದ್ದರು. (ಇವರಲ್ಲಿ ಶೇಕಡ 25 ರಷ್ಟು ಜನರು ಇತರ ರಾಜ್ಯಗಳಿಂದ ಬಂದು ಮೈಸೂರು ರಾಜ್ಯದಲ್ಲಿ ನೆಲೆಸಿದವರ ಮಕ್ಕಳಾಗಿದ್ದರು). ಶೇಕಡ 58 ತಮಿಳು, 19.5 ತೆಲುಗು, 7.5 ಕನ್ನಡ, 7.2 ಉರ್ದು, 2.3 ಮಲೆಯಾಳ ಮತ್ತು 5.5 ಇತರ ಭಾಷೆಗಳನ್ನು ಮಾತನಾಡುವ ಜನರು. ಇವರಲ್ಲಿ ಶೇಕಡ 43.41 ಜನರು ಆದಿ ದ್ರಾವಿಡ ಜನಾಂಗಕ್ಕೆ ಸೇರಿದವರು. ಶೇಕಡ 35.7 ಹಿಂದೂ ಧರ್ಮದವರು, 11.3 ಇಂಡಿಯನ್ ಕ್ರೈಸ್ತರು, ಮುಸ್ಲಿಂ ಜನಾಂಗದ 8.2, ಬೌದ್ಧ ಧರ್ಮದ 1.3 ಮತ್ತು ಇತರ ಜನಾಂಗಗಳಿಗೆ ಸೇರಿದ 3.2 ಜನರಿದ್ದರು. (ಆಧಾರ1.1.1931ರ ಜನಗಣತಿ.)

ಮದ್ರಾಸ್ ಪ್ರಾಂತ್ಯದಿಂದ ಬಂದಿದ್ದ ಆದಿ ದ್ರಾವಿಡರು ತೀರ ಹಿಂದುಳಿದ ಬಡ ಜನಾಂಗವಾಗಿದ್ದರು, ಇವರು ಮೈಸೂರು ಆದಿ ಕರ್ನಾಟಕ ಜನಾಂಗದವರಿಗಿಂತ ಹಿಂದುಳಿದಿದ್ದು ಯಾವುದೇ ರೀತಿಯ ಕಷ್ಟದ ಕೆಲಸಗಳನ್ನು, ಪರಿಣತಿ ಇಲ್ಲದ ಅಪಾಯದ

ಕೆಲಸಗಳನ್ನು ಮಾಡಲೂ ತಯಾರಿದ್ದರು. ಇವರಲ್ಲಿ ಮೇಸ್ತ್ರಿಗಳು ಮತ್ತು ಗುತ್ತಿಗೆದಾರರೂ ಇದ್ದರು. ಇಂಡಿಯನ್ ಕ್ರೈಸ್ತ ಜನಾಂಗ ಮತ್ತು ಹಿಂದೂಗಳು ಹೆಚ್ಚು ಪರಿಣತಿ ಹೊಂದಿದ್ದು, ಗಣಿಗಳ ಮೇಲೆ ಉಸ್ತುವಾರಿ ಕೆಲಸಗಳನ್ನು ಮಾತ್ರ ಹುಡುಕಿಕೊಳ್ಳುತ್ತಿದ್ದರು. ಮಲೆಯಾಳಿಗಳು, ಮೊಪ್ಲಾಗಳು, ಮುಸಲ್ಮಾನರು ಮತ್ತು ಪಂಜಾಬಿಗಳು ಕಡಿಮೆ ಸಂಖ್ಯೆಯಲ್ಲಿದ್ದು, ಇವರಲ್ಲಿ ಚಾಲಕರು, ಫಿಟ್ಟರುಗಳು ಮತ್ತು ಕುಶಲ ಕರ್ಮಿಗಳಿದ್ದರು. ಮೈಸೂರು ಪ್ರಾಂತ್ಯದ 2/3 ಭಾಗದಷ್ಟು ಜನರು ಪರಿಣತಿಯಿಲ್ಲದವರು.[2]

1930ರಲ್ಲಿ ಗಣಿಗಳ ಒಳಗೆ ಅರ್ಧಕ್ಕಿಂತ ಹೆಚ್ಚು ಕಾರ್ಮಿಕರು, ಗಣಿಗಳ ಮೇಲೆ 1/4 ಭಾಗದಷ್ಟು ಗುತ್ತಿಗೆ ಕಾರ್ಮಿಕರಿದ್ದರು. 1930ಕ್ಕೆ ಮುಂಚೆ ಗಣಿಗಳಲ್ಲಿ ಕಾರ್ಮಿಕರು ದಿನಕ್ಕೆ ಎರಡು ಶಿಫ್ಟ್‌ಗಳಲ್ಲಿ 12 ಗಂಟೆಗಳ ಕಾಲ ಕೆಲಸ ನಿರ್ವಹಿಸುತ್ತಿದ್ದರು. ಅನಂತರ 8 ಗಂಟೆ ಕಾಲದ 3 ಶಿಫ್ಟ್‌ಗಳು ಬಂದವು. ಇದು ಗುತ್ತಿಗೆ ಕೆಲಸಗಾರರಿಗೆ ಅನ್ವಯಿಸುತ್ತಿರಲಿಲ್ಲ. ಇವರಿಗೆ ಯಾವುದೇ ನಿಗದಿತ ಸಮಯ ಇರುತ್ತಿರಲಿಲ್ಲ. ಹೆಚ್ಚು ಸಮಯ ಕೆಲಸ ಮಾಡುತ್ತಿದ್ದರಿಂದ ಅವರು ಹೆಚ್ಚು ದಣಿಯುತ್ತಿದ್ದರೆ ಹೊರತು ಹೆಚ್ಚು ಕೆಲಸ ನಡೆಯುತ್ತಿರಲಿಲ್ಲ. ಜೊತೆಗೆ ಅಪಘಾತಗಳು ಹೆಚ್ಚು ಸಂಭವಿಸುತ್ತಿದ್ದವು. ಎಷ್ಟಾದರೂ ಇವರ ಪರಿಸ್ಥಿತಿ ಆ ಕಾಲಕ್ಕೆ ತಿಂಗಳು ತಿಂಗಳು ಸಂಬಳ ಇಲ್ಲದವರಿಗಿಂತ ಚೆನ್ನಾಗಿತ್ತು. 'ಕಳುದೆ ಮೇವಿಂದಾಳು ಕಂಪಿನಿಲೆ ಮೇವಿಕುನು' (ಕತ್ತೆ ಮೇಯಿಸಿದರು ಕಂಪನಿಯಲ್ಲಿ ಮೇಯಿಸಬೇಕು) ಎನ್ನುತ್ತದೆ ಈ ತಮಿಳು ಗಾದೆ.

ಮಲೆಯಾಳಿಗಳು ಮರಗೆಲಸ ಮತ್ತು ಶಿಲಾಸ್ಫೋಟ ಮಾಡುವವರಲ್ಲಿ ಹೆಚ್ಚಾಗಿದ್ದರು. ಉರ್ದು ಮಾತನಾಡುವವರು ಉತ್ತರ ಭಾರತದಿಂದ ಬಂದಿದ್ದು ಕಾವಲು ಪಡೆಯಲ್ಲಿದ್ದರು. ಇವರಲ್ಲಿ ಕೆಲವರು ಚಾಲಕರು, ಫಿಟ್ಟರ್ಸ್ ಮತ್ತು ಮೆಕಾನಿಕ್ಸ್ ಕೂಡ ಇದ್ದರು. ತೆಲುಗು, ಮಲೆಯಾಳಿ ಮತ್ತು ಪಂಜಾಬಿ ಕ್ಯಾಂಪ್ಸ್ ಬೇರೆ ಬೇರೆ ಇದ್ದವು. ತಮಿಳು ಕ್ಯಾಂಪುಗಳಲ್ಲಿ ಹೆಚ್ಚಾಗಿ ಅಸ್ಪೃಶ್ಯರು ಮಾತ್ರ ಇದ್ದರು.

ಗಣಿ ಕಾರ್ಮಿಕರ ಸಂಖ್ಯೆ 1891 ರಿಂದ 2001ರ ನಡುವೆ :

ವರ್ಷ	ಕಾ.ಸಂಖ್ಯೆ
೧೮೯೧	೯೦೩೮
೧೯೦೦೨೪೫೮೭	
೧೯೦೨	೩೪೬೪೧
೧೯೩೦	೧೮೫೧೪

ವರ್ಷ	ಕಾ.ಸಂಖ್ಯೆ	ವರ್ಷ	ಕಾ. ಸಂಖ್ಯೆ
೧೯೭೩	೧೩೧೬೮	೧೯೮೮	೧೧೪೧೧
೧೯೭೪	೧೨೬೪೩	೧೯೮೯	೧೦೯೬೬
೧೯೭೫	೧೨೨೬೦	೧೯೯೦	೧೦೭೨೬
೧೯೭೬	೧೧೭೨೬	೧೯೯೧	೧೦೩೩೨
೧೯೭೭	೧೧೫೧೨	೧೯೯೨	೮೮೨೧
೧೯೭೮	೧೧೯೫೯	೧೯೯೩	೮೩೬೮
೧೯೭೯	೧೧೮೫೯	೧೯೯೪	೭೧೬೪
೧೯೮೦	೧೧೯೫೩	೧೯೯೫	೬೫೯೦
೧೯೮೧	೧೨೭೨೨	೧೯೯೬	೬೨೫೧
೧೯೮೨	೧೨೯೭೧	೧೯೯೭	೫೮೨೨
೧೯೮೩	೧೨೯೧೪	೧೯೯೮	೪೩೬೭
೧೯೮೪	೧೨೬೮೦	೧೯೯೯	೪೩೧೮
೧೯೮೫	೧೨೭೮೦	೨೦೦೦	೪೩೧೦
೧೯೮೬	೧೨೧೩೪	೨೦೦೧	೩೫೫೬
೧೯೮೭	೧೧೬೬೬		

2001ರಲ್ಲಿ ಗಣಿಗಳನ್ನು ಮುಚ್ಚಿದಾಗ ಉಳಿದುಕೊಂಡ ಕಾರ್ಮಿಕರ ಸಂಖ್ಯೆ: ಕೆಜಿಎಫ್ 2760, ಚಿಗುರುಕುಂಟ 432, ಹಳೆ ಬಿಸಾನತ್ತಂ 107, ಯಾಪಮಾನ 164 ಮತ್ತು ಇತರ ಯೋಜನೆಗಳಲ್ಲಿ 93, ಒಟ್ಟು ಕಾರ್ಮಿಕರ ಸಂಖ್ಯೆ 3556. ಅಧಿಕಾರಿಗಳ ಸಂಖ್ಯೆ 40[3]

19ನೇ ಶತಮಾನದ ಮೊದಲ ದಶಕದಲ್ಲಿ 450 ಅಧಿಕಾರಿಗಳು ಇದ್ದುದಾಗಿ ತಿಳಿದುಬರುತ್ತದೆ. ಇವರಲ್ಲಿ ಯೂರೋಪಿಯನ್ ವ್ಯವಸ್ಥಾಪಕರು, ಅಂಡರ್‌ಗ್ರೌಂಡ್ ಏಜೆಂಟ್ಸ್ ಮತ್ತು ಇಂಜಿನಿಯರರು ಇದ್ದರು. ಇವರಲ್ಲಿ ಹೆಚ್ಚು ಜನರು ಇಂಗ್ಲೆಂಡಿನ ದಕ್ಷಿಣ-ಪಶ್ಚಿಮದ ಕಾರ್ನಿವಾಲ್ ಪ್ರದೇಶಕ್ಕೆ ಸೇರಿದವರು. ಇವರಲ್ಲೂ ಹೆಚ್ಚಾಗಿ ತಂದೆ ಮಕ್ಕಳು, ಚಿಕ್ಕಪ್ಪ ಮತ್ತು ದೊಡ್ಡಪ್ಪನ ಮಕ್ಕಳಿದ್ದರು. ಇಟಲಿಯಿಂದ ಬಂದ ಒಂದು ಗುಂಪು ವ್ಯವಸ್ಥಾಪಕರ ಹುದ್ದೆಗಳಲ್ಲಿತ್ತು. ಮೊದಲನೆ ವಿಶ್ವ ಯುದ್ಧದ ನಂತರ ಇವರ ಸಂಖ್ಯೆ ತೀರಾ ಕಡಿಮೆಯಾಯಿತು. ಮಧ್ಯಮ ಹಂತದ ಆಡಳಿತದಲ್ಲಿ ಆಂಗ್ಲೋ-ಇಂಡಿಯನ್ನರು ಇದ್ದರು. ಇವರು ಆಡಳಿತ ಮತ್ತು ತಾಂತ್ರಿಕ ಕೆಲಸಗಳಲ್ಲಿ ಮೇಲ್ವಿಚಾರಕರಾಗಿದ್ದರು. ಮುಖ್ಯವಾಗಿ ಗುಮಾಸ್ತರು, ಅಂಡರ್‌ಗ್ರೌಂಡ್ ಏಜೆಂಟ್ಸ್, ಉಪ ಅಂಡರ್‌ಗ್ರೌಂಡ್ ಏಜೆಂಟ್ಸ್, ಫೋರ್‌ಮನ್ ಮತ್ತು ಕಾರ್ಮಿಕರ ಗುಂಪುಗಳು

ಇರುತ್ತಿದ್ದವು. ಜೊತೆಗೆ ವಾಯರ್‌ಮೆನ್, ಟಿಂಬರ್‌ಮೆನ್, ಫಿಟ್‌ಮೆನ್ ಇದ್ದರು. ಇವರ ಜೊತೆಗೆ 30,000 ಕ್ಕಿಂತ ಹೆಚ್ಚು ಸ್ಥಳೀಯ ಕಾರ್ಮಿಕರಿದ್ದರು.

1917ರಲ್ಲಿ ಅಧಿಕಾರಿಗಳು ಮತ್ತು ಕಾರ್ಮಿಕರ ಮಧ್ಯೆ ಸರಾಸರಿ 22 ಪಟ್ಟು ಸಂಬಳದ ವ್ಯತ್ಯಾಸವಿತ್ತು. 1946ರಲ್ಲಿ ಇದು 13 ಪಟ್ಟು ಅಂತರಕ್ಕೆ ಇಳಿಯಿತು. ಪ್ರತಿಯೊಂದು ಕಾರ್ಮಿಕ ಗುಂಪಿಗೂ ಮೇಸ್ತ್ರಿ, ಉಪ ಮೇಸ್ತ್ರಿ, ಸಾಮಾನ್ಯ ಕೆಲಸಗಾರರು ಮತ್ತು ಸಹಾಯಕರು ಇರುತ್ತಿದ್ದರು. ಸಾಮಾನ್ಯವಾಗಿ ಮೊದಲಿಗೆ ಬಂದ ಕಾರ್ಮಿಕರು ಮೂಲವಾಗಿ ದೂರದ ಮತ್ತು ಅಕ್ಕಪಕ್ಕದ ಹಳ್ಳಿಗಳಿಂದ ಬಂದವರಾಗಿದ್ದರು. ಇವರನ್ನು ಕಂಗಾನಿಸ್ (ಏಜೆಂಟ್ಸ್) ಕರೆತರುತ್ತಿದ್ದರು. ಕಂಗಾನಿಸ್ ಇವರಿಗೆ ಒಳ್ಳೆ ಸಂಬಳ ಕೊಡಿಸುವುದಾಗಿ ಆಮಿಷ ತೋರಿಸಿ ಅವರಿಗೆ ಸ್ವಲ್ಪ ಹಣವನ್ನು ಮುಂಗಡವಾಗಿ ನೀಡಿ, ಅವರಿಗೆ ಸಾಲವಿದ್ದರೆ ತೀರಿಸಿ, ಇಲ್ಲ ಜೀತಕ್ಕಿದ್ದರೆ ಅವರನ್ನು ಬಿಡಿಸಿ ಕರೆದು ತರುತ್ತಿದ್ದರು ಎನ್ನಲಾಗಿದೆ. ಇನ್ನೂ ಕೆಲವು ಕಡೆ ಹಳ್ಳಿಗಳಲ್ಲಿ ತಪ್ಪು ಮಾಡಿ ಅವರ ಜನಾಂಗಗಳಿಂದ ಹೊರಗೆ ಹಾಕಲ್ಪಟ್ಟವರನ್ನು ಕರೆದು ತರಲಾಯಿತು. ಕೆಲವು ಕಡೆ ಮಾಲಿಕರಿಗೆ ಹಣ ಕೊಟ್ಟು ಅವರಲ್ಲಿದ್ದ ಜೀತಗಾರರನ್ನು ಬಿಡಿಸಿಕೊಂಡು ಬಂದುದ್ದಾಗಿಯೂ ಹೇಳಲಾಗುತ್ತದೆ. ಆದರೆ ಇದರ ಬಗ್ಗೆ ಎಲ್ಲಿಯೂ ಸರಿಯಾದ ಉಲ್ಲೇಖಗಳು ದೊರಕಲಿಲ್ಲ.

ಕಂಪನಿ ಆಡಳಿತ ಗುತ್ತಿಗೆಯ ಮೂಲಕ ಕೆಲಸಗಾರರನ್ನು ನೇಮಿಸಿಕೊಳ್ಳುತ್ತಿತ್ತು. ಇವರೆಲ್ಲರಿಗೂ ಮೊದಲಿಗೆ ಗಣಿಗಳ ಒಳಗೆ ಡ್ರಿಲ್ಲಿಂಗ್, ಡ್ರೈವಿಂಗ್, ಸ್ಟೋಪಿಂಗ್, ಶಿಲೆಗಳನ್ನು ಟ್ರ್ಯಾಲಿಗಳಿಗೆ ತುಂಬುವುದು, ಮರಗೆಲಸ ಇತ್ಯಾದಿ ಕೆಲಸಗಳನ್ನು ನೀಡಲಾಗುತ್ತಿತ್ತು. ಒಪ್ಪಂದದ ಮೇಲೆ ಅವರೆಲ್ಲ ಎಷ್ಟು ಕೆಲಸ ಮಾಡುತ್ತಾರೊ ಅಷ್ಟು ಹಣ ದೊರಕುತ್ತಿತ್ತು (ಗುತ್ತಿಗೆದಾರರ ಕಮಿಶನ್ ಹೋಗಿ). ಇವರಿಗೆ ಮನೆ, ಪಡಿತರ, ರಜೆ ಇತ್ಯಾದಿ ಯಾವುದೇ ಸವಲತ್ತುಗಳು ದೊರಕುತ್ತಿರಲಿಲ್ಲ.[4]

ದಿನ ಕೂಲಿ ಮತ್ತು ಸಂಬಳ :

ಮೊದಲ ವಿಶ್ವ ಮಹಾಯುದ್ಧ ಪ್ರಾರಂಭವಾದ ಸಮಯದಲ್ಲಿ ಕೆಜಿಎಫ್‌ನಲ್ಲಿದ್ದ ಜನಸಂಖ್ಯೆ 85,103. ಅನಂತರ 1941ರಲ್ಲಿ ಅದು 1,33,859ಕ್ಕೆ ಮುಟ್ಟಿತ್ತು. ಆ ಕಾಲಕ್ಕೆ ಬೆಂಗಳೂರು ಮತ್ತು ಮೈಸೂರಿನಲ್ಲಿಯೂ ಇಷ್ಟು ತೀವ್ರವಾಗಿ ಜನಸಂಖ್ಯೆ ಏರಿರಲಿಲ್ಲ.[5] ಮೈಸೂರು ಸಂಸ್ಥಾನದಲ್ಲಿ 1901ರಲ್ಲಿ ಶೇಕಡ 7.7 ಜನಸಂಖ್ಯೆ ಕೃಷಿ ಕೂಲಿ ಕೆಲಸದಲ್ಲಿ ತೊಡಗಿದ್ದರೆ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಶೇಕಡ 19.8 ಜನರು ಅದೇ ಕೆಲಸ ಮಾಡುತ್ತಿದ್ದರು.[6] ಅಂದರೆ ಮೈಸೂರು ಕಡೆಯ ಜನರು ಆ ಕಾಲದಲ್ಲಿಯೇ ಕಷ್ಟದ ಕೆಲಸದಿಂದ ದೂರವಾಗಿ ಸರಳ ಕೆಲಸಗಳಲ್ಲಿ ತೊಡಗಿಕೊಂಡಿದ್ದರು.[7] ಗಣಿಗಳಲ್ಲಿ ಕೆಲಸ ಮಾಡುವವರಿಗೆ ತಿಂಗಳು

ತಿಂಗಳು ಸಂಬಳ ದೊರಕುತ್ತಿದ್ದರೆ ಅದೇ ಕೃಷಿ ಕೂಲಿ ಮಾಡುವವರಿಗೆ ವರ್ಷದಲ್ಲಿ ಕೆಲವು ದಿನಗಳು ಮಾತ್ರ ಕೂಲಿ ದೊರಕುತ್ತಿತ್ತು. 20ನೇ ಶತಮಾನದ ಮೊದಲ ದಶಕದಲ್ಲಿ ಉತ್ತರ ಆರ್ಕಾಟ್‌ನಲ್ಲಿ ತಿಂಗಳಿಗೆ 5ರೂ. ಕೂಲಿ ದೊರಕುತ್ತಿದ್ದರೆ ಸೇಲಂನಲ್ಲಿ ತಿಂಗಳಿಗೆ 2ರೂ. ದೊರಕುತ್ತಿತ್ತು. ಅದೂ ಕೂಡ ಕೆಲಸ ಕೊಟ್ಟ ಧಣಿಗಳು ಮನಸು ಮಾಡಿದಾಗ. ಆಗ ಗಣಿಗಳಲ್ಲಿ ತಿಂಗಳಿಗೆ (1899) 15ರೂ. ಸಂಬಳ ದೊರಕುತ್ತಿತ್ತು. 1921ರಲ್ಲಿ 37ರೂ. ಮತ್ತು 1940ರಲ್ಲಿ 39ರೂ. ದೊರಕುತ್ತಿತ್ತು. ಬೆಂಗಳೂರಿನ ಮಿಲ್ಲುಗಳಿಗೆ ಹೋಲಿಸಿದಾಗ ಈ ಸಂಬಳ ತೀರ ಕಡಿಮೆಯಾಗಿತ್ತು. ನೆಲದ ಮೇಲೆ ಕೆಲಸ ಮಾಡುತ್ತಿದ್ದ ಕೂಲಿಗಳಿಗೆ 1921ರಲ್ಲಿ 14ರೂ. ಕೊಡಲಾಗುತ್ತಿತ್ತು. ಆ ಕಾಲದಲ್ಲಿ ಉತ್ತರ ಆರ್ಕಾಟ್‌ನಲ್ಲಿ ಶೇಕಡ 15.20ರಷ್ಟು ಆದಿ ದ್ರಾವಿಡರಿದ್ದು 1931ರಲ್ಲಿ ಕೆಜಿಎಫ್ ಗಣಿಗಳಲ್ಲಿ ಶೇಕಡ 40ರಷ್ಟು ಕಾರ್ಮಿಕರು ಇದೇ ಜಿಲ್ಲೆಯಿಂದ ಬಂದವರಾಗಿದ್ದರು. 1941ರಲ್ಲಿ ಇವರ ಸಂಖ್ಯೆ 50.2ಕ್ಕೆ ಏರಿತ್ತು. ನಿರಂತರ ಕ್ಷಾಮ ಮತ್ತು ಬರಗಾಲದಿಂದ ಇವರು ವಲಸೆ ಬಂದಿದ್ದರು.

1891–1901ರಲ್ಲಿ ಉತ್ತರ ಆರ್ಕಾಟ್ ಮತ್ತು ಸೇಲಮ್ ಜಿಲ್ಲೆಗಳಿಂದ ಹೆಚ್ಚೆಚ್ಚು ಜನ ಕೆಜಿಎಫ್‌ಗೆ ವಲಸೆ ಬಂದಿದ್ದರು. ಇವರಲ್ಲಿ ಹೆಚ್ಚು ಅಸ್ಪೃಶ್ಯ ಜನಾಂಗಕ್ಕೆ ಸೇರಿದವರೆ ಆಗಿದ್ದು ಇವರೆಲ್ಲ ಗುತ್ತಿಗೆ ಮತ್ತು ಕಷ್ಟದ ಕೆಲಸಗಳಿಗೆ ಬಂದು ಸೇರಿಕೊಳ್ಳುತ್ತಿದ್ದರು. ಸ್ವಲ್ಪ ಕುಶಲ ಕೆಲಸಗಳಿಗೆ ಮಲ್‌ಬಾರ್ ಮತ್ತು ಮದ್ರಾಸ್ ನಗರದಿಂದ ಜನ ಬರುತ್ತಿದ್ದರು. 1911–1951ರ ಮಧ್ಯೆ ಬೆಂಗಳೂರಿನಲ್ಲಿ ಕಟ್ಟಡಗಳನ್ನು ಕಟ್ಟುವ, ಮತ್ತಿತರ ಕೆಲಸಕ್ಕೆ ಮದ್ರಾಸಿನಿಂದ ಹೆಚ್ಚು ಜನರು ವಲಸೆ ಬಂದರು. ಕೊನೆಗೆ ಅನಂತಪುರ, ಕೊಯಂಬತ್ತೂರು, ಚಂಗಲ್‌ಪೇಟ್ ಮತ್ತು ಮದ್ರಾಸ್ ನಗರವೇ ಬೆಂಗಳೂರಿಗೆ ಬಂದು ನೆಲೆ ನಿಂತಿತು. ಬೆಂಗಳೂರಿನ ಆದಿ ದ್ರಾವಿಡರ ಬಗ್ಗೆ ಸಂಶೋಧನೆ ನಡೆಸಿದ ಗೆರ್‌ಟ್ರೂಡ್ ವುಡ್‌ರೂಫೆ '1910ರಲ್ಲಿ ಪ್ರಾರಂಭವಾದ ವಲಸೆ 1939ರವರೆಗೆ ನಿರಂತರವಾಗಿ ನಡೆದು 1940ರಲ್ಲಿ ಅಂದರೆ ಯುದ್ಧ ಕಾಲದಲ್ಲಿ ಹೆಣ್ಣು ಗಂಡೆನ್ನದೆ ಇಡೀ ಕುಟುಂಬಗಳೆ ವಲಸೆ ಬಂದು ನೆಲೆ ನಿಂತವು.'[8] ಎಂದು ತಮ್ಮ ಸಂಶೋಧನೆಯಲ್ಲಿ ದಾಖಲಿಸಿದ್ದಾರೆ.

ಕೆಜಿಎಫ್‌ಗೂ ಅದೇ ರೀತಿಯ ವಲಸೆ ಬಂದಿತ್ತು. 1940ರ ನಂತರ ಗಣಿ ಕಾಲೋನಿಗಳಲ್ಲಿ ಕಾರ್ಮಿಕರು ಕುಟುಂಬಗಳ ಸಮೇತ ನೆಲೆ ನಿಲ್ಲಲು ಕಂಪನಿಗಳು ಪ್ರೋತ್ಸಾಹ ನೀಡತೊಡಗಿದವು. ಕಾರಣ ಅವರ ಮುಂದಿನ ಪೀಳಿಗೆಗಳು ಗಣಿಗಳಲ್ಲಿ ದುಡಿಯುತ್ತವೆ ಎನ್ನುವುದೇ ಆಗಿತ್ತು. ದೂರದ ಪಂಜಾಬ್ ಮತ್ತು ಮಾಪಿಳ್ಳೆ (ಕೇರಳ)ಗಳಿಗೆ ಇದು ಅನ್ವಯಿಸುತ್ತಿರಲಿಲ್ಲ. ಕೆಜಿಎಫ್ ತಲುಪಿದ ಅಸ್ಪೃಶ್ಯ ಜನಾಂಗಗಳು ಹೊಸ ರೀತಿಯ ಕೆಲಸದೊಂದಿಗೆ ಹೊಸ ಸಾಮಾಜಿಕ ನೆಲೆಗಟ್ಟನ್ನು ಕಂಡುಕೊಳ್ಳುವ ಕಡೆ ಮುಖ ಮಾಡಿ ಕುಳಿತಿದ್ದವು. ಅಸ್ಪೃಶ್ಯರ ನಡುವೆ ಚಿನ್ನದ ನೆಲದಲ್ಲಿ ಹುಟ್ಟಿಕೊಂಡ ಹೊಸ

ಸಿದ್ಧಾಂತ ವೈಚಾರಿಕವಾದುದಾಗಿದ್ದು ಅದು ಬೌದ್ಧ ಧರ್ಮದ ಮೇಲೆ ರೂಪುಗೊಂಡಿತ್ತು. ಈ ಸಿದ್ಧಾಂತ ಗಣಿ ಕಾರ್ಮಿಕರು ಮತ್ತು ಸುತ್ತಲ ಪ್ರದೇಶದ ಮೇಲೆಯೂ ಪ್ರಭಾವ ಬೀರತೊಡಗಿತ್ತು. ಕಾರ್ಮಿಕ ವರ್ಗಗಳ ನಡುವೆ ಸಿಕ್ಕಿಕೊಂಡ ಜಾತಿಗಳು ಯಾವ ರೀತಿ ಬೆರೆತುಹೋಯಿತು ಎಂದರೆ ಸಮಾಜಘಾತಕ ಶಕ್ತಿಗಳಿಗೆ ಉತ್ತರಿಸಲು ಯಾವ ಸಿದ್ಧಾಂತಗಳು ಉಳಿಯಲಿಲ್ಲ.

1929ರ ಜನವರಿ ತಿಂಗಳ ಒಟ್ಟು ಕಂಪನಿ ಸಂಬಳದ ಮೊತ್ತ 72,65,862ರೂ. ಇದರಲ್ಲಿ ಇಂಡಿಯನ್ನರ ಸಂಬಳ 50 ಲಕ್ಷ, ಅಂದರೆ ಶೇಕಡ 68. ಇದರಲ್ಲಿ ಕಂಪನಿ ಕಾರ್ಮಿಕರ ಸಂಬಳ ಶೇಕಡ 56 ಮತ್ತು ಗುತ್ತಿಗೆದಾರರ ಸಂಬಳ 44. ಯೂರೋಪಿಯನ್ನರು 18,87,964 ರೂ. ಸ್ಥಳೀಯ ಕಾರ್ಮಿಕರು 4,25,684 ರೂ. ಇಂಡಿಯನ್ ಕಂಪನಿ ಕಾರ್ಮಿಕರು 27,73,444 ರೂ. ನೆಲದ ಮೇಲಿನ ಗುತ್ತಿಗೆ ಕಾರ್ಮಿಕರು 3,56,095 ರೂ. ಮತ್ತು ಗಣಿಗಳ ಒಳಗೆ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರ ಸಂಬಳ 18,22,675 ರೂ.

ಕಾರ್ಮಿಕರಲ್ಲಿ ಮುಖ್ಯವಾಗಿ ಚೀಫ್ ಅಸಿಸ್ಟಂಟ್ ಅಂಡರ್‌ಗ್ರೌಂಡ್ ಏಜೆಂಟ್ಸ್, ಫೋರ್‌ಮನ್, ಟಿಂಬರ್‌ಮನ್, ಫಿಟ್‌ಮನ್, ಅಸಿಸ್ಟಂಟ್ ಎಂಜಿನಿಯರ್, ಕಾರ್ಪೆಂಟರ್, ಸ್ಮಿತ್ಸ್, ಇಂಜಿನ್ ಚಾಲಕರು, ರಾಸಾಯನಿಕ ತಜ್ಞರು ಇತ್ಯಾದಿ ವರ್ಗಗಳಲ್ಲಿ ಹೆಚ್ಚು ಯೂರೋಪಿಯನ್ನರಿದ್ದರು. ಮೇಸ್ತ್ರಿಗಳು, ಕೂಲಿಗಳು, ಹ್ಯಾಂಡ್ ಜಂಪರ್ಸ್, ಮೇಸ್ತ್ರಿ/ಕೂಲಿ, ಬ್ಲಾಸ್ಟರ್ಸ್, ಟಿಂಬರ್ ಮೇಸ್ತ್ರಿ/ಕೂಲಿ, ಸ್ಕಿಪ್ ಮೇಸ್ತ್ರಿ/ಕೂಲಿ, ಲ್ಯಾಂಡರ್ಸ್, ಪ್ಲಾಟ್‌ಮೆನ್ ಮತ್ತು ಬೆಲ್‌ಮೆನ್ಸ್‌ರಲ್ಲಿ ಹೆಚ್ಚು ಇಂಡಿಯನ್ನರಿದ್ದರು. ಕೆಲವು ಕೆಲಸಗಳಲ್ಲಿ ಯೂರೋಪಿಯನ್ನರು ಮತ್ತು ಇಂಡಿಯನ್ನರೂ ಇದ್ದರು.[9]

ಯೂರೋಪಿಯನ್ನರ ಸರಾಸರಿ ಸಂಬಳ 43.80 ಪೌಂಡ್ ಆಗಿದ್ದು, ಹೆಚ್ಚೆಂದರೆ 92.50ರೂ. ಕಡಿಮೆಯೆಂದರೆ 18.27 ರೂ. ಪಡೆಯುತ್ತಿದ್ದರು. ಇಂಡಿಯನ್ನರ ಸರಾಸರಿ ಸಂಬಳ 29.90 ರೂ. ಹೆಚ್ಚು 92.50 ರೂ. ಕಡಿಮೆ 18.27 ರೂ. ಮೇಲಿನ ಅಂಕಿ ಅಂಶಗಳಿಂದ ಕಂಪನಿಯ ಶೇಕಡ 36 ಕಾರ್ಮಿಕರು ದಿನಕ್ಕೆ 10 ಆಣೆಗಿಂತ ಹೆಚ್ಚು ಸಂಬಳ ಪಡೆದರೆ, ಶೇಕಡ 69ರಷ್ಟು ಗುತ್ತಿಗೆ ಕೆಲಸಗಾರರು ದಿನಕ್ಕೆ 10 ಆಣೆಗಿಂತ ಕಡಿಮೆ ಸಂಬಳ ಪಡೆಯುತ್ತಿದ್ದರು. ಕಂಪನಿಯ ಶೇಕಡ 40 ಕಾರ್ಮಿಕರು ದಿನಕ್ಕೆ 8 ಆಣೆ ಅಥವಾ ಅದಕ್ಕಿಂತ ಕಡಿಮೆ ಸಂಬಳ ಪಡೆಯುತ್ತಿದ್ದರು. ಅರ್ಧಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರು ದಿನಕ್ಕೆ 12 ಆಣೆಗಿಂತ ಹೆಚ್ಚು ಸಂಬಳ ಪಡೆಯುತ್ತಿದ್ದರು. ಕಂಪನಿಯ ಶೇಕಡ 25 ಕಾರ್ಮಿಕರು ಮಾತ್ರ ಇಷ್ಟು ಸಂಬಳ ಪಡೆಯುತ್ತಿದ್ದರು.

ಎಲ್ಲಾ ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಇಂಡಿಯನ್ ಕಂಪನಿ ಕೆಲಸಗಾರರ

ಸರಾಸರಿ ತಿಂಗಳ ಸಂಬಳ 23ರೂ. ಗಳಾದರೆ, ಅದೇ ಇಂಡಿಯನ್ ಗುತ್ತಿಗೆ ಕೆಲಸಗಾರರ ಸರಾಸರಿ ಸಂಬಳ 25ರೂ. ಆಗಿದ್ದರೂ ಈ ಕಾರ್ಮಿಕರಿಗೆ ಸರಾಸರಿ 15ರೂ. ಮಾತ್ರ ಬರುತ್ತಿತ್ತು. ಕಂಪನಿ ಕೆಲಸಗಾರರು ಸರಾಸರಿ 22ರೂ. ತೆಗೆದುಕೊಳ್ಳುತ್ತಿದ್ದರು. ಕಾರಣ, ಕಾರ್ಮಿಕರ ಗೈರುಹಾಜರಿ. ಕಂಪನಿ ಕಾರ್ಮಿಕರು ಹೆಚ್ಚು ದಿನ ಕೆಲಸ ಮಾಡುವುದರಿಂದ ಬೋನಸ್ ಪಡೆಯುತ್ತಿದ್ದರು. ಗುತ್ತಿಗೆ ಕಾರ್ಮಿಕರು ಕಷ್ಟದ ಕೆಲಸದಿಂದ ಹೆಚ್ಚೆಚ್ಚು ಗೈರುಹಾಜರಿ ಆಗುತ್ತಿದ್ದರು. ಅವರಿಗೆ ಬೋನಸ್ ಕೂಡ ದೊರಕುತ್ತಿರಲಿಲ್ಲ. ಜೊತೆಗೆ ಸಂಬಳದಲ್ಲಿ ಹಲವು ರೀತಿಯ ಸಾಲಗಳನ್ನು ಮುರಿದುಕೊಳ್ಳುತ್ತಿದ್ದರು. ಕಂಪನಿ, ಕಾರ್ಮಿಕರಿಗೆ 24 ಸಾವಿರ ಪಡಿತರ ಚೀಟಿಗಳನ್ನು ವಿತರಿಸಿತ್ತು. 1940ರಲ್ಲಿ ಪಡಿತರದ ಮೂಲಕ ತಿಂಗಳಿಗೆ ಸುಮಾರು 3 ಲಕ್ಷ ರೂ. ಬೆಲೆಯ ಆಹಾರ ಧಾನ್ಯ, ಬಟ್ಟೆ, ಸೀಮೆಣ್ಣೆ ಇತ್ಯಾದಿ ನೀಡುತ್ತಿತ್ತು. ಆ ಕಾಲಕ್ಕೆ 1 ರೂ. ಗೆ 5–6 ಸೇರು ಅಕ್ಕಿ ದೊರಕುತ್ತಿತ್ತು. ಕಾರ್ಮಿಕರ ತಪ್ಪಿನಿಂದ ಕೆಲಸದ ವೇಳೆ ಅಪಘಾತಗಳಾದರೆ ಅವರ ಸಂಬಳದಲ್ಲಿ ದಂಡವನ್ನು ಕಂಪನಿ ಮುರಿದುಕೊಳ್ಳುತ್ತಿತ್ತು. ಈ ತಮಿಳು ಕಾರ್ಮಿಕರು 'ಕೀಳೆಕ್ಕು ಪೋಣಾಳ್ ಪೊಣಂ ಮೇಲೆ ವಂದಾಳ್ ಪಣಂ' (ಕೆಳಗೋದರೆ ಹೆಣ ಮೇಲೆ ಬಂದರೆ ಹಣ) ಎಂದು ತಮ್ಮನ್ನು ತಾವೆ ಛೇಡಿಸಿಕೊಳ್ಳುತ್ತಿದ್ದರು.

1930ರಲ್ಲಿ ಕಂಪನಿ ಅಥವಾ ಗುತ್ತಿಗೆ ಕೆಲಸಗಾರರು ಅನಾರೋಗ್ಯರಾದರೆ ದಿನಕ್ಕೆ 4 ಆಣೆಗಿಂತ ಜಾಸ್ತಿ ಅಥವಾ ಕಡಿಮೆ ಸಂಬಳ ಇದ್ದವರಿಗೆ 7ಆಣೆ ಅನಾರೋಗ್ಯ ಭತ್ತ ನೀಡಲಾಗುತ್ತಿತ್ತು. 7 ಆಣೆ ಸಂಬಳ ಇದ್ದವರಿಗೆ 6 ಆಣೆ, ಹಾಗೆ 8+6 ಆಣೆ, 9+6 ಆಣೆ, 10+7 ಆಣೆ, 11+8 ಆಣೆ, 12+9 ಆಣೆ, 13+10 ಆಣೆ, 14+10 ಆಣೆ, 15+11 ಆಣೆ, 1 ರೂ. ಗೆ 12 ಆಣೆ ಅಸ್ವಸ್ಥ ಸಂಬಳ ನೀಡಲಾಗುತ್ತಿತ್ತು. 2001ರಲ್ಲಿ ಗಣಿಗಳನ್ನು ಮುಚ್ಚಿದಾಗ ಸುಮಾರು 20 ವರ್ಷ ಕೆಲಸ ಮಾಡಿದ್ದ ಒಬ್ಬ ಗಣಿ ಕಾರ್ಮಿಕನ ಮಾಸಿಕ ಸರಾಸರಿ ಸಂಬಳ 4200 ರೂ. ಅದೇ 20 ವರ್ಷ ಕೆಲಸ ಮಾಡಿದ ಅಧಿಕಾರಿಯ ಮಾಸಿಕ ಸರಾಸರಿ ಸಂಬಳ ಸುಮಾರು 12,000 ರೂಪಾಯಿಗಳು.

ವರ್ಷ	ಕಾ.ಸಂಖ್ಯೆ*	ಸಂ.ಮೊತ್ತ**	ಒಬ್ಬ ಕಾ.ಸ.ಸ ***
೧೯೩೯	೨೫೨೨೨	೮೦೬೦೩೬೨	೩೧೯.೫೮
೧೯೪೦	೨೬೦೭೯	೮೨೩೪೫೩೩	೩೧೫.೭೫
೧೯೪೧	೨೫೫೦೬	೯೦೭೭೭೭೦	೩೫೫.೯೧
೧೯೪೨	೨೩೯೫೬	೯೬೬೮೫೬೫	೪೦೩.೬೦
೧೯೪೩	೨೧೮೦೩	೧೦೦೧೮೩೩೧	೪೫೯.೪೯
೧೯೪೪	೧೮೯೨೦	೯೧೭೧೨೦೪	೪೮೪.೭೪
೧೯೪೫	೧೭೨೩೭	೯೩೩೯೬೭೪	೫೪೧.೮೪

೧೯೪೬	೧೮೮೦೬	೧೦೫೯೪೨೯೭	೫೬೩.೩೫
೧೯೪೭	೨೦೫೫೯	೧೭೦೨೨೯೦೫	೮೨೮.೦೦

1. ಒಂದು ಆಣೆಗೆ 6 ಪೈಸೆ, 16 ಆಣೆಗೆ ಒಂದು ರೂಪಾಯಿ.

* ಬಿಳಿಯ ಮತ್ತು ಇಂಡಿಯನ್ ಅಧಿಕಾರಿಗಳನ್ನು ಬಿಟ್ಟು

** ಬೋನಸ್ ಇನ್ನಿತರ ಭತ್ಯಗಳು ಸೇರಿ

*** ಒಬ್ಬ ಕಾರ್ಮಿಕನ ಸರಾಸರಿ ಸಂಬಳ

ಬೆಲೆಗಳು :

12 ದಮ್ಮಡಿ 1 ಆಣೆ (6 ಪೈಸೆ), 3 ದಮ್ಮಡಿ 1/4 ಆಣೆ, 16 ಆಣೆ 1 ರೂಪಾಯಿ. 1 ಫಲಮ್ (35 ಗ್ರಾಂ), 8 ಪಲಮ್ 1 ಸೇರು (1.93 ಕೆಜಿ), 5 ಸೇರು 1 ಮೀಸ್ಯೆ (4.65 ಕೆಜಿ), 8 ಮೀಸ್ಯೆ 1 ಮಣ (37.32 ಕೆಜಿ), 20 ಮಣ 1 ಫಾರಂ. ಮೇಲಿನ ರೀತಿಯ ಅಳತೆ ಮತ್ತು ಲೆಕ್ಕಾಚಾರಗಳು 1930ರ ಸುಮಾರಿಗೆ ಕೆಜಿಎಫ್ ಪ್ರದೇಶದಲ್ಲಿ ಚಲಾವಣೆಯಲ್ಲಿತ್ತು. ಸಣ್ಣ ಸಣ್ಣ ಪೆಟ್ಟಿಗೆ ಅಂಗಡಿಗಳಲ್ಲಿ ಪ್ಯಾಸಿಂಗ್ ಶೋ, ಪ್ಲೇಯರ್ಸ್, ನೇವ್ಹಿಕಟ್, ಗೊಲ್ಡ್ ಫ್ಲೇಕ್, ಚಾರ್‌ಮಿನಾರ್ ಇತ್ಯಾದಿ ವಿದೇಶಿ ಸಿಗರೇಟುಗಳನ್ನು ಮಾರುತ್ತಿದ್ದರು. 1 ಸಿಗರೇಟ್‌ಗೆ 2 ದಮ್ಮಡಿಯಿಂದ 4 ಆಣೆವರೆಗೂ ಬೆಲೆ ಇತ್ತು.

ಇದೇ ಕಾಲಕ್ಕೆ ಮೊದಲ ಬಾರಿಗೆ ಚೀನಾದಿಂದ ಪಟಾಕಿಗಳು ಬಂದವು. 1 ರೂ.ಗೆ ಬರುವ ಪಟಾಕಿಗಳನ್ನು ಮನೆಯವರೆಲ್ಲ ಧಾರಾಳವಾಗಿ ಹೊಡೆಯಬಹುದಾಗಿತ್ತು. ಸ್ವಾತಂತ್ರ್ಯದ ನಂತರ ತಮಿಳುನಾಡಿನ ಶಿವಕಾಶಿಯಲ್ಲಿ ದೇಶದಲ್ಲಿ ಮೊದಲ ಬಾರಿಗೆ ಪಟಾಕಿಗಳನ್ನು ತಯಾರಿಸಲಾಯಿತು. ಸುಂದರವಾದ ಪಿಂಗಾಣಿ ವಸ್ತುಗಳು ಮತ್ತು ಉಣ್ಣೆ ಬಟ್ಟೆಗಳು ಚೀನಾದಿಂದ ಬರುತ್ತಿದ್ದವು. ಚೀನಾದಿಂದ ಬಂದ ಕೆಲವು ಕುಟುಂಬಗಳು ಆಂಡ್ರ್ಸನ್‌ಪೇಟೆಯಲ್ಲಿ ನೆಲೆಸಿದ್ದವು. ಎರಡನೇ ವಿಶ್ವ ಮಹಾಯುದ್ಧದ ನಂತರ ಬ್ರಿಟಿಷರು ತುರ್ತು ಪರಿಸ್ಥಿತಿಯನ್ನು ಹೇರಿದ ಮೇಲೆ ಮೊದಲ ಬಾರಿಗೆ ಕೆಜಿಎಫ್‌ನಲ್ಲಿ ಕೆಲವು ವಸ್ತುಗಳಲ್ಲಿ ಕಲಬೆರಕೆ ಪ್ರಾರಂಭವಾಗಿತ್ತು. ಕಪ್ಪು ಮಾರುಕಟ್ಟೆಯ ವ್ಯಾಪಾರಿಗಳು ಎಲ್ಲಾ ವಸ್ತುಗಳನ್ನು ಬಚ್ಚಿಟ್ಟು ರಾತ್ರಿ ಹೊತ್ತು ಕಳ್ಳತನವಾಗಿ ದುಬಾರಿ ಬೆಲೆಗೆ ಮಾರಾಟ ಮಾಡತೊಡಗಿದರು. ನ್ಯಾಯವಾಗಿದ್ದ ವ್ಯಾಪಾರ ಮೊದಲ ಬಾರಿಗೆ ಕೆಜಿಎಫ್‌ನಲ್ಲಿ ಅನ್ಯಾಯದ ಕಡೆಗೆ ವಾಲಿತ್ತು.[10]

ಕಾರ್ಮಿಕರ ಗೈರುಹಾಜರಿ, ಗ್ರ್ಯಾಚ್ಯುಟಿ ಮತ್ತು ಬಡ್ತಿ :

1930ರಲ್ಲಿ ಕಾರ್ಮಿಕರ ಒಂದು ಭಾಗ ಕಂಪನಿ ಆಡಳಿತದ ಕೆಳಗೆ, ಇನ್ನೊಂದು

ಭಾಗ ಗುತ್ತಿಗೆದಾರರ ಕೆಳಗೆ ಕೆಲಸ ನಿರ್ವಹಿಸುತ್ತಿತ್ತು. ಗುತ್ತಿಗೆದಾರರು ಒಪ್ಪಂದದ ಮೇರೆಗೆ ಕೆಲಸ ಮಾಡಿಸುತ್ತಿದ್ದರು. ಕಂಪನಿ ಆಡಳಿತದ ಕೆಳಗೆ 10514 ಕಾರ್ಮಿಕರು ಮತ್ತು ಗುತ್ತಿಗೆದಾರರ ಕೆಳಗೆ 8000 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಇವರು ಹೆಚ್ಚಾಗಿ ಗಣಿ ಒಳಗೆ ಡ್ರಿಲ್ಲಿಂಗ್ ಮಾಡುವುದು, ಬ್ಲಾಸ್ಟಿಂಗ್ ಮಾಡಿ ಶಿಲಾರಾಶಿಯನ್ನು ಸ್ಕೂಪ್ ಮಾಡುವುದು, ಮಣ್ಣು ಬಾಚುವುದು, ಮರ ಕೆಲಸ ಮತ್ತು ನೆಲದ ಮೇಲೆ ಸಯನೈಡ್ ಮಣ್ಣನ್ನು ಗುಡ್ಡೆಹಾಕುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು.

ಈ 18514 ಕಾರ್ಮಿಕರಲ್ಲಿ 9767 ಕಾರ್ಮಿಕರು ಗಣಿಗಳ ಒಳಗೆ, 8747 ಕಾರ್ಮಿಕರು ನೆಲದ ಮೇಲೆ ಕೆಲಸ ಮಾಡುತ್ತಿದ್ದರು. ಇವರಲ್ಲಿ 1275 ಮಹಿಳೆಯರು ಮತ್ತು 12 ವರ್ಷಗಳ ಒಳಗಿನ 527 ಮಕ್ಕಳು ಕೆಲಸ ಮಾಡುತ್ತಿದ್ದರು. 1906 ರ ಮೈಸೂರು ಮೈನಿಂಗ್ ರೆಗ್ಯುಲೇಶನ್ ನಿಯಮ 32 ರಂತೆ 12 ವರ್ಷ ವಯಸ್ಸಿನ ಮಕ್ಕಳನ್ನು ಗಣಿಗಳ ಒಳಗೆ ಮತ್ತು ಯಂತ್ರಗಳಲ್ಲಿ ಕೆಲಸ ಮಾಡಲು ಬಿಡುತ್ತಿರಲಿಲ್ಲ. ಮಹಿಳೆಯರು ಮತ್ತು ಮಕ್ಕಳನ್ನು ಯಾವುದೇ ಕಾರಣಕ್ಕೂ ಗಣಿಗಳ ಒಳಗೆ ಕೆಲಸ ಮಾಡಲು ಬಿಡುತ್ತಿರಲಿಲ್ಲ. ಮಹಿಳೆಯರು ಗುಡಿಸುವುದು, ಸಯನೈಡ್ ಗುಡ್ಡಗಳಿಗೆ ನೀರು ಕಟ್ಟಿ ಮಣ್ಣು ಗಾಳಿಯಲ್ಲಿ ಹರಡದಂತೆ ನೋಡಿಕೊಳ್ಳುವುದು, ರಸ್ತೆಗಳಿಗೆ ಜಲ್ಲಿ ಹಾಕುವುದು, ಕ್ವಾರ್ಟ್ಸ್‌ಝ್ ಹರಳುಗಳನ್ನು ಹೆಕ್ಕುವುದು, ಕಂಬಳಿಗಳಿಗೆ ಮೆತ್ತಿಕೊಂಡಿರುವ ಚಿನ್ನದ ರೇಖುಗಳನ್ನು ಒದರುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು. 12 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಮಕ್ಕಳು ಕಾರ್ಖಾನೆಗಳಲ್ಲಿ ಕೆಲಸ ಮಾಡಬಹುದಾಗಿತ್ತು. ಮಹಿಳೆಯರು ಮತ್ತು ಮಕ್ಕಳು ಸಾಮಾನ್ಯವಾಗಿ ಬೆಳಿಗ್ಗೆ 7 ರಿಂದ ಸಾಯಂಕಾಲ 5 ಗಂಟೆಯವರೆಗೆ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನ 12 ರಿಂದ 1 ಗಂಟೆಗೆ ಊಟ ಮತ್ತು ವಿಶ್ರಾಂತಿ.

ಗಣಿಗಳ ಒಳಗೆ ಮೂರು ಪಾಳಿಗಳಿದ್ದು 8 ಗಂಟೆ ಕೆಲಸ ಮಾಡಬೇಕಾಗಿತ್ತು. ಮೊದಲನೇ ಪಾಳಿ ಬೆಳಗ್ಗೆ 7 ಗಂಟೆಯಿಂದ ಮಧ್ಯಾಹ್ನ 3 ಗಂಟೆ, ಎರಡನೇ ಪಾಳಿ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 11 ಗಂಟೆ ಮತ್ತು ಮೂರನೇ ಪಾಳಿ ರಾತ್ರಿ 11 ರಿಂದ ಬೆಳಿಗ್ಗೆ 7 ಗಂಟೆಯವರೆಗೆ. ಕೇಜ್ ನಡೆಸುವವರು, ಕಾವಲು ಪಡೆಯವರು ಇನ್ನಿತರರು 30 ನಿಮಿಷ ಮೊದಲೇ ಬಂದು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ವಾರಕ್ಕೆ ಒಂದು ದಿನ ಭಾನುವಾರ ವಿಶ್ರಾಂತಿಯ ದಿನ. ಹೆಚ್ಚು ಸಮಯ ಕೆಲಸ ಮಾಡಿದ್ದಲ್ಲಿ ಓವರ್ ಟೈಮ್ ಸಂಬಳ ದೊರೆಯುತ್ತಿತ್ತು. ಗುತ್ತಿಗೆದಾರರ ಹತ್ತಿರ ಕೆಲಸ ಮಾಡುವವರಿಗೆ ಓವರ್ ಟೈಮ್ ಸಂಬಳ ದೊರಕುತ್ತಿರಲಿಲ್ಲ. ಆದರೂ ಇವರು ಹೆಚ್ಚು ಸಮಯ ಕೆಲಸ ಮಾಡಬೇಕಾಗಿತ್ತು. ಕಾರಣ ಕೆಲವು ಕಾರ್ಮಿಕರ ಗೈರು ಹಾಜರಿ ಮತ್ತು ಕೆಲಸವನ್ನು ನಿಗದಿತ ಸಮಯದಲ್ಲಿ ಮುಗಿಸಬೇಕಾಗಿತ್ತು.

ಕೆಲವು ಕಾರ್ಮಿಕರು ಎರಡು ಹಗಲು, ಎರಡು ರಾತ್ರಿಗಳು ಕೆಲಸವನ್ನು ಮುಗಿಸಿ ಮೂರನೆ ದಿನ ಗಣಿಗಳಿಂದ ಮೇಲಕ್ಕೆ ಬರುತ್ತಿದ್ದರಂತೆ. ಅನಂತರ ಒಂದು ಅಥವಾ ಎರಡು ದಿನ ಅವರಿಗೆ ಪೂರ್ಣ ವಿಶ್ರಾಂತಿ. ಗುತ್ತಿಗೆದಾರರು ಇವರಿಗೆ ಊಟ, ಎಲೆ ಅಡಿಕೆ ಹೊಗೆಸೊಪ್ಪು ಬೀಡಿಗಳನ್ನು ಕೊಡಿಸುತ್ತಿದ್ದರು. ಗುತ್ತಿಗೆ ಕೆಲಸವಾದ್ದರಿಂದ ಹೆಚ್ಚೆಚ್ಚು ಕೆಲಸವನ್ನು ಬೇಗನೆ ಮುಗಿಸುವ ಆತುರದಲ್ಲಿ ಕಾರ್ಮಿಕರು ಅಪಘಾತಗಳಿಗೆ ಸಿಲುಕಿಕೊಳ್ಳುತ್ತಿದ್ದರು.

ಗಣಿಗಳ ಒಳಗೆ ದಿನಕ್ಕೆ ಶೇಕಡ 10.88 ಕಾರ್ಮಿಕರು ಮತ್ತು ಗುತ್ತಿಗೆದಾರರ ಕೆಳಗೆ ಶೇಕಡ 36.35 ಕಾರ್ಮಿಕರು ಗೈರು ಹಾಜರಿಯಾಗುತ್ತಿದ್ದರು. ಹಾಜರಿ ಪುಸ್ತಕವನ್ನು ಸರಿಯಾಗಿ ನೋಡದ ಕಾರಣ ಕೆಲವು ಗುತ್ತಿಗೆ ಕಾರ್ಮಿಕರು ಎರಡು ಮೂರು ಗಣಿಗಳಲ್ಲಿ ಕೆಲಸ ಮಾಡುತ್ತಿದ್ದರು. ಕಂಪನಿ ಕಾರ್ಮಿಕರ ಹಾಜರಾತಿ ತಿಂಗಳಿಗೆ 22, 24 ಅಥವಾ 26 ದಿನಗಳಿದ್ದರೆ 2ರೂ; 24, 26, 27 ದಿನಗಳಿದ್ದರೆ 4 ರೂ. ಬೋನಸ್ ಪಡೆಯುತ್ತಿದ್ದರು. ಗುತ್ತಿಗೆದಾರರ ಕೆಳಗೆ ಕೆಲಸ ಮಾಡುವ ಕಾರ್ಮಿಕರಿಗೆ ಈ ಸವಲತ್ತು ದೊರಕುತ್ತಿರಲಿಲ್ಲ. ಇವರ ಗೈರು ಹಾಜರಿಗೆ ಇದೂ ಒಂದು ಕಾರಣವಿತ್ತು. ಜೊತೆಗೆ ಇವರು ಮಾಡುವ ಕೆಲಸಗಳು ಬಹಳ ಕಷ್ಟಕರವಾಗಿದ್ದವು. ಮೇಸ್ತ್ರಿಗಳು ಯಾವಾಗಲೂ ಇವರ ಹಿಂದೆಯೇ ಇರುತ್ತಿದ್ದರು. ಗೈರು ಹಾಜರಿಗೆ ಇದ್ದ ಇನ್ನಿತರ ಕಾರಣಗಳೆಂದರೆ ಅನಾರೋಗ್ಯ, ಮಳೆಗಾಲದಲ್ಲಿ ಕೃಷಿ ಕೆಲಸ ಇತ್ಯಾದಿ.

❖❖❖

1930ರಲ್ಲಿ ಹೆಚ್ಚು ವರ್ಷ ಕಾಲ ಕೆಲಸ ಮಾಡಿ ನಿವೃತ್ತರಾದ ಕಾರ್ಮಿಕರಿಗೆ 2 ಅಥವಾ 3ರೂ. ಗ್ರ್ಯಾಚ್ಯುಟಿ ನೀಡುತ್ತಿದ್ದರು. 25 ವರ್ಷ ಕಾಲ ಕೆಲಸ ಮಾಡಿದ ಒಬ್ಬ ಕಾರ್ಮಿಕನಿಗೆ ಕೇವಲ 75 ರೂ. ಗ್ರ್ಯಾಚ್ಯುಟಿ ದೊರಕುತ್ತಿತ್ತು. ಆದರೆ ಗುತ್ತಿಗೆ ಕಾರ್ಮಿಕರಿಗೆ ಏನೂ ದೊರಕುತ್ತಿರಲಿಲ್ಲ. ಅಧಿಕಾರಿಗಳಿಗೆ ಅವರ ಸಂಬಳದ ಮೇಲೆ ಹೆಚ್ಚು ಗ್ರ್ಯಾಚ್ಯುಟಿ ಹಣ ದೊರಕುತ್ತಿತ್ತು. ಕಾರ್ಮಿಕನೊಬ್ಬ ವಯಸ್ಸಾಗಿ ಇಲ್ಲ ಸಿಲಿಕೋಸಿಸ್ ರೋಗದಿಂದ ಸತ್ತಾಗ ಅವನನ್ನು ಹೂಳಲು ಅವನ ಕುಟುಂಬದವರ ಹತ್ತಿರ ಒಂದೇ ಒಂದು ಪೈಸೆಯೂ ಇಲ್ಲದೆ ಇದ್ದ ಸಂದರ್ಭಗಳೇ ಹೆಚ್ಚು. ಆಗ ಆತನ ಮಕ್ಕಳೊ ಇಲ್ಲ, ಅಳಿಯಂದಿರೊ ಸಹಾಯ ಮಾಡಬೇಕಾಗಿತ್ತು. ಕಾರ್ಮಿಕರ ಕಷ್ಟಗಳಿಗೆ ಸಹಾಯವಾಗಲು ಕಾರ್ಮಿಕರ ನಿಧಿಯನ್ನು ಸ್ಥಾಪಿಸಬೇಕೆಂದು ಕಾರ್ಮಿಕರು ಎಷ್ಟೊ ವರ್ಷಗಳಿಂದ ಒತ್ತಾಯ ಮಾಡುತ್ತಲೇ ಇದ್ದರು, ಕಂಪನಿಗಳು ಭರವಸೆ ನೀಡುತ್ತಲೇ ಬರುತ್ತಿದ್ದವು.

❖❖❖

1962ರಲ್ಲಿ ಬ್ರಿಟಿಷ್ ಅಧಿಕಾರಿಗಳು ತಮ್ಮ ವಸಾಹತು ಸಂಸ್ಕೃತಿ ಮತ್ತು ಬಿಳಿಯ

ದೌಲತ್ತಿನೊಂದಿಗೆ ಕೆಜಿಎಫ್ ಬಿಟ್ಟು ಹೊರಟಾಗ ಸಹಜವಾಗಿಯೇ ಅವರ ಕೈಕೆಳಗಿದ್ದ ಹಿಂದೂಗಳಿಗೆ ಅಧಿಕಾರ ದೊರಕಿತ್ತು. ಬಿಳಿಯರ ಕುರ್ಚಿಗಳು, ಬಂಗಲೆಗಳು ದೊರಕಿದ್ದೆ, ವಸಾಹತು ಶೈಲಿಯನ್ನೇ ಅಳವಡಿಸಿಕೊಂಡ ಈ ಹಿಂದೂ ಅಧಿಕಾರಿಗಳು ರಾತ್ರೋರಾತ್ರಿ ಅಧಿಕಾರ ಮತ್ತು ದರ್ಪವನ್ನು ತುಂಬಿಕೊಂಡು ವಸಾಹತೋತ್ತರ ಅಧಿಕಾರಿಗಳಾಗಿ ಬಿಳಿಯರಿಗಿಂತ ಒಂದು ಪಟ್ಟು ಹೆಚ್ಚಾಗಿಯೇ ಮೆರೆಯತೊಡಗಿದರು. ಇವರ ಬಂಗಲೆಗಳ ಸುತ್ತಲೂ ಒಮ್ಮೆಲೆ ಘನತೆ ಗೌರವ ದರ್ಪ ಮತ್ತು ಐಶ್ವರ್ಯ ಸುಳಿಯತೊಡಗಿತು.[11] ಆದರೆ ಕಾರ್ಮಿಕರು ಮಾತ್ರ ಎಂದಿನಂತೆ ಗುಡಿಸಿಲುಗಳಲ್ಲೇ ಜೀವನ ನಡೆಸಿದ್ದರು.

ಗಣಿಗಳ ಆರ್ಥಿಕತೆಯೇ ಕೆಜಿಎಫ್ ನಗರದ ಪೂರ್ಣ ಆರ್ಥಿಕತೆ ಆಗಿತ್ತು. 1971ರಲ್ಲಿ ಕೆಜಿಎಫ್‌ನಲ್ಲಿ ನಡೆಸಿದ ಒಂದು ಸಮೀಕ್ಷೆಯಲ್ಲಿ 281 ಹಿಂದೂಗಳಲ್ಲಿ ಶೇಕಡ 18.5ರಷ್ಟು ಬ್ರಾಹ್ಮಣರಿದ್ದು, ಮಧ್ಯಮ ಮತ್ತು ಮೇಲ್ವರ್ಗದಲ್ಲಿ ಇವರ ಆರ್ಥಿಕ ಪ್ರತಿನಿಧಿತ್ವ ಶೇಕಡ 90. ಆದಿ ದ್ರಾವಿಡರಾದ ಅಸ್ಪೃಶ್ಯರು ಶೇಕಡ 47.7 ಇದ್ದರೂ ಮಧ್ಯಮ ಮತ್ತು ಮೇಲ್ವರ್ಗದಲ್ಲಿ ಅವರ ಪ್ರತಿನಿಧಿತ್ವ ಶೇಕಡ 14.2. ಮೇಲ್ವರ್ಗದಲ್ಲಿ ಆದಿ ದ್ರಾವಿಡರ ಪ್ರತಿನಿಧಿತ್ವ ಕೇವಲ 1. ಶೇಕಡ 7.7 ರಷ್ಟು ಬ್ರಾಹ್ಮಣರು ಆರ್ಥಿಕತೆಯಲ್ಲಿ ಕೆಳವರ್ಗದವರಾಗಿದ್ದರೆ ಅದೇ ಕೆಳವರ್ಗದಲ್ಲಿ ಆದಿ ದ್ರಾವಿಡರ ಪ್ರತಿನಿಧಿತ್ವ 85.87.

ಮನೆ ವೆಚ್ಚ ಮತ್ತು ಸಂಬಳ :

ಕಾರ್ಮಿಕರ ಮಕ್ಕಳು ಮತ್ತು ಮಹಿಳೆಯರು ಕಾರ್ಮಿಕರ ಆದಾಯವನ್ನೇ ಆವಲಂಬಿಸಿದ್ದರು. ಕುಟುಂಬದ ಇತರ ಸದಸ್ಯರು ಮಾಡುತ್ತಿದ್ದ ಸಣ್ಣ ಪುಟ್ಟ ಕೆಲಸಗಳಿಂದ ಬರುತ್ತಿದ್ದ ಆದಾಯ, ಆಹಾರದ ವೆಚ್ಚ, ಬಟ್ಟೆ, ಕುಡಿತ, ಸಾಲದ ಬಡ್ಡಿ ಒಟ್ಟಾರೆ ವಿವರಗಳನ್ನು 1930ರಲ್ಲಿ 50 ಕುಟುಂಬಗಳಿಂದ ಕಲೆಹಾಕಿದ ಶ್ರೀನಿವಾಸನ್ ಅವರ ವಿವರಗಳನ್ನು ಇಲ್ಲಿ ನೀಡಲಾಗಿದೆ. ಕಾರ್ಮಿಕರು ಮತ್ತು ಅವರ ಕುಟುಂಬಗಳ ಜೊತೆಗೆ ನೇರವಾಗಿ ಸಂದರ್ಶಿಸಿ, ಕಣ್ಣಾರೆ ಕಂಡ ಚಿತ್ರಣಗಳನ್ನು ಶ್ರೀನಿವಾಸನ್ ಹೀಗೆ ದಾಖಲಿಸಿದ್ದಾರೆ.[12]

ಈ ಕುಟುಂಬಗಳೆಲ್ಲ ಕ್ಯಾಂಪ್/ಲೈನ್‌ಗಳಲ್ಲಿ ವಾಸಿಸುತ್ತಿದ್ದವು. ಕಾರ್ಮಿಕ ಕುಟುಂಬಗಳ ನಿಜವಾದ ಒಳನೋಟಗಳನ್ನು ಪಡೆಯುವುದು ಅಷ್ಟೊಂದು ಸುಲಭವಲ್ಲ. ಅವರು ಮಾಡುತ್ತಿರುವ ವೆಚ್ಚದ ಬಗ್ಗೆಯೂ ನಿಖರವಾದ ಮಾಹಿತಿ ಪಡೆಯುವುದು ಕಷ್ಟದ ಕೆಲಸವಾಗಿತ್ತು. ಅವರು ಕುಸುಲ ಅಕ್ಕಿಯನ್ನು ಅಗಾಧವಾಗಿ ಉಪಯೋಗಿಸುತ್ತಿರುವುದಾಗಿ ಹೇಳಿಕೊಳ್ಳುತ್ತಿದ್ದರು. ಎಷ್ಟೋ ಸಲ ಅವರು ಹೇಳಿಕೊಳ್ಳುವ ಸಂಬಳ ಮತ್ತು ವೆಚ್ಚಗಳಿಗೆ ಸಂಬಂಧವೆ ಇರುತ್ತಿರಲಿಲ್ಲ. ಗಂಡ-ಹೆಂಡತಿ, ಸ್ನೇಹಿತರು ಹೀಗೆ ಹಲವು ಸದಸ್ಯರನ್ನು ಕೇಳಿ ತಿಳಿದುಕೊಂಡ ನಂತರ ಈ ವಿವರಗಳನ್ನು ಕೊಡಲಾಗಿದೆ. ಸಾಮಾನ್ಯವಾಗಿ ಬಡ ಕೂಲಿ ಕಾರ್ಮಿಕನ ಕುಟುಂಬ ಯಾವಾಗಲೂ ದೊಡ್ಡದಾಗಿಯೆ ಇರುತ್ತದೆ. ಎಲ್ಲಾ 50

ಕುಟುಂಬಗಳ ಸರಾಸರಿ ವಯಸ್ಕರ ಸಂಖ್ಯೆ 3.94. ಕಂಪನಿ ಕಾರ್ಮಿಕ ಮತ್ತು ಗುತ್ತಿಗೆ ಕಾರ್ಮಿಕನ ಕೈಗೆ ಬರುತ್ತಿದ್ದ ಸರಾಸರಿ ಆದಾಯ 22 ಅಥವಾ 15 ರೂ. ಒಬ್ಬ ಕುಟುಂಬ ಸದಸ್ಯನ ಸರಾಸರಿ ವೆಚ್ಚ 6 ರೂ. 12 ಆಣೆ. ಈ ಲೆಕ್ಕದಲ್ಲಿ ಸಣ್ಣ ಮಕ್ಕಳ ಲೆಕ್ಕವೂ ಅಷ್ಟೇ ಆಗುತ್ತದೆ ಎಂದು ತಿಳಿದುಕೊಳ್ಳಲಾಯಿತು. ಕಾರಣ ಮಕ್ಕಳಿಗಾಗಿ ವೆಚ್ಚವಾಗುವುದನ್ನು ನಿಖರವಾಗಿ ಲೆಕ್ಕಹಾಕದೆ ಹೋಗಿದ್ದು.

ಇಲ್ಲಿ 16 ವರ್ಷ ತುಂಬಿದ ಯುವಕನಿಗೆ 100 ಅಂಕ, ಅದೇ 16 ತುಂಬಿದ ಯುವತಿಗೆ 83 ಅಂಕ ಎಂದು ಲೆಕ್ಕ ಹಾಕಲಾಯಿತು. 4 ವರ್ಷದ ಮಗು ತಂದೆ/ತಾಯಿಯ ಜೊತೆಗೆ ಊಟಮಾಡಿದರೆ, ಒಂದು ವರ್ಷದ ಮಗು ತಾಯಿಯ ಹಾಲನ್ನು ಮಾತ್ರ ಕುಡಿಯುತ್ತದೆ. ಅದಕ್ಕೆ 50 ಅಂಕ ಕೊಡಲಾಯಿತು. ಈ ಅಳತೆಯ ಪ್ರಕಾರ ಕುಟುಂಬದ ಸರಾಸರಿ ವಯಸ್ಕರ ಸಂಖ್ಯೆ 4.56. ಇವರ ಸರಾಸರಿ ವರಮಾನ 7ರೂ. ವೆಚ್ಚ 8 ರೂ. 11 ಆಣೆ. ಈ ಕುಟುಂಬಗಳ ಒಟ್ಟು ಆದಾಯ 14.8 ರೂ. ನಿಂದ 69ರೂ. ತಿಂಗಳ ವರಮಾನದ ಆಧಾರದ ಮೇಲೆ 50 ಕುಟುಂಬಗಳು 5 ಗುಂಪುಗಳಾಗಿ ಕಂಡುಬಂದವು. 20 ರೂ. ಕೆಳಗೆ 8, 20–30 ರೂ. ನಡುವೆ 17, 30–40 ರೂ. ನಡುವೆ 13, 40–50 ರೂ. ನಡುವೆ 10 ಮತ್ತು 50 ರೂಗಳ ಮೇಲೆ 2 ಕುಟುಂಬಗಳಿದ್ದವು.

ಈ ಕುಟುಂಬಗಳು ಆಹಾರ ಮತ್ತು ಇತರ ವಸ್ತುಗಳಿಗಾಗಿ ಉಪಯೋಗಿಸುತ್ತಿದ್ದ ಹಣದ ವೆಚ್ಚದ ವಿವರ ಹೀಗಿದೆ. ಆಹಾರ ಶೇಕಡ 53.6, ಸೀಮೆಣ್ಣೆ; ಒಲೆ ಮತ್ತು ದೀಪಕ್ಕೆ 5.5, ಮನೆ ಬಾಡಿಗೆ 2, ಬಟ್ಟೆ 6.1, ಕುಡಿತಕ್ಕೆ 4.4, ಸಾಲದ ಬಡ್ಡಿಗೆ 15, ಅತಿಥಿ ಮತ್ತು ರೈಲು ಟಿಕೆಟ್ಟಿಗೆ 1.9 ಮತ್ತು ವಿದ್ಯಾಭ್ಯಾಸ, ದೋಬಿ, ಚೌರ ಇತ್ಯಾದಿಗೆ 3.4.

❖❖❖

ತಿಂಗಳಿಗೆ 40 ರೂ. ಗಿಂತ ಕಡಿಮೆ ಸಂಬಳ ಪಡೆದವರು ಎಷ್ಟೇ ಎಚ್ಚರಿಕೆಯಿಂದ ಹಣ ಖರ್ಚು ಮಾಡಿದರೂ ಸಾಲದ ಹೊರೆಯಿಂದ ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ತಿಂಗಳು ತಿಂಗಳು ಸಾಲ ಮುಂದುವರಿದು ಬಡ್ಡಿ ಜೊತೆಗೆ ಕೇವಲ ಒಂದೆರಡು ವರ್ಷಗಳಲ್ಲಿ ಕಾರ್ಮಿಕ ಕುಟುಂಬಗಳು ಸಾಲವೆಂಬ ವಿಷದ ವರ್ತುಲದಲ್ಲಿ ಸಿಲುಕಿಕೊಳ್ಳುತ್ತಿದ್ದವು. ಅನಕ್ಷರಸ್ತರಾದ ಈ ಬಡ ಕಾರ್ಮಿಕರಿಂದ ಆದಾಯ ಮತ್ತು ವೆಚ್ಚದ ವಿವರಗಳನ್ನು ಸರಿಯಾಗಿ ತಿಳಿದುಕೊಳ್ಳಲು ಆಗಲಿಲ್ಲ. ದಿನಾ ರಾತ್ರಿ ಮನೆಗೆ ಬೇಕಾಗಿದ್ದ ತರಕಾರಿ, ಮಾಂಸ, ಬೇಳೆಯನ್ನು ಸಹ ಕೊಂಡುಕೊಳ್ಳುವ ಸ್ಥಿತಿಯಲ್ಲಿ ಆ ಕುಟುಂಬಗಳು ಇರಲಿಲ್ಲ. ಮನೆಯ ಹೆಂಗಸರು ಮತ್ತು ಮಕ್ಕಳು ಹೊಸ ಬಟ್ಟೆಗಳಿಲ್ಲದೆ, ಹಳೆ ಬಟ್ಟೆಗಳಿಗೆ ಮತ್ತು ರಗ್ಗುಗಳಿಗೆ ತೇಪೆಗಳನ್ನು ಹಾಕಿ ಒಂದೆರಡು ವರ್ಷಗಳು ನೂಕಬೇಕಾಗಿತ್ತು.

ಕಾರ್ಮಿಕರು ಗಣಿ ಕೆಲಸದ ಜೊತೆಗೆ ಇತರ ಸಣ್ಣ ಪುಟ್ಟ ಕೆಲಸಗಳನ್ನು ಮಾಡಬೇಕಾಗಿತ್ತು. ಮಹಿಳೆಯರು ದೊರಕಿದ ಕೂಲಿ ಕೆಲಸಗಳನ್ನು ಮಾಡಬೇಕಾಗಿತ್ತು. ಸಾಲ, ಬಡ್ಡಿ ನಿರಂತರವಾಗಿ ಹೆಚ್ಚುತ್ತಾಹೋಗಿ ಸಕಾಲಕ್ಕೆ ಬಡ್ಡಿ ತುಂಬುವುದೇ ಜೀವನ ಪರ್ಯಂತದ ಕೆಲಸವಾಗುತ್ತಿತ್ತು. ಕಡಿಮೆ ಸಂಬಳ ಇರುವವರ ಪಾಡು ಹೇಳ ತೀರದು. ಹೆಚ್ಚು ದುಡಿದಷ್ಟು ಹೆಚ್ಚು ಆಹಾರ ತಿನ್ನಬೇಕಾಗಿತ್ತು. ಜೊತೆಗೆ ಕುಡಿತವು ಹೆಚ್ಚೆಚ್ಚು ಅಂಟಿಕೊಳ್ಳುತ್ತಿತ್ತು. ಹಣ ಕೊಟ್ಟ ಸಾಹುಕಾರರು, ಮಾರವಾಡಿಗಳು ಕಾರ್ಮಿಕರನ್ನು ಸುಲಿದು ತಿನ್ನಲು ವಿಧ ವಿಧದ ಉಪಾಯಗಳನ್ನು ಹುಡುಕುತ್ತಿದ್ದರು. ಒಬ್ಬ ಕಾರ್ಮಿಕನಿಗೆ ಆಹಾರಕ್ಕಾಗಿ ತಿಂಗಳಿಗೆ ಸರಾಸರಿ 4 ರೂ. 13 ಆಣೆ. 7 ಪೈಸೆ ಅಥವಾ ದಿನಕ್ಕೆ ಸರಾಸರಿ 2 ಆಣೆ. 7 ಪೈಸೆ. ವೆಚ್ಚವಾಗುತ್ತಿತ್ತು. ಒಬ್ಬ ಕಾರ್ಮಿಕನಿಗೆ ಮನೆ ವೆಚ್ಚಕ್ಕೆ ಕನಿಷ್ಠ ಎಷ್ಟು ಹಣ ಬೇಕಾಗಿತ್ತು ಎನ್ನುವುದನ್ನು ನಿಖರವಾಗಿ ಹೇಳಲು ಆಗುತ್ತಿರಲಿಲ್ಲ. ಇಂತಹ ಸಮಯದಲ್ಲಿ ಕಡುಬಡವರಿಗೆ ದಿನಕ್ಕೆ ಒಂದು ಹೊತ್ತು ಗಂಜಿ ದೊರಕಿದರೆ ಅದೇ ದೊಡ್ಡ ವಿಷಯವಾಗಿತ್ತು.

ಕ್ಯಾಂಪ್‌ಗಳಲ್ಲಿದ್ದ ಮಲೆಯಾಳಿ ಮತ್ತು ಮೊಪ್ಲಾಗಳ ದಟ್ಟಿ ಹೋಟಲುಗಳಲ್ಲಿ ಒಬ್ಬನಿಗೆ 1.10–2 ರೂ. ಗೆ ಒಂದು ವಾರ ಊಟ ದೊರಕುತ್ತಿತ್ತು. ಅಂದರೆ ದಿನಕ್ಕೆ 3.75–4.4 ಆಣೆ. ಇದೇ ಕಾಲಕ್ಕೆ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿದ್ದ ಅಪರಾಧಿಗಳಿಗೆ ತಿಂಗಳಿಗೆ ತಗಲುತ್ತಿದ್ದ ಆಹಾರದ ಸರಾಸರಿ ವೆಚ್ಚ 5.5ರೂ. ಅಂದರೆ ವಾರಕ್ಕೆ 2 ಆಣೆ. 10 ಪೈಸೆ. ಮೈನಿಂಗ್ ಆಸ್ಪತ್ರೆಯಲ್ಲಿದ್ದ ಒಳ ರೋಗಿಗಳಿಗೆ ದಿನಕ್ಕೆ ತಗಲುತ್ತಿದ್ದ ಆಹಾರದ ವೆಚ್ಚ 0.5ರೂ. ಗಣಿ ಕಾರ್ಮಿಕನ ಒಟ್ಟು ಸರಾಸರಿ ಆಹಾರದ ವೆಚ್ಚ ದಿನಕ್ಕೆ 2ಆಣೆ. 7 ಪೈಸೆ. ಅಂದರೆ ಜೈಲಿನಲ್ಲಿದ್ದ ಅಪರಾಧಿಗಳು ತೆಗೆದುಕೊಳ್ಳುತ್ತಿದ್ದ ಆಹಾರಕ್ಕಿಂತ ಕಡಿಮೆ. ಗಣಿ ಕಾರ್ಮಿಕ ತಿಂಗಳ ಪೂರ್ತಿ ಶ್ರಮ ಪಟ್ಟು 30 ರೂ. ಗಳಿಸಿದರೂ, ತೆಗೆದುಕೊಳ್ಳುವ ಆಹಾರ ಮಾತ್ರ ಜೈಲಿನಲ್ಲಿರುವ ಅಪರಾಧಿಗಳಿಗಿಂತ ಕಡಿಮೆಯಾಗಿತ್ತು.[13] 1300 ಮಹಿಳೆಯರು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಇದು ಅವರ ಕುಟುಂಬಗಳಿಗೆ ಸಹಾಯವಾಗಿತ್ತು. ಹಾಗೆ 527 ಬಾಲಕರು ಗಣಿಗಳ ಮೇಲೆ ಕೆಲಸ ಮಾಡುತ್ತಿದ್ದರು. ಇವರಲ್ಲಿ ಹೆಚ್ಚಾಗಿ ಅಪಘಾತಗಳಲ್ಲಿ ಮಡಿದ ಕಾರ್ಮಿಕರ ಪತ್ನಿಯರು ಮತ್ತು ಮಕ್ಕಳು, ಇಲ್ಲ ದಿಕ್ಕಿಲ್ಲದವರಾಗಿದ್ದರು.

ಗಣಿ ಪ್ರದೇಶದಲ್ಲಿ ಬೌದ್ಧ ವಿಹಾರದ ಆಡಳಿತದಲ್ಲಿ ಒಂದು ಕೈಮಗ್ಗ ನಡೆಯುತ್ತಿದ್ದು ಅದರಲ್ಲಿ ಕೆಲವು ಯುವತಿಯರು ಕೆಲಸ ಮಾಡುತ್ತಿದ್ದರು. ಒಂದು ಸಣ್ಣ ಬಿದಿರು ಉದ್ದಿಮೆ ಕೂಡ ನಡೆಯುತ್ತಿತ್ತು. ಬಿದಿರು ದಟ್ಟಿಗಳು, ಚಾಪೆಗಳು, ಟೋಪಿ ಮತ್ತು ಬ್ಯಾಸ್ಕೆಟ್ಟುಗಳನ್ನು ಇಲ್ಲಿ ತಯಾರಿಸಲಾಗುತ್ತಿತ್ತು. ಬಿದಿರನ್ನು ತಮಿಳುನಾಡಿನ ಕಾಡುಗಳಿಂದ ತರಲಾಗುತ್ತಿತ್ತು. ಇದೇ ಬಿದಿರು ಉದ್ದಿಮೆಯಿಂದ ಕಂಪನಿ 1930ರಲ್ಲಿ 18,000ರೂ.

ಬೆಲೆಯ ಬಿದಿರು (ದಟ್ಟಿ ಮನೆಗಳು ಕಟ್ಟಲು), 13000ರೂ ಬಿದಿರು ಚಾಪೆಗಳು, 5000 ರೂ. ಟೊಪ್ಪಿಗಳು, 5500 ರೂ. ಬ್ಯಾಸ್ಕಟ್ಟುಗಳನ್ನು ಕೊಂಡುಕೊಂಡಿತ್ತು. ಇವುಗಳ ಒಟ್ಟು ಬೆಲೆ 30,760 ರೂ.

ಸಾಲದ ವರ್ತುಲದಲ್ಲಿ :

1946 ರಲ್ಲಿ ಆರ್. ದೇಶ್‌ಪಾಂಡೆ ಗಣಿ ಕಾರ್ಮಿಕರ ಆರ್ಥಿಕ ಸ್ಥಿತಿಗಳನ್ನು ಪರಿಶೀಲಿಸಿದಾಗ ಅರ್ಧಕ್ಕಿಂತ ಹೆಚ್ಚು ಕಾರ್ಮಿಕರು 1 ರಿಂದ 4 ತಿಂಗಳು ಸಂಬಳದಷ್ಟು ಸಾಲದಿಂದ ನರಳುತ್ತಿದ್ದರು. ಕೆಲವು ವರ್ಷಗಳ ಹಿಂದಿನ ಸಮೀಕ್ಷೆಯಲ್ಲಿ ಅತಿ ಕಡಿಮೆ ಸಂಬಳ ತೆಗೆದುಕೊಳ್ಳುವವರು ಹೆಚ್ಚು ಸಾಲಗಾರರಾಗಿದ್ದರು. ಅದರಲ್ಲಿ ಮುಖ್ಯವಾಗಿ ತಿಂಗಳಿಗೆ 35 ರೂ. ಗಿಂತ ಕಡಿಮೆ ಸಂಬಳ ಪಡೆಯುವವರು.[14] ಮೈಸೂರು ಮನಿಲೆಂಡರ್ಸ್ 1939 ಆ್ಯಕ್ಟ್ ಕಲಂ 13ರ ಪ್ರಕಾರ ಕೆಜಿಎಫ್ ವರ್ತಕರು ಪಡೆದಿದ್ದ ಪರವಾನಗಿಯಂತೆ ತಿಂಗಳಿಗೆ ಶೇಕಡ 9 ಕ್ಕಿಂತ ಕಡಿಮೆ ಬಡ್ಡಿ ತೆಗೆದುಕೊಳ್ಳಬೇಕಾಗಿತ್ತು. ಕ್ರಿಮಿನಲ್ ಪ್ರೊಸೀಜರ್ ಕೋಡ್ ಆ್ಯಕ್ಟ್ (1938) ತಿದ್ದುಪಡಿಯಂತೆ ಬಡ್ಡಿಯನ್ನು ಕಾಲಕಾಲಕ್ಕೆ ತೀರಿಸುತ್ತಿದ್ದ ಕಾರ್ಮಿಕರನ್ನು ಶಿಕ್ಷೆಗೆ ಒಳಪಡಿಸದಂತೆ ನೋಡಿಕೊಳ್ಳಲಾಗಿತ್ತು.

ನ್ಯಾಯಾಲಯದ ಮೂಲಕ 50 ರೂ. ಮಾತ್ರ ಪಾವತಿಸುವಂತೆ ಸೀಮಿತಗೊಳಿಸಲಾಗಿತ್ತು. ಅಂದರೆ ವರ್ತಕರು ನ್ಯಾಯಾಲಯದಲ್ಲಿ ದಾವೆ ಹೂಡಿದರೂ ಕಂಪನಿಗಳು 50 ರೂ. ಗಿಂತ ಹೆಚ್ಚು ಮುರಿಯುವಂತಿರಲಿಲ್ಲ. ಇದರಿಂದ ಅತಿ ಹೆಚ್ಚು ಸಾಲ ಮಾಡುತ್ತಿದ್ದವರನ್ನು ಸಾಲ ಮಾಡದಂತೆ ನಿರ್ಬಂಧಿಸಲಾಗಿತ್ತು. ಆದರೆ 1938 ಕ್ಕಿಂತ ಮುಂಚೆಯೇ ನ್ಯಾಯಾಲಯದಲ್ಲಿ ದಾವೆ ಹೂಡಿದ್ದ ವರ್ತಕರಿಗಾಗಿ ಹೆಚ್ಚಾಗಿ ಹಿಡಿಯಲಾಗುತ್ತಿತ್ತು. ಅದು ಮುಗಿಯಬೇಕಾದರೆ 1941 ರಲ್ಲಿ ಮತ್ತೊಂದು ತಿದ್ದುಪಡಿ ಆ್ಯಕ್ಟ್ 13ನ್ನು ತರಬೇಕಾಯಿತು.

1939ರಲ್ಲಿ ವರ್ತಕರು ನ್ಯಾಯಾಲಯದಲ್ಲಿ ಒಂದು ದಾವೆ ಹೂಡಿ ಕೆಜಿಎಫ್ ಪ್ರದೇಶವನ್ನು ಆ್ಯಕ್ಟ್ 1939 ರಿಂದ ಮುಕ್ತಗೊಳಿಸಬೇಕೆಂದು ಕೋರಿದರು. ಅವರು ನೀಡಿದ ಕಾರಣವೆಂದರೆ, 'ಕಾರ್ಮಿಕರು ಮೈಸೂರು ಪ್ರದೇಶದವರಲ್ಲ; ಅವರು ಬಡ್ಡಿ ಕೊಡದೆ, ಸಾಲ ತೀರಿಸದೆ ಯಾವಾಗಲೂ ಓಡಿಹೋಗಲು ಯೋಚಿಸುತ್ತಿರುತ್ತಾರೆ ಮತ್ತು 1939ರ ಆ್ಯಕ್ಟ್‌ನಿಂದ 80 ಲಕ್ಷದಲ್ಲಿ 60 ಲಕ್ಷ (ಸಾಲ/ಬಡ್ಡಿ) ರೂ. ಉಳಿದುಕೊಂಡಿದೆ' ಎಂದು ಹೇಳಿಕೆ ನೀಡಿದ್ದರು. '1939ರ ಆ್ಯಕ್ಟ್‌ನಿಂದ ಕಾರ್ಮಿಕರಿಗೆ ಯಾವುದೇ ಉಪಯೋಗವಾಗಿಲ್ಲ ಬದಲಾಗಿ ವರ್ತಕರು ಇನ್ನಷ್ಟು ಕ್ರೂರವಾಗಿ ಅಸಲು ಮತ್ತು ಬಡ್ಡಿಯನ್ನು ವಸೂಲಿ ಮಾಡುತ್ತಿದ್ದಾರೆ' ಎಂದು ಕಾರ್ಮಿಕರು ದೂರಿದರು. 1946ರಲ್ಲಿ ದೇಶ್‌ಪಾಂಡೆ ಸಲ್ಲಿಸಿದ ವರದಿಯಲ್ಲಿ ಇದು ದೃಢಪಟ್ಟಿತ್ತು. ಮಾರಿಕುಪ್ಪಂನ ಮುನಿಯಮ್ಮ

ತಾನು ಅಡ ಇಟ್ಟಿದ್ದ ಕಂಠಹಾರಕ್ಕೆ ಬಡ್ಡಿ ಅಸಲು ಎಲ್ಲವನ್ನೂ ಕಟ್ಟಿದ ಮೇಲೂ ಅಂಡ್ರ್‌ಸನ್‌ಪೇಟೆಯ ಮಾರವಾಡಿ ವೀರಾಲಾಲ್ ಆ ಹಾರವನ್ನು ನಾನು ಅಡ ಇಟ್ಟುಕೊಂಡಿಲ್ಲ ಎಂದಿದ್ದರು. ಮುನಿಯಮ್ಮ ಪೊಲೀಸರಿಗೆ ದೂರು ನೀಡಿದಳು. ಪೊಲೀಸರು ತೀವ್ರ ಶೋಧನೆ ನಡೆಸಿದ ಮೇಲೆ ಹಾರ ಇರುವುದನ್ನು ಪತ್ತೆ ಹಚ್ಚಿದ ಕಾರಣ ಜಿಲ್ಲಾ ನ್ಯಾಯಾಧೀಶರು ವೀರಾಲಾಲ್‌ಗೆ 1938 ರಲ್ಲಿ ಒಂದು ತಿಂಗಳು ಜೈಲು ಶಿಕ್ಷೆ ನೀಡಿದರು.

ಕಂಪನಿ ನೀಡುತ್ತಿದ್ದ ಪಡಿತರ ಅಕ್ಕಿಗೆ ಮಾರುಕಟ್ಟೆಗಿಂತ ಹೆಚ್ಚು ಬೆಲೆ ಇದ್ದರೂ ಕಂಪನಿ ಪಡಿತರ ಅಕ್ಕಿಯನ್ನು ಸಾಲದ ರೂಪದಲ್ಲಿ ನೀಡುವುದರಿಂದ ಕಾರ್ಮಿಕರು ಕೊಂಡುಕೊಳ್ಳುತ್ತಿದ್ದರು. ಏಪ್ರಿಲ್ 7, 1943 ರಲ್ಲಿ ಅಕ್ಕಿಯನ್ನು ಹಣಕ್ಕೆ ಮಾತ್ರ ಕೊಡುವುದಾಗಿ ಕಂಪನಿಗಳು ಹೇಳಿದಾಗ ಉರಿಗಾಂ ಗಣಿಯ 800 ಕಾರ್ಮಿಕರು ಪ್ರತಿಭಟಿಸಿದ್ದರು. ಅದೇ ಸಮಯದಲ್ಲಿ ಚಾಂಪಿಯನ್ ಗಣಿಗಳ ಕಾರ್ಮಿಕರು ಆಹಾರ ಧಾನ್ಯಗಳನ್ನು ಸರಿಯಾಗಿ ಪೂರೈಸುತ್ತಿಲ್ಲ ಎಂದು ಕೆಲಸಕ್ಕೆ ಹಾಜರಾಗಲಿಲ್ಲ. ಮೇಸ್ತ್ರಿಗಳ ಮೂಲಕ ಪಡಿತರದಲ್ಲಿ ನೀಡುತ್ತಿದ್ದ ಸೀಮೆ ಇದ್ದಿಲನ್ನು ಕಾರ್ಮಿಕರು ಅದೇ ಮೇಸ್ತ್ರಿಗಳಿಗೆ ಹಿಂದಕ್ಕೆ ಮಾರಿಬಿಡುತ್ತಿದ್ದರು.[15] ಮಹಿಳೆಯರಿಗೆ ದುಡಿಯಲು ಯಾವುದೇ ಕೆಲಸಗಳು ದೊರಕುತ್ತಿರಲಿಲ್ಲ. 1920ರಲ್ಲಿ ಮಹಿಳೆಯರನ್ನು ಮನೆಗಳಲ್ಲಿಯೆ ಕೈಮಗ್ಗ ಅಥವಾ ನೇಕಾರ ಕೆಲಸಗಳಲ್ಲಿ ತೊಡಗಿಸಲು ಯೋಚನೆ ಮಾಡಿದಾಗ 8x8 ಅಡಿ ಗುಡಿಸಿಲುಗಳಲ್ಲಿ ಮಗ್ಗಗಳನ್ನು ಇಟ್ಟುಕೊಳ್ಳುವುದಾದರು ಹೇಗೆ ಎನ್ನುವ ಪ್ರಶ್ನೆಯನ್ನು ಶ್ರೀನಿವಾಸನ್ ತಮ್ಮ ವರದಿಯಲ್ಲಿ ಕೇಳಿದ್ದರು.

ಕಡಿಮೆ ಸಂಬಳ, ಹೆಚ್ಚು ಮಕ್ಕಳು, ದೊಡ್ಡ ಕುಟುಂಬ ಇನ್ನ್ಯಾವುದೇ ದಾರಿ ಕಾಣದ ಕೆಲವು ಕಾರ್ಮಿಕರು ಗಣಿಗಳಲ್ಲಿ ಸಣ್ಣ ಪ್ರಮಾಣದಲ್ಲಿ ಚಿನ್ನ ಮತ್ತಿತರ ವಸ್ತುಗಳನ್ನು ವಿಧಿ ಇಲ್ಲದೆ ಕಳ್ಳತನ ಮಾಡುತ್ತಿದ್ದರು. ಇದು ಕಾವಲು ಪಡೆಗೆ ತಿಳಿದಿದ್ದರೂ ಗೊತ್ತಿಲ್ಲದಂತೆ ಸುಮ್ಮನಿದ್ದಿತು.[18] 1940ರಲ್ಲಿ ಕಂಪನಿಗಳು 'ಕಳ್ಳತನವನ್ನು ಪೂರ್ಣವಾಗಿ ಹತೋಟಿಯಲ್ಲಿ ಇಡಲಾಗಿದೆ' ಎಂದು ಹೇಳಿದಾಗಲೂ, ಗಣೇಶ್ ಮಲ್ ಎಂಬ ತಾಮ್ರ ಮತ್ತು ಹಿತ್ತಾಳೆ ವ್ಯಾಪಾರಿಗೆ 400 ರೂ. ದಂಡ ಮತ್ತು 1 ತಿಂಗಳು ಜೈಲು ಶಿಕ್ಷೆಯನ್ನು ವಿಧಿಸಲಾಯಿತು. ಆತನ ಮನೆಯಿಂದ ಸಾವಿರಾರು ರೂ. ಬೆಲೆಯ ಗಣಿ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದರು.[19] ಸಾಲ ಪಡೆದು ಹಿಂದಿರುಗಿಸಲಾಗದ ಕಾರ್ಮಿಕರ ಮನೆಗಳಿಗೆ ಬರುತ್ತಿದ್ದ ದಪ್ಪ ಮೀಸೆಯ ಮಾರವಾಡಿಗಳು ಇಷ್ಟ ಬಂದಂತೆ ಬೈಯ್ದು ಹೋಗುತ್ತಿದ್ದರು. ಅಸಲಿಗೆ ಮನಬಂದಂತೆ ಬಡ್ಡಿ ಹಾಕಿ ವಸೂಲಿ ಮಾಡುವುದರ ಜೊತೆಗೆ 'ನಾಚಿಕೆ ಇಲ್ಲದ ಪರಯ... ದನದ ಮಾಂಸ ತಿನ್ನುವ ನಿಮ್ಮ ಬುದ್ಧಿ ತೋರಿಸಿಬಿಡ್ತೀರಿ ನೋಡಿ' ಎಂದು ಹೀಯಾಳಿಸುತ್ತಿದ್ದರು.

ಆದರೆ 1930ರ ಬೃಹತ್ ಪ್ರತಿಭಟನೆ ಹಣ ಕೊಟ್ಟ ಮಾರವಾಡಿಗಳ ಬಾಯಿ ಮುಚ್ಚಿಸಿತ್ತು.[20] ಸಾಲಕೊಟ್ಟ ಮಾರವಾಡಿಗಳು ಮುನ್ಸಿಫ್ ನ್ಯಾಯಾಲಯಕ್ಕೆ ಧಾವಿಸಿ ಸಾಲ ಪಡೆದ ಗುತ್ತಿಗೆದಾರರು ಮತ್ತು ಕಾರ್ಮಿಕರ ವಿರುದ್ಧ ದಾವೆ ಹೂಡಿ ಸಂಬಳವನ್ನು ನ್ಯಾಯಾಲಯದ ಮೂಲಕವೆ ಬರುವಂತೆ ಮಾಡಿಕೊಳ್ಳುತ್ತಿದ್ದರು. 1928–29ರಲ್ಲಿ 153 ಮತ್ತು 1929–30ರಲ್ಲಿ 189 ಕಾರ್ಮಿಕರ ಸಂಬಳವನ್ನು ಮಾರವಾಡಿಗಳಿಗೆ ನ್ಯಾಯಾಲಯ ಮೂಲಕ ಅಟ್ಯಾಚ್ ಮಾಡಲಾಯಿತು.[21] ಮುಂದಿನ ವರ್ಷ 1320 ಗುತ್ತಿಗೆದಾರರ ಸಂಬಳವನ್ನು ನ್ಯಾಯಾಲಯದ ಮೂಲಕ ಮಾರವಾಡಿಗಳಿಗೆ ಅಟ್ಯಾಚ್ ಮಾಡಿದಾಗ ಗುತ್ತಿಗೆದಾರರ ಕೆಳಗೆ ಕೆಲಸ ಮಾಡುತ್ತಿದ್ದ ಗುತ್ತಿಗೆ ಕಾರ್ಮಿಕರಿಗೆ ಸಂಬಳ ದೊರಕುವುದು ಕಷ್ಟದ ಕೆಲಸವಾಯಿತು. ಕಾರ್ಮಿಕರ ಸಂಬಳದಲ್ಲಿ 100 ರಿಂದ 300 ರೂ. ವರೆಗಿನ ಸಾಲ ನ್ಯಾಯಾಲಯದಲ್ಲಿ ಅಟ್ಯಾಚ್ ಮಾಡಲಾಗಿತ್ತು. ಇದನ್ನು ಕಾರ್ಮಿಕರು ತೀರಿಸಬೇಕಾದರೆ ದಶಕಗಳ ಕಾಲವೇ ಹಿಡಿಯುತ್ತಿತ್ತು. ಸಂಬಳ ಸಾಲದೆಂಬಂತೆ ಕಾರ್ಮಿಕರ ಗ್ರ್ಯಾಚ್ಯುಟಿಯನ್ನು ನ್ಯಾಯಾಲಯ ಸಾಲಕ್ಕೆ ಸೇರಿಸಿಬಿಡುತ್ತಿತ್ತು. ಇದರಿಂದ ಬಹಳಷ್ಟು ಕಾರ್ಮಿಕರಿಗೆ ಸಂಬಳವೆ ದೊರಕುತ್ತಿರಲಿಲ್ಲ. ಹೆಸರುಗಳನ್ನು ತಪ್ಪಾಗಿ ಬರೆಯುತ್ತಿದ್ದರಿಂದ ಕೆಲಹೊಮ್ಮೆ ಸಾಲ ಮತ್ತು ಬಡ್ಡಿಯನ್ನು ತೆಗೆದುಕೊಳ್ಳದವರ ಸಂಬಳವನ್ನೂ ಮುರಿಯುತ್ತಿದ್ದರು.

ಅರ್ಜಿ ಬರೆದವರನ್ನು ಮತ್ತು ಸಾಕ್ಷಿಗಳನ್ನು ನ್ಯಾಯಾಲಯಕ್ಕೆ ಕರೆದು ತರಲಾಗುತ್ತಿತ್ತು. ಕಂಪನಿ 1920ರಲ್ಲಿ ಸಾಲದ ಜ್ವಲಂತ ಸಮಸ್ಯೆಯನ್ನು ನಿವಾರಿಸಲು ಹೆಚ್ಚು ಸಾಲ ಪಡೆದವರು ಮತ್ತು ನ್ಯಾಯಾಲಯದ ಮೂಲಕ ಸಂಬಳ ಕೊಡುತ್ತಿದ್ದವರನ್ನು ಕೆಲಸದಿಂದ ತೆಗೆದು ಹಾಕುವ ನಿರ್ಧಾರವನ್ನು ತೆಗೆದುಕೊಂಡಿತು. ಅನಂತರ ಕಾರ್ಮಿಕರು ಸಾಲ ತೆಗೆದುಕೊಂಡರೆ ಕಂಪನಿಯನ್ನು ಎಂದಿಗೂ ಬಿಡುವುದಿಲ್ಲ ಎಂದು ತಿಳಿದುಕೊಂಡಿತ್ತು. ವರ್ತಕರು ಮತ್ತು ಕಂಪನಿಗಳು ತಿಳಿದುಕೊಂಡಂತೆ ಕಾರ್ಮಿಕರು, ಕೆಜಿಎಫ್ ಬಿಟ್ಟು ಓಡುವುದಾಗಲಿ, ನ್ಯಾಯಾಧೀಶರ ಮುಂದೆ ಸಾಲ ತೀರಿಸಲು ಸಾಧ್ಯವಿಲ್ಲ ಎಂದೂ ಕ್ಷಮೆ ಯಾಚಿಸುವುದಾಗಲಿ ಮಾಡಲಿಲ್ಲ. ಮಾರವಾಡಿಗಳು ಮತ್ತು ಸಾಹುಕಾರರು, ಸರಕಾರ ಕಾರ್ಯರೂಪಕ್ಕೆ ತಂದರೆ ತಾವು ಕೊಟ್ಟಿರುವ ಅಸಲು ಹಣವೆ ಮುಳಿಗಿಹೋಗುತ್ತದೆಂದು ತಿಳಿದು ಸ್ವಲ್ಪ ದಿನ ಸಾಲ ಸಂಗ್ರಹಿಸುವುದರ ಬಗ್ಗೆ ಮೃದುವಾಗಿ ನಡೆದುಕೊಂಡರು.

ಗಣಿ ಪ್ರದೇಶದಲ್ಲಿ ಮೇಸ್ತ್ರಿಗಳು/ಕಾರ್ಮಿಕರು, ಗಂಡ ಸತ್ತಿರುವ ಚಾಲಾಕಿ ಮಹಿಳೆಯರು ತಿಂಗಳಿಗೆ 1 ರೂ. ಗೆ 2 ಆಣೆ ಬಡ್ಡಿಯಂತೆ ಸಾಲ ನೀಡುತ್ತಿದ್ದರು. ಇವರೆಲ್ಲ ಕಾರ್ಮಿಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಂಬಳದ ದಿನ ಕಚೇರಿ ಮುಂದೆ ಸೇರಿಬಿಡುತ್ತಿದ್ದರು. ಕೆಲವು ರಾವುತರು, ಪಠಾಣರು ದಿನಕ್ಕೆ 1 ರೂಗೆ ಒಂದು ಪೈಸೆಯಂತೆ

ಬಡ್ಡಿ ಹಾಕುತ್ತಿದ್ದು ಅದು ಬಡ್ಡಿಗೆ ಬಡ್ಡಿಯಾಗಿ ತಿಂಗಳಿಗೆ ಶೇಕಡ 190 ಕ್ಕೆ ಏರುತ್ತಿತ್ತು. 1930 ರಲ್ಲಿ ಕೆಜಿಎಫ್‌ನಲ್ಲಿ 300 ಮಾರವಾಡಿಗಳು ಅಂಗಡಿಗಳನ್ನು ಇಟ್ಟುಕೊಂಡಿದ್ದರು. ಇವರು ಏನಾದರೂ ಮಾಡಿ ಕಾರ್ಮಿಕರಿಗೆ ಸಾಲ ಕೊಟ್ಟು ಅವರನ್ನು ಶೂಲಕ್ಕೆ ಏರಿಸಿಬಿಡುತ್ತಿದ್ದರು. ಕೆಲವೊಮ್ಮೆ ಯಾವುದೇ ಸೆಕ್ಯೂರಿಟಿ ಇಲ್ಲದೆ ಸಾಲ ಕೊಡುತ್ತಿದ್ದರು. ಮಾರವಾಡಿಗಳು ಸಾಲ ಪಡೆದವನು ಮತ್ತು ಆತನ ಗೆಳೆಯರಿಂದಲೂ ಹೆಬ್ಬೆಟ್ಟುಗಳನ್ನು ತೆಗೆದುಕೊಳ್ಳುತ್ತಿದ್ದರು.

ಗಿರಾಕಿಗಳನ್ನು ಹಿಡಿದು ತರಲು ಮತ್ತು ಸಾಲ/ಬಡ್ಡಿಯನ್ನು ವಸೂಲಿ ಮಾಡಲು ಮಾರವಾಡಿಗಳು ಕಾರ್ಮಿಕರಲ್ಲಿಯೆ ಹಲವು ಏಜಂಟರನ್ನು ನೇಮಿಸುತ್ತಿದ್ದರು. ಇವರು ಸಾಲ ಪಡೆದವರ ಎಲ್ಲಾ ರೀತಿಯ ಚಲನವಲನಗಳನ್ನು ತಿಳಿಸುತ್ತಿದ್ದರು. ಇವರು ತೆಗೆದುಕೊಳ್ಳುವ ಸಾಲಕ್ಕೆ ಬಡ್ಡಿ ಸ್ವಲ್ಪ ಕಡಿಮೆ ಬೀಳುತ್ತಿತ್ತು. ಸಾಲ ತೆಗೆದುಕೊಂಡ ಕಾರ್ಮಿಕರು ಓಡಿಹೋದರೆ, ಇಲ್ಲ ಸತ್ತುಹೋದರೆ ಇವರು ಸಾಲದ ಬಿಕ್ಕಟ್ಟಿಗೆ ಸಿಲುಕಿಕೊಳ್ಳುತ್ತಿದ್ದರು. ಮಾರವಾಡಿಗಳು ಕೆಲವರು ಗಿರವಿ ಅಂಗಡಿಗಳಲ್ಲಿ ಸಾಲಕ್ಕೆ ಬದಲಾಗಿ ಚಿನ್ನ, ಬೆಳ್ಳಿ, ಒಡವೆ, ಊಟದ ತಟ್ಟೆ, ಚೆಂಬು, ಪಾತ್ರೆ-ಪಡಗ, ಬಿದಿರು ಟೊಪ್ಪಿಗಳು, ಕಾರ್ಬೈಡ್ ಲ್ಯಾಂಪುಗಳು, ಶೂಗಳು ಕೊನೆಗೆ ಛತ್ರಿ, ಹಳೆ ಬಟ್ಟೆಗಳನ್ನು ಇಟ್ಟುಕೊಳ್ಳುತ್ತಿದ್ದರು. ಕುಡುಕರಿಗೆ ತಾಳಿ ಬೊಟ್ಟುಗಳೆಂದರೆ ಎಲ್ಲಿಲ್ಲದ ಪ್ರೀತಿ, ಮಹಿಳೆಯರು ಏನಾದರೂ ಮಾಡಿ ಬಿಡಿಸಿಕೊಂಡು ಬಂದರೆ ಇವರು ಏನಾದರೂ ನಾಟಕವಾಡಿ ಕೂಡಲೇ ಅದನ್ನು ಅಡ ಇಟ್ಟು ಕುಡಿದುಬರುತ್ತಿದ್ದರು.

ಚೀಫ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಮೈನ್ಸ್, ಬಹದೂರ್ ಮೇಸ್ತ್ರಿ ಮತ್ತು ಒಳ್ಳೆ ಬ್ಲಾಸ್ಟರ್‌ಗಳೆಂದು ನೀಡಿದ ಗೌರವ ಪದಕಗಳನ್ನು ಗಿರವಿ ಅಂಗಡಿಗಳಲ್ಲಿ ಮಾರವಾಡಿಗಳು ಗಂಟುಕಟ್ಟಿ ಇಡುತ್ತಿದ್ದರು. ಕಾರ್ಮಿಕರು ನಿಗದಿತ ಸಮಯದಲ್ಲಿ ಬಿಡಿಸಿಕೊಳ್ಳದಿದ್ದರೆ ಅವುಗಳನ್ನು ಕ್ಲಿಯರನ್ಸ್ ಸೇಲ್‌ನಲ್ಲಿ ಕಡಿಮೆ ಬೆಲೆಗೆ ಮಾರಿಬಿಡುತ್ತಿದ್ದರು.[22]

ಆಶ್ರಯ ಮತ್ತು ಸ್ವಾಸ್ಥ್ಯಪಾಲನೆ :

ಬಂಗಾರಪೇಟೆ ತಾಲೂಕಿನ ಶೇಕಡ 86 ರಷ್ಟು ಜನಸಂಖ್ಯೆ, ಗಣಿ ಕಾಲೋನಿಗಳಲ್ಲಿ, ಉಳಿದವರು ಹತ್ತಿರದ ರಾಬರ್ಟ್‌ಸನ್‌ಪೇಟೆ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ಕ್ಯಾಂಪುಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಕಂಪನಿಗಳಿಂದ ಸ್ಯಾನಿಟರಿ ಇನ್ಸ್‌ಪೆಕ್ಟ್‌ರುಗಳು, ಓವರ್‌ಸೀರ್ಸ್, ಮೇಸ್ತ್ರಿಗಳು, ಜಾಡಮಾಲಿಗಳು ಮತ್ತು ಕಸ ತೆಗೆಯಲು ಎತ್ತಿನ ಬಂಡಿಗಳನ್ನು ನೇಮಿಸಲಾಗಿತ್ತು. ಇದೆಲ್ಲವನ್ನು ನಿಭಾಯಿಸಲು ಕಂಪನಿಗಳು ವರ್ಷಕ್ಕೆ 1,00,000ರೂ. ಖರ್ಚು ಮಾಡುತ್ತಿದ್ದವು. ಒಬ್ಬ ಕಾರ್ಮಿಕನಿಗೆ ವರ್ಷಕ್ಕೆ 8 ರೂ. ಖರ್ಚು ಬೀಳುತ್ತಿತ್ತು. ಇದರ ಜೊತೆಗೆ ಕಾಯಿಲೆಗಳು ಹರಡದಂತೆ

ಔಷಧಿ ಚೆಲ್ಲುವುದು, ಸುಣ್ಣ ಬಳಿಯುವುದು, ಬಂಡಿಗಳನ್ನು ರಿಪೇರಿ ಮಾಡುವುದಕ್ಕೂ ಹಣ ಖರ್ಚಾಗುತ್ತಿತ್ತು. ವಿವರಗಳು ಹೀಗಿವೆ.

(ಅ) (ಆ) (ಇ) (ಈ) (ಉ) (ಊ) (ಋ) (ಎ) (ಏ)

ಐರೋಪ್ಯರು :

327 614 305 61 141 26250 4.06 80–4–0 42–11–0

ಆಂಗ್ಲೋ–ಇಂಡಿಯನ್ನರು :

287 1498 261 12 81 16919 16.21 58–8–0 11–5–0

ಇಂಡಿಯನ್ನರು :

12,866 46054 11492 368 538 103246 84.398–0–0 2–4–0

ಮೊತ್ತ : 13,482 48166 12058 441 760 146415

(ಅ) ಕಾರ್ಮಿಕರ ಸಂಖ್ಯೆ

(ಆ) ಕ್ಯಾಂಪ್‌ಗಳಲ್ಲಿದ್ದ ಜನಸಂಖ್ಯೆ

(ಇ) ಬಂಗಲೆ, ಕ್ವಾರ್ಟರ್ಸ್ ಮತ್ತು ಗುಡಿಸಿಲುಗಳು

(ಈ) ಜನರಿಲ್ಲದ ಗುಡಿಸಿಲುಗಳು

(ಉ) ಸ್ಯಾನಿಟರಿ ಕಾರ್ಮಿಕರ ಸಂಖ್ಯೆ

(ಊ) ಕಂಪನಿ ನೀಡುತ್ತಿದ್ದ ಒಟ್ಟು ಸಂಬಳ

(ಋ) ಕಾರ್ಮಿಕರಿಗೆ ಒಬ್ಬ ಜಾಡಮಾಲಿ

(ಎ) ಒಬ್ಬೊಬ್ಬ ಕಾರ್ಮಿಕನಿಗೆ ತಗಲುತ್ತಿದ್ದ ವೆಚ್ಚ

(ಏ) ಗಣಿ ಪ್ರದೇಶದಲ್ಲಿದ್ದ ಇತರರಿಗೆ ತಗಲುತ್ತಿದ್ದ ವೆಚ್ಚ[23]

ಸ್ಯಾನಿಟರಿ ಅಧಿಕಾರಿಗಳು ಒಂದು ವರ್ಷಕ್ಕೆ ಸರಾಸರಿ 50,000 ಇಲಿಗಳನ್ನು ಹಿಡಿದು ಅಥವಾ ಔಷಧಿ ಹಾಕಿ ಸಾಯಿಸುತ್ತಿದ್ದರು. ಕ್ಯಾಂಪುಗಳಿಂದ ಸಂಗ್ರಹಿಸುತ್ತಿದ್ದ ಕಸವನ್ನು ದೂರ ಸಾಗಿಸಿ ಸುಡುತ್ತಿದ್ದರು ಇಲ್ಲ ಗೊಬ್ಬರ ಮಾಡಿ ಮಾರುತ್ತಿದ್ದರು. ಕ್ಯಾಂಪುಗಳಲ್ಲಿ ಯಾರೇ ಕಾಯಿಲೆ ಬಿದ್ದರೂ ತುರ್ತಾಗಿ ಆಸ್ಪತ್ರೆಗೆ ಸಾಗಿಸಿಬಿಡುತ್ತಿದ್ದರು.

566 ವಿಶಾಲ ಬಂಗಲೆಗಳಲ್ಲಿ ಬ್ರಿಟಿಷರು/ಐರೋಪ್ಯರು, ಕ್ವಾರ್ಟರ್ಸ್‌ಗಳಲ್ಲಿ ಆಂಗ್ಲೋ–

ಇಂಡಿಯನ್ನರು ಮತ್ತು ಕಾರ್ಮಿಕರಿಗೆ 11492 ಗುಡಿಸಿಲುಗಳಿದ್ದವು. ಇವುಗಳಲ್ಲಿ ಸುಮಾರು 1000 ಗುಡಿಸಿಲುಗಳನ್ನು ಸಿಮೆಂಟ್ ಗೋಡೆಗಳಿಂದ ಕಟ್ಟಿ ಮೇಲೆ ಜಿಂಕ್‌ಶೀಟು ಮತ್ತು ಹೆಂಚುಗಳನ್ನು ಹಾಕಿ ಮುಚ್ಚಲಾಗಿತ್ತು. ಇವುಗಳಲ್ಲಿ ಭಾರತೀಯ ಮೂಲದ ಗುಮಾಸ್ತರು ಮತ್ತು ಮೇಲ್ವಿಚಾರಕರಿದ್ದರು. ಉಳಿದ 10492 ಗುಡಿಸಲುಗಳನ್ನು ಬಿದಿರು ದಟ್ಟಿಗಳಿಂದ ನಿಲ್ಲಿಸಿ ಮೇಲೆ ತಗಡುಗಳಿಂದ ಮುಚ್ಚಲಾಗಿತ್ತು.

ಸಾಮಾನ್ಯವಾಗಿ ಗುಡಿಸಿಲಿನಲ್ಲಿ ಒಂದೇ ಒಂದು ಕೋಣೆಯಿದ್ದು ಅದರ ಅಳತೆ 9x9 ಅಡಿ ಇರುತ್ತಿತ್ತು. ಮೈಸೂರು ಮೈನ್ಸ್‌ನ ಗುಡಿಸಿಲು ಮಾತ್ರ 12x9 ಅಡಿ, ಬಾಲ್ಘಾಟ್ ಮೈನ್ಸ್ ಗುಡಿಸಿಲು 10x9 ಅಡಿ ಇದ್ದವು. ಈ ಗುಡಿಸಿಲಲ್ಲೆ ಅಡಿಗೆ, ಊಟ, ಸ್ನಾನ, ನಿದ್ದೆ, ಮಕ್ಕಳ ಓದು ಎಲ್ಲವೂ ನಡೆಯಬೇಕಾಗಿತ್ತು. ಬಿದಿರು ದಟ್ಟಿಗಳ ಮೂಲಕ ಬೀಸುವ ಬಿರುಗಾಳಿಯನ್ನು ತಡೆಯಲು ಸಾಮಾನ್ಯವಾಗಿ ಒಳಗಡೆ ಮಣ್ಣನ್ನು ಮೆತ್ತಿಸಲಾಗುತ್ತಿತ್ತು. ನೆಲವನ್ನು ಸಗಣಿಯಿಂದ ಸಾರಿಸುವುದರಿಂದ ಸ್ವಲ್ಪ ಚನ್ನಾಗಿರುತ್ತಿತ್ತು.

ಕೋಣೆಯ ಮುಖ್ಯ ಸ್ಥಳವೆಂದರೆ ಒಲೆ, ಅದರ ಮೇಲೆ ಯಾವಾಗಲೂ ಒಂದೆರೆಡು ಮಡಿಕೆಗಳು ಕುಳಿತಿರುತ್ತಿದ್ದವು. ದಾರಿಯಲ್ಲಿ ಹೋಗುವವರು ನೋಡದಂತೆ ಮತ್ತು ಗಾಳಿ ಬೀಸದಂತೆ ಗುಡಿಸಿಲು ಮಧ್ಯೆ ಒಂದು ದಟ್ಟಿ ನಿಲ್ಲಿಸಲಾಗಿತ್ತು. ಒಲೆಯ ಮೇಲೆ ಒಂದು ಹಲಗೆಯನ್ನು ಕಟ್ಟಿದ್ದು ಅದರ ಮೇಲೆ ಹಲವು ರೀತಿಯ ಅಡಿಗೆ ಸಾಮಾನುಗಳು ಇನ್ನಿತರ ವಸ್ತುಗಳು ಇರುತ್ತಿದ್ದವು. ಇನ್ನೊಂದು ಕಡೆ ಕಟ್ಟಿರುವ ಒಂದೆರಡು ಹಗ್ಗಗಳೆ ಮನೆಯ ವಾರ್ಡ್‌ರೋಬಾಗಿರುತ್ತಿತ್ತು. ಬಿದಿರು ಟೋಪಿಗಳು ಮತ್ತು ಗಣಿಯ ಒಳಗೆ ಉಪಯೋಗಿಸುವ ಅಸಿತಿಲೀನ್ ಲ್ಯಾಂಪುಗಳು ಅಲ್ಲಿ ಇಲ್ಲಿ ನೇತಾಡುತ್ತಿದ್ದು, ಒಂದೆರಡು ಚಿತ್ರಪಟಗಳು ದಟ್ಟಿಗಳಿಗೆ ತಗಲಿಕೊಂಡಿರುತ್ತಿದ್ದವು. ಬ್ರಿಟಿಷ್ ಅಧಿಕಾರಿಗಳ ಜೊತೆಗೆ ಹಿಡಿದಿರುವ ಛಾಯಾಚಿತ್ರಗಳು ಬಾಗಿಲು ಎದುರಲ್ಲಿ ಕಾಣಿಸುತ್ತಿದ್ದವು.

ಬಾಗಿಲು ಹಿಂದೆ ಒಂದು ಸಣ್ಣ ಕಲ್ಲು ಚಪ್ಪಡಿ ಇದ್ದು ಅದರ ಸುತ್ತಲು ನೀರು ಹರಿಯುವ ಸಣ್ಣ ಕಾಲುವೆ ಮಾಡಲಾಗಿತ್ತು. ಇಲ್ಲಿ ಮನೆಯವರೆಲ್ಲರ ಸ್ನಾನ ಮತ್ತು ಬಟ್ಟೆ ಒಗೆಯುವ ಕೆಲಸ ನಡೆಯುತ್ತಿತ್ತು. ಸ್ನಾನ ಮಾಡುವಾಗ ಯಾರೂ ನೋಡದಂತೆ ಒಂದು ಟವಲೊ ಇಲ್ಲ ಬೆಡ್‌ಶೀಟನ್ನೊ ಇಳಿಬಿಡುತ್ತಿದ್ದರು. ಗುಡಿಸಿಲು ಮೇಲಿನ ತಗಡುಗಳು ಗಾಳಿಗೆ ಹಾರಿಹೋಗದಂತೆ ಮೇಲೆ ಕಲ್ಲುಗುಂಡುಗಳನ್ನಿಟ್ಟು, ಕಂಬಿಗಳಿಂದ ಬಿಗಿದು ಕಟ್ಟಿರುತ್ತಿದ್ದರು. ಹೊಸದಾಗಿ ಮದುವೆಯಾದ ದಂಪತಿಗಳಿಗೆ ಪ್ರತ್ಯೇಕತೆ ಎನ್ನುವುದೇ ಇರುತ್ತಿರಲಿಲ್ಲ. ಕಂಪನಿಗಳು ಮೊದಲಿಗೆ ಒಬ್ಬ ಕಾರ್ಮಿಕನಿಗೆ ಮಾತ್ರ ಈ ಗುಡಿಸಿಲು ಎಂಬುದಾಗಿ ಯೋಚಿಸಿತ್ತು. ಅನಂತರ ಎಷ್ಟೋ ವರ್ಷಗಳಾದರೂ ಕಾರ್ಮಿಕನನ್ನು ಆಶ್ರಯಿಸಿರುವ ಆತನ ಕುಟುಂಬದ ಬಗ್ಗೆ ಯೋಚಿಸಲೇ ಇಲ್ಲ.

ಕೆಲವು ಗುಡಿಸಲುಗಳ ಪಕ್ಕದಲ್ಲಿ ಇನ್ನಷ್ಟು ಸಣ್ಣ ಮಟ್ಟ ಒಪ್ಪಾರಗಳನ್ನು ಹಾಕಿಕೊಂಡಿರುತ್ತಿದ್ದರು. ಮದುವೆಯಾದ ತಮ್ಮ ಹೆಣ್ಣು/ಗಂಡು ಮಕ್ಕಳನ್ನು, ಅವರ ಮಕ್ಕಳನ್ನು ಅದೇ ಗುಡಿಸಿಲಲ್ಲಿ ಇಟ್ಟುಕೊಳ್ಳುತ್ತಿದ್ದರು, ಜೊತೆಗೆ ನೆಂಟರಿಷ್ಟರು ಠಿಕಾಣಿ ಹೂಡುತ್ತಿದ್ದರು. ಗಂಡ-ಹೆಂಡತಿ ಇರುವ ಗುಡಿಸಿಲನ್ನು ಅಕ್ಕ ಪಕ್ಕದವರಿಗೆ, ಮನೆ ಇಲ್ಲದ ಕಾರ್ಮಿಕರಿಗೆ ಬಾಡಿಗೆಗೆ ಕೊಡುತ್ತಿದ್ದರು. ಕೆಲವು ದಿನಗಳು ರಜೆ ಹಾಕಿ ಊರಿಗೆ ಹೋಗುವಾಗಲು ಬಾಡಿಗೆಗೆ ಕೊಡುತ್ತಿದ್ದ ಉದಾಹರಣೆಗಳು ಉಂಟು.

ಬಿಸಿಲು ಕಾಲದಲ್ಲಿ ತಗಡುಗಳಿಂದ ಮುಚ್ಚಿದ ಗುಡಿಸಿಲುಗಳು ಬೆಂಕಿಯಾಗಿ ಉರಿಯುತ್ತಿದ್ದರೆ, ಮಳೆಗಾಲದಲ್ಲಿ ಎಲ್ಲೆಂದರಲ್ಲಿ ನೀರು ಸೋರಿ ಮರದ ಕೆಳಗಿದ್ದಂತೆ ಭಾಸವಾಗುತ್ತಿತ್ತು. ಜೋರಾಗಿ ಗಾಳಿ ಬೀಸಿದರೆ ಗುಡಿಸಿಲುಗಳೆ ಗಾಳಿಗೆ ಹಾರಿಹೋಗುತ್ತಿರುವಂತೆ ಭಾಸವಾಗುತ್ತಿದ್ದು, ಇವುಗಳನ್ನು 'ಪುಷ್ಪಕ್ ವಿಮಾನ' ಗುಡಿಸಿಲುಗಳೆಂದು ಗೇಲಿಮಾಡುತ್ತಿದ್ದರು. ಕಟ್ಟಿದಾಗ ಸ್ವಲ್ಪ ಗಟ್ಟಿಯಾಗಿಯೆ ಇದ್ದ ಇವು ಕೆಲವೇ ವರ್ಷಗಳಲ್ಲಿ ಬಿಸಿಲು ಮಳೆ ಗಾಳಿಗೆ ದುರ್ಬಲವಾಗಿ, ದಟ್ಟಿಗಳಲ್ಲಿ ತೂತುಗಳು ಬೀಳುತ್ತಿದ್ದವು. ಕಂಪನಿಯವರು ಹಳೆ ದಟ್ಟಿಗಳನ್ನು ಕಿತ್ತುಹಾಕಿ ಅಲ್ಲಿ ಹೊಸ ದಟ್ಟಿಗಳನ್ನು ಜೋಡಿಸುತ್ತಿದ್ದರು. ಕೆಲವೊಂದು ಸಲ ಗುಡಿಸಿಲಿನವರೆ ಅವುಗಳನ್ನು ಹಾನಿಗೊಳಿಸುತ್ತಿದ್ದರು. ಪಡ್ಡೆ ವಯಸಿನ ಪ್ರಿಯಕರ-ಪ್ರಿಯತಮೆಯರು ಕತ್ತಲು ರಾತ್ರಿಗಳಲ್ಲಿ ಬಿದಿರು ದಟ್ಟಿಯ ತೂತುಗಳನ್ನು ಇನ್ನಷ್ಟು ಹಿಗ್ಗಿಸಿ ಮಿಲನವಾಗುತ್ತಿದ್ದರು.

ಮಳೆಗಾಲದಲ್ಲಿ ಸೌದೆ ಉರಿಯದೆ ತೊಂದರೆ ಕೊಟ್ಟಾಗ ಮಹಿಳೆಯರು ತಮ್ಮ ಪಕ್ಕದ ಗುಡಿಸಿಲು ದಟ್ಟಿಗಳಿಂದ ಒಂದರೆಡು ದಬ್ಬೆಗಳನ್ನು ಮುರಿದು ತಂದು ಒಲೆಗೆ ಇಡುತ್ತಿದ್ದರು. ಸ್ಯಾನಿಟರಿ ಮೇಲ್ವಿಚಾರಕರು ಕಾಲೋನಿಗಳಿಗೆ ಬಂದಾಗ ತೂತುಗಳನ್ನು ಇನ್ನಷ್ಟು ಹಿಗ್ಗಿಸಿ ರಿಪೇರಿ ಮಾಡಿಕೊಡುವಂತೆ ದುಂಬಾಲು ಬೀಳುತ್ತಿದ್ದರು. ಈ ಗುಡಿಸಿಲುಗಳನ್ನು ಕಟ್ಟುವಾಗ 9x9 ಗುಡಿಸಿಲಿಗೆ 69ರೂ. 12x9ಕ್ಕೆ 125ರೂ. ಮತ್ತು 10x9ಕ್ಕೆ 100ರೂ. ಖರ್ಚಾಗಿತ್ತು. ಅನಂತರ ಅವುಗಳನ್ನು ಜೋಪಾನ ಮಾಡಲು ವರ್ಷಕ್ಕೆ ಕ್ರಮವಾಗಿ ಸರಾಸರಿ 8, 9.6 ಮತ್ತು 10.9ರೂ. ತಗಲುತ್ತಿತ್ತು.

ಈ ಗುಡಿಸಿಲುಗಳಿಗೆ ವಿದ್ಯುತ್ ಸಂಪರ್ಕವಿರಲಿಲ್ಲ. ಹೆನ್ರಿ ಶ್ಯಾಫ್ಟ್ ಲೇನ್ ಮನೆಗಳಿಗೆ ಮಾತ್ರ ವಿದ್ಯುತ್ ದೀಪಗಳಿದ್ದು, ಉಳಿದ ಲೈನ್ ಮನೆಗಳಿಗೆ ದೂರದಲ್ಲಿ ಕೆಲವು ಕಡೆ ಬೀದಿ ದೀಪಗಳಿದ್ದವು. ರಾತ್ರಿಯಾಗಿದ್ದೇ ಕ್ಯಾಂಪ್‌ಗಳೆಲ್ಲ ಕತ್ತಲಲ್ಲಿ ಲೀನವಾಗಿಬಿಡುತ್ತಿದ್ದವು. ಪ್ರಿಯಕರ-ಪ್ರಿಯತಮೆಯರ ಚೆಲ್ಲಾಟಗಳು ಹೇಳತೀರದ ಹಂತಕ್ಕೆ ಹೋಗಿ, ಇದನ್ನು ತಡೆಗಟ್ಟಬೇಕಾದರೆ ಎಲ್ಲಾ ಕಡೆಯೂ ಬೀದಿ ದೀಪಗಳನ್ನು ಹಾಕಬೇಕೆಂದು ಕೆಲವರು ಒತ್ತಾಯಿಸುತ್ತಿದ್ದರು. ಕ್ಯಾಂಪುಗಳಲ್ಲಿ ಯಾವುದೇ ಗಿಡಮರಗಳಿಲ್ಲದೆ ಎಲ್ಲವೂ ಬೋಳುಬೋಳಾಗಿದ್ದು, ಗಾಳಿ ಬೀಸಿದರೆ ಗುಡಿಸಿಲುಗಳು ತತ್ತರಿಸುತ್ತಿದ್ದವು. ಉರಿಗಾಂ

ಕ್ಯಾಂಪ್, ಸಯೆನೈಡ್ ಗುಡ್ಡಗಳ ಪಕ್ಕದಲ್ಲಿಯೆ ಇದ್ದು ಗಾಳಿ ಬೀಸಿದಾಗ, ಇಡೀ ಕಾಲೋನಿ ವಿಷದ ಮಣ್ಣಿನಿಂದ ತುಂಬಿಹೋಗುತ್ತಿತ್ತು. ವಿಷದ ಮಣ್ಣು ಪಾತ್ರೆ ಪಗಡೆ, ಬಟ್ಟೆ, ಕಿವಿ, ಮೂಗು, ಬಾಯಿ ಎಲ್ಲಾ ತುಂಬಿಕೊಳ್ಳುತ್ತಿತ್ತು. ಬಟ್ಟೆ ಅಡ್ಡ ಇಟ್ಟುಕೊಂಡು ಗಂಜಿ ಕುಡಿಯಬೇಕಾಗಿತ್ತು.

ಗಣಿ ಪ್ರದೇಶಗಳನ್ನು ಬಿಟ್ಟು ಹೊರವಲಯದಲ್ಲಿ ಕೂಲಿ ಕಾರ್ಮಿಕರ 11 ಕಾಲೋನಿಗಳಿದ್ದವು. ರಾಬರ್ಟ್‌ಸನ್‌ಪೇಟೆಯ ಪಶ್ಚಿಮಕ್ಕೆ 3, ಉರಿಗಾಂ ಮತ್ತು ಮಸ್ಕಾಂ ಹತ್ತಿರ 4, ಬಲಿಗಾನಹಳ್ಳಿ, ಕ್ರಿಷ್ಣಗಿರಿ, ಪಂಡಾರಂಲೈನ್ ಮತ್ತು ಕೃಷ್ಣಾಪುರಂ ಹೆಸರಿನ ಲೈನುಗಳು ಪೂರ್ಣವಾಗಿ ಖಾಸಗಿ ಒಡೆತನದಲ್ಲಿದ್ದವು. ಇವೆಲ್ಲ ಸ್ಯಾನಿಟರಿ ಬೋರ್ಡ್ ವ್ಯಾಪ್ತಿಯಲ್ಲಿದ್ದರೂ ಕಂಪನಿ ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳಲಿಲ್ಲ. ಇವು ಕಂಪನಿ ಗುಡಿಸಿಲುಗಳಿಗಿಂತ ಸ್ವಲ್ಪ ಉತ್ತಮವಾಗಿದ್ದವು.

ಕಾರ್ಮಿಕರ ದುಡಿತ ಮತ್ತು ಆರೋಗ್ಯ :

ಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರ ಆರೋಗ್ಯ ಹೇಗಿತ್ತು ಎನ್ನುವುದಕ್ಕೆ ಕೆಳಗಿನ ವಿವರಗಳನ್ನು ನೋಡಬಹುದು. ಗಣಿ ಪ್ರದೇಶದಲ್ಲಿ ಐದು ವರ್ಷಗಳಲ್ಲಿ (1925–29) 1000 ಜನಸಂಖ್ಯೆಗೆ ಹುಟ್ಟಿದ ಮಕ್ಕಳ ಸಂಖ್ಯೆ 32.75. ಸತ್ತ ಮಕ್ಕಳ ಸಂಖ್ಯೆ 19.77. ರಾಬರ್ಟ್‌ಸನ್‌ಪೇಟೆಯಲ್ಲಿ 38.4 ಮತ್ತು 23.1, ಬೆಂಗಳೂರಿನಲ್ಲಿ 39.4 ಮತ್ತು 31.4, ಮೈಸೂರಿನಲ್ಲಿ 29.3 ಮತ್ತು 30, ಬಾಂಬೆಯಲ್ಲಿ 23.59 ಮತ್ತು 20.56. ಜರಿಯಾ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ 35.47 ಮತ್ತು 18.28. ಅಂದರೆ ಗಣಿ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಹೆಚ್ಚು ಮಕ್ಕಳು ಸಾಯುತ್ತಿದ್ದರು.[24]

1912ರಲ್ಲಿ ಕೆಜಿಎಫ್ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ಪ್ಲೇಗು ರೋಗ ಕಾಣಿಸಿಕೊಂಡು ಅನೇಕ ಜನರು ಪ್ರಾಣ ಕಳೆದುಕೊಂಡರು. ಎಷ್ಟೋ ಜನರು ತಮ್ಮ ಊರುಗಳಿಗೆ ಓಡಿಹೋದರು. ಅನಂತರ ಈ ಪ್ರದೇಶದಲ್ಲಿ ಪ್ಲೇಗು ಕಾಣಿಸಿಕೊಳ್ಳಲಿಲ್ಲ. ಮೈನಿಂಗ್ ಆಸ್ಪತ್ರೆ ಮತ್ತು ಸ್ಯಾನಿಟರಿ ಬೋರ್ಡ್‌ನವರು ಈ ರೋಗವನ್ನು ತಡೆಗಟ್ಟುವಲ್ಲಿ ಸಫಲರಾಗಿದ್ದರು. ಸ್ಯಾನಿಟರಿ ಬೋರ್ಡ್ ಅಧಿಕಾರಿಗಳು ಯಾವುದೇ ರೀತಿಯ ಕಾಯಿಲೆಗಳು ಹರಡದಂತೆ ಎಚ್ಚರಿಕೆ ವಹಿಸುತ್ತಿದ್ದರು. ಗಣಿ ಪ್ರದೇಶದಲ್ಲಿ ಪ್ಲೇಗು ಹರಡುತ್ತಿದ್ದ ಒಂದೇ ಒಂದು ಇಲಿಯನ್ನು ಬಿಡುತ್ತಿರಲಿಲ್ಲ. 1924ರಲ್ಲಿ 68347 ಮತ್ತು 1928ರಲ್ಲಿ 42190 ಇಲಿಗಳನ್ನು ಸಾಯಿಸಿದ್ದರು. ನಿತ್ಯವೂ ಆರೋಗ್ಯದ ಬಗ್ಗೆ ತಪಾಸಣೆ ನಡೆಸುತ್ತಿದ್ದ ಅಧಿಕಾರಿಗಳು ಯಾವುದೇ ಸಂದೇಹ ಬಂದರೂ ರೋಗಿಗಳನ್ನು ಆಸ್ಪತ್ರೆಗೆ ಸಾಗಿಸಿಬಿಡುತ್ತಿದ್ದರು.

ಅಂಗಡಿಗಳಲ್ಲಿ ಮಾರುವ ಪ್ರತಿಯೊಂದು ವಸ್ತುವಿಗೂ ಅಧಿಕಾರಿಗಳಿಂದ ಅಪ್ಪಣೆ ಪಡೆಯಬೇಕಾಗಿತ್ತು. ಕುರಿ, ಮೇಕೆ, ದನಗಳನ್ನು ಕಡಿಯುವುದಕ್ಕೆ ಮುಂಚೆ ಅಧಿಕಾರಿಗಳು ಅವುಗಳನ್ನು ಪರೀಕ್ಷಿಸಿ ಅಧಿಕೃತ ಮುದ್ರೆ ಒತ್ತುಬೇಕಾಗಿತ್ತು. ಬ್ರಿಟಿಷರು ಮತ್ತು ಆಂಗ್ಲೋ-ಇಂಡಿಯನ್ನರು ಉರಿಗಾಂ ಡೈರಿಯಿಂದ ಉತ್ಕೃಷ್ಟವಾದ ಹಾಲನ್ನು ಪಡೆಯುತ್ತಿದ್ದರು. ಆದರೆ ಕಾರ್ಮಿಕರು ಅದನ್ನು ಕೊಂಡುಕೊಳ್ಳಲಾಗದೆ ಹಳ್ಳಿಗರು ನೀರು ಬೆರೆಸಿ ಮಾರುತ್ತಿದ್ದ ಹಾಲನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಿದ್ದರು.

ಸ್ಯಾನಿಟರಿ ಬೋರ್ಡ್‌ನಲ್ಲಿ ಮಹಿಳಾ ದಾದಿಗಳಿದ್ದು ಅವರು ಕಂಪನಿ ಗುಡಿಸಿಲುಗಳಿಗೆ ಬಂದು ಗರ್ಭಿಣಿ ಮಹಿಳೆಯರು ಮತ್ತು ಮಕ್ಕಳನ್ನು ಪರೀಕ್ಷಿಸಿ ಔಷಧಿಗಳನ್ನು ಕೊಟ್ಟು ಹೋಗುತ್ತಿದ್ದರು. ಕ್ಯಾಂಪುಗಳಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಕ್ಲಿನಿಕ್‌ಗಳು ಇದ್ದವು. ಈ ಕ್ಲಿನಿಕ್‌ಗಳಲ್ಲಿ ಕಾಯಿಲೆಯನ್ನು ವಾಸಿ ಮಾಡಲಾಗದೆ ಹೋದಲ್ಲಿ ಹೆರಿಗೆ ಆಸ್ಪತ್ರೆಗೆ ಅಥವಾ ಸರಕಾರಿ ಆಸ್ಪತ್ರೆಗೆ ರೋಗಿಗಳನ್ನು ಕಳುಹಿಸಿಕೊಡುತ್ತಿದ್ದರು. 1928 ರಲ್ಲಿ ಮಕ್ಕಳು ಮತ್ತು ಮಹಿಳೆಯರಿಗಾಗಿ ತಗುಲಿದ ವೆಚ್ಚ 3378 ರೂ. ಇದರಲ್ಲಿ 2500 ರೂ. ಕಂಪನಿ ಕೊಟ್ಟರೆ ಉಳಿದ 1350 ರೂ. ರೆಡ್‌ಕ್ರಾಸ್ ಸಂಸ್ಥೆ ನೀಡಿತ್ತು.[25] ಗಣಿ ಪ್ರದೇಶದ ಸುತ್ತಲು 1512 ಚದರ ಮೈಲಿ ಪ್ರದೇಶವನ್ನು ಕಾಯಿಲೆಮುಕ್ತ ವಲಯವನ್ನಾಗಿ ಕಾಪಾಡಲಾಗಿತ್ತು. ಬೆಂಗಳೂರು ಮತ್ತು ಮೈಸೂರು ನಗರಗಳಿಗಿಂತ ಹೆಚ್ಚು ಆರೋಗ್ಯಪೂರ್ಣವಾಗಿ ಈ ಪ್ರದೇಶವನ್ನು ರಕ್ಷಿಸುತ್ತಿದ್ದುದಾಗಿ ತಿಳಿದುಬರುತ್ತದೆ.[26]

ಕಾರ್ಮಿಕರ ಕುಡಿತ :

ಆ ಕಾಲದಲ್ಲಿ ಬೀರು ಮೈಸೂರಿನಿಂದ ಬರುತ್ತಿದ್ದರೆ, ಇಂಗ್ಲೆಂಡಿನಿಂದ ಹಲವು ರೀತಿಯ ದುಬಾರಿ ಬೆಲೆಯ ಮದ್ಯ ಬರುತ್ತಿತ್ತು. ತೆಂಗು, ಈಚಲು ಮತ್ತು ನುಂಗು ಮರಗಳಿಂದ ಇಳಿಸಿದ ಕಳ್ಳು ತಮಿಳುನಾಡಿನಿಂದ ಬರುತ್ತಿತ್ತು. ಸಿಲಿಕೋಸಿಸ್ ರೋಗದಿಂದ ನರಳುತ್ತಿದ್ದವರಿಗೆ ವೈದ್ಯರೆ ಕಳ್ಳು ಕುಡಿಯುವಂತೆ ಸಲಹೆ ನೀಡುತ್ತಿದ್ದರು. ಕಳ್ಳು ಕುಡಿಯುತ್ತಿದ್ದ ಕೆಲವರಿಗೆ ರೋಗ ಕಡಿಮೆಯಾಗುತ್ತಿತ್ತು ಎನ್ನುವು ನಂಬಿಕೆಯೂ ಇತ್ತು. ಕಾರ್ಮಿಕರು ಬಡ್ಡಿ ಕಟ್ಟುವುದು ಮತ್ತು ಮದ್ಯಪಾನದಿಂದ ಹೆಚ್ಚು ಹಣವನ್ನು ಕಳೆದುಕೊಳ್ಳುತ್ತಿದ್ದರು. ಮದ್ಯಪಾನ ಮಾಡುತ್ತಿದ್ದ ಕಾರ್ಮಿಕರು ಎಷ್ಟೋ ಅಪರಾಧಗಳನ್ನು ಮಾಡುತ್ತಿದ್ದರು.

1910ರಲ್ಲಿ ರಾಜ್ಯದಲ್ಲಿಯೆ ಹೆಚ್ಚು ಸಾರಾಯಿ ಮಾರಾಟವಾಗುತ್ತಿದ್ದುದ್ದು ಕೆಜಿಎಫ್ ಪ್ರದೇಶದಲ್ಲಿ. 1909-1910ನೇ ವರ್ಷ ಮೈಸೂರು ರಾಜ್ಯದಲ್ಲಿ ಒಬ್ಬ ಮದ್ಯಪಾನಿ ಸರಾಸರಿ 4.67 ದರಾಮ್(daram: ಒಂದು ಗುಟುಕು) ಮದ್ಯ ಸೇವಿಸುತ್ತಿದ್ದ. ಬೆಂಗಳೂರಿನಲ್ಲಿ 52.3 ದರಾಮ್, ಮೈಸೂರಿನಲ್ಲಿ 25.8 ದರಾಮ್ ಕುಡಿದರೆ ಕೆಜಿಎಫ್‌ನಲ್ಲಿ 78.6 ದರಾಮ್ ಕುಡಿದ ದಾಖಲೆ ಇದೆ. ಗಣಿ ಪ್ರದೇಶದಲ್ಲಿ ಆ ಕಾಲಕ್ಕೆ ಒಟ್ಟು 21

ಸಾರಾಯಿ ಮತ್ತು ಹಲವು ಕಳ್ಳು ಅಂಗಡಿಗಳು ಇದ್ದವು. ಅದೇ ವರ್ಷ ಕೆಜಿಎಫ್ ಪ್ರದೇಶದಲ್ಲಿ ವರ್ಷಕ್ಕೆ ಸರಾಸರಿ 26.4 ಸೀರ್ಸ್ (Seer : ಒಂದು ಬುಡ್ಡಿ) ಕುಡಿದರೆ ಬೆಂಗಳೂರಿನಲ್ಲಿ ಒಬ್ಬ ಮದ್ಯಪಾನಿ 8.8 ಸೀರ್ಸ್ ಮತ್ತು ಮೈಸೂರಿನಲ್ಲಿ 7.2 ಸೀರ್ಸ್ ಕುಡಿಯುತ್ತಿದ್ದರು. ಇದರಲ್ಲೂ ಕೆಜಿಎಫ್ ಪ್ರಥಮ ಸ್ಥಾನದಲ್ಲಿತ್ತು. 1928-29ರಲ್ಲಿ ಗಣಿ ಪ್ರದೇಶದಲ್ಲಿ 5 ಸಾರಾಯಿ ಮತ್ತು 12 ಕಳ್ಳು ಅಂಗಡಿಗಳು ಮಾತ್ರ ಇದ್ದವು. ಜೊತೆಗೆ 1 ಗಾಂಜಾ 1 ಅಫೀಮು ಅಂಗಡಿಯೂ ಇತ್ತು. ರಾಬರ್ಟ್‌ಸನ್‌ಪೇಟೆಯಲ್ಲಿ ಸ್ಥಳೀಯ ಬೀರು ಮಾರುವ ಒಂದು ವಿಶೇಷ ಅಂಗಡಿ ಮತ್ತು ವಿಶೇಷ ಮದ್ಯ ಅಂಗಡಿಯೂ ಇತ್ತು. ಇಲ್ಲಿಗೆ ಕಂಪನಿಯ ಅಧಿಕಾರಿಗಳು ಮತ್ತು ಐಶ್ವರ್ಯವಂತರು ಬರುತ್ತಿದ್ದರು.

❖❖❖

ಪ್ರತಿದಿನ ಸಾಯಂಕಾಲ ಮತ್ತು ಸಂಬಳದ ದಿನಗಳು ಕಳ್ಳು, ಸಾರಾಯಿ, ಗಾಂಜಾ ಮತ್ತು ಅಫೀಮು ಅಂಗಡಿಗಳ ಮುಂದೆ ಕುಡುಕರಿಂದ ನಡೆಯುತ್ತಿದ್ದ ಅನಿಷ್ಟಗಳನ್ನು ನೋಡುವುದು ಅಸಹ್ಯಕರವಾಗಿತ್ತು. ದಿನ ಮುಗಿಯುತ್ತಿದ್ದಂತೆ ಬೆಳಕು ಮಾಯವಾಗಿ ವಿದ್ಯುತ್ ದೀಪಗಳು ಅಲಂಕಾರಗೊಂಡು ಜಗಮಗಿಸುವ ಬೆಳಕು ಚೆಲ್ಲುತ್ತಿದ್ದವು. ಈ ಬೆಳಕಿನಲ್ಲಿ ಗಣಿಗಳಿಂದ ಸ್ನಾನಮಾಡದೆ ನೇರವಾಗಿ ಬಂದ ಕಾರ್ಮಿಕರ ಕೈ ಕಾಲು ಮುಖ ಬಟ್ಟೆಗಳ ಮೇಲೆಲ್ಲ ಬೂದು ಬಣ್ಣದ ಕೆಸರು ಮಣ್ಣು ಮೆತ್ತಿಕೊಂಡಿದ್ದು ವಿಚಿತ್ರ ಪ್ರಾಣಿಗಳಂತೆ ಕಾಣಿಸುತ್ತಿದ್ದರು. ತಲೆ ಮೇಲೆ ಅದೇ ಬಣ್ಣದ ಬಿದಿರು ಟೊಪ್ಪಿಗಳು, ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಕುಳಿತು ನಿಂತು ಉಗುಳುತ್ತ ಬೀಡಿ, ಗಾಂಜಾ ಸೇದುತ್ತ ಕಿರಿಚಾಡುತ್ತಾ ಹೊಡೆದಾಡುತ್ತಿರುವ ದೃಶ್ಯಗಳು ಸರ್ವೇಸಾಮಾನ್ಯವಾಗಿದ್ದವು.

ಕೆಲವು ಗಯ್ಯಾಳಿ ಮಹಿಳೆಯರು ಅಂಗಡಿಗಳ ಮುಂದೆ ಕುಳಿತು ಬಾಟಲು ತರದೆ ಬರುವ ಗಂಡಸರಿಗೆ ಒಂದು ಖಾಲಿ ಬಾಟಲನ್ನು 3 ಪೈಸೆ ಬಾಡಿಗೆಗೆ ನೀಡುತ್ತಿದ್ದರು. ಇನ್ನೂ ಕೆಲವು ಮಹಿಳೆಯರು ಮತ್ತು ಗಂಡಸರು ಸೀಮೆಣ್ಣೆ ದೀಪಗಳನ್ನು ಉರಿಸುತ್ತ ಅನೇಕ ರೀತಿಯ ತಿಂಡಿಗಳನ್ನು ಎಣ್ಣೆಯಲ್ಲಿ ಕರಿದು ಮಾರುತ್ತಿದ್ದರು. ಗಾಂಜಾ ಮತ್ತು ಅಫೀಮು ಕುಡಿಯುವ ಕೋಣೆಯದೇ ಒಂದು ವಿಶೇಷ. ಅಲ್ಲಿ ಯಾವ ಸದ್ದೂ ಇಲ್ಲದೆ ಎಲ್ಲವೂ ನಿಶ್ಯಬ್ದವಾಗಿರುತ್ತಿತ್ತು. ಕಿಟಕಿ ಬಾಗಿಲುಗಳನ್ನು ಮುಚ್ಚಲಾಗಿತ್ತು. ಆದರೆ ದೂರದಿಂದಲೆ ಆ ಕೋಣೆಯ ಒಳಗಿನ ಅರೆಬರೆ ಬೆಳಕು ಮತ್ತು ಹೊಗೆಯೊಂದಿಗೆ ಬಿದಿರು ದಟ್ಟಿಗಳ ಸಂದುಗಳಿಂದ ಒಳಗೆ ಅಲ್ಲೇನೋ ನಡೆಯುತ್ತಿರುವಂತೆ ಕಾಣುತ್ತಿತ್ತು. ಬಾಗಿಲು ತೆಗೆದು ನೋಡಿದರೆ ಅವರೆಲ್ಲ ಲಾವಾ ಉಗುಳುತ್ತಿರುವ ಜ್ವಾಲಾಮುಖಿ ಮೇಲೆ ಕುಳಿತಿರುವಂತೆ ತೋರುತ್ತಿತ್ತು. ಮಧ್ಯೆ ಮಧ್ಯೆ ಬುಡ್ಡಿ ದೀಪಗಳು ಬೆಂಕಿಯ ಉಂಡೆಗಳನ್ನು ಉಗುಳುತ್ತಿರವಂತೆ ಕಾಣಿಸುತ್ತಿದ್ದವು.

ಒಂದು ಮೂಲೆಯಲ್ಲಿ ಸನ್ಯಾಸಿಯಂತೆ ತೋರುವ ವಯಸ್ಸಾದ ಮುದುಕನೊಬ್ಬ ಅಫೀಮನ್ನು ಸಣ್ಣ ಸಣ್ಣದಾಗಿ ಉರುಳಿಸಿ ಕುಳಿತಿದ್ದವರಿಗೆ ಒಂದೊಂದನ್ನೆ ನೀಡುತ್ತಿದ್ದ. ತೆಗೆದುಕೊಂಡವರು ಸುತ್ತಲಿದ್ದ ಬೆಂಕಿ ದೀಪಗಳ ಮೇಲೆ ಇಟ್ಟು, ನಿಧಾನವಾಗಿ ಬಾಯಿಗೆ ಇಟ್ಟುಕೊಂಡು ಹೊಗೆಯನ್ನು ಮೂಟೆ ಮೂಟೆಯಾಗಿ ಸುತ್ತಲೂ ಉಗುಳುತ್ತಿದ್ದರು. ಆಗಲೆ ತಲೆಗೆ ಏರಿ ಓಲಾಡುತ್ತಿರುವವರು, ವಿಚಿತ್ರವಾಗಿ ಗೊರಕೆ ಹೊಡೆಯುತ್ತಿರುವವರು, ಕಣ್ಣುಗಳು ಕೆಂಪಗಾಗಿ ರೆಪ್ಪೆಗಳು ಆಡಿಸುವುದನ್ನೇ ಮರೆತುಹೋಗಿದ್ದವರು, ಗೊಣಗಾಡುತ್ತಿದ್ದವರು ಹೀಗೆ ಅನೇಕ ರೀತಿಯಲ್ಲಿ ಅವರು ಅಮಲಿನ ತುತ್ತ ತುದಿಯಲ್ಲಿ ತೇಲಾಡುತ್ತಿದ್ದರು.

ಕಾರ್ಮಿಕನೊಬ್ಬ ಗಣಿಗಳ ಒಳಗೆ ಕಷ್ಟಪಟ್ಟು ದುಡಿದು ಗುಡಿಸಿಲಿಗೆ ಬಂದಾಗ ಅದು ಅವನಿಗೆ ಇನ್ನೊಂದು ನರಕದಂತೆ ತೋರುತ್ತಿತ್ತು. ಗುಡಿಸಿಲಲ್ಲಿ ಅವನಿಗೆ ಯಾವುದೇ ರೀತಿಯ ಆರಾಮ, ಸುಖ ಸಂತೋಷ ದೊರಕುತ್ತಿರಲಿಲ್ಲ. ಮನೆ ತುಂಬಾ ಮಕ್ಕಳು, ನೆರೆಹೊರೆಯಲ್ಲಿ ಯಾವಾಗಲೂ ಗಲಾಟೆ, ಸುತ್ತಲು ಕೊಳಕು ವಾತಾವರಣ. ಇದೆಲ್ಲವನ್ನು ಮರೆಯಲು ಕಾರ್ಮಿಕನಿಗೆ ಸ್ವಲ್ಪ ಆರಾಮ ಬೇಕಾಗಿತ್ತು. ಅದಕ್ಕಾಗಿ ಅವನು ಕಳ್ಳು, ಸಾರಾಯಿ, ಗಾಂಜಾ, ಅಫೀಮು ಅಂಗಡಿಗಳಿಗೆ ಶರಣಾಗಿಬಿಡುತ್ತಿದ್ದ. ಕುಡಿಯುವುದರಿಂದ ಬಡತನವೆ? ಬಡತನದಿಂದ ಕುಡಿತವೆ? ನಾಯಿ ತನ್ನ ಬಾಲಕ್ಕೆ ಕಟ್ಟಿದ ಡಬ್ಬಾದಿಂದ ಓಡುತ್ತಿದೆಯೆ? ಇಲ್ಲ ಬಾಲವೆ ನಾಯಿಯ ಹಿಂದೆ ಓಡುತ್ತಿದೆಯೆ? ಈ ಪ್ರಶ್ನೆಗಳನ್ನು ಕುಡುಕರು ಆಗಾಗ ತಮಗೆ ತಾವೇ ಕೇಳಿಕೊಂಡು ನಗಾಡುತ್ತಿದ್ದರು.

ಕುಡಿಯುವುದನ್ನು ಸ್ವಲ್ಪಮಟ್ಟಿಗೆ ತಪ್ಪಿಸಬೇಕಾದರೆ ಕ್ಯಾಂಪುಗಳಲ್ಲಿ ಒಳ್ಳೆಯ ವಾತಾವರಣ, ಗುಡಿಸಿಲುಗಳ ಸುತ್ತಲು ಸ್ವಚ್ಛತೆಯನ್ನು ನಿರ್ಮಿಸಬೇಕು. ಬಿಸಿಬಿಸಿ ಚಹ ದೊರಕುವ ಅಂಗಡಿಗಳನ್ನು ತೆಗೆಯಬೇಕು. ತೆರೆದ ಬಯಲುಗಳಲ್ಲಿ ಸದಭಿರುಚಿಯ ಸಿನಿಮಾ, ಜ್ಞಾನ ವೃದ್ಧಿಸುವ ಮತ್ತು ರಾಷ್ಟ್ರೀಯ ಕಿರು ಚಿತ್ರಗಳನ್ನು ತೋರಿಸಬೇಕು. ಸಮಯ ಕಳೆಯಲು ಭಜನೆ ಮಂದಿರ ಮತ್ತು ದೇವಾಲಯಗಳನ್ನು ಕಟ್ಟಬೇಕು ಮತ್ತು ಮಕ್ಕಳು ಆಟಗಳಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕೆಂದು ಹಲವರು ಒತ್ತಾಯ ಮಾಡುತ್ತಿದ್ದರು.

1923ರಲ್ಲಿ ಆದಿ ದ್ರಾವಿಡ ಸಂಘಂ, ಸಾರಾಯಿ ಮತ್ತು ಕಳ್ಳು ಅಂಗಡಿಗಳನ್ನು ಕ್ಯಾಂಪ್‌ಗಳಿಂದ 5 ಕಿ.ಮೀ.ದೂರಕ್ಕೆ ಬದಲಿಸಬೇಕೆಂದು ಬೇಡಿಕೊಂಡಾಗ ಸರಕಾರ/ ಅಧಿಕಾರಿಗಳು ಸರಿಯಾದ ಉತ್ತರವನ್ನು ನೀಡಲಿಲ್ಲ. ಆದಿ ದ್ರಾವಿಡ ಸಭೆ ಇದನ್ನು ಪ್ರತಿಭಟಿಸಿದಾಗ ಕುಡಿತ ಸ್ವಲ್ಪ ಕಡಿಮೆಯಾಗಿ ಮಹಿಳೆಯರಿಗೆ ಕೆಲವು ದಿನಗಳು ನೆಮ್ಮದಿ ದೊರಕಿತ್ತು. ಕುಡುಕರು ರಾತೋರಾತ್ರಿ 13 ಕಿ.ಮೀ. ದೂರದ ಬೌರಿಂಗ್‌ಪೇಟೆ, ಸುತ್ತಮುತ್ತಲಿನ ದೂರದ ಹಳ್ಳಿಗಳಿಗೆ ನಡೆದೇ ಹೋಗಿ ಕುಡಿದುಬರುತ್ತಿದ್ದರು.

ಕಾರ್ಮಿಕನೊಬ್ಬ ಹತ್ತಿರದ ಹೊಲಗಮಾದಿ ಹಳ್ಳಿಯಲ್ಲಿ ಭಟ್ಟಿ ಸಾರಾಯಿ ಕುಡಿದು ಕಾಡಿನ ರಸ್ತೆಯಲ್ಲಿ ನಡೆದು ಬರುತ್ತಿದ್ದ. ಪೋಲಿಸ್ ಪೇದೆ ಆತನನ್ನು ಹಿಡಿದು ತಂದು ರಾಬರ್ಟ್‌ಸನ್‌ಪೇಟೆ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಮೂರ್ತಿಗಳ ಮುಂದೆ ನಿಲ್ಲಿಸಿದ. ಪೊಲೀಸ್ ಪೇದೆಯ ಮೂಗಿನ ಮೇಲೆ ಮಚ್ಚೆ ಇದ್ದು ಆತನನ್ನು ಎಲ್ಲರೂ ಮಚ್ಚೆ ಮೂಖನ್ (ಮಚ್ಚೆ ಮೂಗಿನವನು) ಎಂದು ಕರೆಯುತ್ತಿದ್ದರು. ತಮಿಳು ಗೊತ್ತಿಲ್ಲದ ಬಿಳಿ ನ್ಯಾಯಮೂರ್ತಿಗಳು 'ನೀನು ಕುಡಿದಿದ್ದೀಯ?' ಪ್ರಶ್ನಿಸಿದರು. ಆಗ ಅಪರಾಧಿ 'ಘನವೆತ್ತ ನ್ಯಾಯಮೂರ್ತಿಗಳೆ... ಗೌರವಯುತ ನಾಯವಾದಿಗಳೆ ಮತ್ತು ನಾಗರಿಕ ಪ್ರಜೆಗಳೆ... ಎಂದಿನಂತೆ ಈ ದಿನವೂ ನಾನು ಹೊಲಗಮಾದಿ ಹಳ್ಳಿಗೆ ಹೋಗಿ ಚೆನ್ನಾಗಿ ಕುಡಿದು ಸಂತೋಷವಾಗಿ ಹಿಂದುರುಗುತ್ತಿದ್ದೆ. ಬಹಳ ದೂರದಿಂದಲೆ ಮಚ್ಚೆಮೂಖನ್ ನನ್ನನ್ನು ನೋಡಿಬಿಟ್ಟ. ನನಗೆ ಭಯವಾಯಿತು. ನಡುಗಿದೆ... ಭೀತಿಗೊಳಗಾದೆ... ಓಡಲು ಶುರುಮಾಡಿದೆ. ಓಡಿದೆ... ಓಡಿದೆ... ಹಳ್ಳಕೊಳ್ಳಗಳಲ್ಲೆಲ್ಲ ಎದ್ದು ಬಿದ್ದು ಓಡಿದೆ. ಮಚ್ಚೆಮೂಖನು ನನ್ನನ್ನು ಬಿಟ್ಟನೆ? ಹಿಡಿಯಲು ಹಿಂದೆಯೆ ಓಡೋಡಿ ಬಂದ. ನಾನೇನೆ ಕಡಿಮೆಯೆ? ಜಿಂಕೆಯಂತೆ ಓಡಿದೆ. ತಿರುಗಿ ನೋಡಿದೆ? ಹತ್ತಿರ ಬಂದೇಬಿಟ್ಟದ್ದ ಮಚ್ಚೆಮೂಖನು. ಏನು ಮಾಡಲಿ? ಉಸಿರು ಬಿಡದೆ ಓಡಿದೆ. ಬಿಟ್ಟನೆ? ಹಿಡಿದೇಬಿಟ್ಟ. ಹುಲಿಯ ಉಗುರು ಕೈಗಳಿಗೆ ಹುಲ್ಲೆ ಸಿಕ್ಕಿದಂತೆ ಕೊನೆಗೂ ಇವನ ಕೈಗಳಿಗೆ ಸಿಕ್ಕಿಕೊಂಡೆ. ಸಿಕ್ಕಿದ್ದೆ ಕೈಯಲ್ಲಾದಷ್ಟು ಹೊಡೆದ, ಕಾಲಿನಲ್ಲಾದಷ್ಟು ಒದ್ದ, ತಿವಿದು ತಿವಿದು ಪೊಲೀಸ್ ವ್ಯಾನಿನೊಳಕ್ಕೆ ತಳ್ಳಿದ. ಇಗೋ ಕುಡಿದ ಅಪರಾಧಿಯಾಗಿ ನಿಮ್ಮ ಮುಂದೆ ನಿಂತಿದ್ದೇನೆ. ನಾನು ಕುಡಿದಿದ್ದು ನಿಜ. ದಂಡನೆ ಯಾವುದೇ ಆದರೂ ಸರಿ ಸ್ವೀಕರಿಸುತ್ತೇನೆ ಮಹಾಸ್ವಾಮಿಗಳೆ...'

ಅಪರಾಧಿ ಸ್ವಾರಸ್ಯಕರವಾಗಿ ಈ ರೀತಿ ತನ್ನ ನಿವೇದನೆಯನ್ನು ನ್ಯಾಯಮೂರ್ತಿಗಳ ಮುಂದೆ ತೋಡಿಕೊಂಡಿದ್ದ. ಅವನ ಮಾತುಗಳನ್ನು ಕೇಳಿದವರೆಲ್ಲ ನ್ಯಾಯಾಯದಲ್ಲಿ ಜೋರಾಗಿ ನಗುತ್ತಿದ್ದಂತೆ ತಮಿಳು ಗೊತ್ತಿಲ್ಲದ ನ್ಯಾಯಮೂರ್ತಿಗಳು ಆಶ್ಚರ್ಯದಿಂದ 'ವಾಟ್ ಹೀ ಸೇಸ್' ಎಂದು ಪ್ರಶ್ನಿಸಿದರು. ನ್ಯಾಯವಾದಿಯೊಬ್ಬರು 'ನಾಟಕದ ರೀತಿ ಡೈಲಾಗ್ಸ್ ಮೂಲಕ ತಾನು ಕುಡಿದಿರುವುದನ್ನು ಒಪ್ಪಿಕೊಂಡಿದ್ದಾನೆ ಸ್ವಾಮಿ. ಇವನೊಬ್ಬ ಪ್ರಖ್ಯಾತ ನಾಟಕಕಾರ' ಎಂದರು. ನ್ಯಾಯಮೂರ್ತಿಗಳು 1ರೂ. ದಂಡ ನೀಡಿ ಅಪರಾಧಿಗೆ ಹೋಗುವಂತೆ ಆದೇಶಿಸಿದ್ದೆ, ಅಪರಾಧಿ ದಂಡ ನೀಡಿ ಮತ್ತೆ ಸಂತೋಷದಿಂದ ಹೊಲಗಮಾದಿಯ ಕಡೆಗೆ ನಡೆದು ಹೋದನಂತೆ.

❖❖❖

ಗಣಿ ಪ್ರದೇಶದಲ್ಲಿ ಸಾರಾಯಿ ದೊರಕದ ಕಾರಣ ಮನೆಗಳಲ್ಲೆ ಅಕ್ಕಿಯನ್ನು ನೀರಿನಲ್ಲಿ ರಾತ್ರಿಯೆಲ್ಲ ನೆನೆಸಿ ಅದಕ್ಕೆ ಯಾವುದೊ ಗಿಡಮೂಲಿಕೆಗಳ ಬೇರುಗಳನ್ನು

ಸೇರಿಸಿ ಮತ್ತು ಬರಲು ಕುಡಿಯುತ್ತಿದ್ದರು. ವಾರ್ನಿಶ್‌ಗೆ ನೀರು, ಉಪ್ಪು, ಹುಣಸೆ ಹಣ್ಣು ಬೆರೆಸಿದರೆ ಅದು ಸ್ಪಿರಿಟ್ ಆಗಿ ಬೇರ್ಪಡುತ್ತಿತ್ತು. ಅದನ್ನು 'ಕಲ್‌ಕಲ್' ಎಂದು ಕುಡಿಯುತ್ತಿದ್ದರು. ಕೆಲವರು ಮಿತಿಲೇಟೆಡ್ ಸ್ಪಿರಿಟ್ ಕುಡಿದಾಗ ಬಾಯಲ್ಲಿ ಹೊಗೆ ಬರುತ್ತಿತ್ತು. ಆ ಸಮಯದಲ್ಲಿ ಮರೆತು ಬೀಡಿ ಹೊತ್ತಿಸಿಕೊಂಡು ಹೊಗೆ ಎಳೆದರೆ ಬಾಯಲ್ಲ ಬೆಂಕಿ ಹೊತ್ತುಕೊಂಡುಬಿಡುತ್ತಿತ್ತು. ಇನ್ನೂ ಕೆಲವರು ಕೆಳಗೆ ಬಿಸಾಕಿದ ಪ್ಯಾಷಿಂಗ್‌ಶೋ ಸಿಗರೇಟ್ ತುಂಡುಗಳನ್ನು ಸಂಗ್ರಹಿಸಿ ನೀರಿನಲ್ಲಿ ನೆನೆಸಿ ಅದಕ್ಕೆ ಸಕ್ಕರೆ ಹಾಕಿ ಕುಡಿಯುತ್ತಿದ್ದರಂತೆ. ಇದೆಲ್ಲದರಲ್ಲೂ ಸಂಶೋಧನೆ ನಡೆಸಿದ ಕುಡುಕರು ಕೊನೆಗೆ ಕೆಜಿಎಫ್‌ನಲ್ಲಿ ಭಟ್ಟಿ ಸಾರಾಯಿ ಇಳಿಸುವುದನ್ನು ಸಂಶೋಧಿಸಿದ್ದರು. ಇದರಲ್ಲಿ ಬೆಲ್ಲ, ಕೊಳೆತ ಬಾಳೆಹಣ್ಣು, ಆಲೂಗಡ್ಡೆ, ದ್ರಾಕ್ಷಿ, ಮರದ ಹೊಟ್ಟು, ಬೆಂಕಿಪುಳ್ಳು, ಮದ್ದು, ಬ್ಯಾಟರಿ ಸೆಲ್ಲುಗಳು, ನವಸಾಗರ, ಅಮೋನಿಯ ಮತ್ತು ಪ್ರಾಣಿಗಳ ತಲೆ ಬುರುಡೆಗಳನ್ನು ಹಾಕುತ್ತಿದ್ದರು.

ಇದನ್ನೆಲ್ಲ 13 ದಿನಗಳ ಕಾಲ ಭೂಮಿಯ ಒಳಗೆ ಹೂತಿಟ್ಟು ಅನಂತರ ಬಟ್ಟಿ ಇಳಿಸಿ ಕುಡಿಯುತ್ತಿದ್ದರು.[27] 1954ರಲ್ಲಿ ಡಾ. ಅಂಬೇಡ್ಕರ್ ಬಹಳ ಉತ್ಸಾಹದಿಂದ ದಲಿತ ಕಾರ್ಮಿಕರನ್ನು ನೋಡಲು ಕೆಜಿಎಫ್‌ಗೆ ಬಂದಿದ್ದರು. ಅವರನ್ನು ಸುತ್ತುವರಿದ ಕಾರ್ಮಿಕರು ಬಹಳ ಅನಾಗರಿಕರಾಗಿ ನಡೆದುಕೊಂಡಿದ್ದರು. ಅಂದರೆ ಅವರ ಮಾತುಗಳನ್ನು ಯಾರೂ ಕೇಳದೆ ಅವರನ್ನು ರಥದಲ್ಲಿ ಕೂರಿಸಿಕೊಂಡು ಅವರ ಮುಂದೆ ವಾದ್ಯಗಳನ್ನು ಬಾರಿಸುತ್ತ, ಪಟಾಕಿಗಳನ್ನು ಸಿಡಿಸುತ್ತ, ಕುಣಿಯುತ್ತ ಕುಪ್ಪಳಿಸುತ್ತ ಸಾಗಿದ್ದರು. ಅಂಬೇಡ್ಕರ್ ಅವರು ಇದೆಲ್ಲವನ್ನು ನೋಡಲಾಗದೆ ಕೋಪದಿಂದ ಮುಂಬೈಗೆ ಹಿಂದಿರುಗಿದ್ದರು. ಅಂಬೇಡ್ಕರ್ ಮುಂಬೈನಲ್ಲಿ ರಿಪಬ್ಲಿಕನ್ ಪಕ್ಷವನ್ನು ಸ್ಥಾಪಿಸಿದ ಮೇಲೆ ಅವರನ್ನು ನೋಡಿ ಸಲಹೆ ಕೇಳಲು ಗಣಿಗಳ ಕಾರ್ಮಿಕ ನಾಯಕರು ಕೆಲವರು ಮುಂಬೈ ತಲುಪಿದರು. ಇವರನ್ನು ತಮ್ಮ ಕಛೇರಿಯಲ್ಲಿ ನೋಡಿದ್ದೆ ಕೆಂಡಮಂಡಲವಾದ ಅಂಬೇಡ್ಕರ್ ಅವರು 'You black donkeys get out of here, you betrayed my people' ಎಂದು ಕೋಣೆಯಿಂದ ಹೊರಕ್ಕೆ ಓಡಿಸಿದರಂತೆ.[28]

ಸಿಲಿಕೋಸಿಸ್/ನೀಮೊಕೋನಿಯಾಸಿಸ್ :

1940ರ ತನಕ ಸಿಲಿಕೋಸಿಸ್ ಕಾಯಿಲೆಯಿಂದ ಸಾಯುತ್ತಿದ್ದ ಕಾರ್ಮಿಕರಿಗೆ ಯಾವುದೇ ರೀತಿಯ ವೈದ್ಯಕೀಯ ಸವಲತ್ತುಗಳು ದೊರಕುತ್ತಿರಲಿಲ್ಲ. ಅಂತಹ ಸಮಯದಲ್ಲಿ ಮೈಸೂರು ಸರಕಾರದ ಸಿವಿಲ್ ಅಧಿಕಾರಿಯೊಬ್ಬರು ಪ್ರಯತ್ನಪಟ್ಟರೂ ಕಂಪನಿಗಳ ಮುಖ್ಯ ವೈದ್ಯಾಧಿಕಾರಿ ರಾಲ್ಫ್ ನೇವಿ 'ಇದು ಸಿಲಿಕೋಸಿಸ್ ಅಲ್ಲ' ಎಂದಿದ್ದರು. ಇದಕ್ಕೆ ಸಿವಿಲ್ ಅಧಿಕಾರಿ 'ನೀವು ಹೇಳುವುದು ಸುಳ್ಳು, ಕಾರ್ಮಿಕರು ರಕ್ತ

ಕಕ್ಕುವುದನ್ನು ಆಸ್ಪತ್ರೆ, ರೈಲು ನಿಲ್ದಾಣ, ಗುಡಿಸಿಲುಗಳ ಮುಂದೆ ನೋಡುತ್ತಿಲ್ಲವೆ?' ಎಂದಾಗ 'ಈ ಕಾಯಿಲೆಗೆ ಸಹಾಯ ಧನ ನೀಡಿದರೆ ಕಂಪನಿ ಮುಚ್ಚುಬೇಕಾಗುತ್ತೆ' ಎಂದರಂತೆ. ಅದಕ್ಕೆ ಆ ಅಧಿಕಾರಿ 'ಅದನ್ನೇ ಮಾಡಿ' ಎಂದು ಕೂಗಿದ್ದರಂತೆ.

ಇದರ ವಿಷಯ ಕಾರ್ಮಿಕರಿಗೆ ತಿಳಿದರೆ ತೊಂದರೆಯಾಗುತ್ತದೆ, ವರದಿಯನ್ನು ತೋರಿಸದೆ ಹೋದರೂ ಸಂದೇಹ ಬರುತ್ತದೆ ಎಂದು ಕಂಪನಿಗಳ ಮುಖ್ಯ ಎಗ್ಸಿಕ್ಯೂಟಿವ್ ಅಧಿಕಾರಿ ಕೆನ್ನತ್ ಬಿ ಟೇಲರ್ ಇದರ ಬಗ್ಗೆ ಏನು ಮಾಡಬೇಕೆಂದು ಮೈಸೂರು ಸರಕಾರದ ದಿವಾನರನ್ನು ಭೇಟಿ ಮಾಡಿ ವರದಿಯಲ್ಲಿ 2 ಭಾಗಗಳಿದ್ದು ಒಂದು ಭಾಗವನ್ನು ಮಾತ್ರ ಪ್ರಕಟಿಸುವುದಾಗಿ ತಮ್ಮ ಇಂಗಿತವನ್ನು ತಿಳಿಸಿದರಂತೆ. ಅನಂತರ ಪ್ರಕಟವಾದ ಹೊಸ ವರದಿಯಲ್ಲಿ ಸಿಲಿಕೋಸಿಸ್‌ನ ಬಗ್ಗೆ ಪ್ರಸ್ತಾಪವೇ ಇರಲಿಲ್ಲ.[29] 1930–1940ರ ನಡುವೆ 1824 ಸಿಲಿಕೋಸಿಸ್ ದೂರುಗಳು ಪತ್ತೆಯಾಗಿದ್ದವು. ಈ ರೋಗ ಅತ್ಯಂತ ಅಪಾಯಕಾರಿ ಹಂತದಲ್ಲಿದ್ದಾಗ ಮಾತ್ರ ವೈದ್ಯರು ವೈದ್ಯಕೀಯ ಪರೀಕ್ಷೆ ಮಾಡಿ ಮೆಡಿಕಲ್ ಸರ್ಟಿಫಿಕೇಟ್ ನೀಡುತ್ತಿದ್ದರು. ವೈದ್ಯರು ಮತ್ತು ರೋಗಿಗಳ ಮಧ್ಯೆ ವಿವಾದ ಬಂದಾಗ ಅಂತಹ ದೂರುಗಳನ್ನು ಮೈಸೂರು ಸಿಲಿಕೋಸಿಸ್ ಕಾನೂನು 32ರ ಪ್ರಕಾರ ಮೈಸೂರು ಮೆಡಿಕಲ್ ಬ್ಯೂರೊಗೆ ಕಳುಹಿಸಿಕೊಡುತ್ತಿದ್ದರು.

ಗಣಿಗಳು ಪ್ರಾರಂಭವಾದ 54 ವರ್ಷಗಳವರೆಗೂ (ಕ್ರಿ.ಶ. 1934) ಕಾರ್ಮಿಕರಲ್ಲಿ ಕಾಣಿಸಿಕೊಳ್ಳುತ್ತಿದ್ದ ರೋಗಗಳ ಬಗ್ಗೆ ಕಂಪನಿಗಳು ಯಾವುದೇ ಸಂಶೋಧನೆಗಳನ್ನು ನಡೆಸದೆ ಹೋಗಿದ್ದು ಸೋಜಿಗ ಉಂಟುಮಾಡುತ್ತದೆ. ದಕ್ಷಿಣ ಆಫ್ರಿಕಾದ ರ್‍ಯಾಂಡ್ ಚಿನ್ನದ ಗಣಿಗಳಲ್ಲಿ ಕಾರ್ಮಿಕರ ಆರೋಗ್ಯದ ಬಗ್ಗೆ 1934ನೇ ವರ್ಷಕ್ಕಿಂತ ಮುಂಚೆಯೆ ಸಂಶೋಧನೆಗಳು ನಡೆದಿದ್ದವು. ಈ ಎರಡೂ ಗಣಿಗಳ ಪರಿಸರ ಹೆಚ್ಚು ಕಡಿಮೆ ಒಂದೇ ರೀತಿಯವು. ಆದರೆ ರ್‍ಯಾಂಡ್ ಗಣಿಗಳ ಶಿಲೆಗಳಿಗಿಂತ ಕೆಜಿಎಫ್ ಶಿಲೆಗಳಲ್ಲಿ ಉತ್ಪತ್ತಿಯಾಗುತ್ತಿದ್ದ ಧೂಳು ಕಾರ್ಮಿಕರ ಮೇಲೆ ದುಷ್ಪರಿಣಾಮ ಬೀರುತ್ತಿತ್ತು.

ರ್‍ಯಾಂಡ್ ಗಣಿಗಳು 1886ರಲ್ಲಿ ಪ್ರಾರಂಭವಾಗಿದ್ದು ಅಲ್ಲಿ 1892 ರಿಂದಲೂ ಶಿಲೆಗಳನ್ನು ಡ್ರಿಲ್ ಮಾಡಲಾಗುತ್ತಿತ್ತು. ಈ ಗಣಿಗಳಲ್ಲಿ ಪ್ರಾರಂಭದಲ್ಲಿಯೆ ಗಣಿ ಕಾರ್ಮಿಕರಲ್ಲಿ ಅದರಲ್ಲೂ ಡ್ರಿಲ್ಲರ್‌ಗಳಲ್ಲಿ 'ಮೈನರ್ಸ್‌ಥೀಸ್' ಎನ್ನುವ ಕಾಯಿಲೆ ಕಾಣಿಸಿಕೊಂಡಿತು. 1901ರ ಸುಮಾರಿಗೆ ವರ್ಷಕ್ಕೆ ಸರಾಸರಿ 1000 ಕಾರ್ಮಿಕರ ಪೈಕಿ 73 ಕಾರ್ಮಿಕರು ಈ ಕಾಯಿಲೆಯಿಂದ ಪ್ರಾಣ ಕಳೆದುಕೊಳ್ಳುತ್ತಿದ್ದರು. 1911ರ ಹೊತ್ತಿಗೆ ಶೇಕಡ 25 ಕಾರ್ಮಿಕರಲ್ಲಿ ಈ ಕಾಯಿಲೆ ಕಾಣಿಸಿಕೊಳ್ಳತೊಡಗಿತು. ಹೊಸದಾಗಿ ಸೇರಿದ ಕಾರ್ಮಿಕರಲ್ಲಿ 2 ವರ್ಷಗಳಲ್ಲಿಯೆ ಈ ಕಾಯಿಲೆ ಕಾಣಿಸಿಕೊಂಡಿತು. ಅಂದಿನ 'ಮೈನರ್ಸ್‌ಥೀಸ್' ಕಾಯಿಲೆಯನ್ನು ಅನಂತರ ಸಿಲಿಕೋಸಿಸ್ ಎಂದು ಕರೆಯಲಾಯಿತು.

ಸುರಂಗಗಳ ಒಳಗೆ ಕೆಲಸ ನಿರ್ವಹಿಸುವ ಎಲ್ಲರಲ್ಲೂ ಈ ಕಾಯಿಲೆ ಕಾಣಿಸಿಕೊಂಡರೂ, ಶಿಲೆಗಳನ್ನು ಡ್ರಿಲ್ ಮಾಡುವವರು ಬೇಗನೆ ಈ ಕಾಯಿಲೆಗೆ ತುತ್ತಾಗುತ್ತಿದ್ದರು. ರ್‍ಯಾಂಡ್ ಗಣಿಗಳಲ್ಲಿನ ಈ ಕಾಯಿಲೆಯನ್ನು ಕಂಡುಕೊಂಡ ಮೇಲೆ ಪ್ರಪಂಚದ ಇತರ ಗಣಿಗಳಲ್ಲಿ ಈ ಕಾಯಿಲೆ ಬಗ್ಗೆ ಗಮನ ಇಡಲಾಯಿತು. ಕೆಜಿಎಫ್‌ನಲ್ಲಿ ಚಿನ್ನ ಕ್ವಾರ್ಟ್ಝ್ (ಬೆಣಚು ಶಿಲೆ) ರೀಫ್‌ನಲ್ಲಿ ದೊರಕುತ್ತಿದ್ದು ಕ್ವಾರ್ಟ್ಝ್ ಶಿಲಾಪುಡಿಯಿಂದ ಸಿಲಿಕೋಸಿಸ್ ಕಾಯಿಲೆ ಬರುವುದಿಲ್ಲ ಎಂಬುದಾಗಿ ನಂಬಲಾಗಿತ್ತು. 1933ರಲ್ಲಿ ಪ್ರೊ. ಡಬ್ಲ್ಯೂ.ಆರ್. ಜೋನ್ಸ್ ಕೆಜಿಎಫ್‌ನಲ್ಲಿ ಸಿಲಿಕೋಸಿಸ್ ಮೇಲೆ ಸಂಶೋಧನೆ ನಡೆಸಿ ಇದನ್ನು 'ಪ್ರಿಸಿಲಿಕಾ ತ್ಯಾಲಸಿ' ಎಂದರು. ಅಂದರೆ ರ್‍ಯಾಂಡ್ ಗಣಿಗಳಲ್ಲಿ ಸೆರಿಸೈಟ್ ಅಥವಾ ಸೆಕೆಂಡರಿ ಬಿಳಿ ಮೈಕಾ ಶಿಲೆಗಳಿದ್ದು ಕೆಜಿಎಫ್‌ನಲ್ಲಿ ಈ ಶಿಲೆಗಳು ಇರಲಿಲ್ಲ. ಹಾಗಾಗಿ ಸಿಲಿಕೋಸಿಸ್ ಕಾಯಿಲೆ ಕೆಜಿಎಫ್ ಕಾರ್ಮಿಕರಲ್ಲಿ ಕಾಣಿಸುವುದಿಲ್ಲ ಎಂದು ಜೋನ್ಸ್ ತಿಳಿಸಿದ್ದರು.

ಆದರೆ ಇತರ ವಿಜ್ಞಾನಿಗಳು ಇವರ ಸಂಶೋಧನೆಗಳನ್ನು ಒಪ್ಪಿಕೊಳ್ಳಲಿಲ್ಲ. ಕಾರ್ಮಿಕರ ಮೇಲೆ ಹೆಚ್ಚು ಅಪಾಯಕಾರಿ ರೋಗಗಳು ದಾಳಿ ಮಾಡಿದ್ದರೂ ನಿಜವಾದ ಕಾರಣಗಳನ್ನು ಸರಿಯಾಗಿ ಸಂಶೋಧನೆಗೆ ಒಳಪಡಿಸಲಿಲ್ಲ ಎಂಬುದಾಗಿ ವಾದಿಸಿದರು. 1915ರ ಹೊತ್ತಿಗೆ ಕೆಜಿಎಫ್ ಮೈನಿಂಗ್ ಆಸ್ಪತ್ರೆಯಲ್ಲಿ ಕ್ಷ-ಕಿರಣ ಸ್ಥಾಪಿಸಿಲಾಯಿತು. ಕಾರ್ಮಿಕರು ನರಳುತ್ತಿದ್ದ ಉಸಿರುಗೂಡಿನ ರೋಗ ಯಾವುದೆಂದು ಕ್ಷ-ಕಿರಣದಿಂದಲೂ ಗುರುತಿಸಲಾಗಲಿಲ್ಲ. ಆದರೆ 1934ರಲ್ಲಿ ವಿಶೇಷ ಕ್ಷ-ಕಿರಣ ಪರದೆಯನ್ನು ಸ್ಥಾಪಿಸಿ ರೋಗಿಗಳ ಉಸಿರುಗೂಡಿನ ಮೇಲೆ ಹಾಯಿಸಲಾಯಿತು. ಆಗಲೂ ಕೆಜಿಎಫ್ ಕಾರ್ಮಿಕರು ಯಾವ ರೋಗಗಳಿಂದ ನರಳುತ್ತಿದ್ದರು ಎನ್ನುವುದನ್ನು ನಿಖರವಾಗಿ ಹೇಳಲಾಗಲಿಲ್ಲ.

ಕಾರ್ಮಿಕರ ಉಸಿರುಗೂಡಿನ ಮೇಲೆ ಕುಳಿತಿದ್ದ ಅತ್ಯಂತ ಸಣ್ಣ ಕಣಗಳು ಕ್ಷ-ಕಿರಣ ಪರದೆಯ ಮೇಲೆ ಕಾಣದೇ ಹೋಗಿದ್ದವು. ಈ ರೋಗವನ್ನು ಅನಂತರ ನೀಮೊಕೋನಿಯಾಸಿಸ್ ಎಂದು ಗುರುತಿಸಲಾಯಿತು. ಶಿಲಾಧೂಳಿನ ಸಣ್ಣ ಕಣಗಳು ಮೊದಲಿಗೆ ಗಾಳಿಯ ಮೂಲಕ ಉಸಿರುಗೂಡನ್ನು ಪ್ರವೇಶಿಸಿ ಉಸಿರುಗೂಡಿನ ಮೇಲೆ ಕುಳಿತುಕೊಳ್ಳುತ್ತವೆ. ಅನಂತರ ನಿಧಾನವಾಗಿ ಆ ಕಣಗಳ ಸುತ್ತಲು ಫೈಬ್ರಸ್ ಟಿಸ್ಯೂ ಬೆಳೆಯುತ್ತ ಹೋಗುತ್ತದೆ. ಅದು ಮುಂದೆ ಉಸಿರುಗೂಡಿನ ಮೇಲೆ ಹಲವು ರೀತಿಯ ತೊಂದರೆಗಳನ್ನು ಸೃಷ್ಟಿಸುತ್ತದೆ. 1907ರಲ್ಲಿ ಆಸ್ಟ್ರೇಲಿಯಾ, 1912ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಎದೆ ರೇಡಿಯಾಗ್ರಾಪ್ ಕ್ಷ-ಕಿರಣವನ್ನು ಪರಿಚಯಿಸಲಾಯಿತು. ಈ ಸಲಕರಣೆಗಳು ಅತ್ಯಂತ ಆಧುನಿಕವಾಗಿದ್ದು ಅವು 1940 ರವರೆಗೂ ಮುಂದುವರೆದಿದ್ದವು. ಮೈಸೂರು ಸರಕಾರ 1934ನೇ ವರ್ಷ ಒಂದು ವೈದ್ಯಕೀಯ ಸಮಿತಿಯನ್ನು ಸ್ಥಾಪಿಸಿ, ಗಣಿ

ಕಾರ್ಮಿಕರಲ್ಲಿ ನಿಜವಾಗಿಯೂ ಸಿಲಿಕೋಸಿಸ್ ರೋಗ ಇದೆಯೆ? ಅಥವಾ ಇಲ್ಲವೆ? ಎನ್ನುವುದನ್ನು ಕಂಡುಹಿಡಿಯಲು ಆದೇಶ ನೀಡಿತು. ಅದೇ ವರ್ಷ ಗಣಿ ಆಸ್ಪತ್ರೆಯಲ್ಲಿ ಒಂದು ಆಧುನಿಕ ಕ್ಷ-ಕಿರಣ ಯಂತ್ರವನ್ನು ಅಳವಡಿಸಲಾಯಿತು. ಇದು ವಿಶೇಷವಾಗಿ ಚೆಸ್ಟ್ ರೇಡಿಯೋಗ್ರಾಫ್‌ನ್ನು ಹೊಂದಿತ್ತು.

ವೈದ್ಯಕೀಯ ಸಮಿತಿ ಸಂಶೋಧನೆ ನಡೆಸಿ ಗಣಿ ಕಾರ್ಮಿಕರಲ್ಲಿ ಸಿಲಿಕೋಸಿಸ್ ರೋಗ ಇರುವುದಾಗಿ ತಿಳಿಸಿತು. ಆಫ್ರಿಕಾ ಗಣಿ ಕಾರ್ಮಿಕರು ಮತ್ತು ಕೆಜಿಎಫ್ ಕಾರ್ಮಿಕರ ನಡುವಿನ ವ್ಯತ್ಯಾಸವೆಂದರೆ ಕೆಜಿಎಫ್ ಕಾರ್ಮಿಕರಲ್ಲಿ ಸಿಲಿಕೋಸಿಸ್ ಇದ್ದು ಅದು ನಿಧಾನವಾಗಿ ಕೆಲವು ವರ್ಷಗಳ ನಂತರ ಕಾಣಿಸಿಕೊಂಡರೆ ದಕ್ಷಿಣ ಆಫ್ರಿಕಾದಲ್ಲಿ ಅದು ಬಹುಬೇಗನೆ ಹರಡಿಕೊಳ್ಳುತ್ತಿತ್ತು. ಕ್ಷ-ಕಿರಣ ಮತ್ತು ಚರ್ಮ ರೋಗಗಳಲ್ಲದೆ ಇತರ ರೋಗಗಳ ಮೇಲೆಯೂ ಸಂಶೋಧನೆಗಳನ್ನು ನಡೆಸಿ ತೀರ್ಮಾನಿಸಲಾಯಿತು. 1937ನೇ ವರ್ಷದ ಹೊತ್ತಿಗೆ ಇನ್ನಿತರ ಸಂಶೋಧನೆಗಳಿಂದ ಕಾರ್ಮಿಕರಲ್ಲಿ ನೀಮೊಕೋನಿಯಾಸಿಸ್ ರೋಗ ಇರುವುದಾಗಿ ಗುರುತಿಸಲಾಯಿತು. ದಕ್ಷಿಣ ಆಫ್ರಿಕಾದ ಕಾರ್ಮಿಕರಿಗೆ ದೊರಕುತ್ತಿದ್ದ ಸವಲತ್ತುಗಳನ್ನು ಕೆಜಿಎಫ್ ಕಾರ್ಮಿಕರಿಗೂ ಅಳವಡಿಸಿ ರೋಗದ ತೀವ್ರತೆಯ ಆಧಾರದ ಮೇಲೆ ಅವರಿಗೆ ಸವಲತ್ತುಗಳನ್ನು ನಿಗದಿಪಡಿಸಲಾಯಿತು.

1940-46ರ ನಡುವೆ 7653 ರೋಗಿಗಳನ್ನು ತಪಾಸಣೆಗೆ ಒಳಪಡಿಸಿ 60 ರೋಗಿಗಳ ಉಸಿರುಗೂಡಿನ ಸ್ಯಾಂಪಲ್‌ಗಳನ್ನು ಸಂಶೋಧಿಸಿದ ಡಾ. ಅಂತೋಣಿ 1947ರಲ್ಲಿ ಲಂಡನ್‌ನಲ್ಲಿ ನಡೆದ ವಿಚಾರ ಸಂಕಿರಣ ಒಂದರಲ್ಲಿ ಪ್ರದರ್ಶಿಸಿದರು. ಅಲ್ಲಿ ಸಿಲಿಕೋಸಿಸ್/ನೀಮೊಕೋನಿಯಾಸಿಸ್ ಮತ್ತು ಧೂಳಿನ ಬಗ್ಗೆ ವಿಚಾರ ಸಂಕಿರಣ ನಡೆದಿತ್ತು. ಆ ಸಂಕಿರಣದಲ್ಲಿ ರ‍್ಯಾಂಡ್ ಮತ್ತು ಕೆಜಿಎಫ್ ಕಾರ್ಮಿಕರಲ್ಲಿರುವ ರೋಗಗಳು ಒಂದೇ ರೀತಿಯವು ಎಂದು ತೀರ್ಮಾನಿಸಲಾಯಿತು. ಈ ನಡುವೆ 1947ರಲ್ಲಿ ಪ್ರೊ. ಗಾಫ್ ದಕ್ಷಿಣ ವೇಲ್ಸ್‌ನಲ್ಲಿ ನೀಮೊಕೋನಿಯಾಸಿಸ್ ಬಗ್ಗೆ ನಡೆಸಿದ ವಿಶೇಷ ಸಂಶೋಧನೆಯನ್ನು ಮಂಡಿಸಿದ್ದರು. ಈ ಸಂಶೋಧನೆಯಲ್ಲಿ ಉಸಿರುಗೂಡಿನ ಭಾಗಗಳನ್ನು ವಿಶೇಷವಾಗಿ ಸಂಶೋಧನೆಗೆ ಒಳಪಡಿಸಲಾಗಿತ್ತು.[30]

1950ರಲ್ಲಿ ಪ್ರೊ. ಗಾಫ್ ಕೆಜಿಎಫ್ ಕಾರ್ಮಿಕರ ಉಸಿರುಗೂಡಿನ ಸ್ಯಾಂಪಲ್‌ಗಳನ್ನು ಇದ್ದಿಲು ಗಣಿಗಳ ಕಾರ್ಮಿಕರ ಉಸಿರುಗೂಡಿನ ಸ್ಯಾಂಪಲ್‌ಗಳ ಜೊತೆಗಿಟ್ಟು ಸಂಶೋಧನೆ ಮಾಡಿದ್ದರು. 1973-78ರ ನಡುವೆ 5893 ಉಸಿರುಗೂಡು ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಮತ್ತೆ ಸಂಶೋಧನೆಗೆ ಒಳಪಡಿಸಲಾಯಿತು. 1958ರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕರ ಸಂಘಗಳ ಮೂಲಕ ಮತ್ತೊಮ್ಮೆ ರೋಗದ ಹಂತಗಳನ್ನು ತೀರ್ಮಾನಿಸಿ ಅದಕ್ಕೆ ತಕ್ಕಂತೆ ಸವಲತ್ತುಗಳನ್ನು ನಿರ್ಧರಿಸಲಾಯಿತು. 1968ರ ಮತ್ತು 1970-71ರಲ್ಲಿ ಇನ್ನಷ್ಟು ಸವಲತ್ತುಗಳನ್ನು ಜಿನೀವಾ ಒಪ್ಪಂದದ ಮೇರೆಗೆ ಮಾರ್ಪಡಿಸಲಾಯಿತು. ಆದರೆ 121

ವರ್ಷಗಳ ಕಾಲದಲ್ಲಿ ಕೆಜಿಎಫ್ ಕಾರ್ಮಿಕರಲ್ಲಿ ಒಂದೇ ಒಂದು ಟಿಪಿಕಲ್ ಇದ್ದಿಲು ವಲಯದ ಸಿಲಿಕೋಸಿಸ್ ರೋಗದ ಲಕ್ಷಣವುಳ್ಳ ರೋಗಿಯನ್ನು ಗುರುತಿಸಲಾಗಲಿಲ್ಲ.

❖❖❖

ಮೈಸೂರು ಸರಕಾರದ ಸಿಲಿಕೋಸಿಸ್ ಆಧಿಸೂಚನೆಯ ಪ್ರಕಾರ 1939–1980ರ ಮಧ್ಯೆ 330 ಉಸಿರುಗೂಡುಗಳ ಸಂಶೋಧನೆಯನ್ನು ನಡೆಸಲಾಗಿತ್ತು. ಈ ಉಸಿರುಗೂಡುಗಳೆಲ್ಲ 6 ರಿಂದ 45 ವರ್ಷಗಳ ಕಾಲ ಗಣಿಗಳಲ್ಲಿ ಕೆಲಸ ಮಾಡಿದ ಕಾರ್ಮಿಕರ ಉಸಿರುಗೂಡುಗಳಾಗಿದ್ದವು. ಸತ್ತವರ ದೇಹಗಳನ್ನೆಲ್ಲ ಸಂಶೋಧನೆಗೆ ಒಳಪಡಿಸಲು ಆಡಳಿತದಿಂದ ಸಾಧ್ಯವಾಗುತ್ತಿರಲಿಲ್ಲ. ಸತ್ತವರ ಕಡೆಯಿಂದ ದೂರುಗಳು ಬಂದು ಪರಿಹಾರ ಕೇಳಿದಾಗ ಅಥವಾ ಸಂಶೋಧನೆ ನಡೆಸಲು ಕಾರ್ಮಿಕರ ವಾರಸುದಾರರು ಒಪ್ಪಿಗೆ ನೀಡಿದಾಗ ಮಾತ್ರ ಸತ್ತವರ ಉಸಿರುಗೂಡುಗಳನ್ನು ಪರೀಕ್ಷಿಸಲಾಗುತ್ತಿತ್ತು. ಹಾಗೆ ವೈದ್ಯರು ಸಿಲಿಕೋಸಿಸ್‌ನಿಂದ ಸತ್ತರೆಂದು ಸರ್ಟಿಫೀಕೆಟ್ ಕೊಟ್ಟಾಗ ಮಾತ್ರ ಕಾರ್ಮಿಕ ಕುಟುಂಬಗಳಿಗೆ ಪರಿಹಾರ ದೊರಕುತ್ತಿತ್ತು. ಬಹಳಷ್ಟು ಸಲ ದೀರ್ಘಕಾಲ ಗಣಿಗಳಲ್ಲಿ ಕೆಲಸ ಮಾಡಿದ್ದರ ಕಾರಣ ಶ್ವಾಸಕೋಶಗಳು ತೊಂದರೆಗೆ ಒಳಗಾಗಿವೆ ಎಂದು ಹೇಳಿ ವೈದ್ಯರು ಕೈ ತೊಳೆದುಕೊಳ್ಳುತ್ತಿದ್ದರು.

1947ರಲ್ಲಿ ಜಾಪ್ಲಿನ್ ಎಂಬವರು 6 ವರ್ಷ ಕಾಲ 60 ಉಸಿರುಗೂಡುಗಳು ಮತ್ತು 7653 ಕಾರ್ಮಿಕರನ್ನು ರೇಡಿಯಾಲಜಿ ಸಂಶೋಧನೆಗೆ ಒಳಪಡಿಸಿ ಮೊದಲ ಬಾರಿಗೆ ಕಾರ್ಮಿಕರ ಉಸಿರುಗೂಡುಗಳು ರೋಗಕ್ಕೆ ತುತ್ತಾಗಿವೆ ಎಂದು ಹೇಳಿದರು. ಉಸಿರುಗೂಡುಗಳ ರಕ್ತಪೊರೆಗಳು ಊದಿಕೊಂಡಿರುವುದು, ಬಣ್ಣ ಬದಲಾಗಿರುವುದು, ರಕ್ತನಾಳಗಳ ಒಳಗೆ ರಕ್ತ ಹೆಪ್ಪುಕಟ್ಟಿಕೊಂಡಿರುವುದು ಮತ್ತು ಸಿಲಿಕಾ ಕಣಗಳಿಂದ (ನುಣ್ಣನೆಯ ಗಾಜು ಧೂಳಿನಂತೆ) ಒರಟಾಗಿರುವುದನ್ನು ತೋರಿಸಿದರು. ಇದೇ ಸ್ಯಾಂಪಲ್‌ಗಳನ್ನು ಪರೀಕ್ಷಿಸಿದ ವೆಲ್ಸ್ ವಿಶ್ವವಿದ್ಯಾಲಯದ ಪ್ರೊ. ಗಾಫ್ ಈ ರೀತಿಯ ರೋಗ ಕಲ್ಲಿದ್ದಲು ಕಾರ್ಮಿಕರಲ್ಲೂ ಕಂಡುಬಂದಿದೆ ಎಂದರು. 330 ಉಸಿರುಗೂಡುಗಳಲ್ಲಿ 159ರಲ್ಲಿ ರೋಗ ಇರುವುದಾಗಿ ಸರ್ಟಿಫಿಕೇಟ್ ನೀಡಲಾಗಿತ್ತು. ಇವುಗಳಲ್ಲಿ 124 ಸರಳ, 35 ಕ್ಲಿಷ್ಟ, 30ರಲ್ಲಿ ಟ್ಯೂಬರ್‌ಕ್ಯೂಲೊಸಿಸ್ ಇರುವುದಾಗಿ ಹೇಳಲಾಯಿತು. 171ರಲ್ಲಿ ರೋಗ ಇರಲಿಲ್ಲ ಎಂದು ಹೇಳಲಾಯಿತು. ಸಿಲಿಕೋಸಿಸ್ ರೋಗವನ್ನು 4 ಹಂತಗಳಲ್ಲಿ ಗುರುತಿಸಲಾಗಿತ್ತು. ಇದರ ಆಧಾರದಿಂದ ಕೆಲವು ಕಾರ್ಮಿಕರನ್ನು ಪರೀಕ್ಷಿಸಿ ಹಂತ 3 ಅಥವಾ 4 ತಲುಪಿದ್ದರೆ ಅವರನ್ನು ಕೆಲಸಕ್ಕೆ ನಾಲಾಯಕ್ಕೆಂದು ತೆಗೆದು ಹಾಕುತ್ತಿದ್ದರು. ಆದರೆ ಕಾರ್ಮಿಕರು ತಮಗೆ ಯಾವುದೇ ಕಾಯಿಲೆ ಇಲ್ಲ ಎಂದು ವೈದ್ಯರನ್ನು ಬೇಡಿಕೊಳ್ಳುತ್ತಿದ್ದರು. ಏಕೆಂದರೆ ಅವರು ಜೀವನ ನಡೆಸಬೇಕಾದರೆ ಹೇಗಾದರೂ ಮಾಡಿ ಕೆಲಸದಲ್ಲಿ ಉಳಿದುಕೊಳ್ಳಲೇಬೇಕಾಗಿತ್ತು.

ಉಸಿರುಗೂಡುಗಳ ಮೇಲೆ ಕುಳಿತ ಕಣಗಳು ನಿಧಾನವಾಗಿ ತನ್ನ ಸುತ್ತಲು ಪ್ರದೇಶವನ್ನು ತಿನ್ನುತ್ತಾ ಹೋಗುವುದರ ಜೊತೆಗೆ ಒಳಗಿನ ರಕ್ತನಾಳಗಳಲ್ಲಿ ಗ್ರಂಥಿಗಳು ಮೂಡುತ್ತಿದ್ದವು. ಆ ಕಾಲಕ್ಕೆ ಪ್ರಪಂಚದ ಇತರ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ಹೋಲಿಸಿದರೆ ಕೆಜಿಎಫ್ ಕಾರ್ಮಿಕರಲ್ಲಿ ಸಿಲಿಕೋಸಿಸ್ ರೋಗ ಅಷ್ಟು ತೀವ್ರವಾಗಿರಲಿಲ್ಲ. ಕೆಜಿಎಫ್ ಗಣಿಗಳ ಒಳಗಿನ ಶಿಲೆಗಳಲ್ಲಿ ಸಿಲಿಕಾ ಶೇಕಡ 13% ಇದ್ದುದ್ದೆ ಇದಕ್ಕೆ ಕಾರಣ ಎನ್ನಲಾಗಿದೆ.

ಸಾಂಕ್ರಾಮಿಕ ರೋಗಗಳು :

ನಿರಂತರವಾಗಿ ಬೆನ್ನಟ್ಟಿ ಕಾಡುತ್ತಿದ್ದ ಅಪಘಾತಗಳ ಜೊತೆಗೆ ಸಾಂಕ್ರಾಮಿಕ ರೋಗಗಳು ಕಾರ್ಮಿಕರ ಕಾಲೋನಿಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದವು. 1898ರಲ್ಲಿ ಕಂಕುಳಲ್ಲಿ ಗಡ್ಡೆ ಏಳುವ ಪ್ಲೇಗಿನಿಂದ 714 ಜನರು ಸತ್ತು, 5000 ಜನರು ಕೆಜಿಎಫ್ ಬಿಟ್ಟು ಓಡಿಹೋದರು. ಕಾಲೋನಿಗಳು ಆಯಾಸಗೊಂಡಂತೆ ನಿತ್ರಾಣಗೊಂಡು ತಿಂಗಳುಗಟ್ಟಲೆ ತಟ್ಟಾಡತೊಡಗಿದವು. ಕೆಲವರು, ಸತ್ತವರ ಹೆಣಗಳನ್ನು ರಾತ್ರೋರಾತ್ರಿ ಅಲ್ಲಿ ಇಲ್ಲಿ ಬಿಸಾಕಿದ ಕಾರಣದಿಂದ ರೋಗ ಇನ್ನಷ್ಟು ಉಲ್ಬಣಗೊಂಡಿತ್ತು. ಆದರೆ ಸ್ಯಾನಿಟರಿ ಕೆಲಗಾರರು ಯಾರೂ ಈ ರೋಗಗಳಿಂದ ಸಾಯಲಿಲ್ಲ. ಆದರಿಂದ ಇದು ಸಾಂಕ್ರಾಮಿಕ ರೋಗವಲ್ಲ ಎಂದು ಒಂದು ವರದಿಯಲ್ಲಿ ಹೇಳಲಾಗಿದೆ.[31]

ಅಂದರೆ ಕಾಲೋನಿಗಳ ಅಸ್ವಚ್ಛತೆಯಿಂದ ಈ ರೋಗ ಹರಡಲಿಲ್ಲ ಎನ್ನುವುದು ಆಡಳಿತದ ವಾದ. ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಕಾಲರಾ ಮತ್ತು ಸಿಡುಬು ರೋಗಗಳು ಆಗಾಗ ಇದ್ದಕ್ಕಿದ್ದಂತೆ ಕಾಲೋನಿಗಳನ್ನು ಆವರಿಸಿಕೊಳ್ಳುತ್ತಿದ್ದವು. ಕಾರ್ಮಿಕರಿದ್ದ ಬಿದಿರುದಟ್ಟಿ ಮನೆಗಳು ಯಾವುದೇ ರೀತಿಯಲ್ಲೂ ವಾಸ ಮಾಡಲು ಲಾಯಕ್ಕಿರಲಿಲ್ಲ. ಕ್ಯಾಂಪ್‌ಗಳನ್ನು ನೋಡಲು ಬರುತ್ತಿದ್ದ ಸ್ಯಾನಿಟರಿ ಬೋರ್ಡಿನ ಮೇಲ್ವಿಚಾರಕರು ಕಾರ್ಮಿಕರಿಗೆ ಯಮರಾಯರಂತೆ ಕಾಣಿಸಿಕೊಳ್ಳುತ್ತಿದ್ದರು. ಇಲಿಗಳನ್ನು ಹಿಡಿಯಲು ಬರುತ್ತಿದ್ದ ಅವರು ಗುಡಿಸಿಲುಗಳನ್ನೆಲ್ಲ ಅಗೆದು ಗುಂಡಿಗಳಾಗಿಸುತ್ತಿದ್ದರು. ಅಡ್ಡನಿಂತ ಕಾರ್ಮಿಕರ ಗುಡಿಸಿಲುಗಳನ್ನು ಸಾಂಕ್ರಾಮಿಕ ರೋಗಗಳ ಪಟ್ಟಿಗೆ ಸೇರಿಸಿ ಅವರಿಗೆ ಶಿಕ್ಷೆಯನ್ನು ಕೊಡಿಸುತ್ತಿದ್ದರು ಇಲ್ಲ ಗುಡಿಸಿಲುಗಳನ್ನು ಪೂರ್ಣವಾಗಿ ನಿರ್ನಾಮ ಮಾಡಿಬಿಡುತ್ತಿದ್ದರು. ಗುಡಿಸಿಲುಗಳ ಹಿಂದೆ ಒಂದಷ್ಟು ಹೂಗಿಡ, ತರಕಾರಿ ಬೆಳೆಸಿಕೊಂಡಿದ್ದರೆ ಅದು ಸೊಳ್ಳೆಗಳ ತಾಣ ಎಂದು ಅವುಗಳನ್ನು ಕಿತ್ತು ರಂಪ ಮಾಡಿಬಿಡುತ್ತಿದ್ದರು.

ಮೈಸೂರು ಮೈನ್ಸ್ ರೆಗ್ಯುಲೇಶನ್ ಕೆಳಗೆ ಸ್ಯಾನಿಟರಿ ಬೋರ್ಡಿನ ಅಧಿಕಾರವನ್ನು ತಂದಿದ್ದರಿಂದ ಕಾರ್ಮಿಕರು ಉಸಿರು ಬಿಡುವಂತಿರಲಿಲ್ಲ. ಹಾಗೆ ಯಾವುದೇ ಸೋಂಕು

ಕಾಯಿಲೆಗಳು ಕಾಲೋನಿಗಳಲ್ಲಿ ಕಾಣಿಸಿಕೊಂಡರೆ ತುರ್ತಾಗಿ ಅವರನ್ನು ಸ್ಯಾನಿಟರಿ ಮೇಲ್ವಿಚಾರಕರಿಗೆ ತಿಳಿಸಿಬಿಡಬೇಕಾಗಿತ್ತು. ಇಲ್ಲವೆಂದರೆ ಆ ಮನೆಯವರಿಗೆ ಶಿಕ್ಷೆ ತಪ್ಪಿದ್ದಲ್ಲ. 1901ರಲ್ಲಿ ಸಿಡುಬು ರೋಗದ ಬಗ್ಗೆ ತಿಳಿಸದೆ ಇದ್ದ ಕಾರಣ ಡೇವಿಡ್, ಇನ್ನಿತರ 7 ಜನರಿಗೆ ಶಿಕ್ಷೆಯನ್ನು ನೀಡಲಾಯಿತು. ಚಾರಿಯಪ್ಪನ್ ಎಂಬ ಕಾರ್ಮಿಕ ತನ್ನ ತಂಗಿಗೆ ಸಿಡುಬು ರೋಗ ಬಂದ ವಿಷಯವನ್ನು ತಿಳಿಸದ ಕಾರಣ ಆತನಿಗೆ 2 ತಿಂಗಳು ಕಾಲ ಕಠಿಣ ಶಿಕ್ಷೆ ವಿಧಿಸಲಾಯಿತು. ಚಾರಿಯಪ್ಪನ್ ಮೈಸೂರು ಮುಖ್ಯ ನ್ಯಾಯಾಲಯದ ಮುಂದೆ ಮೊರೆ ಇಟ್ಟುಕೊಂಡಾಗಲೂ ಆತನನ್ನು ಬಿಡಲಿಲ್ಲ. ಮಾಡಿದ ತಪ್ಪಿಗೆ ಸುಮ್ಮನೆ ಶಿಕ್ಷೆ ಅನುಭವಿಸು ಎಂದು ಎಚ್ಚರಿಕೆ ನೀಡಲಾಯಿತು.[32]

ಕಾಲೋನಿಗಳಲ್ಲಿ ಪ್ರಾಣಿಗಳನ್ನು ಕೊಯ್ದು ತಿನ್ನುವುದು, ಮಾಂಸ ತಂದು ತಿನ್ನುವುದೂ ಕಷ್ಟವಾಗಿತ್ತು. ಎಲ್ಲರೂ ಸಾಂಕ್ರಾಮಿಕ ರೋಗದ ಚುಚ್ಚುಮದ್ದನ್ನು ಹಾಕಿಕೊಳ್ಳಲೇಬೇಕಾಗಿತ್ತು. ಅಧಿಕಾರಿಗಳು ಬರುತ್ತಿದ್ದ ಸಾರ್ವಜನಿಕ ಸ್ಥಳಗಳಿಗೆ ಕಾರ್ಮಿಕರನ್ನು ಸ್ವಚ್ಛತೆಯ ಹೆಸರಿನಲ್ಲಿ ಬರದಂತೆ ತಡೆಹಿಡಿಯಲಾಗುತ್ತಿತ್ತು. ಹಾಗೆ ನೋಡಿದರೆ ಬೇರೆ ಬೇರೆ ಜಾತಿ ಜನಾಂಗಗಳ ಕಾಲೋನಿಗಳನ್ನೇ ಗಣಿ ಪ್ರದೇಶದಲ್ಲಿ ಸ್ಥಾಪಿಸಲಾಗಿತ್ತು. ಆದಿ ದ್ರಾವಿಡ ಕಾಲೋನಿಗಳು, ಆಂಧ್ರಾ, ಮುಸ್ಲಿಂ, ಮಲೆಯಾಳಿ, ಪಂಜಾಬಿ, ಕಾಲೋನಿಗಳು ಬೇರೆ ಬೇರೆಯಾಗಿದ್ದವು. ಇತರ ಹಿಂದೂ ಜಾತಿಗಳ ಕಾರ್ಮಿಕರು ಹತ್ತಿರದ ಹಳ್ಳಿಗಳಲ್ಲಿ ವಾಸಿಸುತ್ತಿದ್ದರು.

ಕಾಲರ :

ಕೆಜಿಎಫ್‌ನಲ್ಲಿ ಮೊದಲು ಕಾಲರಾ ಕಾಣಿಸಿಕೊಂಡಿದ್ದು 1891ರಲ್ಲಿ. ಅನಂತರ 1892ರಲ್ಲಿ ಕಾಲರಾ ಮತ್ತೊಮ್ಮೆ ಭಯಂಕರವಾಗಿ ಕಾಣಿಸಿಕೊಂಡಿತು. 1899 ಫೆಬ್ರವರಿ ತಿಂಗಳು ಒಂದೇ ದಿನದಲ್ಲಿ 5000 ಜನರು ಕೆಜಿಎಫ್ ಬಿಟ್ಟು ಓಡಿಹೋದರು. ಇದೇ ರೋಗ ಕ್ಯಾಂಪುಗಳಲ್ಲಿ 1901, 1902, 1903, 1906, 1907, 1908, 1910, 1911, 1912, 1916 ಮತ್ತು 1918ರಲ್ಲಿಯೂ ಜನರನ್ನು ಹಿಂಡಿ ಹಿಪ್ಪೆ ಮಾಡಿಹೋಗಿತ್ತು. ಜೊತೆಗೆ ಸಿಡುಬು ರೋಗ 1901, 1902, 1903, 1906 ಮತ್ತು 1910ರಲ್ಲಿ ಬಂದು ಅನೇಕರನ್ನು ಆಹುತಿ ತೆಗೆದುಕೊಂಡಿತ್ತು. ಈ ಎಲ್ಲಾ ರೋಗಗಳು 1930ರವರೆಗೂ ಇಲ್ಲಿನ ಜನರನ್ನು ಪದೇ ಪದೇ ಕಾಡುತ್ತಲೆ ಇದ್ದವು. 1932–34ರಲ್ಲಿ 154 ಜನರು ಪ್ಲೇಗಿನಿಂದ ಮತ್ತು 29 ಜನರು ಸಿಡುಬಿನಿಂದ ಪ್ರಾಣ ಕಳೆದುಕೊಂಡಿದ್ದರು. ಇನ್‌ಫ್ಲುಎನ್‌ಝಾ ಇನ್ನೊಂದು ರೋಗ. 1918ರಲ್ಲಿ ಈ ರೋಗ 46 ಜನರನ್ನು ಆಹುತಿ ತೆಗೆದುಕೊಂಡಿತ್ತು. ಕೆಲವೊಂದು ಸಲ ಬಿಳಿಯರೂ ಈ ರೋಗಗಳಿಗೆ ತುತ್ತಾಗುತ್ತಿದ್ದರು.[33] ಈ ಕಾಯಿಲೆಗಳಿಂದ ಕಂಪನಿಗಳು ಹಲವು ತೊಂದರೆಗಳನ್ನು ಎದುರಿಸಬೇಕಾಯಿತು. ಕಾರ್ಮಿಕರು ಭೀತಿಗೊಳಗಾಗಿ ಕಾಲೋನಿಗಳನ್ನು ಬಿಟ್ಟು

ಓಡಿಹೋಗುತ್ತಿದ್ದರು. ಕಂಪನಿಗಳು ಹೊಸಬರನ್ನು ಸೇರಿಸಿಕೊಳ್ಳಲು ಮುಂದಾದರೂ ಯಾರೂ ಬರುತ್ತಿರಲಿಲ್ಲ.

ಅಪಘಾತಗಳು ಮತ್ತು ಪರಿಹಾರ :

ಗಣಿಗಳಲ್ಲಿ ಶಿಲಾಸ್ಫೋಟ ಸಂಭವಿಸುವುದು, ಬೆಂಕಿ ಕಾಣಿಸಿಕೊಳ್ಳುವುದು, ಶಿಲೆಗಳು ಮತ್ತು ಯಂತ್ರಗಳು ಕಾರ್ಮಿಕರ ಮೇಲೆ ಬೀಳುವುದರಿಂದ ಹೆಚ್ಚು ಕಾರ್ಮಿಕರು ಅಪಘಾತಗಳಿಗೆ ಒಳಗಾಗುತ್ತಿದ್ದರು. 1908–1946ರ ಮಧ್ಯದಲ್ಲಿ ಕೆಜಿಎಫ್‌ನಲ್ಲಿ ಘಟಿಸಿದ ಸಾವುಗಳು ಆಫ್ರಿಕಾದ ಟ್ರಾನ್ಸ್‌ವಾಲ್‌ಗಿಂತ ಹೆಚ್ಚಾಗಿದ್ದವು (1920–1930 ಬಿಟ್ಟು). 1920ರ ದಶಕದಲ್ಲಿ ವರ್ಷಕ್ಕೆ 148.4 ಅಪಘಾತಗಳು ಸಂಭವಿಸಿದರೆ, 1930ರಲ್ಲಿ 185.3 ಅಪಘಾತಗಳು, 1940–1946ರಲ್ಲಿ ಇದು 200ಕ್ಕೆ ಏರಿತ್ತು. ಆದರೆ ಆಡಳಿತ ಈ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ, ಬದಲಿಗೆ ಇದೆಲ್ಲ ಕಾರ್ಮಿಕರ ಉದಾಸೀನತೆಯಿಂದ ನಡೆಯುತ್ತದೆ ಎಂದು ದೂರಿತು. 1923ರಲ್ಲಿ ಮೊದಲ ಬಾರಿಗೆ ಸುರಕ್ಷಿತ ಕೇಂದ್ರವನ್ನು ಸ್ಥಾಪಿಸಲಾಯಿತು.[34]

ಸಾವಿರಾರು ಕಾರ್ಮಿಕರು ಹಗಲು ರಾತ್ರಿಯೆನ್ನದೆ ಕತ್ತಲ ಸುರಂಗಗಳಲ್ಲಿ ಶಿಲಾಸ್ಫೋಟ, ಮದ್ದುಗುಂಡು, ಸಿಡಿತ, ಬೆಂಕಿ ಇತ್ಯಾದಿ ಅಪಘಾತಗಳನ್ನು ಬೆನ್ನಿಗೆ ಕಟ್ಟಿಕೊಂಡು ಚಿನ್ನವನ್ನು ತೆಗೆಯುತ್ತಿದ್ದರು. 1891–1940ರ ನಡುವೆ ವರ್ಷಕ್ಕೆ ಸರಾಸರಿ 60 ಕಾರ್ಮಿಕರು ಕೆಜಿಎಫ್‌ನಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದರು. ಜೊತೆಗೆ ನೂರಾರು ಕಾರ್ಮಿಕರು ಅಂಗವಿಕಲರಾಗುತ್ತಿದ್ದರು. ಮುಂದಿನ ಕೆಲವು ವರ್ಷಗಳಲ್ಲಿ ಸಾವು ನೋವುಗಳು ಇನ್ನೂ ಹೆಚ್ಚಾಗಿದ್ದವು. 1909ರಲ್ಲಿ 114, 1913ರಲ್ಲಿ 112. ಎಡ್ಗರ್ ಶ್ಯಾಫ್ಟ್‌ನಲ್ಲಿ ಪಂಜರದ ಉಕ್ಕಿನ ಹಗ್ಗ ಮುರಿದುಬಿದ್ದು 42 ಜನ ಸತ್ತಿದ್ದರು. 1931ರಲ್ಲಿ ನಂದಿದುರ್ಗ ಗಣಿಯಲ್ಲಿ ಬೆಂಕಿ ಅನಾಹುತದಲ್ಲಿ 53 ಕಾರ್ಮಿಕರು ಸತ್ತರು. ಗಣಿಗಳು ಆಳಹೋದಂತೆ ಶಿಲಾಸ್ಫೋಟಗಳು ಹೆಚ್ಚಾಗಿ ಸಂಭವಿಸುತ್ತಿದ್ದವು. 1916 ರಲ್ಲಿ ಸಂಭವಿಸಿದ ಶಿಲಾಸ್ಫೋಟಗಳಿಂದ 200 ಕಾರ್ಮಿಕರು ಪ್ರಾಣ ಕಳೆದುಕೊಂಡರು. ಗಣಿಗಳಲ್ಲಿ ಶಿಲಾಸ್ಫೋಟ ಮತ್ತು ಬೆಂಕಿ ಅನಾಹುತಗಳನ್ನು ಪೂರ್ಣವಾಗಿ ತಡೆಯುವುದು ಅಸಾಧ್ಯವಾಗಿತ್ತು. 1924–25ರ ಹೊತ್ತಿಗೆ ಗಣಿಗಳು ಆಳಹೋದಂತೆ ದೊಡ್ಡದೊಡ್ಡ ಶಿಲಾಸ್ಫೋಟಗಳು ಘಟಿಸತೊಡಗಿದವು.

ಗಣಿಗಳಲ್ಲಿ ಮುಖ್ಯವಾಗಿ 3 ರೀತಿಯಲ್ಲಿ ಅಪಘಾತಗಳು ಸಂಭವಿಸುತ್ತಿದ್ದವು. ಒಂದು: ಹಿಂಜ್ (ಒಂದು ಸುರಂಗದಿಂದ ಇನ್ನೊಂದು ಸುರಂಗದ ಮಧ್ಯೆ ಇರುವ ಸಣ್ಣ ಸಣ್ಣ ಸಂದುಗಳು) ಮತ್ತು ಶ್ಯಾಫ್ಟ್‌ಗಳ ಮೂಲಕ ಕೆಳಕ್ಕೆ ಕಾಲುಜಾರಿ ಬೀಳುವುದು. ಎರಡು: ಬ್ಲಾಸ್ಟಿಂಗ್‌ನಿಂದ ಅಪಘಾತಗಳಿಗೆ ಸಿಲುಕಿಕೊಳ್ಳುವುದು ಮತ್ತು ಮೂರು: ಪಂಜರಗಳು ಮುರಿದು ಬೀಳುವುದು. ಗಣಿ ಕಾನೂನುಗಳನ್ನು ಪಾಲಿಸದೆ

ಅಪಘಾತಗಳಾದರೆ ಕಾರ್ಮಿಕರೆ ಹೊಣೆಯಾಗುತ್ತಿದ್ದರು. ಅವರು ಪ್ರಾಣಾಪಾಯದಿಂದ ತಪ್ಪಿಸಿಕೊಂಡರೂ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ (ಪಟ್ಟಿ 2). ಒಬ್ಬ ಕಾರ್ಮಿಕ ಹಿಂಜ್ ಅಥವಾ ಶ್ಯಾಫ್ಟ್ ಒಳಕ್ಕೆ ಕಾಲುಜಾರಿ ಬಿದ್ದರೆ ಕಾರ್ಮಿಕನೆ ಹೊಣೆಯಾಗುತ್ತಿದ್ದ. ಮುಂದಿನ ದಿನಗಳಲ್ಲಿ ಮೇಸ್ತ್ರಿ, ಬ್ಲಾಸ್ಟರ್ ಮತ್ತು ಯಂತ್ರ ನಡೆಸುವ ಚಾಲಕನನ್ನು ಹೊಣೆಯಾಗಿಸಿದರು. ಈ ಮೂವರು ಸಾಮಾನ್ಯ ಕಾರ್ಮಿಕರಿಗಿಂತ ಸ್ವಲ್ಪ ಹೆಚ್ಚು ಸಂಬಳ ಪಡೆಯುತ್ತಿದ್ದು ತರಬೇತಿಯ ಸರ್ಟಿಫಿಕೇಟನ್ನು ಹೊಂದಿರುತ್ತಿದ್ದರು.

ಗಣಿಗಳ ಒಳಗಿನ ಹೆಚ್ಚು ಉಷ್ಣ ಕಾರ್ಮಿಕರ ಸಾವಿಗೆ ಕಾರಣವೆ? ಎಂದು ಸಂಶೋಧನೆ ನಡೆಸಿದಾಗ ಅದಕ್ಕಿಂತ ಮುಖ್ಯವಾಗಿ 1920ರಲ್ಲಿ 19 ಕಾರ್ಮಿಕರಲ್ಲಿ 6 ಜನರು ಏಣಿಗಳನ್ನು ಹತ್ತುತ್ತಿರುವಾಗ ಜಾರಿಬಿದ್ದು ಸತ್ತಿರುವುದಾಗಿ ತಿಳಿದುಬಂದಿತು. ಇದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಒಂದು : ಏಣಿಗಳಲ್ಲಿ ಅಂತರ್ಜಲ ನೀರು ತೊಟ್ಟಿಕ್ಕುವುದು. ಎರಡು : ಕಾರ್ಮಿಕರು ಸರಿಯಾಗಿ ಊಟ ಮಾಡದೆ ಆಯಾಸದಿಂದ ಬಳಲುತ್ತಿದ್ದುದ್ದು ಮತ್ತು ಸುರಂಗಗಳ ಒಳಗೆ ಉತ್ಪತ್ತಿಯಾಗುತ್ತಿದ್ದ ಉಷ್ಣ ಇತ್ಯಾದಿ.

1967ರವರೆಗೆ ಕಟ್ಟುನಿಟ್ಟಾದ ಗಣಿ ಕಾನೂನುಗಳಿಂದ ಕಳ್ಳತನ ಕಡಿಮೆ ಇದ್ದು ಅನಂತರ ಕಳ್ಳತನಗಳು ತೀವ್ರವಾಗಿ ಹೆಚ್ಚಾದವು. 1960ರಲ್ಲಿ ಸಂಭವಿಸಿದ ಒಂದು ಶಿಲಾಸ್ಫೋಟದಲ್ಲಿ ಕೆಲವು ಕಾರ್ಮಿಕರು ಶಿಲೆಗಳ ಮಧ್ಯೆ ಸಿಕ್ಕಿಕೊಂಡರು. ಮೂರು ದಿನಗಳಾದ ಮೇಲೆ ಶಿಲೆಗಳನ್ನು ತೆಗೆಯತ್ತ ಹೆಣಗಳನ್ನು ಹುಡುಕುತ್ತಿದ್ದಾಗ ಹಾರೆ ತಗಲಿ ಅಮಾವಾಸೆ ಎಂಬ ಕಾರ್ಮಿಕ ಸಣ್ಣದಾಗಿ ಕಿರಿಚಿಕೊಂಡ ಮೇಲೆ ಆತನನ್ನು ಆಸ್ಪತ್ರೆಗೆ ಸಾಗಿಸಿ ಬದುಕಿಕೊಂಡಿದ್ದ.

❖❖❖

ಜನವರಿ, 1928 ಸರಕಾರ ಕಾರ್ಮಿಕರ ಪರಿಹಾರದ ಬಗ್ಗೆ ಕಾನೂನು ತಂದಿತ್ತು. ಅದಕ್ಕಿಂತ ಮುಂಚೆ ಕಂಪನಿಗಳು ಅಪಘಾತ ವಿಮೆಯನ್ನು ಮಾಡುತ್ತಿದ್ದವು. ದಿನಕ್ಕೆ 8 ಆಣೆ ಅಥವಾ ಅದಕ್ಕಿಂತ ಕಡಿಮೆ ಸಂಬಳ ಪಡೆಯುತ್ತಿದ್ದವರಿಗೆ ತಿಂಗಳಿಗೆ 2 ಆಣೆ (ಗಣಿ ಒಳಗೆ ಕೆಲಸ ಮಾಡುವವರಿಗೆ) 1 ಆಣೆ (ಗಣಿ ಹೊರಗೆ ಕೆಲಸ ಮಾಡುವವರಿಗೆ) ವಿಮೆಯ ಕಂತು ಹಿಡಿದುಕೊಳ್ಳಲಾಗುತ್ತಿತ್ತು. ಅದೇ 12 ಆಣೆಗಿಂತ ಕಡಿಮೆ ಸಂಬಳದವರಿಗೆ 3 ಆಣೆ ಮತ್ತು 2 ಆಣೆ. 12 ಆಣೆಗಿಂತ ಹೆಚ್ಚಿನ ಸಂಬಳದವರಿಗೆ 4 ಆಣೆ, 3 ಆಣೆ. 1 ರೂ. ಗಿಂತ ಹೆಚ್ಚು ಸಂಬಳದವರಿಗೆ 6 ಆಣೆ ಮತ್ತು 4 ಆಣೆ ಕಂತು ಹಿಡಿಯುತ್ತಿದ್ದರು.

ಅಪಘಾತಗಳಲ್ಲಿ ತಾತ್ಕಾಲಿಕವಾಗಿ ಗಾಯಗೊಂಡವರಿಗೆ, ಗಾಯಗೊಂಡ ದಿನದಿಂದ ಕೆಲಸಕ್ಕೆ ಬರುವವರೆಗೂ ಪೂರ್ಣ ಸಂಬಳ ನೀಡಲಾಗುತ್ತಿತ್ತು. ಅಪಘಾತದಿಂದ ಗಾಯವಾಗಿ ಭಾಗಶಃ ಅಂಗ ಊನಗೊಂಡು ಕೆಲಸ ಮಾಡಲಾಗದೆ ಹೋದರೆ

ಮೇಲಿನ ನಾಲ್ಕು ಹಂತಗಳ ಸಂಬಳ 50–100ರೂ, 75–150ರೂ, 100–200ರೂ ಮತ್ತು 150–350ರೂ. ವಿಮೆಯಾಗಿ ಪಡೆಯುತ್ತಿದ್ದರು. ಒಂದು ವೇಳೆ ಪೂರ್ಣವಾಗಿ ಅಂಗ ಊನವಾದರೆ 150, 200, 250 ಮತ್ತು 300ರೂ. ವಿಮೆಯನ್ನು ಪಡೆಯುತ್ತಿದ್ದರು. ಕಾರ್ಮಿಕರು ಅಪಘಾತದಲ್ಲಿ ಪ್ರಾಣ ಕಳೆದುಕೊಂಡರೆ ಅದೇ ವಿಮೆಯನ್ನು ಕುಟುಂಬದ ಇತರ ಸದಸ್ಯರಿಗೆ ನೀಡಲಾಗುತ್ತಿತ್ತು. ಕಾರ್ಮಿಕರು ಅನಾಥರಾದಲ್ಲಿ ಯಾರಿಗೂ ವಿಮೆ ಹಣ ನೀಡದೆ ಆತನ ಶವಸಂಸ್ಕಾರ ಖರ್ಚಿಗೆ 25 ರೂ. ಮಾತ್ರ ನೀಡಲಾಗುತ್ತಿತ್ತು.

ಗಣಿ ಕಂಪನಿಗಳು, ವಿಮೆ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡಂತೆ ಕಚೇರಿಗಳಲ್ಲಿ, ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಬಳದಿಂದ ಪ್ರತಿ 100 ರೂ. ಗೆ ವರ್ಷಕ್ಕೆ 20 ಆಣೆ ವಿಮೆ ಕಂತು ತುಂಬಲಾಗುತ್ತಿತ್ತು. ಗಣಿಗಳ ಒಳಗೆ ಕೆಲಸ ಮಾಡುವವರ ಸಂಬಳದಿಂದ ಪ್ರತಿ 100 ರೂ. ಗೆ 30 ಆಣೆ ವಿಮೆಕಂತು ಹಿಡಿಯಲಾಗುತ್ತಿತ್ತು. 1929ರಲ್ಲಿ ಎಲ್ಲಾ ಕಂಪನಿಗಳು ತುಂಬಿದ ಒಟ್ಟು ವಿಮೆಕಂತು 1,00,000ರೂ. ಅಪಘಾತಗಳಿಂದ ಕಾರ್ಮಿಕರು ಕೆಲಸಕ್ಕೆ ಹಾಜರಾಗದೆ ಹೋದರೆ ಆಫ್ರಿಕಾ ಮತ್ತು ಇಟಲಿಯಲ್ಲಿ 6 ದಿನ ನಿರೀಕ್ಷಣಾ ಸಮಯ ನೀಡಲಾಗುತ್ತಿತ್ತು. ಇನ್ನುಳಿದ ದೇಶಗಳಲ್ಲಿ 3 ದಿನ ಅವಕಾಶ ನೀಡಲಾಗುತ್ತಿತ್ತು. ಈ ಕಾನೂನು ಕೆಜಿಎಫ್‌ನಲ್ಲಿ ಇಲ್ಲದ ಕಾಲದಲ್ಲಿ ಕಾರ್ಮಿಕರು ಅಪಘಾತ ನಡೆದ ದಿನದಿಂದ ಪರಿಹಾರವನ್ನು ನೀಡಬೇಕೆಂದು ಹೋರಾಟ ನಡೆಸಿದ್ದರು.

ಅಪಘಾತಗಳಲ್ಲಿ ಸತ್ತವರ ಸಂಖ್ಯೆ[35] :

ಅಪಘಾತಗಳ ನಡೆದ ವರ್ಷ

	೧೮೯೫	೧೮೯೮	೧೯೦೯	೧೯೧೯	೧೯೨೯	೧೯೩೯	೧೯೪೬
೧. ಸರಾಸರಿ ೧೦೦೦ ಕಾರ್ಮಿಕರಿಗೆ)	೭.೨೯	೮.೮೮	೧೪.೩೪	೮.೧೯	೧೨.೨೫	೬.೦	೩೭.೬೬
೨. ಗಣಿಗಳ ಮೇಲೆ ಸತ್ತವರ ಸಂಖ್ಯೆ	೦.೬೯	೦.೬೬	೦.೩೬	೦.೫	೬೦.೪	೬೦.೧೦	೦.೦೦
೩. ಗಣಿಗಳ ಒಳಗೆ ಸತ್ತವರ ಸಂಖ್ಯೆ	೭.೦೧	೨.೬೬	೫.೭೩	೪.೫೪	೬.೬೬	೨.೭೨	೦.೬೯
೪. ಗಣಿಗಳ ಮೇಲೆ ಮತ್ತು ಒಳಗೆ ಸತ್ತವರ ಸಂಖ್ಯೆ	೪.೦೫	೧.೮೦	೩.೬೪	೨.೭೯	೩.೭	೪೧.೮೦	೦.೪೧

೫. ಒಂದು ಲಕ್ಷ ಟನ್ ಕ್ವಾರ್ಟ್‌ಝ್ ಪುಡಿ ಮಾಡಿದ ಕಾರ್ಮಿಕರ ಸಂಖ್ಯೆ

೯೫೧೨೪೫೫೪೬ ೩೯೦೫ ೩೪೭೫ ೨೭೯೭ ೩೦೩೯ ೪೩೫೬

೬. ಒಂದು ಲಕ್ಷ ಟನ್ ಕ್ವಾರ್ಟ್‌ಝ್ ಶಿಲೆ ಪುಡಿ ಮಾಡಿದಾಗ ಸತ್ತ ಕಾರ್ಮಿಕರ ಸಂಖ್ಯೆ

೨೦.೮೦ ೯.೯೯ ೧೪.೨೦ ೯.೬೯ ೧೦.೪೭ ೬.೩೬ ೨.೧೮

೭. ಒಂದು ಲಕ್ಷ ಪೌಂಡ್ ಹಣ ಪಡೆಯಲು ಕೆಲಸ ನಿರ್ವಹಿಸಿದ ಕಾರ್ಮಿಕರ ಸಂಖ್ಯೆ

೧೨೬೮ ೧೨೫೭ ೧೩೭೪ ೧೩೦೪ ೧೦೯೩ ೧೮೨೨ ೩೧೯೭

೮. ಒಂದು ಲಕ್ಷ ಪೌಂಡ್ ಹಣ ಗಳಿಸಲು ಸತ್ತ ಕಾರ್ಮಿಕರ ಸಂಖ್ಯೆ

೫.೧೪ ೨.೨೬ ೫.೦ ೩.೩೬ ೪.೪೬ ೩.೮೧ ೧.೬೦

ಗಣಿ ಸುರಕ್ಷಿತೆಗಾಗಿ ಸಂಸ್ಥೆ ಎಷ್ಟೇ ಮನ್ನೆಚ್ಚರಿಕೆಗಳನ್ನು ತೆಗೆದುಕೊಂಡರೂ ಎಷ್ಟೋ ಕಾರ್ಮಿಕರು ಅಪಘಾತಗಳಲ್ಲಿ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದರು. ಗಣಿಗಳ ಚರಿತ್ರೆಯಲ್ಲಿ ಸುಮಾರು 7000 ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದು, ಸುಮಾರು 16000 ಕಾರ್ಮಿಕರು ಅಪಘಾತಗಳಲ್ಲಿ ತೀವ್ರವಾಗಿ ಗಾಯಗೊಂಡು ಅಂಗವಿಕಲರಾಗಿದ್ದಾರೆ ಎಂದು ತಿಳಿದುಬರುತ್ತದೆ. ಸಾವಿರಾರು ಅಡಿಗಳ ಕೆಳಗೆ ಗಾಳಿ ಮತ್ತು ಬೆಳಕಿಲ್ಲದೆ ಕತ್ತಲ ಸುರಂಗಗಳಲ್ಲಿ ಕೆಲಸ ನಿರ್ವಹಿಸಿರುವುದರ ಜೊತೆಗೆ ನಿಸರ್ಗದೊಂದಿಗೆ ಘರ್ಷಣೆ ನಡೆಸುತ್ತಿದ್ದರಿಂದ ಕಾರ್ಮಿಕರು ಅನೇಕ ರೀತಿಯ ತೊಂದರೆಗಳಿಗೆ ಸಿಲುಕಿಕೊಳ್ಳುತ್ತಿದ್ದರು. ಕೆಲವು ಸಲ ತಿಳಿಯದೆ, ವಿದಿ ಇಲ್ಲದೆ ಮತ್ತು ಯಂತ್ರಗಳಿಂದಲೂ ಅಪಘಾತಗಳು ಸಂಭವಿಸುತ್ತಿದ್ದವು.

ಅಪಘಾತಗಳು ನಡೆದ ಮೇಲೆ ಪ್ರತಿಯೊಂದು ಅಪಘಾತವನ್ನು ಕೂಲಂಕಷವಾಗಿ ಸಂಶೋಧನೆ ಮಾಡಿ ಅದು ಹೇಗೆ ನಡೆಯಿತು? ಅದನ್ನು ತಪ್ಪಿಸಲು ಸಾಧ್ಯವಿತ್ತೆ ? ಇತ್ಯಾದಿಯಾಗಿ ಯೋಚಿಸಿ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುತ್ತಿದ್ದರು. ಇದರ ಆಧಾರದ ಮೇಲೆ ಹಿಂದಿನ ದಾಖಲೆಗಳನ್ನು ತಿರುವಿ ಹಾಕಿದಾಗ ಮೊದಲಿಗೆ 1000 ಕಾರ್ಮಿಕರಲ್ಲಿ ಸರಾಸರಿ ಒಬ್ಬ ಕಾರ್ಮಿಕ ಪ್ರಾಣ ಕಳೆದುಕೊಂಡಿದ್ದರೆ ಅನಂತರದ ದಿನಗಳಲ್ಲಿ 2000 ಕಾರ್ಮಿಕರಿಗೆ ಒಬ್ಬ ಕಾರ್ಮಿಕ ಪ್ರಾಣ ಕಳೆದುಕೊಳ್ಳುತ್ತಿದ್ದುದಾಗಿ ತಿಳಿದುಬರುತ್ತದೆ.

ಸಾಮಾನ್ಯವಾಗಿ ಮನುಷ್ಯರ ಅಂಗಗಳಲ್ಲಿ ಹೆಚ್ಚಾಗಿ ಅಪಘಾತಕ್ಕೆ ಒಳಗಾಗುವುದು ಕೈಗಳು. ಮನುಷ್ಯರು ಯಾವುದೇ ಕೆಲಸ ಮಾಡಿದರೂ ಮೊದಲು ಹೋಗುವುದೇ ಕೈಗಳು ತಾನೇ.

1971–76ರ ನಡುವೆ ಸಂಭವಿಸಿದ ಅಪಘಾತಗಳ ವಿವರ :

	ಅ	ಆ	ಇ	ಈ
ನಂದಿದುರ್ಗ ಗಣಿಗಳು	೪೩೨೬	೧೭೦೭	೬೩೭	೩೯೩
ಚಾಂಪಿಯನ್ ಗಣಿಗಳು	೨೦೭೨	೭೮೧	೨೮೪	೧೪೬
ಮೈಸೂರು ಗಣಿಗಳು	೨೩೭೧	೧೦೦೫	೨೬೦	೨೬೯
	೮೭೭೯	೩೪೯೩	೧೧೮೧	೮೦೮

ಅ. ಅಪಘಾತಗಳ ಸಂಖ್ಯೆ ಆ. ಕೈಗಳಿಗೆ ಗಾಯ

ಇ. ಕಾಲು ಹಿಮ್ಮಡಿಗೆ ಗಾಯ ಈ. ಕಣ್ಣಿಗೆ ಗಾಯ

ಸುರಕ್ಷತೆ ಮತ್ತು ಪರಿಹಾರ :

ಪ್ರಪಂಚದಲ್ಲಿ ಆ ಕಾಲಕ್ಕೆ ಹೆಚ್ಚು ಅಪಘಾತಗಳು ಸಂಭವಿಸುತ್ತಿದ್ದ ಗಣಿಗಳಲ್ಲಿ ಕೆಜಿಎಫ್ ಗಣಿಗಳೂ ಸೇರಿದ್ದವು. 1924–29ರಲ್ಲಿ ಒಂದು ವರ್ಷಕ್ಕೆ ಸರಾಸರಿ 200 ಅಪಘಾತಗಳು ಸಂಭವಿಸುತ್ತಿದ್ದವು. 1000 ಕಾರ್ಮಿಕರಿಗೆ ಸರಾಸರಿ 10 ಕಾರ್ಮಿಕರು ಪ್ರಾಣ ಕಳೆದುಕೊಳ್ಳುತ್ತಿದ್ದರು. 1929ರಲ್ಲಿ ಸರಾಸರಿ 15.34 ರಂತೆ 283 ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದರು. ಕೆಜಿಎಫ್‌ನಲ್ಲಿ 1909ರಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆ 14.24. ಇದು 1918ರಲ್ಲಿ 6.12 ಕ್ಕೆ ಇಳಿದಿತ್ತು. ಅನಂತರದ ದಿನಗಳಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚುತ್ತಾಹೋಗಿ 1923ರಲ್ಲಿ 1000ಕ್ಕೆ 10 ಕಾರ್ಮಿಕರು ಸಾಯುತ್ತಿದ್ದರು. ಮುಂದಿನ 2 ದಶಕಗಳು ಟ್ರಾನ್ಸ್‌ವಾಲ್ ಚಿನ್ನದ ಗಣಿಗಳಲ್ಲಿ ಮತ್ತು ಕೆಜಿಎಫ್‌ನಲ್ಲಿ ಸಂಭವಿಸುತ್ತಿದ್ದ ಅಪಘಾತಗಳು ಹೆಚ್ಚು ಕಡಿಮೆ ಒಂದೇ ರೀತಿಯಾಗಿದ್ದವು.

1929ರಲ್ಲಿ 1000 ಕಾರ್ಮಿಕರಿಗೆ 3.67 ಕಾರ್ಮಿಕರು ಸತ್ತರೆ, 1919–1928ರಲ್ಲಿ 3.05 ಕಾರ್ಮಿಕರು ಸಾವು ಕಂಡರು. 1909 ರಿಂದ 1918 ಮಧ್ಯೆ 3.15. ಅದೇ ಟ್ರಾನ್ಸ್‌ವಾಲ್ ಗಣಿಗಳಲ್ಲಿ 1908–09ರಲ್ಲಿ 5.53 ಇದ್ದು 1928ರಲ್ಲಿ 2.24ಕ್ಕೆ ಇಳಿದಿತ್ತು. 1924ರಲ್ಲಿ 1,00,000 ಪೌಂಡ್ ಬೆಲೆಯ ಚಿನ್ನವನ್ನು ಉತ್ಪಾದಿಸಲು ಕೆಜಿಎಫ್‌ನಲ್ಲಿ 1167 ಕಾರ್ಮಿಕರು ಕೆಲಸ ಮಾಡುತ್ತಿದ್ದರೆ, ರ‍್ಯಾಂಡ್ ಗಣಿಗಳಲ್ಲಿ 495 ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ಇದಕ್ಕೆ ಕಾರಣ ರ‍್ಯಾಂಡ್ ಗಣಿಗಳಲ್ಲಿ ಹೆಚ್ಚಾಗಿ ಯಂತ್ರಗಳನ್ನು ಉಪಯೋಗಿಸುವುದರ ಜೊತೆಗೆ ನೀಗ್ರೋಗಳ ದೈತ್ಯ ಶಕ್ತಿಯು ಕಾರಣವಾಗಿತ್ತು. ಟ್ರಾನ್ಸ್‌ವಾಲ್ ಗಣಿಗಳ ಒಳಗೆ ಕಡಿಮೆ ಉಷ್ಣವಿದ್ದು, ಶಿಲೆಗಳು ಮೃದುವಾಗಿದ್ದವು. ಅದೇ ಕೆಜಿಎಫ್ ಶಿಲೆಗಳು ತೀರಾ ಗಟ್ಟಿ ಶಿಲೆಗಳಾಗಿದ್ದು ಹೆಚ್ಚು ಉಷ್ಣವನ್ನು ಒಸರುತ್ತಿದ್ದವು.

1,00,000 ಪೌಂಡ್ ಚಿನ್ನ ಉತ್ಪಾದಿಸಲು ಟ್ರಾನ್ಸ್‌ವಾಲ್‌ನಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದ ಕಾರ್ಮಿಕರ ಸಂಖ್ಯೆ 1.25. ಅದೇ ಕೆಜಿಎಫ್‌ನಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದ ಕಾರ್ಮಿಕರ ಸಂಖ್ಯೆ 3.36. ಚೀಫ್ ಇನ್ಸ್‌ಪೆಕ್ಟರ್ ಆಫ್ ಮೈನ್ಸ್ ಅವರ ಒಂದು ವರದಿಯಂತೆ ಕೆಜಿಎಫ್‌ನಲ್ಲಿ ಹೆಚ್ಚು ಸಾವು ನೋವುಗಳು ಸಂಭವಿಸುತ್ತಿದ್ದದ್ದು ಇಲ್ಲಿನ ಶಿಲಾವಾದರಿ ಮತ್ತು ಶಿಲಾಸ್ಫೋಟಗಳಿಂದಲೆ. ಬ್ಲಾಸ್ಟಿಂಗ್ ಮಾಡುವಾಗ ಶಿಲಾಮಾದರಿಯನ್ನು ಸರಿಯಾಗಿ ಪರಿಶೀಲನೆ ಮಾಡದೆ ಇದ್ದದ್ದು ಕೆಜಿಎಫ್‌ನಲ್ಲಿ ಶಿಲಾಸ್ಫೋಟಗಳಿಗೆ ಇನ್ನೊಂದು ಕಾರಣವಾಗಿತ್ತು.[36]

1919–28ರಲ್ಲಿ 231 ಕಾರ್ಮಿಕರು ಶಿಲಾಸ್ಫೋಟಗಳಿಂದ ಪ್ರಾಣ ಕಳೆದುಕೊಂಡಿದ್ದರು. 1928 ಜನವರಿ ಮತ್ತು ಫೆಬ್ರವರಿ ಶೇಕಡ 84.2ರಷ್ಟು ಶಿಲಾಸ್ಫೋಟಗಳು ಸಂಭವಿಸಿದ್ದವು. ಹಳೆ ಕಾಲದಲ್ಲಿ ಸುರಂಗಗಳಲ್ಲಿ ಶಿಲೆಗಳು ಕುಸಿಯದಂತೆ ಗಟ್ಟಿಯಾದ ಮರದ ದಿಮ್ಮಿಗಳನ್ನು ನಿಲ್ಲಿಸಿ, ಕಬ್ಬಿಣ, ಗೋದಲಿ ಅಥವಾ ಕೊಟ್ಟಿಗೆಗಳನ್ನು ಹೊಡೆಯುತ್ತಿದ್ದರು. ಅನಂತರದ ದಿನಗಳಲ್ಲಿ ಈ ಸ್ಥಳದಲ್ಲಿ ಗ್ರಾನೈಟ್ ಶಿಲೆಗಳು ಮತ್ತು ಕಾಂಕ್ರಿಟ್ ಪ್ಯಾಕಿಂಗ್ ಮಾಡಲಾಗುತ್ತಿತ್ತು. ಆದರೆ ಭಾರಿ ಶಿಲಾಸ್ಫೋಟಗಳನ್ನು ತಡೆಯಲು ಯಾವುದೇ ವಿಧಾನಗಳನ್ನು ಅಳವಡಿಸಲು ಸಾಧ್ಯವಾಗಲಿಲ್ಲ.

ಇಂಗ್ಲೆಂಡಿನಿಂದ ಮುದ್ರಿಸಿ ತರುತ್ತಿದ್ದ 'ಸುರಕ್ಷತೆ ಮೊದಲು' ಎನ್ನುವ ಪತ್ರಗಳನ್ನು ಗಣಿಗಳ ಮೇಲೆ ಮತ್ತು ಒಳಗೆ ಅಲ್ಲಲ್ಲಿ ಅಂಟಿಸುತ್ತಿದ್ದರು. ಆದರೆ ಅವು ಇಂಗ್ಲಿಷ್ ಭಾಷೆಯಲ್ಲಿದ್ದು, ಅನಕ್ಷರಸ್ಥ ಕಾರ್ಮಿಕರಿಗೆ ಅರ್ಥವಾಗುತ್ತಿರಲಿಲ್ಲ. ಕಾರ್ಮಿಕರ ಸುರಕ್ಷತೆಯ ಬಗ್ಗೆ ತಮಿಳು, ತೆಲುಗು, ಕನ್ನಡ ಇನ್ನಿತರ ಭಾಷೆಗಳಲ್ಲಿ ಕಿರು ಹೊತ್ತಿಗೆಗಳನ್ನು ಮುದ್ರಿಸಿ ನೀಡಬೇಕೆಂದು ಕೆಲವರು ಒತ್ತಾಯ ಮಾಡುತ್ತಿದ್ದರು. ಅಪಘಾತವಾದವರಿಗೆ ಪ್ರಥಮ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆಯನ್ನು ತುರ್ತಾಗಿ ಮಾಡುತ್ತಿದ್ದರು. ಅಂಬುಲೆನ್ಸ್ ಯಾವಾಗಲೂ ಗಣಿಗಳ ಪಕ್ಕದಲ್ಲಿಯೆ ನಿಂತಿರುತ್ತಿತ್ತು. ಕೆಜಿಎಫ್ ಗಣಿಗಳು ದೇಶದಲ್ಲಿಯೇ ಪ್ರಥಮ ಬಾರಿಗೆ ಸೆಂಟ್‌ಜಾನ್ಸ್ ಅಂಬುಲೆನ್ಸ್ ನಿಲ್ದಾಣವನ್ನು ಪಡೆದಿತ್ತು. ಪ್ರತಿ ಗಣಿಯಲ್ಲೂ 15 ರಿಂದ 20 ಪ್ರಥಮ ಚಿಕಿತ್ಸಾ ಕೇಂದ್ರಗಳನ್ನು ಗಣಿಗಳ ಮೇಲೆ, ಮುಖ್ಯ ಹಂತಗಳಲ್ಲಿ, ಕಾರ್ಯಾಗಾರ ಮತ್ತು ಸಯೆನೈಡ್ ಗುಡ್ಡೆಗಳ ಹತ್ತಿರ ಸ್ಥಾಪಿಸಲಾಗಿತ್ತು. ಇಲ್ಲಿ ಸ್ಟ್ರೆಚ್ಚರುಗಳು, ಬ್ಲಾಂಕೆಟ್ಟುಗಳು, ಐಯೋಡಿನ್, ಬ್ಯಾಂಡೇಜ್, ಡ್ರೆಸ್ಸಿಂಗ್ ವಸ್ತುಗಳು ಇರುತ್ತಿದ್ದವು.

ಮುಖ್ಯವಾದ ಐದು ಗಣಿ ಸಮೂಹಗಳ ಹತ್ತಿರದಲ್ಲಿ ಯಾವಾಗಲೂ ಅಂಬುಲೆನ್ಸ್ ವಾಹನಗಳು ತಯಾರಾಗಿ ನಿಂತಿರುತ್ತಿದ್ದವು. ಎಲ್ಲಾ ಕಾರ್ಮಿಕರಿಗೂ ತಂಡಗಳಲ್ಲಿ ಪ್ರಥಮ ಚಿಕಿತ್ಸೆ ತರಬೇತಿಯನ್ನು ತಮಿಳು ಮತ್ತು ಇಂಗ್ಲಿಷ್ ಭಾಷೆಯಲ್ಲಿ ನೀಡುತ್ತಿದ್ದು ಇಂಗ್ಲಿಷ್ ಮತ್ತು ತಮಿಳಿನಲ್ಲಿ ತರಬೇತಿ ಪಡೆದವರಿಗೆ ಕ್ರಮವಾಗಿ 15 ಮತ್ತು 7.5ರೂ. ಬಹುಮಾನ

ನೀಡಲಾಗುತ್ತಿತ್ತು. 1923ರಲ್ಲಿ ಬೆಂಕಿ ಆರಿಸುವ ಯಂತ್ರಗಳನ್ನು ಗಣಿ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದು ಇದು ಭಾರತದಲ್ಲಿಯೆ ಅತಿ ಉತ್ತಮವಾಗಿತ್ತು.[37]

❖❖❖

ಕಂಪನಿ, ಕಾಲಕಾಲಕ್ಕೆ ಆಧುನಿಕ ಯಂತ್ರೋಪಕರಣಗಳನ್ನು ಇಂಗ್ಲೆಂಡಿನಿಂದ ತಂದು ಗಣಿ ಆಸ್ಪತ್ರೆಯನ್ನು ಸಜ್ಜುಗೊಳಿಸುತ್ತಿತ್ತು. 1928 ರಲ್ಲಿ 2 ಲಕ್ಷ ರೂ. ಖರ್ಚು ಮಾಡಿ ನವೀನ ಯಂತ್ರಗಳನ್ನು ತಂದು ಎಲ್ಲಾ ರೀತಿಯ ಕಾಯಿಲೆಗಳನ್ನು ತಪಾಸಣೆ ಮಾಡಲು ಸಜ್ಜುಗೊಳಿಸಲಾಯಿತು. ರಾಬರ್ಟ್‌ಸನ್‌ಪೇಟೆಯಲ್ಲಿ ಸಿವಿಲ್ ಆಸ್ಪತ್ರೆಯಿದ್ದು ಪೂರ್ಣವಾಗಿ ಸರಕಾರವೆ ನಡೆಸುತ್ತಿತ್ತು. ಸರಕಾರ ಮತ್ತು ಸ್ಯಾನಿಟರಿ ಬೋರ್ಡ್, ಚಾಂಪಿಯನ್ ರೀಫ್‌ನಲ್ಲಿ ಒಂದು ಡಿಸ್ಪೆನ್ಸರಿ ಮತ್ತು ರಾಬರ್ಟ್‌ಸನ್‌ಪೇಟೆಯಲ್ಲಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯೊಂದನ್ನು ನಡೆಸುತ್ತಿತ್ತು. ರಾಬರ್ಟ್‌ಸನ್‌ಪೇಟೆಯಲ್ಲಿ ಒಂದು ಸಿವಿಲ್ ಹೆರಿಗೆ ಆಸ್ಪತ್ರೆ ಇದ್ದು, ಇದಕ್ಕೆ 1/3 ಭಾಗದಷ್ಟು ಹಣವನ್ನು ಸ್ಯಾನಿಟರಿ ಬೋರ್ಡ್ ಕೊಡುತ್ತಿತ್ತು. ಗಣಿ ಕಂಪನಿಗಳು ವರ್ಷಕ್ಕೆ 6000 ರೂ. ಪರಿಹಾರ ಧನವನ್ನು ನೀಡುತ್ತಿದ್ದವು.

❖❖❖

1. File no.445 of 1903,Slno.1-6,Mysore residency files,National archieves of India, (Miners and Millhands-work, culture and poltics in princely Mysore- Janaki Nair).
2. Labour in India, socioeconomic conditions of workers in Kolar gold mines, M.A.Sreenivasan, Vikas publishing house, Pvt.Ltd, New Delhi. p.10.
3. Mine closure planning- A case study of Kolar Gold Fields, S.D.Prasad, 22-24 January 2003, p.12.
4. ibidem p.12-13
5. Mysore Census,1941, vol.xxv, report, table-3.
6. Census of India,1901, Mysore, vol.xxiv, part1, report,p.729.
7. Report of the Mysore census of 1881 (Bangalore:1884),p.33.
8. Labour in India, socioeconomic conditions of workers in Kolar gold mines, M.A.Sreenivasan, Vikas publishing house, Pvt.Ltd, New Delhi.p.6.
9. ibidem p.10

10. K.S.Seetharaman,Kolar Thangvail Varalaru,p-69)
11. Ramu, Economics and Political weekly, p.10.
12. Labour in India, socioeconomic conditions of workers in Kolar gold mines, M.A.Sreenivasan, Vikas publishing house, Pvt.Ltd, New Delhi, p.16.
13. ibidem p.25
14. Deshpande,Report on the Gold Mining Industry,p.21.
15. Miners and Millhands-work, culture and politics in princely Mysore-Janaki Nair, sage publication, New Delhi,p.100.
16. Tangam Summa Varuma? in Duriairasan,Thanavail Thozhial githam, Oorgaum,1951,p.4.
17. Labour in India, socioeconomic conditions of workers in Kolar gold mines, M.A.Sreenivasan, Vikas publishing house, Pvt.Ltd, New Delhi p.27.
18. ibidem p.26.
19. Hindu,11 july 1940.
20. Vazhinadi Chindu,p.10.
21. Labour in India, socioeconomic conditions of workers in Kolar gold mines, M.A.Sreenivasan, Vikas publishing house, Pvt.Ltd, New Delhi.p.40-41.
22. ibidem p.44
23. ibidem
24. ibidem p.62-65
25. Report of the Budget sub committee of the Sanitory board, April, 1969.
26. Twenty-third Annual report of the sanitory commissioner with the Govt. of Mysore.
27. K.S.Seetharaman, Kolar Thangvail Varalaru, p. 274
28. Ibidem, p.243-7
29. Ibidem, p205.

30. B.V.Shenoi, A brief review on total of 330 autopsis done so for Kolar Pneumoconiosis, p.p394-98; Kolar gold Mines Centenary celebrations, Seminar on Recent trends in Gold mines practice, vol.2,20-21.1980.
31. A Brief history of preneumoconiosis on the kolar gold fields -Dr. A.M.S. Gowda & B.V.Shenoi centenary sauvenir - BGML 1980
33. Administration reports of the Mysore, Nundydroog and Balghat Mining companies, BGML library.
34. Accidents in the KGF, 1891-1946, Simmons, wages for work, pp.114-115.
34/1. File no. 6-19, Sl. no.38, 1919-20; Mysore Palace paper KAS (Miners and Millhands- work, culture and politics in princely Mysore-Janaki Nair).
35. Accidents in the KGF, 1891-1946, Simmons, wages for work, pp116-117 (Miners and Millhands- work, culture and politics in princely Mysore- Janaki Nair).
36. Roger Horseley, Accident Prevention, Past and Future" KGF Bulletin, vol IX, no.47, 1938, p.100. (Interview with workers who had worked with carbide lamps in the 1940s revealed not only that gangs of workers had worked out a scheme of careful co-operation which enabled every worker to save a proportion of his fuel for home consumption, but that they developed an underground sense which enabled them to move around without lights.Ineterview with Devanbu,Gnanaprakasam and subramani, May 22,1995).
37. Report of the Chief Inspector of Mines in Mysore, 1928-29.

ಅಧ್ಯಾಯ–7

ಜಾತಿ ವರ್ಗ ಮತ್ತು ಕಾರ್ಮಿಕ ಸಂಘಟನೆಗಳು

ಸ್ವಾತಂತ್ರ್ಯ ಪೂರ್ವ ಮತ್ತು ಅನಂತರದ ಕಾಲದಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ಜಾತಿ, ವರ್ಗಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಜಾತಿ, ವರ್ಗ, ರಾಷ್ಟ್ರೀಯತೆ ಮತ್ತು ಕಮ್ಯೂನಿಷ್ಟರು; ಕಾರ್ಮಿಕರು ಮತ್ತು ರಾಜಕೀಯ, ಮುಷ್ಕರ–ಪ್ರತಿಭಟನೆ ಮತ್ತು ಸಾಮಾಜಿಕ ಸಂಘರ್ಷಣೆಗಳನ್ನು ವಿಶ್ಲೇಷಿಸಲಾಗಿದೆ.

ಕೆಜಿಎಫ್‌ಲ್ಲಿ ದುಡಿಯುತ್ತಿದ್ದ ಕಾರ್ಮಿಕರು ತಮಗೆ ಅನ್ಯಾಯವಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳವ ಹೊತ್ತಿಗೆ ಗಣಿಗಳ ಅರ್ಧ ಚರಿತ್ರೆ ಮುಗಿದುಹೋಗಿತ್ತು. ಕ್ರಿ.ಶ. 1940ರಲ್ಲಿ ಮೊದಲ ಬಾರಿಗೆ ತಮಗಾಗಿ ಒಂದು ಸಂಘವನ್ನು ಕಟ್ಟಿಕೊಳ್ಳಬೇಕು ಎನ್ನುವ ಆಲೋಚನೆ ಬಂದು ತಮ್ಮ ದುಡಿತಕ್ಕೆ ತಕ್ಕ ಸಂಬಳ ಇನ್ನಿತರ ಸವಲತ್ತುಗಳನ್ನು ಕಂಪನಿ ನೀಡಬೇಕೆಂದು ಕಾರ್ಮಿಕರು ಒತ್ತಾಯ ಮಾಡತೊಡಗಿದರು.

ಕಂಪನಿ ಪ್ರಾರಂಭದಿಂದಲೂ 'ಹೈರ್ ಆಂಡ್ ಫೈರ್' ಎನ್ನುವ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿತ್ತು. ತನಗೆ ಇಷ್ಟ ಬಂದಾಗ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದು, ಬೇಡವೆಂದಾಗ ತೆಗೆದು ಹಾಕುವುದು ನಡೆದಿತ್ತು. ಪೂರ್ಣವಾಗಿ ಗುತ್ತಿಗೆಯ ಆಧಾರದಲ್ಲೇ ಕೆಲಸವನ್ನು ನಡೆಸುತ್ತಿತ್ತು. ಈಸ್ಟ್ ಇಂಡಿಯಾ ಕಂಪನಿ ಈ ದೇಶಕ್ಕೆ ಕಾಲಿಟ್ಟ ಕಾಲದಿಂದಲೂ ಯಾವುದೇ ರೀತಿಯ ಸವಲತ್ತುಗಳನ್ನು ಸ್ಥಳೀಯ ಕಾರ್ಮಿಕರಿಗೆ ನೀಡಿರಲಿಲ್ಲ. ತೃತಿಯ ಜಗತ್ತಿನ ಸಂಪತ್ತನ್ನು ದೋಚುವ ವ್ಯಾಮೋಹ ಅಂದಿನಿಂದಲೆ ಅದಕ್ಕೆ ಅಂಟಿಕೊಂಡಿತ್ತು.

ಕಂಪನಿಯ ಒಳಗೆ ಕಾರ್ಮಿಕರು ಸಂಘಟಿತರಾಗುತ್ತಿದ್ದಾರೆ, ಸಂಘಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ ಅಥವಾ ಹೊರಗಡೆಯಿಂದ ಬರುವ ಕಾರ್ಮಿಕ ನಾಯಕರು ಕಾರ್ಮಿಕರನ್ನು ಕುರಿತು ಭಾಷಣಗಳನ್ನು ಮಾಡುತ್ತಿದ್ದಾರೆ ಎಂದು ಕಂಪನಿಯ ಆಡಳಿತಕ್ಕೆ ತುಸುವೆ ಸೂಚನೆ ಸಿಕ್ಕರೂ ಸಾಕಾಗಿತ್ತು. ಮರು ಕ್ಷಣವೆ ಅವರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತಿತ್ತು. ಕ್ರಿ.ಶ. 1930ರ ಸುಮಾರಿಗೆ ಭಾರಿ ಒತ್ತಡಕ್ಕೆ ಮಣಿದ ಕಂಪನಿ, ರಾಜ್ಯ ಸರಕಾರ ತಲೆ ಹಾಕಿದ ಮೇಲೆ ವಿದ್ಯುತ್ ಇನ್ನಿತರ ಸವಲತ್ತುಗಳನ್ನು ಸ್ವಲ್ಪಮಟ್ಟಿಗೆ ಕಲ್ಪಿಸಿಕೊಟ್ಟಿತು.

ಕಾರ್ಮಿಕರ ನಡುವೆ ಅಸಮಾಧಾನ ಬೆಳೆಯುತ್ತ ಹೋಗುತ್ತಿದ್ದು ಎಲ್ಲರೂ ಒಟ್ಟಾಗಿ ಹೋರಾಡಲು ಸಮಯಕ್ಕಾಗಿ ಕಾಯುತ್ತಿದ್ದರು. ಅಲ್ಲಿ ಇಲ್ಲಿ ಸಣ್ಣ ಪುಟ್ಟ ಘಟನೆಗಳು, ಪ್ರತಿಭಟನೆಗಳು ಸಂಭವಿಸುತ್ತಿದ್ದರೂ ಎಲ್ಲವನ್ನೂ ಅಲ್ಲಲ್ಲೆ ಮುಚ್ಚಿ ಹಾಕಲಾಗುತ್ತಿತ್ತು. ಹೊರರಾಜ್ಯಗಳ ಕಾರ್ಮಿಕ ಸಂಘಟನೆಗಳು ಮತ್ತು ರಾಜ್ಯದ ಇನ್ನಿತರ ಕಂಪನಿಗಳ ಕಾರ್ಮಿಕರು ಕೆಜಿಎಫ್ ಕಾರ್ಮಿಕರಿಗೆ ಆಗುತ್ತಿದ್ದ ಅನ್ಯಾಯಗಳನ್ನು ಗಮನಿಸುತ್ತಲೇ ಇದ್ದರು. ಕಾರ್ಮಿಕರಲ್ಲಿ ಕುದಿಯುತ್ತಿದ್ದ ಆಕ್ರೋಶವೆಲ್ಲ ಒಮ್ಮೆಲೆ ಸಿಡಿದು ಬಂದಂತೆ ಕ್ರಿ.ಶ.1940ರ ಜುಲೈ 16 ರಂದು ಉರಿಗಾಂ ಮತ್ತು ಚಾಂಪಿಯನ್ ರೀಫ್‌ನ ಎಲ್ಲಾ ಶ್ರೇಣಿಯ ಕಾರ್ಮಿಕರು ಕೆಲಸ ನಿಲ್ಲಿಸಿ, ಗಣಿಗಳಿಂದ ಹೊರಕ್ಕೆ ಬಂದುಬಿಟ್ಟರು. ಮರುದಿನ ನಂದಿದುರ್ಗ ಮತ್ತು ಮೈಸೂರು ಮೈನ್ಸ್‌ನ ಕಾರ್ಮಿಕರು ಸೇರಿಕೊಂಡರು.

ಅಲ್ಲಿಂದ ಹಿಂದಕ್ಕೆ ತಿರುಗಿ ನೋಡದ ಕಾರ್ಮಿಕರು, ಆಡಳಿತದ ಯಾವುದೇ ಆಮಿಷಕ್ಕೆ ಬಲಿಯಾಗದೆ ಒಟ್ಟಾಗಿ ನಿಂತು ಪ್ರತಿಭಟಿಸತೊಡಗಿದರು. ಕಾರ್ಮಿಕ ನಾಯಕರಾದ ಕೆ.ಸಿ.ಫಿಲಿಫ್ಸ್ ಮತ್ತು ಎಸ್.ಆರ್.ಷಣ್ಮುಗಂ ಮತ್ತು ಸ್ಥಳೀಯ ವ್ಯಾಪಾರಿ ಎ.ಟಿ.ಲಕ್ಷ್ಮಣ್ ಮುದಲಿಯಾರ್ ಕಾರ್ಮಿಕರ ಬೆನ್ನಿಗೆ ನಿಂತುಕೊಂಡರು. ಕಂಪನಿಯ ಆಡಳಿತಾಧಿಕಾರಿಗಳು ಮತ್ತು ಸರಕಾರ ಒಟ್ಟುಗೂಡಿ ಕಾರ್ಮಿಕರ ಹೋರಾಟವನ್ನು ಮುರಿಯಲು ನಡೆಸಿದ ಪ್ರಯತ್ನಗಳೆಲ್ಲ ವಿಫಲವಾದವು. ಸರಕಾರ ಕರಪತ್ರಗಳ ಮೂಲಕ, ಕೆಲಸಕ್ಕೆ ಬೇಗನೆ ಸೇರಿಕೊಳ್ಳಿ ಇಲ್ಲವೆಂದರೆ ತೊಂದರೆಗಳನ್ನು ಅನುಭವಿಸುತ್ತೀರಿ ಎಂದು ಕಾರ್ಮಿಕರಿಗೆ ಎಚ್ಚರಿಕೆ ನೀಡಿತು. ಕ್ರಿ.ಶ.1940 ಜುಲೈ 17 ರಂದು ಮೈಸೂರು ಲ್ಯಾನ್ಸರ್ಸ್ ಮತ್ತು ಇನ್‌ಫ್ಯಾಂಟ್ರಿಯವರು ಕೆಜಿಎಫ್ ತಲುಪಿ ಮುಂದಿನ ಆಜ್ಞೆಗೆ ಕಾಯತೊಡಗಿದರು.

ಕ್ರಿ.ಶ.1940, ಜುಲೈ 26 ರಂದು ಆಡಳಿತ ವರ್ಗ ಒಂದು ಆಣೆ ಸಂಬಳವನ್ನು ಹೆಚ್ಚಿಸುವುದಾಗಿ ಕರಪತ್ರಗಳ ಮೂಲಕ ಕಾರ್ಮಿಕರಿಗೆ ತಿಳಿಸಿತು. ಮರು ದಿನ ಮೈಸೂರು ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲ್ ಕೆಜಿಎಫ್ ತಲುಪಿ, ಉರಿಗಾಂ ಜಂಖಾನಾ ಮೈದಾನದಲ್ಲಿ ಕಂಪನಿ ಹೇಳಿದ್ದಕ್ಕೆ ಒಪ್ಪಿಕೊಳ್ಳುವಂತೆ ಕಾರ್ಮಿಕರನ್ನು ಒತ್ತಾಯಿಸಿದರು. ದಿವಾನರು ಹೇಳಿದ್ದನ್ನು ಕಾರ್ಮಿಕರು ತಿರಸ್ಕರಿಸಿ, ತಮ್ಮ ನಾಯಕರ ಜೊತೆಗೆ

ಆಡಳಿತಾಧಿಕಾರಿಗಳು ಕುಳಿತು ಸಂಧಾನಕ್ಕೆ ಬರಲಿ ಎಂದು ದಿವಾನರ ಕಾರ್ ಮುಂದೆ ಧರಣಿ ಕುಳಿತರು. ಅಧಿಕಾರಿಗಳು ಸಂಧಾನಕ್ಕೆ ಒಪ್ಪಿಕೊಂಡ ಮೇಲೆ ದಿವಾನರ ಕಾರನ್ನು ಬಿಡಲಾಯಿತು. ಅನಂತರ ಕಂಪನಿ, ಜುಲೈ 29 ರಂದು ಷಣ್ಮುಗಂ ಮತ್ತು ಫಿಲಿಫ್ಸ್ ಜೊತೆಗೆ ಮಾತುಕತೆ ನಡೆಸುವುದಾಗಿ ಕರೆ ನೀಡಿತು. ಆದರೆ ಅದೇ ರಾತ್ರಿ ಇಬ್ಬರು ನಾಯಕರನ್ನು ಬಂಧಿಸಿ ಕಾಣದಂತೆ ಇಡಲಾಯಿತು. ವಿಷಯ ತಿಳಿದ ಕಾರ್ಮಿಕರು ಮರು ದಿನ ಬೆಳಿಗ್ಗೆ ಭಾರಿ ಸಂಖ್ಯೆಯಲ್ಲಿ ಪ್ರತಿಭಟಿಸುತ್ತ ಮೆರವಣಿಗೆ ಹೊರಟರು.

ಅಗಸ್ಟ್ ತಿಂಗಳ ಮೊದಲ ವಾರದಲ್ಲಿ ಅನೇಕ ಕಾರ್ಮಿಕರು ಕೆಜಿಎಫ್ ಬಿಟ್ಟು ಹೊರಟುಹೋದರು. ಪ್ರತಿಭಟನೆ ಎಷ್ಟು ದಿನಗಳು ನಡೆಯುತ್ತದೊ ಏನೋ ಎಂದುಕೊಂಡ ಕೆಲವು ಕಾರ್ಮಿಕರು, ಬರಿ ಕಾಲುಗಳಲ್ಲಿ ತಮ್ಮ ಹಳ್ಳಿಗಳ ಕಡೆಗೆ ಹೊರಟರೆ, ಇನ್ನುಳಿದವರು ಸುತ್ತಮುತ್ತಲು ಹಳ್ಳಿಗಳಲ್ಲಿ ಕೂಲಿ ಕೆಲಸ ಹುಡುಕುತ್ತ ಹೊರಟರು. ಕೆಜಿಎಫ್ ಕಾರ್ಮಿಕರ ಪ್ರತಿಭಟನೆ ತಿಳಿದ ಅನೇಕ ಕಾರ್ಮಿಕ ನಾಯಕರು ಮತ್ತು ಸಮಾಜ ಕಾರ್ಯಕರ್ತರು ಕೆಜಿಎಫ್ ಕಡೆಗೆ ಬರತೊಡಗಿದರು. ಅವರಲ್ಲಿ ಟಿ.ಎಸ್.ಎ.ಆಚಾರ್ಯ, ಟಿ.ಆರ್. ರಾಮಚಂದ್ರ, ಪಿ.ಆರ್.ಕೆ.ಶರ್ಮ ಮತ್ತು ವಿ.ವಿ. ಗಿರಿ (ಮಾಜಿ ರಾಷ್ಟ್ರಪತಿ) ಅವರೂ ಇದ್ದರು. ಅದೇ ವರ್ಷ ಅಕ್ಟೋಬರ್‌ವರೆಗೂ ಅಧಿಕಾರಿಗಳು ಮತ್ತು ಕಾರ್ಮಿಕ ನಾಯಕರ ನಡುವೆ ಅನೇಕ ಸಲ ನೇರ ಮಾತುಕತೆಗಳು ಮತ್ತು ಪತ್ರ ವ್ಯವಹಾರ ನಡೆಯಿತು.

ಕೊನೆಗೆ ಒಂದು ಸಮಿತಿಯನ್ನು ಮಾಡಿ ಕಾರ್ಮಿಕರ ಹಕ್ಕೊತ್ತಾಯಗಳನ್ನು ಕೆಲವು ನಿರ್ಬಂಧಗಳ ಜೊತೆಗೆ ಪರಿಶೀಲಿಸುವುದಾಗಿ ಕಂಪನಿ ತೀರ್ಮಾನಿಸಿತು. ಕಂಪನಿ ಎಲ್ಲಾ ಶರತ್ತುಗಳನ್ನು ಒಪ್ಪಿಕೊಂಡ ಮೇಲೆ ಕೊನೆಗೆ 12.08.1940ರಂದು ಎಲ್ಲಾ ಕಾರ್ಮಿಕರು ಕೆಲಸಕ್ಕೆ ಹಾಜರಾದರು. 1940 ಅಕ್ಟೋಬರ್ ನಿಂದ 1941 ಫೆಬ್ರವರಿವರೆಗೆ ಕಾರ್ಮಿಕರ ತೊಂದರೆಗಳು ಮತ್ತು ಒತ್ತಾಯಗಳನ್ನು ಪರಿಶೀಲಿಸಿದ ದಿವಾನ್ ಬಹದ್ದೂರ್ ಮಥಾನ್ ಅವರು ವರದಿಯನ್ನು ಒಪ್ಪಿಸಿದರು.

ಕಂಪನಿಯಿಂದ ತೆಗೆಯಲ್ಪಟ್ಟ ಕಾರ್ಮಿಕ ನಾಯಕರು ಪಕ್ಕದ ಕುಪ್ಪಂನಲ್ಲಿ (ಆಂಧ್ರ ಪ್ರದೇಶ) ಕಚೇರಿ ಮಾಡಿಕೊಂಡಿದ್ದರು. ಕೆಜಿಎಫ್‌ನಲ್ಲಿದ್ದ ನಾಯಕರು ಆಗಾಗ ಕುಪ್ಪಂಗೆ ಹೋಗಿ ಅವರ ಜೊತೆ ಮಾತುಕತೆ ನಡೆಸಿ ಬರುತ್ತಿದ್ದರು. ಕೆಲವರು ಗುಪ್ತವಾಗಿ ಸಂಘಟನೆಯ ಕೆಳಗೆ ಕಾರ್ಮಿಕರನ್ನು ನೋಂದಾಯಿಸುವ ಕೆಲಸದಲ್ಲಿ ತೊಡಗಿದ್ದು, ಕಾರ್ಮಿಕರನ್ನು ಅಲ್ಲಲ್ಲಿ ಸೇರಿಸಿ ಸಂಘಟನೆಯ ಬಗ್ಗೆ ಹೇಳುತ್ತಿದ್ದರು. ಕುಪ್ಪಂ ಮತ್ತು ಕೆಜಿಎಫ್ ಮಧ್ಯೆ ಇರುವ ಬೂದುಗೂರಿನ ಹತ್ತಿರ ಒಂದು ಹುಣಿಸೆ ಮರದ ಕೆಳಗೆ ವಾರಕ್ಕೊಮ್ಮೆ ಸಾವಿರಾರು ಕಾರ್ಮಿಕರು ಸೇರುತ್ತಿದ್ದರು. ಅನೇಕ ಕಡೆಗಳಿಂದ ಇಲ್ಲಿಗೆ ಬರುತ್ತಿದ್ದ ಕಾರ್ಮಿಕ ನಾಯಕರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಜುಲೈ 1941ರಲ್ಲಿ ಮೈಸೂರು ಲೇಬರ್ ಆ್ಯಕ್ಟ್‌ನ್ನು ತರಲಾಯಿತು. ಅಂದಿನಿಂದ ಕಾರ್ಮಿಕರ ಅಹವಾಲುಗಳು ಮತ್ತು ತೊಂದರೆಗಳ ಬಗ್ಗೆ ಎಣೆಯಿಲ್ಲದಷ್ಟು ಪತ್ರಗಳು ಬರತೊಡಗಿದವು. ಅಂತಿಮವಾಗಿ ಮೈಸೂರು ಸರಕಾರ ಕಾರ್ಮಿಕರ ಸಂಘಟನೆ ಸ್ಥಾಪಿಸಲು ಅನುಮತಿ ನೀಡಿದ್ದಲ್ಲದೆ, ಕಾರ್ಮಿಕರನ್ನು ಪ್ರತಿನಿಧಿಸುವ ನಾಯಕರು ಚುನಾವಣೆಗೆ ನಿಂತುಕೊಳ್ಳಲು ಅವಕಾಶವನ್ನು ನೀಡಿತು. 1941, ಅಗಸ್ಟ 31 ರಂದು ವಿಜಯದ ದುಂದುಭಿ ಮೊಳಗಿತು. ಕೆಲಸದಿಂದ ತೆಗೆದುಹಾಕಿದ್ದ ನಾಯಕರು ಮತ್ತು ಕಾರ್ಮಿಕರು ಕೂಡ ಕೆಲಸಕ್ಕೆ ಹಾಜರಾದರು. ಕಾರ್ಮಿಕರ ನಾಯಕ ಶರ್ಮ, ಸಿಂಗರಿಸಿದ ಪಲ್ಲಕ್ಕಿಯ ಮೇಲೆ ಕುಳಿತುಕೊಂಡಿದ್ದು, ಪಲ್ಲಕ್ಕಿಯನ್ನು 21 ಜೋಡಿ ಎತ್ತುಗಳು ಎಳೆಯುತ್ತಿದ್ದವು. 1942ರಲ್ಲಿ ಕಾರ್ಮಿಕ ಸಂಘಟನೆಗಳ ಚುನಾವಣೆಗಳು ನಡೆದವು. ಅಲ್ಲಿಂದ ಕಂಪನಿಯ ಒಳಗೆ ಕಾರ್ಮಿಕರ ಜೊತೆ ಜೊತೆಗೆ ರಾಜಕೀಯವು ನುಸುಳಿಕೊಂಡಿತು. ಅಲ್ಲಿಗೆ ಸರಿಯಾಗಿ ಗಣಿಗಳ ಅರ್ಧ ಚರಿತ್ರೆ ಮುಗಿದಿತ್ತು.

❖❖❖

1942ರಲ್ಲಿ ಮೈಸೂರು ಕಾರ್ಮಿಕರ ಕಾನೂನು ಬಂದ ಮೇಲೆ ಕಾರ್ಮಿಕರ ಸಂಘಟನೆಗಳು ಕಾನೂನಿನ ಪ್ರಕಾರ ನೋಂದಣಿ ಪಡೆದವು. ಆದರೆ ಇವುಗಳ ಯಶೋಗಾಥೆ ಎಷ್ಟೋ ವರ್ಷಗಳ ಹಿಂದೆಯೇ ಪ್ರಾರಂಭವಾಗಿತ್ತು. ಪ್ರತಿಭಟನೆಗಳು ಮತ್ತು ಬಂದ್‌ಗಳು 1908, 1920 ಮತ್ತು 1922 ರಲ್ಲಿಯೇ ಜೋರಾಗಿ ನಡೆದಿದ್ದವು. 1930ರಲ್ಲಿ ನಡೆದ ಪ್ರತಿಭಟನೆಯಲ್ಲಿ 16,000 ಕಾರ್ಮಿಕರು ಪಾಲ್ಗೊಂಡಿದ್ದರು. ಇದು 21 ದಿನಗಳು ನಡೆದಿತ್ತು. ಇದರಲ್ಲಿ 48 ಕಾರ್ಮಿಕರು ಗಾಯಗೊಂಡಿದ್ದರು. 1923ರಲ್ಲಿ ಚಾಂಪಿಯನ್ ರೀಫ್‌ನಲ್ಲಿ ಮೊದಲಬಾರಿಗೆ ಆದಿ ದ್ರಾವಿಡ ಅಸೋಸಿಯೇಶನ್ ಪ್ರಾರಂಭವಾಗಿತ್ತು. ಇದು ಟ್ರೇಡ್ ಯುನಿಯನ್ ಅಲ್ಲದಿದ್ದರೂ ದಲಿತ ಕಾರ್ಮಿಕರ ಸಾಮಾಜಿಕ ತೊಂದರೆಗಳನ್ನು ನಿವಾರಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿತ್ತು. ಮುಂದಿನ ದಿನಗಳಲ್ಲಿ ಕೆಜಿಎಫ್ ಪರಿಶಿಷ್ಟ ಜಾತಿಯ ಒಂದು ಭದ್ರ ಕೋಟೆಯಾಯಿತು.

1940ರಲ್ಲಿ ನೋಂದಣಿ ಪಡೆದ ಶೆಡ್ಯೂಲ್ ಕಾಸ್ಟ್ ಫೆಡರೇಶನ್ ಟ್ರೇಡ್ ಯುನಿಯನ್ ಪ್ರಾರಂಭಗೊಂಡಿತು. ಇದು ಶೇಕಡ 30 ರಷ್ಟು ಕಾರ್ಮಿಕರನ್ನು ತನ್ನ ಸದಸ್ಯರನ್ನಾಗಿ ಮಾಡುವಲ್ಲಿ ಸಫಲವಾಗಿತ್ತು. ಜೆ.ಸಿ.ಆದಿಮೂಲಮ್ ಮತ್ತು ಪಿ.ಎಮ್.ಸ್ವಾಮಿ ದೊರೈ ಇದರ ಮೊದಲ ನಾಯಕರು. ಈ ಯುನಿಯನ್ ಮುಂದಿನ ದಿನಗಳಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಆಗಿ ಮುಂದುವರಿತು. ಇಂಡಿಯನ್ ನ್ಯಾಷನಲ್ ಟ್ರೇಡ್ ಯುನಿಯನ್ ಕಾಂಗ್ರೆಸ್ (ಐಎನ್‌ಟಿಯುಸಿ) ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಜೊತೆಗೆ ಸಂಬಂಧ ಹೊಂದಿತ್ತು. ಅದೇ ರೀತಿ ಆಲ್ ಇಂಡಿಯ ಟ್ರೇಡ್ ಯುನಿಯನ್ ಕಾಂಗ್ರೆಸ್ (ಎಐಟಿಯುಸಿ) ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ ಜೊತೆಗೆ ಸಂಬಂಧ

ಹೊಂದಿತ್ತು. ಈ ಎರಡೂ ಸಂಘಟನೆಗಳು ಕಾರ್ಮಿಕರ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದವು.

ಎಸ್.ಆರ್. ಷಣ್ಮುಗಂ ಮತ್ತು ಕೆ.ಸಿ.ಚಂಗಲರಾಯರೆಡ್ಡಿ ಐಎನ್‌ಟಿಯುಸಿ ನಾಯಕರಾದರೆ, ವಿ.ಎಮ್.ಗೋವಿಂದನ್ ಮತ್ತು ಕೆ.ಎಸ್.ವಾಸನ್ ಎಐಐಯುಸಿ ನಾಯಕರಾಗಿದ್ದರು. ಸಾಮ್ಯೂಲ್ ಬಿ ಅರಕ್ಕಲ್ ಮತ್ತು ಕಣ್ಣನ್ ನಾಯರ್ ಅವರು ಸಮಾಜವಾದ ಪಕ್ಷದ ಮುಂದಾಳತ್ವ ವಹಿಸಿದ್ದರು. ಈ ಎಲ್ಲಾ ಯುನಿಯನ್‌ಗಳು ಪ್ರಾಮುಖ್ಯತೆ ಪಡೆದಿದ್ದು 1940ರ ನಂತರವೇ. ಅದಕ್ಕೂ ಮುಂಚೆ 1930ರಿಂದಲೂ ಯುನಿಯನ್‌ಗಳು ಕಾರ್ಮಿಕರನ್ನು ಸಂಘಟಿಸುವುದರಲ್ಲಿ ನಿರತವಾಗಿದ್ದವು. 1928ರಲ್ಲಿ ದಕ್ಷಿಣ ಭಾರತದ ಲೇಬರ್ ಯುನಿಯನ್‌ನ ಕಾರ್ಯದರ್ಶಿ ಎರ್ನೆಷ್ಟ್ ಕಿರ್ನ್ ಟ್ರೇಡ್ ಯುನಿಯನ್ ಬಗ್ಗೆ ಚರ್ಚೆ ಮಾಡಲು ಕಂಪನಿಗಳ ಆಡಳಿತ ಮಂಡಳಿಯ ಭೇಟಿ ಮಾಡಿದ್ದರು. ಈ ಭೇಟಿ ಮುಂದಿನ ದಿನಗಳಲ್ಲಿ ಟ್ರೇಡ್ ಯುನಿಯನ್‌ಗಳು ಹುಟ್ಟಿಕೊಳ್ಳುವುದಕ್ಕೆ ದಾರಿಯಾಯಿತು. 1935ರ ಪ್ರತಿಭಟನೆಯಲ್ಲಿ 4 ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದ ಕಾರಣ ಯುನಿಯನ್‌ಗಳಿಗೆ ಇನ್ನಷ್ಟು ಶಕ್ತಿ ಬಂದಿತ್ತು. 1940ರ ಜುಲೈಯಲ್ಲಿ ಉರಿಗಾಂ ಗಣಿ ಕಾರ್ಮಿಕರು 27 ದಿನಗಳು ಪ್ರತಿಭಟನೆ ನಡೆಸಿದ್ದರು. 1945ರ ಪ್ರತಿಭಟನೆಯಲ್ಲಿ 18,000 ಕಾರ್ಮಿಕರು ಪಾಲ್ಗೊಂಡಿದ್ದರು. 1946ರಲ್ಲಿ ಕಮ್ಯೂನಿಸ್ಟ್ ಪಕ್ಷ ಆಯೋಜಿಸಿದ್ದ ಪ್ರತಿಭಟನೆಯಲ್ಲಿ 20,000 ಕಾರ್ಮಿಕರು ಪಾಲ್ಗೊಂಡಿದ್ದು ಇದು 78 ದಿನಗಳು ಮುಂದುವರಿದಿತ್ತು. ಇದಕ್ಕೆ ಸಾರ್ವಜನಿಕರೂ ಸ್ಪಂದಿಸಿದ್ದರು.

4 ಟ್ರೇಡ್ ಯುನಿಯನ್‌ಗಳ ಜೊತೆಗಿದ್ದ ಕಾರ್ಮಿಕರಿಗೆ ಈ ಯುನಿಯನ್‌ಗಳಿಂದ ಯಾವುದೇ ರೀತಿಯ ಪರಿಹಾರವಾಗಲಿ ಸಂತೋಷವಾಗಲಿ ಯಾವಾಗಲೂ ದೊರಕಲಿಲ್ಲ. ಬದಲಿಗೆ ಎಲ್ಲಾ ಕಾಲದಲ್ಲೂ ವೇತನ ಪರಿಶೀಲನೆ ಮಾಡವಾಗ ಸಂಬಳ ಕೆಲವು ರೂಪಾಯಿಗಳು ಮಾತ್ರ ಹೆಚ್ಚಾಗುವಂತೆ ನೋಡಿಕೊಂಡರು. ಅಂದರೆ ಆಡಳಿತ ಮಂಡಳಿಯ ಜೊತೆಗೆ ಒಳಗೊಳಗೆ ಕೈಜೋಡಿಸಿ ಸ್ವಲಾಭ ಪಡೆದಿದ್ದಲ್ಲದೆ ಕಾರ್ಮಿಕ ಸಂಘಟನೆಗಳು ಕಾರ್ಮಿಕರನ್ನು ಕತ್ತಲ ಸುರಂಗಗಳಲ್ಲಿ ಹಾಕಿ ಮಣ್ಣು ಮುಚ್ಚಿದ್ದೆ ಹೆಚ್ಚು. 1942ರಲ್ಲಿ ಎಸ್.ಒ.ಭಾಗ್ಯನಾಥನ್, ಮಗಿಮೈನಾಥನ್, ಎಸ್.ಆರ್.ಷಣ್ಮುಗಂ, ಎ.ಟಿ.ಲಕ್ಷ್ಮಣ್ ಮೊದಲಿಯಾರ್, ಕೆ.ಚಂಗಲರಾಯರೆಡ್ಡಿ, ಎಂ.ವಿ.ಕೃಷ್ಣಪ್ಪ, ಪಂಡಿತ್ ರಾಮಲಿಂಗಮ್ ಮತ್ತು ಎಂ.ಸಿ.ಪೆರುಮಾಳ್ ಅವರು ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ತೊಡಗಿಕೊಂಡಿದ್ದರು.[1]

ಕಾರ್ಮಿಕರ ಮುಷ್ಕರ :

1905ರಲ್ಲಿ 35000 ಕಾರ್ಮಿಕರು ಮತ್ತು ಅವರ ಕುಟುಂಬಗಳು ಗಣಿ

ಕಾಲೋನಿಗಳಲ್ಲಿ ನೆಲೆಯೂರಿದ್ದವು. ಆ ವರ್ಷ ಶತಮಾನದಲ್ಲಿಯೇ ಅತಿ ಹೆಚ್ಚು ಚಿನ್ನದ ಉತ್ಪಾದನೆಯಾಗಿತ್ತು.[2] ಸ್ವಾತಂತ್ರ್ಯ ಪೂರ್ವದಲ್ಲಿ ಕೆಜಿಎಫ್ ಗಣಿಗಳು ದೇಶದ ಅತಿ ದೊಡ್ಡ ಉದ್ದಿಮೆಯಾಗಿದ್ದು, ಆ ಕಾಲಕ್ಕೆ ಬೆಂಗಳೂರಿನಲ್ಲಿದ್ದ ಮುಖ್ಯ ಉದ್ದಿಮೆ ಎಂದರೆ ಹತ್ತಿ ಮಿಲ್ಲುಗಳು ಮಾತ್ರ. ಎರಡು ವಿಶ್ವ ಮಹಾಯುದ್ಧಗಳು ಮತ್ತು ದೇಶ ಸ್ವಾತಂತ್ರ್ಯ ಪಡೆದ ನಂತರ ಹತ್ತಿರದ ಬೆಂಗಳೂರಿನಲ್ಲಿ ಹತ್ತಾರು ಕಂಪನಿಗಳು ಕಾಣಿಸಿಕೊಂಡವು. ಈ ಗಣಿಗಳಲ್ಲಿ ನಿಪುಣ ಕಾರ್ಮಿಕರು, ವಿದ್ಯುತ್ ಇನ್ನಿತರ ಸೌಕರ್ಯಗಳಿದ್ದರೂ ಭಾರತ ಮತ್ತು ಮೈಸೂರು ಸರಕಾರಗಳು ಕೆಜಿಎಫ್‌ನಲ್ಲಿ ಯಾವುದೇ ಉದ್ದಿಮೆಗಳು ನೆಲೆಯೂರಲು ಅವಕಾಶ ಮಾಡಿಕೊಡಲಿಲ್ಲ. 1930ರಲ್ಲಿ ಕಾರ್ಮಿಕರು 21 ದಿನಗಳು ಕೆಲಸಕ್ಕೆ ಹಾಜರಾಗದೆ ಮುಷ್ಕರ ಹೂಡಿದ್ದರು. ಕಾರಣ ಎಲ್ಲಾ ಕಾರ್ಮಿಕರು ತಮ್ಮ ಬೆರಳು ಮುದ್ರೆಗಳನ್ನು ಕಂಪನಿ ಆಡಳಿತಕ್ಕೆ ನೀಡಬೇಕೆಂದು ನಿರ್ಧಾರ ತೆಗೆದುಕೊಳ್ಳಲಾಗಿತ್ತು. 1929ರಲ್ಲಿ ಆಡಳಿತ ಅಧಿಕಾರಿಗಳು ಸರಕಾರಕ್ಕೆ ಪತ್ರ ಬರೆದು, ಕಾರ್ಮಿಕರಿಗೆ ಕಾರ್ಮಿಕ ಸಂಘಗಳನ್ನು ಸ್ಥಾಪಿಸಲು ಅವಕಾಶ ಕೊಡಬಾರದು, ಕೊಟ್ಟರೆ ಅವರು ಹೆಚ್ಚು ಸಂಬಳ ಮತ್ತು ಒಳ್ಳೆ ಮನೆ ಇತ್ಯಾದಿ ಬೇಡಿಕೆಗಳನ್ನು ಮುಂದಿಡುತ್ತಾರೆ, ಅದನ್ನು ಭರಿಸಲು ಕಂಪನಿಗಳಿಗೆ ಸಾಧ್ಯವಿಲ್ಲ ಎಂದು ಕಾರಣ ನೀಡಿದ್ದರು. ಅದಕ್ಕೆ ಬದಲಾಗಿ, 'ಕಾಲೋನಿಗಳಲ್ಲಿ ಚಾಲ್ತಿಯಲ್ಲಿದ್ದ ಪಂಚಾಯಿತಿ ಕಟ್ಟೆಗಳೆ ಇರಲಿ. ಪ್ರತಿ ಪಂಚಾಯಿತಿ ಕಟ್ಟೆಗೆ 10 ಜನ ಮೇಲ್ವಿಚಾರಕರಿದ್ದು ಅವರೇ ಎಲ್ಲಾ ಕುಂದುಕೊರತೆಗಳನ್ನು ನೋಡಿಕೊಳ್ಳುತ್ತಾರೆ' ಎಂದು ಅಧಿಕಾರಿಗಳು ಹೇಳಿಕೊಂಡಿದ್ದರು.[3]

1906ರಲ್ಲಿ ಸರಕಾರ ತಂದ ಮೈನಿಂಗ್ ರೆಗ್ಯೂಲೇಶನ್ ಆ್ಯಕ್ಟ್‌ನಿಂದ ಕಂಪನಿಗಳಿಗೆ ಹೆಚ್ಚು ಅಧಿಕಾರ ಬಂದಿತ್ತು. ಕಾರ್ಮಿಕರ ಬಗ್ಗೆ ಯಾವುದೇ ರೀತಿಯ ಸಂದೇಹ ಬಂದರೂ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬಹುದಾಗಿತ್ತು. ಆದರೆ ಮುಂದಿನ ದಿನಗಳಲ್ಲಿ ದೊಡ್ಡ ಮುಷ್ಕರ ಬರಲಿದೆ ಎನ್ನುವ ಯಾವ ಸೂಚನೆಗಳು ಕಂಪನಿಗಳಿಗೆ ದೊರಕಿರಲಿಲ್ಲ. ಜನವರಿ 1, 1929ರಲ್ಲಿ ಸರಕಾರ ಹಿಂದಿನ ಎಲ್ಲಾ ಕಾಯಿದೆಗಳನ್ನು ರದ್ದು ಮಾಡಿ, ಹೊಸ ಕಾರ್ಮಿಕರ ಪರಿಹಾರ ಕಾಯಿದೆಯನ್ನು ತಂದಿತ್ತು. ಈ ಕಾಯಿದೆಯನ್ನು ಜಾನ್ ಟೇಲರ್ ಕಂಪನಿ ಒಪ್ಪಿಕೊಂಡು ಕಾರ್ಯರೂಪಕ್ಕೆ ತರಲು ಕಾರ್ಮಿಕರಿಗೆ ಕೆಲವು ಶರತ್ತುಗಳನ್ನು ಹಾಕಿತು. ಅದರಂತೆ ಕಾರ್ಮಿಕರೆಲ್ಲ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಿತ್ತು ಮತ್ತು ಅವರು ಬೆರಳು ಮುದ್ರೆಗಳನ್ನು ಹೊಸದಾಗಿ ಸ್ಥಾಪಿಸಿದ ಕೇಂದ್ರ ಕಾರ್ಮಿಕರ ನೋಂದಣಿ ಪುಸ್ತಕದಲ್ಲಿ ಮುದ್ರಿಸಬೇಕಾಗಿತ್ತು. ಇದನ್ನು ಒಪ್ಪಿ ಏಪ್ರಿಲ್ 1930ಕ್ಕೆ ಸುಮಾರು 7000 ಕಾರ್ಮಿಕರು ನೋಂದಣಿ ಮಾಡಿಕೊಂಡರು.

ಅದೇ ಸಮಯ, 1930 ಏಪ್ರಿಲ್‌ನಲ್ಲಿ ಉರಿಗಾಂ ಗುಡಿಸಿಲುಗಳ ಹತ್ತಿರ ಬಂಡೆಕಲ್ಲಿನ ಮೇಲೆ ತಮಿಳಿನಲ್ಲಿ ಬರೆದು ಅಂಟಿಸಿದ ಒಂದು ಪತ್ರ ಕಾಣಿಸಿಕೊಂಡಿತು. ಅದರಂತೆ

ಗಣಿಗಳಲ್ಲಿ ಕೆಲಸ ಮಾಡುವ ಕೂಲಿಗಳು, ಕೈಜಂಪರು ಕೆಲಸದವರು, ಮಣ್ಣು ಕೆಲಸದವರು ಮತ್ತು ನೆಲದ ಮೇಲೆ ಕೆಲಸ ಮಾಡುವ ಯಾರೂ ತಮ್ಮ ಬೆರಳು ಮುದ್ರೆಗಳನ್ನು ಕಂಪನಿಗಳಿಗೆ ನೀಡಬಾರದು ಎಂದು ಎಚ್ಚರಿಕೆ ನೀಡಲಾಗಿತ್ತು. 10 ರಿಂದ 30 ವರ್ಷ ಕೆಲಸ ಮಾಡಿದ ಕಾರ್ಮಿಕರೆಲ್ಲ ಒಮ್ಮೆಲೆ ಸಿಡಿದು ನಿಂತರು. ಕಾರ್ಮಿಕರು ಸಾಕಷ್ಟು ಅಕ್ಕಿಯನ್ನು ಶೇಖರಿಸಿಕೊಂಡ ಮೇಲೆ ಏಪ್ರಿಲ್ 8 ರಂದು ಮುಷ್ಕರ ಹೂಡಿಯೆಬಿಟ್ಟರು. ವಿಷಯ ಎಲ್ಲಾ ಕಾಲೋನಿಗಳಿಗೂ ತಲುಪಿ, ಕಾರ್ಮಿಕರ ದೊಡ್ಡ ಗುಂಪು ಮುಖ್ಯ ಇನ್ಸ್‌ಪೆಕ್ಟರ್ ಮತ್ತು ಜಿಲ್ಲಾಧಿಕಾರಿ ಎ.ವಿ. ರಾಮನಾಥನ್ ಅವರನ್ನು ಭೇಟಿ ಮಾಡಿ ಕಂಪನಿಗಳಿಗೆ ತಮ್ಮ ಬೆರಳು ಮುದ್ರೆಗಳನ್ನು ನೀಡುವುದರ ಬಗ್ಗೆ ವಿರೋಧ ವ್ಯಕ್ತಪಡಿಸಿ, ಈ ಕಾನೂನಿಂದ ಮುಂದೆ ಯಾವ ರೀತಿಯ ತೊಂದರೆಗಳು ಬರುತ್ತವೆ ಎಂದು ಪ್ರಶ್ನಿಸಿದರು.[4]

ಸಣ್ಣದಾಗಿ ಪ್ರಾರಂಭವಾದ ಮುಷ್ಕರ ಕಾರ್ಮಿಕರು ಮತ್ತು ಗುತ್ತಿಗೆದಾರರ ನಡುವೆ ಒಡಕು ಮೂಡಿಸಿತ್ತು. ಕಾರ್ಮಿಕರ ನೋಂದಣಿ ಅಧಿಕಾರಿ ಪಾಲ್ ಜೋನ್ಸ್ ಅವರು ಬೆರಳು ಮುದ್ರೆ ಕೇವಲ ಕಾರ್ಮಿಕರನ್ನು ಗುರುತಿಸುವುದಕ್ಕೆ ಮಾತ್ರ ಎಂದು ಹೇಳಿಕೆ ನೀಡಿದರೂ ಯಾರೂ ನಂಬಲಿಲ್ಲ. ಗುತ್ತಿಗೆದಾರರು ಮಾಡಿದ ಪ್ರಯತ್ನಗಳು ಸಫಲವಾಗದೆ ಎಲ್ಲಾ 5 ಗಣಿ ಕಂಪನಿಗಳ ಕಾರ್ಮಿಕರು ಪೂರ್ಣ ಮುಷ್ಕರದಲ್ಲಿ ತೊಡಗಿ ಗಣಿ ಉದ್ದಿಮೆ ಪೂರ್ಣವಾಗಿ ಸ್ಥಗಿತಗೊಂಡಿತು.[5]

ಕಾರ್ಮಿಕರ ಬೆರಳು ಮುದ್ರೆಯ ಮೂಲಕ ಕಳ್ಳತನ ಮಾಡುವವರನ್ನು ಗುರುತಿಸುವುದೇ ಇದರ ಉದ್ದೇಶವಾಗಿತ್ತು. ಇದು 'ಬೆರ್ಟಲಿನ್' ತಂದ ಪದ್ಧತಿಯಾಗಿತ್ತು. ಆ ಹೊತ್ತಿಗಾಗಲೇ ಬೆರಳು ಮುದ್ರೆಯನ್ನು ನೋಂದಣಿ ಪುಸ್ತಕದಲ್ಲಿ ನೀಡಿದ್ದ, ಕಾರ್ಮಿಕರು ಅದನ್ನು ಹಿಂದಕ್ಕೆ ನೀಡುವಂತೆ ಒತ್ತಾಯ ಮಾಡತೊಡಗಿದರು. ಕೇಂದ್ರ ಕಾರ್ಮಿಕ ನೋಂದಣಿ ಅಧಿಕಾರಿ ನೀಡಿದ ನೋಂದಣಿ ಪತ್ರಗಳನ್ನು ಹಿಂದಕ್ಕೆ ಪಡೆದುಕೊಳ್ಳುವಂತೆ ಒತ್ತಾಯ ತರಲಾಯಿತು. ಜಾನ್ ಟೇಲರ್ ಕಂಪನಿಯ ಮುಖ್ಯ ಅಧಿಕಾರಿ ರಾಲ್ಫ್ ನೇಯಿ 'ಬೆರಳು ಮುದ್ರೆ ಪದ್ಧತಿ ಅಳವಡಿಸುತ್ತಿರುವುದು ಕಾನೂನಿನ ಪ್ರಕಾರ ಸರಿಯಾದ ತೀರ್ಮಾನ. ಕಾರ್ಮಿಕರನ್ನು ಗುರುತಿಸುವುದು ಮತ್ತು ಅವರು ಒಂದು ಗಣಿಯಿಂದ ವಜಾಗೊಂಡು ಇನ್ನೊಂದು ಗಣಿಗೆ ಹೋಗದಂತೆ ನೋಡಿಕೊಳ್ಳುವುದು' ಎಂದು ವಾದಿಸಿದ್ದರು.

ಈ ವಿಷಯವನ್ನು ತಮಿಳಿನಲ್ಲಿ ಮುದ್ರಿಸಿ 'ಕಾರ್ಮಿಕರನ್ನು ಮೋಸ ಮಾಡುವ ಯಾವುದೇ ಮಸಲತ್ತು ಇಲ್ಲ' ಎಂದು ವಿವರಿಸಲಾಗಿತ್ತು. ಏಪ್ರಿಲ್ 4 ರಂದು ಕಂಪನಿಗಳ ಹಳೆ ಕಾರ್ಮಿಕರ ಹೆಸರು ಮತ್ತು ವಿಳಾಸ ತೆಗೆದುಕೊಂಡು ಉಳಿದ ಕಂಪನಿ ಕಾರ್ಮಿಕರು ಮತ್ತು ಗುತ್ತಿಗೆ ಕಾರ್ಮಿಕರು ಬೆರಳು ಮುದ್ರೆಯನ್ನು 7ರ ಒಳಗೆ ನೀಡಲೇಬೇಕೆಂದು

ಹೇಳಿಕೆ ನೀಡಿತು. ಕೊನೆಗೆ ಕಾರ್ಮಿಕರು ಮುಷ್ಕರ ಹೂಡಿದಾಗ ಕಂಪನಿ 'ಬೆರಳು ಮುದ್ರೆಗಳನ್ನು ಹಿಂದಿರಿಗುಸುತ್ತೇವೆ ಆದರೆ ನಿವೃತ್ತಿ ಹೊಂದಿದಾಗ ಗ್ರ್ಯಾಚ್ಯುಟಿ ಹಣ ಕೇಳಬಾರದು' ಎಂದು ಶರತ್ತು ಹಾಕಿತು. ಕಾರ್ಮಿಕರು ಯಾವುದನ್ನೂ ಒಪ್ಪಿಕೊಳ್ಳಲಿಲ್ಲ. 200 ಜನ ಮೀಸಲು ಪಡೆ ಪೊಲೀಸರನ್ನು ಮತ್ತು 200 ಜನ ಇಂಪಿರಿಯಲ್ ಸೇವೆ ಲ್ಯಾನ್ಸರಸ್ಸರನ್ನು 6 ರಂದೆ ಬೆಂಗಳೂರಿನಿಂದ ಕೆಜಿಎಫ್‌ಗೆ ಕಳುಹಿಸಲಾಯಿತು.

ಏಪ್ರಿಲ್ 8ರಂದು 6000 ಕಾರ್ಮಿಕರು ರಾಬರ್ಟ್‌ಸನ್‌ಪೇಟೆಯಲ್ಲಿ ಶಾಂತ ರೀತಿಯಲ್ಲಿ ಸಭೆ ಮುಗಿಸಿ ಹಿಂದಿರುಗುವ ಸಮಯದಲ್ಲಿ 300 ಜನ ಕಾರ್ಮಿಕರು ಮೈಸೂರು ಗಣಿ ಕೆಲಸಕ್ಕೆ ಹೋಗುತ್ತಿದ್ದ ತಮಿಳು ಕಾವಲುಗಾರರ ಕಾಲೋನಿಯನ್ನು ಸುತ್ತುವರಿದು ಕೆಲಸಕ್ಕೆ ಹೋಗದಂತೆ ತಡೆದರು. ಇದರಿಂದ ಕೋಪಗೊಂಡ ಆಡಳಿತ ಮಂಡಳಿ ಕಾರ್ಮಿಕರ ಗುಂಪಿನ ಮೇಲೆ ಗುಂಡು ಹಾರಿಸಲು ಆದೇಶ ನೀಡಿತು. ಇದರಲ್ಲಿ 48 ಕಾರ್ಮಿಕರು 6 ಪೊಲೀಸರು ಗಾಯಗೊಂಡು ಇಬ್ಬರ ಸ್ಥಿತಿ ಚಿಂತಾಜನಕವಾಯಿತು. ಜಿಲ್ಲಾಧಿಕಾರಿ ಆಡಳಿತ ಮಂಡಳಿಯ ಜೊತೆ ಮಾತನಾಡಲು ಎಲ್ಲಾ ಗಣಿಗಳ ಕಾರ್ಮಿಕ ಪ್ರತಿನಿಧಿಗಳನ್ನು ಬೇಗನೆ ಆಯ್ಕೆ ಮಾಡಿಕೊಳ್ಳುವಂತೆ ಕಾರ್ಮಿಕರಿಗೆ ತಿಳಿಸಿದರು. ಆದರೆ ಕಂಪನಿಗಳು ಕಾರ್ಮಿಕ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಲು ಒಪ್ಪಿಕೊಳ್ಳಲಿಲ್ಲ. ಭಾರಿ ಮುಷ್ಕರ ನಡೆಯುವ ಮುನ್ಸೂಚನೆಯನ್ನು ಕಂಡುಕೊಂಡ ರಾಮನಾಥನ್ 7000 ಕಾರ್ಮಿಕರ ಬೆರಳು ಮುದ್ರೆಗಳ ನೋಂದಣಿ ದಾಖಲೆಗಳನ್ನು 2000 ಕಾರ್ಮಿಕರ ಮುಂದೆ ನ್ಯಾಯಾಲಯದ ಆವರಣದಲ್ಲೆ 50 ಕಾರ್ಮಿಕರ ಕೈಗಳಲ್ಲಿ ನಾಶಪಡಿಸಿದರು. ಏಪ್ರಿಲ್ 11ರಂದು ಎಲ್ಲಾ ಕಾರ್ಮಿಕರಿಗೂ ಸಂಬಳವನ್ನು ವಿತರಿಸಿ, ಎಲ್ಲವೂ ಸುಗಮವಾಯಿತು ಎಂದು ಆಡಳಿತ ನಿಟ್ಟುಸಿರು ಬಿಟ್ಟಿತು.[6]

❖❖❖

ನಂದಿದುರ್ಗ ಗಣಿಗಳ ಹತ್ತಿರ ಸೇರಿದ ಕಾರ್ಮಿಕರು ತಮ್ಮ ಬೇಡಿಕೆಗಳ ಪಟ್ಟಿಯನ್ನು ಕಂಪನಿ ಮುಂದಿಟ್ಟರು. ಆಸ್ಪತ್ರೆ ಸೌಲಭ್ಯ, ಅನಾರೋಗ್ಯ ಸಂಬಳ, ಗುತ್ತಿಗೆ ಕಾರ್ಮಿಕರಿಗೆ ಸೇವಾ ಸಂಬಳ, ಎಲ್ಲಾ ಕಾರ್ಮಿಕರಿಗೂ ಪ್ರಾವಿಡೆಂಟ್ ನಿಧಿ, ಗುತ್ತಿಗೆದಾರರ ಹಾಜರಿ ಬೋನಸ್, ಕಾರ್ಮಿಕ ಪ್ರತಿನಿಧಿಗಳಿಗೆ ಮನ್ನಣೆ ನೀಡುವುದರ ಜೊತೆಗೆ ಮುಷ್ಕರ ನಡೆಸಿದ ದಿನಗಳ ಸಂಬಳ ಎಲ್ಲವನ್ನೂ ನೀಡಬೇಕೆಂದು ಒತ್ತಾಯ ಮಾಡಿದರು. ಕೊನೆಗೆ ಕರಪತ್ರಗಳ ಮೂಲಕ ಆಡಳಿತಕ್ಕೆ ಈ ರೀತಿ ತಿಳಿಸಲಾಯಿತು. ತಮ್ಮ ಎಲ್ಲಾ ಒತ್ತಾಯಗಳನ್ನು ಒಪ್ಪಿಕೊಂಡರೆ ಸರಿ, ಇಲ್ಲದಿದ್ದರೆ ಉಳಿದಿರುವ ಬಾಕಿ ಸಂಬಳವನ್ನು ಎಲ್ಲಾ ಕಾರ್ಮಿಕರಿಗೆ ನೀಡಿದರೆ ಕಾರ್ಮಿಕರೆಲ್ಲ ಗಣಿ ಕೆಲಸ ಬಿಟ್ಟು ತಮ್ಮ ಸ್ವಂತ ಊರುಗಳಿಗೆ ಹಿಂತಿರುಗುವುದಾಗಿ ಹೇಳಿದರು.[7] ಏಪ್ರಿಲ್ 14 ರಂದು ಸ್ವಲ್ಪ ತಣ್ಣಗಾದ

ಆಡಳಿತ ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ವಿಧಿಯಿಲ್ಲದೆ ಒಪ್ಪಿಕೊಂಡರೂ ಮುಷ್ಕರ ದಿನಗಳ ಸಂಬಳ ನೀಡಲು ಮತ್ತು ಪ್ರಾವಿಡೆಂಟ್ ನಿಧಿಯನ್ನು ಸ್ಥಾಪಿಸಲು ಒಪ್ಪಿಕೊಳ್ಳಲಿಲ್ಲ. ಗುತ್ತಿಗೆ ಕಾರ್ಮಿಕರು ಇಷ್ಟಪಟ್ಟು ಹೆಬ್ಬೆಟ್ಟಿನ ಮುದ್ರೆಗಳನ್ನು ನೀಡಿದರೆ, ಅವರಿಗೆ ಸೇವಾ ಗ್ರ್ಯಾಚ್ಯುಟಿ ನೀಡುವುದಾಗಿ ಘೋಷಿಸಿತು.

ಆಡಳಿತದ ಯಾವುದೇ ಶರತ್ತುಗಳನ್ನು ಒಪ್ಪಿಕೊಳ್ಳಲು ಇಷ್ಟವಿಲ್ಲದ ಕಾರ್ಮಿಕರು ತೀವ್ರ ಹೋರಾಟವನ್ನು ನಡೆಸಲು ಮುಂದಾದರು. ಏಪ್ರಿಲ್ 19 ರಂದು ನಂದಿದುರ್ಗದ ಗಣಿಗಳಲ್ಲಿ ಇಳಿದಿದ್ದ 80 ಕಾರ್ಮಿಕರನ್ನು ಹಿಂದಕ್ಕೆ ಕಳುಹಿಸುವಂತೆ ಅವರ ಹೆಣ್ಣುಮಕ್ಕಳು ಮತ್ತು 1000 ಜನ ಕಾರ್ಮಿಕರು ಮಧ್ಯಾಹ್ನ 12 ಗಂಟೆಗೆ ಗಣಿಯ ಹತ್ತಿರಕ್ಕೆ ತೆರಳಿ ಒತ್ತಾಯಿಸಿದರು. ಆಡಳಿತ ಅವರನ್ನು ಹಿಂದಕ್ಕೆ ಕಳುಹಿಸಿಬಿಟ್ಟಿತು. ಏಪ್ರಿಲ್ 20ಕ್ಕೆ ಜಿಲ್ಲಾಧಿಕಾರಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಅನಾಹುತಗಳು ನಡೆಯುವುದಾಗಿ ಸರಕಾರಕ್ಕೆ ತಿಳಿಸಿದರು. ಸರಕಾರ 'ತಕ್ಷಣವೆ ಸಭೆಗಳು ನಡೆಯಬಾರದು; 5 ಜನರು ಒಟ್ಟಾಗಿ ಒಂದು ಕಡೆ ಸೇರಬಾರದು; ಕೈಗಳಲ್ಲಿ ಯಾವುದೇ ರೀತಿಯ ಆಯುಧ, ಬೆತ್ತಗಳನ್ನು ಹಿಡಿದು ನಡೆದು ಹೋಗಬಾರದು ಮತ್ತು ತಮಟೆ ಇತ್ಯಾದಿಗಳನ್ನು ಬಡಿಯಬಾರದು' ಎಂದು ಆಜ್ಞೆ ಮಾಡಿತು. ಮೇ 15, 1930ರವರೆಗೆ ಬೆಂಗಳೂರು ಇತರ ಪ್ರದೇಶಗಳಲ್ಲಿ ಕಾರ್ಮಿಕ ಮುಖಂಡರು ಸಭೆಗಳನ್ನು ನಡೆಸಿ ಗಣಿ ಕಾರ್ಮಿಕರಿಗೆ ಬೆಂಬಲ ವ್ಯಕ್ತ ಪಡಿಸಿದರು. ಏಪ್ರಿಲ್ 23 ರಂದು 400 ಜನ ಕಾರ್ಮಿಕರು ಬಾಲ್ಘಾಟ್ ಗಣಿಗಳಲ್ಲಿ ಕೆಲಸಕ್ಕೆ ಹೊರಟಾಗ ಕಾರ್ಮಿಕರು ಮತ್ತು ಮಹಿಳೆಯರ ಗುಂಪು ಅವರನ್ನು ಅಡ್ಡಗಟ್ಟಿ ಮನೆಗಳಿಗೆ ಹಿಂದಿರಿಗಿಸಿತು. ಮರುದಿನ ಕೆಲವು ಕಾರ್ಮಿಕರು ಅದೇ ಗಣಿಗಳಲ್ಲಿ ಇಳಿದಾಗ, ವಿಷಯ ತಿಳಿದು ಎಲ್ಲಾ ಕಡೆಯಿಂದ ಬಂದ ಕಾರ್ಮಿಕರ ಗುಂಪು ಗಣಿಯನ್ನು ಸುತ್ತುವರಿದು ಗಣಿಯ ಒಳಗೆ ಇಳಿದಿರುವ ಕಾರ್ಮಿಕರನ್ನು ಮೇಲಕ್ಕೆ ಬರುವಂತೆ ಒತ್ತಾಯ ಮಾಡಿದರು.[8] ಪೊಲೀಸರು ನೆರೆದಿದ್ದ ಗುಂಪನ್ನು ಚದುರಿಹೋಗಲು ವಿನಂತಿಸಿಕೊಂಡರು, ಯಾರೂ ಕದಲದೆ ಇದ್ದಾಗ ಪೊಲೀಸರು ಗುಂಪಿನ ಮೇಲೆ 2 ಸುತ್ತು ಗುಂಡುಹಾರಿಸಿದರು. ಇದರಿಂದ 20 ಜನರು ಗಾಯಗೊಂಡು ಇಬ್ಬರ ಸ್ಥಿತಿ ಚಿಂತಾಜನಕವಾಯಿತು.[9]

ಆಗಲೂ ಗುಂಪು ಚದುರದೆ ಪೊಲೀಸರ ಎದುರಿಗೆ ಘರ್ಷಣೆಗೆ ನಿಂತುಕೊಂಡು ಮುಖ್ಯ ಅಧಿಕಾರಿಗಳು ಸ್ಥಳಕ್ಕೆ ಬರಬೇಕೆಂದು ಒತ್ತಾಯ ಮಾಡಿತು. ಮೈಸೂರು ಸರಕಾರದ ದಿವಾನರು 27 ರಂದು ಬರುವುದಾಗಿ ತಿಳಿಸಿದ ಮೇಲೆ ಗುಂಪು ಚದುರಿತು.[10] ಪ್ರತಿ ಗಣಿಯ 20 ಪ್ರತಿನಿಧಿಗಳು, ಸ್ಥಳೀಯ ನ್ಯಾಯವಾದಿಗಳು, ಅಬಕಾರಿ ಅಧಿಕಾರಿಗಳು, ಬಡ್ಡಿ ವ್ಯಾಪಾರಿಗಳು, ಗುತ್ತಿಗೆದಾರರು, ಗಣಿ ಅಧಿಕಾರಿಗಳ ಮತ್ತು ದಿವಾನ್‌ರ ಮಧ್ಯೆ ಏಪ್ರಿಲ್ 27 ರಂದು ಸಭೆ ನಡೆಯಿತು. ದಿನವೆಲ್ಲ ಸಭೆ ನಡೆದು ಕೊನೆಗೆ ಬೆರಳ ಮುದ್ರೆ

ಮತ್ತು ಸಹಿ ತೆಗೆದುಕೊಳ್ಳುವುದನ್ನು ನಿಷೇದಿಸಲಾಯಿತು. ಮರು ದಿನದಿಂದಲೆ ಕಾರ್ಮಿಕರು ಗಣಿಗಳ ಒಳಕ್ಕೆ ಇಳಿದರು. 21 ದಿನಗಳ ಮುಷ್ಕರ ಅಂತ್ಯಗೊಂಡಿತ್ತು.

❖❖❖

ಈ ಮುಷ್ಕರವನ್ನು ಪೂರ್ಣವಾಗಿ ಕಾರ್ಮಿಕರೆ ಶಾಂತವಾಗಿ ನಡೆಸಿ ಮುಗಿಸಿದ್ದರು. ಈ ಮುಷ್ಕರದ ವಿಶೇಷವೆಂದರೆ ನಾಯಕರ್ಯಾರೂ ಮುಂಚೂಣಿಯಲ್ಲಿ ಇರಲಿಲ್ಲ. ಮುಷ್ಕರದ ದಿನಗಳಲ್ಲಿ ಯಾವ ಹಿಂಸೆಯೂ ನಡೆಯಲಿಲ್ಲ. ಕಂಪನಿಯ ಸ್ವತ್ತನ್ನು ಸ್ವಲ್ಪವೂ ನಷ್ಟ ಮಾಡಲಿಲ್ಲ. ನಾಯಕರಿಲ್ಲದೆಯೇ ಕಾರ್ಮಿಕರು ಎಲ್ಲವನ್ನೂ ಸಂಯಮದಿಂದಲೇ ಮಾಡಿ ತೋರಿಸಿದ್ದರು. ಕಾರ್ಮಿಕರ ಮಧ್ಯದಿಂದ ನಾಯಕರು ಹುಟ್ಟುಕೊಳ್ಳದಂತೆ ಕಂಪನಿ ಆಡಳಿತ ನೋಡಿಕೊಂಡಿತ್ತು. 1934ರಲ್ಲಿ ಬಿಳಿಯ ಅಧಿಕಾರಿಯೊಬ್ಬ ಭಾರತೀಯ ಕಾರ್ಮಿಕನ ಮೇಲೆ ಹಲ್ಲೆ ಮಾಡಿದಾಗ ಆ ಕಾರ್ಮಿಕ, ಬಿಳಿ ಅಧಿಕಾರಿಯ ಮೇಲೆ ಮರು ಧಾಳಿ ಮಾಡಿದ್ದ. ಭಾರತೀಯ ಕಾರ್ಮಿಕನನ್ನು ಕೆಲಸದಿಂದ ತೆಗೆದು ಹಾಕಿದರೆ ಬಿಳಿ ಅಧಿಕಾರಿಯನ್ನು ತಾತ್ಕಾಲಿಕವಾಗಿ ವಜಾಗೊಳಿಸಲಾಗಿತ್ತು. ಸೆಪ್ಟಂಬರ್ 1, 1934ರಲ್ಲಿ ನಂದಿದುರ್ಗದ 100 ಕಾರ್ಮಿಕರು ಈ ಅನ್ಯಾಯವನ್ನು ವಿರೋಧಿಸಿದ್ದರೂ ಮರು ದಿನದಿಂದ ಕೆಲಸಕ್ಕೆ ಹಾಜರಾಗಿದ್ದರು.[11] ಇನ್ನೊಂದು ಘಟನೆಯಲ್ಲಿ ಭಾರತೀಯ ಕಾರ್ಮಿಕನ ಮೇಲೆ ಐರೋಪ್ಯ ಅಧಿಕಾರಿ ಹಲ್ಲೆ ನಡೆಸಿದ ಕಾರಣ ರೊಚ್ಚಿಗೆದ್ದ ಮೈಸೂರು ಗಣಿಗಳ ಕಾರ್ಮಿಕರು ಮೇ 12, 1941ರಲ್ಲಿ ಕೆಲಸ ನಿಲ್ಲಿಸಿ ವಿರೋಧ ವ್ಯಕ್ತಪಡಿಸಿದ್ದರು. ಭಾರತೀಯ ಕಾರ್ಮಿಕರು ಆ ಐರೋಪ್ಯ ಅಧಿಕಾರಿಯನ್ನು ಕೆಲಸದಿಂದ ತೆಗೆದು ಹಾಕುವಂತೆ ಒತ್ತಾಯ ಮಾಡತೊಡಗಿದರು.[12] ಮೈಸೂರು ಗಣಿಗಳ 800 ಕಾರ್ಮಿಕರು ಮರುದಿನದಿಂದಲೆ ಮುಷ್ಕರ ಹೂಡಿದರು. ಅದೇ ಸಮಯದಲ್ಲಿ ಚಾಂಪಿಯನ್ ಗಣಿಯ ಕಾರ್ಮಿಕನೊಬ್ಬನನ್ನು ಐರೋಪ್ಯ ಅಧಿಕಾರಿ ಕಾಲಿನಲ್ಲಿ ಒದ್ದುಬಿಟ್ಟಿದ್ದ. ಇಲ್ಲಿಯೂ ಐರೋಪ್ಯ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕಲು ಕಾರ್ಮಿಕರು ಮುಷ್ಕರ ಹೂಡಿದರು. ಗಣಿಗಳ ಉಸ್ತುವಾರಿ ಅಧಿಕಾರಿ ಘಟನೆಯ ಬಗ್ಗೆ ತನಿಖೆ ನಡೆಸಿದರು.[13]

ವಿಷಯ ಕಾರ್ಮಿಕರಿಗೆಲ್ಲ ಹರಡಿತು. ಜಿಲ್ಲಾಧಿಕಾರಿ ಮತ್ತು ಗಣಿಯ ಉಸ್ತುವಾರಿ ಅಧಿಕಾರಿ ತಪ್ಪಿತಸ್ಥ ಐರೋಪ್ಯ ಅಧಿಕಾರಿಯ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.[15] ಇದೇ ಸಮಯದಲ್ಲಿ ಹಾಜರಿ ಬೋನಸ್ ಕೊಡುವುದಾಗಿ ಆಡಳಿತ ಒಪ್ಪಿಕೊಂಡ ಮೇಲೆ, ಕಾರ್ಮಿಕರು ಕೆಲಸಕ್ಕೆ ಹಿಂತಿರುಗಿದರು. ಮುಂದಿನ ದಿನಗಳಲ್ಲಿ ಸರಿಯಾದ ಕಾರಣವಿಲ್ಲದೆ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದರೆ, ಎಲ್ಲರೂ ಸೇರಿ ಮುಷ್ಕರ ಮಾಡುವುದಾಗಿ ಆಡಳಿತಕ್ಕೆ ಎಚ್ಚರಿಕೆ ನೀಡಲಾಯಿತು. ಅನಂತರ ಕಾರ್ಮಿಕರು ತಮಗೆ ಯಾವುದೇ ರೀತಿಯ ಅನ್ಯಾಯವಾದರೂ ದಿಢೀರನೆ

ಮುಷ್ಕರ ಹೂಡಿಬಿಡುತ್ತಿದ್ದರು. ಆಡಳಿತ ಮತ್ತು ಸರಕಾರಕ್ಕೆ ಇದರಿಂದ ನಷ್ಟವಾಗುವುದರ ಜೊತೆಗೆ ಇರಿಸು ಮುರಿಸಾಗುತ್ತಿತ್ತು.[16]

ಮೈಸೂರು ಗಣಿಗಳ ಕಾರ್ಮಿಕರು ಪಾಕ್ಷಿಕದಲ್ಲಿ ಪ್ರತಿ ದಿನವೂ ಯಾವುದೇ ಶಿಫ್ಟ್‌ನಲ್ಲಿ ಕೆಲಸ ಮಾಡಬಹುದಾಗಿದ್ದು, ಎರಡು ಭಾನುವಾರಗಳು ರಜೆ ದೊರಕುತ್ತಿತ್ತು. ಜೊತೆಗೆ 3 ದಿನದವರೆಗೆ ಗೈರು ಹಾಜರಿಯಾಗಬಹುದಿತ್ತು. ಆದರೆ ಮೈಸೂರು ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು 3 ದಿನ ಗೈರು ಹಾಜರಿಯಾದರೆ ಭಾನುವಾರ ಕೆಲಸ ಮಾಡಬೇಕಾಗಿತ್ತು. ಇದರಿಂದ ಮೈಸೂರು ಗಣಿ ಕಾರ್ಮಿಕರು ಸಂಪು ಹೂಡಿದರು. ಮೈಸೂರು ಗಣಿ ಕಾರ್ಮಿಕರಿಗೆ ಇ ತರೆ ಗಣಿ ಕಾರ್ಮಿಕರು ತಮ್ಮ ಬೆಂಬಲ ವ್ಯಕ್ತಪಡಿಸಿದರು. ಇದನ್ನು ವಿರೋಧಿಸಿ ಕೆಲವು ಕಾರ್ಮಿಕರು ಕೆಲಸಕ್ಕೆ ಇಳಿದಾಗ ಇವರನ್ನು ಸುತ್ತುವರಿದ ಕಾರ್ಮಿಕರು ಗಣಿಗಳ ಒಳಗೆ ಇಳಿಯದಂತೆ ತಡೆದರು. ಕೆಲಸಕ್ಕೆ ಹಾಜರಾಗಿ ಎಂದು ವಿನಂತಿಸಿಕೊಂಡ ಅಧಿಕಾರಿಗಳ ಮೇಲೆ ಕಲ್ಲುಗಳನ್ನು ತೂರಲಾಯಿತು. ಕಾಲೋನಿಗಳಲ್ಲಿ ಪಂಚಾಯಿತಿ ಮನೆಗಳಿಗೆ ಬೆಂಕಿ ಹಾಕಲಾಯಿತು. ಮುಷ್ಕರಕ್ಕೆ ಬೆಂಬಲ ತೋರಿಸದ ಕಾರ್ಮಿಕರು ಮತ್ತು ಪಂಜಾಬಿಗಳ ಮೇಲೆ ಹಲ್ಲೆ ಮಾಡಲಾಯಿತು.[17]

ಮೈಸೂರು ಗಣಿ ಜನರಲ್ ಕಚೇರಿ ಮುಂದೆ ಕಾರ್ಮಿಕರು ಜಮಾಯಿಸಿದರು. ಅಲ್ಲಿಯೇ ಚಿನ್ನವನ್ನು ತಿಜೋರಿಯಲ್ಲಿ ಇಡಲಾಗಿತ್ತು. ಚಿನ್ನವನ್ನು ಎಲ್ಲಿ ಲೂಟಿ ಮಾಡಿಬಿಡುವರೊ ಎನ್ನುವ ಆತಂಕದಿಂದ ಆಡಳಿತ ಬೆಂಗಳೂರಿನಿಂದ ಆಜ್ಞೆ ಪಡೆದು ಕಾರ್ಮಿಕರನ್ನು ಚದುರಿಸಲು ಗುಂಡು ಹಾರಿಸಲಾಗಿ ಒಬ್ಬ ಕಾರ್ಮಿಕ ಸಾವನ್ನಪ್ಪಿದ. ಸತ್ತ ಕಾರ್ಮಿಕನ ಹೆಣವನ್ನು ಮಣ್ಣು ಮಾಡದೆ ಬಿಟ್ಟರೆ ಕಾರ್ಮಿಕರು ಇನ್ನಷ್ಟು ವ್ಯಗ್ರರಾಗುತ್ತಾರೆ ಎಂಬ ಕಾರಣಕ್ಕೆ ಆಡಳಿತ ಕಾರ್ಮಿಕನ ಶವವನ್ನು ಏನಾದರೂ ಮಾಡಿ ಸಾರ್ವಜನಿಕರಿಂದ ದೂರ ಮಾಡಬೇಕು ಎನ್ನುವಷ್ಟರಲ್ಲಿ ಚಾಂಪಿಯನ್ ಮತ್ತು ಉರಿಗಾಂ ಗಣಿಗಳ ಕಾರ್ಮಿಕರು ಮುಷ್ಕರದಲ್ಲಿ ಸೇರಿಕೊಂಡುಬಿಟ್ಟರು.

ಮೈಸೂರು ಗಣಿಗಳ ಕಾರ್ಮಿಕರು, ಬಿಳಿ ಅಧಿಕಾರಿಗಳ ಬಂಗಲೆಗಳು ಮತ್ತು ಕಚೇರಿಗಳ ಮೇಲೆ ಧಾಳಿ ಮಾಡುತ್ತಿದ್ದನ್ನು ತಪ್ಪಿಸಲು ಪೋಲೀಸರು ಹೆಣಗಾಡುತ್ತಿದ್ದರೆ ಚಾಂಪಿಯನ್ ಮತ್ತು ಉರಿಗಾಂ ಗಣಿಗಳ ಕಾರ್ಮಿಕರು ಎದುರಿಗೆ ಸಿಕ್ಕಿದ ಎಲ್ಲವನ್ನು ಧ್ವಂಸ ಮಾಡುತ್ತ ಮುಂದೆ ಸಾಗುತ್ತಿದ್ದರು. ಇವರನ್ನು ತಡೆಯಲು ಮಾಡಿದ ಎಲ್ಲ ಪ್ರಯತ್ನಗಳು ವಿಫಲವಾಗಿ, ಪೋಲೀಸರು ಗುಂಪಿನ ಮೇಲೆ ಗುಂಡು ಹಾರಿಸಿ, ಮತ್ತೊಬ್ಬ ಕಾರ್ಮಿಕನನ್ನು ಬಲಿ ತೆಗೆದುಕೊಂಡುಬಿಟ್ಟರು. ಆಗಲೇ ಹೊಸ ಬೋನಸ್ ಕಾನೂನನ್ನು ರದ್ದು ಪಡಿಸಲಾಗಿ, ಅದನ್ನು ಒಪ್ಪಿಕೊಳ್ಳದ ಕಾರ್ಮಿಕರು ಮುಷ್ಕರ ಹೂಡಿದ್ದರು. ಕಂಪನಿ ಆಡಳಿತ ಮತ್ತು ಸರಕಾರ ಈಗ ಪೂರ್ಣವಾಗಿ ಇಕ್ಕಟ್ಟಿಗೆ ಸಿಲುಕಿಕೊಂಡಿತ್ತು. ಕಾರ್ಮಿಕರಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ನೀಡಿದರೆ

ಕಾರ್ಮಿಕ ಸಂಘಗಳು ಹುಟ್ಟಿಕೊಳ್ಳುತ್ತವೆ. ಜೊತೆಗೆ ಮುಷ್ಕರಗಳೂ ಹುಟ್ಟುತ್ತವೆ ಎಂದು ಅದನ್ನು ತಳ್ಳುತ್ತಲೆ ಬಂದಿದ್ದ ಸರಕಾರ ಮತ್ತು ಕಂಪನಿಗಳು ಈಗ ಅನಿವಾರ್ಯವಾಗಿ ಅದನ್ನು ಒಪ್ಪಿಕೊಳ್ಳಲೇಬೇಕಾದ ಪರಿಸ್ಥಿತಿಗೆ ಬಂದಿತ್ತು.[18]

1940ರ ಮುಷ್ಕರ :

1906ರ ಮೈಸೂರು ಗಣಿ ಆ್ಯಕ್ಟ್, ಕಾರ್ಮಿಕ ನಾಯಕರನ್ನು ಕೆಜಿಎಫ್ ಗಣಿಗಳಿಂದ ಬಲು ದೂರವೆ ಇಟ್ಟಿತ್ತು. ಕಾಲೋನಿಗಳಲ್ಲೂ ನಾಯಕರನ್ನು ಬೆಳೆಯಲು ಬಿಟ್ಟಿರಲಿಲ್ಲ. 1930ರ ಮುಷ್ಕರವು ಕಾರ್ಮಿಕರ ಸಂಬಳ, ಗಣಿಗಳ ಒಳಗಿನ ಪರಿಸ್ಥಿತಿ ಮತ್ತು ಕಾಲೋನಿ ಜೀವನದ ಬಗ್ಗೆ ಒತ್ತುಕೊಟ್ಟಿತ್ತು. ಆದರೆ 1940ರ ಮುಷ್ಕರವು ಕಾರ್ಮಿಕರಲ್ಲಿ ವಿವಿಧ ರಾಜಕೀಯ ಪಕ್ಷಗಳು ಇಟ್ಟಿದ್ದ ನಿಷ್ಠೆಯ ಬಗ್ಗೆ ಸಂದೇಹಗಳು ತಲೆದೋರಿ ಘರ್ಷಣೆಗಳಾಗತೊಡಗಿದ್ದವು. ಹೊರಗಿನ ಪಕ್ಷಗಳ ನಾಯಕರು ಕಾರ್ಮಿಕರ ನಡುವೆ ತೂರಿಕೊಳ್ಳಲು ಪ್ರಾರಂಭಿಸಿದ್ದರು.[19]

ಆಗ ದ್ವಿತೀಯ ವಿಶ್ವ ಮಹಾಯುದ್ಧ ಪ್ರಾರಂಭವಾಗಿತ್ತು. ಎಲ್ಲ ವಸ್ತುಗಳ ಬೆಲೆಗಳು ತೀವ್ರವಾಗಿ ಏರಿ ಜೀವನ ಮಾಡುವುದು ದುಸ್ತರವಾಗಿತ್ತು. 1939ರಲ್ಲಿ ಒಂದು ಒಳ್ಳೆ ಅಕ್ಕಿ ಮೂಟೆ 14ರೂ. ಇದ್ದು ಎರಡು ವರ್ಷಗಳಲ್ಲಿ ಅದು 24ರೂ.ಗೆ ಏರಿತ್ತು. ಈ ಸಮಯದಲ್ಲಿ ಪರಿಣಿತ ಕಾರ್ಯಕರು ತಿಂಗಳಿಗೆ 26ರೂ. ಮತ್ತು ಅಪರಿಣಿತ ಕಾರ್ಮಿಕರಿಗೆ 17 ರೂ. ಸಂಬಳ ದೊರಕುತ್ತಿತ್ತು. 1942ರಲ್ಲಿ ಬೆಂಗಳೂರಿನ ಕಾರ್ಮಿಕರಿಗೆ ದೊರಕುತ್ತಿದ್ದ ಯುದ್ಧ ಭತ್ಯ ಕೆಜಿಎಫ್ ಕಾರ್ಮಿಕರಿಗೆ ಮುಷ್ಕರ ಮಾಡಿದ ಮೇಲೆಯೆ ದೊರಕಿತ್ತು. 1936 ರಿಂದ 1943ರ ವೇಳೆಗೆ ಬೆಲೆಗಳು ಶೇಕಡ 75 ರಷ್ಟು ಏರಿದ್ದವು.[20]

1921ರಲ್ಲಿ ಕೆಜಿಎಫ್‌ನ ಜನಸಂಖ್ಯೆ 87,682 ಇದ್ದರೆ, 1931ರಲ್ಲಿ ಅದು 85,103ಕ್ಕೆ ಇಳಿದಿತ್ತು. ಆದರೆ ಯುದ್ಧಗಳ ನಂತರ 1941ರಲ್ಲಿ ಅದು 1,33,859ಕ್ಕೆ ಏರಿತ್ತು.[21] ಬೆಂಗಳೂರಿನಲ್ಲಿ ಶೇಕಡ 45, ಮೈಸೂರಿನಲ್ಲಿ ಶೇಕಡ 40.5 ಮತ್ತು ಕೆಜಿಎಫ್‌ನಲ್ಲಿ ಶೇಕಡ 57 ಜನಸಂಖ್ಯೆ ಏರಿತ್ತು. ಹತ್ತಿರದ ತಮಿಳುನಾಡು, ಆಂಧ್ರದಿಂದ ಬಂದ ಕಾರ್ಮಿಕರ ಸಂಬಂಧಿಗಳು ಹೆಚ್ಚಿದ್ದ ಕಾರಣ ಗಣಿ ಪ್ರದೇಶದಲ್ಲಿ ಜನಸಂಖ್ಯೆ ಏರಿತ್ತು. ಇದರಿಂದ ಕಾರ್ಮಿಕರ ಮೇಲೆಯೂ ಹೆಚ್ಚು ಹೊರೆ ಬಿದ್ದು ಮುಷ್ಕರಕ್ಕೆ ದಾರಿಯಾಗಿತ್ತು.[22] ಜುಲೈ 16, 1940 ಉರಿಗಾಂ ಗಣಿಗಳಲ್ಲಿ ಮುಷ್ಕರ ಪ್ರಾರಂಭವಾಗಿತ್ತು. ಅದೇ ದಿನ ಸಾಯಂಕಾಲದ ಹೊತ್ತಿಗೆ ಚಾಂಪಿಯನ್ ಗಣಿಗಳ ಕಾರ್ಮಿಕರು, ಮರುದಿನ ಬೆಳಿಗ್ಗೆ ನಂದಿದುರ್ಗದ ಕಾರ್ಮಿಕರೂ ಮುಷ್ಕರದಲ್ಲಿ ಸೇರಿಕೊಂಡರು.[23]

ಆಗ ಕೆಲಸ ಮಾಡುತ್ತಿದ್ದ 25000 ಕಾರ್ಮಿಕರ ಸಂಬಳದಲ್ಲಿ (ಗಣಿ ಒಳಗೆ ಮತ್ತು ಮೇಲೆ ಕೆಲಸ ಮಾಡುವವರ ಸಂಬಳದಲ್ಲಿ 1 ರೂ. ಮತ್ತು 12 ಆಣೆ)

ಹಿಡಿದುಕೊಂಡು ಆ ಪಾಕ್ಷಿಕದಲ್ಲಿ ನಿವೃತ್ತಿ ಹೊಂದಿದವರು ಅಥವಾ ಗಾಯಗೊಂಡವರಿಗೆ ನೀಡಬೇಕು, ಗ್ರ್ಯಾಚ್ಯುಟಿ ಜೊತೆಗೆ ಯುದ್ಧ ಪರಿಹಾರ, ಮನೆ ಬಾಡಿಗೆ ಕಡಿಮೆ, ಪ್ರಾವಿಡೆಂಟ್ ನಿಧಿ, 15 ದಿನಗಳ ರಜೆ ಜೊತೆಗೆ ಸಂಬಳ, ಕಾರ್ಮಿಕ ಸಂಘ ಸ್ಥಾಪನೆಗೆ ಅನುಮತಿ ಮತ್ತು ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಿ ಇತ್ಯಾದಿ ಒತ್ತಾಯಗಳನ್ನು ತರಲಾಯಿತು. ಗಣಿ ಆಡಳಿತ ಕೆಲವು ಬೇಡಿಕೆಗಳನ್ನು ಈಡೇರಿಸಲು ಮುಂದಾದರೂ ಕಾರ್ಮಿಕರು ಪಟ್ಟು ಬಿಡಲಿಲ್ಲ.[24]

ಎಲ್ಲಾ ಕಾರ್ಮಿಕರು ಒಗ್ಗಟ್ಟಾಗಿ ತಮ್ಮ ಬೇಡಿಕೆಗಳು ಪೂರ್ಣವಾಗಿ ಈಡೇರುವವರೆಗೂ ಕೆಲಸಕ್ಕೆ ಹಾಜರಾಗುವುದಿಲ್ಲ ಎಂದು ಕುಳಿತುಕೊಂಡರು. ಆಡಳಿತ, ಕಾರ್ಮಿಕ ಸಂಘಗಳ ಸ್ಥಾಪನೆಯ ಬಗ್ಗೆ ನಮಗೆ ಅಧಿಕಾರವಿಲ್ಲ ಅದು ರಾಜ್ಯ ಸರಕಾರಕ್ಕೆ ಸಂಬಂಧಪಟ್ಟ ವಿಷಯ ಎಂದಿತು. ಆದರೂ ಕಾರ್ಮಿಕರು ಜಗ್ಗಲಿಲ್ಲ. 1942ರ ಸುಮಾರಿಗೆ ಹಲವು ಕಾರ್ಮಿಕ ಸಂಘಗಳು ಕಾರ್ಮಿಕರನ್ನು ನೋಂದಾಯಿಸುವ ಪ್ರಯತ್ನದಲ್ಲಿ ತೊಡಗಿದ್ದವು. ಯಾರು ತಮ್ಮ ಹೆಸರು ನೋಂದಾಯಿಸುವುದಿಲ್ಲವೊ ಅವರ ದೂರುಗಳನ್ನು ಯಾವ ಕಾರ್ಮಿಕ ಸಂಘವೂ ತೆಗೆದುಕೊಳ್ಳುತ್ತಿರಲಿಲ್ಲ. ಕೆಲವು ಅನಾಮಿಕ ಕರಪತ್ರಗಳು ರಾತ್ರೋರಾತ್ರಿ ಅಲ್ಲಲ್ಲಿ ಗೋಡೆಗಳ ಮೇಲೆ ಕಾಣಿಸಿಕೊಳ್ಳುತ್ತಿದ್ದವು. ಕೆಲವು ಪತ್ರಗಳಲ್ಲಿ ಕಾರ್ಮಿಕ ನಾಯಕ ಶರ್ಮ ಅವರನ್ನು ನಯ ವಂಚಕ, ಹೊರಗೆ ಬೆಣ್ಣೆಯಂತೆ ಮಾತನಾಡಿ ಒಳಗೊಳಗೆ ಲುಚ್ಚಾ ಕೆಲಸ ಮಾಡುತ್ತಾನೆ. ಹುಲಿ ಎಂದು ಹೇಳಿಕೊಳ್ಳುವ ಈತ ಕಾರ್ಮಿಕ ದ್ರೋಹಿ, ಈ ಹುಲಿ ಊಟದ ಜೊತೆಗೆ ತುಪ್ಪ ಸುರಿದುಕೊಳ್ಳಲು ತಿಂಗಳಿಗೆ 100 ರೂ. ಸಂಬಳ ಪಡೆಯುತ್ತದೆ. ಇತ್ಯಾದಿಯಾಗಿ ಮುದ್ರಿಸಲಾಗಿತ್ತು. ಶರ್ಮರ ಬಗ್ಗೆ ಇದ್ದ ಇನ್ನೊಂದು ಅಪವಾದವೆಂದರೆ ಕಾರ್ಮಿಕರ ವಿರುದ್ಧ ಒಳಗೊಳಗೆ ಮಸಲತ್ತು ನಡೆಸುತ್ತಾನೆ ಎನ್ನುವುದು. ಫಿಲಿಫ್ಸ್, ಕಾರ್ಮಿಕರ ನಡುವೆ ಕಷ್ಟಪಟ್ಟರೆ ಶರ್ಮ ಮತ್ತು ಅವರ ಪತ್ನಿ ಅಲಮೇಲು ಕಾರ್ಮಿಕರ ಮನೆಗಳನ್ನು ಸ್ವಚ್ಛವಾಗಿರಿಸಿ ಎಂದು ದೂರದಲ್ಲೆ ನಿಂತು ಹೇಳುತ್ತಿದ್ದರು ಎಂದು ಕಾರ್ಮಿಕರು ದೂರುತ್ತಿದ್ದರು.

ಮೈಸೂರು ಗಣಿಗಳ ಒಂದು ಸಭೆಯಲ್ಲಿ ಮಹಿಳೆಯರು ಶರ್ಮ ಅವರನ್ನು ಕೋಪಗೊಂಡು ಎದ್ದು ಹೋಗುವಂತೆ ಮಾಡಿದ್ದರು. ಕಾರಣ ಮಹಿಳೆಯರು ಮೊದಲು ಆರೋಗ್ಯವಾಗಿದ್ದು ಪುಷ್ಟಯಾದ ಮಕ್ಕಳನ್ನು ಪಡೆಯಬೇಕು, ಬದಲಾಗಿ ಇಂದಿನ ಮಹಿಳೆಯರು ಯಾವಾಗಲೂ ಕೊಳಾಯಿಗಳ ಹತ್ತಿರ ಜಗಳಗಳಲ್ಲಿ ನಿರತರಾಗಿರುತ್ತಾರೆ. ಎಂದಿದ್ದರು. ಕಾರ್ಮಿಕರ ಸಂಖ್ಯೆ ಕಡಿತಗೊಳಿಸುವ ಉದ್ದೇಶದಿಂದ ಉರಿಗಾಂ ಗಣಿಗಳಲ್ಲಿ 50 ಕಾರ್ಮಿಕರನ್ನು ತೆಗೆದುಹಾಕಿದಾಗ, ಟಿ.ರಾಮಚಂದ್ರ ಒಂದು ಸಭೆಯನ್ನು ಸೇರಿಸಿ ಚರ್ಚೆ ಮಾಡಿದ್ದರು. ನಿರಂತರವಾಗಿ ನಡೆದ ಹೋರಾಟ ಮತ್ತು ಮಾತುಕತೆಗಳಿಂದ ಕಾರ್ಮಿಕರಿಗೆ ಮಾರ್ಚ್ 31, 1942 ರವರೆಗೆ ತಿಂಗಳಿಗೆ 7 ರೂ. ಅನಂತರ 1 ರೂ.8

ಆಣೆ ಭತ್ಯ, ಮದ್ರಾಸ್ ನಗರದ ವ್ಯಯವನ್ನು ಆಧರಿಸಿ 108 ಪಾಯಿಂಟ್‌ಗಳವರೆಗೆ ಮತ್ತು ಅನಂತರ ಒಂದು ಪಾಯಿಂಟ್‌ಗೆ 3 ಆಣೆ ಹೆಚ್ಚಿಸುವುದಾಗಿ ತೀರ್ಮಾನಿಸಲಾಯಿತು. ಆದರೆ ಗುತ್ತಿಗೆ ಕಾರ್ಮಿಕರಿಗೆ ಮಾತ್ರ ಅದು ದೊರಕಲಿಲ್ಲ.

ಉತ್ಪಾದನೆ ಕಡಿಮೆಯಾದ ಕಾರಣ ಕಾರ್ಮಿಕರ ಸಂಖ್ಯೆ ಕಡಿಮೆ ಮಾಡುವ ಯೋಜನೆ ಮುಂದುವರಿದಿತ್ತು, 1942ರ ಜೂನ್‌ನಲ್ಲಿ ನಾಲ್ಕು ಗಣಿ ಸಮೂಹಗಳ ಮೇಲ್ವಿಚಾರಕರು ಒಟ್ಟು 1500 ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲು ಸೂಚನೆ ನೀಡಿದರು. ಅದೇ ಸಮಯದಲ್ಲಿ ಉರಿಗಾಂ ಗಣಿಗಳಲ್ಲಿ ಬೆಂಕಿ ಕಾಣಿಸಿಕೊಂಡು ಸಾಕಷ್ಟು ನಷ್ಟವಾಗಿತ್ತು. 22 ಜೂನ್ 1942 ರಂದು ಮೈಸೂರು ಗಣಿಗಳ 251 ಕಾರ್ಮಿಕರನ್ನು ಕೆಲಸದಿಂದ ಏಕಾಏಕಿ ನಿಲ್ಲಿಸಲಾಯಿತು. ಫಿಲಿಫ್ಸ್ ಇದನ್ನು ತಡೆಯಲು ಎಷ್ಟೇ ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ. ಕಾರ್ಮಿಕ ಸಂಘಗಳಲ್ಲಿ ಒಗ್ಗಟ್ಟಿಲ್ಲದ್ದರಿಂದ ಏನೂ ಮಾಡಲಾಗಲಿಲ್ಲ.[25] ಕೆಲಸ ಕಳೆದುಕೊಂಡ ಕಾರ್ಮಿಕರ ಕುಟುಂಬಗಳನ್ನು ಕಂಪನಿ ಗುಡಿಸಿಲುಗಳಿಂದ ಎತ್ತಂಗಡಿ ಮಾಡಿಸಿತು. ಇನ್ನೊಂದು ಮುಷ್ಕರ ಹೂಡಲು ಎಲ್ಲರೂ ತಯಾರಾಗುತ್ತಿದ್ದರು. ಆದರೆ ರಾಜಕೀಯ ನಾಯಕರು ತಮ್ಮದೇ ಲೆಕ್ಕಾಚಾರಗಳಲ್ಲಿ ತೊಡಗಿ ರಾಜಕೀಯ ನಡೆಸುತ್ತಿದ್ದರು. ಶರ್ಮ, ರಾಮಚಂದ್ರ ಮತ್ತು ಆಚಾರ್ಯ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕುವುದನ್ನು ನಿಲ್ಲಿಸುವಂತೆ ಆಡಳಿತದ ಜೊತೆಗೆ ಹೋರಾಟ ನಡೆಸಿದ್ದರು. ಕಾರ್ಮಿಕರು ತಮ್ಮ ಹೀನಾಯ ಸ್ಥಿತಿಯನ್ನು ಹೋರಾಟದ ಹಾಡುಗಳ ಮೂಲಕ ಬರೆದು ಎಲ್ಲರಿಗೂ ಹಂಚುವ ಪತ್ರಗಳಲ್ಲಿ ಆಡಳಿತದ ಜೊತೆಗೆ ಕೈಜೋಡಿಸಿರುವ ಕಾರ್ಮಿಕ ಪ್ರತಿನಿಧಿಗಳನ್ನು ತೆಗೆದುಹಾಕಬೇಕೆಂದು ಒತ್ತಾಯ ತಂದರು.

ಜಾತಿ, ವರ್ಗ ಮತ್ತು ರಾಷ್ಟ್ರೀಯತೆ :

ಆದಿ ದ್ರಾವಿಡ ನಾಯಕರು ಮುಂಚೂಣಿಗೆ ಬಂದಿದ್ದ ಕಾರಣ 1942 ಜುಲೈನಲ್ಲಿ ಕಾರ್ಮಿಕರು ಪರಿಶಿಷ್ಟ ಜಾತಿ ಫೆಡರೇಶನ್ ಸ್ಥಾಪಿಸಿದ್ದರು. ಇದರಿಂದ ಕಾಂಗ್ರೆಸ್ ನಾಯಕರು ಜಾತಿಯ ವಿಷಯ ಮುಖ್ಯ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಾಯಿತು. ಆದಿ ದ್ರಾವಿಡರು ಜಾತೀಯ ನಿಂದನೆಯನ್ನು ವಿರೋಧಿಸುವ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತ ಕಾಂಗ್ರೆಸಿಗರನ್ನು ನಂಬಬೇಡಿ ಎಂದು ಹೇಳುತ್ತಲೆ ಬರುತ್ತಿದ್ದರು. ಜೆ.ಸಿ.ಆದಿಮೂಲಮ್ 'ಪರಯಾ' ಎಂಬ ಹೆಸರನ್ನು ಪೂರ್ಣವಾಗಿ ನಿಷೇಧಿಸಬೇಕು ಮತ್ತು ಅಸ್ಪೃಶ್ಯತೆಯನ್ನು ತೊಲಗಿಸಬೇಕೆಂದು ಪದೇ ಪದೇ ಒತ್ತಾಯ ತರುತ್ತಿದ್ದರು. ಕಾಂಗ್ರೆಸ್ ಸಭೆಗಳಲ್ಲಿ ಇದರ ಬಗ್ಗೆ ಕಾರ್ಮಿಕರು ಪ್ರಶ್ನೆಗಳನ್ನು ಕೇಳಿ ಕಾಂಗ್ರೆಸಿಗರಿಗೆ ಇರಿಸು ಮುರಿಸು ತರುತ್ತಿದ್ದರು. ಆದಿ ದ್ರಾವಿಡರ ಮಹಾ ಸಭೆಯಲ್ಲಿ ಆದಿಮೂಲಂ ಒಂದು ಪ್ರಶ್ನೆ ಎತ್ತಿದ್ದರು. 'ನಾನು ಎಚ್ಚರದಿಂದಲೇ ಹೇಳುತ್ತಿದ್ದೀನಿ. ನೀವೆಲ್ಲ ಬ್ರಿಟಿಷರ ಕಾನೂನನ್ನು ಒಪ್ಪಿಕೊಳ್ಳುವುದೇ

ಒಳಿತು. ಅವರ ಅಧಿಕಾರ, ಪರೋಪಕಾರ ಮತ್ತು ತಾಳ್ಮೆಯನ್ನು ನಾವು ಒಪ್ಪಿಕೊಳ್ಳಲೇಬೇಕಾಗಿದೆ. ಮಹಾತ್ಮ ಗಾಂಧಿಜೀಯವರು ದುಂಡುಮೇಜಿನ ಸಭೆಯಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕುವ ವಿಚಾರವನ್ನು ವಿರೋಧಿಸಿದರು; ಇಂಗ್ಲೆಂಡಿನಿಂದ ಹಿಂತಿರುಗಿ ಬಂದಿರುವ ಅವರು ನಮಗೆ 'ಹರಿಜನ' ಎಂಬ ಬಿರುದು ನೀಡಿ ನಮ್ಮನ್ನು ಇನ್ನಷ್ಟು ಅಪಮಾನಗೊಳಿಸಿ, ಹಿಂದೂ ಧರ್ಮದಿಂದ ನಮ್ಮನ್ನು ಶಾಶ್ವತವಾಗಿ ಪ್ರತ್ಯೇಕಿಸಿಬಿಟ್ಟದ್ದಾರೆ. ನಮ್ಮ ಜನಾಂಗವನ್ನು ಅವರು ಉದ್ಧಾರ ಮಾಡಲೂ ಇಲ್ಲ, ಅಸ್ಪೃಶ್ಯತೆಯನ್ನು ತೊಡೆದು ಹಾಕಲೂ ಇಲ್ಲ' ಆದಿಮೂಲಂ ಅವರ ಈ ಮಾತುಗಳು ಆದಿ ದ್ರಾವಿಡರನ್ನು ಕಾಂಗ್ರೆಸ್‌ನಿಂದ ಬಲು ದೂರ ಕೊಂಡುಹೋಗಿದ್ದವು. ಕೆಜಿಎಫ್‌ನಲ್ಲಿ ಕಾಂಗ್ರೆಸ್ ಹೆಸರೇ ಕೇಳದಿದ್ದ ಕಾಲದಲ್ಲಿ 'ತಮಿಳನ್' ಪತ್ರಿಕೆಯಲ್ಲಿ ಕಾಂಗ್ರೆಸ್ಸಿನ ಒಳಮರ್ಮಗಳನ್ನು ಅಲ್ಲಗಳೆಯಲಾಗಿತ್ತು. ಕಾಂಗ್ರೆಸ್‌ನಲ್ಲಿ ಹೆಚ್ಚು ಬೆಂಬಲ ಇದ್ದ ಅನೇಕ ನಾಯಕರಿದ್ದರೂ ರಾಮದಾಸ್‌ರನ್ನು ರಾಜ್ಯ ಸಭೆಯ ಸದಸ್ಯರನ್ನಾಗಿ ಆಯ್ಕೆ ಮಾಡುವುದರಲ್ಲಿ ಸಫಲವಾಗಿತ್ತು.

1942ರಲ್ಲಿ ಕಾಂಗ್ರೆಸ್ ಮತ್ತು ಆದಿ ದ್ರಾವಿಡರ ಮಧ್ಯೆ ಕುದಿಯುತ್ತಿದ್ದ ಲಾವಾ ಒಮ್ಮೆಲೆ ಸ್ಫೋಟಿಸಿತು. ಮದ್ರಾಸಿನ ಜಸ್ಟೀಸ್ ಪಕ್ಷದ ನಾಯಕ ಎ.ಟಿ.ಪನ್ನೀರ್ ಶೆಲ್ವಮ್ ಅವರ ಪುತ್ಥಳಿಯನ್ನು ಅನಾವರಣಗೊಳಿಸಲು 300 ಜನ ಆದಿ ದ್ರಾವಿಡರು ಸೇರಿದ್ದು ಅಲ್ಲಿ ಆದಿಮೂಲಂ ಕೂಡ ಇದ್ದರು. ಕಾಂಗ್ರೆಸ್ ಬೆಂಬಲಿಗರು ಇವರ ಮೇಲೆ ಕಲ್ಲುಗಳನ್ನು ಎಸೆಯುತ್ತ, ಸೋಡಾ ಬಾಟಲುಗಳನ್ನು ತೂರಿ, ವೇದಿಕೆಯನ್ನು ಧ್ವಂಸ ಮಾಡಿದರು. ಇದರಿಂದ ಆದಿಮೂಲಂ ಸಮೇತ ಅನೇಕರು ಗಾಯಗೊಂಡರು.[26] ಮರುದಿನ ಉರಿಗಾಂ ಗಣಿಗಳ 400 ಕಾರ್ಮಿಕರು ಒಟ್ಟುಗೂಡಿ ಕೆ.ಸಿ.ರೆಡ್ಡಿಯ ವಿರುದ್ಧ ಕೂಗಾಡುತ್ತ ಅವರೇ ನಿಂತು ಕಟ್ಟಿಸಿದ್ದ ಬಾವುಟಗಳನ್ನು ಕಿತ್ತು ಹಾಕಿದರು. ಅದೇ ಸಮಯದಲ್ಲಿ 1500 ಕಾಂಗ್ರೆಸ್ ಬೆಂಬಲಿಗರು ಲಾರಿಗಳನ್ನು ಹಿಡಿದು ಕಲ್ಲುಗಳನ್ನು ತೂರುತ್ತ ಧಾಳಿ ಮಾಡಲು ಪೆರಿಲ್ಯೆನ್ ಕಡೆಗೆ ಹೊರಟರು. ಪೊಲೀಸರ ಮಾತು ಕೇಳಿದ ಆದಿ ದ್ರಾವಿಡರು ಹಿಂದೆ ಸರಿದರೆ, ಕಾಂಗ್ರೆಸ್ ಬೆಂಬಲಿಗರು ಕಲ್ಲುಗಳನ್ನು ತೂರುತ್ತ ಮುಂದೆ ನಡೆದರು. ಪೊಲೀಸರು ಇವರ ಮೇಲೆ ಗುಂಡು ಹಾರಿಸಿದಾಗ ಒಬ್ಬ ಸತ್ತು ಅನೇಕರು ಗಾಯಗೊಂಡರು.

ಆದಿ ದ್ರಾವಿಡ ಸಭೆಯ ಅಧ್ಯಕ್ಷ ದಾಸ್ ಕಾಂಗ್ರೆಸಿಗರನ್ನು ಖಂಡಿಸುತ್ತ ನೀಚ ಕೃತ್ಯಗಳಿಗೆ ಸರಿಯಾದ ಸಮಯದಲ್ಲಿ ಪಾಠ ಕಲಿಸುವುದಾಗಿ ಮತ್ತು ಪೂನಾ ಒಪ್ಪಂದದಲ್ಲಿ ಮೋಸ ಮಾಡಿದ ಕಾಂಗ್ರೆಸನ್ನು ಯಾರೂ ಸೇರಬೇಡಿ ಎಂದು ಹೇಳಿಕೆ ನೀಡಿದರು. ಗುಂಡಿನ ಧಾಳಿಯಲ್ಲಿ ಸತ್ತ ಎ.ಡಿ. ಮುನಿಸ್ವಾಮಿ ಕಾಂಗ್ರೆಸಿನ ಪರ ತಮ್ಮ ಜನಾಂಗದ ವಿರುದ್ಧ ನಿಂತ ಅಮಾಯಕ ಎಂದರು. ಅಹಿಂಸೆಯ ಬಗ್ಗೆ ಮಾತನಾಡುತ್ತಿದ್ದ ಕಾಂಗ್ರೆಸಿನ ಬಣ್ಣ ಈ ಘಟನೆಯಿಂದ ಬಹಳವಾಗಿಯೇ ಹೊರಬಂದಂತಾಗಿತ್ತು. ಕಾಂಗ್ರೆಸಿಗರಿಗೆ

ಜಾತಿಯ ಹೆಸರಿನಲ್ಲಿ ರಾಜಕೀಯ ಮಾಡಿದರೆ ಕೆಜಿಎಫ್‌ನಲ್ಲಿ ತಲೆ ಎತ್ತಲು ಸಾಧ್ಯವಿಲ್ಲ ಎನ್ನುವುದು ಚೆನ್ನಾಗಿಯೇ ಅರ್ಥವಾಗಿತ್ತು. ರೆಡ್ಡಿ ಸತ್ತವರ ಬಗ್ಗೆ ಆಸಕ್ತಿ ತೋರಿಸುತ್ತ ಚಾಂಪಿಯನ್ ಗಣಿಗಳ ಆಡಳಿತವನ್ನು ಭೇಟಿ ಮಾಡಿ ಹಿಂಸೆಗೆ ಕಾರಣರಾದ ಆದಿಮೂಲಂ, ಜಗನ್ನಾಥನ್, ಮೇಲ್ವಿಚಾರಕರನ್ನು ಅಂಥೋಣಿ ಇನ್ನಿತರರನ್ನು ಕೆಲಸದಿಂದ ತೆಗೆದು ಹಾಕುವಂತೆ ಕೋರಿಕೆ ಇಟ್ಟರು. ಜೊತೆಗೆ 'ಆದಿ ದ್ರಾವಿಡರು ರೌಡಿಗಳು ಮತ್ತು ಪೋಕರಿಗಳು, ಪೊಲೀಸರು ಇವರಿಗೆ ಸಹಾಯ ಮಾಡುತ್ತಿದ್ದಾರೆ' ಎಂದು ದೂರಿದರು.

ಮಾರ್ಚ್ 1942ರಲ್ಲಿ ಪ್ರಾರಂಭವಾದ ಕೇಂದ್ರೀಯ ಆದಿದ್ರಾವಿಡ ಯುನೈಟೆಡ್ ಸಂಘದವರು, 'ಆದಿ ದ್ರಾವಿಡರು ಬೇರೆ ಯಾವುದೇ ಪಕ್ಷಗಳಿಗೂ ಸೇರಬಾರದು, ಎಲ್ಲರೂ ತಮ್ಮ ಅಭಿವೃದ್ಧಿಗಾಗಿ ಹೋರಾಡಬೇಕು' ಎಂದು ಹೇಳಿಕೆ ನೀಡಿದರು. ಸಂಘದ ಧನ್‌ಪಾಲ್ ಅವರು 'ಮುಸಲ್ಮಾನರಂತೆ ಆದಿ ದ್ರಾವಿಡರು ಪ್ರತ್ಯೇಕ ದೇಶವನ್ನು ಪಡೆದುಕೊಳ್ಳಬೇಕು' ಎಂದರು.[27] 'ಭಾರತದ ಮೊದಲ ರಾಷ್ಟ್ರಪತಿ ರಾಜಗೋಪಾಲಚಾರಿಯವರು ತಮ್ಮ ಮಗಳನ್ನು ಮಹಾತ್ಮ ಗಾಂಧಿ ಮಗನಿಗೆ ಕೊಟ್ಟು ಮದುವೆ ಮಾಡಿಕೊಳ್ಳುವ ನಿರ್ಧಾರ ಸ್ವಾತಂತ್ರ್ಯ ಭಾರತದಲ್ಲಿ ತಮ್ಮ ಭವಿಷ್ಯವನ್ನು ಭದ್ರ ಮಾಡಿಕೊಳ್ಳುವುದನ್ನು ಸೂಚಿಸುತ್ತದೆ, ಎಂದು ಆದಿಮೂಲಂ ಲೇವಡಿ ಮಾಡಿದರು.[28]

ಕೆಜಿಎಫ್‌ನಲ್ಲಿ ಹೆಚ್ಚು ಆದಿ ದ್ರಾವಿಡ ಕಾರ್ಮಿಕರು ಭಾರತ ತೊಲಗಿ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿಲ್ಲ. ಆದಿ ದ್ರಾವಿಡ ಸಂಘವು ಈ ವಿಷಯದಲ್ಲಿ ಯಾವುದೇ ಒಲವು ತೋರಿಸಲಿಲ್ಲ. ಚಾಂಪಿಯನ್ ರೀಫ್ ಗಣಿಗಳ ಕಾರ್ಮಿಕರು ಮಾತ್ರ, ರೆಡ್ಡಿ ಮತ್ತಿತರ ಕಾಂಗ್ರಸಿಗರನ್ನು ಬಂಧಿಸಿದ್ದರ ಬಗ್ಗೆ ವಿರೋಧ ತೋರಿಸಿದ್ದರು. ಕೆಲವು ಗಣಿಗಳ ಕಾರ್ಮಿಕರು ತಮಗೆ ಸರಿಯಾಗಿ ತುಟ್ಟಿ ಭತ್ಯ ದೊರಕುತ್ತಿಲ್ಲ ಎಂದು ಹಲುಬಿದರೆ ಇನ್ನೂ ಕೆಲವು ಗಣಿಗಳಲ್ಲಿ ತಮಗೆ ಯುದ್ಧ ಪರಿಹಾರ ಭತ್ಯ ದೊರಕಿಲ್ಲ ಎಂದು ಹೋರಾಟ ನಡೆಸುತ್ತಿದ್ದರು. ಗಣಿ ಪ್ರದೇಶವನ್ನು ಬಿಟ್ಟರೆ ಉಳಿದ ಪ್ರದೇಶಗಳ ಕಾಂಗ್ರೆಸಿಗರು, ಅಂಗಡಿ ಮಾಲಿಕರು, ವ್ಯಾಪಾರಿಗಳು ಹೆಚ್ಚಾಗಿ ಮೇಲ್ ಜಾತಿಯವರೆ ಆಗಿದ್ದರು. ರಾಜ್ಯದಲ್ಲಿಯೇ ಹೆಚ್ಚು ಕಾರ್ಮಿಕರು ಕೆಜಿಎಫ್‌ನಲ್ಲಿದ್ದರೂ ಸ್ವಾತಂತ್ರ್ಯ ಹೋರಾಟದಲ್ಲಿ ಕೇವಲ 15 ಕಾರ್ಮಿಕರನ್ನು ಬಂಧಿಸಲಾಗಿತ್ತು. ಅದೇ ಬೆಂಗಳೂರಿನಲ್ಲಿ 78 ಕಾರ್ಮಿಕರನ್ನು, ಭದ್ರಾವತಿಯಲ್ಲಿ 27 ಕಾರ್ಮಿಕರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು.[29] ಜುಲೈ 1942ರಲ್ಲಿ ಆದಿ ದ್ರಾವಿಡರನ್ನು ಆದಿ ದ್ರಾವಿಡ ಸಂಘಕ್ಕೆ ಹೊಸದಾಗಿ ಸದಸ್ಯರನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಕಾಂಗ್ರೆಸ್ ಬೆಂಬಲಿಗರು ಅವರನ್ನು ಹೊಡೆದು ಗಾಯಗೊಳಿಸಿದ್ದರು. ಇದರಿಂದ ಕಾಂಗ್ರೆಸಿಗರು ತಮ್ಮ ಕಡೆಗೆ ಸೆಳೆದುಕೊಳ್ಳುವಲ್ಲಿ ಕೆಲವೊಮ್ಮೆ ಸಫಲರಾಗುತ್ತಿದ್ದರು. ಅದೇ ತಿಂಗಳು ಕಮ್ಯೂನಿಸ್ಟ್ ಪಕ್ಷದ ಮೇಲೆ ವಿಧಿಸಿದ್ದ ನಿರ್ಬಂಧನೆಯನ್ನು ಹಿಂತೆಗೆದುಕೊಳ್ಳಲಾಯಿತು.

ಜಾತಿ, ವರ್ಗ ಮತ್ತು ಕಮ್ಯೂನಿಸ್ಟರು :

ಕಮ್ಯೂನಿಸ್ಟ್ ಪಕ್ಷವು ಪಿ. ಶ್ರೀನಿವಾಸನ್ ಅವರನ್ನು ಕೆಜಿಎಫ್ ಕಾರ್ಮಿಕರನ್ನು ಸಂಘಟನೆ ಮಾಡಲು ಕಳುಹಿಸಿದಾಗ ಮೈಸೂರು ಗಣಿ ಕಾರ್ಮಿಕರು ಶರ್ಮ ಅವರನ್ನು ಮತ್ತೊಮ್ಮೆ ಹೊರಕ್ಕೆ ಕಳಿಸಿದರು.[30] ಗೋವಿಂದನ್ ಕಮ್ಯೂನಿಸ್ಟ್ ಆಗಿ ಪರಿವರ್ತನೆ ಆಗುವುದಕ್ಕೆ ಮುಂಚೆ ಪಕ್ಕಾ ಗಾಂಧಿವಾದಿಯಾಗಿದ್ದರು. ಇವರು ಕಾರ್ಮಿಕರ ಜೊತೆಗೆ ಒಳ್ಳೆ ಸಂಬಂಧ ಬೆಳೆಸಿ ಅವರ ಅಭಿವೃದ್ಧಿಗಾಗಿ ಶ್ರಮ ಪಟ್ಟಿದ್ದರು. ಕಾಂಗ್ರೆಸ್ ಪಕ್ಷವನ್ನು ನಿಷೇಧಿಸಿದ್ದರಿಂದ ಕಮ್ಯೂನಿಸ್ಟ್ ಪಕ್ಷಕ್ಕೆ ಒಳ್ಳೆಯ ಅವಕಾಶ ಒದಗಿಬಂದಿತ್ತು. ಗೋವಿಂದನ್ 1943ರ ಹೊತ್ತಿಗೆ 'ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕಾದರೆ ಒಂದು ದೊಡ್ಡ ಮುಷ್ಕರ ನಡೆಯಲೇಬೇಕು' ಎನ್ನುವ ನಿರ್ಧಾರಕ್ಕೆ ಬಂದಿದ್ದರು. 1930 ಮತ್ತು 1940ರಲ್ಲಿ ಮುಷ್ಕರ ನಡೆದಿದ್ದರೂ ಸರಕಾರ/ಕಂಪನಿಗಳು ಅನೇಕ ಕಾನೂನುಗಳ ಮೂಲಕ ಕಾರ್ಮಿಕರ ಬೇಡಿಕೆಗಳನ್ನು ಒಂದಲ್ಲಾ ಒಂದು ರೀತಿಯಲ್ಲಿ ಮೊಟಕುಗೊಳಿಸಿದ್ದವು. ಆದರೂ ಕಾರ್ಮಿಕರು ಒಗ್ಗಟ್ಟಿನಿಂದ ತಮ್ಮ ಬೇಡಿಕೆಗಳನ್ನು ಸಲ್ಲಿಸುತ್ತಲೇ ಬಂದಿದ್ದರು.[31]

1945ರಲ್ಲಿ ದೀರ್ಘಕಾಲದ ಯುದ್ಧಭತ್ಯ ಮತ್ತು ಸೇವಾಗ್ರ್ಯಾಚ್ಯುಟಿ ಬೇಡಿಕೆ ಮೂಲಕ ಮುಷ್ಕರ ಹೂಡಲು ಯೋಜನೆ ಮಾಡಲಾಯಿತು. ಇದರ ಜೊತೆಗೆ ತುಟ್ಟಿಭತ್ಯವು ಸೇರಿಕೊಂಡಿತ್ತು. ಕಾರ್ಮಿಕ ಸಂಘಟನೆಗಳು ತಿಂಗಳಿಗೆ 8 ರೂ. 8 ಆಣೆ ಕೇಳಿದರೆ, ಕಂಪನಿಗಳು 2 ರೂ. ಕೊಡುವುದಾಗಿ ಹೇಳಿದವು. ಅದೇ ಕಾಲಕ್ಕೆ ಭಾರತದ ಇತರ ಭಾಗಗಳಲ್ಲಿ ಮುಖ್ಯವಾಗಿ ಬಿಹಾರ್ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಕಬ್ಬಿಣ, ಕಲ್ಲಿದ್ದಿಲು ಇತ್ಯಾದಿ ಗಣಿಗಳು ಪ್ರಾರಂಭವಾಗಿ ಕೆಜಿಎಫ್‌ನಿಂದ 5000 ಕಾರ್ಮಿಕರು ಹೊರಗೆ ಹೋಗಿ ಕೆಲಸ ಮಾಡಿ ಬಂದಿದ್ದರು. ಕಾರಣ ಕೆಜಿಎಫ್ ಕಂಪನಿಗಳು ಈಗ ಇನ್ನೊಂದು ರೀತಿಯ ತೊಂದರೆಯನ್ನು ಅನುಭವಿಸಬೇಕಾಯಿತು. ಕಬ್ಬಿಣ ಮತ್ತು ಕಲ್ಲಿದ್ದಿಲು ವಲಯದಲ್ಲಿ ಹೆಚ್ಚು ಸಂಬಳ ಪಡೆಯುತ್ತಿದ್ದರಿಂದ ಈಗ ಹೆಚ್ಚು ಸಂಬಳ ಕೊಡುವಂತೆ ಒತ್ತಾಯಿಸತೊಡಗಿದರು. ಜೊತೆಗೆ 1943–1944ರಲ್ಲಿ ಕಾರ್ಮಿಕರು ಹೆಚ್ಚು ತುಟ್ಟಿಭತ್ಯ ಕೇಳಿದ್ದನ್ನು ಕಂಪನಿ ನಿರಾಕರಿಸಿತ್ತು. ಮೇ 21ರಂದು 18000 ಕಾರ್ಮಿಕರು ಕೆಲಸಕ್ಕೆ ಹೋಗದೆ ಮುಷ್ಕರ ಹೂಡಿದರು.[32]

ಗೋವಿಂದನ್ ಮತ್ತು ಅರಕ್ಕಲ್ ಮುಷ್ಕರದ ಮುಂಚೂಣಿಯಲ್ಲಿದ್ದರು. ಕಾಂಗ್ರೆಸಿನ ರೆಡ್ಡಿ, ರತ್ನ ಸಭಾಪತಿ ಮತ್ತು ಜಯಮುತ್ತು ಮುಷ್ಕರ ಹಿಂದಕ್ಕೆ ತೆಗೆದುಕೊಳ್ಳುವಂತೆ ಕಾರ್ಮಿಕರ ಮನ ಒಲಿಸಲು ಪ್ರಯತ್ನಿಸಿದರು. ಕಂಪನಿಗಳು, ಕಾರ್ಮಿಕರ ಮುಷ್ಕರ ನ್ಯಾಯಬದ್ಧವಲ್ಲ ಎಂದರೆ, ಸರಕಾರ ಎಲ್ಲಾ ಬೇಡಿಕೆಗಳನ್ನು ನ್ಯಾಯಾಲಯದ ಮೂಲಕ ಪರಿಶೀಲಿಸುವುದಾಗಿ ಹೇಳಿಕೆ ಕೊಟ್ಟಿತು.[33] ಆದರೆ ಕಾರ್ಮಿಕರು ಮುಷ್ಕರ ಬಿಡಲಿಲ್ಲ.

1945 ಜೂನ್ 22ರಂದು 15000 ಕಾರ್ಮಿಕರು ಕೆಲಸಕ್ಕೆ ಹಿಂತಿರುಗಿದರೆ ನಂದಿದುರ್ಗದ ಕಾರ್ಮಿಕರು ಮಾತ್ರ ಅರಕ್ಕಲ್ ಮಾತು ಕೇಳಿ ಮುಷ್ಕರ ಬಿಡಲಿಲ್ಲ. 1945 ಜುಲೈ 11 ರಂದು ಅರಕ್ಕಲ್‌ರನ್ನು ರಾಜ್ಯದಿಂದ ಗಡಿಪಾರು ಮಾಡಿದಾಗ ಉಳಿದ ಕಾರ್ಮಿಕರು ಬೇರೆ ದಾರಿ ಇಲ್ಲದೆ ಕೆಲಸಕ್ಕೆ ಹಿಂತಿರುಗಿದರು. 1945ನೇ ವರ್ಷದ ಕೊನೆಯಲ್ಲಿ ನ್ಯಾಯಾಲಯದ ಮೂಲಕ ಕಾರ್ಮಿಕರಿಗೆ ನ್ಯಾಯ ದೊರಕದೇ ಹೋದಾಗ ಮತ್ತೆ ಮುಷ್ಕರ ಹೂಡಲು ಮನವಿ ಪತ್ರ ಕೊಡಲಾಯಿತು. ಈ ಸಲ ಕಾರ್ಮಿಕ ಸಂಘಟನೆಗಳು ಒಟ್ಟುಗೂಡಿ ತಮ್ಮ 26 ಬೇಡಿಕೆಗಳನ್ನು ಪಟ್ಟಮಾಡಿ ಸಲ್ಲಿಸಿದವು. ಇವುಗಳಲ್ಲಿ ಮುಖ್ಯವಾಗಿ ಕಾರ್ಮಿಕರ ಗುತ್ತಿಗೆ ಪದ್ಧತಿಯನ್ನು ತೆಗೆದುಹಾಕುವುದು ಸೇರಿತ್ತು.[34]

ಕೆಜಿಎಫ್ ಚರಿತ್ರೆಯಲ್ಲಿ ಅತ್ಯಂತ ಹೆಚ್ಚು 78 ದಿನಗಳು ಕಾಲ ನಡೆದ ಮುಷ್ಕರ ಇದಾಗಿತ್ತು. ಮುಷ್ಕರಕ್ಕೆ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಎರಡೂ ಪಕ್ಷಗಳು ಬೆಂಬಲ ನೀಡಿದ್ದವು. ಮುಷ್ಕರಗಳನ್ನು ಯಾವಾಗಲೂ ಒಪ್ಪಿಕೊಳ್ಳದ ರೆಡ್ಡಿ ಈ ಸಲ ಮುಷ್ಕರಕ್ಕೆ ಪೂರ್ಣವಾಗಿ ಬೆಂಬಲ ವ್ಯಕ್ತಪಡಿಸಿದರು. ಕೆಜಿಎಫ್ ಕಾರ್ಮಿಕರಿಗೆ ನಾಡಿನಾದ್ಯಂತ ಕಾರ್ಮಿಕರು ಮತ್ತು ಸಾರ್ವಜನಿಕರಿಂದಲೂ ಉತ್ತೇಜನ ಸಿಕ್ಕಿತ್ತು. ಬೆಂಗಳೂರು ಮತ್ತು ಮದ್ರಾಸ್‌ನಿಂದ ಕಮ್ಯೂನಿಷ್ಟ್ ಪಕ್ಷದ ಕಾರ್ಮಿಕ ನಾಯಕರು ಬಂದು ಹೋಗುತ್ತಿದ್ದರು. ಕೆ.ಟಿ. ಭಾಷ್ಯಂ ಮುಷ್ಕರಕ್ಕಾಗಿ ಹಣ ಸಂಗ್ರಹಿಸತೊಡಗಿದರು. ಭದ್ರಾವತಿಯಲ್ಲೂ ಹಣ ಸಂಗ್ರಹವಾಗಿತ್ತು. ವಾಸನ್ ಮತ್ತು ಗೋವಿಂದನ್ ಕೆಜಿಎಫ್‌ನಲ್ಲಿ ನಿಧಿ ಸಂಗ್ರಹಿಸಿದ್ದರು. ಕಂಪನಿ 7 ಲಕ್ಷ ಹಣವನ್ನು ಬಿಡುಗಡೆ ಮಾಡಿದಾಗ ಮಾರ್ಚ್ 22 1946ರಲ್ಲಿ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು. ಕಡಿಮೆ ಚಿನ್ನದ ಅದಿರಿನಿಂದ ನಷ್ಟ ಅನುಭವಿಸುತ್ತಿರುವುದಾಗಿ ಹೇಳಿಕೊಂಡ ಕಂಪನಿ 8 ಲಕ್ಷ ರೂ. ವಿನಾಯತಿಯನ್ನು ಮೈಸೂರು ಸರಕಾರದಿಂದ ಪಡೆದಿತ್ತು.[35] ಎಲ್ಲಾ ಕಾರ್ಮಿಕರಿಗೂ ಕನಿಷ್ಠ ಮತ್ತು ಗರಿಷ್ಠ ಸಂಬಳದ ಜೊತೆಗೆ ಅನೇಕ ರೀತಿಯ ಸವಲತ್ತುಗಳನ್ನು ನೀಡಲಾಗಿತ್ತು. ಸಂಬಳ ಹೆಚ್ಚುವರಿ, ಕಾರ್ಮಿಕರ ನಿಧಿ, ಕ್ರಮವಾಗಿ ಪದೋನ್ನತಿ, ಸೇವಾಗ್ರ್ಯಾಚ್ಯುಟಿ, ಹೆಚ್ಚು ಸಮಯ (ಒ.ಟಿ) ಕೆಲಸದ ಸಂಬಳ, ರಜಾ ಸವಲತ್ತುಗಳನ್ನು ನೀಡಲಾಗಿತ್ತು. ಅತ್ಯಂತ ಕಡಿಮೆ ಸಂಬಳದ ಹೆಚ್ಚಳವೆಂದರೆ 13 ಆಣೆಯಾಗಿತ್ತು.[36]

1946, ನವೆಂಬರ್ 3ರಂದು ಕಮ್ಯೂನಿಸ್ಟ್‌ರನ್ನು ಕೆರಳಿಸುವ ಒಂದು ಭಾಷಣದಿಂದ ಪರಿಶಿಷ್ಟರು ಕಮ್ಯೂನಿಸ್ಟ್ ನಾಯಕರ ಮನೆಗಳಿಗೆ ನುಗ್ಗಿ ಧಾಳಿ ಮಾಡಿದರು. ಎರಡು ಗುಂಪುಗಳು ಕಾಲೋನಿಗಳ ಮೈದಾನಗಳಲ್ಲಿ ಹೊಡೆದಾಡತೊಡಗಿ ಪೊಲೀಸರು ಬಂದು ನಿಲ್ಲಿಸಿಬೇಕಾಯಿತು. ಇಲ್ಲಿಂದ ಚದುರಿದ ಕಮ್ಯೂನಿಸ್ಟ್‌ರು ಅಂಡ್ರಸನ್‌ಪೇಟೆಯ ಕಡೆಗೆ ತೆರಳಿ ಒಂದು ಗುಡಿಸಿಲಿಗೆ ಬೆಂಕಿ ಇಟ್ಟು ಅಂಗಡಿಗಳ ಮೇಲೆ ಧಾಳಿ ಮಾಡಿದಾಗ ಪೊಲೀಸರು ಗುಂಡು ಹಾರಿಸಿದ ಕಾರಣ ಅನೇಕರು ಗಾಯಗೊಂಡು ಒಬ್ಬ ಸತ್ತುಹೋದ.

ಮರುದಿನ ಚಾಂಪಿಯನ್ ಗಣಿ ಕಾರ್ಮಿಕರು ಮುಷ್ಕರ ಹೂಡಿ ಮೈಸೂರು ಗಣಿ ಕಾರ್ಮಿಕರನ್ನು ಸೇರಿಕೊಳ್ಳುವಂತೆ ಆಹ್ವಾನಿಸಿ 4000 ಜನ ಒಟ್ಟುಗೂಡಿದರು. ಕಮ್ಯೂನಿಸ್ಟರು ಮತ್ತು ಪೊಲೀಸರ ನಡುವೆ ದೊಡ್ಡ ಘರ್ಷಣೆಯಾಗಿ ಗುಂಡು ಹಾರಿಸಿದಾಗ 5 ಜನ ಕಾರ್ಮಿಕರು ಪ್ರಾಣ ಕಳೆದುಕೊಂಡರು.[37]

ಇದಕ್ಕೆಲ್ಲ ಪರಿಶಿಷ್ಟ ಜಾತಿಯ ಫೆಡರೇಶನ್ ಕಾರಣವಾಗಿದ್ದು, ಐರೋಪ್ಯ ಅಧಿಕಾರಿಗಳ ಕುಮ್ಮಕ್ಕು ಇದೆ ಮತ್ತು ಸರಕಾರವೇ ಹೊಣೆಯಾಗಿದೆ ಎಂದು ಏಐಟಿಯುಸಿ ಆಪಾದಿಸಿತು. ಕಮ್ಯೂನಿಸ್ಟ್ ಪಕ್ಷ ಜಾತಿಯ ಪ್ರಶ್ನೆ ಇಷ್ಟೊಂದು ತೀವ್ರವಾಗಿ ಬೆಂಬಿಡುತ್ತದೆ ಎಂದುಕೊಂಡಿರಲಿಲ್ಲ. ಆಗ ಕಣ್ಣು ತೆರೆದುಕೊಂಡ ಕಮ್ಯೂನಿಸ್ಟರು 'ಸಾರ್ವಜನಿಕ ಸ್ಥಳಗಳು ಅಥವಾ ಇನ್ನಾವುದೇ ವಿಷಯದಲ್ಲೂ ಎಲ್ಲೂ ಅಸ್ಪೃಶ್ಯತೆಯನ್ನು ಆಚರಿಸಬಾರದು, ಜಾತಿಗಳು ನಮಗೆ ಮುಖ್ಯವಲ್ಲ ಕಾರ್ಮಿಕರ ವರ್ಗ ಒಂದೇ ಮುಖ್ಯ' ಎಂದು ಘೋಷಿಸಿದರು. ರಾಜ್ಯ ಸರಕಾರ ಕಾರ್ಮಿಕರ ನಡುವೆ ವೈಷಮ್ಯಗಳನ್ನು ಸೃಷ್ಟಿಸಲು ಕಂಪನಿ ಪ್ರಯತ್ನಿಸಿದರೆ, ಕಮ್ಯೂನಿಷ್ಟರು ಮತ್ತು ಕಾಂಗ್ರೆಸಿಗರು ಪರಿಶಿಷ್ಟರ ಸ್ವಾತಂತ್ರ್ಯ ವಿರೋಧ ನೋಡಿ ದಂಗಾಗಿಹೋಗಿದ್ದರು. ಇದರ ಜೊತೆಗೆ ಹಿಂದೂ-ಮುಸ್ಲಿಮರ ಮಧ್ಯೆಯೂ ವೈಷಮ್ಯದ ಬೀಜಗಳನ್ನು ಬಿತ್ತಲು ಕೆಲವರು ಪ್ರಯತ್ನಿಸಿದ್ದರು. ಸರಕಾರ ಈ ನಡುವೆ ಎಲ್ಲಾ ರೀತಿಯ ಸಭೆಗಳನ್ನು ನಿಷೇಧಿಸಿತ್ತು.

ಆದರೂ ಪರಿಶಿಷ್ಟರು ಅಲ್ಲಲ್ಲಿ ಸಭೆಗಳನ್ನು ನಡೆಸಿ ಅವಾಚ್ಯ ಶಬ್ದಗಳಲ್ಲಿ ನಿಂದಿಸುತ್ತಿದ್ದರು. 1946 ಆಗಸ್ಟ್ 4ರಂದು ಜೀಸಸ್ ಕ್ರೈಸ್ತ್ ಮತ್ತು ಶ್ರೀಕೃಷ್ಣನ ಚಿತ್ರಗಳನ್ನು ಹರಿದು ಕಾಲುವೆಗೆ ಎಸೆಯಲಾಯಿತು. ರಾಷ್ಟ್ರ ಧ್ವಜಗಳನ್ನು ಸಾರ್ವಜನಿಕವಾಗಿ ತುಳಿಯಲಾಯಿತು. ಮಹಾತ್ಮಗಾಂಧಿ, ಸುಭಾಷ್ ಚಂದ್ರ ಬೋಸ್ ಮತ್ತು ನೆಹರೂ ಅವರ ಪಟಗಳನ್ನು ಒಡೆದು ಚೂರು ಚೂರು ಮಾಡಲಾಯಿತು. ಈ ಕಾರಣದಿಂದ ಕಾಂಗ್ರೆಸಿಗರಂತೆ ಕಮ್ಯೂನಿಸ್ಟರು ಆದಿ ದ್ರಾವಿಡರ ಮೇಲೆ ಹತ್ತಾರು ವರುಷಗಳ ಕಾಲ ಮುನಿಸಿಕೊಂಡಿದ್ದರು.

ಕಾರ್ಮಿಕರು ಮತ್ತು ರಾಜಕೀಯ :

1956ರಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಪಕ್ಷದ ಕಾರ್ಯದರ್ಶಿಯಾಗಿ ನೇಮಕಗೊಂಡ. ಸಿ.ಎಂ.ಆರ್ಮುಗಂ ಮೈಸೂರು ರಾಜ್ಯದ ವಿಧಾನ ಸಭೆಗೆ ಪರಿಶಿಷ್ಟರ ಮೀಸಲು ಕ್ಷೇತ್ರ ಕೆಜಿಎಫ್‌ನಿಂದ ಎರಡನೆ ವಿಧಾನ ಸಭೆ ಪ್ರವೇಶಿಸಿದ್ದರು. 1962ರಲ್ಲಿ ನಡೆದ ಮೂರನೆ ವಿಧಾನ ಸಭೆ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ಎಸ್.ರಾಜಗೋಪಾಲ್ ಅವರು ಆರ್ಮುಗಂ ವಿರುದ್ಧ ಕೇವಲ 128 ಮತಗಳಿಂದ ಗೆದ್ದು ವಿಧಾನ ಸಭೆ ಪ್ರವೇಶಿಸಿದ್ದರು. 1967ರಲ್ಲಿ ನಡೆದ ನಾಲ್ಕನೆ ವಿಧಾನ ಸಭೆಯ

ಚುನಾವಣೆಯಲ್ಲಿ ಕೂಡ ಆರ್ಮುಗಂ ಸೋತು ಕಮ್ಯೂನಿಷ್ಟ್‌ನ ಎಸ್.ರಾಜಗೋಪಾಲ್ ಅವರು ಮತ್ತೆ ಗೆದ್ದು ಬಂದಿದ್ದರು. ಆಗಲೂ ಆರ್ಮುಗಂ ಅವರು 4763 ಮತಗಳಿಂದ ಸೋತಿದ್ದರು.

1972ರ ಐದನೇ ವಿಧಾನ ಸಭೆ ಚುನಾವಣೆಯಲ್ಲಿ ಆರ್ಮುಗಂ ಅವರು ತಮ್ಮ ನಿಕಟ ಕಾಂಗ್ರೆಸ್ ಪ್ರತಿಸ್ಪರ್ಧಿ ಎ.ಕೆ.ಸೆಲ್ವರಾಜ್ ಅವರನ್ನು 1760 ಮತಗಳಿಂದ ಸೋಲಿಸಿ ಎರಡನೇ ಬಾರಿಗೆ ವಿಧಾನ ಸಭೆಯನ್ನು ಪ್ರವೇಶಿಸಿದ್ದರು. ಆದರೆ ಅವರ ವಿರುದ್ಧ ತಕರಾರು ತೆಗೆದ ಅರ್ಜಿಯನ್ನು ಪುರಸ್ಕರಿಸಿದ ರಾಜ್ಯ ಹೈಕೋರ್ಟ್ ಆರ್ಮುಗಂ ಅವರ ವಿಧಾನಸಭಾ ಸದಸ್ಯತ್ವವನ್ನು ಅಸಿಂಧುಗೊಳಿಸುವ ಆದೇಶವನ್ನು ನೀಡಿತು. 1978ರಲ್ಲಿ ರಾಷ್ಟ್ರಪತಿ ಆಡಳಿತ ತಂದು ನಂತರ ಮತ್ತೊಮೆ ಚುನಾವಣೆ ನಡೆಯಿತು. ಆರನೇ ವಿಧಾನ ಸಭೆಗೆ ನಡೆದ ಈ ಚುನಾವಣೆಯಲ್ಲಿ ಆರ್ಮುಗಂ ಅವರು ತಮ್ಮ ಪ್ರತಿಸ್ಪರ್ಧಿ ಎಸ್.ರಾಜಗೋಪಾಲ್ ಅವರನ್ನು 8136 ಮತಗಳಿಂದ ಸೋಲಿಸಿ ಚುನಾಯಿತರಾಗಿದ್ದರು.

1983ರಲ್ಲಿ ನಡೆದ ಏಳನೇ ವಿಧಾನಸಭೆ ಚುನಾವಣೆಯಲ್ಲಿ ಅಣ್ಣಾ ಡಿಎಮ್‌ಕೆ ಪಕ್ಷದ ಭಕ್ತವತ್ಸಲಂ ಅವರು ಜನತಾಪಕ್ಷ, ರಿಪಬ್ಲಿಕನ್ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಸೋಲಿಸಿದ ಕಾರಣ ಮೊದಲ ಬಾರಿಗೆ ತಮಿಳುನಾಡಿನ ರಾಜಕೀಯ ಕರ್ನಾಟಕದ ಒಳಕ್ಕೆ ಪ್ರವೇಶಿಸಿತ್ತು. ಈ ಚುನಾವಣೆ ನಡೆಯುವುದಕ್ಕಿಂತ ಎರಡು ದಿನಗಳು ಮುಂಚೆ ಅಂದಿನ ತಮಿಳು ನಾಡು ಮುಖ್ಯಮಂತ್ರಿ ಮತ್ತು ಪ್ರಖ್ಯಾತ ತಮಿಳು ಸಿನಿಮಾ ನಟ ಎಂ.ಜಿ. ರಾಮಚಂದ್ರನ್ ಅವರನ್ನು ಭಕ್ತವತ್ಸಲಂ ಚುನಾವಣಾ ಪ್ರಚಾರಕ್ಕೆ ಕೆಜಿಎಫ್‌ಗೆ ಕರೆದು ತರುವಲ್ಲಿ ಯಶಸ್ವಿಯಾಗಿದ್ದರು. ಅಲ್ಲಿಗೆ ಕೆಜಿಎಫ್ ಜನರು ಇನ್ನೊಂದು ಆಪತ್ತನ್ನು ತಂದು ನೇರವಾಗಿ ತಮ್ಮ ಎದೆಯ ಮೇಲೆಯೆ ಇಟ್ಟುಕೊಂಡಬಿಟ್ಟರು. 1988ರಲ್ಲಿ ಕಮ್ಯೂನಿಸ್ಟ್ ಪಕ್ಷದ ಟಿ.ಎಸ್.ಮಣಿ, 1993ರಲ್ಲಿ, 1998ರಲ್ಲಿ ಎಂ.ಭಕ್ತವತ್ಸಲಂ ಮತ್ತು 2003ರಲ್ಲಿ ಎಸ್.ರಾಜೆಂದ್ರನ್ ಗೆದ್ದಿದ್ದರು.

❖❖❖

ಎಲ್ಲಾ ರಾಜಕಾರಣಿಗಳು ಕಾಲಕಾಲಕ್ಕೆ ಕಾರ್ಮಿಕರಿಗೆ ಬಣ್ಣ ಬಣ್ಣದ ಮಾತುಗಳನ್ನು ಹೇಳಿ ಅವರನ್ನು ಸುಲಿದು ತಿಂದಿದ್ದೆ ಹೆಚ್ಚು. ಆಡಳಿತದ ಜೊತೆಗೆ ಸೇರಿಕೊಂಡ ನಾಯಕರು ಒಳಗೊಂದು ಹೊರಗೊಂದು ಮಾತುಗಳನ್ನು ಹೇಳಿ, ಅತ್ತ ಕಾರ್ಮಿಕರನ್ನು ವಂಚಿಸಿ ಇತ್ತ ಆಡಳಿತದಿಂದಲೂ ಹಣವನ್ನು ದೋಚುತ್ತಿದ್ದರು. ತಿಂಗಳು ತಿಂಗಳೂ ಕಾರ್ಮಿಕರ ಸಂಬಳದಲ್ಲಿ ಕಾರ್ಮಿಕ ಕ್ಷೇಮಾಭಿವೃದ್ಧಿ ನಿಧಿ, ಯುನಿಯನ್ ಫಂಡ್ ಇತ್ಯಾದಿ ಎಂದು ಹಣವನ್ನು ಮುರಿದುಕೊಳ್ಳಲಾಗುತ್ತಿತ್ತು. ಸಾವಿರಾರು

ಕಾರ್ಮಿಕರಿದ್ದುದರಿಂದ ಹೇರಳ ಹಣ ಸಂಗ್ರಹವಾಗುತ್ತಿತ್ತು. ಇದಲ್ಲದೆ ಬೋನಸ್ ಬಂದಾಗ, ಹಬ್ಬಗಳಿಗೆ ಅಡ್‌ವಾನ್ಸ್ ಸಿಕ್ಕಿದಾಗ ಇನ್ನಿತರ ಸಮಯಗಳಲ್ಲೂ ಬಡ ಕಾರ್ಮಿಕರಿಂದ ಹಣವನ್ನು ಸಂಗ್ರಹಿಸಲಾಗುತ್ತಿತ್ತು. ಎಲ್ಲಾ ಕಾರ್ಮಿಕರು ಹಣವನ್ನು ಕಟ್ಟುನಿಟ್ಟಾಗಿ ಕೊಡಲೇಬೇಕಾಗಿತ್ತು. ಕಾರ್ಮಿಕರ ಮುಖಂಡತ್ವ ವಹಿಸಲು ದೊಡ್ಡ ಪ್ರಮಾಣದಲ್ಲಿ ಚುನಾವಣೆಗಳು ನಡೆಯುತ್ತಿದ್ದವು. ಮೊದಲಿಗೆ ಒಂದೋ ಎರಡೋ ಇದ್ದ ಯುನಿಯನ್‌ಗಳು ಕವಲೊಡೆದು ಹತ್ತಾರು ಯುನಿಯನ್‌ಗಳು ಹುಟ್ಟಿಕೊಂಡವು. ಚುನಾವಣೆಯ ಹಿಂದಿನ ದಿನ ರಾತ್ರೋರಾತ್ರಿ ಹೆಂಡ ಮತ್ತು ಹಣ ಕಾಲೋನಿಗಳಲ್ಲಿ ಹೊಳೆಯಾಗಿ ಹರಿಯುತ್ತಿತ್ತು. ಈ ಸಮಯದಲ್ಲಿ ಭಾರಿ ಪ್ರಮಾಣದಲ್ಲಿ ಹೊಡೆದಾಟಗಳು, ಕೆಲವೊಮ್ಮೆ ಕೊಲೆಗಳು ನಡೆಯುತ್ತಿದ್ದವು. ಕೆಜಿಎಫ್‌ಗೆ ಒಂದು ವಿಶೇಷ ಸೂಪರಿನ್‌ಟೆಂಡೆಂಟ್ ಕಚೇರಿಯನ್ನು ಚಾಂಪಿಯನ್ ಹತ್ತಿರದಲ್ಲಿ ಬ್ರಿಟಿಷರ ಕಾಲದಲ್ಲಿಯೇ ಸ್ಥಾಪಿಸಲಾಗಿತ್ತು.

ಸಿ.ಎಮ್. ಆರ್ಮುಗಂ ಅವರು ಸ್ಥಾಪಿಸಿದ ಡಾ. ಬಿ.ಆರ್.ಅಂಬೇಡ್ಕರ್ ಶಾಲೆಗಳ ಸಮೂಹ ಹುಟ್ಟಲು ಕಾರ್ಮಿಕರೆ ಕಾರಣರಾಗಿದ್ದರು. ಬೆಂಗಳೂರಿನಲ್ಲಿರುವ ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಮೂಲ ಸಂಸ್ಥಾಪಕರಲ್ಲಿ ಆರ್ಮುಗಂ ಒಬ್ಬರು. ಕಾರ್ಮಿಕರ ನಿಧಿಯಿಂದ ರಾಬರ್ಟ್‌ಸನ್‌ಪೇಟೆಯಲ್ಲಿ ಅವರಿಗೊಂದು ಮನೆಯನ್ನು ಕಟ್ಟಿಕೊಡಲಾಗಿತ್ತು. ಎಸ್.ರಾಜಗೋಪಾಲ್ ಅವರು ಕಾಲೇಜನ್ನು ಸ್ಥಾಪಿಸಲು ಕಾರಣರಾಗಿದ್ದರು. ಇವರ ಜೊತೆಗೆ ಎಸ್.ಆರ್.ಷಣ್ಮುಗಂ, ದೇವಸ್ಸು, ಸೇವಗಮ್ ಮತ್ತು ಐ.ಸುಬ್ರಮಣ್ಯಂ ಕಾರ್ಮಿಕರ ನಾಯಕರಾಗಿ ಗಣಿ ಪ್ರದೇಶದಲ್ಲಿ ಹೆಸರು ಮಾಡಿದ್ದರು. ಭಕ್ತವತ್ಸಲಂ ಮತ್ತು ರಾಜೇಂದ್ರನ್ ಅವರು ವರ್ಧಮಾನಕ್ಕೆ ಬರುವ ಕಾಲಕ್ಕೆ ಗಣಿಗಳನ್ನು ಮುಚ್ಚಲಾಗಿತ್ತು.

ಪ್ರತಿಭಟನೆ ಮತ್ತು ಬಂದ್ :

ಗಣಿಗಳನ್ನು ಮುಚ್ಚುವುದಕ್ಕೆ ಮುಂಚೆ ಅನೇಕ ಸಲ ಪ್ರತಿಭಟನೆ, ಬಂದ್‌ಗಳನ್ನು ಕಾರ್ಮಿಕ ಸಂಘಟನೆಗಳು ನಡೆಸಿದ್ದವು. ಇದೆಲ್ಲದರಿಂದ ಕೇವಲ ನಾಲ್ಕೈದು ವರ್ಷಗಳು ಮಾತ್ರ ಗಣಿಗಳು ಮುಚ್ಚುವುದನ್ನು ತಡೆಹಿಡಿಯಲು ಸಾಧ್ಯವಾಯಿತು. ಕೆಜಿಎಫ್ ನಾಗರಿಕರು ಮತ್ತು ವ್ಯಾಪಾರಿಗಳು 29.08.1993 ರಂದು 'ಕೆಜಿಎಫ್ ಉಳಿಸಿ' ಎಂದು ಬೃಹತ್ ಪ್ರತಿಭಟನೆಯನ್ನು ನಡೆಸಿದ್ದರು. 10.05.1997ರಲ್ಲಿ 'ಕೆಜಿಎಫ್ ಬಂದ್' ಮಾಡಲಾಯಿತು. ಆಗ ಕೆಜಿಎಫ್‌ನ ಎಲ್ಲಾ ಕಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಸಂಘಟನೆಗಳು ಪಾಲ್ಗೊಂಡಿದ್ದವು. 22.05.1997 ರಂದು ಕಾರ್ಮಿಕರು ಟೋಕನ್ ಪ್ರತಿಭಟನೆ ನಡೆಸಿದ್ದರು. 27.08.1997 ರಂದು ಎಲ್ಲಾ ರಾಜಕೀಯ ಪಕ್ಷಗಳು 'ಕೆಜಿಎಫ್ ಉಳಿಸಿ' ಧರಣಿಯನ್ನು ಮತ್ತೊಮ್ಮೆ ನಡೆಸಿದ್ದವು. 26.08.1997ರಂದು ಕೋಲಾರ ಜಿಲ್ಲೆಯ ಎಲ್ಲಾ ಶಾಲಾ

ಕಾಲೇಜು ವಿದ್ಯಾರ್ಥಿಗಳು ತರಗತಿಗಳನ್ನು ತೊರೆದು ಪ್ರತಿಭಟಿಸಿದ್ದರು. ಕರ್ನಾಟಕ ರಾಜ್ಯದ ಯುವ ಜನತಾದಳದ ಉಪಾಧ್ಯಕ್ಷ, ಕೆ.ರಾಜೇಂದ್ರನ್, 3 ದಿನ ಉಪವಾಸ ಸತ್ಯಾಗ್ರಹ ನಡೆಸಿದ್ದರು.

'ಕೆಜಿಎಫ್ ರಕ್ಷಣಾ ಮತ್ತು ಅಭಿವೃದ್ಧಿ ವೇದಿಕೆ' ಕೆಜಿಎಫ್ ಉಳಿಸಿ ಆಂದೋಲನ ನಡೆಸಿತ್ತು. ಇದರಲ್ಲಿ ನ್ಯಾಯವಾದಿಗಳು, ವೈದ್ಯರು ಮತ್ತು ಬುದ್ಧಿಜೀವಿಗಳು ಇದ್ದರು. ನಿರ್ಮಲ್ ಮುಖರ್ಜಿ, ವಿ.ಆರ್.ಕೃಷ್ಣ ಅಯ್ಯರ್, ಡಿ.ತಂಗಪ್ಪನ್, ಎನ್.ರಾಮ್ ಮತ್ತಿತರ ವ್ಯಕ್ತಿಗಳು ಗಣಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗಗಳನ್ನು ಸೃಷ್ಟಿಸಬೇಕೆಂದು ಒತ್ತಾಯ ಮಾಡಿದ್ದರು. ಇಷ್ಟೆಲ್ಲಾ ಪ್ರತಿಭಟನೆ, ಧರಣಿ ಮತ್ತು ಬಂದ್‌ಗಳನ್ನು ಆಚರಿಸಿ ಸಮಾಜದ ಹಲವು ಕಡೆಗಳಿಂದ ಒತ್ತಾಯಗಳನ್ನು ತಂದರೂ ಕೆಜಿಎಫ್ ಕಾರ್ಮಿಕರಿಗೆ ಯಾವುದೇ ಆಶಾದಾಯಕ ಸೂಚನೆಗಳು ದೊರಕಲಿಲ್ಲ. ಬಹುಬಲಿಯ ಕಂಪನಿಗಳಿಗೆ ಚಿನ್ನದ ಗಣಿಗಳನ್ನು ಕೊಡಬಾರದೆಂದು ಸ್ಥಳೀಯ ಶಾಸಕ ಕೆ.ರಾಜೇಂದ್ರನ್ 21.11.1996 ರಂದು ಕೆಜಿಎಫ್ ಬಂದ್ ಆಚರಿಸಿದ್ದರು. ಇದಕ್ಕೆ ಕೆಲವು ಕಾರ್ಮಿಕ ಸಂಘಟನೆಗಳು ಸಹಾಯ ಮಾಡಿದ್ದವು. ಈ ಬಂದ್‌ನ್ನು ನಡೆಸಿದ್ದು ಮುಖ್ಯವಾಗಿ ಆಸ್ಟ್ರೇಲಿಯಾದ 'ಮೊಹ್' ಕಂಪನಿಗೆ ಕೆಜಿಎಫ್ ಹಸ್ತಾಂತರವಾಗಬಾರದು ಎನ್ನುವ ಉದ್ದೇಶದಿಂದ. ಮೊಹ್ ಕಂಪನಿ ಗಣಿಗಳನ್ನು ನಡೆಸುವ ನಿರ್ಧಾರವನ್ನು ತೆಗೆದುಕೊಂಡ ಸಮಯದಲ್ಲಿ ಕಾರ್ಮಿಕರು ನಡೆಸಿದ ಪ್ರತಿಭಟನೆ ನೋಡಿ ಅದು ಹಿಂದಕ್ಕೆ ಹೊರಟುಹೋಯಿತು. ಈ ಕಂಪನಿ ತೆರೆದ ಗಣಿಗಳನ್ನು ಮಾಡುವ ಉದ್ದೇಶವನ್ನು ಹೊಂದಿತ್ತು. ಇದರಿಂದ ಕೆಜಿಎಫ್‌ನಲ್ಲಿ ಪರಿಸರ ತೀರಾ ಅಧೋಗತಿಗೆ ಇಳಿದುಹೋಗುತ್ತದೆ, ತೆರೆದ ಗಣಿಗಳನ್ನು ಮಾಡುವುದೆಂದರೆ ಈಗಾಗಲೆ ಈ ಪ್ರದೇಶದಲ್ಲಿ ಸಂಭವಿಸಿರುವ ಅನಾಹುತಗಳನ್ನು ಇನ್ನಷ್ಟು ತೀವ್ರಗೊಳಿಸುವ ಕೆಲಸವೇ ಆಗುತ್ತದೆ ಎನ್ನುವ ಭೀತಿ ಪರಿಸರವಾದಿಗಳು ಮತ್ತಿತರರನ್ನು ಕಾಡಿತ್ತು.

ಸಾಮಾಜಿಕ ಸಂಘರ್ಷ :

ಹಿಂದೂಗಳು ಮತ್ತು ಆದಿ ದ್ರಾವಿಡರ ನಡುವೆ ಒಳಗೊಳಗೆ ವೈಷಮ್ಯಗಳಿದ್ದರೂ ಹಳ್ಳಿಗಳಲ್ಲಿ ತೋರಿಸಿಕೊಳ್ಳುವಂತೆ ಪ್ರತ್ಯೇಕತೆಯನ್ನು ಗಣಿ ಕಾಲೋನಿಗಳಲ್ಲಿ ತೋರಿಸಲಾಗುತ್ತಿರಲಿಲ್ಲ. 1907ರಲ್ಲಿ ಪಂಜಾಬಿಗಳು ಮತ್ತು ಕಾರ್ಮಿಕರ ನಡುವೆ ನೀರಿನ ಕೊಳಾಯಿಗಳ ಬಗ್ಗೆ ಘರ್ಷಣೆ ನಡೆಯಿತು. ಕೆಳಜಾತಿಯ ತಮಿಳು ಹೆಂಗಸರು ಕೊಳಾಯಿಗಳಲ್ಲಿ ನೀರು ಹಿಡಿಯುವುದನ್ನು ಪಂಜಾಬಿಗಳು ವಿರೋಧಿಸಿದಾಗ ಮಹಿಳೆಯರು ಪಂಜಾಬಿಗಳನ್ನು ಬಾಯಿಗೆ ಬಂದಂತೆ ನಿಂದಿಸುತ್ತ ಒಂದು ದಿನ ನಿಮಗೆಲ್ಲ ಸರಿಯಾಗಿ ಪೂಜೆಯಾಗುತ್ತದೆ, ಎಂದು ಎಚ್ಚರಿಕೆ ನೀಡುತ್ತಲೆ ಬಂದಿದ್ದರು. ಪಂಜಾಬಿಗಳು ಮಹಿಳೆಯರ ವಿರುದ್ಧ ಕಂಪನಿಗೆ ದೂರು ಕೊಟ್ಟರೂ, ಅದು ಅಂತಹ

ದೊಡ್ಡ ವಿಚಾರವಲ್ಲ ಎಂದು ಕಂಪನಿ ತಲೆ ಕೆಡಿಸಿಕೊಳ್ಳಲಿಲ್ಲ. ಮುಂದುವರಿದ ಕೊಳಾಯಿ ಜಗಳ ಕೊನೆಯದಾಗಿ 1942ರಲ್ಲಿ ಭೂತದಂತೆ ಎದ್ದು ಓಡಾಡತೊಡಗಿತು.

ಮುಂಚೆ ಎಲ್ಲರೂ ಕೊಳಾಯಿಗಳಲ್ಲಿ ಒಟ್ಟಾಗಿ ನೀರು ಹಿಡಿದುಕೊಳ್ಳುತ್ತಿದ್ದರು. ಕಾಂಗ್ರೆಸ್ ಬೆಂಬಲಿಗರು ಮತ್ತು ಪರಿಶಿಷ್ಟ ಜಾತಿಯ ಫೆಡರೇಷನ್ ಮಧ್ಯದ ವಿರಸದಿಂದ ಜಾತಿವಾದಿ ಹಿಂದೂಗಳು ತಮಗಾಗಿ ಪ್ರತ್ಯೇಕ ಕೊಳಾಯಿಗಳನ್ನು ಬಿಟ್ಟುಕೊಡಲು ಪಟ್ಟು ಹಿಡಿದರು. ನೀರು ಹಿಡಿದುಕೊಳ್ಳುತ್ತಿದ್ದ ಪರಿಶಿಷ್ಟ ಜಾತಿಯ ಮಹಿಳೆಯರನ್ನು ಹಿಂದೂಗಳು ನಿಂದಿಸತೊಡಗಿದರು. ಹಿಂದೂಗಳು ತಮಗಾಗಿ 7 ಕೊಳಾಯಿಗಳನ್ನು ಪ್ರತ್ಯೇಕ ಬಿಟ್ಟುಕೊಡುವಂತೆ ಕೇಳಿಕೊಂಡಾಗ ಗಣಿ ಮೇಲ್ವಿಚಾರಕರು ಒಪ್ಪಿಗೆ ನೀಡಿದ್ದರು. ಪರಿಶಿಷ್ಟ ಜಾತಿಯ ಫೆಡರೇಷನ್ ಈ ತೀರ್ಮಾನವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಿಸಿತು.

❖❖❖

1920ರಲ್ಲಿ ಪ್ರಾರಂಭವಾದ ಆದಿ ದ್ರಾವಿಡ ಮಹಾಸಭೆಯ ಮುಖ್ಯಸ್ಥ ಪೂಸ್ವಾಮಿ ಪರಿಶಿಷ್ಟರು ಸಭೆಗಳಲ್ಲಿ ಹಲಗೆ ಬಾರಿಸುವುದನ್ನು ಹಿಂದೂಗಳು ಹೀಯಾಳಿಸುವುದರಿಂದ ಬೇಡವೆಂದು ನಿಲ್ಲಿಸಿದ್ದರು. 1925ರಲ್ಲಿ 'ಹೊಲೆಯ' ಮತ್ತು 'ಪಂಚಮ' ಹೆಸರುಗಳನ್ನು ಮೈಸೂರು ಸರಕಾರ ಗೌರವಯುತವಾಗಿ 'ಆದಿ ಕರ್ನಾಟಕ' ಮತ್ತು 'ಆದಿ ದ್ರಾವಿಡ' ಎಂದು ಕರೆಯಿತು.[39] 1942ರಲ್ಲಿ ಎಂ.ಎಂ.ದಂಡಪಾಣಿ ದೇಶಿಕರ್ ನಟಿಸಿದ 'ನಂದನಾರ್' ಚಿತ್ರವನ್ನು ಕೆಜಿಎಫ್‌ನಲ್ಲಿ ಪ್ರದರ್ಶಿಸದಂತೆ ನಿರ್ಬಂಧಿಸಲಾಯಿತು. ಕಾರಣ ಆ ಚಿತ್ರದಲ್ಲಿ ನಂದನಾರ್ ಮೋಕ್ಷಕ್ಕೆ ಹೋಗುವ ಮುನ್ನ ಅಗ್ನಿ ಪರೀಕ್ಷೆಗೆ ಒಳಗಾಗುತ್ತಾರೆ. ಇದು ಹಿಂದೂಗಳು ಜನರನ್ನು ಮೂಢನಂಬಿಕೆಗಳಲ್ಲಿ ಮುಳುಗಿಸುವ ಪಿತೂರಿ ಎಂದು ಕಾರ್ಮಿಕರು ಪ್ರತಿಭಟಿಸಿದ್ದರು. ಕಾಲೋನಿಗಳಲ್ಲಿ ಪರಿಶಿಷ್ಟ ಜಾತಿಯ ಜನರೆ ಹೆಚ್ಚಾಗಿದ್ದು, ಇತರ ಜಾತಿ, ಸಮುದಾಯಗಳ ಜನರೂ ಇದ್ದರು. ಎಷ್ಟೇ ಬಿನ್ನಾಭಿಪ್ರಾಯಗಳು ಬಂದರೂ ಕಾಲೋನಿ ಜೀವನದಿಂದ ಒಟ್ಟಾಗಿ ಜೀವನ ನಡೆಸುವ ಅನಿವಾರ್ಯತೆ ತನಗೆ ತಾನೇ ಒದಗಿ ಬಂದಿತ್ತು. ಕಾಲೋನಿಗಳಲ್ಲಿ ಪಂಚಾಯತಿ ಕಟ್ಟೆಗಳಿದ್ದು ಎಲ್ಲಾ ರೀತಿಯ ವಿವಾದಗಳನ್ನು ಅಲ್ಲೆ ನಿವಾರಿಸಲಾಗುತ್ತಿತ್ತು.[40]

ಚಾರ್ಲ್ಸ್ ಟೋಡ್‌ಹಂಟರ್ ತಮ್ಮ 1937ರ ವರದಿಯಲ್ಲಿ ಪಂಚಾಯತಿ ಕಟ್ಟೆಗಳಲ್ಲಿ ಹೆಣ್ಣು-ಗಂಡು ಸಂಬಂಧ ಮತ್ತಿತರ ವಿವಾದಗಳನ್ನು ಅಲ್ಲೇ ತೀರ್ಮಾನಿಸುತ್ತಿದ್ದ ವಿವರಗಳನ್ನು ದಾಖಲಿಸಿದ್ದಾರೆ. ಇದೇ ಸಮಯದಲ್ಲಿ ಕಾರ್ಮಿಕರಲ್ಲಿ ಸಾಮಾಜಿಕ ಜಾಗೃತಿ ಉಂಟಾಗಿ ಅನೇಕ ರೀತಿಯ ಕರಪತ್ರಗಳು, ನಾಟಕಗಳು ಮತ್ತು ಕಾವ್ಯ ಹುಟ್ಟಿಕೊಂಡಿತ್ತು. ಶ್ರೀನಿವಾಸನ್ ಬರೆದ 'ಕೋಲಾರ ಮನಿ' ಎನ್ನುವ ನಾಟಕದಲ್ಲಿ

ಕೆಜಿಎಫ್‌ನ ಬೆಲೆವೆಣ್ಣುಗಳು ಕಾರ್ಮಿಕರ ಕುಟುಂಬಗಳನ್ನು ನಾಶಪಡಿಸುವುದರ ಬಗ್ಗೆ ಮತ್ತು ಅವರು ಗಂಡಸರನ್ನು ಬೆರಳು ತುದಿಯಲ್ಲಿ ಆಡಿಸುವುದನ್ನು ಅಸೂಯೆಯಿಂದ ವಿವರಿಸಲಾಗಿತ್ತು. ಶ್ರೀನಿವಾಸನ್ ತನ್ನ ಕವಿತೆಗಳಲ್ಲಿ ವೈಷ್ಣವ ಧರ್ಮವನ್ನು ಅಪ್ಪಿಕೊಂಡು ಸಾರ್ವಜನಿಕವಾಗಿ ದನದ ಮಾಂಸ ತಿನ್ನುವುದಿಲ್ಲ ಎಂದು ಶಪಥ ತೆಗೆದುಕೊಂಡವರನ್ನು ಮತ್ತು ಆದಿ ದ್ರಾವಿಡರ ಪದ್ಧತಿಗಳನ್ನು ಖಂಡಿಸಿದವರ ವಿರುದ್ಧ ಉಗ್ರವಾಗಿ ಆಕ್ರೋಶ ವ್ಯಕ್ತಪಡಿಸಿದ್ದರು.[41]

ಇದೇ ಕವಿತೆಗಳಲ್ಲಿ ಒಬ್ಬ ಪರವಣ್ಣನ್ (ದೋಬಿಯ) ಪಂಚಮನ ಬಗ್ಗೆ ವಿವರಿಸಲಾಗಿತ್ತು. ಈತ ವೈಷ್ಣವ ಧರ್ಮಕ್ಕೆ ಪರಿವರ್ತನೆಗೊಂಡು ಹಣೆ ಮೈ ಕೈಗಳ ಮೇಲೆ ವಿಭೂತಿ ಬಳಿದುಕೊಂಡು ಊಟ ಉಪಚಾರಗಳನ್ನು ಹಿಂದೂಗಳಂತೆ ಬದಲಾಯಿಸಿಕೊಂಡಿದ್ದ. ಅನಂತರ ಹೇಗೋ ಸ್ವಾಮೀಜಿಯಾಗಿ ಮಾರ್ಪಟ್ಟಿದ್ದ. ಒಟ್ಟಿನಲ್ಲಿ ಹಳ್ಳಿಯಲ್ಲಿ ಅಸ್ಪೃಶ್ಯನಾಗಿ ಹುಟ್ಟಿ ಕ್ಯಾಂಪಿನಲ್ಲಿ ಬ್ರಾಹ್ಮಣನಾಗಿದ್ದ ಈತ ಮೊದಲು ತನ್ನ ಹಳ್ಳಿಯಲ್ಲಿ ಜಮೀನುದಾರರ ಮನೆಯಲ್ಲಿ ಎಮ್ಮೆಗಳನ್ನು ಮೇಯಿಸುತ್ತಿದ್ದು ಅವರು ಕೊಟ್ಟಿದ್ದ ಸಾಲ ತೀರಿಸಲಾಗದೆ ಹಳ್ಳಿ ಬಿಟ್ಟು ಓಡಿಬಂದುಬಿಟ್ಟಿದ್ದಲ್ಲದೆ ಕ್ಯಾಂಪಿನಲ್ಲಿ ಕೋಲಾರ ಮನಿಯ ಚಲಾವಣೆಯ ನಡುವೆ ಎಲ್ಲರಿಂದ ಪಾದಪೂಜೆ ಮಾಡಿಸಿಕೊಳ್ಳುವಲ್ಲಿ ಸಫಲನಾಗಿದ್ದ ಎಂದು ವಿವರಿಸಲಾಗಿತ್ತು.

ಮುಂದುವರಿದು ಈತ, ತನ್ನನ್ನು ತಾನೇ ಗುರು ಎಂದು, ಕೆಲವು ಅನುಯಾಯಿಗಳಿಂದ ಕರೆಸಿಕೊಂಡು ಗಡ್ಡ ಮೀಸೆಯನ್ನು ಬೋಳಿಸಿಕೊಂಡು ಹಣೆಯಲ್ಲಿ ದೊಡ್ಡ ನಾಮ ಬಳಿದುಕೊಂಡು ಪುರಾಣ ಕಥೆಗಳನ್ನು ಗಂಭೀರವಾಗಿ ಓದುವಂತೆ ನಟಿಸುತ್ತಿದ್ದ. ಕತ್ತೆ ಮೇಲೆ ಹಳೆ ಬಟ್ಟೆಗಳ ಮೂಟೆಗಳನ್ನು ಹೇರಿಕೊಂಡು ಹೋಗಿ ಒಗೆಯುತ್ತಿದ್ದುದ್ದನ್ನು ಪೂರ್ಣವಾಗಿ ಮರೆತುಹೋಗಿದ್ದ. ದನದ ಮಾಂಸ ತಿನ್ನುತ್ತಿದ್ದ ನಾಲಿಗೆ ಹರಿಭಜನೆ ಮಾಡುತ್ತಿದೆ ಎಂದು ಕುಚೋದ್ಯದಿಂದ ವರ್ಣಿಸಲಾಗಿತ್ತು.

ಅಪಮಾನಗೊಂಡ ಸ್ವಾಮೀಜಿ (ದೋಬಿ) ಕೆಳ ನ್ಯಾಯಾಲಯದಲ್ಲಿ ಐಪಿಸಿ ಕೆಳಗೆ ಮಾನನಷ್ಟ ಹೂಡಿ ತೀರ್ಪು ಬಂದಾಗ, ಕುಚ್ಯೋದ್ಯ ಕವಿ ಶ್ರೀನಿವಾಸ್ ದಾಸ್ ತಾನು ಸ್ವಾಮೀಜಿಯನ್ನು ಪ್ರತ್ಯೇಕವಾಗಿ ಖಂಡಿಸಲಿಲ್ಲ. ಕಾಲೋನಿಯುಲ್ಲಿರುವ ಕೆಲವರ ಬಗ್ಗೆ ಹೇಳಲಾಗಿತ್ತು, ನ್ಯಾಯಾಲಯ ತೀರ್ಪನ್ನು ಮರು ಪರಿಶೀಲಿಸಬೇಕು ಎಂದು ವಿನಂತಿಸಿಕೊಂಡರು. ಆದರೆ ನ್ಯಾಯಾಧೀಶರು ಒಪ್ಪಿಕೊಳ್ಳಲಿಲ್ಲ. ಸ್ವಾಮೀಜಿಯ ಜೀವನವನ್ನು ಖಂಡಿಸಿದ್ದಲ್ಲದೆ ಅವರ ಹಳೆ ಬದುಕನ್ನೆಲ್ಲ ಕೆದಕ್ಕಿದ್ದು, ಪರವಣ್ಣನ್, ಮುಡಾಪರವಣ್ಣನ್ ಮತ್ತು ಕದೈಕೇಟ್ಟವಣ್ಣನ್ ಇತ್ಯಾದಿ ಪದಗಳಿಂದ ಅವಮಾನಿಸಲಾಗಿತ್ತು. ಪ್ರಸ್ತುತ ಈತನನ್ನು ಸಾರ್ವಜನಿಕರು ಗೌರವಿಸುತ್ತಿರುವುದರಿಂದ ಇವರು ಸಾರ್ವಜನಿಕರಿಗೆ ಸೇರಿದ ವ್ಯಕ್ತಿಯಾಗಿದ್ದು ಅವರನ್ನು ಅಗೌರವಿಸಿದ ಶ್ರೀನಿವಾಸ್ ದಾಸ್‌ಗೆ ಒಂದು ತಿಂಗಳು

ಜೈಲು ಶಿಕ್ಷೆ ನೀಡಲಾಯಿತು. ಪೂಸ್ವಾಮಿ, ಎಂಬವರು ಮದ್ರಾಸ್ ಮತ್ತು ಮೈಸೂರು ಸರಕಾರಗಳು ಪರಯರನ್ನು ಆದಿ ದ್ರಾವಿಡರೆಂದು ಹೆಸರು ಬದಲಾಯಿಸಲು ಶಾಸನ ತರುವಂತೆ ಒತ್ತಾಯ ತಂದಿದ್ದರು. ಜೊತೆಗೆ ಅವರಿಗೆ ವಿದ್ಯಾಭ್ಯಾಸಕ್ಕಾಗಿ ಸೌಕರ್ಯ ಕಲ್ಪಿಸಲು ಕೇಳಿಕೊಂಡಿದ್ದರು. 'ದ್ರಾವಿಡನ್' ಪತ್ರಿಕೆಯನ್ನು ಪ್ರಾರಂಭಿಸಿದಾಗ ಅದರಲ್ಲಿ ವೈಚಾರಿಕತೆ ಮತ್ತು ಆತ್ಮಗೌರವ ಹೆಚ್ಚಿಸಿಕೊಳ್ಳುವುದರ ಬಗ್ಗೆ ಒಂದು ಅಂಕಣವನ್ನು ಮೀಸಲಿರಿಸಲಾಗಿತ್ತು.[42]

ಇದರೆಲ್ಲದರ ಮೇಲೆ ಶ್ರೀನಿವಾಸ್ ದಾಸ್ ಅವರ ಮಾತುಗಳಲ್ಲಿ ಒಂದು ಕಟು ಸತ್ಯ ಅಡಗಿತ್ತು. ಕೆಜಿಎಫ್‌ಗೆ ಬಂದ ಜನ ತಮ್ಮ ಹಳೆ ತಲೆಮಾರಿನ ಪದ್ಧತಿಗಳನ್ನು ಕೀಳೆಂದು ತಾವೇ ಅಸಹ್ಯ ಪಡುತ್ತಿರುವುದು ಸರಿಯೇ? ಆದಿ ದ್ರಾವಿಡರು ಕುರಿ ಮೇಕೆ ಕೋಳಿ ಅಥವಾ ದನದ ಮಾಂಸ ತಿಂದರೆ ಅಪಮಾನವೇ? ಇಡೀ ಪ್ರಪಂಚ ತಿನ್ನುತ್ತಿಲ್ಲವೆ? ಅವರೆಲ್ಲ ಯಾಕೆ ಅಸಹ್ಯ ಪಟ್ಟುಕೊಳ್ಳುತ್ತಿಲ್ಲ? ಕುಡಿತವೂ ಅದೇ ರೀತಿಯದು. ಕೋಲಾರ ಮನಿ ಬಂದಿದ್ದೆ ನಮ್ಮ ಪದ್ಧತಿಗಳನ್ನು ಕಳೆದುಕೊಳ್ಳಬೇಕೆ?

❖❖❖

1907ರಲ್ಲಿ ಬರೆದ ಒಂದು ಹಾಡಿನಲ್ಲಿ, ಹಳ್ಳಿಗಾಡಿನಲ್ಲಿ ಹೆಚ್ಚೆಂದರೆ ಇಡೀ ಜೀವನದಲ್ಲಿ ದಿನಕ್ಕೊಂದಷ್ಟು ಗಂಜಿ ಕುಡಿಯುತ್ತ ತೇಪೆ ಹಾಕಿದ ಬಟ್ಟೆಗಳಲ್ಲಿ ಓಡಾಡುತ್ತಿದ್ದವರಿಗೆ ಕೆಜಿಎಫ್ ಗಣಿಗಳು ತಿನ್ನಲು ಅಕ್ಕಿ ಮತ್ತು ಮಾಂಸ ನೀಡಿತ್ತು.[44] ಕೆಜಿಎಫ್ ಕಾರ್ಮಿಕರಿಗೆ ಬಿಳಿಯರ ಕಂಪನಿಗಳು ಎಷ್ಟೇ ದಂಡ ಮತ್ತು ಶಿಕ್ಷೆ ನೀಡುತ್ತಿದ್ದರೂ ನೂರಾರು ವರ್ಷಗಳಿಂದ ಸುಲಿದು ತಿಂದಿದ್ದ ಭೂಮಾಲಿಕರಿಗಿಂತ ಮೋಸವಾಗಿಲ್ಲ[45] ಎಂದು ವಿವರಿಸಲಾಗಿತ್ತು.

ಇದರ ಜೊತೆಗೆ ಸಂತೆಯಲ್ಲಿ ಕಾರ್ಮಿಕರಿಗೆ ಒಟ್ಟಾಗಿ ಕುಡಿಯುವ ಸಾರಾಯಿ ಅಂಗಡಿ, ಸುಟ್ಟ ದನದ ಮಾಂಸ, ಎಲ್ಲ ರೀತಿಯ ಮೋಜು ದೊರಕುತ್ತಿತ್ತು. ಒಬ್ಬ ಭಾರತೀಯ ಹಳ್ಳಿಯ ಅಸ್ಪೃಶ್ಯ ಕನಸಿನಲ್ಲೂ ಊಹಿಸದ ವಿಷಯ ಅದಾಗಿತ್ತು.[46] ಕಾರ್ಮಿಕರು ಪಡೆಯುತ್ತಿದ್ದ ತಿಂಗಳು ತಿಂಗಳು ಸಂಬಳ ಅವರಿಗೆ ಹೊಸ ಸ್ವಾತಂತ್ರ್ಯ ನೀಡಿದ್ದರ ಜೊತೆಗೆ ಅವರಲ್ಲಿ ನಿಧಾನವಾಗಿ ಸಾಮಾಜಿಕ ಎಚ್ಚರಿಕೆಯೂ ಮನೆಮಾಡುತ್ತಿತ್ತು. 1919–20ರ ಮಹಾಯುದ್ಧದ ಕಾರಣ ಆಹಾರ ಧಾನ್ಯಗಳ ಕೊರತೆ ಕಾಣಿಸಿಕೊಂಡಾಗ ಕುಸುಲ ಅಕ್ಕಿಯ ಸ್ಥಾನದಲ್ಲಿ ಜನರು ಕಡಿಮೆ ಬೆಲೆಯ ಬರ್ಮಾ ಅಕ್ಕಿಯನ್ನು ತಿಂದ ಪರಿಣಾಮವಾಗಿ ಕರುಳು ರೋಗ ಕಾಣಿಸಿಕೊಂಡಿತ್ತು. ಇದರಿಂದ ಗಣಿ ಕಾಲೋನಿಗಳಲ್ಲಿ 40 ಜನರ ಸಾವನ್ನು ನೋಡಬೇಕಾಯಿತು. ಇದೇ ಅಕ್ಕಿಯನ್ನು ರಾತ್ರಿ ಹೊತ್ತು ಇಡ್ಲಿ, ದೋಸೆಗೆ ನೆನೆ ಹಾಕಿದರೆ ಬಹುಬೇಗನೆ ನೀರಿನಲ್ಲಿ ಕರಗಿಹೋಗಿಬಿಡುತ್ತಿತ್ತು. ಅದೇ ಕಾಲದಲ್ಲಿ ಗ್ರಾಮೀಣ ಪ್ರದೇಶದ ಕಡುಬಡವರು ಆಹಾರವಿಲ್ಲದೆ, ಹುತ್ತಗಳಲ್ಲಿ ಇರುವೆಗಳು ಶೇಖರಿಸಿಡುತ್ತಿದ್ದ ಹುಲ್ಲಿನ ಬೀಜ (ಪಿಲ್ಲರಿಸಿ) ಹುಡುಕಿ ತಂದು ಬೇಯಿಸಿ ತಿನ್ನುತ್ತಿದ್ದರು.[47]

ಕಾಲೋನಿಗಳಲ್ಲಿ ದನದ ಮಾಂಸ ತಿನ್ನುವುದು ಮೇಲ್ವರ್ಗದ ಜನರಲ್ಲಿ ತಿರಸ್ಕಾರ ಹುಟ್ಟಿಸಿದರೆ ಆದಿ ದ್ರಾವಿಡರಿಗೆ ಅದು ಒಂದು ಮಾರ್ಪಾಟಾಗಿ ಭಾವನಾತ್ಮಕ ಸಂಕೇತವಾಗಿಯೂ ಕಾಣಿಸಿಕೊಂಡಿತ್ತು. ಎಲ್ಲಾ ರೀತಿಯ ಮಾಂಸ ದೊರಕುತ್ತಿದ್ದರೂ ಕಾರ್ಮಿಕರು ಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಒಬ್ಬ ಪರಿವಣ್ಣನ್(ಕ್ಷೌರಿಕ) ದನದ ಮಾಂಸ ತಿನ್ನುವುದನ್ನು ತಿರಸ್ಕರಿಸಿ ತಾನು ಸನ್ಮಾರ್ಗ ಹೊಂದಿದ್ದೇನೆ ಎಂದು ನಂಬಿದ ಮೇಲೆ ಬರೆದ ತಮಿಳು ಪದ್ಯ ಇದು.

ಮನುಷ್ಯನೊಬ್ಬ
ದನದ ಮಾಂಸ ತಿಂದರೇನು?
ಅದು ಅವನ ಆಯ್ಕೆ...
ದೇವರು ತಿನ್ನಬೇಡ ಎಂದನೆ?
ತಿಂದರೆ ಸ್ವರ್ಗಕ್ಕೆ ಹೋಗಲು
ತೊಂದರೆ ಉಂಟಾಗುವುದೇನು?[48]

❖❖❖

ಸಾರಾಯಿ ಅಂಗಡಿಯ ಮುಂಭಾಗದಲ್ಲಿ ಕರಿದ ಮಾಂಸದ ತುಂಡುಗಳು, ಹುರಿದ ಬ್ರೆಡ್ಡು, ಹಣ್ಣು ಹಂಪಲುಗಳು ಸಂತೆಯಲ್ಲಿ ದೊರಕುತ್ತಿದ್ದವು. ಬರೀ ಗಂಜಿ ನೀರು ಕುಡಿಯುತ್ತಿದ್ದ ನಾಲಗೆಗಳಿಗೆ ಕಾಫಿ, ಓಪಿಯಮ್, ಮಾಂಸ ಮತ್ತು ಬ್ರೆಡ್ಡು ಹೊಸ ರುಚಿಯನ್ನು ನೀಡಿತ್ತು. ಆದರೆ ಇದೆಲ್ಲ ಕಾರ್ಮಿಕರಿಗೆ ಯಾವಾಗಲಾದರೂ ಒಮ್ಮೆ ರುಚಿ ನೋಡುವ ಗಗನ ಕುಸುಮವಾಗಿತ್ತು. ಹುರಿದ ದನದ ಮಾಂಸದ ತುಂಡುಗಳು (ಪ್ರೀತಿಯಿಂದ 'ಡಿಂಗ್ ಡಿಂಗ್' ಎಂದು ಕರೆಯುತ್ತಿದ್ದರು) ಗಂಜಿಯ ಜೊತೆಗೆ ನಂಜಿಕೊಳ್ಳಲು ಯಾವಾಗಲೂ ದೊರಕುತ್ತಿತ್ತು. ಇದರ ಜೊತೆಗೆ ತೇಪೆ ಬಟ್ಟೆ, ಕಿತ್ತು ಹೋದ ಚಪ್ಪಲಿಗಳ ಸ್ಥಳದಲ್ಲಿ ಪ್ಯಾಂಟು, ಶರ್ಟ್ ಮತ್ತು ಬೂಟುಗಳು ದೊರಕಿದ್ದವು.[49]

1940ರಲ್ಲಿ ದೊರೈಅರಸನ್ ಎಂಬ ಯುವಕ ತಮಿಳಿನಲ್ಲಿ ಚಿನ್ನದ ಬಗ್ಗೆ 'ಚಿನ್ನ ಸಲೀಸಾಗಿ ದೊರಕುವುದಿಲ್ಲ...' ಎಂದು ಹಾಡು ಬರೆದಿದ್ದ. ಅದರಲ್ಲಿ ಚಿನ್ನ ತೋಡಿ ಮಣ್ಣಾದವರ ಕಥೆಗಳು, ಅವರ ದುಃಖ ದುಮ್ಮಾನಗಳು, ಅಪಘಾತಗಳಲ್ಲಿ ಅಂಗಾಗಗಳನ್ನು ಕಳೆದುಕೊಂಡು ಖಾಯಂ ಊನವಾದವರು, ಸಿಲಿಕೋಸಿಸ್ ರೋಗಕ್ಕೆ ತುತ್ತಾದವರು, ಕಡಿಮೆ ಸಂಬಳ ಪಡೆದು ದಂಡ ಕಟ್ಟಿ ಅಪರಾಧ, ಶಿಕ್ಷೆಗಳನ್ನು ತಮ್ಮ ಮೇಲೆಳೆದುಕೊಂಡು ಎಲ್ಲವನ್ನೂ ಸಹಿಸಿಕೊಳ್ಳುತ್ತ ಕೊನೆಗೆ ತಮ್ಮ ಪ್ರಾಣವನ್ನೇ ಬಲಿ ಕೊಡುತ್ತಿದ್ದರು ಈ ಬಡಪಾಯಿ ಕಾರ್ಮಿಕರು ಎಂದು ಚಿತ್ರಿಸಿದ್ದ.

'ನಮ್ಮ ನಂಬಿಕೆಗಳನ್ನೆಲ್ಲ ನಾಳೆಗೆ ಕಾದಿಟ್ಟು ಚಿನ್ನ ತೆಗೆಯುವ ಕಾರ್ಮಿಕರು

ನಾವು... ಎಂದಾಗ ನಮಗೆ ಹೆಣ್ಣು ಕೊಡಲು ಯಾರೂ ಮುಂದೆ ಬರುತ್ತಿರಲಿಲ್ಲ' ಎನ್ನುತ್ತಿದ್ದ ಕಾರ್ಮಿಕರು ಮುಂದುವರೆಯುತ್ತ, 'ಇಷ್ಟೆಲ್ಲ ಅಪಾಯಗಳನ್ನು ಮೀರಿ ನಾವು ಚಿನ್ನ ತೆಗೆಯುತ್ತೇವೆ. ಆದರೆ ನಮ್ಮ ಹೆಣ್ಣು ಮಕ್ಕಳ ಮೂಗು ಕಿವಿಗಳಲ್ಲಿ ನೋಡಲು ಒಂದು ನತ್ತು ಚಿನ್ನವೂ ದೊರಕುವುದಿಲ್ಲ.'[50] ಎಂದು ದು:ಖದಿಂದ ಹೇಳಿಕೊಳ್ಳುತ್ತಿದ್ದರು. ಆದರೂ ಇವರೆಲ್ಲ ಹೊಸ ಸ್ಥಳದಲ್ಲಿ ಹೊಸ ಬದುಕಿಗೆ ಹೊಂದಿಕೊಳ್ಳುತ್ತ ತಮ್ಮ ಹಿಂದಿನ ಅವಮಾನದ ಪೊರೆಗಳನ್ನು ಕಳಚಿಕೊಳ್ಳಲು ಪ್ರಯತ್ನಿಸುತ್ತಿದ್ದರು.[51] ತಲೆಮಾರುಗಳೇ ಚಾಕರಿ ಮಾಡಿ ಸುಸ್ತಾಗಿದ್ದ ಅಸ್ಪೃಶ್ಯರಿಗೆ ಇದೊಂದು ಹೊಸ ಬೆಳಕಿನ ಕಿಂಡಿಯಾಗಿ ಕಾಣಿಸತೊಡಗಿತ್ತು.

❖❖❖

1909 ಮತ್ತು 1922ರಲ್ಲಿ ತೆಗೆದಿದ್ದ 2 ಛಾಯಾಚಿತ್ರಗಳು ಮಾನವ ಶಾಸ್ತ್ರಜ್ಞರಿಗೆ ಅನೇಕ ರೀತಿಯ ನೋಟಗಳನ್ನು ನೀಡುತ್ತಿದ್ದವು. ಮೊದಲನೆ ಚಿತ್ರದಲ್ಲಿ ತೆರೆದ ಎದೆ, ಅನಾಗರಿಕ ನೋಟದ ಕಣ್ಣುಗಳು, ತಲೆ ಬಾಚದೆ ಕೆದರಿರುವ ಉದ್ದನೆ ಕೂದಲಿನ ಪರಯ ಜಾತಿಯ ಜನರು. ಕಾಣಿಸುತ್ತಿದ್ದರೆ 13 ವರ್ಷಗಳ ನಂತರ 1922ರಲ್ಲಿ ಸೆರೆ ಹಿಡಿದ ಅದೇ ಜನರನ್ನು ಹಿಂದಿನ ಚಿತ್ರಕ್ಕೆ ಹೋಲಿಸಿದರೆ ತುಸುವೆ ಹೋಲುವಂತಿತ್ತು. ಈ ಚಿತ್ರದಲ್ಲಿನ ಯುವಕರು ಕ್ಯಾಮರಾ ಮುಂದೆ ಒಳ್ಳೆ ಬೂಟು, ಕೋಟು, ಟೈಗಳನ್ನು ಧರಿಸಿ ಕೂದಲನ್ನು ಒಪ್ಪವಾಗಿ ಬಾಚಿಕೊಂಡು ನಿಂತಿದ್ದರು.[52] ಈ ಚಿತ್ರ ತಮ್ಮ ಹಿಂದಿನ ಹಳ್ಳಿಗಳ ಜಾತಿ ಪದ್ಧತಿ, ಜೀತ ಪದ್ಧತಿ ಇತ್ಯಾದಿ ಸಾಮಾಜಿಕ ಹಿಡಿತಗಳಿಂದ ತಪ್ಪಿಸಿಕೊಂಡು ಹೊರಬಂದಂತಿದ್ದು, ಆರ್ಥಿಕ ಸುಧಾರಣೆ ಮತ್ತು ಹೊಸ ದಿಗಂತದ ಕಡೆಗೆ ಹೊರಟಂತೆ ಕಾಣಿಸುತ್ತಿತ್ತು. ಅದೇ ರೀತಿ ಸಾಮಾನ್ಯ ಮಹಿಳೆಯರಿಗೆ ಒಳ್ಳೆ ಬಟ್ಟೆ, ಸೌಂದರ್ಯ ಸಾಧನಗಳು ಸೌಕರ್ಯ ಇರಲಿಲ್ಲ. ಕಾಲೋನಿಗಳ ಹೊರಗಿದ್ದ ಮಹಿಳೆಯರನ್ನು ನೋಡಿ ಅಪೇಕ್ಷೆ ಪಟ್ಟರೂ ಇವುಗಳಿಗಾಗಿ ಗಣಿ ಕಾಲೋನಿ ಹೆಣ್ಣು ಮಕ್ಕಳು ಗಂಡಸರಂತೆ ಹೊರಗೆ ಬರಲು ಸಾಧ್ಯವಾಗುತ್ತಿರಲಿಲ್ಲ.[53]

ಕಾರ್ಮಿಕರಿಗೆ ಕಡಿಮೆ ಸಂಬಳ ಬರುತ್ತಿದ್ದರೂ ಅವರಿಗೆ ಯಾವುದೇ ನಿರ್ಬಂಧಗಳು ಇರುತ್ತಿರಲಿಲ್ಲ. ರಸ್ತೆಗಳಲ್ಲಿ ಸೈಕಲ್‌ಗಳನ್ನು ತುಳಿದುಕೊಂಡು ಓಡಾಡುತ್ತಿದ್ದರು. 1920ರಲ್ಲಿ ಸಂಚಾರಿ ಸಿನಿಮಾ ಬಂದು ಕಾರ್ಮಿಕರ ನಡುವೆ ಜಾತ್ಯತೀತ ಸಂಬಂಧಗಳನ್ನು ಸೃಷ್ಟಿಸಿತ್ತು. ಆದಿ ದ್ರಾವಿಡ ಮುಖಂಡ ಪೂಸ್ವಾಮಿ 1930ರಲ್ಲಿ 'ಸತ್ಯವಾನ್ ಸಾವಿತ್ರಿ' ಸಿನಿಮಾ ತೋರಿಸಲು ಮೈಸೂರು ಗಣಿ ಭವನವನ್ನು ಬಾಡಿಗೆಗೆ ಪಡೆದುಕೊಂಡಿದ್ದರು. ಬಿಳಿಯ ಅಧಿಕಾರಿ ಒಬ್ಬರು 'ಕಾರ್ಮಿಕರ ಬುದ್ಧಿ ಅಷ್ಟೇ' ಎಂದು ನಿಂದನೆ ಮಾಡಿದ ಕಾರಣ, ಕಾರ್ಮಿಕರೆಲ್ಲ ಸೇರಿ ಪ್ರತ್ಯೇಕವಾಗಿ ತಮಗಾಗಿಯೆ ಜೂಬಿಲಿ ಭವನವನ್ನು ನಿರ್ಮಿಸಿದ್ದರು.

❖❖❖

ಆದಿ ದ್ರಾವಿಡರ ನಾಯಕ ಎಂ.ಸಿ.ಪೆರುಮಾಳ್ 1942ರಲ್ಲಿ 'ಬಿಳಿಯ ಅಧಿಕಾರಿ ಯಾರೇ ಆಗಲಿ ನಿಮ್ಮನ್ನು ಏಕವಚನದಲ್ಲಿ ಮಾತನಾಡಿಸಿದರೆ, ನೀವೂ ಅವರಿಗೆ ಏಕವಚನದಲ್ಲೇ ಉತ್ತರ ನೀಡಿ' ಎಂದು ಸಲಹೆ ನೀಡಿದ್ದರು. ಕಾರ್ಮಿಕರು ಹೆಚ್ಚು ಅನಕ್ಷರಸ್ಥರಾಗಿದ್ದರೂ ಆಧುನಿಕ ಗಣಿ ತಂತ್ರಜ್ಞಾನದ ಉಪಕರಣಗಳು ಮತ್ತು ಅವುಗಳ ಉಪಯೋಗದ ಫಲವಾಗಿ ಅನೇಕ ಇಂಗ್ಲಿಷ್ ಪದಗಳನ್ನು ಲೀಲಾಜಾಲವಾಗಿ ಉಪಯೋಗಿಸುತ್ತಿದ್ದರು. ಅದಕ್ಕೆ ಸಮನಾದ ಪದಗಳು ಭಾರತೀಯ ಭಾಷೆಗಳಲ್ಲಿ ಇರಲಿಲ್ಲ. ಈ ಕಾರಣಕ್ಕಾಗಿ ಇಂಗ್ಲಿಷ್ ಎಲಿಮೆಂಟರಿ ಪದಗಳ ಜ್ಞಾನ ತನಗೇ ತಾನೆ ಕಾರ್ಮಿಕರ ಮಧ್ಯೆ ಹುಟ್ಟಿಕೊಳ್ಳುತ್ತಿತ್ತು. ಶ್ಯಾಫ್ಟ್, ಹಿಂಜ್, ಹೆಡ್‌ಗಿಯರ್, ಹಾಯಿಸ್ಟಿಂಗ್, ರಾಕ್‌ಬರ್ಸ್ಟ್, ಸಿಲಿಕೋಸಿಸ್, ಕೇಜ್, ಪ್ಲಾಟ್, ಸಯೆನೈಡ್, ಕ್ಯಾಂಟೀನ್, ಸ್ಟೋಕ್ರ ಇತ್ಯಾದಿ. ಬರುಬರುತ್ತ ಇಂಗ್ಲಿಷ್ ಭಾಷೆ ತನ್ನ ಅಧಿಕಾರ ಮತ್ತು ಆಡಳಿತದ ಜೊತೆಗೆ ಹೆಗ್ಗಳಿಕೆಯ ಭಾಷೆಯಾಗಿ ಎಲ್ಲರ ಮೇಲೆ ತನ್ನ ಯಜಮಾನಿಕೆಯನ್ನು ನೆಡೆಸಿತ್ತು. ಇದರಿಂದ ಸಹಜವಾಗಿಯೇ ಕೆಳಜಾತಿಯ ಕಾರ್ಮಿಕರ ದೃಷ್ಟಿಯಲ್ಲಿ ಕಂಪನಿ ಆಡಳಿತ ನಡೆಸಿದ ಬಿಳಿಯರು ಪ್ರಪಂಚದ ಇತರ ಭಾಗಗಳಂತೆ ಇಲ್ಲಿಯೂ ಶ್ರೇಷ್ಠರಾಗಿ ಮೆರೆದಿದ್ದರು.[56]

ಆದರೆ ಮುಂದಿನ ದಿನಗಳಲ್ಲಿ ಆದಿದ್ರಾವಿಡರು ಬಿಳಿಯರ ನಿರೀಕ್ಷೆಗಿಂತ ಇಂಗ್ಲಿಷ್ ಭಾಷೆಯಲ್ಲಿ ಹೆಚ್ಚಾಗಿಯೇ ಮಾತನಾಡತೊಡಗಿದ್ದರು. 1942ರಲ್ಲಿ ರಾಜ್ಯದ 3/2 ಭಾಗದಷ್ಟು ಜನರಿಗೆ ಯಾವುದೇ ಭಾಷೆಯಲ್ಲಿ ಬರೆಯಲು ಮಾತನಾಡಲು (ಮಾತೃ ಭಾಷೆ ಬಿಟ್ಟು) ಬರುತ್ತಿರಲಿಲ್ಲವಾದರೂ ಮೈಸೂರು ರಾಜ್ಯದ ಅನೇಕ ಪ್ರದೇಶಗಳಿಗೆ ಹೋಲಿಸಿದಾಗ ಕೆಜಿಎಫ್‌ನಲ್ಲಿ 5320 ಗಂಡಸರು ಮತ್ತು 1625 ಮಹಿಳೆಯರು ಇಂಗ್ಲಿಷ್ ಭಾಷೆ ಬಲ್ಲವರಾಗಿದ್ದರು.

✦

1. Birth of trade union movements in KGF, G..K.Nair,Centerany souvenir, BGML.
2. K.S.Seetharaman, Kolar Thanagavail Varalaru,pp.127,136.
3. Miners and Millhands-work,culture and politics in princely Mysore JanakiNair, p.91.
4. Proceedingd of the Govt. of Mysore, 5 June 1930.
5. The Hindu, 18 April 1930.
6. File no.159/29,Slno.1, 20,21,KSA.
7. The Hindu, 12th April 1930.
8. The Hindu, 25th April,1930.
9. File no.159-29,Slno.20, 21,Confidential branch, KSA.
10. File no.171-29,Slno.1,2,3,Confidential branch,KSA.
11. File no.171-29,Slno.1,2,3,CB,KSA.
12. RCIMM,1940-41,p.25 and Fortnightly, 31 may 1941,CRR,KSA.
13. The Hindu, 15 May 1941.
14. Reports of Chief Inspectors of Mysore,1940-41,pp22-23 &
15. The Hindu, May 17,1945.
16. File no.31-37,Slno.1-5,Geology,KSA.
17. File no.987,1935,Slno.1-3,Residency files, National archieves of India.
18. Fortnightly 15 Aug 1935, CRR,KSA.

18/1. Miners and Millhands-work, culture and politics in princely Mysore, Janaki Nair.

19. Ibidem,
20. Statistical abstract of Mysore 1923-48, table-81.
21. Census of India,1941,Vol.XXv, Mysore, report table-1.
22. Miners and Millhands-work, culture and politics in princely Mysore, JanakiNair.t-81.
23. The Hindu, 17 july 1940.
24. Reports of Chief Inspectors of Mysore,1940-41,p.24.

25. Simmons, The case of the Kolar Gold fields, p.104, table.3
26. Inspector general of Police to Dy.Commissioner,22 April1942, File no.12-41,Slno.147,1941
27. Superintendent to Dy.Commissioner, 28 March 1942,Coll.no.12-41,Slno.149,CB 12-41-147, KSA.
28. Ibidem
29. Mysore legislative council report, Dec 1943, pp.344-47.
30. 15 July 1944,CRR,KSA
31. Ibidem,
32. The Hindu (Add byJohn Taylor & Sons), Kolar Tangavail Varalaru,p.145,
33. Letter from President of Mysore paper Mills, Bhadravathi to N.D.Shankar 25 March 1946, KSA.
34. PMLC,Dec 1946,p.104.
35. File no.111-20,Sl no.1-10 CB,KSA; fortnight ending 15th Feb, 1922, CRR, KSA.
36. Asian Age,17 July 1997.
37. K.S.Seetharaman, Kolar Thanagavail Varalaru,pp.174-75.
38. ಸಿ.ಎಂ. ಆರ್ಮುಗಂ, ವಿಶ್ವವಿದ್ಯಾಲಯ ಉಪಸಮಿತಿ, ವಿಧಾನಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು.
39. Proceedings of Govt.of Mysre,Oct,1925.
40. Deshpande,Report on the Gold Mining Industry, p.14
41. Ladykalpatham.
42. K.S.Seetharaman, Kolar Thanagavail Varalaru, pp.176,184.
43. Si. Aa. Muthuswami Pillai,Kolar Gold Mining, Jodikalpatham.
44. Ve Srinivasan Dass, Veru patham in Mysore Ilaka Kolar,Thangavaial Ennum gold Mines, ladykalpatham kummi, Madras,1907,p.10
45. Vazhinadai Chindu.p.22
46. Ibidem.

47. E.Thurston, castes and Tribes, Vol, I, p.117.
48. Verapatham in Ladykalpatham,stanza 8.
49. Ibidem.
50. Tangam Summa Varuma? in Duriairasan,Thanavial Thozhial githam,Oorgaum,1951.
51. Miners and Millhands-work, culture and politics in princely Mysore- Janaki Nair, p.90.
52. E.Thurston, Castes and tribes, pp.84-85 and 108-09.
53. S.Perumal, Revival of Tamil Buddhism: A historical survey (pamplet).
54. Ketta Pengal Kummi,Ladykalpatham.
55. Reports of Chief Inspectors of Mines, Mysore,1935-36, p.21.
56. Miners and Millhands-work,culture and politics in princely Mysore-JanakiNair,p.98.

ಅಧ್ಯಾಯ–8

ಸ್ವಾತಂತ್ರ್ಯ ಪೂರ್ವದಲ್ಲಿ : ಅಪಾಯ, ಅಪರಾಧ ಮತ್ತು ಶಿಕ್ಷೆ

> ಬ್ರಿಟಿಷರು ಸ್ವಾತಂತ್ರ್ಯ ಪೂರ್ವದಲ್ಲಿ ಗಣಿ ಕಾರ್ಮಿಕರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಹೊಸಹೊಸ ಕಾಯಿದೆಗಳನ್ನು ತಂದು ಕಾರ್ಮಿಕರ ಮೇಲೆ ಅಪರಾಧಗಳನ್ನು ಹೊರೆಸಿ ಶಿಕ್ಷೆಗೆ ಒಳಪಡಿಸಿದ ವಿವರಗಳನ್ನು ನೀಡಲಾಗಿದೆ. ಮತ್ತು ವಿಶ್ವ ಮಹಾಯುದ್ಧಗಳ ನಂತರದ ಪರಿಣಾಮಗಳನ್ನು ವಿಶ್ಲೇಷಿಸಲಾಗಿದೆ.

ವಸಾಹತು ಕಾಲಘಟ್ಟದಲ್ಲಿ ಐರೋಪ್ಯರು ಬಂಡವಾಳ ಹೂಡುವುದರೊಂದಿಗೆ ಗಣಿಗಳು, ಕಾರ್ಖಾನೆಗಳು ಮತ್ತು ತೋಟಗಾರಿಕೆಯಲ್ಲಿ ಸ್ಥಳೀಯ ಕಾರ್ಮಿಕರನ್ನು ನೇಮಿಸಿಕೊಂಡು ಕೆಲಸ ಮಾಡಿಸುತ್ತಿದ್ದರು. ಅನೇಕ ಕಡೆ ಕಾರ್ಮಿಕರನ್ನು ಕೂಡಿಹಾಕಿ ಅವರಿಂದ ಹೆಚ್ಚು ಲಾಭವನ್ನು ಪಡೆಯಲು ಅವರನ್ನು ಅಪಾಯದ ಕೆಲಸಗಳಲ್ಲಿ ತೊಡಗಿಸಿ, ಅವರ ಮೇಲೆ ಅಪರಾಧ ಹೊರಿಸಿ ಕಾನೂನಿನ ಮೂಲಕ ಶಿಕ್ಷೆಗಳನ್ನು ಬಿಗಿಗೊಳಿಸುತ್ತಾ ಹೋದರು. 1915ರಲ್ಲಿ ಮೈಸೂರಿನ ಮುಖ್ಯ ನ್ಯಾಯಾಧೀಶ ಸಿ.ಜೆ.ಮುಲ್ಲರ್ ಅವರು 'ಕಂಪನಿ ಮಾಲಿಕರಿಂದ ಕ್ರಮಬದ್ಧ ಸಂಬಳ ಪಡೆಯುತ್ತಿರುವ ಕೂಲಿಕಾರರು, ಕಾರ್ಮಿಕರು ಅಥವಾ ಬೇರೆ ಯಾರೇ ಆಗಲಿ ಗಣಿಗಳಲ್ಲಿ ಸಣ್ಣ ಪ್ರಮಾಣದಲ್ಲಿ ಚಿನ್ನವನ್ನು ಕಳ್ಳತನ ಮಾಡುವುದೂ ಕೂಡ ದೊಡ್ಡ ಅಪರಾಧ' ಎಂದು ತೀರ್ಪು ನೀಡಿದ್ದರು.

1891ರಲ್ಲಿ 9038 ಕಾರ್ಮಿಕರಿದ್ದು, 1900ರಲ್ಲಿ ಅದು 24587ಕ್ಕೆ ಏರಿತು. 1907ರಲ್ಲಿ 34641 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ದಕ್ಷಿಣ ಆಫ್ರಿಕಾ ಗಣಿಗಳಲ್ಲಿ ನೀಗ್ರೋ ಕಾರ್ಮಿಕರನ್ನು ಅವರ ಕುಟುಂಬಗಳಿಂದ ದೂರ ಮಾಡಿ ದುಡಿಯಲು ಬಿಟ್ಟಿದ್ದರು. ಅವರಿಗೆ ಮನೆ, ಬಟ್ಟೆ ಮತ್ತು ಆಹಾರ ನೀಡುತ್ತಿದ್ದು ಇದನ್ನು 'ಕಾಂಪೌಂಡ್ ಸಿಸ್ಟಮ್' ಎನ್ನುತ್ತಿದ್ದರು. ಈ ಪದ್ಧತಿ, ಬಂಡವಾಳ ಹೂಡುವವರಿಗೆ ಚೆನ್ನಾಗಿ ಒಪ್ಪುವ ಲಾಭದಾಯಕ ಪದ್ಧತಿ ಎಂದು ಚಾರ್ಲ್ಸ್‌ವೊನ್ ಅನ್‌ಸೆಲೆನ್ ದಾಖಲು ಮಾಡಿದ್ದಾರೆ. 'ಕೆಜಿಎಫ್‌ನಲ್ಲಿ ಹೆಚ್ಚು ವಲಸೆ ಬಂದ ಕಾರ್ಮಿಕರು ಕುಟುಂಬಗಳ ಜೊತೆಗೆ ಇರುವುದರಿಂದ ಅದು ಲಾಭದಾಯಕವಲ್ಲ; ಕಾಂಪೌಂಡ್ ಸಿಸ್ಟಮ್ ಪದ್ಧತಿಯನ್ನು ಕೆಜಿಎಫ್‌ನಲ್ಲಿ ಅಳವಡಿಸಿದರೆ ಲಾಭದಾಯಕ' ಎಂದು ಆಫ್ರಿಕಾ ನೋಡಿ ಬಂದ ಡಬ್ಲ್ಯೂ.ಟಿ. ಹಡ್ಸನ್ ದಾಖಲಿಸಿದ್ದಾರೆ.

1897 ಮತ್ತು 1906ರಲ್ಲಿ 'ಮೈಸೂರು ಮೈನಿಂಗ್ ರೆಗ್ಯುಲೇಶನ್' ಕಾನೂನು ಬಂದ ಮೇಲೆ ಕೆಜಿಎಫ್ ಕಾರ್ಮಿಕರನ್ನು ದಂಡಿಸತೊಡಗಿತು. ಕೆಜಿಎಫ್ ಕಾರ್ಮಿಕರು ಮಾಡುತ್ತಿದ್ದ ಅಪರಾಧಗಳಿಗೆ ದೊರಕುತ್ತಿದ್ದ ಶಿಕ್ಷೆ ತೀರ ಹೆಚ್ಚಾಗಿತ್ತು. ಇಂಡಿಯನ್ ಕಾರ್ಮಿಕರಿಗೆ ಒಂದು ಆಣೆ ಅಪರಾಧಕ್ಕೆ ಒಂದು ರೂಪಾಯಿಯಷ್ಟು ಶಿಕ್ಷೆ ದೊರಕುತ್ತಿತ್ತು; ಅವರಿಗೆ ದೊರಕುವ ಶಿಕ್ಷೆಗಿಂತ ಅವರು ಮಾಡುವ ಅಪರಾಧವೇ ಒಳ್ಳೆಯದಾಗಿತ್ತು, ಎಂಬುದಾಗಿ ಒಂದು ಕಡೆ ದಾಖಲಾಗಿದೆ.

❖❖❖

ಚಾಂಪಿಯನ್ ಗಣಿಗಳು 1936–37ರ ಹೊತ್ತಿಗೆ 8000 ಅಡಿ ಆಳ ಇಳಿದಿದ್ದವು. ಇಲ್ಲಿ ಉಷ್ಣತೆ 55^0 ಡಿಗ್ರಿ ಸೆಲ್ಸಿಯಸ್ ಇದ್ದು, ಕಾರ್ಮಿಕರ ದೇಹದಿಂದ ಬೆವರು ಧಾರಾಕಾರವಾಗಿ ಹೊಮ್ಮುತ್ತಿತ್ತು. ಐರೋಪ್ಯ ದೇಶಗಳ ಕಾನೂನಿನಂತೆ ಕೆಜಿಎಫ್ ಗಣಿಗಳ ಉಷ್ಣತೆಯಲ್ಲಿ ಕೆಲಸ ಮಾಡುವುದು ಪೂರ್ಣ ಕಾನೂನುಬಾಹಿರವಾಗಿತ್ತು. ಚೀಫ್ ಇನ್ಸ್‌ಪೆಕ್ಟರ್ ಆಫ್ ಮೈನ್ಸ್ ಅವರು ತಮ್ಮ ವಾರ್ಷಿಕ ವರದಿಯಲ್ಲಿ 'ನಿಜವಾಗಿಯೂ ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡುವುದು ಆಘಾತಕರ ಮತ್ತು ಕಾರ್ಮಿಕನಿಗೆ ದೊಡ್ಡ ಸವಾಲು' ಎಂದಿದ್ದಾರೆ. ಮೈನಿಂಗ್ ಎಂಜಿನಿಯರಾದ ಪಿ.ಜೆ.ಕ್ರೌವಲೆ 'ಕೆಜಿಎಫ್ ಕಾರ್ಮಿಕರು ನಿರಂತರವಾಗಿ ಮಿತಿಮೀರಿದ ಅಪಾಯವನ್ನು ಬೆನ್ನ ಮೇಲೆ ಹೇರಿಕೊಂಡು ಅತಿ ಕಷ್ಟದ ಕೆಲಸವನ್ನು ನಿಭಾಯಿಸಬೇಕಾಗಿತ್ತು. ಉಷ್ಣಾಂಶ ಉರಿಯುವ ವಿದ್ಯುತ್ ಬಲ್ಬಿನ ಉಷ್ಣಾಂಶಕ್ಕಿಂತ ಹೆಚ್ಚಾಗಿರುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕರು ಮಾಡುತ್ತಿದ್ದ ಕೆಲಸವನ್ನು ಐರೋಪ್ಯ ಅಧಿಕಾರಿಗಳಿಂದ ನೇರವಾಗಿ ವೀಕ್ಷಿಸುವುದು ಕೂಡ ಕಷ್ಟದ ಕೆಲಸವಾಗಿತ್ತು' ಎಂದಿದ್ದರು.

ಇದಕ್ಕಾಗಿಯೆ ಕಂಪನಿ, ಗುತ್ತಿಗೆದಾರ ಮೂಲಕ ಕಾರ್ಮಿಕರ ಕೆಲಸವನ್ನು

ಮೇಲ್ವಿಚಾರಣೆ ಮಾಡಲು ಮೇಸ್ತ್ರಿಗಳನ್ನು ನೇಮಿಸಿತ್ತು. ತರಬೇತಿ ಮುಗಿಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಮೇಸ್ತ್ರಿಗಳ ಕೆಲಸವನ್ನು ನೀಡಲಾಗುತ್ತಿತ್ತು. ಕಾರ್ಮಿಕರು ಚಿನ್ನದ ಕಳ್ಳತನ ಮಾಡದಂತೆ ಮೇಸ್ತ್ರಿಗಳು ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗಿತ್ತು. ಹಾಗೆಯೇ ಜಾಗರೂಕತೆಯಿಂದ ಪೊಲೀಸರ ಜೊತೆಗೆ ಸಹಕರಿಸಬೇಕಾಗಿತ್ತು. ಪರಿಸ್ಥಿತಿ ಕೈಮೀರಿದಾಗ ಮೈಸೂರು ಸರಕಾರದ ಮೀಸಲು ಪೊಲೀಸ್ ಮತ್ತು ಇಂಪಿರಿಯಲ್ ಲ್ಯಾನ್ಸರ್ಸ್ ಪೊಲೀಸರನ್ನು ಬೆಂಗಳೂರಿನಿಂದ ಕರೆಸಿಕೊಳ್ಳುತ್ತಿದ್ದರು. ಇದರ ಜೊತೆಗೆ ಕಂಪನಿಗಳು ತಮ್ಮದೆ ಸ್ವಂತ ಕಾವಲು ಪಡೆಗಳನ್ನು ಹೊಂದಿದ್ದವು. ಇವರು ಗಣಿಯ ಶ್ಯಾಫ್ಟ್, ಕಾರ್ಯಾಗಾರ, ಮಿಲ್ಲು ಮತ್ತು ಅಧಿಕಾರಿಗಳು ವಾಸಿಸುವ ಬಂಗಲೆಗಳ ಸುತ್ತಲು ಹಗಲು ರಾತ್ರಿ ಕಾವಲು ಕಾಯುತ್ತಿದ್ದರು. ಇವರೆಲ್ಲ ಪಂಜಾಬ್‌ನಿಂದ ಬಂದವರಾಗಿದ್ದು, ಆ ಕಾಲಕ್ಕೆ ದೊರಕುತ್ತಿದ್ದ ಅತ್ಯುತ್ತಮ ಪೊಲೀಸ್ ಸಲಕರಣೆಗಳನ್ನು ಹೊಂದಿದ್ದರು.

ಗಣಿಗಳಿಂದ ಸೋರಿಹೋಗುತ್ತಿದ್ದ ಚಿನ್ನವನ್ನು ತಡೆಗಟ್ಟಲು 1897ರಲ್ಲಿ ಕಂಪನಿ ರಾಜ್ಯ ಸರಕಾರದ ಸಹಾಯದಿಂದ ವಿಶೇಷ ಕಾನೂನನ್ನು ಹುಟ್ಟುಹಾಕಿತು. ಕೆಳಸ್ತರದ ಜನರು ಮತ್ತು ಮಧ್ಯಮ ವರ್ಗದ ಜನರು ಹಣ, ಆಸ್ತಿ ಸಂಗ್ರಹಿಸುವುದನ್ನು ಪತ್ತೆ ಮಾಡಿ ಅವರ ಮನೆಗಳನ್ನು ಜಪ್ತಿ ಮಾಡಿ ಅದನ್ನು ಮುಟ್ಟುಗೋಲು ಹಾಕಿಕೊಳ್ಳುವ ಕಾನೂನು ಇದಾಗಿತ್ತು.

ಗಣಿಗಳಲ್ಲಿ ಕಳ್ಳತನವಾಗುತ್ತಿದ್ದ ಪಾದರಸ ಮಿಶ್ರಿತ ಚಿನ್ನ (ಮಿಲ್ಲಿನಲ್ಲಿ), ಚಿನ್ನವಿರುವ ಕ್ವಾರ್ಟ್ಜ಼್ ಶಿಲೆ, ಸ್ಪಂಜು ಶಿಲೆ, ಸುರಂಗಗಳಲ್ಲಿ ಕೆಲಸ ಮಾಡುವಾಗ ಉಪಯೋಗಿಸುತ್ತಿದ್ದ ಮೋಂಬತ್ತಿ ಮತ್ತು ಸ್ಫೋಟಕ ವಸ್ತುಗಳ ಕಳ್ಳತನವನ್ನು ಒಂದನೇ ವಿಭಾಗದ ಕೆಳಗೆ ತರಲಾಯಿತು. ಕಂಪನಿಯ ಕಾನೂನುಗಳನ್ನು ಮುರಿದಾಗ ಅಪರಾಧವೆಂದು ಪರಿಗಣಿಸಿ ಅದನ್ನು ಎರಡನೇ ವಿಭಾಗದಲ್ಲಿ ತರಲಾಯಿತು. ಮೊದಲನೇ ವಿಭಾಗವನ್ನು ಪೊಲೀಸರು ನಿಭಾಯಿಸಿದರೆ, ಎರಡನೇ ವಿಭಾಗವನ್ನು ನ್ಯಾಯಾಲಯಗಳು ತೀರ್ಮಾನಿಸುತ್ತಿದ್ದವು. ಕೆಲವೊಮ್ಮೆ ಕಂಪನಿ ಅಧಿಕಾರಿಗಳೆ ತೀರ್ಮಾನಿಸಿ ಅಪರಾಧಿಗಳಿಗೆ ಶಿಕ್ಷೆ ನೀಡುತ್ತಿದ್ದರು.[1]

ಕಾರ್ಮಿಕರು ಮತ್ತು ಸಾರ್ವಜನಿಕರ ವಿರುದ್ಧ ದಾಖಲಾದ ದೂರುಗಳು

ಪಟ್ಟಿ–1

ವರ್ಷ	ಅ	ಆ	ಇ	ಈ
೧೮೯೯	೧೪೨	೧೭೯	೧೫೭	೧೦೯೩೬–೨–೭
೧೯೦೦	೨೫೨	೩೩೨	೩೦೨	೩೫೪೮–೭–೪

೧೯೦೧	೪೮೬	೭೦೭	೫೮೪	೧೧೨೯೭-೧೦-೧೦
೧೯೦೨	೪೦೪	೫೭೭	೪೪೯	೫೫೩೫-೧೫-೧
೧೯೦೩	೨೮೫	೪೦೩	೨೮೮	೨೦೬೪೦-೧೫-೧
೧೯೦೪	೨೧೨	೨೮೬	೨೦೧	೬೦೧೦-೧೫-೧೧
೧೯೦೫	೨೫೪	೩೬೫	೨೯೧	೨೩೬೫೯-೧೩-೨
೧೯೦೬	೧೬೫	೨೫೮	೧೮೯	೧೨೭೮೬-೧೫-೮
೧೯೦೭	೧೩೫	೧೯೬	೧೪೦	೨೧೫೯-೧೦-೧೦
೧೯೦೮	೧೧೭	೧೬೯	೧೧೬	೩೮೨೫-೫-೭
೧೯೦೯	೧೮೮	೨೭೦	೨೧೩	೨೬೩೦-೧೪-೪
೧೯೧೦	೧೧೯	೧೪೦	೧೧೪	೧೬೭೯-೧-೦
೧೯೧೧	೧೧೩	೧೫೨	೧೧೮	೨೨೬೬-೬-೧
೧೯೧೨	೭೪	೧೦೭	೭೭	೯೭೮೪-೪-೩
೧೯೧೩	೮೦	೧೦೨	೭೯	೮೧೨೨-೮-೮
೧೯೧೪	೮೭	೧೦೯	೯೭	೩೨೫೯-೬-೮
೧೯೧೫	೯೯	೧೨೪	೧೦೮	೨೩೧೪-೮-೭
೧೯೧೬	೧೧೨	೧೩೫	೧೨೫	೧೬೦೩-೨-೪
೧೯೧೭	೭೪	೧೦೪	೮೪	೧೭೫೬-೧೪-೨
೧೯೧೮	೧೧೩	೧೫೦	೧೦೬	೩೦೫೩-೧೪-೩
೧೯೧೯	೧೦೪	೧೮೩	೧೨೮	೩೮೬೦-೮-೫
೧೯೨೦	೯೯	೧೨೦	೮೦	೬೨೬೨-೧೦-೩
೧೯೨೧	೧೧೧	೧೭೭	೧೪೪	೩೨೩೧-೦-೧೦
೧೯೨೨	೯೯	೧೪೦	೧೦೨	೨೫೪೮-೫-೬
೧೯೨೩	೭೨	೧೧೪	೮೮	೧೧೦೧-೧೧-೦
೧೯೨೪	೯೪	೧೩೩	೧೦೯	೧೫೩೨-೧೧-೬
೧೯೨೫	೬೮	೯೦	೭೦	೧೬೪೨-೧೨-೦
೧೯೨೬	೭೨	೧೨೪	೧೨೦	೨೫೩೪-೦-೬
೧೯೨೭	೪೬	೬೨	೫೪	೧೫೦೬-೨-೦

೧೯೨೮	೫೮	೯೫	೮೯	೧೭೭೭-೦-೦
೧೯೨೯	೬೬	೭೯	೫೯	೧೭೪೧-೧-೦
೧೯೩೦	೫೦	೫೫	೪೫	೨೧೯೦-೧೫-೦
೧೯೩೧	೩೭	೪೪	೪೦	೧೫೧೮-೮-೦
೧೯೩೨	೫೬	೭೬	೬೦	೫೭೮೦-೨-೬
೧೯೩೩	೪೪	೬೯	೫೬	೨೪೩೨-೧೪-೧೧
೧೯೩೪	೨೪	೩೧	೨೮	೧೨೫೯-೧೪-೦
೧೯೩೫	೪೩	೬೭	೫೭	೧೩೯೯-೮-೯
೧೯೩೬	೫೩	೮೯	೬೦	೯೪೬-೧೧-೦
೧೯೩೭	೪೮	೭೦	೪೯	೬೫೨-೧೧-೩
೧೯೩೮	೧೯	೩೦	೧೯	೧೨೧-೧೧-೬
೧೯೩೯	೩೫	೫೧	೩೭	೧೯೭-೧೦-೦
೧೯೪೦	೨೩	೩೧	೨೮	೧೧೧೧-೬-೦
೧೯೪೫	೫೦	೯೬	೭೬	೨೭೬೫-೨-೦
೧೯೪೬	೬೩	೯೩	೮೬	೩೯೯೯-೨-೦

ಅ. ದೂರುಗಳ ಸಂಖ್ಯೆ, ಆ.ಕಾರ್ಮಿಕರ ವಿರುದ್ಧ ದಾಖಲಾದ ದೂರುಗಳು, ಇ.ಜನರ ವಿರುದ್ಧ ಸಾಬೀತಾದ ದೂರುಗಳು ಈ.ವಶಪಡಿಸಿಕೊಂಡ ಸಂಪತ್ತಿನ ಬೆಲೆ (ರೂಪಾಯಿಗಳಲ್ಲಿ)[2]

❖❖❖

ಮೇಲಿನ ಕಾನೂನು ತಂದ ಮೊದಲ ವರ್ಷವೆ 179 ದೂರುಗಳನ್ನು ಕಾರ್ಮಿಕರ ವಿರುದ್ಧ ದಾಖಲಿಸಿ 228 ಕಾರ್ಮಿಕರನ್ನು ಶಿಕ್ಷೆಗೆ ಒಳಪಡಿಸಲಾಯಿತು (ಪಟ್ಟಿ). ಅದೇ ವರ್ಷ 10,000ರೂ. ಬೆಲೆಯ ಚಿನ್ನವನ್ನು ವಶಪಡಿಸಿಕೊಳ್ಳಲಾಯಿತು. ಕಳ್ಳತನ ಮಾಡಿದ ಚಿನ್ನದ ಬೆಲೆ ಲಕ್ಷಾಂತರ ರೂಪಾಯಿಗಳಾಗಿದ್ದು ಇದನ್ನು ತಡೆಗಟ್ಟಲು ಇನ್ನೂ ಹೆಚ್ಚು ಪೊಲೀಸರನ್ನು ನೇಮಿಸಬೇಕಾಗಿದೆ ಎಂದು ಕಂಪನಿ ಆಡಳಿತ ಕೇಳಿಕೊಂಡಿತು. 1901ರಲ್ಲಿ ಹೆಚ್ಚು ಪೊಲೀಸರನ್ನು ನೇಮಕ ಮಾಡಿದ ಮೇಲೆ 886 ದೂರುಗಳಲ್ಲಿ 707 ಕಾರ್ಮಿಕರ ವಿರುದ್ಧ ದೂರು ದಾಖಲಿಸಿ 584 ಕಾರ್ಮಿಕರಿಗೆ ಶಿಕ್ಷೆ ನೀಡಲಾಯಿತು. ಇದರಿಂದ 11297ರೂ. ಬೆಲೆಯ ಚಿನ್ನ ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು.[4]

ಕಾರ್ಮಿಕರ ವಿರುದ್ಧ ಸಾಭೀತಾದ ದೂರುಗಳು :

ಪಟ್ಟಿ–2[6]

ವರ್ಷ	ದೂರುಗಳು	ಜನರ ವಿರುದ್ಧ ಸಾಬೀತಾದ ಸಂಖ್ಯೆ	ದೂರುಗಳು
೧೯೦೦	೨೯	೪೮	೩೭
೧೯೦೧	೩೫	೬೬	೫೫
೧೯೦೨	೩೪	೪೭	೪೩
೧೯೦೩	೨೪	೩೦	೧೮
೧೯೦೪	೩೦	೪೬	೨೩
೧೯೦೫	೨೭	೪೦	೨೬
೧೯೦೬	೨೩	೨೯	೧೫
೧೯೦೭	೩೩	೩೮	೨೯
೧೯೦೮	೩೭	೪೦	೩೪
೧೯೦೯	೩೭	೪೧	೨೯
೧೯೧೦	೩೩	೪೨	೩೬
೧೯೧೧	೪೮	೫೧	೫೦
೧೯೧೨	೪೮	೭೨	೬೮
೧೯೧೩	೩೮	೪೫	೪೦
೧೯೧೪	೨೩	೩೧	೨೯
೧೯೧೫	೩೭	೪೨	೩೭
೧೯೧೬	೨೯	೩೧	೨೯
೧೯೧೭	೧೫	೨೦	೧೫
೧೯೧೮	೧೩	೧೪	೧೦
೧೯೧೯	೨೫	೩೨	೨೫

೧೯೨೦	೧೨	೧೫	೨೫
೧೯೨೧	೨೬	೪೭	೩೨
೧೯೨೨	೧೪	೧೫	೧೨
೧೯೨೩	೨೯	೩೯	೨೮
೧೯೨೪	೪೩	೬೩	೫೭
೧೯೨೫	೩೯	೭೮	೭೧
೧೯೨೬	೩೨	೫೪	೫೩
೧೯೨೭	೨೩	೩೩	೩೧
೧೯೨೮	೧೭	೩೩	೩೧
೧೯೨೯	೨೭	೨೮	೨೮
೧೯೩೦	೨೪	೪೩	೪೧
೧೯೩೧	೧೫	೨೭	೨೩
೧೯೩೧	೨೧	೩೭	೩೬
೧೯೩೩	೨೦	೨೭	೨೫
೧೯೩೪	೩೬	೩೮	೩೮
೧೯೩೫	೨೩	೨೮	೨೭
೧೯೩೬	೪೫	೫೨	೪೧
೧೯೩೭	೩೦	೪೧	೩೯
೧೯೩೮	೧೬	೧೭	೧೪
೧೯೩೯	೫೧	೫೩	೫೩
೧೯೪೦	೧೩	೧೪	೧೪

ಅಪಘಾತಗಳ ಪಟ್ಟಿ :

ವರ್ಷ	ಅ.	ಆ.	ಇ.	ಈ.

೧೮೯೮	೧೨೫	೫೪	೨೨	೪೯
೧೮೯೯	೧೨೪	೩೬	೨೯	೫೯
೧೯೦೦	೩೦೦	೩೮	೨೯	೧೬೮
೧೯೦೧-೦೨	೨೧೧	೨೦	೩೩	೧೫೮
೧೯೦೩-೦೪	೨೧೨	೧೯	೩೦	೧೬೩
೧೯೦೪-೦೫	೨೪೫	೩೯	೩೬	೧೭೦
೧೯೦೫-೦೬	೨೫೨	೬೦	೪೭	೧೪೫
೧೯೦೬-೦೭	೩೯೯	೬೮	೬೨	೨೬೯
೧೯೦೭-೦೮	೩೮೨	೧೭	೨೮	೩೩೭
೧೯೦೮-೦೯	೪೨೧	೨೨	೪೨	೩೫೭
೧೯೧೦-೧೧	೪೧೨	೪೬	೩೭	೩೩೦
೧೯೧೧-೧೨	೩೯೦	೩೩	೩೦	೩೧೧
೧೯೧೨-೧೩	೨೮೫	೩೦	೨೬	೨೨೯
೧೯೧೩-೧೪	೨೭೮	೩೮	೩೧	೨೦೯
೧೯೧೪-೧೫	೨೩೪	೨೪	೨೯	೧೭೪
೧೯೧೫-೧೬	೨೭೬	೨೫	೨೬	೨೨೫
೧೯೧೬-೧೭	೨೦೩	೨೨	೨೪	೧೪೬
೧೯೧೮-೧೯	೨೦೮	೨೩	೧೭	೧೬೧
೧೯೨೦-೨೧	೨೬೪	೨೯	೨೩	೨೧೨
೧೯೨೧-೨೨	೧೭೩	೧೪	೨೫	೧೩೪
೧೯೨೨-೨೩	೧೭೫	೧೯	೧೯	೧೩೭
೧೯೨೩-೨೪	೨೦೪	೨೬	೨೧	೧೫೭
೧೯೨೪-೨೫	೨೦೫	೨೩	೧೬	೧೬೬
೧೯೨೫-೨೬೬	೨೦೭	೧೬	೧೪	೧೭೭

೧೯೨೬-೨೭	೧೯೨	೧೬	೧೯	೧೫೭
೧೯೨೭-೨೮	೨೧೨	೧೭	೧೫	೧೮೦
೧೯೨೯-೩೦	೨೩೦	೧೯	೧೮	೧೯೩
೧೯೩೧-೩೨	೧೯೫	೨೨	೧೦	೧೬೩
೧೯೩೨-೩೩	೨೧೩	೨೨	೧೮	೧೭೩
೧೯೩೩-೩೪	೨೭೫	೨೬	೧೩	೨೩೬
೧೯೩೫-೩೬	೨೭೪	೧೯	೨೪	೨೩೧
೧೯೩೬-೩೭	೨೪೦	೨೩	೧೭	೨೦೦
೧೯೩೭-೩೮	೨೧೮	೨೧	೧೮	೧೭೯
೧೯೩೯-೪೦	೧೪೯	೦೮	೦೯	೧೩೨
೧೯೪೦-೪೧	೨೪೬	೧೪	೦೮	೨೨೪
೧೯೪೨-೪೩	೨೩೪	೧೩	೦೮	೨೧೩
೧೯೪೩-೪೪	೨೫೨	೦೫	೦೫	೨೪೨
೧೯೪೬-೪೭	೧೭೯	೦೪	೨	೧೬೩

ಅ. ಅಪಘಾತಗಳ ಸಂಖ್ಯೆ, ಆ.ನಿರ್ಲಕ್ಷದಿಂದ ಸಂಭವಿಸಿದ ಅಪಘಾತಗಳು, ಇ.ಆಯಾಸದಿಂದ ಸಂಭವಿಸಿದ ಅಪಘಾತಗಳು ಈ. ತಪ್ಪಿಸಲಾರದ ಅಪಘಾತಗಳು.[3]

ಪೊಲೀಸರು, ಕಂಪನಿ ಕಾರ್ಮಿಕರು ಮತ್ತು ಬೌರಿಂಗ್‌ಪೇಟೆ ತಾಲೂಕಿನಾದ್ಯಂತ ಜನರ ಮೇಲೆಯೂ ಬೇಹುಗಾರಿಕೆ ನಡೆಸತೊಡಗಿದ್ದರು. ಚಿನ್ನದ ವ್ಯಾಪಾರಿಗಳು, ಹಣವಂತರು ಕೊನೆಗೆ ಅಕ್ಕಸಾಲಿಗರನ್ನೂ ಬಿಡಲಿಲ್ಲ. ಗುಮಾನಿ ಬಂದ ಮನೆಗಳಲ್ಲಿ ಪೊಲೀಸರು ಶೋಧನೆ ನಡೆಸತೊಡಗಿದರು. ಕೆಲವರ ಮೇಲೆ ವಿನಾ ಕಾರಣ ಅಪರಾಧ ಹೊರಿಸಲಾಯಿತು. ಇದನ್ನೆಲ್ಲ 'ನಾಡೆ ಕನ್ನಡಿ ಪತ್ರಿಕೆ' ತನ್ನ ಸಂಪಾದಕೀಯದಲ್ಲಿ ಪ್ರತಿಭಟಿಸಿತು. 'ಬಿಳಿಯರಲ್ಲದ ಯಾರೇ ಇಂಡಿಯನ್ನರನ್ನು ಪೊಲೀಸರು ಸಂದೇಹದಿಂದ ನೋಡುತ್ತಿದ್ದರು ಮತ್ತು ಇಂತಹ ಕಾನೂನು ಇಂಗ್ಲೆಂಡ್‌ನಲ್ಲಿಯೂ ಇಲ್ಲ' ಎಂದು ಪತ್ರಿಕೆ ತೀವ್ರವಾಗಿ ಪ್ರತಿಭಟಿಸಿತ್ತು.[8]

❖❖❖

1907ರಲ್ಲಿ ವರ್ಷಕ್ಕೆ 150ರೂ. ತೆರಿಗೆ ಕಟ್ಟುತ್ತಿದ್ದ ಬೇತಮಂಗಲದ ವೆಂಕಟರಾಮಯ್ಯಶೆಟ್ಟಿಯವರ ಮನೆಯಲ್ಲಿ 2 ಪೌಂಡ್ ಚಿನ್ನವನ್ನು ಪೋಲೀಸರು ವಶಪಡಿಸಿಕೊಂಡರು. ಇವರಿಗೆ 50ರೂ. ದಂಡ, ಒಂದು ತಿಂಗಳು ಸರಳ ಜೈಲು ಶಿಕ್ಷೆಯನ್ನು ಮೈನಿಂಗ್ ರೆಗ್ಯುಲೇಶನ್ ಕೆಳಗೆ ನೀಡಲಾಯಿತು. ವೆಂಕಟರಾಮಯ್ಯ ಮೈಸೂರು ಮುಖ್ಯ ನ್ಯಾಯಾಲಯಕ್ಕೆ ಮೊರೆ ಹೋದಾಗ, ನ್ಯಾಯಾಲಯವು ಅವರನ್ನು ಶಿಕ್ಷೆಯಿಂದ ಖುಲಾಸೆಗೊಳಿಸಿ, 'ಇವರು ಶ್ರೀಮಂತರಾಗಿದ್ದು ಈ ಚಿನ್ನ ಅವರ ಪೂರ್ವಜರದ್ದೊ ಅಥವಾ ಮೈನಿಂಗ್ ರೆಗ್ಯುಲೇಶನ್ ಬರುವುದಕ್ಕಿಂತ ಮುಂಚೆ ಸಂಪಾದಿಸಿದ್ದೊ ಆಗಿರಬಹುದು' ಎಂದು ಹೇಳಿತು.[9] ಇದೇ ಕಾನೂನಿನ ಕೆಳಗೆ 'ಅಕ್ಕಸಾಲಿಗರೆಲ್ಲ ಅನುಮತಿ ಹೊಂದಿರಬೇಕು' ಎಂದು ತಿಳಿಸಲಾಗಿತ್ತು. ಅನುಮತಿ ಇಲ್ಲದ ಸುಬ್ಬಾಚಾರಿಯನ್ನು ಪೊಲೀಸರು ನ್ಯಾಯಾಲಯಕ್ಕೆ ಎಳೆದಾಗ ಕೆಜಿಎಫ್ ನ್ಯಾಯಾಲಯದ ಮುಂದೆ 'ನಾನು ಕೇವಲ ಬೆಳ್ಳಿ ಒಡವೆ ಮಾಡುವ ಕೂಲಿ; ನನಗೆ ಅನುಮತಿ ತೆಗೆದುಕೊಳ್ಳುವ ಅಗತ್ಯವಿಲ್ಲ' ಎಂದು ಬೇಡಿಕೊಂಡಾಗ ನ್ಯಾಯಾಲಯ ಆತನನ್ನು ಬಿಟ್ಟುಬಿಟ್ಟಿತು.[10]

ಕಳ್ಳತನ ಮಾಡಿರುವ ಚಿನ್ನವನ್ನು ಅಪರಾಧಿಗಳಿಂದ ಕಂಪನಿ/ಸರಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕಾದರೆ ಯಾವ ಆಧಾರಗಳಿರಬೇಕು ಎನ್ನುವ ಸಂದೇಹ ಸರಕಾರವನ್ನು ಕಾಡತೊಡಗಿತು. ಜನರಲ್ಲಿ ಆಗಲೇ ಇರುವ ಚಿನ್ನ ಮತ್ತು ಕಳ್ಳತನ ಮಾಡಿರುವ ಚಿನ್ನದ ನಡುವೆ ವ್ಯತ್ಯಾಸವನ್ನು ಕಂಡುಹಿಡಿಯುವುದು ಕಷ್ಟದ ಕೆಲಸವಾಗಿತ್ತು. 1903ರಲ್ಲಿ ಗೋಪಾಲಯ್ಯ ಎಂಬವರು ಹೊಂದಿದ್ದ ಎರಡು ಚಿನ್ನದ ಬಿಲ್ಲೆಗಳನ್ನು ಪೊಲೀಸರು ವಶಪಡಿಸಿಕೊಂಡು ಶೋಧನೆಗೆ ಒಳಪಡಿಸಿ ಅದನ್ನು ಪರಿಶೀಲಿಸಿದಾಗ ಅಂದಿನ ಮೈಸೂರು ಮುಖ್ಯ ಭೂವಿಜ್ಞಾನಿ ಡಬ್ಲ್ಯೂ.ಎಫ್.ಸ್ಮಿತ್ ಇದು ಕೆಜಿಎಫ್ ಗಣಿಗಳ ಚಿನ್ನ ಎಂದಿದ್ದನ್ನು ನ್ಯಾಯಾಲಯ ಒಪ್ಪಿಕೊಂಡಿತು.[11] ಸರಕಾರದ ಕಾನೂನಿನ ಪ್ರಕಾರ ಯಾರನ್ನಾದರೂ ಅಪರಾಧಿ ಎಂದು ತೀರ್ಮಾನಿಸಬೇಕಾದರೆ ಚಿನ್ನದ ಸ್ವಲ್ಪ ಭಾಗವಾದರೂ ಗಣಿಗೆ ಸೇರಿದ್ದು ಎಂದು ಪೊಲೀಸರು ದೃಢಪಡಿಸಬೇಕಾಗಿತ್ತು. ಆದರೆ ಕಂಪನಿ ಕಾನೂನಿನ ಪ್ರಕಾರ ತನ್ನಲ್ಲಿರುವ ಚಿನ್ನ ಗಣಿಗೆ ಸೇರಿದ್ದಲ್ಲ ಎಂದು ಅಪರಾಧಿಯೆ ರುಜುವಾತು ಮಾಡಬೇಕಾಗಿತ್ತು.

❖❖❖

ವಡಿವೇಲಾಚಾರಿ ಎಂಬವರನ್ನು ಬೌರಿಂಗ್‌ಪೇಟೆ ರೈಲು ನಿಲ್ದಾಣದಲ್ಲಿ ಪೊಲೀಸರು ಚಿನ್ನದ ಸಮೇತ ಹಿಡಿದುಕೊಂಡಿದ್ದರು. ಆಗ ಅವರು ಮೈಸೂರಿನ ಮುಖ್ಯ ನ್ಯಾಯಾಲಯದಲ್ಲಿ 'ಬೌರಿಂಗ್‌ಪೇಟೆ ರೈಲು ನಿಲ್ದಾಣ ಜಿಲ್ಲಾ ನ್ಯಾಯಾಧೀಶರ ಆಡಳಿತದಿಂದ ಹೊರಗಿದೆ' ಎಂದು ವಾದಿಸಿದರು. ಈ ಸ್ಥಳ ಕೆಜಿಎಫ್‌ನಿಂದ 11 ಕಿ.ಮೀ. ದೂರದಲ್ಲಿ

ಬ್ರಿಟಿಷ್-ಇಂಡಿಯಾದಲ್ಲಿತ್ತು. ಕಂಪನಿ ಎಷ್ಟೇ ಕೇಳಿಕೊಂಡರೂ ಈ ಪ್ರದೇಶವನ್ನು ಕಂಪನಿ ರೆಗ್ಯುಲೇಶನ್ ಕೆಳಗೆ ತರಲು ಮೈಸೂರು ಸರಕಾರ ಒಪ್ಪಿಕೊಳ್ಳಲಿಲ್ಲ. 1918ರಲ್ಲಿ ಕೊನೆಗೆ ಕೆಜಿಎಫ್‌ನಲ್ಲಿ ವಿಶೇಷವಾಗಿ ಪೊಲೀಸ್ ಸೂಪರಿನ್ಟೆಂಡೆಂಟ್ ಕಚೇರಿ ಸ್ಥಾಪಿಸಿ ಈ ಪ್ರದೇಶವನ್ನು ಅದರ ಕೆಳಕ್ಕೆ ಸೇರಿಸಿತು. 1940ರವರೆಗೆ ಕಾರ್ಮಿಕರು 100 ರೂಪಾಯಿಯ ನೋಟನ್ನು ಹೊಂದಿದ್ದರೂ, ಅವರನ್ನು ಪೊಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದರು, ಸಂದೇಹ ಬಂದರೆ ಅವರನ್ನು ಠಾಣೆಗೆ ಕರೆತರುತ್ತಿದ್ದರು.

ಮೈಸೂರು ಸರಕಾರ 5 ಜನಾಂಗಗಳನ್ನು ಅಪರಾಧಿ ಬುಡಕಟ್ಟುಗಳೆಂದು ಪಟ್ಟಿಮಾಡಿತ್ತು. ಕ್ಕೊರಚ, ವಡ್ಡ, ಕೇಪ್‌ಮಾರಿ, ಗಂತಿಕಳ್ಳ ಮತ್ತು ಹಂದಿಜೋಗಿ. ಕೊರಚ ಮತ್ತು ವಡ್ಡರು ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದು, ಅವರ ಮೇಲೆ ನಿಗಾವಹಿಸಲು 1930ರಲ್ಲಿ 8 ಪೊಲೀಸ್ ಪೇದೆಗಳು ಮತ್ತು 2 ಜಮಾದಾರರನ್ನು ನೇಮಿಸಲಾಗಿತ್ತು. 1913ರಲ್ಲಿ ಬುಡಕಟ್ಟು ಜನಾಂಗಗಳಾದ ವಡ್ಡರಿಂದ ಅಸಂಖ್ಯೆ ಕಳ್ಳತನಗಳು ಬ್ರಿಟಿಷ್-ಇಂಡಿಯಾ ಗಡಿ ಹೊರಗಿನ ಮೈನಿಂಗ್ ಹೊರವಲಯದಲ್ಲಿ ನಡೆದಾಗ ಗಣಿ ಪ್ರದೇಶದಲ್ಲಿ ಎಚ್ಚರಿಕೆ ಗಂಟೆ ಬಾರಿಸುವ ವ್ಯವಸ್ಥೆ ಮಾಡಲಾಯಿತು. ಗಣಿ ಪ್ರದೇಶದಲ್ಲಿ ಇವರನ್ನು ಗುರುತಿಸಿದ ಕೂಡಲೇ ಹಿಡಿದು ಬ್ರಿಟಿಷ್-ಇಂಡಿಯಾ ಗಡಿ ಪ್ರದೇಶದಲ್ಲಿ ಬಿಟ್ಟುಬರಲಾಗುತ್ತಿತ್ತು.

ಈ ಎಲ್ಲಾ ಕ್ರಮಗಳಿಂದ ಕಾರ್ಮಿಕರಿಂದ ಚಿನ್ನದ ಕಳ್ಳತನ ಕಡಿಮೆಯಾದರೆ ಉಳಿದ ಮೂಲಗಳಿಂದ ಕಳ್ಳತನ ಜಾಸ್ತಿ ಆಗುತ್ತಲೇ ಇತ್ತು. ಐರೋಪ್ಯ ಕಾರ್ಮಿಕರು ಗಣಿಗಳಿಂದ ಚಿನ್ನವನ್ನು ನಿರಾಯಾಸವಾಗಿ ಹೊರಗೆ ತರುತ್ತಿದ್ದರೂ, ಅವರನ್ನು ಯಾವುದೇ ಕಾವಲುಪಡೆ ಶ್ಯಾಫ್ಟ್ ಹತ್ತಿರ ಅಡ್ಡಗಟ್ಟಿ ಕೇಳುತ್ತಿರಲಿಲ್ಲ. ಕಾರ್ಮಿಕರಿಂದ ಕಳ್ಳತನ ಕಡಿಮೆಯಾಗಿದೆ ಎನ್ನುವ ಮಾತುಗಳು ಕೇಳಿಬಂದರೂ, ರಾಬರ್ಟ್‌ಸನ್‌ಪೇಟೆಯ ಅಂಗಡಿಗಳಲ್ಲಿ ಕಂಪನಿಯಿಂದ ಕಳ್ಳತನ ಮಾಡಿ ತಂದ ಚಿನ್ನದ ವ್ಯಾಪಾರ ಹಾಗೇ ಮುಂದುವರಿದಿತ್ತು. ನ್ಯಾಯಾಲಯದಲ್ಲಿ ನಡೆಯುವ ವಾಗ್ವಾದಗಳಿಂದ ಮತ್ತು ಕಾರ್ಯವಿಧಾನದಿಂದ ಕಂಪನಿಗೆ ಸಾಕಷ್ಟು ಹಣ ಖರ್ಚಾಗುತ್ತಿದ್ದ ಕಾರಣ, ಕಳ್ಳತನಮಾಡಿ ಸಿಕ್ಕಿಕೊಂಡವರ ವಿರುದ್ಧ ಉನ್ನತ ಅಧಿಕಾರಿಗಳೆ ತೀರ್ಮಾನ ತೆಗೆದುಕೊಳ್ಳುವುದನ್ನು ಕಂಪನಿ ಅನುಸರಿಸತೊಡಗಿತು.

ಗೂಂಡಾ ಕಾಯಿದೆ ಮತ್ತು ದಂಡ :

1906ರಲ್ಲಿ ಮೈಸೂರು ಮೈನ್ಸ್ ಕಾಯಿದೆ ಕಲಂ 17ರ ಕೆಳಗೆ ಕಂಪನಿಗಳು ಒಂದು ಹೊಸ ಕಾನೂನು ತಂದವು. ಕೆಜಿಎಫ್ ಪೊಲೀಸ್ ಸೂಪರಿಂಟೆಂಡೆಂಟ್ ಅವರು ಈ ಕಾಯಿದೆ ಕೆಳಗೆ (Undesirable) ಅನಪೇಕ್ಷಣೀಯ ತೊಂದರೆ ಮಾಡಿದವರನ್ನು

24 ಗಂಟೆಗಳ ಒಳಗೆ ಕೆಜಿಎಫ್ ಪ್ರದೇಶದಿಂದ ಹೊರಕ್ಕೆ ಕಳುಹಿಸಬಹುದಾಗಿತ್ತು. ಅವರು ಮತ್ತೆ ಹಿಂದಕ್ಕೆ ಬರಬೇಕಾದರೆ ಪೊಲೀಸ್ ಅಪ್ಪಣೆಯನ್ನು ಪಡೆಯಬೇಕಾಗಿತ್ತು. ಈ ಕಾಯಿದೆಯಿಂದ ಅಪರಾಧಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾದವು. ಹೊರಹೋದ ಅನೇಕ ಅಪರಾಧಿಗಳು ಮತ್ತು ಕಳ್ಳರು ಮತ್ತೆ ಹಿಂದಕ್ಕೆ ಬರಲಿಲ್ಲ. 1923–24ರಲ್ಲಿ ಮೈನಿಂಗ್ ಚೀಪ್ ಇನ್ಸ್‌ಪೆಕ್ಟರ್ ಅವರು ಕಾರ್ಮಿಕರು ಮತ್ತು ಕಂಪನಿ ಆಡಳಿತದ ನಡುವಿನ ಬಾಂಧವ್ಯ ಕೆಡಿಸಿದವರನ್ನು ಇದೇ ಕಾನೂನಿನ ಕೆಳಗೆ ಶಿಕ್ಷೆಗೆ ಒಳಪಡಿಸಲಾಗುವುದೆಂದು ಹೇಳಿಕೆ ನೀಡಿದರು.[12]

1916ರಲ್ಲಿ ಇದೇ ಕಾಯಿದೆಯನ್ನು ಹತ್ತಿರದ ರಾಬರ್ಟ್‌ಸನ್‌ಪೇಟೆ, ಅಂಡ್ರ್ಸನ್‌ಪೇಟೆ ಮತ್ತು ಸುತ್ತಮುತ್ತಲ ಪ್ರದೇಶಕ್ಕೂ ಅಳವಡಿಸಲಾಯಿತು. ಅಲ್ಲಿ ಇಲ್ಲಿ ಉಳಿದುಕೊಂಡಿದ್ದ ಅಪರಾಧಿಗಳು ಇನ್ನೂ ದೂರದ ಪ್ರದೇಶಗಳ ಕಡೆಗೆ ಪರಾರಿಯಾದರು. ಆದರೆ ಚಿನ್ನದ ಕಳ್ಳತನ ಮಾತ್ರ ನಿಲ್ಲಲೇ ಇಲ್ಲ. ಕಂಪನಿ ಮತ್ತು ಪೊಲೀಸರಿಂದ ತೊಂದರೆಗಳು ಮಿತಿಮೀರಿದಾಗ ಕಾರ್ಮಿಕರ ಪ್ರತಿಭಟನೆ ಕಾಣಿಸಿಕೊಂಡಿತು. ಮೈಸೂರಿನ ಬುದ್ಧಿಜೀವಿಗಳು ಕೆಲವರು ಅದೇ ಸಮಯಕ್ಕೆ ಕಾರ್ಮಿಕರ ಪರವಾಗಿ ಮಾತನಾಡತೊಡಗಿದರು. ಶಾಸಕರಾದ ಟಿ.ಎನ್.ರಾಮಚಂದ್ರರಾವ್ ಮತ್ತು ಕೆ.ರಾಮೆಗೌಡ ಅವರು 1922ರಲ್ಲಿ ಅಸೆಂಬ್ಲಿಯಲ್ಲಿ 'ಕಂಪನಿ ಮತ್ತು ಪೊಲೀಸರ ದೌರ್ಜನ್ಯಗಳು ಮಿತಿ ಮೀರಿವೆ. ಯಾವುದೇ ಆಧಾರಗಳಿಲ್ಲದೆ ಹಲವರನ್ನು ಗಡಿಪಾರು ಮಾಡಲಾಗಿದೆ' ಎಂದು ಹೇಳಿ, 'ಅನಪೇಕ್ಷಣೀಯ' ಎಂದರೆ ಏನು ಎಂದು ಪ್ರಶ್ನಿಸಿದರು.[13]

ಕೆ. ಚಂಗಲರಾಯರೆಡ್ಡಿಯವರು (ಸ್ವಾತಂತ್ರ್ಯ ಪಡೆದ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ) ಕೆಜಿಎಫ್ ಪ್ರದೇಶಕ್ಕೆ 10ಕಿ.ಮೀ.ದೂರದ ಕ್ಯಾಸಂಬಳ್ಳಿಯವರು. ಶಾಸನ ಸಭೆಯಲ್ಲಿ ಜನಸಾಮಾನ್ಯರ ಹಕ್ಕುಗಳನ್ನು ಕುರಿತು ಮಾತನಾಡುತ್ತ 'ಈ ಕಾಯಿದೆಯಿಂದ ಜನರು ತತ್ತರಿಸಿಹೋಗಿದ್ದಾರೆ. ಕಂಪನಿಯ ಜವಾನರು, ಬಟ್ಲರು, ಪ್ರಾಮಾಣಿಕ ಹೆಣ್ಣು ಮಕ್ಕಳನ್ನೂ ಹಿಂಸಿಸುತ್ತಿದ್ದಾರೆ. ಕಾರ್ಮಿಕರನ್ನು ಅಸಂಘಟಿತರನ್ನಾಗಿ ಮಾಡುವುದೇ ಈ 'ಅನಪೇಕ್ಷಣೀಯ' ಕಾಯಿದೆಯ ಉದ್ದೇಶ. ಇದು ಕಾರ್ಮಿಕರ ವಿರುದ್ಧ ಸಾರಿರುವ ಹೇಯ ಮತ್ತು ದ್ವೇಷದ ಪಿತೂರಿ' ಎಂದು ಗುಡುಗಿದರು. ಆದರೆ ಇದ್ಯಾವುದೂ ಸರಕಾರದ ಸದಸ್ಯರನ್ನು ಚಿಂತನೆಗೆ ಈಡುಮಾಡಲಿಲ್ಲ. 'ಕೆಜಿಎಫ್ ಕಾರ್ಮಿಕರು ಸಮಾಜದ ಕೆಳಸ್ತರದವರು ಮತ್ತು ಅವರಿಗೆ ಶಿಕ್ಷೆ ದೊರಕಲೇಬೇಕು. ಕಾರ್ಮಿಕರು ಈ ಪ್ರದೇಶದ ನಿಜವಾದ ಪ್ರಜೆಗಳಲ್ಲ. ಅವರೆಲ್ಲ ಪಟ್ಟಭದ್ರ ಹಿತಾಸಕ್ತಿಯುಳ್ಳವರು' ಎನ್ನುವುದು ಕೆಲವು ಸದಸ್ಯರ ವಾದವಾಗಿತ್ತು. 1940ರವರೆಗೂ ಇದೇ ಧೋರಣೆ ಮುಂದುವರಿದಿತ್ತು. ಕಾರ್ಮಿಕರ ಪ್ರತಿಭಟನೆ ಇನ್ನಷ್ಟು ಗಟ್ಟಿಗೊಂಡಾಗ ಕಂಪನಿ 8 ಜನ ಕಾರ್ಮಿಕರನ್ನು ಗಡಿಪಾರು ಮಾಡಿಬಿಟ್ಟಿತು.

ಗಣಿಗಳು ಮತ್ತು ಮಿಲ್ಲುಗಳಿಂದ ಸ್ಥಳೀಯ ಕಾರ್ಮಿಕರು ಹೊರಗೆ ಬಂದಾಗ ಕಾವಲುಪಡೆ ಮೈಪರಚಿ ಹುಡುಕುತ್ತಿತ್ತು. ಆದರೆ ಅದು ಐರೋಪ್ಯರ ಹತ್ತಿರಕ್ಕೂ ಹೋಗುತ್ತಿರಲಿಲ್ಲ. ಇದು ಬಿಳಿಯರು, ಆಫ್ರಿಕಾದ ನೀಗ್ರೋಗಳ ವಿರುದ್ಧ ನಡೆಸುತ್ತಿದ್ದ ವರ್ಣಭೇದದಂತಿತ್ತು. ಬಿಳಿಯರು ಮಿಲ್ಲಿನಿಂದ ಚಿನ್ನವನ್ನು ಹೊರಗೆ ತರುವ ಒಂದು ದೊಡ್ಡ ಬಲೆಯನ್ನೇ ಹೆಣೆದಿದ್ದರು. ಈ ಬಿಳಿ ಕಳ್ಳರು ಕಳ್ಳತನ ಮಾಡಿದ ಚಿನ್ನವನ್ನು ತಮ್ಮ ಬಂಗಲೆಗಳಲ್ಲಿ ಕೆಲಸ ಮಾಡುತ್ತಿದ್ದ ಸೇವಕರು, ಬಟ್ಲರು, ಟೈಲರ್, ಕ್ಷೌರಿಕ, ಬೇಕರಿಯವರ ಮೂಲಕ ಏಜಂಟರಿಗೆ ಮಾರುತ್ತಿದ್ದರು. ಅದು ಅಂತಿಮವಾಗಿ ಅಕ್ಕಸಾಲಿಗ ಮತ್ತು ವ್ಯಾಪಾರಿಗಳಿಗೆ ತಲುಪುತ್ತಿತ್ತು. ಇವರು ಕೆಜಿಎಫ್ ಪ್ರದೇಶದ ಹೊರಗಿನಿಂದ ವ್ಯವಹಾರ ನಡೆಸುತ್ತಿದ್ದರು.[15] ಆದರೆ ಕಂಪನಿ ಪೊಲೀಸರು ಯಾವುದೇ ಸಂದೇಹ ಬಂದರೂ ಕೆಜಿಎಫ್ ನಗರ ಮತ್ತು ಸುತ್ತಮುತ್ತಲಿದ್ದ ಹಳ್ಳಿ ಪ್ರದೇಶಗಳ ಕೆಳವರ್ಗ ಮತ್ತು ಮಧ್ಯಮ ವರ್ಗದ ಮನೆಗಳಿಗೆ ನುಗ್ಗಿ ಶೋಧನೆ ನಡೆಸುತ್ತಿದ್ದರು.

ಕಮ್ಯೂನಿಸ್ಟ್ ಕಾರ್ಯಕರ್ತರಾದ ಪಿ. ಶ್ರೀನಿವಾಸನ್ 1943–44ರಲ್ಲಿ ಕೆಜಿಎಫ್ ಪೊಲೀಸರು, ಅಕ್ಕಸಾಲಿಗರು ಮತ್ತು ಐರೋಪ್ಯರಿಗಿದ್ದ ಸಂಬಂಧವನ್ನು ಸಾರ್ವಜನಿಕವಾಗಿ ಬೆತ್ತಲುಗೊಳಿಸಿದರು. ಇದನ್ನು ಮರೆಮಾಚಲು ಪೊಲೀಸರು ಕೆಲವರನ್ನು ಬಂಧಿಸುವ ನಾಟಕ ಆಡಿದರು. ಅಟ್ಕನ್‌ಸನ್ ಎಂಬ ಬ್ರಿಟಿಷ್ ಸ್ಯಾನಿಟರಿ ಮೇಲ್ವಿಚಾರಕ ಕಳ್ಳತನ ಮಾಡಿ ಸಾಮಾನುಗಳ ಸಮೇತ ಮನೆಯಲ್ಲಿ ಸಿಕ್ಕಿಕೊಂಡರೂ, ಆತನಿಗೆ ಕಂಪನಿ ಯಾವುದೇ ದಂಡವನ್ನು ವಿಧಿಸಲಿಲ್ಲ. ಗಣಿಯ ಒಳಗೆ ಸಿಡಿಮದ್ದಿನ ಸ್ಫೋಟದಿಂದ ಒಬ್ಬ ಕಾರ್ಮಿಕನ ಪ್ರಾಣ ಹೋಗಿ, ಸ್ಫೋಟ ಸಿಡಿಸಿದವನನ್ನು ಜೈಲಿಗೆ ಹಾಕಲಾಯಿತು. ಅದಕ್ಕೆ ಯಾವ ಆಧಾರವೂ ಇರಲಿಲ್ಲ, ಇನ್ನೊಬ್ಬ ಕಾರ್ಮಿಕನ ಹೇಳಿಕೆಯೆ ಆಧಾರವಾಗಿತ್ತು. ಬಿಳಿಯರು ಇಂಡಿಯನ್ ಕಾರ್ಮಿಕರನ್ನು ಕೆಟ್ಟ ಮಾತುಗಳಿಂದ ಬೈಯ್ಯುವುದು ಸರ್ವೆಸಾಮಾನ್ಯವಾಗಿತ್ತು. ಆದರೆ ಅವರಿಗೆ ಯಾವುದೇ ದಂಡ ನೀಡುತ್ತಿರಲಿಲ್ಲ. ಅದೇ ರೀತಿಯಲ್ಲಿ ಇಂಡಿಯನ್ ಉಚ್ಚ ಜಾತಿಯ ಅಧಿಕಾರಿಗಳು ಆದಿ ದ್ರಾವಿಡ ಕಾರ್ಮಿಕರ ವಿರುದ್ಧ ಕಿಡಿಕಾರುತ್ತಿದ್ದರು. ತಮಿಳರಾದ ಅದಿ ದ್ರಾವಿಡ ಜನಾಂಗದವರಿಗೆ ಮಾತ್ರ ಯಾರಿಂದಲೂ ಯಾವುದೇ ವಿನಾಯತಿ ದೊರಕುತ್ತಿರಲಿಲ್ಲ.

ವೆಂಕಟರೆಡ್ಡಿ ಎಂಬ ಮೇಸ್ತ್ರಿಗೆ ಕಂಪನಿ, 50ರೂ. ದಂಡ ಹಾಕಿ, ಒಂದು ವಾರ ಕಠಿಣ ಶಿಕ್ಷೆಯನ್ನು ನೀಡಿತು. ಯಂತ್ರ ನಡೆಸುವ ಚಾಲಕರು ಪಂಜರಗಳನ್ನು, ಅದಿರು ಸಾಗಿಸುವ ರೈಲುಗಳನ್ನು ಸ್ವಲ್ಪ ಮೇಲಕ್ಕೆ ಇಲ್ಲ ಕೆಳಕ್ಕೆ ನಿಲ್ಲಿಸಿದರೂ ಕಂಪನಿ ದಂಡ ವಸೂಲಿ ಮಾಡುತ್ತಿತ್ತು. ಪಂಜರಗಳು ಹೆಡ್‌ಗಿಯರಿಂದ ತೀರ ಮೇಲಕ್ಕೆ ಅಥವಾ ಕೆಳಕ್ಕೆ ಹೋಗಿ ಸಾವು ನೋವುಗಳು ಸಂಭವಿಸಿದರೆ, ಪಂಜರಗಳ ಚಾಲಕರನ್ನು ಕೆಲಸದಿಂದ ತೆಗೆದುಹಾಕಿ ಶಿಕ್ಷೆಗೆ ಒಳಪಡಿಸುತ್ತಿದ್ದರು. ಮೊದಲಿಗೆ ಎಲ್ಲಾ ಯಂತ್ರಗಳ ಚಾಲಕರು

ಐರೋಪ್ಯನ್ನರೆ ಆಗಿದ್ದು ಅವರು ಭಾರತೀಯ ಕಾರ್ಮಿಕರಿಗಿಂತ 15 ಪಟ್ಟು ಹೆಚ್ಚು ಸಂಬಳ ಪಡೆಯುತ್ತಿದ್ದರು. ಸಂಬಳ ಉಳಿಸುವ ಕಾರಣದಿಂದ ಕಂಪನಿ ನಿಧಾನವಾಗಿ ಐರೋಪ್ಯ ಚಾಲಕರನ್ನು ತೆಗೆದುಹಾಕಿ ಭಾರತೀಯ ಚಾಲಕರನ್ನು ನೇಮಿಸಿಕೊಳ್ಳುತ್ತಾ ಹೋಯಿತು.[17]

ಭಾರತೀಯ ಕಾರ್ಮಿಕರಿಗೆ ಎಷ್ಟೇ ಹೀನವಾದ ದಂಡ, ಕಠಿಣ ಶಿಕ್ಷೆ ನೀಡಿದರೂ ಅಪಘಾತಗಳು ಮಾತ್ರ ಕಡಿಮೆಯಾಗಲಿಲ್ಲ. ಕಂಪನಿ ಯಾವಾಗಲೂ ಲಾಭಾಂಶ, ಗೌರವಧನ ಮತ್ತು ಮಾರುಕಟ್ಟೆಯ'ಲ್ಲಿ ಚಿನ್ನದ ಬೆಲೆಯ ಬಗ್ಗೆ ಯೋಚಿಸುತ್ತಿತ್ತು. ಜೊತೆಗೆ ಕಾರ್ಮಿಕರ ವಿರುದ್ಧ ಇನ್ನಷ್ಟು ಕಠಿಣ ಕ್ರಮಗಳನ್ನು ಅಳವಡಿಸುವುದರ ಬಗ್ಗೆ ಯೋಚಿಸುತ್ತಿತ್ತು. ಕೆಜಿಎಫ್ ಜಿಲ್ಲಾ ನ್ಯಾಯಾಲಯದಲ್ಲಿ ಕಾರ್ಮಿಕರ ಪರವಾಗಿ ಯಾವ ನ್ಯಾಯವೂ ದೊರಕುತ್ತಿರಲಿಲ್ಲ. ಎಲ್ಲವೂ ಅವರ ವಿರುದ್ಧವಾಗಿಯೆ ನಡೆಯುತ್ತಿತ್ತು. ಇನ್ನೊಂದು ಕಡೆ ಬ್ರಿಟಿಷ್ ಅಧಿಕಾರಿಗಳು ನ್ಯಾಯಾಲಯದ ತೀರ್ಮಗಳು ಮತ್ತು ಅವರ ಮಂದಗತಿಯನ್ನು ಹಂಗಿಸುತ್ತಿದ್ದರು.

1905ರಲ್ಲಿ ಮೈಸೂರಿನ ಜೆ. ಬಾರ್ಡಿಲಿಯಾನ್ ಎಂಬವರು 'ಸ್ಥಳೀಯ ನ್ಯಾಯಮೂರ್ತಿ ಚಿನ್ನ ಕಳ್ಳತನ ಮಾಡಿರುವ ಕಳ್ಳನಿಗೆ ನೀಡುವ ಶಿಕ್ಷೆಯಲ್ಲಿ ತಮ್ಮ ಮೂಗು ತೂರಿಸುತ್ತಿದ್ದಾರೆ' ಎಂದು ದೂರಿದರು.[18] ಮೈನ್ಸ್ ಅಧಿಕಾರಿಯೊಬ್ಬರು 'ಈ ನ್ಯಾಯಾಲಯಗಳು ಸರಿಯಾದ ತೀರ್ಪು ಕೊಡುತ್ತಿಲ್ಲ. ಅದಕ್ಕಿಂತ ಕಂಪನಿಗಳು ಶಿಕ್ಷೆ ಕೊಡುವುದೇ ಸರಿ' ಎಂದು ಹೇಳಿದ್ದರು. 1937ರಲ್ಲಿ ಮೈಸೂರು ಮಹಾರಾಜರ ಖಾಸಗಿ ಕಾರ್ಯದರ್ಶಿ ಚಾರ್ಲ್ಸ್ ತೊಡಂಟರ್ ಅವರು 'ಗಣಿಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವುದಕ್ಕೆ ಕಾರಣ 'ಮೈನಿಂಗ್ ಕಾನೂನು ಪಾಲಿಸದೆ ಇರುವುದು ಮತ್ತು ಅಪರಾಧಿಗಳಿಗೆ ಸರಿಯಾದ ಶಿಕ್ಷೆ ದೊರಕದೇ ಇರುವುದು' ಎಂದು ಹೇಳಿ, 'ಅಪರಾಧಿಗಳಿಗೆ ಹೆಚ್ಚು ದಂಡ ಮತ್ತು ಶಿಕ್ಷೆಯನ್ನು ವಿಧಿಸಬೇಕು' ಎಂದು ಅವರು ಒತ್ತಾಯ ತಂದರು. 'ಅಪರಾಧ ಮಾಡಿದ ಕಾರ್ಮಿಕನ ವಿರುದ್ಧ ಮೈನ್ಸ್ ಇನ್ಸ್‌ಪೆಕ್ಟರ್‌ಗೆ ದೂರು ಸಲ್ಲಿಸಿದರೆ, ಕಾರ್ಮಿಕನ ಅಪರಾಧ ಏನೆಂಬುದು ಅವರಿಗೆ ಗೊತ್ತಿರುತ್ತದೆ. ಆದರೆ ಅದನ್ನು ನ್ಯಾಯಾಲಯಕ್ಕೆ ಹೊಯ್ದರೆ ಗಣಿಯ ಬಗ್ಗೆ ಏನೂ ಗೊತ್ತಿಲ್ಲದ ನ್ಯಾಯಮೂರ್ತಿಗಳನ್ನು ವಕೀಲರು ಗಲಿಬಿಲಿ ಮಾಡಿ ದಿಕ್ಕು ತಪ್ಪಿಸುತ್ತಾರೆ' ಎಂದಿದ್ದರು.

ಮೊದಲ ವಿಶ್ವ ಮಹಾಯುದ್ಧ ಮತ್ತು ಪರಿಣಾಮ :

ಆಂಗ್ಲೋ-ಇಂಡಿಯನ್ನರನ್ನು ಮಾತ್ರ ಸೇರಿಸಿ 'ಕೆಜಿಎಫ್ ಬೆಟಾಲಿಯನ್' ಎಂಬ ಹೆಸರಿನಲ್ಲಿ ರೈಫಲ್ ರೇಂಜ್ ಮೈದಾನದಲ್ಲಿ ತರಬೇತಿ ನೀಡಲಾಯಿತು. ಈ ಬೆಟಾಲಿಯನ್ ಮೊದಲ ಮಹಾಯುದ್ಧದಲ್ಲಿ ಭಾಗವಹಿಸಿತ್ತು. ಜೊತೆಗೆ ಕೆಜಿಎಫ್‌ನಲ್ಲಿದ್ದ ಉತ್ತರ ಆರ್ಕಾಟ್

ಜಿಲ್ಲೆಯ ತಮಿಳರು, ಕೆಜಿಎಫ್ ಮತ್ತು ಸುತ್ತಮುತ್ತಲ ಹಳ್ಳಿಗರು ಯುದ್ಧದಲ್ಲಿ ಹೋರಾಡಿದ್ದರು. ಯುದ್ಧಕ್ಕೆ ಹೋದ ಬಹಳಷ್ಟು ಜನರು ಹಿಂದಿರಿಗಿ ಬರಲಿಲ್ಲ, ಬಂದವರಿಗೆ ಗಣಿಗಳಲ್ಲಿ ಅವರಿಗೆ ತಕ್ಕ ಕೆಲಸಗಳನ್ನು ನೀಡಲಾಯಿತು. ಕೆಜಿಎಫ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು 4 ವರ್ಷ ಕಾಲ ಯುದ್ಧದ ಭೀತಿ ತುಂಬಿಕೊಂಡಿತ್ತು. ಯುದ್ಧದಿಂದ ಹಿಂದಿರುಗಿದ ಸ್ಥಳೀಯರು ಮೊದಲ ಬಾರಿಗೆ ಮಿಲಿಟರಿ ಸಮವಸ್ತ್ರ, ಟೋಪಿ ಮತ್ತು ಬೂಟುಗಳನ್ನು ಧರಿಸಿ ಹಿಂದಿರಿಗಿದ್ದರು. ಇವರಲ್ಲಿ ಅನೇಕರು ಯುದ್ಧಕ್ಕೆ ಹೋಗುವುದಕ್ಕಿಂತ ಮುಂಚೆ ಸರಿಯಾಗಿ ಬಟ್ಟೆಗಳನ್ನೇ ನೋಡಿರಲಿಲ್ಲ. ಇವರು ಬಂದ ಮೇಲೆ ಜಾತಿ ನಿಂದನೆ/ಅಸ್ಪೃಶ್ಯತೆ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು. ಅಲ್ಲದೆ 'ಅವರು ಸರಕಾರದ ಜನರು' ಎನ್ನುವ ಭೀತಿ ಸಾರ್ವಜನಿಕರಲ್ಲಿ ತುಂಬಿಕೊಂಡಿತು. 1ನೇ ಮತ್ತು 2ನೇ ವಿಶ್ವ ಮಹಾಯುದ್ಧಗಳ ನಂತರ ಪ್ರಪಂಚದಾದ್ಯಂತ ಅನೇಕ ಕಾರ್ಖಾನೆಗಳು ಹುಟ್ಟಿಕೊಂಡವು. ಹಾಗೆ ಮೋಟಾರು, ಕಾರು, ವಿಮಾನ, ಹಡುಗುಗಳು ಮತ್ತು ಅನೇಕ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳು ಆವಿಷ್ಕಾರಗೊಂಡು, ಸಾರ್ವಜನಿಕರ ಉಪಯೋಗಕ್ಕೆ ಬಂದವು.

❖❖❖

ಬ್ರಿಟನ್ ಮತ್ತು ಅಮೆರಿಕಾ ದೇಶಗಳು ಕೆಜಿಎಫ್ ವಲಯವನ್ನು ಯುದ್ಧ ತಯಾರಿ ಪ್ರದೇಶವನ್ನಾಗಿ ಮಾಡಿಕೊಂಡಿದ್ದವು. ಕೆಜಿಎಫ್‌ನಲ್ಲಿ ಬ್ರಿಟಿಷರಿಗೂ ಮತ್ತು ಸ್ಥಳೀಯರಿಗೂ ಯುದ್ಧ ತರಬೇತಿಯನ್ನು ನೀಡಲಾಯಿತು. ಸೀತಾರಾಮನ್ ತಮ್ಮ ಕೃತಿಯಲ್ಲಿ ಹೀಗೆ ವಿವರಿಸಿದ್ದಾರೆ: 'ಕೆಜಿಎಫ್‌ನಲ್ಲಿ ಕೆಲಸ ಮಾಡುತ್ತಿದ್ದ ಮತ್ತು ಸ್ಥಳೀಯ (16 ವರ್ಷಕ್ಕಿಂತ ಮೇಲ್ಪಟ್ಟ) ಸಾವಿರಾರು ಯುವಕರನ್ನು ಬೆಂಗಳೂರಿನ ದಂಡು (ಕ್ಯಾಂಟೋನ್ಮೆಂಟ್) ಪ್ರದೇಶಕ್ಕೆ ಕರೆದುಕೊಂಡು ಹೋಗಿ ಮಿಲಿಟರಿ ತರಬೇತಿ ನೀಡಲಾಯಿತು. ಇವರನ್ನು ಕ್ವೀನ್ ವಿಕ್ಟೋರಿಯಾ ಓಲ್ಡ್ ಮದ್ರಾಸ್ ಸಾಪರ್ಸ್ ಆಂಡ್ ಮೈನರ್ಸ್ ಎಂದು ಕರೆಯಲಾಯಿತು. ಇವರಲ್ಲಿ ಹೆಚ್ಚಿನವರು ಉತ್ತರ ಆರ್ಕಾಟ್ ಪ್ರದೇಶಕ್ಕೆ ಸೇರಿದವರಾಗಿದ್ದರು. ಇದೇ ಸಮಯದಲ್ಲಿ ಯುದ್ಧ ಸಾಮಗ್ರಿಗಳನ್ನು ತಯಾರಿಸಲು ಬೆಂಗಳೂರಿನಲ್ಲಿ ಹಲವು ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು. ಬೆಂಗಳೂರಿನಲ್ಲಿ ಕೆಲವು ಮುಖ್ಯ ಕಾರ್ಖಾನೆಗಳು ಸ್ಥಾಪನೆಯಾಗಲು ವಿಶ್ವ ಮಹಾಯುದ್ಧಗಳೆ ಕಾರಣವಾಗಿದ್ದವು. ಇವುಗಳಲ್ಲಿ ಹಿಂದೂಸ್ಥಾನ್ ಏರೋನಾಟಿಕ್ಸ್ ಕೂಡ ಒಂದು. ಮಿಲಿಟರಿ ಕ್ಯಾಂಪ್‌ಗಾಗಿ ಏರ್‌ಬೇಸ್‌ನ್ನು ಸ್ಥಾಪನೆ ಮಾಡಲಾಯಿತು. 7, ಡಿಸೆಂಬರ್ 1941 ರಂದು ಪೆಸಿಫಿಕ್ ಸಾಗರದಲ್ಲಿ ಅಮೆರಿಕಾದ ಹವಾಯ್ ದ್ವೀಪದ ಪರ್ಲ್ ಹಾರ್ಬರ್ ಮೇಲೆ ಜಪಾನ್ ದೇಶ ಬಾಂಬ್ ಧಾಳಿ ಮಾಡಿತು. ಇದರ ನಂತರ ಬೆಂಗಳೂರಿನಲ್ಲಿ ಹೆಚ್ಚು ಯುದ್ಧ ಪ್ರಕ್ರಿಯೆಗಳು

ನಡೆಯತೊಡಗಿದವು. ಬೆಂಗಳೂರು ಯುದ್ಧ ತಯಾರಿಯ ಒಂದು ಮುಖ್ಯ ಕೇಂದ್ರವಾಗಿ ಮಾರ್ಪಾಡಾಗಿತ್ತು.

–ಬ್ಯಾಟರಾಯನಹಳ್ಳಿ ಮತ್ತು ಹೊಲಗಮಾದಿ ಗುಡ್ಡಗಳಲ್ಲಿ ಬ್ರಿಟಿಷರು ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ತರಬೇತಿ ನೀಡತೊಡಗಿದರು. ಬೆಂಗಳೂರಿನಿಂದ ಕೆಜಿಎಫ್‌ವರೆಗೂ ಹಾರಾಡುವ ಯುದ್ಧ ವಿಮಾನಗಳನ್ನು ಜನರು ಆಕಾಶದಲ್ಲಿ ಬೆರಗಿನಿಂದ ನೋಡತೊಡಗಿದರು. ಯುದ್ಧ ವಿಮಾನಗಳು ಒಂದು ವೇಳೆ ಇಂಡಿಯಾ ಮೇಲೆ ಧಾಳಿ ಮಾಡಿದರೆ, ಅವುಗಳನ್ನು ಹೊಡೆದುರುಳಿಸಲು ಟ್ಯಾಂಕರ್‌ಗಳಿಂದ ಗುಂಡುಗಳನ್ನು ಹಾರಿಸುವ ತರಬೇತಿಯನ್ನು ಕೆಜಿಎಫ್‌ನಲ್ಲಿ ನೀಡಲಾಯಿತು. ಬೇತಮಂಗಲ ಮತ್ತು ಕೋಲಾರ ಹತ್ತಿರದ ಮೀರಾಪುರದಲ್ಲಿ ಯುದ್ಧ ವಿಮಾನಗಳು ಇಳಿಯಲು ಹೆಲಿಪ್ಯಾಡುಗಳನ್ನು ನಿರ್ಮಿಸಲಾಯಿತು. ಫಿರಂಗಿ ಟ್ಯಾಂಕರ್‌ಗಳು ಕೆಜಿಎಫ್ ರಸ್ತೆಗಳಲ್ಲಿ ಮತ್ತು ಸುತ್ತಲಿನ ಗುಡ್ಡಗಳಲ್ಲಿ ಓಡಾಡುವುದನ್ನು ಜನರು ನೇರವಾಗಿ ವೀಕ್ಷಿಸಿದರು. ಟ್ಯಾಂಕರ್‌ಗಳಿಂದ ಹಾರಿಸಿ ಸಿಡಿದ ಗುಂಡುಗಳನ್ನು (ಇದರಲ್ಲಿದ್ದ ತಾಮ್ರ ಮತ್ತು ಕಬ್ಬಿಣಕ್ಕಾಗಿ) ಜನರು ಆರಿಸಿ ಮಾರತೊಡಗಿದರು. ಸಿಡಿಯದ ಕೆಲವು ಗುಂಡುಗಳನ್ನು ಸುತ್ತಿಗೆಯಲ್ಲಿ ಹೊಡೆದುದರಿಂದ ಇಬ್ಬರು ಸತ್ತು ಹಲವರು ಗಾಯಗೊಂಡಿದ್ದರು.

❖❖❖

ಜೂನ್ 14, 1942ರಂದು ಬಲ್ಲಿಗಾನಹಳ್ಳಿಯ ಹತ್ತಿರ 1 ಡಕೋಟ ವಿಮಾನ ಬಿದ್ದು ಅಪಘಾತವಾಗಿತ್ತು. ಇದರಲ್ಲಿದ್ದ ಇಬ್ಬರು ಪೈಲಟ್‌ಗಳು ಕೆಳಕ್ಕೆ ಹಾರಿ ಪ್ರಾಣ ಉಳಿಸಿಕೊಂಡಿದ್ದರು. ಅದರ ಮರು ದಿನವೆ ತರಬೇತಿ ನೀಡುತ್ತಿದ್ದ ಇನ್ನೊಂದು ವಿಮಾನ ಎಡ್ಗರ್ ಶ್ಯಾಫ್ಟ್‌ಗೆ ಡಿಕ್ಕಿ ಹೊಡೆದು ಕೋರಮಂಡಲ ರೈಲು ನಿಲ್ದಾಣದ ಹತ್ತಿರ ಅನಾಥ ಪಕ್ಷಿಯಂತೆ ಬಿದ್ದಿತ್ತು. ಇದರಲ್ಲಿದ್ದ ಇಬ್ಬರು ಪೈಲಟ್‌ಗಳೂ ಪಾರಾಗಿದ್ದರು. ಭಾರತದಾದ್ಯಂತ ಯುದ್ಧ ನಿಧಿಯನ್ನು ಸಂಗ್ರಹಿಸಲಾಯಿತು. ಕೆಜಿಎಫ್‌ನಲ್ಲಿ ಸಂಗ್ರಹಿಸಿದ ಹಣದಲ್ಲಿ ಎರಡು 'ಸ್ಪಿಟ್ ಫೈರ್' ಯುದ್ಧ ವಿಮಾನಗಳನ್ನು ಖರೀದಿಸಿ ಯುದ್ಧಕ್ಕೆ ಕೊಡುಗೆ ನೀಡಲಾಯಿತು. ಕೆಜಿಎಫ್ ಗಣಿಗಳ ಗುತ್ತಿಗೆದಾರರು, ಸಾರ್ವಜನಿಕರು ಮತ್ತು ವ್ಯಾಪಾರಿಗಳು ಹಣ ಸಂಗ್ರಹಿಸಿ ಆಹಾರ ಸಾಮಗ್ರಿಗಳನ್ನು ಯುದ್ಧಕ್ಕೆ ದಾನ ಮಾಡಿದ್ದರು.

ಯುದ್ಧದಲ್ಲಿ ಗಣಿಗಳನ್ನು ನಾಶ ಮಾಡಬಹುದು ಎನ್ನುವ ಭಯ ಬ್ರಿಟಿಷರನ್ನು ಬಹಳವಾಗಿ ಕಾಡುತ್ತಿತ್ತು. ಗಣಿಗಳ ದಾಖಲೆಗಳನ್ನು ಗಣಿಗಳ ಒಳಗೆ ಸುರಂಗಗಳಲ್ಲಿ ಗುಟ್ಟಾಗಿ ಬಚ್ಚಿಡಲಾಯಿತು. ಗಣಿ ಪ್ರದೇಶದ ರಸ್ತೆಗಳಲ್ಲಿ ದಾರಿ ದೀಪಗಳನ್ನು ಆರಿಸಲಾಗುತ್ತಿತ್ತು. ರಾತ್ರಿ ಹೊತ್ತು ದೀಪ ಹೊತ್ತಿಸಿಕೊಂಡು ಓಡಾಡುವವರನ್ನು ಹಿಡಿದು ಶಿಕ್ಷೆಗೆ ಒಳಪಡಿಸಲಾಯಿತು. ಅನಿವಾರ್ಯವಾಗಿ ಕಂಪನಿ ವಾಹನಗಳು ಓಡಾಡಬೇಕಾದಾಗ

ಮಾತ್ರ ದೀಪಗಳ ಮೇಲ್ಭಾಗದಲ್ಲಿ ತಾರು ಬಳಿದು ಬೆಳಕು ಮೇಲಕ್ಕೆ ಕಾಣಿಸದಂತೆ ನೋಡಿಕೊಳ್ಳಲಾಗುತ್ತಿತ್ತು. ಯುದ್ಧದ ಮುನ್ನೆಚ್ಚರಿಕೆಯಿಂದ 4 x 4 ಅಡಿ ಅಗಲ ಮತ್ತು ಉದ್ದದ ಕಂದಕಗಳನ್ನು ಶಾಲೆ, ಕಾಲೋನಿಗಳು, ಗಣಿ ಪ್ರದೇಶ ಮತ್ತು ಕಚೇರಿಗಳ ಪಕ್ಕದಲ್ಲಿ ತೋಡಲಾಯಿತು. ವಿಮಾನಗಳ ಸದ್ದು ಬಂದಾಗ ಎಚ್ಚರಿಕೆ ಗಂಟೆ ಬಾರಿಸಲಾಗುತ್ತಿತ್ತು. ಆಗ ತಕ್ಷಣವೆ ಜನರು ಓಡಿ ಹೋಗಿ ಕಂದಕಗಳಲ್ಲಿ ಅಡಗಿಕೊಳ್ಳ ಬೇಕಾಗಿತ್ತು. ಕೆಜಿಎಫ್ ಜನರು ನೇರವಾಗಿ ಯುದ್ಧಕ್ಕೆ ಸಿಲುಕಿಕೊಳ್ಳದಿದ್ದರೂ ಅದರ ಅನುಭವಗಳನ್ನು ಪಡೆದರು.

ಹಾಲೆಂಡ್, ಇಂಗ್ಲೆಂಡ್, ಬೆಲ್ಜಿಯಮ್ ಮುಂತಾದ ದೇಶಗಳು ಯುದ್ಧ ನಡೆಯುವುದಿಲ್ಲವೆಂದು ಯಾವುದೇ ರೀತಿಯ ಯುದ್ಧ ತಯಾರಿಗಳನ್ನು ಮಾಡಿಕೊಂಡಿರಲಿಲ್ಲ. ಇದನ್ನು ತಿಳಿದ ಜರ್ಮನಿ ದೇಶ ಇಂಗ್ಲೆಂಡ್ ವಿರುದ್ಧ ನೇರವಾಗಿ ಯುದ್ಧಕ್ಕೆ ಇಳಿಯಿತು. ಪೈಲಟ್‌ಗಳಿಲ್ಲದ ವಿಮಾನಗಳು ಲಂಡನ್ ನಗರದ ಮೇಲೆ ಧಾಳಿ ಮಾಡಿದವು. ಇದರಿಂದ ವಿಚಲಿತರಾದ ಬ್ರಿಟಿಷರು ಭೀತಿಗೊಳಗಾಗಿ ವಿಧಿಯಿಲ್ಲದೆ ರಸ್ತೆಗಳಲ್ಲಿ ನರಳತೊಡಗಿದರು. ಅಂದಿನ ಬ್ರಿಟನ್ ಪ್ರಧಾನಮಂತ್ರಿ ವಿನ್ಸ್‌ಟನ್ ಚರ್ಚಿಲ್‌ರ ಬ್ರಿಟಿಷ್ ಆಡಳಿತ 'ಭಾರತದ ಎಲ್ಲಾ ಚರ್ಚು ಮತ್ತು ದೇವಾಲಯಗಳಲ್ಲಿ ಬ್ರಿಟನ್ ದೇಶ ಜಯಶಾಲಿಯಾಗುವಂತೆ ಪ್ರಾರ್ಥನೆ ಮಾಡಬೇಕು ಮತ್ತು ಎಲ್ಲರೂ 'ವಿ' (ವಿಕ್ಟರಿ) ಬ್ಯಾಡ್ಜ್‌ನ್ನು ಧರಿಸಬೇಕು' ಎಂದು ಆದೇಶ ನೀಡಿತ್ತು. ಇದನ್ನು ಕೆಜಿಎಫ್ ಜನರು ಸಾರ್ವಜನಿಕ ಪ್ರದೇಶಗಳಲ್ಲಿ ದೊಡ್ಡ ದೊಡ್ಡದಾಗಿ ಬರೆದು ಹಾಕಿದರು. ಕೆಲವು ಕುಹಕಿ ಯುವಕರು ತಮಿಳಿನಲ್ಲಿ ತೋಲ್ವಿ (ತೋಲ್=ಚರ್ಮ ವಿ=ವಿಕ್ಟರಿ) ಸೋಲು ಎನ್ನುವ ಪದದ ಅರ್ಥದಂತೆ ಚರ್ಮದಲ್ಲಿ ವಿ ಅಕ್ಷರದ ಬ್ಯಾಡ್ಜ್ ತೊಟ್ಟುಕೊಂಡು ಓಡಾಡಿದ್ದರು. ಅಂದರೆ ಬ್ರಿಟಿಷರಿಗೆ ಸೋಲಾಗಲಿ ಎನ್ನುವುದು ಇದರ ಅರ್ಥ. ಇದನ್ನು ತಿಳಿದ ಬ್ರಿಟಿಷರು ಇಂತಹವರನ್ನು ಹಿಡಿದು ಶಿಕ್ಷೆಗೆ ಒಳಪಡಿಸಿದರು.

ಬ್ರಿಟಿಷ್ ಸರಕಾರ ತುರ್ತುಪರಿಸ್ಥಿತಿಯನ್ನು ಹೇರಿ ಕೆಜಿಎಫ್‌ನಲ್ಲಿದ್ದ ಆಹಾರ ಧಾನ್ಯ ಮತ್ತಿತರ ಸಾಮಗ್ರಿಗಳನ್ನು ಯುದ್ಧಕ್ಕಾಗಿ ತೆಗೆದುಕೊಂಡು ಹೋಯಿತು. ಇದರಿಂದ ಕೇವಲ 2-3 ದಿನಗಳಲ್ಲಿ ಕೆಜಿಎಫ್‌ನ ಆಹಾರ ಧಾನ್ಯದ ದಾಸ್ತಾನೆಲ್ಲ ಖಾಲಿಯಾಗಿ ಹೋಯಿತು. ರಾತ್ರೋರಾತ್ರಿ ಬೆಲೆಗಳು ಗಗನಕ್ಕೆ ಏರಿಹೋದವು. ಹಣವಂತರು ಎಷ್ಟಾದರೂ ದುಡ್ಡು ಕೊಟ್ಟು ಕೊಂಡುಕೊಂಡರೆ, ಬಡವರು ಗಡ್ಡೆ-ಗೆಣಸು, ಸೊಪ್ಪು-ಸದೆಯನ್ನು ತಿನ್ನುವಂತಹ ಪರಿಸ್ಥಿತಿ ಬಂದಿತು. ಆಗ ಮೈಸೂರು ಸಂಸ್ಥಾನ ಕೆಲವು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಿತು. 1942-43ರಲ್ಲಿ ಗೋದಿ, ರವೆ, ಮೆಕ್ಕೆಜೋಳ ಮತ್ತು ಮೈದಾ ಪದಾರ್ಥಗಳನ್ನು ಮೊದಲ ಬಾರಿಗೆ ಅಂಗಡಿಗಳಲ್ಲಿ ಮಾರಲಾಯಿತು. ಡೀಸೆಲ್,

ಪೆಟ್ರೋಲ್ ಮತ್ತು ಸೀಮೆ ಎಣ್ಣೆಯನ್ನು ಯುದ್ಧಕ್ಕೆ ಕೊಂಡೊಯ್ದುರಿಂದ ವಾಹನಗಳನ್ನು ಅನಿಲದಿಂದ ನಡೆಸಲಾಯಿತು.

ಆಂಡ್ರ್‌ಸನ್‌ಪೇಟೆ ಮತ್ತು ರಾಬರ್ಟ್‌ಸನ್‌ಪೇಟೆಯ ಪೆಟ್ಟಿಗೆ ಅಂಗಡಿಗಳಲ್ಲಿ ಯುದ್ಧದಲ್ಲಿ ಸತ್ತವರ ಬಟ್ಟೆ-ಬರೆ ಮತ್ತು ಬೂಟುಗಳನ್ನು ಮಾರುತ್ತಿದ್ದರು. ಆ ಬಟ್ಟೆಗಳು ಕೆಲವೊಮ್ಮೆ ರಕ್ತಸಿಕ್ತವಾಗಿರುತ್ತಿದ್ದವು. ಬೂಟುಗಳು ಗಣಿ ಕಾರ್ಮಿಕರಿಗೆ ಅಗತ್ಯವಾದುದರಿಂದ ಕಾರ್ಮಿಕರು ಕೊಂಡುಕೊಳ್ಳುತ್ತಿದ್ದರು. ಕೆಜಿಎಫ್‌ನಿಂದ ಯುದ್ಧಕ್ಕೆ ಹೋದವರ ಬೂಟು, ಬಟ್ಟೆ ಮತ್ತಿತರ ವಸ್ತುಗಳು ಅವರ ಸಂಬಂಧಿಗಳ ವಿಳಾಸಕ್ಕೆ ಅಂಚೆಯ ಮೂಲಕವೂ ಬರುತ್ತಿದ್ದವು. ಇವುಗಳನ್ನು ನೋಡಿದ ಸಂಬಂಧಿಗಳು ದು:ಖದಿಂದ ಅಳುತ್ತಿದ್ದರು.

1. The Hindu, 31.7.2001.
2. Dangerous labour:crime, work and punishment in kolar gold fields, 1898-1946 by Janaki Nair, Madras Institue of development studies, Madras.
3. Ibedium
4. Reports of Chief Inspectors of Mines, Mysore, pp.22-23.
5. Annual reports of Chief Inspector of mines, Mysore, 1900-1940.
6. Ibedium
7. Ibedium
8. Nadegannadi, Nov.5,1901, Native News Paper Reports.
9. Venkataramaiah Chetty vs. Govt.of Mysore, CCR p.231 (1907).
10. Govt.of Mysore vs Subbachari, 3 Mys, Crown representative records, p.141 (1898)
11. Gopaliah vs GOM, 8 Mys CCR, p.133, (1903)
12. Report of the Chief Inspector of Mines in Mysore, 1923-24, p. 26.
13. Proceedings of Mysore Legislative Council, 1922, October, p.29.
14. Fortnightly ending January 15, 1941, CRR, KSA. interview with Shourie Dass, January 5, 1995 and Devenbu, January 4, 1995 (Miners and Millhands-work, culture and politics in princely Mysore- JanakiNair)

15. Secret notes on Mysore(September1903), Resident of Mysore,Crown representative records,KSA.
16. Dangerous labour:crime, work and punishment in kolar gold fields, 1898-1946 by Janaki Nair, Madras Institue of development studies,Madras.
17. Albert Memmi,The Colonizer and the Colonized trans. Howard Greenfeld, London:Earthscan Publications, 1990), p.146. There were occational words of praise for the KGF minor who "has qualities which make him cheap at the price" in Pringle, " Efficiency and Economy in the Underground Department". p.136.
18. Vanaja Rangaswami, The story of integration: A new interpretation in the context of the Democratic movements in the Princely states of Mysore,Travancore and Cocin,1990-1947 (Delhi:Manohar 1981) p.2.

ಅಧ್ಯಾಯ–9

ಗಣಿ ಆಸ್ಪತ್ರೆಯ ಚಾರಿತ್ರಿಕ ಹೆಜ್ಜೆಗಳು

> ಗಣಿಗಳಿಗೆ ಸಂಬಂಧಪಟ್ಟ ಕೆಲವು ವಿಭಾಗಗಳ ವಿವರಗಳನ್ನು ನೀಡಲಾಗಿದೆ. ಗಣಿ ಆಸ್ಪತ್ರೆ, ಗಣಿಗಳಲ್ಲಿ ಅಪಾಯ, ಗಣಿಗಳಿಗೆ ವಿದ್ಯುತ್ ಜೋಡಿಸಿದ್ದು, ಶಿಲಾಸ್ಫೋಟ ಮತ್ತು ಭೂಕಂಪನಗಳು, ಗಣಿ ಕಾರ್ಯಾಗಾರ ಮತ್ತು ನಗರಾಭಿವೃದ್ಧಿಯ ವಿವರಣೆಗಳನ್ನು ವಿಶ್ಲೇಷಿಸಲಾಗಿದೆ.

ಕೆಜಿಎಫ್ ಚಿನ್ನದ ಗಣಿಗಳು ಕ್ರಿ.ಶ.1880ರಲ್ಲಿ ಪ್ರಾರಂಭವಾಗಿ ಕೆಲವೇ ವರ್ಷಗಳಲ್ಲಿ ಅಭೂತಪೂರ್ವವಾಗಿ ಬೆಳೆಯುತ್ತಾಹೋದವು. 1880–84ರ ನಡುವೆ ಡಾ.ಟಿ.ಜೆ.ಓ.ಡೊನ್ನೆಲ್ ಎಂಬ ಬ್ರಿಟಿಷ್ ವೈದ್ಯ ಮೊದಲಿಗೆ ಆಸ್ಪತ್ರೆಯನ್ನು ಪ್ರಾರಂಭಿಸಿದರು. 1893ರವರೆಗೆ ಡೊನ್ನೆಲ್ ಒಬ್ಬರೆ ಇದ್ದ ಈ ಆಸ್ಪತ್ರೆಯಲ್ಲಿ ಕೇವಲ 10 ಹಾಸಿಗೆಗಳಿದ್ದು ಇವು ಎಂದೂ 10 ರೋಗಿಗಳನ್ನು ಒಟ್ಟಾಗಿ ಕಂಡಿರಲಿಲ್ಲ. ಇದರಲ್ಲಿ 5 ಹಾಸಿಗೆಗಳನ್ನು ಐರೋಪ್ಯ ಅಧಿಕಾರಿಗಳಿಗೆ ಉಳಿದ ಐದು ಹಾಸಿಗೆಗಳನ್ನು ಸ್ಥಳೀಯರಿಗೆ ಕಾದಿರಿಸಲಾಗಿತ್ತು.

1890ರಲ್ಲಿ ಗಣಿ ಕಂಪನಿಗಳಲ್ಲಿ 22,500 ಸ್ಥಳೀಯ ಕಾರ್ಮಿಕರು ದುಡಿಯುತ್ತಿದ್ದು, ಇವರಿಗಾಗಿ ಆಸ್ಪತ್ರೆಯಲ್ಲಿದ್ದ ಹಾಸಿಗೆಗಳ ಸಂಖ್ಯೆ ಕೇವಲ ಐದು ಮಾತ್ರ. ಮೊದಲಿಗೆ ಸ್ಥಳೀಯರಿಗೆ ಆಸ್ಪತ್ರೆಯ ಬಗ್ಗೆ ನಂಬಿಕೆ ಇರಲಿಲ್ಲ. ಕಾರ್ಮಿಕರು, ಆಸ್ಪತ್ರೆಗೆ ಹೋಗದೆ ಇರುವುದಕ್ಕೆ ವೈದ್ಯರು ವಿದೇಶಿಗಳಾಗಿದ್ದುದು ಕಾರಣವಾಗಿತ್ತು. ಅಂದಿನ ಕೂಲಿ ಕಾರ್ಮಿಕರು ಹೆಚ್ಚಾಗಿ ಕೆಳವರ್ಗಕ್ಕೆ ಸೇರಿದವರಾಗಿದ್ದು ಜಾತಿ, ಅಸ್ಪೃಶ್ಯತೆ, ಅಧಿಕಾರವೆಂಬ ಗೋಡೆಗಳು

ಅವರ ಮಧ್ಯೆ ಅಡ್ಡ ನಿಂತಿದ್ದವು. ಆದರೆ ಡಾ. ಡೊನ್ನೆಲ್ ಎಲ್ಲರನ್ನೂ ಒಂದೇ ರೀತಿಯಾಗಿ ನೋಡುತ್ತಿದ್ದರಿಂದ ಸ್ಥಳೀಯರು ನಿಧಾನವಾಗಿ ಆಸ್ಪತ್ರೆಯ ಕಡೆಗೆ ಬರತೊಡಗಿದರು. ಡಾ. ಡೊನ್ನೆಲ್ ಆಸ್ಪತ್ರೆಯ ವ್ಹಿಸಿಟರ್ಸ್ ಪುಸ್ತಕದಲ್ಲಿ 'ಸಂತೋಷದ ವಿಷಯವೆಂದರೆ ಆಸ್ಪತ್ರೆಯಲ್ಲಿ ನೀಡುವ ಶುಶ್ರೂಷೆಯಿಂದ ಸ್ಥಳೀಯರಲ್ಲಿ ಈಗೀಗ ಒಳ್ಳೆಯ ಅಭಿಪ್ರಾಯ ಮೂಡುತ್ತಿದೆ' ಎಂದು ದಾಖಲಿಸಿದ್ದರು.

ಡಾ. ಡೊನ್ನೆಲ್ ಜೊತೆಗೆ ಆತನ ಸಹೋದರ ಜೆ.ಡಿ.ಓ.ಡೊನ್ನೆಲ್ ಕೂಡ ಸೇರಿಕೊಂಡರು. 19ನೇ ಶತಮಾನದ ಪ್ರಾರಂಭದಲ್ಲಿ ಕಾರ್ಮಿಕರಿದ್ದ ಕ್ಯಾಂಪ್‌ಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಹಲವು ರೀತಿಯ ಸಾಂಕ್ರಾಮಿಕ ರೋಗಗಳು ಮುಖ್ಯವಾಗಿ ಕಾಲರಾ, ಪ್ಲೇಗು, ಸಿಡುಬು, ಇನ್‌ಫ್ಲುಯೆಂಜಾ ಇತ್ಯಾದಿ ರೋಗಗಳು ಇದ್ದಕ್ಕಿದ್ದಂತೆ ಉದ್ಭವಿಸುತ್ತಿದ್ದವು. ಈ ರೋಗಗಳನ್ನು ತಡೆಗಟ್ಟಲು ಕಂಪನಿ ಆಡಳಿತ ಮತ್ತು ಡೊನ್ನೆಲ್ ಸಹೋದರರು ಅನೇಕ ರೀತಿಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಕಂಪನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಆಗುತ್ತಿದ್ದ ಅಪಘಾತಗಳಿಗಿಂತ, ಸಾಂಕ್ರಾಮಿಕ ರೋಗಗಳಿಂದ ಪಾರು ಮಾಡುವುದೇ ಈ ವೈದ್ಯ ಸಹೋದರರಿಗೆ ದೊಡ್ಡ ಸವಾಲಾಗಿತ್ತು. ರೋಗಿಗಳಿಗಾಗಿ ಆಸ್ಪತ್ರೆಯ ಹತ್ತಿರದಲ್ಲೆ ದೊಡ್ಡದೊಡ್ಡ ಶೆಡ್ಡುಗಳನ್ನು ನಿರ್ಮಿಸಲಾಗಿತ್ತು. ಮುಖ್ಯ ವೈದ್ಯಕೀಯ ಅಧಿಕಾರಿಗಳ ಕೆಳಗೆ ಸ್ಯಾನಿಟರಿ ವಿಭಾಗ ನಿರ್ಮಿಸಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಎಚ್ಚರಿಕೆಗಳನ್ನು ತೆಗೆದುಕೊಳ್ಳಲಾಗಿತ್ತು. ಕಂಪನಿ ಪ್ರಾರಂಭವಾದ ಮೇಲೆ 1891ರಲ್ಲಿ ಮೊದಲ ಬಾರಿಗೆ ಈ ಪ್ರದೇಶದಲ್ಲಿ ಕಾಲರಾ ಕಾಣಿಸಿಕೊಂಡಿರುವುದಾಗಿ ದಾಖಲಾಗಿದೆ. ಕಾಲರಾ ಪೂರ್ಣವಾಗಿ ನೀರಿನ ಮೂಲಕ ಹರಡುತ್ತಿದ್ದು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಅಗತ್ಯ; ಸ್ವಚ್ಛ ನೀರನ್ನು ಕುಡಿಯುವುದರಿಂದ ಕಾಯಿಲೆಯನ್ನು ತಡೆಗಟ್ಟಬಹುದು ಎಂದು ಮೊದಲ ಬಾರಿಗೆ ಕಂಪನಿ ವೈದ್ಯರು ಸುತ್ತಲಿನ ಜನರಿಗೆ ಪ್ರಚಾರ ಮಾಡಿದರು. 1900ರಲ್ಲಿ ಪೆನ್ನಾರ್ ನದಿಗೆ ಅಡ್ಡವಾಗಿ ಕಟ್ಟಿರುವ ಬೇತಮಂಗಲದ ಕೆರೆ ನೀರನ್ನು ಕಂಪನಿ ಸರಬರಾಜು ಮಾಡಿದ ಮೇಲೆ ಕಾಲರಾ ರೋಗ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು. ಕಾರ್ಮಿಕರ ಕ್ಯಾಂಪ್‌ಗಳಲ್ಲಿ ದೂರದೂರಕ್ಕೆ ಅಲ್ಲೊಂದು ಇಲ್ಲೊಂದು ಸಾರ್ವಜನಿಕ ಕೊಳಾಯಿಗಳನ್ನು ಮಾತ್ರ ಹಾಕಲಾಯಿತು.

1890ರಲ್ಲಿಯೆ ಕಂಪನಿ ಆಡಳಿತ ಆಸ್ಪತ್ರೆಯಲ್ಲಿ ದಾಖಲಾಗುತಿದ್ದ ಒಳರೋಗಿಗಳಿಗಾಗಿ ಸಣ್ಣ ಗ್ರಂಥಾಲಯವನ್ನು ಸ್ಥಾಪಿಸಿತ್ತು. ಆಸ್ಪತ್ರೆಯಲ್ಲಿ ಮುಖ್ಯವಾಗಿ ದಾಖಲಾಗುತ್ತಿದ್ದ ಬ್ರಿಟಿಷರು ಮತ್ತು ಇಟಾಲಿಯನ್ನರಿಗೆ ಮಾತ್ರ ಈ ಸವಲತ್ತನ್ನು ಮೊದಲು ಕಲ್ಪಿಸಲಾಗಿತ್ತು. 1897, ಜುಲೈಲ್ಲಿ ಆಸ್ಪತ್ರೆಗೆ ಆಗಮಿಸಿದ ಅಂದಿನ ಮೈಸೂರು ದಿವಾನರಾದ ಶೇಷಾದ್ರಿ ಐಯ್ಯರ್ ಅವರು ಆಸ್ಪತ್ರೆಯ ಸ್ವಚ್ಛತೆಯನ್ನು ನೋಡಿ 'ಈ ಆಸ್ಪತ್ರೆ ನೋಡಿ ನನಗೆ

ತುಂಬಾ ಸಂತೋಷವಾಗಿದೆ, ಎಲ್ಲವೂ ಕ್ರಮಬದ್ಧವಾಗಿದೆ' ಎಂದು ಉದ್ಗರಿಸಿದ್ದರು. 1898ರಲ್ಲಿ ಒಂದು ಆಧುನಿಕ ಶಸ್ತ್ರಚಿಕಿತ್ಸೆ ಕೋಣೆಯನ್ನು ಅಳವಡಿಸಲಾಯಿತು. ಜೊತೆಗೆ ಇನ್ನಷ್ಟು ವಾರ್ಡ್‌ಗಳನ್ನು ನಿರ್ಮಿಸಿ ಆಸ್ಪತ್ರೆಯ ಹಿಂದೆ ಒಂದು ನೀರಿನ ಟ್ಯಾಂಕನ್ನು ಕಟ್ಟಲಾಯಿತು. 1889ರಲ್ಲಿ ಗಣಿ ನಿಯಮ ಕಾಯಿದೆ ಜಾರಿಗೆ ಬಂದಾಗ ಗಣಿಯಲ್ಲಿ ಯಾವುದೇ ಅಪಘಾತ ಸಂಭವಿಸಿದರೂ ಅದನ್ನು ಕೂಲಂಕಷವಾಗಿ ತಿಳಿದುಕೊಂಡು ವರದಿ ಸಲ್ಲಿಸುವಂತೆ ತಿಳಿಸಲಾಯಿತು. ಅದೇ ಕಾಲಕ್ಕೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ಟೆಟ್ಸಾನಸ್ ಬಗ್ಗೆಯೂ ಸಂಶೋಧನೆಯನ್ನು ನಡೆಸುವಂತೆ ಆಡಳಿತ ಆದೇಶಿಸಿತು.

ಎಡ್‌ವರ್ಡ್ ವಾರ್ಡ್ :

ಮುಂದಿನ ದಶಕಗಳಲ್ಲಿ ಆಸ್ಪತ್ರೆಯ ಮುಂದಿನ ಭಾಗದಲ್ಲಿ ವಿಶಾಲವಾದ ದ್ವಾರವನ್ನು ಮತ್ತು ಒಳಗೆ ಇನ್ನಷ್ಟು ಕೋಣೆಗಳನ್ನು ನಿರ್ಮಿಸಿ ಅದಕ್ಕೆ 'ಎಡ್‌ವರ್ಡ್ ವಾರ್ಡ್' ಎಂದು ಹೆಸರಿಡಲಾಯಿತು. ಈ ಕಟ್ಟಡ ಗಣಿಗಳು ಮುಚ್ಚುವವರೆಗೂ ಉಳಿದುಕೊಂಡಿತು. 1906 ಮತ್ತು 1908ರಲ್ಲಿ ಬ್ರಿಟಿಷ್ ವೈದ್ಯರಾದ ಡಾ.ಎಲ್.ಪಿ.ಸ್ಟೋಕ್ಸ್ ಮತ್ತು ಡಾ.ಜೆ.ಎಫ್. ಪೆಡ್ಜ್‌ಮಾರ್ಯೆಸ್ ಎನ್ನುವ ಇಬ್ಬರು ವೈದ್ಯರು ಡೊನ್ನೆಲ್ ಸಹೋದರರ ಜೊತೆಗೆ ಸೇರಿಕೊಂಡರು. ಡೊನ್ನೆಲ್ ಸಹೋದರರು ಮೊದಲ ನಾಲ್ಕು ದಶಕಗಳಲ್ಲಿ ಆಸ್ಪತ್ರೆಗಾಗಿ ತುಂಬು ಹೃದಯದಿಂದ ದುಡಿದು, ಆಸ್ಪತ್ರೆಯನ್ನು ಒಂದು ಹಂತಕ್ಕೆ ತಂದುದಲ್ಲದೆ, ಆ ಕಾಲಕ್ಕೆ ಆಸ್ಪತ್ರೆಗೆ ಅಂತಾರಾಷ್ಟ್ರೀಯ ಮಟ್ಟವನ್ನು ತಂದುಕೊಟ್ಟರು. ಡೊನ್ನೆಲ್ ಸಹೋದರರಲ್ಲಿ ಹಿರಿಯ ವೈದ್ಯರಾದ ಟಿ.ಜೆ.ಓ.ಡೊನ್ನೆಲ್ ಮೊದಲ 25 ವರ್ಷಗಳ ಕಾಲ ಮುಖ್ಯ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

1910ರಲ್ಲಿ ಬ್ರಿಟಿಷ್ ಚಕ್ರಾಧಿಪತಿ, ಡಾ.ಡೊನ್ನೆಲ್ ಅವರಿಗೆ 'ಕೈಸರ್ ಇ ಹಿಂದ್' ಚಿನ್ನದ ಪದಕವನ್ನು ನೀಡಿ ಗೌರವಿಸಿದರು. 1911ರಲ್ಲಿ ಡೊನ್ನೆಲ್ ಆಸ್ಪತ್ರೆಯಿಂದ ನಿವೃತ್ತಿ ಹೊಂದಿದಾಗ ಇವರ ಸ್ಥಳವನ್ನು ಅವರ ಸಹೋದರ ಡಾ.ಡೊನ್ನೆಲ್ ಪಡೆದುಕೊಂಡರು. ಕಂಪನಿಯ ರೂವಾರಿಗಳಾದ ಮೆ. ಜಾನ್ ಟೇಲರ್ ಅವರು ಡೊನ್ನೆಲ್ ಸಹೋದರರ ಪ್ರಯತ್ನಗಳಿಗೆ ನಿರಂತರವಾಗಿ ಎಲ್ಲಾ ರೀತಿಯ ಸಹಾಯವನ್ನು ನೀಡುತ್ತಾ ಬಂದಿದ್ದರು.

1913ರಲ್ಲಿ ಮೊದಲ ಬಾರಿಗೆ ಭಾರತದ ವೈದ್ಯರಾದ ಡಾ. ಸುಂದರಂ ಆಸ್ಪತ್ರೆಗೆ ಸೇರಿಕೊಂಡರು. ಆದರೆ ಇವರು ಬಹಳ ಕಾಲ ಇರಲಿಲ್ಲ, ಇವರ ಸ್ಥಳಕ್ಕೆ ಇನ್ನೊಬ್ಬ ಭಾರತೀಯ ವೈದ್ಯ ಡಾ. ದೇವಸಗಾಯಂ ಆಯ್ಕೆಯಾದರು. ಆಸ್ಪತ್ರೆ ಬೆಳೆಯುತ್ತಾ ಹೋದಂತೆ ಅದರ ಹೆಸರು ಕೂಡ ನಾಲ್ಕು ಕಡೆಯೂ ವ್ಯಾಪಿಸುತ್ತಾ ಹೋಯಿತು. 1913ರಲ್ಲಿ ಅನೇಕ ಗಣ್ಯರು ಆಸ್ಪತ್ರೆಗೆ ಭೇಟಿ ನೀಡಿದ್ದರು. ಇವರಲ್ಲಿ ಭಾರತದ ವೈಸ್‌ರಾಯ್, ಮೈಸೂರು ಮಹಾರಾಜ ಶ್ರೀಕೃಷ್ಣರಾಜ ವಡೆಯರ್ ಮುಖ್ಯರು.

1916ರಲ್ಲಿ ಹೊರ ರೋಗಿಗಳ ವಿಭಾಗ ಮತ್ತು ಲ್ಯಾಬೊರೇಟರಿಯನ್ನು ಸ್ಥಾಪಿಸಲಾಗಿ ಕಾಲರಾ ರೋಗ ಹೆಚ್ಚುಕಡಿಮೆ ನಿಯಂತ್ರಣಕ್ಕೆ ಬಂದಿತ್ತು. 1917ರಲ್ಲಿ ಇಲಿಗಳಿಂದ ಪ್ಲೇಗು ರೋಗ ದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಂಡಿತು. ಡಾ. ಡೊನ್ನೆಲ್ ಮತ್ತು ಅವರ ಸಿಬ್ಬಂದಿ ಬಹಳ ಕಷ್ಟದಿಂದ ಈ ರೋಗಗಳನ್ನು ತಹಬಂದಿಗೆ ತಂದಿತು. 1917ರಲ್ಲಿ ಡಾ. ದೇವಸಗಾಯಂ ರಾಜಿನಾಮೆ ನೀಡಿ ಅವರ ಸ್ಥಳಕ್ಕೆ ಇನ್ನೊಬ್ಬ ಭಾರತೀಯ ವೈದ್ಯ ಡಾ.ಮ್ಯಾನುಯಲ್ ಸೇರಿಕೊಂಡರು. ಇವರು 25 ವರ್ಷಗಳು ಕಾಲ ಸೇವೆ ಸಲ್ಲಿಸಿದ ಮೇಲೆ ಕ್ರಿ.ಶ.1942ರಲ್ಲಿ ನಿವೃತ್ತಿ ಹೊಂದಿದರು. ಡಾ. ಜೆ.ಡಿ.ಓ.ಡೊನ್ನೆಲ್ 33 ವರ್ಷಗಳ ಕಾಲ ದುಡಿದ ಮೇಲೆ 1926ರಲ್ಲಿ ನಿವೃತ್ತಿ ಪಡೆದರು. ಇವರ ಸ್ಥಳದಲ್ಲಿ ಡಾ. ಸ್ಟೋಕ್ಸ್ ಬಂದು ಡೊನ್ನೆಲ್ ರೀತಿಯಲ್ಲಿ ವೈದ್ಯಕೀಯ ಜಗತ್ತಿನಲ್ಲಿ ಹೆಸರು ಮಾಡಿದರು. 1927ರಲ್ಲಿ ಭಾರತದ ವೈಸ್‌ರಾಯ್ ಲಾರ್ಡ್ ಇರ್‌ವಿನ್ ಮತ್ತು ಶ್ರೀಮತಿ ಇರ್‌ವಿನ್ ಆಸ್ಪತ್ರೆಗೆ ಆಗಮಿಸಿದ್ದರು. ಅದೇ ವರ್ಷ ಸರ್. ಮಿರ್ಜಾ ಇಸ್ಮಾಯಿಲ್ ಜೊತೆಗೆ ಹೆನ್ರಿಟೇಲರ್ ಕೂಡ ಆಗಮಿಸಿದ್ದರು. ಡಾ. ಸ್ಟೋಕ್ಸ್ ಅವರ ಉಸ್ತುವಾರಿಯಲ್ಲಿ ಎಲೆಕ್ಟ್ರಿಕ್ ಸ್ಟೆರಿಲೈಸರ್ ಕೋಣೆಯನ್ನು ಹೊಸದಾಗಿ ನಿರ್ಮಿಸಲಾಯಿತು. ಇದನ್ನು ನೋಡಿದ ಸರ್. ಮಿರ್ಜಾ ಇಸ್ಮಾಯಿಲ್ ಅವರು ಮೈಸೂರಿನ ಸರಕಾರಿ ಆಸ್ಪತ್ರೆಗಳಲ್ಲಿ ವಿದ್ಯುತ್ ಇರುವ ಕಡೆಯಲ್ಲಿ ಸ್ಟೆರಿಲೈಸರ್ ಕೋಣೆಗಳನ್ನು ನಿರ್ಮಿಸಲು ಯೋಚಿಸುವುದಾಗಿ ಹೇಳಿದರು.

1930ರಲ್ಲಿ ಮಲೇರಿಯಾ ದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಂಡ ಕಾರಣ 1932ರಲ್ಲಿ ಸೊಳ್ಳೆ ನಿವಾರಣೆ ವಿಭಾಗ ಪ್ರಾರಂಭಿಸಲಾಯಿತು. 1933ರಲ್ಲಿ ಆಧುನಿಕ ಕ್ಷ-ಕಿರಣವನ್ನು ಸ್ಥಾಪನೆ ಮಾಡಲಾಗಿ, ಇದರ ಮೂಲಕ ಸಿಲಿಕೋಸಿಸ್ ರೋಗದ ಬಗ್ಗೆ ಮೊದಲ ಬಾರಿಗೆ ಸಂಶೋಧನೆ ಪ್ರಾರಂಭವಾಯಿತು. ಇದೇ ವರ್ಷದಲ್ಲಿ ಡಾ. ರೋಹನ್‌ಟ್ರ ಹೊಸದಾಗಿ ಸೇರಿಕೊಂಡರು. ಮುಂದಿನ ವರ್ಷ 1935ರಲ್ಲಿ ಇನ್ನೊಬ್ಬ ವೈದ್ಯ ಚಾಪ್ಲಿನ್ ಸೇರಿಕೊಂಡರು. ಇವರು ಮುಂದಿನ ದಿನಗಳಲ್ಲಿ ನೀಮೊಕೋನಿಯಾಸಿಸ್ ಬಗ್ಗೆ ಸಂಶೋಧನೆಯನ್ನು ನಡೆಸಿ ಪ್ರಪಂಚದಾದ್ಯಂತ ಹೆಸರು ಪಡೆದರು. ಅದೇ ವರ್ಷ ಭಾರತೀಯ ವೈದ್ಯರಾದ ಡಾ.ಜಾನ್ ಕೂಡ ಸೇರಿಕೊಂಡರು.

1936-37ರಲ್ಲಿ ಡಾ.ರೋಹನ್‌ಟ್ರಂಯುವರು ಕೊಕ್ಕೆ ಹುಳುಗಳಿಗಾಗಿ ಉಪಯೋಗಿಸುವ ಔಷಧಿಗಳ ಬಗ್ಗೆ ಸಂಶೋಧನೆ ನಡೆಸಿ, ಡಬ್ಲಿನ್ ವಿಶ್ವವಿದ್ಯಾಲಯದಿಂದ ಎಂ.ಡಿ., ಪದವಿ ಪಡೆದರು. ಇದೇ ಕಾಲದಲ್ಲಿ ಆಸ್ಪತ್ರೆಯ ಪಕ್ಕದಲ್ಲಿಯೆ ಕೊಕ್ಕೆಹುಳು ರೋಗಿಗಳಿಗೆ ಒಂದು ದೊಡ್ಡ ಶೆಡ್ಡು ಕಟ್ಟಲಾಗಿ ಅದನ್ನು ಸ್ಥಳೀಯರು 'ರೋಹನ್‌ಟ್ರ ಪೂಚಿ ಶೆಡ್' (ರೋಹನ್‌ಟ್ರ ಹುಳು ಶೆಡ್) ಎಂದು ಕರೆಯುತ್ತಿದ್ದರು. ಡಾ. ಸ್ಟೋಕ್ಸ್ 30 ವರ್ಷ ಸೇವೆ ಸಲ್ಲಿಸಿದ ಮೇಲೆ 1936ರಲ್ಲಿ ಹರ್ನಿಯಾ ತೊಂದರೆಯಿಂದ ಪ್ರಾಣ

ಕಳೆದುಕೊಂಡರು. ಇವರ ಸ್ಥಳದಲ್ಲಿ ಸೇವೆ ಮುಂದುವರಿಸಿದ ಡಾ. ಪಿಟ್ಜ್‌ಮಾರೈಸ್ ಅಪಘಾತದಲ್ಲಿ ತೀರಿಕೊಂಡರು. ದಿಢೀರನೆ ಸಂಭವಿಸಿದ ಈ ಘಟನೆಯಿಂದ ಕಂಪನಿಯಿಂದ ನಿವೃತ್ತಿ ಹೊಂದಿದ್ದ ಡಾ. ಡೊನ್ನೆಲ್ ಅವರನ್ನು ಸ್ವಲ್ಪ ಕಾಲ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸಲು ಕಂಪನಿ ಕೇಳಿಕೊಂಡಿತು.

1938ರ ಜನವರಿಯಲ್ಲಿ ಡಾ. ರೋಹನ್‌ಟ್ರ ಅವರು ಮುಖ್ಯ ವೈದ್ಯಾಧಿಕಾರಿಯಾಗಿ ನೇಮಕಗೊಂಡರು. ಆ ವರ್ಷ ಆಸ್ಪತ್ರೆಯನ್ನು ಇನ್ನಷ್ಟು ವಿಸ್ತರಿಸಲಾಯಿತು. ಹೊಸ ವಾರ್ಡ್‌ಗಳು, ಹೊಸ ಶಸ್ತ್ರಚಿಕಿತ್ಸೆ ಕೋಣೆ, ವಿದ್ಯುತ್ ಅಡಿಗೆ ಕೋಣೆ ಮತ್ತು ಹೊರರೋಗಿಗಳ ವಿಭಾಗವನ್ನು ಇನ್ನಷ್ಟು ವಿಸ್ತರಿಸಲಾಯಿತು. ಅದೇ ವರ್ಷ ಡಾ. ಡನ್‌ಕೆರ್ಲೆ ಎಂಬ ವೈದ್ಯರು ಹೊಸದಾಗಿ ಸೇರಿಕೊಂಡರು. 1940–52ರ ನಡುವೆ ಆಸ್ಪತ್ರೆಯ ಹೆಸರು ದೇಶದಲ್ಲಿಯೆ ಉನ್ನತ ಮಟ್ಟಕ್ಕೆ ತಲುಪಿತು. ಡಾ. ರೋಹನ್‌ಟ್ರ, ಡಾ. ಡನ್‌ಕೆರ್ಲೆ ಮತ್ತು ಡಾ.ಚಾಪ್ಲಿನ್ ಅವರು ಇದಕ್ಕೆ ಮುಖ್ಯ ಕಾರಣರಾಗಿದ್ದರು. 1940ರಲ್ಲಿ ಬ್ರಿಟಿಷ್ ಸಂಜಾತರಾದ ಮಿ. ಕ್ರಾಪ್ಟನ್ ಆಸ್ಪತ್ರೆಯನ್ನು ನೋಡಿ ತುಂಬ ಉತ್ಸಾಹದಿಂದ 'ಈ ಆಸ್ಪತ್ರೆ ಟಿಪಿಕಲ್ ಮೈಸೂರು ರಾಜ್ಯವನ್ನು ಪ್ರತಿಬಿಂಬಿಸುತ್ತಿದೆ' ಎಂದು ಉದ್ಗಾರ ತೆಗೆದಿದ್ದರು. ಆ ಕಾಲಕ್ಕೆ ಯಾವುದೇ ಕ್ಲಿಷ್ಟ ಪರಿಸ್ಥಿತಿಯಲ್ಲಿ ರೋಗಿಗಳು ಬಂದರೂ, ವೈದ್ಯರು ಶಸ್ತ್ರಚಿಕಿತ್ಸೆಯನ್ನು ಸಫಲವಾಗಿ ನಡೆಸುತ್ತಿದ್ದರು. 1951ರಲ್ಲಿ ಆಸ್ಪತ್ರೆಯನ್ನು ನೋಡಿದ ವಿಶ್ವ ಆರೋಗ್ಯ ಸಂಸ್ಥೆ ಪ್ರತಿನಿಧಿ ಡಾ. ಹಬ್ಬಬರ್ಗ್ ಅವರು 'ಭಾರತದಲ್ಲಿ ನಾನು ನೋಡಿದ ಅತ್ಯಂತ ಸ್ವಚ್ಛ ಮತ್ತು ಆಧುನಿಕ ಸವಲತ್ತುಗಳುಳ್ಳ ಆಸ್ಪತ್ರೆ' ಇದು ಎಂದು ಪ್ರಶಂಸಿಸಿದ್ದರು.

2ನೇ ವಿಶ್ವ ಮಹಾಯುದ್ಧದ ಕಾಲದಲ್ಲಿ ಹತ್ತಿರದ ಬೇತಮಂಗಲದಲ್ಲಿ ಬೀಡುಬಿಟ್ಟಿದ್ದ ಗ್ಯಾರಿಸನ್ ಅವರಿಗೆ ವಿಶೇಷವಾಗಿ ಉಪಚರಿಸಲಾಯಿತು. 1942 ರಿಂದ 1944 ರವರೆಗೆ ಯುದ್ಧದಲ್ಲಿ ಸೇವೆ ಮಾಡಲು ಡಾ.ರೋಹನ್‌ಟ್ರ ಹೊರಟುಹೋದರು. 1942ರಲ್ಲಿ ಡಾ. ಮ್ಯಾನುಯಲ್ 25 ವರ್ಷ ಸೇವೆ ಸಲ್ಲಿಸಿದ ನಂತರ ನಿವೃತ್ತಿ ಹೊಂದಿದರು. ಅದೇ ವರ್ಷದಲ್ಲಿ ಇಬ್ಬರು ಭಾರತೀಯ ವೈದ್ಯರಾದ ಡಾ. ಕೃಷ್ಣಮೂರ್ತಿ ಮತ್ತು ಡಾ. ಶ್ರೀನಿವಾಸ ಐಯಂಗಾರ್ ನೇಮಕಗೊಂಡರು. ಇವರು ಮುಂದಿನ ಮೂರು ದಶಕಗಳ ಕಾಲ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದರು.

ಡಾ. ರೋಹನ್‌ಟ್ರಯವರ ಜೊತೆಗೆ ಇನ್ನೂ ಅನೇಕ ವೈದ್ಯರು ಹೊಸಹೊಸ ಶೋಧನೆಗಳನ್ನು ಮಾಡಿ ವರದಿಗಳನ್ನು ಪ್ರಕಟಿಸಿದರು. ಡಾ. ಚಾಪ್ಲಿನ್ ಅವರು ಉದ್ಯೋಗಕ್ಕೆ ಸಂಬಂಧಪಟ್ಟ ರೋಗಗಳಿಗಾಗಿ ಔಷಧಿಗಳ ಸಂಶೋಧನೆ ನಡೆಸಿದರು. ಮುಖ್ಯವಾಗಿ ಪರಿಸರ ಆರೋಗ್ಯ ಮತ್ತು ನೀಮೊಕೋನಿಯಾಸಿಸ್ ಬಗ್ಗೆ ವರದಿಗಳನ್ನು ಪ್ರಕಟಿಸಿದರು. ಗಣಿ ಕಾರ್ಮಿಕರು ಮೂರ್ಛೆ ಹೋಗುವುದರ ಬಗ್ಗೆಯೂ ಸಂಶೋಧನೆ ನಡೆಸಿದರು.

ಆಳದ ಗಣಿಗಳಲ್ಲಿ ಉಂಟಾಗುವ ಉಷ್ಣತೆಯಿಂದ ಕಾರ್ಮಿಕರ ಮೇಲೆ ಯಾವ ರೀತಿಯ ಪರಿಣಾಮಗಳು ಬೀರುತ್ತವೆ ಎನ್ನುವುದರ ಬಗ್ಗೆಯೂ ವರದಿಗಳನ್ನು ಪ್ರಕಟಿಸಲಾಯಿತು. ಈ ವರದಿಗಾಗಿ ಡಾ.ಚಾಪ್ಲಿನ್ ಮತ್ತು ಡಾ. ಲಿಂಡ್ಸೆ ಅವರಿಗೆ ದಕ್ಷಿಣ ಆಫ್ರಿಕಾದಿಂದ 1948ರಲ್ಲಿ ಚಿನ್ನದ ಪದಕ ದೊರಕಿತು.

ಭಾರತದಲ್ಲಿ ಮೊದಲ ಬಾರಿಗೆ ನೀಮೊಕೋನಿಯಾಸಿಸ್ ಬಗ್ಗೆ ವರದಿ 1947ರಲ್ಲಿ ಪ್ರಕಟವಾಯಿತು. ಇದೇ ವರ್ಷ ಗಾಯಾಳುಗಳಿಗಾಗಿ ಫಿಸಿಯೊಥೆರಪಿ ವಿಭಾಗವನ್ನು ಪ್ರಾರಂಭಿಸಲಾಯಿತು. ಇದರ ಉಸ್ತುವಾರಿಯನ್ನು ಪ್ರಖ್ಯಾತ ವೈದ್ಯ ಡಾ. ಚೊಲಮ್ಲೆ ವಹಿಸಿಕೊಂಡರು. ಅದೇ ವರ್ಷದಲ್ಲಿ ಗಣಿ ಮಾಲಿನ್ಯದಲ್ಲಿ ಉಂಟಾಗುವ ಧೂಳಿನ ಬಗ್ಗೆಯೂ ಸಂಶೋಧನೆಯನ್ನು ಕೈಗೊಳ್ಳಲಾಯಿತು. ಆಸ್ಪತ್ರೆಯಲ್ಲಿ ಕಾರ್ಮಿಕರಿಗಾಗಿ ಪ್ರಥಮ ಚಿಕಿತ್ಸೆಯ ಬಗ್ಗೆ ತರಗತಿಗಳನ್ನು ತೆಗೆದುಕೊಳ್ಳಲಾಯಿತು. ಡಾ. ಡನ್‌ಕೆರ್ಲೆ ಪ್ರಥಮ ಚಿಕಿತ್ಸೆಯ ಬಗ್ಗೆ ಕೈಪಿಡಿ ಬರೆದು ಪ್ರಕಟಿಸಿದರು.

1951ರಲ್ಲಿ ಡಾ. ರೋಹನ್‌ಟ್ರಿ, ಡಾ. ಡನ್‌ಕೆರ್ಲೆ ಮತ್ತು 1952ರಲ್ಲಿ ಡಾ. ಚಾಪ್ಲಿನ್ ಆಸ್ಪತ್ರೆ ಬಿಟ್ಟು ಹೊರಟುಹೋದರು. ಅನಂತರ ಡಾ. ಜಫ್ರಿಯವರು ಮುಖ್ಯ ವೈದ್ಯಾಧಿಕಾರಿಯಾಗಿ ನೇಮಕಗೊಂಡರು. 1956ರಲ್ಲಿ ನಿವೃತ್ತಿ ಹೊಂದಿದ ಇವರು ಕೊನೆ ಬ್ರಿಟಿಷ್ ಮುಖ್ಯ ವೈದ್ಯಾಧಿಕಾರಿ ಎನಿಸಿಕೊಂಡರು. ಇವರ ಸ್ಥಳದಲ್ಲಿ ಡಾ. ನಾಗೇಂದ್ರನ್ ಮೊದಲ ಭಾರತೀಯ ಮುಖ್ಯ ವೈದ್ಯಾಧಿಕಾರಿ ನೇಮಕಗೊಂಡರು. ಆದರೆ ಇವರು ಕೇವಲ ಮೂರು ವರ್ಷ ಸೇವೆ ಸಲ್ಲಿಸಿ ಆಸ್ಪತ್ರೆ ಬಿಟ್ಟುಹೋದರು. ಅನಂತರ ಡಾ. ಕೃಷ್ಣಮೂರ್ತಿಯವರು ಆ ಸ್ಥಾನವನ್ನು ತುಂಬಿದರು.

1930ರವರೆಗೆ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಿದ ದಾದಿಗಳ ಬಗ್ಗೆ ಯಾವುದೇ ದಾಖಲೆಗಳು ದೊರಕುವುದಿಲ್ಲ. ಶ್ರೀಮತಿ ಹೋಮ್ಸ್ ಹೆಸರಿನ ದಾದಿ ಸುಮಾರು 15 ವರ್ಷಗಳು ಕಾಲ ಕೆಲಸ ನಿರ್ಹವಹಿಸಿದುದಾಗಿ ತಿಳಿದುಬರುತ್ತದೆ. ಇವರ ನಂತರ ಶ್ರೀಮತಿ ಟೊಬಿಟ್‌ರವರು ಒಂದು ವರ್ಷ ಕೆಲಸ ನಿರ್ವಹಿಸಿದುದಾಗಿ ತಿಳಿಯುತ್ತದೆ. ಇದೇ ಸಮಯದಲ್ಲಿ ಆಸ್ಪತ್ರೆಯಲ್ಲಿ ದಾದಿಯರ ತರಬೇತಿಯನ್ನು ನೀಡಲಾಗುತ್ತಿತ್ತು. ಆ ಕಾಲಕ್ಕೆ ದೇಶದಲ್ಲಿಯೆ ಮೊದಲ ಬಾರಿಗೆ ಮಹಿಳೆಯರು ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು.

1890ರಲ್ಲಿ ಕೇವಲ ಹತ್ತು ಹಾಸಿಗೆಗಳಿದ್ದ ಆಸ್ಪತ್ರೆ 1980ರ ಹೊತ್ತಿಗೆ 270 ಹಾಸಿಗೆಗಳನ್ನು ಹೊಂದಿತ್ತು. ಜೊತೆಗೆ ಎಲ್ಲಾ ವಿಭಾಗಗಳಲ್ಲೂ ವಿಶೇಷ ವೈದ್ಯರು ಆಸ್ಪತ್ರೆಯಲ್ಲಿದ್ದರು. ಆಸ್ಪತ್ರೆಗೆ ಬರುತ್ತಿದ್ದ ಹೊರ ರೋಗಿಗಳ ಸಂಖ್ಯೆ ದಿನ ಒಂದಕ್ಕೆ 2000 ಕ್ಕೂ ಮೀರಿತ್ತು. ಆಸ್ಪತ್ರೆಯಲ್ಲಿ ಹೊಸ ವೈದ್ಯರಿಗೆ ತರಬೇತಿಯನ್ನು ಕೊಡಲಾಗುತ್ತಿತ್ತು.

121 ವರ್ಷ ಕಾಲ ನಿರಂತರವಾಗಿ ಬಂದವರಿಗೆಲ್ಲ ಆರೋಗ್ಯದ ಶುಶ್ರೂಷೆಯನ್ನು ನೀಡಿದ ಈ ಆಸ್ಪತ್ರೆ ಗತವೈಭವದ ನೆನಪುಗಳನ್ನು ಮೆಲಕು ಹಾಕುತ್ತ ಕೇಳಲು ಯಾರೂ ಇಲ್ಲದೆ ಈಗ ಸಯೆನ್ನೈಡ್ ವಿಷ ಗುಡ್ಡಗಳ ನಡುವೆ ಒಂದು ಅನಾಥ ಸ್ಮಾರಕವಾಗಿ ನಿಂತುಕೊಂಡಿದೆ.

❖❖❖

ಕೋಲಾರ ಪಟ್ಟಣದ ಹೊರವಲಯದಲ್ಲಿ (ಬೆಂಗಳೂರು–ಮದ್ರಾಸ್ ಹೆದ್ದಾರಿ ರಸ್ತೆಯ ಪಕ್ಕದಲ್ಲಿ) ಗಣಿ ಕಾರ್ಮಿಕರಿಗಾಗಿ ವಿಶೇಷವಾಗಿ ಕಮಲಾ–ನೆಹರು ಸ್ಯಾನಿಟೋರಿಯಂ ಆಸ್ಪತ್ರೆಯನ್ನು ಕಟ್ಟಲಾಯಿತು. ಮಾಲಿನ್ಯಗೊಂಡಿರುವ ಗಣಿ ವಾತಾವರಣದಲ್ಲಿ ಒಳ್ಳೆ ಗಾಳಿ ದೊರಕುತ್ತಿರಲಿಲ್ಲ. ಗಣಿಗಳಲ್ಲಿ ಕೆಲಸ ಮಾಡುವುದರಿಂದ ಸಿಲಿಕಾ ಕಾರ್ಮಿಕರ ದೇಹ ಸೇರಿ, ಅದು ಉಸಿರುಗೂಡಿನ ಮೇಲೆ ಕುಳಿತು ನಿಧಾನವಾಗಿ ಕೊಳೆತು, ತೂತುಗಳಾಗಿ ಕೊನೆಗೆ ರಕ್ತ ಸಾವ್ರವಾಗುತ್ತಿತ್ತು. ಉಸಿರುಗೂಡು ಎಷ್ಟು ಅಪಾಯಕ್ಕೆ ಸಿಲುಕಿದೆ ಎನ್ನುವುದನ್ನು ಪಾಯಿಂಟ್ಸ್ ಆಧಾರದಲ್ಲಿ ಗುರುತಿಸಲಾಗುತ್ತಿತ್ತು. 1 ಪಾಯಿಂಟ್ ಎಂದರೆ ಉಸಿರುಗೂಡಿನ ಶೇಕಡ 10ರಷ್ಟು ಭಾಗ ತೊಂದರೆಗೆ ಒಳಗಾಗಿದೆ ಎಂದು ಅರ್ಥೈಸಲಾಗುತ್ತಿತ್ತು. 2 ಪಾಯಿಂಟ್ ಎಂದರೆ ಶೇಕಡ 20 ಭಾಗ. ಮೆಡಿಕಲ್ ಚೆಕ್‌ಅಪ್ ಮಾಡಿದ ವೈದ್ಯರು ಅನೇಕ ಕಾರ್ಮಿಕರನ್ನು ಕೆಲಸಕ್ಕೆ ನಾಲಾಯಕ್ಕು ಎಂದು ಘೋಷಿಸುತ್ತಿದ್ದರು.

ಕೆಲಸ ಕಳೆದುಕೊಂಡ ಕಾರ್ಮಿಕರನ್ನು ಕಂಪನಿ ಅವರ ಊರುಗಳಿಗೆ ಕಳುಹಿಸಿಬಿಡುತ್ತಿತ್ತು. ಕಾರಣ ಅವರಿಗೆ ಒಳ್ಳೆ ಗಾಳಿ ದೊರಕಿ ಕಾಯಿಲೆ ವಾಸಿಯಾದರೂ ಆಗಬಹುದು ಎನ್ನುವುದೇ ಕಂಪನಿಗಳ ಲೆಕ್ಕಾಚಾರ ಅಥವಾ ಅವರು ನರಳಿ ಸಾಯುವುದನ್ನು ಇತರ ಕಾರ್ಮಿಕರು ನೋಡದೆ ಇರಲಿ ಎನ್ನುವ ಯೋಚನೆಯೂ ಕಂಪನಿ ಆಡಳಿತಕ್ಕೆ ಇತ್ತೋ ಏನೋ? ನಿವೃತ್ತಿ ಹೊಂದಿದ ಅಥವಾ ಕೆಲಸದಿಂದ ತೆಗೆದುಹಾಕಿದ ಕಾರ್ಮಿಕರು ದಕ್ಷಿಣ ಕರ್ನಾಟಕದಲ್ಲೆ ಇರಬಾರದು ಎಂಬುದಾಗಿ ಕಂಪನಿಗಳು ಹೇಳುತ್ತಿದ್ದವು. ಈ ಪ್ರದೇಶದಲ್ಲಿ ತಂಪು ಹವೆ ಇರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತದೆ ಎನ್ನುವುದೇ ಕಾರಣವಾಗಿತ್ತು. ಬಿಸಿ ವಾತಾವರಣ ಸಿಲಿಕೋಸಿಸ್ ರೋಗಿಗಳಿಗೆ ಒಳ್ಳೆಯದು ಅದಕ್ಕಾಗಿ ಕಂಪನಿಗಳೆ ಅವರನ್ನು ತಮಿಳುನಾಡಿನಲ್ಲಿ ಬಿಟ್ಟುಬರಲು ಏರ್ಪಾಟು ಮಾಡುತ್ತಿದ್ದವು.[1]

ಗಣಿಗಳಲ್ಲಿ ಅಪಾಯ :

ಆಳವಾದ ಗಣಿ ಸುರಂಗಗಳಲ್ಲಿ ಕೆಲಸ ಮಾಡುವುದೆಂದರೆ ಭಾರಿ ಅಪಾಯ ಮತ್ತು ಸವಾಲೂ ಕೂಡ. ಇಲ್ಲಿ ಕೆಲಸ ಮಾಡುವ ಕಾರ್ಮಿಕರು ಹಲವು ರೀತಿಯ

ನೈಸರ್ಗಿಕ ಮತ್ತು ತಾವೇ ಸೃಷ್ಟಿಸಿಕೊಳ್ಳುವ ಆಪತ್ತುಗಳನ್ನು ಎದುರಿಸಬೇಕಾಗುತ್ತದೆ. ಜೊತೆಗೆ ಯೋಧರಂತೆ ಗಟ್ಟಿ ದೇಹ ದೃಢವಾದ ಮನಸ್ಸೂ ಇರಬೇಕು. ಗಣಿಗಳ ಚರಿತ್ರೆಯನ್ನು ಒಮ್ಮೆ ಅವಲೋಕಿಸಿದರೆ ಅದು ನಿಜವೆನಿಸುತ್ತದೆ. ಅತ್ಯಂತ ಆಳವಾದ ಚಾಂಪಿಯನ್ ಗಣಿಗಳು 3230 ಮೀಟರ್ ಆಳ ಹೋಗಿದ್ದು, ಎಲ್ಲಾ ಗಣಿಗಳ ಶಾಫ್ಟ್‌ಗಳು, ಸುರಂಗಗಳು, ಹಿಂಜುಗಳು ಮತ್ತು ರೈಸುಗಳನ್ನು ಒಟ್ಟು ಕೂಡಿಸಿದಾಗ 1647 ಕಿ.ಮೀ. ಉದ್ದವಾಗುತ್ತದೆ. ಒಂದು ಸುರಂಗದಿಂದ ಇನ್ನೊಂದು ಸುರಂಗಕ್ಕೆ ಹೋಗುವ ಒಟ್ಟು ಒಳದಾರಿಗಳ ಉದ್ದ 200 ಕಿ.ಮೀ.ಗಳು. ಈ ಆಳದ ಗಣಿಗಳಲ್ಲಿ ಕೆಲಸ ನಿರ್ವಹಿಸುವಾಗ ದಿನನಿತ್ಯವೂ ಎದುರುಗೊಳ್ಳುವ ಬಹಳ ಮುಖ್ಯವಾದ ಅಪಘಾತಗಳೆಂದರೆ: ಇದ್ದಕ್ಕಿದ್ದಂತೆ ಚಲಿಸುವ ಭೂಮಿ, ಯಂತ್ರಗಳು ಹಾಳಾಗುವುದು, ಕಾರ್ಮಿಕರ ತಪ್ಪುಗಳಿಂದ ಸಂಭವಿಸುವ ಅಪಘಾತಗಳು, ನೀರಿನ ಪ್ರವಾಹ, ಶಿಲಾ ಉಷ್ಣತೆ ಮತ್ತು ವಿದ್ಯುತ್‌ನಿಂದ ಕಾಣಿಸಿಕೊಳ್ಳುವ ಬೆಂಕಿ ಅಪಘಾತಗಳು.

ಬೆಂಕಿಯ ಅಪಘಾತಗಳು ಕಡಿಮೆ ಕಾಣಿಸಿಕೊಂಡರೂ ತೀವ್ರ ರೀತಿಯ ಎಚ್ಚರಿಕೆಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಪಂಪುಗಳಿಂದ ಗಣಿಗಳ ಒಳಕ್ಕೆ ದೂಡುವ ಗಾಳಿಯಿಂದ ಬೆಂಕಿ ಅತಿವೇಗವಾಗಿ ಹರಡುತ್ತಿತ್ತು. ಸುರಂಗಗಳಲ್ಲಿ ಗಾಳಿ ಕಡಿಮೆ ಇರುವುದರಿಂದ ಕಾರ್ಬನ್ ಡೈಯಾಕ್ಸೈಡ್ ತುಂಬಿಕೊಂಡು ಕಾರ್ಮಿಕರು ಉಸಿರಾಡಲಾಗದೆ ತೊಂದರೆಗೊಳಗಾಗುವುದು ಸಾಮಾನ್ಯವಾಗಿತ್ತು. ಸುರಂಗಗಳಲ್ಲಿ ಶಿಲೆಗಳು ಕುಸಿಯದಂತೆ ತಡೆಹಿಡಿಯಲು ನಿಲ್ಲಿಸಿರುವ ಮರದ ದಿಮ್ಮಿಗಳು ಮತ್ತು ಯಂತ್ರಗಳಿಗೆ ಬೆಂಕಿ ತಗುಲಿದರೆ ಹೆಚ್ಚು ನಷ್ಟವಾಗುತ್ತಿತ್ತು. ಬೆಂಕಿಯ ಅಪಘಾತಗಳು ಮುಖ್ಯವಾಗಿ ಕೆಳಗಿನ ಕಾರಣಗಳಿಂದ ಸಂಭವಿಸುತ್ತಿದ್ದವು.

ಎಲೆಕ್ಟ್ರಿಕ್ ಷಾರ್ಟ್ ಸರ್‌ಕ್ಯೂಟ್, ಬ್ಲಾಸ್ಟಿಂಗ್ ಮಾಡುವುದು, ಕಾರ್ಮಿಕರು ಎಚ್ಚರಿಕೆ ವಹಿಸದೆ ಯಂತ್ರಗಳ ಜೊತೆಗೆ ಕೆಲಸ ಮಾಡುವುದು, ಕೆಲವು ಕಿಡಿಗೇಡಿ ಕಾರ್ಮಿಕರು ಬೇಕೆಂತಲೆ ಸೃಷ್ಟಿಸುವ ತೊಂದರೆಗಳು ಮತ್ತು ಸುರಂಗಗಳಲ್ಲಿ ಬೆಂಕಿ ಉರಿಸುವುದು. ಈ ಅಪಘಾತಗಳನ್ನು ತಡೆಗಟ್ಟಲು 1932ರಲ್ಲಿ ಕೇಂದ್ರ ಸರಕಾರದಿಂದ ಕೇಂದ್ರ ಗಣಿ ರೆಸ್ಕ್ಯೂ ನಿಲ್ದಾಣವನ್ನು ಸ್ಥಾಪಿಸಲಾಗಿತ್ತು. ಈ ಘಟಕದ ಮೊದಲ ಅಧಿಕಾರಿ ಜಿ. ಬೆನ್‌ವೈಟ್ ಅವರು ಗಣಿಗಳಲ್ಲಿ ಕಾರ್ಯ ನಿರ್ವಹಿಸಲು ಗಟ್ಟಿಮುಟ್ಟಾದ, ದೃಢ ಮನಸ್ಸು ಮತ್ತು ಹೆಚ್ಚು ಆರೋಗ್ಯವುಳ್ಳ ಯುವಕರನ್ನು ಆಯ್ಕೆ ಮಾಡಿಕೊಂಡರು. ಆಫ್ರಿಕಾ ಚಿನ್ನದ ಗಣಿಗಳಲ್ಲಿ ಇಂತಹ ಘಟಕವನ್ನು 1924ರಲ್ಲಿಯೇ ಸ್ಥಾಪಿಸಲಾಗಿತ್ತು. ಅನಂತರ ದೇಶದಾದ್ಯಂತ ಇಂತಹ ಘಟಕಗಳನ್ನು ಸ್ಥಾಪಿಸಲಾಯಿತು.

ಕೆಜಿಎಫ್‌ನ ಈ ಘಟಕಕ್ಕೆ ಇಂಗ್ಲೆಂಡಿನಲ್ಲಿ ತಯಾರಿಸಿದ ಅನೇಕ ರೀತಿಯ ಯಂತ್ರಗಳನ್ನು ತರಿಸಿಕೊಳ್ಳಲಾಯಿತು. ಮೊದಲ ಬಾರಿಗೆ ಹಲವು ವಿಭಾಗಗಳಲ್ಲಿ

ಪರಿಣತಿ ಹೊಂದಿದ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಪ್ರತಿಯೊಂದು ಗಣಿಯಿಂದಲೂ ಇಬ್ಬರಂತೆ ಒಟ್ಟು 24 ಅಧಿಕಾರಿಗಳನ್ನು ಆಯ್ಕೆ ಮಾಡಿಕೊಂಡು ಇವರಿಗೆ ವಿಶೇಷ ತರಬೇತಿಯನ್ನು ನೀಡಲಾಯಿತು. ಭಾರತದ ಇತರ ಗಣಿಗಳ ಅಧಿಕಾರಿಗಳೂ ಇಲ್ಲಿಗೆ ಬಂದು ತರಬೇತಿ ಪಡೆಯುತ್ತಿದ್ದರು.

1923–80ರ ನಡುವೆ ಅನೇಕ ಕಂಪನಿಗಳ 1063 ಅಧಿಕಾರಿಗಳಿಗೆ ಈ ಘಟಕದಲ್ಲಿ ತರಬೇತಿ ನೀಡಲಾಯಿತು. ರೆಸ್ಕ್ಯೂ ನಿಲ್ದಾಣದಲ್ಲಿದ್ದ ಮುಖ್ಯ ಉಪಕರಣಗಳೆಂದರೆ: 1.ಆಮ್ಲಜನಕ ಹೊಂದಿರುವ ಮುಖವಾಡಗಳು 2.ಪುರೆತ್ ಅನಿಲ ಮುಖವಾಡಗಳು 3.ನೊಮಿಟಿ, ನೊವೆಕ್ಸ್ ಮತ್ತು ಆಟೋಮೆನ್ ಯಂತ್ರಗಳು 4.ಬೆಂಕಿ ಆರಿಸುವ ಪ್ಯೂಮೆಟ್ ಸಿಲೆಂಡರುಗಳು 5.ಪ್ರಥಮ ಚಿಕಿತ್ಸೆಯ ಪೆಟ್ಟಿಗೆಗಳು 6.ಬೆಂಕಿ ಆರಿಸುವ ಹೋಸ್ ಪೈಪ್‌ಗಳು 7.ದೂರವಾಣಿ ಸಂಪರ್ಕ ಸಲಕರಣೆಗಳು ಮತ್ತು 8.ಅನಿಲ ಸ್ಯಾಂಪಲ್ ಯಂತ್ರಗಳು.

ದುರಂತವೆಂದರೆ ಅಪಘಾತ ರಕ್ಷಣೆಯ ತಂಡಗಳೆ ದುರಂತದಲ್ಲಿ ಸಿಲುಕಿಕೊಳ್ಳುತ್ತಿದ್ದವು. ಅಪಘಾತವಾದಾಗ ಆ ವಲಯ ತಲುಪುವುದೇ ದೊಡ್ಡ ಸಾಹಸವಾಗುತ್ತಿತ್ತು. ಅಮೆರಿಕಾದ ಡಬ್ಲ್ಯೂಟಿಓ ಕಟ್ಟಡಗಳಿಗೆ 2001 ಸೆಪ್ಟಂಬರ್ 11 ರಂದು ಬೆಂಕಿ ಹೊತ್ತಿಕೊಂಡಾಗ ಅಪಾಯದಿಂದ ಪಾರು ಮಾಡುವ ತಾವು ಬದುಕಿ ಹಿಂದಕ್ಕೆ ಬರುವುದಿಲ್ಲವೆಂದು ತಿಳಿದಿದ್ದರೂ 300 ಕ್ಕಿಂತ ಹೆಚ್ಚು ಅಧಿಕಾರಿಗಳು ಕಟ್ಟಡದ ಒಳಗೆ ನುಗ್ಗಿ ಪ್ರಾಣ ಕಳೆದುಕೊಂಡರು. ಇಂತಹ ಅನೇಕ ದುರಂತಗಳು ಪ್ರಪಂಚದಾದ್ಯಂತ ಸಂಭವಿಸುತ್ತಲೆ ಇರುತ್ತವೆ.

ಗಣಿಗಳಲ್ಲಿ ದುರಂತಗಳು ಸಂಭವಿಸಿದಾಗ ಅಪಾಯದಿಂದ ಪಾರು ಮಾಡುವ ತಂಡಗಳು ಮುನ್ನುಗ್ಗುವುದು ಅತ್ಯಂತ ಕಠಿಣವಾದ ಸಮಯದಲ್ಲಿ. ಗಣಿಗಳಲ್ಲಿ ಸಂಭವಿಸುವ ಮುಖ್ಯ ದುರಂತಗಳೆಂದರೆ ಕೇಜ್ ಹೊತ್ತಿರುವ ರಾಟೆ ಸಾಗದೆ ನಿಂತುಬಿಡುವುದು, ಉಕ್ಕಿನ ಹಗ್ಗ ಕಡಿದುಬೀಳುವುದು, ವಿದ್ಯುತ್ ಸಂಪರ್ಕ ನಿಂತುಹೋಗುವುದು. ಕಾರ್ಮಿಕರು ಅಪಘಾತಕ್ಕೆ ಒಳಗಾಗುವುದು, ಶಿಲಾಸ್ಫೋಟಗಳಿಂದ ಸುರಂಗಗಳು ಕುಸಿದು ಯಾವ ಕಡೆಯೂ ಹೋಗದಂತೆ ಮುಚ್ಚಿಹೋಗುವುದು ಇತ್ಯಾದಿ.

ಇಂತಹ ಪರಿಸ್ಥಿತಿಗಳಲ್ಲಿ ಸಿಕ್ಕಿಕೊಂಡ ಕಾರ್ಮಿಕರಿಗೆ ಆಮ್ಲಜನಕ ದೊರಕದೆ ಹೋಗಿ ಪ್ರಾಣ ಕಳೆದುಕೊಳ್ಳುವುದು ಸಾಮಾನ್ಯ. ಕೆಲವು ಸಲ ಆಮ್ಲಜನಕ ಕೊಂಡೊಯ್ದಿದ್ದರೂ ಅದು ಮುಗಿದುಹೋಗಿ ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ. ಸಾವಿರಾರು ಅಡಿಗಳ ಕೆಳಗೆ ಕಾರ್ಮಿಕರ ಒಂದು ಗುಂಪು ಸಿಕ್ಕಿಕೊಂಡರೆ, ಅವರನ್ನು ನೆಲದ ಮೇಲಕ್ಕೆ ತರಲು ಅನೇಕ ಕಾರ್ಮಿಕರು ಒಟ್ಟುಗೂಡಿ ಕೆಲಸವನ್ನು

ನಿರ್ವಹಿಸಬೇಕಾಗುತ್ತದೆ. ವಿದ್ಯುತ್ ಕಡಿತವಾದರಂತೂ ಇನ್ನೂ ಹೆಚ್ಚು ಶ್ರಮ ಪಡಬೇಕಾಗುತ್ತಿತ್ತು. ಸುರಂಗಗಳ ಕಗ್ಗತ್ತಲ ಸಾಗರದಲ್ಲಿ ಕಾರ್ಮಿಕರು ಸಾವಿರಾರು ಅಡಿಗಳು ದೂರವನ್ನು ಸುತ್ತಿ ಬಳಸಿ, ಹತ್ತಿ ಇಳಿದು ಬರಬೇಕಾಗಿತ್ತು.

ಕೆಜಿಎಫ್ ಗಣಿಗಳಲ್ಲಿ 1980 ರವರೆಗೆ 101 ಬೆಂಕಿ ಅಪಘಾತಗಳು ಸಂಭವಿಸಿರುವುದಾಗಿ ತಿಳಿದುಬರುತ್ತದೆ. 1931 ಮೇ 24 ರಂದು ನಂದಿದುರ್ಗ ಗಣಿಗಳಲ್ಲಿ ಒಂದು ದೊಡ್ಡ ಅಪಘಾತ ಸಂಭವಿಸಿತ್ತು. ಇಲ್ಲಿ ಕಾಣಿಸಿಕೊಂಡ ಬೆಂಕಿ ಒಂದು ತಿಂಗಳುವರೆಗೂ ಉರಿಯುತ್ತಲೇ ಇತ್ತು. ಈ ಅನಾಹುತದಲ್ಲಿ 52 ಕಾರ್ಮಿಕರು ಅಸು ನೀಗಿದ್ದರು. ಗಿಪರ್ಡ್ ಶ್ಯಾಫ್ಟ್‌ನ 64ನೇ ಹಂತದಲ್ಲಿ ಕಾಣಿಸಿಕೊಂಡ ಬೆಂಕಿಯನ್ನು ಹತ್ತು ಗಂಟೆಗಳ ಒಳಗೆ ನಂದಿಸಿದರೂ 9 ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದರು. ಇದೇ ಗಣಿಯಲ್ಲಿ 1942 ಮೇ ತಿಂಗಳಲ್ಲಿ ಕಾಣಿಸಿಕೊಂಡ ಬೆಂಕಿ ಅದೇ ವರ್ಷ ಡಿಸೆಂಬರ್ ತಿಂಗಳುವರೆಗೂ ಉರಿಯುತ್ತಲೆ ಇತ್ತು. 1937 ಫೆಬ್ರವರಿ 6 ರಂದು ಹೆನ್ರಿ ಶ್ಯಾಫ್ಟ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು. ಕಾರ್ಮಿಕರು ಒಮ್ಮೆಲೆ ಗಾಬರಿಗೊಂಡು ಓಡಿ ಬಂದು ಕೇಜ್‌ನಲ್ಲಿ ಸೇರಿಕೊಳ್ಳುವ ನೂಕುನುಗ್ಗಲಿನಲ್ಲಿ ಒಬ್ಬ ಕಾರ್ಮಿಕ ಕಾಲು ತಪ್ಪಿ ಶ್ಯಾಫ್ಟ್ ಕೆಳಕ್ಕೆ ಬಿದ್ದು ಪ್ರಾಣ ಕಳೆದುಕೊಂಡ. ಗಣಿ ಚರಿತ್ರೆಯಲ್ಲಿ ಒಟ್ಟು 75 ಕಾರ್ಮಿಕರು ಬೆಂಕಿ ಅಪಘಾತಗಳಲ್ಲಿ ಪ್ರಾಣ ಕಳೆದುಕೊಂಡಿರುವುದಾಗಿ ತಿಳಿದುಬರುತ್ತದೆ.

ಸಣ್ಣದಾಗಿ ಕಾಣಿಸಿಕೊಳ್ಳುವ ಬೆಂಕಿಯನ್ನು ನೇರವಾಗಿ ಪ್ಯೂಮೆಟ್ ಸಿಲೆಂಡರುಗಳಿಂದ ಅಥವಾ ಮರಳಿನಿಂದ ಆರಿಸಲಾಗುತ್ತಿತ್ತು. ದೊಡ್ಡದಾಗಿ ಕಾಣಿಸಿಕೊಳ್ಳುತ್ತಿದ್ದ ಬೆಂಕಿಯ ಮೇಲೆ ನೀರು ಹಾಯಿಸಿ ನಂದಿಸಲಾಗುತ್ತಿತ್ತು. ಆಗಲೂ ನಿಯಂತ್ರಣಕ್ಕೆ ಬರದಿದ್ದಾಗ ಬೆಂಕಿಯನ್ನು ಮುಂದಕ್ಕೆ ಹರಡದಂತೆ ಆ ಸ್ಥಳವನ್ನು ಮುಚ್ಚಿ ಅನಂತರ ಅಲ್ಲಿಗೆ ಹೋಗುವ ಬಾಗಿಲುಗಳನ್ನು ಮುಚ್ಚಲಾಗುತ್ತಿತ್ತು. ಜೊತೆಗೆ ಗಾಳಿಯ ಸರಬರಾಜನ್ನು ಕಡಿತಗೊಳಿಸುತ್ತಿದ್ದರು. ಮರಳು ಮತ್ತು ಶಿಲೆಗಳನ್ನು ಅಡ್ಡ ತಳ್ಳಿ ಬೆಂಕಿಗೆ ಸಹಾಯಕವಾಗುವ ವಸ್ತುಗಳಾದ ಡೀಸೆಲ್, ಪೆಟ್ರೋಲ್ ಇನ್ನಿತರ ಅನಿಲಗಳನ್ನು ದೂರ ಸಾಗಿಸಿಬಿಡುತ್ತಿದ್ದರು. ಮುಖ್ಯವಾಗಿ ಆಮ್ಲಜನಕ ತಲುಪದಂತೆ ತಡೆಯಲಾಗುತ್ತಿತ್ತು. ಬೆಂಕಿ ಯಾವ ರೀತಿ ಉರಿಯುತ್ತಿದೆ ಅಥವಾ ನಿಂತಿದೆ ಎನ್ನುವುದನ್ನು ಹೊರಗಿನಿಂದಲೆ ಕೆಲವು ಯಂತ್ರಗಳ ಮೂಲಕ ತಿಳಿದುಕೊಳ್ಳುತ್ತಿದ್ದರು.[2]

ಏಷ್ಯಾದಲ್ಲೇ ಮೊದಲ ವಿದ್ಯುತ್ ಸಂಪರ್ಕ :

ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಹುಟ್ಟುವ ಕಾವೇರಿ ನದಿ ಶಿವನಸಮುದ್ರದಲ್ಲಿ ಗಗನಚುಕ್ಕಿ ಮತ್ತು ಭರಚುಕ್ಕಿ ಹೆಸರಿನ ತೊರೆಗಳಾಗಿ 410 ಅಡಿಗಳ ಆಳಕ್ಕೆ ಧುಮುಕುತ್ತವೆ. 1890ರ ಸುಮಾರಿಗೆ ಇಲ್ಲಿಂದ ವಿದ್ಯುತ್ ಪಡೆಯುವುದರ ಬಗ್ಗೆ ಯೋಜನೆ ಮಾಡಿದ್ದರೂ

ಅಂದಿನ ತಂತ್ರಜ್ಞಾನದಿಂದ ಅದು ಸಾಧ್ಯವಾಗಿರಲಿಲ್ಲ. ಜಾನ್‌ಟೇಲರ್ ಕಂಪನಿಗೆ ಆ ಕಾಲಕ್ಕೆ ತೀರ ಕಡಿಮೆ ವಿದ್ಯುತ್ ಬೇಕಾಗಿದ್ದು, ಕಂಪನಿ ಹೆಚ್ಚು ಹಣವನ್ನು ತೊಡಗಿಸಲು ತಯಾರಿರಲಿಲ್ಲ. ಮೈಸೂರು ಮಹಾರಾಜರು ಸಹ ಮೊದಲಿಗೆ ಜಲವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಒಲವು ತೋರಲಿಲ್ಲ. ದೂರದಿಂದ ವಿದ್ಯುತ್ ಹರಿಸುವ ವಿಧಾನಗಳು ಅಂದಿಗೆ ಹೊಸ ಯೋಜನೆಗಳಾಗಿದ್ದವು.

1890ರಲ್ಲಿ ಅಮೆರಿಕ ಮತ್ತು ಐರೋಪ್ಯ ದೇಶಗಳಲ್ಲಿ ಜಲವಿದ್ಯುತ್ ಆರಂಭವಾಗಿತ್ತು. ಇದಾದ ಕೇವಲ 12 ವರ್ಷಗಳಲ್ಲಿ ಕಠಿಣವಾದ ತಂತ್ರಜ್ಞಾನವನ್ನು ಇಷ್ಟಾಗೆ ತಂದ ಹೆಗ್ಗಳಿಕೆ ಮೈಸೂರು ಮಹಾರಾಜರಿಗೆ ಸಲ್ಲುತ್ತದೆ. 1899ರಲ್ಲಿ ಲಾಬನೀರ್ ಎಬ ಎಂಜಿನಿಯರ್ ಒಬ್ಬರನ್ನು ಮಹಾರಾಜರು ಅಮೆರಿಕಾದ ನಯಾಗರ ಮತ್ತು ಇತರ ಜಲವಿದ್ಯುತ್ ಯೋಜನೆಗಳ ಅಧ್ಯಯನಕ್ಕಾಗಿ ಕಳುಹಿಸಿಕೊಟ್ಟರು. ಅದರ ಫಲವಾಗಿ 1900ರಲ್ಲಿ ಶಿವನಸಮುದ್ರ ಜಲಪಾತದ ಬಳಿ ಜಲವಿದ್ಯುತ್ ಯೋಜನೆಗೆ ಗುದ್ದಲಿ ಪೂಜೆ ನೆರವೇರಿತು.

ಶಿವನಸಮುದ್ರದಿಂದ ಕೆಜಿಎಫ್‌ವರೆಗೆ (140ಕಿ.ಮೀ.ದೂರ) 33 ಕಿಲೋವ್ಯಾಟ್ ಸಂಪರ್ಕದ ಕಂಬಗಳನ್ನು ನಿಲ್ಲಿಸಲು ಜಾನ್ ಟೇಲರ್ ಕಂಪನಿ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಯಿತು. ಈ ಒಪ್ಪಂದ ಕಂಪನಿಯ ರಿಸ್ಕ್ ಎಂದೇ ಪರಿಗಣಿಸಲಾಗಿತ್ತು. ಜೊತೆಗೆ 33 ಕಿಲೋವ್ಯಾಟ್ ಕಂಬಗಳನ್ನು ನಿಲ್ಲಿಸಿದ ಮೇಲೆ ವಿದ್ಯುತ್ ಹಾಯದೆ ಹೋದರೂ ಅಮೆರಿಕಾ ಕಂಪನಿ ಅದಕ್ಕೆ ಹೊಣೆಯಲ್ಲ ಎನ್ನುವ ಷರತ್ತನ್ನು ಒಪ್ಪಿಕೊಳ್ಳಬೇಕಾಯಿತು. ವಿದ್ಯುತ್ ಸಂಪರ್ಕವನ್ನು ಶಿವನಸಮುದ್ರದಿಂದ ಕೆಜಿಎಫ್‌ವರೆಗೆ ತಂದ ಮೇಲೆ ಎಲ್ಲಾ ಗಣಿಗಳ ಒಳಗೂ ತೆಗೆದುಕೊಂಡು ಹೋಗಬೇಕಾಗಿತ್ತು. ಇದರ ಜೊತೆಗೆ ದೂರವಾಣಿ ಸಂಪರ್ಕವನ್ನು ಜೋಡಿಸಬೇಕಾಗಿತ್ತು. ಇದು ಆ ಕಾಲಕ್ಕೆ ಪ್ರಪಂಚದಲ್ಲಿಯೇ ಅತಿ ದೂರದಿಂದ ವಿದ್ಯುತ್ ಪಡೆದ ದಾಖಲೆಯಾಗಿತ್ತು. ಶಿವನಸಮುದ್ರದಲ್ಲಿ ಮೊದಲಿಗೆ 10 ಜನರೇಟರುಗಳನ್ನು ಸ್ಥಾಪಿಸಿ ಅದರಿಂದ ಒಟ್ಟು 42 ಮೆಗಾವಾಟ್ ವಿದ್ಯುತ್‌ನ್ನು ಉತ್ಪಾದಿಸಲಾಯಿತು. ಯೋಜನೆ ಅನುಷ್ಠಾನ ಮತ್ತು ಒಪ್ಪಂದದ ಫಲವಾಗಿ ಅಮೆರಿಕಾದ ಜನರಲ್ ಎಲೆಕ್ಟ್ರಿಕಲ್ಸ್(ಜಿ.ಇ) ಕಂಪನಿ ತನ್ನ ಜನರೇಟರುಗಳನ್ನು ಇಲ್ಲಿಗೆ ಕಳುಹಿಸಿಕೊಟ್ಟಿತು. ಗೋವಾತನಕ ಹಡಗಿನಲ್ಲಿ ಬಂದ ಯಂತ್ರಗಳು ಅಲ್ಲಿಂದ ಮುಂದೆ ಮದ್ದೂರಿನ ತನಕ ರೈಲಿನಲ್ಲಿ ಬಂದವು. ಮುಂದೆ ಎತ್ತಿನಗಾಡಿ, ಕುದುರೆಗಳನ್ನು ಬಳಸಿ ಪ್ರಯಾಸದಿಂದ ರಸ್ತೆಗಳ ಮೂಲಕ ತರಲಾಯಿತು.

410 ಅಡಿ ಆಳದ ಕಣಿವೆಗೆ ಜನರೇಟರ್ ಇಳಿಯಿತು. 1902 ಜೂನ್ 9ರಂದು ಪೆನ್ ಸ್ಟಾಕ್‌ಗಳಲ್ಲಿ ನೀರು ಹರಿಯಲು ಪ್ರಾರಂಭಿಸಿ ವಿದ್ಯುತ್ ಉತ್ಪಾದನೆ ಪ್ರಾರಂಭವಾಯಿತು. ಅದು ಕೆಜಿಎಫ್ ತಲುಪಿ ವಿಶ್ವ ದಾಖಲೆ ಆಯಿತು. 1900ರಲ್ಲಿ ಗುದ್ದಲಿ ಪೂಜೆ ನಡೆದು

1902ರಲ್ಲಿ ಅಂದರೆ ಕೇವಲ ಎರಡು ವರ್ಷಗಳಲ್ಲಿ ಕೆಲಸ ಮುಗಿದಿತ್ತು. 1904 ಮೇ 30ರಂದು ಬೆಂಗಳೂರಿಗೂ ಇಲ್ಲಿಂದ ವಿದ್ಯುತ್ ತಲುಪಿತು. ಮೈಸೂರು ಅರಮನೆಗೆ ಮೊದಲು ವಿದ್ಯುತ್ ಬಂದಿದ್ದು ಇಲ್ಲಿಂದಲೇ. 140 ಕಿ.ಮೀ. ದೂರದ ಹಳ್ಳಕೊಳ್ಳ-ಬೆಟ್ಟಗುಡ್ಡ-ಕಾಡು ದಾರಿಯಲ್ಲಿ ಅಂದಿಗೆ ವಿದ್ಯುತ್ ಕಂಬಗಳನ್ನು ಹಾಕಿಕೊಂಡು ಬಂದಿದ್ದು ಒಂದು ಅದ್ಭುತ ಕೆಲಸವಾಗಿತ್ತು. ಇಂದಿನ ಆಧುನಿಕ ಪ್ರಪಂಚಕ್ಕೆ ಹೋಲಿಸಿ ನೋಡಿದರೆ, ಅಷ್ಟೊಂದು ಸವಲತ್ತುಗಳು ಇರದ ಹೊತ್ತಿನಲ್ಲಿ ಶಿವನಸಮುದ್ರದಿಂದ ಚಿನ್ನದ ಗಣಿಗಳಿಗೆ ವಿದ್ಯುತ್ ತಂದಿದ್ದು ಒಂದು ಮಹಾ ಪವಾಡವೇ ಆಗಿತ್ತು. 1902ರಿಂದ ಇಂದಿನವರೆಗೆ ನಿರಂತರವಾಗಿ ಯಾವುದೇ ಅಡಚಣೆ ಇಲ್ಲದೆ ವಿದ್ಯುತ್ ಸರಬರಾಜಾಗುತ್ತಲೇ ಇದೆ. ಹೆಚ್ಚು ಶ್ರಮತೆಯ ಟ್ರಾನ್ಸ್‌ಫಾರ್ಮರ್‌ಗಳನ್ನು ಚಾಂಪಿಯನ್ ಗಣಿಗಳ ಹತ್ತಿರದಲ್ಲಿ ಸ್ಥಾಪಿಸಲಾಗಿತ್ತು.

ಮೈಸೂರು ಸರಕಾರದಿಂದ ಗಣಿಗಳಿಗೆ ಒಂದು ವರ್ಷಕ್ಕೆ ಹೆಚ್ಚೆಂದರೆ 4000 ಎಚ್‌ಪಿ ವಿದ್ಯುತ್ ಪಡೆಯುವ ಒಪ್ಪಂದವನ್ನು ಕಂಪನಿ ಮಾಡಿಕೊಂಡಿತ್ತು. ಒಂದು ಹೆಚ್‌ಪಿಗೆ ಒಂದು ವರ್ಷಕ್ಕೆ 20 ಪೌಂಡ್ ಹಣ ಕೊಡುವುದಾಗಿ ನಿರ್ಧರಿಸಲಾಯಿತು. ಒಂದು ದಶಕದ ಕಾಲ ಇದೇ ಬೆಲೆಗೆ ವಿದ್ಯುತ್ ಪಡೆದುಕೊಳ್ಳಲಾಯಿತು. ಅದನ್ನು ಮುಂದಿನ ದಿನಗಳಲ್ಲಿ 10 ಪೌಂಡ್‌ಗೆ ಇಳಿಸಲಾಯಿತು. 1905ರಲ್ಲಿ ಗಣಿಗಳ ಹತ್ತಿರ ಇನ್ನೊಂದು ಟ್ರಾನ್ಸ್‌ಫಾರ್ಮರ್ ಸ್ಥಾಪಿಸಿ ಅದರ ಸಾಮರ್ಥ್ಯವನ್ನು ಶಿವನಸಮುದ್ರದಲ್ಲಿ 4800 ಕಿಲೋವ್ಯಾಟ್‌ಗೆ ಏರಿಸಲಾಯಿತು. 1915-16ರಲ್ಲಿ ಮತ್ತೆ 5250 ಕಿವಿಏ ಸಾಮರ್ಥ್ಯದ ಟ್ರಾನ್ಸ್‌ಫಾರ್ಮ್‌ರನ್ನು ಸ್ಥಾಪಿಸಲಾಯಿತು. 1941ರಲ್ಲಾದ ಒಪ್ಪಂದದಿಂದ 1970ರವರೆಗೆ ಕಂಪನಿ ನಿರಂತರವಾಗಿ ಕಡಿಮೆ ಬೆಲೆಗೆ ವಿದ್ಯುತ್ತನ್ನು ಪಡೆದುಕೊಳ್ಳುತ್ತಿತ್ತು. ವಿದ್ಯುತ್ ಟ್ರಾನ್ಸ್‌ಫಾರ್ಮ್‌ರ್ 1958ರವರೆಗೆ ಗಣಿಗಳಿಗೆ ಮಾತ್ರ ಸೀಮಿತವಾಗಿದ್ದು ಅನಂತರ ಇದನ್ನು ಎಲೆಕ್ಟ್ರಿಸಿಟಿ ಬೋರ್ಡ್ ಕೆಳಗೆ ತರಲಾಯಿತು.

ಗಣಿಗಳಲ್ಲಿ ಒಟ್ಟು 2000 ಮೋಟಾರುಗಳಿದ್ದು ಅವು 1/4 ಹೆಚ್‌ಪಿಯಿಂದ 2000 ಹೆಚ್‌ಪಿವರೆಗೂ ಇದ್ದವು. ಕಂಪ್ರೆಸರ್‌ಗಳಿಗೆ ಶೇಕಡ 50, ಕೇಜ್‌ಗಳಿಗೆ 13, ಅದಿರು ಪುಡಿಮಾಡುವ ಸ್ಥಾವರಗಳಿಗೆ 13, ಹವಾನಿಯಂತ್ರಣಕ್ಕೆ ಶೇಕಡ 18 ಮತ್ತು ಉಳಿದ ಯಂತ್ರಗಳಿಗೆ ಶೇಕಡ 6 ರಷ್ಟು ವಿದ್ಯುತ್ತನ್ನು ಉಪಯೋಗಿಸಿಕೊಳ್ಳಲಾಗುತ್ತಿತ್ತು. 60ರ ದಶಕದಲ್ಲಿಯೆ 19000 ಕಿಲೋವಾಟ್ ವಿದ್ಯುತ್ತನ್ನು ಗಣಿಗಳು ಉಪಯೋಗಿಸುತ್ತಿದ್ದವು. ಜೊತೆಗೆ ದೇಶದ ಅನೇಕ ಕಡೆಗಳಿಂದ ಬರುತ್ತಿದ್ದ ಏಸಿ/ಡಿಸಿ ಮೋಟಾರುಗಳನ್ನು ಇಲ್ಲಿ ರೀಪೇರಿ ಮಾಡಲಾಗುತ್ತಿತ್ತು.[3]

ಶಿಲಾಸ್ಫೋಟ ಮತ್ತು ಭೂಕಂಪನಗಳು :

ಗಣಿಗಳು ಆಳ ಇಳಿದಷ್ಟೂ ಶಿಲಾಸ್ಫೋಟಗಳು ಹೆಚ್ಚುತ್ತಾ ಹೋಗುತ್ತವೆ. ಕೆಜಿಎಫ್‌ನಲ್ಲಿ ಮೊದಲಿಗೆ ಶಿಲಾಸ್ಫೋಟ ಸಂಭವಿಸಿದ್ದು 1898ರಲ್ಲಿ. ಈ ಸ್ಫೋಟ ಹಳೆ ಉರಿಗಾಂ ಗಣಿಯಲ್ಲಿ 960 ಅಡಿಗಳ ಆಳದಲ್ಲಿ ಸಂಭವಿಸಿತು. ಶಿಲಾಸ್ಫೋಟಗಳನ್ನು ಆ ಕಾಲಕ್ಕೆ ವಾಯುಸ್ಫೋಟ (ಏರ್‌ಬರ್ಸ್ಟ್) ಅಥವಾ ಭೂಕಂಪನ ಎಂದು ಕರೆಯಲಾಗುತ್ತಿತ್ತು. ಸುರಂಗಗಳಲ್ಲಿ ಕೆಲಸ ನಿರ್ವಹಿಸುವ ಸಮಯದಲ್ಲಿ ಶಿಲೆಗಳು ಕುಸಿದುಬಿದ್ದು ಅದರ ಹಿಂದೆಯೆ ಸ್ಫೋಟ(ಶಬ್ದ) ಕಾಣಿಸಿಕೊಂಡರೆ ಅದನ್ನು ವಾಯುಸ್ಫೋಟ ಎಂದು ಕರೆಯಲಾಗುತ್ತಿತ್ತು. ಮೊದಲಿಗೆ ಇದು ಶಿಲೆಗಳ ನಡುವಿನ ಒತ್ತಡದಿಂದ ಸಂಭವಿಸುತ್ತದೆ ಎಂದು ತಿಳಿಯಲಾಗಿದ್ದು, ಶಿಲಾಸ್ಫೋಟದ ನಂತರ ಕೆಲವು ನಿಮಿಷ ಕಾಲ ಭೂಕಂಪನ ಉಂಟಾಗುತ್ತಿತ್ತು. ಭೂಕಂಪನವು ಶಿಲಾಸ್ಫೋಟದ ತೀವ್ರತೆಯನ್ನು ಅವಲಂಬಿಸಿರುತ್ತದೆ. ಕೆಲವೊಂದು ಸಲ ಅವು ಸಣ್ಣ ಭೂಕಂಪನಗಳ ರೀತಿಯಲ್ಲಿ ಸಂಭವಿಸುತ್ತಿದ್ದವು.

ಕ್ರಿ.ಶ.1962ರಲ್ಲಿ ಚಾಂಪಿಯನ್ ಗಣಿಯೊಂದರಲ್ಲಿಯೆ 44 ಭಾರಿ ಶಿಲಾಸ್ಫೋಟಗಳು ಕಾಣಿಸಿಕೊಂಡು 851 ಬಾರಿ ನೆಲ ಕಂಪಿಸಿತ್ತು. ಗಣಿಗಳಲ್ಲಿ ಸಂಭವಿಸುವ ಈ ಶಿಲಾಸ್ಫೋಟಗಳಿಗೆ ಕೆಲಮೊಮ್ಮೆ ಇಡೀ ಕೆಜಿಎಫ್ ನಗರವೇ ನಡುಗಿಹೋಗುತ್ತಿತ್ತು. ಗಣಿಗಳಲ್ಲಿ ಮುಖ್ಯವಾಗಿ ಸುರಂಗಗಳು ಕುಸಿಯದಂತೆ ಶಿಲೆಗಳಿಗೆ ಆಧಾರವಾಗಿ ನಿಲ್ಲಿಸುತ್ತಿದ್ದ ಮರದ ದಿಮ್ಮಿಗಳು ಮತ್ತು ಸಿಮೆಂಟ್ ಗೋಡೆಗಳು ಭಾರಕ್ಕೆ ತಾಳಲಾರದೆ ಕುಸಿಯುವುದರಿಂದ ಈ ಶಿಲಾಸ್ಫೋಟಗಳು ಸಂಭವಿಸುತ್ತಿದ್ದವು. ಸಾಮಾನ್ಯವಾಗಿ ಚಿನ್ನವಿರುವ ಕ್ವಾರ್ಟ್ಜ್ ರೀಫ್‌ಗಳು 1ಮೀ.–6ಮೀ. ಅಗಲವಿದ್ದು ನೆಲದ ಮೇಲೆ 40–45 ಡಿಗ್ರಿಗಳ ಓರೆಯಾಗಿದ್ದು, ಆಳಹೋದಂತೆ ಓರೆ ಕಡಿಮೆಯಾಗುತ್ತಿತ್ತು. ಈ ಚಿನ್ನವಿರುವ ಕ್ವಾರ್ಟ್ಜ್ ಶಿಲೆಗಳನ್ನು ತೆಗೆದುಕೊಂಡು ಖಾಲಿಯಾದ ಸ್ಥಳಗಳಲ್ಲಿ ಆಧಾರಕ್ಕಾಗಿ ಮರದ ಕಂಬಗಳು ಮತ್ತು ಕಾಂಕ್ರಿಟ್ ಗೋಡೆಗಳನ್ನು ಅಥವಾ ಗ್ರಾನೈಟ್ ಶಿಲೆಗಳನ್ನು ನಿಲ್ಲಿಸಲಾಗುತ್ತಿತ್ತು. ಗಣಿಗಳು ಆಳಕ್ಕೆ ಇಳಿದಷ್ಟೂ ಶಿಲೆಗಳ ಒತ್ತಡ ಜಾಸ್ತಿಯಾಗುತ್ತ ಹೋಗುತ್ತದೆ. ಶಿಲೆಗಳ ನಡುವೆ ಬಿರುಕುಗಳು ಮತ್ತು ಸ್ತರಭಂಗಗಳು ಇರುತ್ತವೆ. ಶಿಲಾಒತ್ತಡದಿಂದ ಬಿರುಕುಗಳು ಇನ್ನಷ್ಟು ಅಗಲವಾಗಿ ಶಿಲೆಗಳು ಭಾರವನ್ನು ತಾಳಲಾರದೆ ಕಂಬಗಳು ಕುಸಿದು ಶಿಲಾಸ್ಫೋಟ ಸಂಭವಿಸುತ್ತಿತ್ತು.

ಶಿಲಾಸ್ಫೋಟಗಳು ಸಂಭವಿಸಿದ ನಂತರ ಅದಕ್ಕೆ ಸಂಬಂಧಪಟ್ಟಂತೆ ಅನೇಕ ಕಡೆ ಶಿಲೆಗಳಲ್ಲಿ ಬಿರುಕುಗಳು ಕಾಣಿಸಿಕೊಳ್ಳುತ್ತಿದ್ದವು. ಹೀಗೆ ಶಿಲಾಸ್ಫೋಟಗಳು ಕಾಣಿಸಿಕೊಂಡಾಗ ಆ ಸ್ಥಳದಿಂದ 2–3 ಕಿ.ಮೀ. ವ್ಯಾಪ್ತಿಯಲ್ಲಿ ನೆಲದ ಮೇಲೆಯೂ ಕಂಪನಗಳು ಕಾಣಿಸಿಕೊಳ್ಳುತ್ತಿದ್ದು ಇವು ರಿಚ್ಚರ್ ಪಟ್ಟಿಯಲ್ಲಿ 4.5 ರಿಂದ 5.0ರಷ್ಟು ತೀವ್ರತೆಯಿಂದ ಕೂಡಿರುತ್ತಿದ್ದವು. ಕೆಜಿಎಫ್‌ನಲ್ಲಿ ಸಂಭವಿಸುತ್ತಿದ್ದ ಶಿಲಾಸ್ಫೋಟಗಳು

760ಕಿ.ಮೀ. ದೂರದ ಭೂಕಂಪಮಾಪಕದಲ್ಲಿ ದಾಖಲೆಯಾಗುತ್ತಿದ್ದವು. ರಿಚ್ಟರ್ ಪಟ್ಟಿಯಲ್ಲಿ 5.0 ಎಂದರೆ ಸಾಮಾನ್ಯ ಭೂಕಂಪನಗಳಿಗಿಂತ ಹೆಚ್ಚೆಂದೇ ಹೇಳಬಹುದು. ಕೆಜಿಎಫ್ ಪ್ರದೇಶದ ಜೊತೆಗೆ ಸುತ್ತಮುತ್ತಲಿನ ಹಳ್ಳಿ ಪ್ರದೇಶಗಳು ಗಡಗಡನೆ ನಡುಗಿಹೋಗುತ್ತಿದ್ದವು. ಮನೆಯ ಗೋಡೆಗಳು, ಮಾಡುಗಳು ಮತ್ತು ಅಡಿಗೆ ಮನೆಯಲ್ಲಿನ ವಸ್ತುಗಳೆಲ್ಲ ದಡಬುಡನೆ ಉರುಳಾಡುತ್ತ ಕೆಳಕ್ಕೆ ಬೀಳುತ್ತಿದ್ದವು.

ಗಣಿಗಳಲ್ಲಿ ಸಂಭವಿಸುವ ಶಿಲಾಸ್ಫೋಟಗಳನ್ನು ತಡೆಗಟ್ಟಲು ಕೆಲವು ಭೂವಿಜ್ಞಾನಿಗಳು ಮತ್ತು ಮೈನಿಂಗ್ ಎಂಜಿನಿಯರರು ಸಂಶೋಧನೆಗಳನ್ನು ನಡೆಸಿದ್ದರು. 1926 ಮತ್ತು 1955ರಲ್ಲಿ ವಿಶೇಷ ಸಮಿತಿಗಳನ್ನು ಮಾಡಿ, ಶಿಲಾಸ್ಫೋಟ ಮತ್ತು ಭೂಕಂಪನಗಳ ಬಗ್ಗೆ ಸಂಶೋಧನೆಯನ್ನು ನಡೆಸಲು ತಿಳಿಸಲಾಗಿತ್ತು. ಈ ಸಮಿತಿ ಗಣಿಗಳಲ್ಲಿ ತೆಗೆದುಕೊಳ್ಳಬೇಕಾಗಿದ್ದ ಮುನ್ನೆಚ್ಚರಿಕೆಗಳ ಬಗ್ಗೆ 1955 ರಿಂದ 1972 ರವರೆಗೆ ಸಂಶೋಧನೆಗಳನ್ನು ನಡೆಸಿತು. ಈ ಸಮಿತಿಯೊಂದಿಗೆ ಇಂಗ್ಲೆಂಡಿನ ನ್ಯೂಕಾಸ್ಲ್ ವಿಶ್ವವಿದ್ಯಾಲಯದ ಪ್ರೊ.ಇ.ಸಿ.ಜೆ.ಪಾಟ್ಸ್ ಕೈ ಜೋಡಿಸಿದ್ದರು. ಈ ಸಮಿತಿ ಶಿಲಾಸ್ಫೋಟ ಮತ್ತು ಭೂಕಂಪನಗಳನ್ನು ಲ್ಯಾಬೊರೇಟರಿಗಳಲ್ಲಿ ಸಂಶೋಧನೆ ನಡೆಸಿ ವರದಿ ನೀಡಿತ್ತು.

ಶಿಲಾಸ್ಫೋಟಗಳನ್ನು ಕೆಳಗಿನ ರೀತಿಯಾಗಿ ವಿಭಾಗಿಸಲಾಗಿತ್ತು. ಒತ್ತಡಸ್ಫೋಟ, ಉತ್ಪತ್ತಿ, ಸ್ಟೋಪ್, ಕಂಬ ಕುಸಿಯುವುದು, ಒಂದು ಭಾಗ ಅಥವಾ ಆ ವಲಯ ಕುಸಿಯುವುದು, ಶ್ಯಾಫ್ಟ್ ಕುಸಿತ ಇತ್ಯಾದಿ. ಶಿಲಾಸ್ಫೋಟ ಸಂಭವಿಸಿದ ಸ್ಥಳಕ್ಕೆ ವಿಶೇಷ ತಜ್ಞರು ಹೋಗಿ ಮಾಹಿತಿ ಕಲೆಹಾಕಿ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುತ್ತಿದ್ದರು.[4]

1957 ರಿಂದ 1978ರ ನಡುವೆ ಸಂಭವಿಸಿದ ಶಿಲಾಸ್ಫೋಟಗಳು :

ವರ್ಷ	ಶಿಲಾಸ್ಫೋಟಗಳು ಜನರಿಗೆ ಕೇಳಿಸಿದ ಸಂಖ್ಯೆ	ಶಿಲಾಸ್ಫೋಟಗಳು ಸಿಸ್ಮೋಗ್ರಾಂ ಯಂತ್ರದಲ್ಲಿ ದಾಖಲಾಗಿದ್ದು
೧೯೫೭	೨೩	೩೮೬
೧೯೫೮	೩೦	೫೩೭
೧೯೫೯	೨೯	೫೪೯
೧೯೬೦	೩೩	೮೭೭
೧೯೬೧	೪೭	೫೮೯
೧೯೬೨	೪೪	೮೫೧

೧೯೬೩	೪೩	೬೩೨
೧೯೬೪	೨೧	೪೭೮
೧೯೬೫	೧೨	೭೪೮
೧೯೬೬	೦೪	೧೦೯೬
೧೯೬೭	೦೯	೧೧೦೯
೧೯೬೮	೦೫	೧೧೫೭
೧೯೬೯	೦೨	೧೧೮೦
೧೯೭೦	೦೩	೭೬೨
೧೯೭೧	೧೦	೧೧೫೨
೧೯೭೨	೧೪	೧೨೦೨
೧೯೭೩	೧೨	೮೫೨
೧೯೭೪	೧೪	೬೪೩
೧೯೭೫	೧೦	೪೧೯
೧೯೭೬	೦೯	೪೩೪
೧೯೭೭	೧೦	೩೬೬
೧೯೭೮	೧೪	೪೭೯

ನೆಲದ ಮೇಲೆ 7 ಮತ್ತು ಗಣಿಗಳ ಒಳಗೆ 6 ಭೂದೂರವಾಣಿಗಳನ್ನು ಸ್ಥಾಪಿಸಲಾಗಿತ್ತು. ಇಲ್ಲಿ ದಾಖಲಾಗುತ್ತಿದ್ದ ಕಂಪನಗಳನ್ನು ಸಿಸ್ಮೋಗ್ರಾಂಗೆ ಪರಿವರ್ತಿಸಿ ಶಿಲಾಸ್ಫೋಟ ಮತ್ತು ಶಿಲಾಒತ್ತಡ ಇರುವ ಸ್ಥಳಗಳನ್ನು ನಿಖರವಾಗಿ ಗುರುತಿಸಲು ಪ್ರಯತ್ನಿಸಲಾಗುತ್ತಿತ್ತು.

ಕ್ರಿ.ಶ. 1949ನೇ ವರ್ಷದ ಒಂದು ಅನುಭವ–ಎ ಸತ್ಯಪಾಲ್ :

ನಾನು ಗಣಿಗಳಲ್ಲಿ ಕೆಲಸಕ್ಕೆ ಸೇರಿ ಕೇವಲ 10 ತಿಂಗಳು ಕಳೆದಿದ್ದು ಇನ್ನೂ ಪ್ರೊಬೇಶನರಿ ಅವಧಿಯಲ್ಲೇ ಇದ್ದೆ. ಆದರೆ ನನಗೆ ರಾತ್ರಿ ಪಾಳಿಯ ಪೂರ್ಣ ಉಸ್ತುವಾರಿಯನ್ನು ವಹಿಸಿಕೊಟ್ಟಿದ್ದರು. ಕ್ರಿ.ಶ.1949, ಆಗಸ್ಟ್ 21ರ ರಾತ್ರಿ 98ನೇ ಹಂತದಲ್ಲಿ ಕೆಲಸ ನಡೆಯುತ್ತಿತ್ತು. ಈ ಸ್ಥಳ ನೆಲಮಟ್ಟದಿಂದ ಸರಿಯಾಗಿ 1.6 ಕಿ.ಮೀ.

ಆಳದಲ್ಲಿತ್ತು. ನನ್ನ ಉಸ್ತುವಾರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಎಲ್ಲರಿಗೂ ಅಂದಿನ ಕೆಲಸವನ್ನು ತಿಳಿಸಿ, ಅಲ್ಲಿಂದ ಓಕ್ಲೇ ಶ್ಯಾಫ್ಟ್ ಮೂಲಕ ಆಕ್ಸಿಲರಿ ಶ್ಯಾಫ್ಟ್‌ನ 98ನೇ ಹಂತ ತಲುಪಿ, ಅಲ್ಲಿಂದ ಬುಲೆನ್ ಶ್ಯಾಫ್ಟ್‌ನ 94ನೇ ಹಂತ ತಲುಪಿದೆ.

ಎಲ್ಲಾ ಕೆಲಸಗಾರರಿಗೂ 98ನೇ ಹಂತದಲ್ಲಿರುವ ಕೆಲಸವನ್ನು ಪೂರ್ಣವಾಗಿ ಮುಗಿಸಿ 94ನೇ ಹಂತಕ್ಕೆ ಬಂದು ವಿಶ್ರಾಂತಿ ತೆಗೆದುಕೊಳ್ಳುವಂತೆ ತಿಳಿಸಿದೆ. ನನಗೆ ಈ ಯೋಚನೆ ಯಾಕೆ ಬಂತೊ ಗೊತ್ತಿಲ್ಲ? ಮತ್ತೆ ಅಲ್ಲಿಂದ 100ನೇ ಹಂತದಲ್ಲಿದ್ದ ಆಕ್ಸಿಲರಿ ಶ್ಯಾಫ್ಟ್‌ನ ಮುಖ್ಯ ಹಿಂಜ್ ತಲುಪಿದೆ. ಅಲ್ಲಿಂದ 32 ಅಡಿಗಳ ಕೆಳಗೆ ಕೆಲಸ ನಡೆಯುತ್ತಿತ್ತು. ಕೆಲಸ ನಡೆಯುತ್ತಿದ್ದ ಸ್ಥಳಗಳನ್ನು ನೋಡಿ ನನ್ನ ಮೊದಲನೆ ಸುತ್ತನ್ನು ಮುಗಿಸಿ ಅಲ್ಲಿಂದ 94ನೇ ಹಂತಕ್ಕೆ ಮುಖ್ಯ ಆಕ್ಸಿಲರಿ ಹಿಂಜ್‌ನಲ್ಲಿ ಬರುತ್ತಿದ್ದೆ. ಆಗ ಬೆಳಗಿನ ಜಾವ 2:35 ಗಂಟೆ. ಇದ್ದಕ್ಕಿದ್ದಂತೆ ಒಂದು ಭಯಂಕರ ಸ್ಫೋಟ ಸಂಭವಿಸಿತು. ಅದು ನನ್ನ ಊಹೆಗೆ ಮೀರಿದ, ವರ್ಣಿಸಲಾಗದ ಭಯಂಕರ ಶಬ್ದವಾಗಿತ್ತು. ನನ್ನ ಉಸಿರುಗೂಡು ಬೆಲೂನಿನಂತೆ ಹಿಗ್ಗಿಹೋಯಿತು. ಬೆಳಕು ಮಾಯವಾಗಿ ಎಲ್ಲೆಲ್ಲೂ ಗಾಡಾಂಧಕಾರ ತುಂಬಿಹೋಯಿತು. ನನಗೆ ಕಣ್ಣುಗಳು ಇವೆಯೋ ಇಲ್ಲವೋ ಎನ್ನುವ ಅನುಮಾನ ಶುರುವಾಯಿತು. ಮರುಕ್ಷಣದಲ್ಲಿಯೆ ನನ್ನ ಸುತ್ತಲೂ ಕಾರ್ಮಿಕರ ಚೀರಾಟ ಕೇಳಿಸಿಕೊಂಡಿತು. ಅದರ ಹಿಂದೆಯೆ ಕಂಪ್ರೆಸ್ಸರ್‌ಗಳು ಛಿದ್ರ ಛಿದ್ರವಾಗಿ ಸಿಡಿದುಹೋಗಿ ಗಾಳಿ ಒಂದೇ ಸಮನೆ ಸೋರಿಹೋಗುತ್ತಿತ್ತು. ಒಂದೆರಡು ನಿಮಿಷಗಳು ಏನು ನಡೆಯುತ್ತಿದೆ ಎನ್ನುವುದೇ ಗೊತ್ತಾಗಲಿಲ್ಲ.

ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ನಾವು ಕೆಲವರು 94ನೇ ಹಂತದ ಅಡ್ಡ ಬಾಗಿಲುಗಳನ್ನು ಗಾಳಿ ಮತ್ತು ಧೂಳು ಹೋಗಲು ತೆರೆದುಬಿಟ್ಟೆವು. ಕಾರ್ಬೈಡ್‌ಲ್ಯಾಂಪ್‌ಗಳನ್ನು ನಿಧಾನವಾಗಿ ಹೊತ್ತಿಸಿದೆವು. 50ನೇ ಹಂತದಲ್ಲಿದ್ದ ಟೆಲಿಫೋನ್ ಎಕ್ಸ್‌ಚೇಂಜ್‌ಗೆ ಫೋನ್ ಮಾಡಿ ನೋಡಿದೆ. ಫೋನ್ ಗಂಟೆ ಬಾರಿಸುತ್ತಿದ್ದರೂ ಯಾರೂ ಎತ್ತಲಿಲ್ಲ. ಈ ಆಪರೇಟರ್ ಎಲ್ಲಿ ಸತ್ತಿದ್ದಾನೊ? ಎಂದು ಜೋರಾಗಿ ಕೂಗಾಡಿದೆ. ಸೀನಿಯರ್ ಫೋರ್‌ಮೆನ್ ಗೋವಿಂದನಾಯರ್ ಹತ್ತಿರಕ್ಕೆ ಬಂದು 'ಶಿಲಾಸ್ಫೋಟದಿಂದ ಟೆಲಿಫೋನ್ ವೈರುಗಳೆಲ್ಲ ಕಡಿದೋಗಿರಬಹುದು' ಎಂದರು. 93ನೇ ಹಂತದಲ್ಲಿರುವ ಮುಖ್ಯ ಹಿಂಜ್‌ನ ಏರ್‌ಹಾಯಿಸ್ಟ್ (ಕಾರ್ಮಿಕರನ್ನು ಹೊತ್ತು ಸಾಗಿಸುವ ಕಬ್ಬಿಣದ ಲಿಫ್ಟ್) ಕೂಡ ಶಿಲಾಸ್ಫೋಟದಿಂದ ಕಡಿದು ಬಿದ್ದಿತ್ತು. ಏರ್‌ಹಾಯಿಸ್ಟ್ ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲದ ಕಾರಣ 94ನೇ ಹಂತದಲ್ಲಿದ್ದ ನಾವೆಲ್ಲ ಮೇಲಕ್ಕೆ ಏಣಿಗಳ ಮೂಲಕ ಹತ್ತಿಹೋದೆವು. ಅಲ್ಲಿಂದ ಕೆಳಗೆ 100ನೇ ಹಂತದಲ್ಲಿದ್ದವರಿಗೆ ಏಣಿಗಳ ಮೂಲಕ ಹತ್ತಬೇಕೆಂದು ತಿಳಿಸಲಾಯಿತು. ಆ ಹೊತ್ತಿಗೆ ಅರ್ಧದಷ್ಟು ಕೆಲಸ

ಮುಗಿಸಿದ್ದ ಕಾರ್ಮಿಕರು ಬಳಲಿ ಬೆಂಡಾಗಿ ಹೋಗಿದ್ದರು. ಕುಡಿಯಲು ನೀರೂ ಸಹ ಎಲ್ಲಿಯೂ ಇರಲಿಲ್ಲ.

ಎಲ್ಲರೂ 94ನೇ ಹಂತದಲ್ಲಿ ಒಟ್ಟುಗೂಡಿದೆವು. ಅಲ್ಲಿಂದ ಪಕ್ಕದ ಗಣಿಗೆ ನಡೆದು ಹೋಗಲು ಸುರಂಗ ಇರಲಿಲ್ಲ. 94ನೇ ಹಂತದಿಂದ ಮುಖ್ಯ ಆಕ್ಸಿಲರಿ ಹಿಂಜ್ ಶ್ಯಾಫ್ಟ್ ಏಣಿಯ ಮೂಲಕ 93ನೇ ಹಂತಕ್ಕೆ ಏರಿ ಬಂದೆವು. ಅಲ್ಲಿಂದ ಸ್ಟೋಪ್ ಮಾಡಿದ್ದ ಬಿರುಕುಗಳ ಮೂಲಕ ಹಾವುಗಳಂತೆ 92ನೇ ಹಂತಕ್ಕೆ ತೆವಳಿಕೊಡು ಬಂದೆವು. 92ನೇ ಹಂತದ ಎಲ್ಲಾ ಸ್ಟೋಪ್‌ಗಳನ್ನು ಕಲ್ಲು ಮಣ್ಣಿನಿಂದ ಮುಚ್ಚಿದ್ದರಿಂದ ಆಕ್ಸಿಲರಿ ಶ್ಯಾಫ್ಟ್‌ನ ಏಣಿಯನ್ನು ಏರಿ 91ನೇ ಹಂತ ತಲುಪಿದೆವು. ಅಲ್ಲೆಲ್ಲೊ ಶಿಲಾಸ್ಫೋಟ ನಡೆದಿರಬಹುದೆಂದು ಊಹಿಸಿಕೊಂಡೆ. ಕತ್ತಲಲ್ಲಿ ನೀರು ತೊಟ್ಟಿಕ್ಕುವ ಕಬ್ಬಿಣದ ಏಣಿಗಳ ಮೇಲೆ ಒಬ್ಬೊಬ್ಬರೆ ಏರಬೇಕಾಗಿತ್ತು. ಆ ಏಣಿಗಳು ಸರಿಯಾಗಿವೆಯೊ ಇಲ್ಲವೊ ಗೊತ್ತಾಗುತ್ತಿರಲಿಲ್ಲ.

92ನೇ ಹಂತದಿಂದ 91ನೇ ಹಂತಕ್ಕೆ ಏರುವಾಗ ಶಿಫ್ಟ್‌ನಲ್ಲಿದ್ದ ಎಲ್ಲಾ ಕಾರ್ಮಿಕರನ್ನು ಲೆಕ್ಕಹಾಕಿದೆ, ಈ ವಿಷಯ ಅಲ್ಲಿಯವರೆಗೂ ಮರೆತುಹೋಗಿತ್ತು. ಶಿಲಾಸ್ಫೋಟದಿಂದ 82ನೇ ಹಂತದಿಂದ 85ನೇ ಹಂತದವರೆಗೂ ಎಲ್ಲಾ ರೀತಿಯ ಸಂಪರ್ಕಗಳೂ ಮುರಿದು ಬಿದ್ದಿದ್ದವು. ಕೊನೆಗೆ ನಾವೆಲ್ಲ 89ನೇ ಹಂತಕ್ಕೆ ಸುರಕ್ಷಿತವಾಗಿ ತಲುಪಿದೆವು. ಗಣಿ ರಕ್ಷಣಾ ವಿಭಾಗದ ಮುಖ್ಯಸ್ಥ ನಾಗೇಶ್‌ರಾವ್ ಮತ್ತು ಅವರ ಸಿಬ್ಬಂದಿ ನಮಗಾಗಿ ಬಾಗಿಲಲ್ಲೇ ಕಾತುರದಿಂದ ಕಾಯುತ್ತಿದ್ದರು. ಅನಂತರ ಎಲ್ಲರೂ ಮರುದಿನ ಬೆಳಗ್ಗೆ 8 ಗಂಟೆಗೆ ನೆಲದ ಮೇಲಕ್ಕೆ ಬಂದು ಸೂರ್ಯನ ಬೆಳಕು ನೋಡಿದ್ದೆವು.

ಚಾಂಪಿಯನ್ ರೀಫ್ ಗಣಿಯ ಸೂಪರಿಂಟೆಂಡೆಂಟ್ ಪೆಟರ್ ಬೆಸ್ಟ್ ಗಿಪರ್ಡ್ ಶ್ಯಾಫ್ಟ್‌ನ ಕಾರ್ಮಿಕರ ಎದುರಿಗೆ ನನ್ನ ಕೈ ಕುಲಕಿ 'ವೆಲ್ ಡನ್ ಮೈ ಬಾಯ್' ಎಂದರು. ಅಲ್ಲಿಗೆ ನನ್ನ ಉದ್ವೇಗವೆಲ್ಲ ಕಳೆದುಹೋಗಿ ಮರುಜನ್ಮ ಪಡೆದಂತೆ ಮತ್ತೆ ಗಣಿಗಳ ಒಳಗೆ ಮುಂದಿನ ದಿನಗಳಲ್ಲಿ ಎದುರಾಗುವ ತೊಂದರೆಗಳನ್ನು ಎದುರಿಸಲು ತಯಾರಾಗತೊಡಗಿದೆ. ಅನಂತರ ತಿಳಿದ ವಿಷಯವೆಂದರೆ 91 ಮತ್ತು 92ನೇ ಹಂತದ ಶ್ಯಾಫ್ಟ್‌ಗಳು ಶಿಲಾಸ್ಫೋಟದಿಂದ ಮುಚ್ಚಿಹೋಗಿದ್ದವು. ಆ ಹಂತದಲ್ಲಿದ್ದ ಕೇಜ್ ಮುರಿದುಹೋಗಿ ಸಿಂಕ್ ಒಳಕೆ ಬಿದ್ದು ಹೋಗಿರುವುದಾಗಿ ತಿಳಿದುಬಂದಿತು. ಶಿಲಾಸ್ಫೋಟವಾಗಿದ್ದ ಶಿಲೆಗಳನ್ನು ಗುಡಿಸಲು ಆರು ತಿಂಗಳು ಬೇಕಾಯಿತು. ಆ ಶಿಲಾಸ್ಫೋಟವನ್ನು ನೆನಪಿಸಿಕೊಂಡಾಗಲೆಲ್ಲ ಆ ದಿನ 95ನೇ ಹಂತಕ್ಕಿಂತ ಕೆಳಗೆ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನೆಲ್ಲ ಕೆಲಸ ಮುಗಿಸಿ 94ನೇ ಹಂತಕ್ಕೆ ಬರುವಂತೆ ತಿಳಿಸದೇ ಇದ್ದಿದ್ದರೆ ಅವರೆಲ್ಲ ಏನಾಗುತ್ತಿದ್ದರು ಎನ್ನುವ ಯೋಚನೆ ನನ್ನನ್ನು ಪದೇ ಪದೇ ಕಾಡುತ್ತಲೆ ಇತ್ತು.

ಸಿಗ್ನಲ್ ಸಂಪರ್ಕ :

ಕ್ರಿ.ಶ. 1876ರಲ್ಲಿ ಅಲೆಕ್ಸಾಂಡರ್ ಗ್ರಾಹಂಬೆಲ್ ಮೊದಲ ಬಾರಿಗೆ ಟೆಲಿಫೋನ್‌ನಲ್ಲಿ ಮಾತನಾಡಿ ತೋರಿಸಿದರು. ಅದಕ್ಕೂ ಮುಂಚೆ 1861ರಲ್ಲಿ ಫಿಲಿಪ್ ರೈಸ್, ಟೆಲಿಫೋನ್ ಮೂಲಕ ಸಂಗೀತದ ತರಂಗಗಳನ್ನು ಹಾಯಿಸುವುದರಲ್ಲಿ ಸಫಲವಾಗಿದ್ದರು. ಅದೇ ಕಾಲಕ್ಕೆ ಕೆಜಿಎಫ್ ಚಿನ್ನದ ಗಣಿಗಳು ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾಗಲು ಹವಣಿಸುತ್ತಿದ್ದವು. ಟೆಲಿಫೋನ್ ಸಂಪರ್ಕ ನಿಧಾನವಾಗಿ ಪ್ರಪಂಚವನ್ನು ಸುತ್ತಿಕೊಳ್ಳುತ್ತ, ಗಣಿಗಳ ಆಳಕ್ಕೂ ಇಳಿಯತೊಡಗಿದವು. ಆ ಕಾಲಕ್ಕೆ ಮೇಲಿದ್ದವರು ಕೆಳಗಿದ್ದವರನ್ನು ಮಾತನಾಡಿಸಲು ಜೋರಾಗಿ ಕ ೂಗಿಕೊಳ್ಳಬೇಕಾಗಿತ್ತು.

ಶ್ಯಾಫ್ಟ್‌ಗಳು ಇನ್ನೂ ಆಳಕ್ಕೆ ಇಳಿದಾಗ ವೈರುಗಳನ್ನು ಕಟ್ಟಿ ಸಿಗ್ನಲ್ ಕೊಡಲಾಗುತ್ತಿತ್ತು. ಈ ರೀತಿಯ ಸಿಗ್ನಲ್‌ಗಳಿಂದ ಒಂದು ಹಂತದವರೆಗೆ ಕೇಳಿಸುತ್ತಿತ್ತು. ಕೆಲವು ದಿನಗಳ ಕಾಲ ಗಾಳಿ ಮತ್ತು ನೀರು ಹಾಯುವ ಕೊಳಾಯಿಗಳ ಮೇಲೆ ಹೊಡೆಯುವುದರ ಮೂಲಕ ಸಿಗ್ನಲ್‌ಗಳನ್ನು ಕಳುಹಿಸಲಾಗುತ್ತಿತ್ತು. ಅನಂತರ ಪಂಜರಗಳ ಮೂಲಕ ಎಲೆಕ್ಟ್ರಿಕ್ ಸಿಗ್ನಲ್‌ಗಳನ್ನು ಕಳುಹಿಸಲಾಗುತ್ತಿತ್ತು. ಇದು ಅಪಾಯವಾಗಿದ್ದರಿಂದ ಮುಂದಿನ ದಿನಗಳಲ್ಲಿ ಸುರಂಗಗಳಲ್ಲಿ ಮಾತ್ರ ಇದನ್ನು ಉಳಿಸಿಕೊಳ್ಳಲಾಯಿತು.

ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋಗಿ ಬರುವ ಪಂಜರಗಳಿಗೆ ನೀಡುವ ಸಿಗ್ನಲ್‌ಗಳು ಬಹಳ ಮುಖ್ಯವಾದುದರಿಂದ ಪ್ರತಿಯೊಂದು ಹಂತಕ್ಕೂ ಪ್ರತ್ಯೇಕ ಸಿಗ್ನಲ್‌ಗಳನ್ನು ಅಳವಡಿಸಲಾಯಿತು. ಇದಕ್ಕೆ ಹೆಚ್ಚು ವೆಚ್ಚವಾಗುತ್ತಿದ್ದರಿಂದ ಡ್ರಾಪ್ ಸಿಗ್ನಲ್‌ಗಳನ್ನು ಅಳವಡಿಸಲಾಯಿತು. ಅವು ಇಂದಿನ ಆಧುನಿಕ ಲಿಫ್ಟ್‌ಗಳಲ್ಲಿ ಬರುವ ಸಿಗ್ನಲ್‌ಗಳಿಗೆ ಹೋಲಿಕೆಯಾಗುತ್ತಿದ್ದವು. ಆದರೆ ಇದರಿಂದ ಸಿಗ್ನಲ್ ಬೋರ್ಡ್‌ನಲ್ಲಿ ಗೊಂದಲವಾಗುತ್ತಿತ್ತು. ಯಾವುದೇ ಹಂತದಲ್ಲಿ ಸಿಗ್ನಲ್ ಬಂದರೂ ಸಿಗ್ನಲ್ ಬೋರ್ಡ್‌ನಲ್ಲಿ ಗಂಟೆ ಹೊಡೆದುಕೊಳ್ಳುತ್ತಿದ್ದು, ಗಂಟೆ ಹೊಡೆಯುವವರಿಗೆ ಗೊಂದಲವಾಗುತ್ತಿತ್ತು. ಮುಂದಿನ ದಿನಗಳಲ್ಲಿ ಆಡಿಯೋ ವಿಜ್ಯುಯಲ್ ಲಾಕ್ ಔಟ್ ಸಿಗ್ನಲ್ ಪದ್ಧತಿಯನ್ನು ಅಳವಡಿಸಿ ಇದನ್ನು ಕೊನೆಯವರೆಗೂ ಉಳಿಸಿಕೊಳ್ಳಲಾಯಿತು. ಇದರ ಜೊತೆಗೆ ಪಂಜರಗಳು ಪ್ರತಿಯೊಂದು ಹಂತ ತಲುಪಿದಾಗಲೂ ಸಿಗ್ನಲ್ ಲ್ಯಾಂಪ್‌ಗಳನ್ನು ಅಳವಡಿಸಲಾಗಿದ್ದು, ಸೂಚನಾ ಫಲಕಗಳ ಮೇಲೆ ಸಿಗ್ನಲ್ ಕಾಣಿಸಿಕೊಳ್ಳುತ್ತಿತ್ತು. ಒಂದು ಹಂತದಲ್ಲಿ ಪಂಜರ ಚಲಿಸುತ್ತಿದ್ದಾಗ ಇನ್ನೊಂದು ಕಡೆಯಿಂದ ಬರುವ ಸೂಚನೆಗಳನ್ನು ಸಿಗ್ನಲ್ ಪದ್ಧತಿ ಸ್ವಯಂ ನಿರಾಕರಿಸುತ್ತಿತ್ತು. ಮುಂದಿನ ದಿನಗಳಲ್ಲಿ ಬೇರೆ ಬೇರೆ ಹಂತಗಳನ್ನು ಗುರುತಿಸಲು ಬೇರೆ ಬೇರೆ ರೀತಿಯ ಸಿಗ್ನಲ್‌ಗಳು ಬಂದವು. ಗಣಿಗಳ ಒಳಗೆ ಮತ್ತು ಹೊರಗೆ ಪಂಜರಗಳು, ಅದಿರು ಸಾಗಿಸುವ

ಟ್ರ್ಯಾಲಿಗಳು ಮತ್ತು ಯಂತ್ರಗಳು ಚಲಿಸುವಾಗ ಇನ್ನಿತರ ಕೆಲಸಗಳಿಗಾಗಿ ಅನೇಕ ರೀತಿಯ ಸಿಗ್ನಲ್ ಕೋಡ್‌ಗಳನ್ನು ಅಳವಡಿಸಲಾಗಿತ್ತು.[6]

ಗಣಿ ಕಾರ್ಯಾಗಾರ :

ಉರಿಗಾಂ ಅತ್ಯಂತ ಹಳೆ ಕಾರ್ಯಾಗಾರವಾಗಿದ್ದು ಮೊದಲಿಗೆ ಇದರಲ್ಲಿ ಸಣ್ಣಪುಟ್ಟ ರಿಪೇರಿಗಳನ್ನು ಮಾತ್ರ ಮಾಡಲಾಗುತ್ತಿತ್ತು. ಎರಡನೇ ವಿಶ್ವ ಮಹಾಯುದ್ಧದ ನಂತರ ಉರಿಗಾಂ, ಚಾಂಪಿಯನ್ ರೀಫ್, ನಂದಿದುರ್ಗ ಮತ್ತು ಮೈಸೂರು ಗಣಿಗಳ ಕಾರ್ಯಾಗಾರಗಳಲ್ಲಿ ಅನೇಕ ರೀತಿಯ ಯಂತ್ರಗಳನ್ನು ನಿರ್ಮಿಸಲಾಯಿತು. ಮೊದಲಿಗೆ ತಯಾರಿಸಿದ ಪಾರ್ಕಿನ್‌ಸನ್ ಯೂನಿವರ್ಸಲ್ ರೇಡಿಯಲ್ ಡ್ರಿಲ್ಲಿಂಗ್ ಯಂತ್ರಗಳು ನೂರು ವರ್ಷಗಳಾದರೂ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಗಣಿಗಳ ಮೇಲಿರುವ ಉಕ್ಕಿನ ರಾಟೆಗಳು, ಅವುಗಳನ್ನು ಸುತ್ತಿಕೊಳ್ಳುವ ಕೇಬಲುಗಳನ್ನು ಇಲ್ಲಿಯೇ ತಯಾರಿಸಲಾಗಿತ್ತು.

ಕ್ರಿ.ಶ. 1900ರಲ್ಲಿ 5 ಟನ್ನು ತೂಕದ ಮಾರ್ಟರ್ ಪೆಟ್ಟಿಗೆಯನ್ನು ಎರಕ ಹೊಯ್ದು ತಯಾರಿಸಲಾಗಿತ್ತು. ಭಾರಿ ತೂಕದ ಗರಗಸಗಳನ್ನು ನಿರ್ಮಿಸಲಾಗಿತ್ತು. ಕ್ರಿ.ಶ. 1880–1940ರ ಮಧ್ಯ ಎಲೆಕ್ಟ್ರಿಕಲ್ ಕಾರ್ಯಾಗಾರದಲ್ಲಿ ಸಣ್ಣ ಸಲಕರಣೆಗಳಿಂದ ಹಿಡಿದು ಅತಿ ಕ್ಲಿಷ್ಟವಾದ ದೊಡ್ಡ ಯಂತ್ರಗಳನ್ನು ನಿರ್ಮಿಸಲಾಗುತ್ತಿತ್ತು. ಕ್ರಿ.ಶ.1939 ರವರೆಗೆ ಎಲೆಕ್ಟ್ರಿಕಲ್ ಸಲಕರಣೆಗಳಾದ ಕೇಬಲ್ಸ್, ಜಂಕ್‌ಶನ್ ಪೆಟ್ಟಿಗೆಗಳು, ಐಸೊಲೇಟರ್ಸ್, ಸರ್ಕ್ಯೂಟ್ ಬ್ರೇಕರ್ಸ್, ಇನ್‌ಸೂಲೇಟರ್ಸ್, ಸ್ವಿಚ್ಚುಗಳು, ಫ್ಯೂಸ್‌ಗಳು ಮತ್ತು ಸ್ಪಾರ್ಕ್‌ಗಳನ್ನು ಹೊರದೇಶಗಳಿಂದ ತರಿಸಿಕೊಳ್ಳಲಾಗುತ್ತಿತ್ತು.

ಕ್ರಿ.ಶ.1964ರಲ್ಲಿ ಎಲ್ಲಾ ಕಾರ್ಯಾಗಾರಗಳನ್ನು ಕೇಂದ್ರೀಕರಿಸಿ ಎಲ್ಲಾ ರೀತಿಯ ಸಲಕರಣೆಗಳನ್ನು ತಯಾರಿಸಲು ಪ್ರಾರಂಭಿಸಲಾಯಿತು. ಟ್ಯೂಬ್‌ಮಿಲ್‌ಲೈನರ್ಸ್, ಆರ್ಕ್‌ರೈಲ್ ಸಪೋರ್ಟ್‌ರ್ಸ್, ರಾಕ್‌ಡ್ರಿಲ್ ಸಲಕರಣೆಗಳು ಮತ್ತು ಡ್ರಿಲ್‌ರಾಡ್‌ಗಳನ್ನು ತಯಾರಿಸಲಾಯಿತು. ಜೊತೆಗೆ ಟಂಗ್‌ಸ್ಟನ್ ಕಾರ್ಬೈಡ್ ಡ್ರಿಲ್‌ರಾಡ್‌ಗಳನ್ನು ನಿರ್ಮಿಸಲಾಯಿತು. ವರ್ಷಕ್ಕೆ ಸರಾಸರಿ 1 ಲಕ್ಷ ರಾಡುಗಳನ್ನು ಇಲ್ಲಿ ತಯಾರಿಸಲಾಯಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಅನೇಕ ರೀತಿಯ ಯಂತ್ರಗಳನ್ನು ಸರಕಾರ ಇಲ್ಲಿಂದಲೇ ಪಡೆದುಕೊಂಡಿತು. ಒಳ್ಳೆ ಉತ್ಕೃಷ್ಟ ಲೇಥ್‌ಗಳನ್ನು ಇಲ್ಲಿ ತಯಾರಿಸಲಾಗುತ್ತಿತ್ತು.

ಹೊಸ ಟ್ರಯಲ್ ಶ್ಯಾಫ್ಟ್‌ನ್ನು ತೆರೆದಾಗ ಇಂಗ್ಲೆಂಡಿನಿಂದ ಸಕಾಲಕ್ಕೆ ಗಣಿಯ ಹೆಡ್‌ಗಿಯರ್ ಬರಲಿಲ್ಲ. ಆಗ ಸ್ಥಳೀಯ ಕಾರ್ಯಾಗಾರದಲ್ಲಿಯೆ ಟ್ರಯಲ್ ಶ್ಯಾಫ್ಟ್‌ನ ಹೆಡ್‌ಗಿಯರನ್ನು ಅದ್ಭುತವಾಗಿ ನಿರ್ಮಿಸಿ ನಿಲ್ಲಿಸಿಯೆಬಿಟ್ಟರು. ಅನಂತರ ಎಲ್ಲಾ ಗಣಿಗಳಿಗೂ ಹೆಡ್‌ಗಿಯರು ಮತ್ತಿತರ ಸಲಕರಣೆಗಳನ್ನು ಸ್ಥಳೀಯ ಕಾರ್ಯಾಗಾರಗಳಲ್ಲಿಯೆ

ನಿರ್ಮಿಸಲಾಯಿತು. ಕ್ರಿ.ಶ. 1961–62ರಲ್ಲಿ ರಾಕ್‌ಡ್ರಿಲ್ ಸಲಕರಣೆಗಳು, ಗಣಿ ಒಳಗೆ ಉಪಯೋಗಿಸುವ ಪಂಪ್‌ಗಳನ್ನು ಇಲ್ಲಿ ತಯಾರಿಸಲಾಯಿತು.

ಅನಂತರ ಅತಿದೊಡ್ಡದಾದ ಕ್ರಾಂಕ್ ಶ್ಯಾಫ್ಟ್‌ನ್ನು ಇಲ್ಲಿಯೇ ನಿರ್ಮಾಣ ಮಾಡಲಾಯಿತು. ದೇವೆ ಹೆಸರಿನ ಮುಖ್ಯ ಪಂಪ್‌ನ್ನೂ ಸಹ ಇಲ್ಲೇ ರೂಪಿಸಲಾಯಿತು. ಇದು 175 ಎಚ್‌ಪಿ ಇದ್ದು 145 ಮಿ.ಮೀ. ದಪ್ಪದ ಜೊತೆಗೆ 390 ಮಿ.ಮೀ. ಸ್ಟ್ರೋಕ್ ಹೊಂದಿದ್ದು ಒಂದು ನಿಮಿಷಕ್ಕೆ 1000 ಲೀಟರ್ ನೀರನ್ನು 670 ಮೀ. ಎತ್ತರಕ್ಕೆ ಪಂಪ್ ಮಾಡುವ ಶಕ್ತಿಯನ್ನು ಹೊಂದಿತ್ತು.

ಕ್ರಿ.ಶ.1958ರಲ್ಲಿ ನಂದಿದುರ್ಗದ ಲೋಹಸ್ಥಾವರ ಮಿಲ್ಲು ತುಂಬಾ ಹಳೆಯದಾಗಿ ಅದನ್ನು ಪೂರ್ಣವಾಗಿ ಪರಿವರ್ತಿಸಬೇಕಾಗಿತ್ತು. ಆದರೆ ಹಣದ ಕೊರತೆಯಿಂದ ಗಣಿ ಆಡಳಿತ ಮಿಲ್ಲಿನಲ್ಲಿಯೆ ಇತರ ಸಲಕರಣೆಗಳನ್ನು ತಯಾರಿಸಲು ತೀರ್ಮಾನ ತೆಗೆದುಕೊಂಡಿತು. 1961ರ ಹೊತ್ತಿಗೆ ಇಲ್ಲಿನ ಕಾರ್ಯಾಗಾರದಲ್ಲಿಯೇ ಎಲ್ಲಾ ರೀತಿಯ ಉಪಕರಣಗಳನ್ನು ತಯಾರಿಸಿ ಶಿಲೆಗಳನ್ನು ಪುಡಿಮಾಡಿ ಸಾಗಿಸುವ ಯಂತ್ರಗಳನ್ನು ತಯಾರು ಮಾಡಿ ನಿಲ್ಲಿಸಲಾಯಿತು.

ಮುಂದಿನ ದಿನಗಳಲ್ಲಿ ತಯಾರಿಸಿದ ಅನೇಕ ರೀತಿಯ ಉಪಕರಣಗಳನ್ನು ಹಿಂದುಸ್ಥಾನ್ ಕಾಪರ್ ಲಿ. ಮತ್ತು ಹಿಂದುಸ್ಥಾನ್ ಜಿಂಕ್ ಲಿ. ಕಂಪನಿಗಳಿಗೆ ಸರಬರಾಜು ಮಾಡಲಾಯಿತು. 160 ಎಚ್‌ಪಿ ಸಾಮರ್ಥ್ಯದ ಡಬಲ್‌ಡ್ರಮ್ ಏಸಿ ವೈಂಡರ್, ಸುರಂಗಗಳಲ್ಲಿ ಉಪಯೋಗಿಸುವ ಹೆಚ್ಚು ಸಾಮರ್ಥ್ಯದ ಕ್ಯಾಪ್‌ಗಿಯರ್ಸ್, ರಾಮಗಿರಿ ಚಿನ್ನದ ಗಣಿಗಳು ಮತ್ತು ಚಿತ್ರದುರ್ಗ ತಾಮ್ರ ಗಣಿಗಳಿಗೆ ಬೇಕಾದ ಎಲ್ಲಾ ಯಂತ್ರಗಳನ್ನು ಇಲ್ಲೇ ತಯಾರಿಸಲಾಯಿತು. ಯಂತ್ರಗಳು ಪ್ರಪಂಚದ ಯಾವುದೇ ಕಾರ್ಯಾಗಾರಗಳಲ್ಲಿ ತಯಾರಿಸುವುದಕ್ಕಿಂತ ಉತ್ತಮ ಮಟ್ಟದ್ದಾಗಿತ್ತು. ಸುರಂಗಗಳು ಕುಸಿಯದಂತೆ ಉಪಯೋಗಿಸುತ್ತಿದ್ದ ಮರದ ದಿಮ್ಮಿಗಳನ್ನು ಇಲ್ಲಿ ತಯಾರಿಸಿ ಸುರಂಗಗಳಿಗೆ ಸಾಗಿಸಲಾಗುತ್ತಿತ್ತು. ಅನಂತರ ಮರದ ಸ್ಥಳದಲ್ಲಿ ಉಕ್ಕಿನ ಕಂಬಗಳು, ಸಿಮೆಂಟ್ ಗೋಡೆಗಳು ಮತ್ತು ಮರಳು ಆವರಿಸಿಕೊಂಡಿತು. ಮರದ ಕೆಲಸ ನಿಧಾನವಾಗಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡು 1974ರ ಹೊತ್ತಿಗೆ ಕೇವಲ ಒಂದು ಸಾಮಿಲ್ಲು ಮಾತ್ರ ಉಳಿದುಕೊಂಡಿತ್ತು.[7]

ಗಣಿ ನಗರದ ಅಭಿವೃದ್ಧಿ :

ಕ್ರಿ.ಶ.1880ರಲ್ಲಿ ಪ್ರಾರಂಭವಾದ ಚಿನ್ನದ ಗಣಿ ಉದ್ದಿಮೆಯಿಂದ ಕೆಜಿಎಫ್ ನಗರ ಬೆಳೆಯುತ್ತಾ ಹೋಯಿತು. ಆಧುನಿಕ ಬಂಗಲೆಗಳು, ಕ್ಲಬ್ಬುಗಳು, ಶಾಲೆ ಕಾಲೇಜುಗಳು, ಆಸ್ಪತ್ರೆಗಳು, ವಿಶಾಲವಾದ ಆಟದ ಬಯಲುಗಳು ಬಂದವು. ಈಗಲೂ ಹಳೆ ಐರೋಪ್ಯ

ಚಹರೆಯನ್ನು ಉಳಿಸಿಕೊಂಡಿರುವ ಗಣಿ ಪ್ರದೇಶಗಳು ಗತವೈಭವವನ್ನು ಮೆಲಕು ಹಾಕುವಂತೆ ತೋರುತ್ತವೆ. ಚಿನ್ನದ ಗಣಿಗಳಿಂದಲೇ ಬೆಳೆದ ಕೆಜಿಎಫ್ ನಗರ 60ರ ದಶಕದಲ್ಲಿ ಕರ್ನಾಟಕದ 4ನೆಯ ದೊಡ್ಡ ನಗರವಾಗಿತ್ತು. ಗಣಿ ಪ್ರದೇಶದ ಪಕ್ಕದಲ್ಲಿ ಬೆಳೆಯುತ್ತಿದ್ದ ರಾಬರ್ಟ್‌ಸನ್‌ಪೇಟೆಯನ್ನು 1964 ರಲ್ಲಿ ಪ್ರತ್ಯೇಕ ಪೌರಾಡಳಿತ ಸಂಸ್ಥೆಯ ಕೆಳಗೆ ತರಲಾಯಿತು. ಆಧುನಿಕ ಗಣಿ ಉದ್ದಿಮೆ ತಳವೂರುವ ಮುಂಚೆ ಕೆಜಿಎಫ್ ನಗರ ಇರಲಿಲ್ಲ.

ಬ್ರಿಟಿಷರದ್ದು ವೈಭವ ಜೀವನ. ಬಟ್ಲರ್, ಸರ್ವೆಂಟ್, ಮೇಟಿ, ಮಾಲಿ, ಡಾಗ್ ಬಾಯ್, ಆಯಾ, ಸ್ವೀಪರ್ ಹೆಸರಲ್ಲಿ ಪ್ರತಿ ಅಧಿಕಾರಿಯ ನಿವಾಸದಲ್ಲಿ ಕನಿಷ್ಠ ಎಂಟು ಜನ ಕೆಲಸಗಾರರು ಹಗಲು ರಾತ್ರಿ ದುಡಿಯುತ್ತಿದ್ದರು. ವಿದ್ಯುತ್ ಇಲ್ಲದ ಕಾಲದಲ್ಲಿ, ಬಂಗಲೆಯ ಹೊರಗೆ ಕುಳಿತ ಕೂಲಿಯಾಳುಗಳು, ಕಿಟಕಿಗಳ ಮೂಲಕ ದೊಡ್ಡ ಹಗ್ಗಗಳಿಗೆ ಬೀಸಣಿಗೆಗಳನ್ನು ಕಟ್ಟಿ ಒಳಗಡೆ ಸರಸದಲ್ಲಿ ತೊಡಗಿದ್ದ ಬಿಳಿ ಅಧಿಕಾರಿಗಳಿಗೆ ಗಾಳಿ ಬೀಸುತ್ತಿದ್ದರು. ದಿನವಿಡೀ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳು ಸಂಜೆಯಾಗುತ್ತಿದ್ದಂತೆ ಕ್ಲಬ್‌ಹೌಸ್‌ನತ್ತ ಹೆಜ್ಜೆ ಹಾಕುತ್ತಿದ್ದರು. ಸಂಗೀತ, ನೃತ್ಯ ಕಾರ್ಯಕ್ರಮಗಳು ಅಹೋರಾತ್ರಿ ನಡೆಯುತ್ತಿದ್ದವು. ಕ್ಲಬ್‌ಗಳಲ್ಲಿ ಸೆಟಲ್, ಸ್ನೂಕರ್, ಟೇಬಲ್ ಟೆನಿಸ್, ಬಿಲಿಯರ್ಡ್ಸ್ ಮತ್ತಿತರ ಕ್ರೀಡೆಗಳು ನಡೆಯುತ್ತಿದ್ದವು. ಕ್ಲಬ್ ಹೊರಗೆ ಟೆನಿಸ್ ಮತ್ತು ಸ್ಕ್ವ್ಯಾಶ್ ಕೋರ್ಟ್‌ಗಳು ಸಹ ಇದ್ದವು. ನಂದಿದುರ್ಗ್, ಸ್ಕೇಟಿಂಗ್ ರಿಂಗ್, ಚಾಂಪಿಯನ್ ರೀಫ್, ಜಿಮ್‌ಖಾನಾ, ಉರಿಗಾಂ, ಕೆಜಿಎಫ್ ಮತ್ತು ಮೈಸೂರ್ ಹೀಗೆ ಅನೇಕ ಕ್ಲಬ್‌ಗಳಿದ್ದವು. ಕ್ರಿ.ಶ. 1973ರಲ್ಲಿ ಗಣಿ ಪ್ರದೇಶದಲ್ಲಿದ್ದ ಮೂರು ವಿಭಾಗಗಳಾದ ನಂದಿದುರ್ಗ್, ಚಾಂಪಿಯನ್-ಉರಿಗಾಂ ಮತ್ತು ಮೈಸೂರು ಗಣಿ ಪ್ರದೇಶಗಳನ್ನು ಒಂದೇ ಆಡಳಿತದ ಕೆಳಗೆ ತರಲಾಯಿತು. ಸುಮಾರು 12500 ಎಕರೆ ಪ್ರದೇಶದಲ್ಲಿ ಕಾರ್ಮಿಕರು ವಾಸಿಸುತ್ತಿದ್ದ ಒಟ್ಟು 11560 ಮನೆಗಳು ಮತ್ತು 1000 ಕ್ಕಿಂತ ಹೆಚ್ಚು ಬಂಗಲೆಗಳು ಹರಡಿಕೊಂಡಿದ್ದವು. ಜೊತೆಗೆ ಅನೇಕ ಕಂಪನಿ ಕಟ್ಟಡಗಳು, ಗಣಿಗಳು, ಆಸ್ಪತ್ರೆಗಳು, ಶಾಲಾ ಕಾಲೇಜುಗಳು, ಸಮುದಾಯ ಭವನಗಳು, ಗ್ರಂಥಾಲಯಗಳು, ಕ್ಲಬ್ಬುಗಳು, ಆಟದ ಮೈದಾನಗಳು, ಚರ್ಚ್‌ಗಳು, ದೇವಾಲಯಗಳು ಮತ್ತು ಮಸೀದಿಗಳು ಇದ್ದವು.

ಇವುಗಳ ಜೊತೆಗೆ ಪೊಲೀಸ್ ಠಾಣೆಗಳು, ದೂರವಾಣಿ ಕಚೇರಿಗಳು, ಹತ್ತಾರು ಶಾಲಾಕಾಲೇಜುಗಳು, ಸರಕಾರಿ ಕಚೇರಿಗಳು, ಜಿ.ಎಸ್.ಐ, ಮೈನ್ಸ್ ಭದ್ರತಾ ಕಚೇರಿ, ಕಾಸ್ಮಿಕ್ ಕಿರಣ ಸಂಶೋಧನೆಯ ಕಚೇರಿ, ನಗರ ಯೋಜನೆ ಪ್ರಾಧಿಕಾರ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್, ಎಲ್.ಐ.ಸಿ, ಆರ್.ಟಿ.ಓ ಇತ್ಯಾದಿ ಕಚೇರಿಗಳ

ಜೊತೆಗೆ ಅನೇಕ ಹೋಟೆಲುಗಳು, ದಿನಬಳಕೆ ಅಂಗಡಿಗಳು, ತರಕಾರಿ, ಮಾಂಸದ ಅಂಗಡಿಗಳು ಇದ್ದವು.

❖❖❖

ಕಾರ್ಮಿಕರು ಕ್ಯಾಂಪ್ ಮನೆಗಳಲ್ಲಿ ವಾಸ ಮಾಡುತ್ತಿದ್ದು, ಅವು ಬಂಗಲೆಗಳಿಂದ ಬಹಳ ದೂರದಲ್ಲಿ ಆಯಾ ಗಣಿಗಳ ಹತ್ತಿರದಲ್ಲಿದ್ದವು. ಕಾರ್ಮಿಕರ ಮನೆಗಳೆಂದರೆ ಬಿದಿರು ದಟ್ಟಿಗಳು, ಜಿಂಕ್‌ಶೀಟು ಮತ್ತು ಏಸಿಶೀಟುಗಳನ್ನು ಹೊದಿಸಿದ ಮಣ್ಣುಗೋಡೆಗಳ ಮನೆಗಳು. ಗಣಿಗಳು ಸ್ಥಾಪನೆಯಾದ 50–60 ವರ್ಷಗಳ ನಂತರವೂ ಕ್ಯಾಂಪ್ ಮನೆಗಳೆಂದರೆ ಬಿದಿರು ದಟ್ಟಿಗಳಿಂದ ನಿರ್ಮಿಸಿದ ಮನೆಗಳಾಗಿದ್ದವು. ಈ ಏಸಿ ಶೀಟು ಅಥವಾ ಜಿಂಕ್ ಶೀಟು ಹೊದಿಸಿದ ಮನೆಗಳನ್ನು ಕಾಣಬೇಕಾದರೆ ನೂರು ವರ್ಷಗಳು ಕಾಯಬೇಕಾಯಿತು. ಮೇಲಿನ ಎಲ್ಲಾ ರೀತಿಯ ಮನೆಗಳು ಹೆಚ್ಚೆಂದರೆ 10x10 ಮತ್ತು 15x15 ಚದರ ಅಡಿಗಳ ಮನೆಗಳಾಗಿದ್ದವು. ಕಾರ್ಮಿಕರ ಸಂಖ್ಯೆ 34000 ಇದ್ದಾಗಲೂ ಮನೆಗಳ ಸಂಖ್ಯೆ 10,500 ಕ್ಕಿಂತ ಜಾಸ್ತಿ ಆಗಲೇ ಇಲ್ಲ.

ಈ ಮನೆಗಳಿಗೆ ಕ್ರಿ.ಶ.1976ರಲ್ಲಿ ವಿದ್ಯುತ್ ಮತ್ತು ಸಾರ್ವಜನಿಕ ನೀರಿನ ಕೊಳಾಯಿಗಳನ್ನು ಒದಗಿಸಲಾಯಿತು. ಅಂದರೆ ಕ್ರಿ.ಶ.1902ರಲ್ಲಿ ಗಣಿಗಳಿಗೆ ವಿದ್ಯುತ್ ಬಂದರೂ ಹತ್ತಿರದ ಕಾರ್ಮಿಕರ ಕೆಲವು ಕಾಲೋನಿಗಳಿಗೆ ವಿದ್ಯುತ್ ಬಂದಿದ್ದು 64 ವರ್ಷಗಳ ನಂತರ. ಗಣಿಗಳ ಸ್ಥಾಪನೆಯ ಶತವರ್ಷಗಳ ನೆನಪಿಗಾಗಿ ಕ್ರಿ.ಶ.1984–85 ಮಧ್ಯೆ 1000 ಮನೆಗಳನ್ನು ನಿರ್ಮಿಸಿದರೂ ಅವುಗಳಿಗೆ ನೀರಿನ ಕೊಳಾಯಿಗಳು ಮತ್ತು ವಿದ್ಯುತ್ ಸಂಪರ್ಕ ನೀಡಲಿಲ್ಲ. ರಸ್ತೆಗಳಂತೂ ಇರಲೇ ಇಲ್ಲ. ಕಾರ್ಮಿಕರು ವಾಸಿಸುತ್ತಿದ್ದ ನೂರಾರು ಚದರ ಕಿ.ಮೀ. ಪ್ರದೇಶದಲ್ಲಿ ಒಟ್ಟು 55 ಕಿ.ಮೀ ದೂರದ ರಸ್ತೆಗಳಿದ್ದು ಯಾವುದೇ ರೀತಿಯ ರಿಪೇರಿಯೂ ನಡೆದಿರಲಿಲ್ಲ. ಯಾವುದೇ ಗಣಿ ಪ್ರದೇಶದಲ್ಲಿ ಕಾರ್ಮಿಕರನ್ನು ಇಷ್ಟೊಂದು ಹೀನವಾಗಿ ದುಡಿಸಿಕೊಂಡಿದ್ದ ಕಂಪನಿ ಇನ್ನೊಂದಿಲ್ಲ. ದೇಶಕ್ಕೆ 800 ಟನ್ನು ಚಿನ್ನ ನೀಡಿದ ಕಾರ್ಮಿಕರಿಗೆ ಈ ಕಂಪನಿ ನೀಡಿದ ಸವಲತ್ತುಗಳನ್ನು ಕಂಪನಿಯೇ ಕೆಳಗಿನಂತೆ ಪಟ್ಟಿಮಾಡಿದೆ.

ಮನೆಗಳನ್ನು ರಿಪೇರಿ ಮಾಡಿದ ವಿವರಗಳು	ಮನೆಗಳ ಸಂಖ್ಯೆ
ಮನೆಗಳ ರಿಪೇರಿ	67
ರಿಪೇರಿ ಮಾಡಿದ ಏಸಿ ಶೀಟು ಮನೆಗಳು	432
ದಟ್ಟಿ ಮನೆಗಳಿಗೆ ಮಂಗಳೂರು ಹೆಂಚು ಹೊದಿಸಿದ್ದು	50
ದಟ್ಟಿ ಮನೆಗಳಿಗೆ ಏಸಿ ಶೀಟುಗಳು ಹೊದಿಸಿದ್ದು	2896
ಕಾರ್ಮಿಕರ ಮನೆಗಳಿಗೆ ಅಡಿಪಾಯ ಹಾಕಿದ್ದು	1178

ಸಿಮೆಂಟ್ ಚರಂಡಿಗಳ ಒಟ್ಟು ಉದ್ದ	33926 ಮೀ.
ಕಸ ಎಸೆಯುವ ತೊಟ್ಟಿಗಳು	215
ಕ್ವಾರ್ಟ್ರಸ್‌ಗೆ ಪ್ಲಷ್‌ಹೌಟ್ ಲ್ಯಾಟ್ರಿನ್ಸ್ ನಿರ್ಮಿಸಿದ್ದು	304
ಕೊಳವೆ ಬಾವಿಗಳು ತೋಡಿಸಿದ್ದು	16
ರಸ್ತೆಗಳ ರಿಪೇರಿ	8.57 ಕಿ.ಮೀ.

10 ಕಿ.ಮೀ ದೂರದಲ್ಲಿದ್ದ ಬೇತಮಂಗಲ ಕೆರೆಯಿಂದ ಕೆಜಿಎಫ್‌ಗೆ ನೀರು ಸರಬರಾಜಾಗುತ್ತಿತ್ತು. ಈ ಕೆರೆಯ ನೀರನ್ನು ಕೆಜಿಎಫ್‌ಗೆ ಮಾತ್ರ ಕಾದಿರಿಸಲಾಗಿದ್ದು ಕೆರೆಯ ಒಂದು ತೊಟ್ಟು ನೀರನ್ನೂ ಸಹ ಈ ಪ್ರದೇಶದಲ್ಲಿ ಕೃಷಿಗಾಗಿ ಬಿಡುತ್ತಿರಲಿಲ್ಲ. ಅನಂತರ ಗಣಿ ಪ್ರದೇಶದ ಹತ್ತಿರದಲ್ಲಿದ್ದ ರಾಬರ್ಟ್‌ಸನ್‌ಪೇಟೆ ಮತ್ತು ಆಂಡ್ರಸನ್‌ಪೇಟೆ ಪಟ್ಟಣಗಳಿಗೆ ನೀರಿನ ಸಂಪರ್ಕವನ್ನು ಕಲ್ಪಿಸಲಾಯಿತು. ಅನಂತರ ಕ್ರಿ.ಶ.1960ರಲ್ಲಿ ಪ್ರಾರಂಭವಾದ ಭಾರತ್ ಅರ್ಥ್ ಮೂವರ್ಸ್ ಲಿ. (ಬಿಇಎಮ್‌ಎಲ್) ಕಾರ್ಖಾನೆ ಮತ್ತು ಭಾರತ್ ನಗರಕ್ಕೂ ಇದೇ ಕೆರೆಯ ನೀರನ್ನು ಉಪಯೋಗಿಸಿಕೊಳ್ಳಲಾಯಿತು.

ಗಣಿ ಪ್ರದೇಶದಲ್ಲಿ ಒಟ್ಟು 2 ಲಕ್ಷ ಮೀ. ಉದ್ದದ ಹರಿವು ಇದ್ದರೂ ಕೊಳಚೆ ನೀರೆಲ್ಲ ಸಾಮಾನ್ಯವಾಗಿ ಬೀದಿಗಳ ಮಧ್ಯೆಯೆ ಹರಿಯುತ್ತಿತ್ತು. ಇದರಲ್ಲಿ 85 ಸಾವಿರ ಮೀ. ಉದ್ದದ ಚರಂಡಿಗಳು, ಕಚ್ಚಾ ಚರಂಡಿಗಳು; ಇನ್ನು ಕ್ಯಾಂಪ್ ಮನೆಗಳಿಂದ ಹೊರಗೆ ಬೀಳುವ ಕಸದ ವಿಲೇವಾರಿಗೆ ಯಾವ ಸೌಲಭ್ಯವೂ ಇರಲಿಲ್ಲ. ದೂರದೂರದಲ್ಲಿ ಕೆಲವು ಕಸದ ತೊಟ್ಟಿಗಳಿದ್ದು ಅವುಗಳನ್ನು ಸ್ವಚ್ಛ ಮಾಡುವ ವ್ಯವಸ್ಥೆಯೂ ಇರಲಿಲ್ಲ.

ಅನಂತರದ ದಿನಗಳಲ್ಲಿ ಸಾರ್ವಜನಿಕ ಟಾಯ್‌ಲೆಟ್‌ಗಳನ್ನು ಕಟ್ಟಿಸಿದರೂ ಅವುಗಳಿಗೆ ಸರಿಯಾದ ಸೇಪ್ಟಿ ಟ್ಯಾಂಕುಗಳನ್ನು ಅಳವಡಿಸಿರಲಿಲ್ಲ. ಗಣಿಗಳು ಪೂರ್ಣವಾಗಿ ಸ್ಥಗಿತಗೊಳ್ಳುವ ಕಾಲದವರೆಗೂ ಸಾರ್ವಜನಿಕ ಲ್ಯಾಟ್ರಿನ್‌ಗಳಲ್ಲಿ ಬೀಳುತ್ತಿದ್ದ ಕಕ್ಕಸನ್ನು ಆಂಧ್ರದ ಮಾದಿಗ ಜನಾಂಗದವರು ಕೈಗಳಲ್ಲಿ ಇಲ್ಲ ತಗಡು ರೇಖುಗಳಲ್ಲಿ ಬಾಚಿ ಬಕ್ಕೆಟ್‌ಗಳಲ್ಲಿ ತುಂಬಿಸಿಕೊಂಡು ದೂರ ಸಾಗಿಸುತ್ತಿದ್ದರು. ಅತ್ಯಂತ ಆಧುನಿಕರಣಗೊಂಡಿದ್ದ ಈ ಚಿನ್ನದ ಗಣಿಗಳ ಆಡಳಿತ ಆಂಧ್ರದ ಮಾದಿಗ ಜನಾಂಗವನ್ನು ನಡೆಸಿಕೊಂಡ ರೀತಿಯಂತೂ ತೀರ ಅಸಹ್ಯ ಹುಟ್ಟಸುವಂಥದ್ದು. ಇಂತಹ ಹೇಸಿಗೆ ಹುಟ್ಟಿಸುವ ಕೆಲಸಗಳಿಂದ ಈ ದೇಶದ ಬಗ್ಗೆ ಯಾವ ರೀತಿಯ ಗೌರವವು ಉಳಿದಿಲ್ಲ. ಈ ಪ್ರದೇಶದಲ್ಲಿ ಈ ಹೀನ ಕೆಲಸ ನಿಲ್ಲಬೇಕಾದರೆ ಗಣಿಗಳು ಸ್ವತ: ಕಣ್ಣು ಮುಚ್ಚಬೇಕಾಯಿತು.

ಗಣಿ ನಗರಕ್ಕಿಂತ ವಿಶಾಲವಾಗಿ ಬೆಳೆದು ನಿಂತ ಹತ್ತಿರದ ರಾಬರ್ಟ್‌ಸನ್‌ಪೇಟೆ, ಅಂಡ್ರ್‌ಸನ್‌ಪೇಟೆ ಮತ್ತು ಭಾರತ್‌ನಗರದ ಬಡಾವಣೆಗಳ ಜನಸಂಖ್ಯೆ ಹೆಚ್ಚಾದಂತೆ ಬೇತಮಂಗಲದ ಕೆರೆ ನೀರು ಯಾರಿಗೂ ಸಾಕಾಗದೇಹೋಯಿತು. ಕ್ರಿ.ಶ.1978ರಲ್ಲಿ

ಹತ್ತಿರದ ನಾಗಾವರಂ ಕಣಿವೆಯಲ್ಲಿ ಅನೇಕ ಕೊಳವೆ ಬಾವಿಗಳನ್ನು ತೋಡಲಾಯಿತು. ಇನ್ನಿತರ ಹತ್ತಿರದ ಕೆರೆಗಳಲ್ಲಿ, ಕಣಿವೆಗಳಲ್ಲಿ ಮತ್ತು ಬೇತಮಂಗಲದ ಕೆರೆಯಲ್ಲೂ ಅನೇಕ ಕೊಳವೆ ಬಾವಿಗಳನ್ನು ತೋಡಿ ನೀರಿನ ಅಭಾವವನ್ನು ನೀಗಿಸಲು ಪ್ರಯತ್ನಿಸಲಾಯಿತು. ಆದರೆ ಇದಾವುದರಿಂದಲೂ ವಿಶಾಲವಾಗಿ ಬೆಳೆದು ನಿಂತಿದ್ದ ಬಡಾವಣೆಗಳ ದಾಹವನ್ನು ತಣಿಸಲಾಗಲಿಲ್ಲ.

ಗಣಿಗಳು ಈಗ ಪೂರ್ಣವಾಗಿ ಸ್ಥಗಿತಗೊಂಡಿದ್ದು ಕ್ಯಾಂಪುಗಳೆಲ್ಲ ಪಾಳು ಬಿದ್ದುಹೋಗಿವೆ. ವಿಧಿಯಿಲ್ಲದೆ ಅಲ್ಲಲ್ಲಿ ಕೆಲವು ಗುಂಪು ಮನೆಗಳಲ್ಲಿ ಆದಿವಾಸಿಗಳಂತೆ ಉಳಿದುಕೊಂಡಿರುವ ಜನರಿಗೆ ಯಾವುದೇ ಸವಲತ್ತುಗಳು ಇಲ್ಲ. ವಿದ್ಯುತ್ ಸಂಪರ್ಕವನ್ನು ಕಡಿಯಲಾಗಿದೆ. ನೀರಿನ ತೊಂದರೆಯಂತೂ ಇದ್ದೇ ಇದೆ. ಪ್ರಸ್ತುತ ರಾಬರ್ಟ್‌ಸನ್‌ಪೇಟೆ, ಅಂಡ್ರಸನ್‌ಪೇಟೆ ಮತ್ತು ಭಾರತ್ ನಗರಗಳಿಗೂ ನೀರಿಲ್ಲದೆ, ದಿನನಿತ್ಯ ಟ್ಯಾಂಕರುಗಳ ಮೂಲಕ ನೀರು ಸರಬರಾಜಾಗುತ್ತಿದೆ. ಆಳಿನಿಂದ ಅರಸನವರೆಗೆ ಎಲ್ಲರೂ ಒಂದು ಕೊಡಕ್ಕೆ 50 ಪೈಸೆಯಿಂದ 2 ರೂಗಳವರೆಗೆ ಹಣ ತೆತ್ತು ಕುಡಿಯುವ ನೀರನ್ನು ಕೊಂಡುಕೊಳ್ಳುತ್ತಿದ್ದಾರೆ. ಮುಂದಿನ ದಿನಗಳ ಬವಣೆಯನ್ನು ಕಾಲವೇ ನಿರ್ಣಯಿಸುತ್ತದೆ.[8]

ರಾಬರ್ಟ್‌ಸನ್‌ಪೇಟೆ ಮತ್ತು ಆಂಡ್ರ್‌ಸನ್‌ಪೇಟೆ :

ಗಣಿ ಕಾಲೋನಿಗಳಿಗೆ ದೂರದಲ್ಲಿ ಬ್ರಿಟಿಷ್ ಮಿಲಿಟರಿ ಅಧಿಕಾರಿ ಕರ್ನಲ್ ಡೊನಾಲ್ಡ್ ರಾಬರ್ಟ್‌ಸನ್ ಹೆಸರಿನಲ್ಲಿ ಹೊಸ ಬಡಾವಣೆ ಸ್ಥಾಪಿಸಲಾಯಿತು. ಈ ಪೇಟೆ ಬೆಳೆಯಲು ಡೊನಾಲ್ಡ್ ರಾಬರ್ಟ್‌ಸನ್ ಮುಖ್ಯ ಪಾತ್ರ ವಹಿಸಿದ್ದರು. ಮೊದಲಿಗೆ ಇಲ್ಲಿ ಬ್ರಿಟಿಷರು ಮಾತ್ರ ಇದ್ದು, ಅನಂತರ ನಿಧಾನವಾಗಿ ಕೆಲವು ಆಂಗ್ಲೋ-ಇಂಡಿಯನ್ನರು ಸೇರಿಕೊಂಡರು. ಇಲ್ಲಿ ನೆಲೆನಿಂತವರು ಮತ್ತು ಇದರ ಸಂಪರ್ಕ ಪಡೆದವರೆಲ್ಲ ಬ್ರಿಟಿಷ್ ಮತ್ತು ಆಂಗ್ಲೋ-ಇಂಡಿಯನ್ ಜೀವನ ಶೈಲಿಗೆ ಮಾರುಹೋದರು. ಆಂಗ್ಲೋ-ಇಂಡಿಯನ್ನರಿಗೆ ಮೇಲ್ವಿಚಾರಣಾ ಕೆಲಸಗಳನ್ನು ನೀಡಲಾಯಿತು. ಭಾರತೀಯ ಹೆಣ್ಣುಮಕ್ಕಳನ್ನು ಮದುವೆಯಾದ ಬ್ರಿಟಿಷರು ಅವರ ಪತ್ನಿಯರ ಸಂಬಂಧಿಗಳಿಗೆ ಒಂದಷ್ಟು ಕೆಲಸಗಳು ದೊರಕಿಸಿಕೊಟ್ಟರು. 1913ರಲ್ಲಿ ಮೈಸೂರು ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಅವರು ಕೆಜಿಎಫ್‌ಗೆ ಬಂದಾಗ ಒಂದು ರಸ್ತೆಗೆ ಅವರ ಹೆಸರನ್ನು ಇಡಲಾಯಿತು. ರಾಬರ್ಟ್‌ಸನ್‌ಪೇಟೆಯಿಂದ 2 ಕಿ.ಮೀ. ದಕ್ಷಿಣದಲ್ಲಿ ವಿದೇಶಿ ಲಿಕ್ಕರ್ ಮಾರುತ್ತಿದ್ದ ಆಂಡ್ರ್‌ಸನ್ ಎಂಬವರ ಹೆಸರಿನಲ್ಲಿ ಆಂಡ್ರ್‌ಸನ್‌ಪೇಟೆ ಎಂಬ ಹೊಸ ಬಡಾವಣೆ ಸ್ಥಾಪನೆಯಾಯಿತು. ಆಂಡ್ರ್‌ಸನ್ ಈ ಬಡಾವಣೆ ಬೆಳೆಯಲು ಕಾರಣರಾದರು. ಈ ಪ್ರದೇಶದಲ್ಲಿ ಇಂಗ್ಲೆಂಡಿನಿಂದ ತರಿಸುತ್ತಿದ್ದ ಬೀರು ಮಾರುತ್ತಿದ್ದರಿಂದ ಬೀರ್‌ಶ್ಯಾಪ್ ಎಂದೇ ಕರೆಯಲಾಗುತ್ತಿತ್ತು.

ವಿಶ್ವ ಮಹಾಯುದ್ಧಗಳ ನಂತರ ಸುಮಾರು 400 ಬ್ರಿಟಿಷರು ಮತ್ತು ಇಟಾಲಿಯನ್ನರು ಇಲ್ಲಿಗೆ ಬಂದು ಹೊಸ ಬಡಾವಣೆ ರಾಬರ್ಟ್‌ಸನ್‌ಪೇಟೆಯಲ್ಲಿ ಮನೆಗಳನ್ನು ಕಟ್ಟಿಕೊಂಡರು. ಅವರೆಲ್ಲ ಮೊದಲ ಬಾರಿಗೆ ಕಾರುಗಳನ್ನು ಇಟ್ಟುಕೊಂಡು ಈ ಪ್ರದೇಶವನ್ನು ಲಿಟ್ಲ್ ಇಂಗ್ಲೆಂಡನ್ನಾಗಿ ಪರಿವರ್ತಿಸಿದರು. ಇವರಲ್ಲಿ ಗಣಿ ಕಂಪನಿಗಳಿಗೆ ಸೇರಿದವರು ಯಾರೂ ಇರಲಿಲ್ಲ. ಬಹಳ ದಿನಗಳ ಕಾಲ ಈ ಪ್ರದೇಶದಲ್ಲಿ ಬ್ರಿಟಿಷರು ಮತ್ತು ಇಟಾಲಿಯನ್ನರು ಸ್ಥಳೀಯ ಆಂಗ್ಲೋ-ಇಂಡಿಯನ್ನರನ್ನೂ ಸಹ ಹತ್ತಿರಕ್ಕೆ ಸೇರಿಸಿಕೊಳ್ಳಲಿಲ್ಲ. ಇವರ ನಡುವೆ ಅಂತರ ಇದ್ದೇ ಇತ್ತು. ಈ ಬಡಾವಣೆಯಲ್ಲಿ ಅನೇಕ ರೀತಿಯ ಸೌಲಭ್ಯಗಳು ಸ್ಥಾಪನೆಗೊಂಡವು. ಪ್ರತಿ ವರ್ಷವೂ ಕ್ರಿಸ್‌ಮಸ್ ಹಬ್ಬಗಳು ಬಹಳ ವಿಜೃಂಭಣೆಯಿಂದ ನಡೆಯುತ್ತಿದ್ದವು. ಇಂಗ್ಲೆಂಡಿನಿಂದ ತರುತ್ತಿದ್ದ ಎಲ್ಲಾ ರೀತಿಯ ವಿಶೇಷ ವಸ್ತುಗಳನ್ನು ಇಲ್ಲಿನ ಒಂದು ವೇರ್‌ಹೌಸ್‌ನಲ್ಲಿ ಮಾರಲಾಗುತ್ತಿತ್ತು.

ಬಸ್ಸು, ಮೋಟಾರು, ಕಾರು, ಲಾರಿ, ದ್ವಿಚಕ್ರ ವಾಹನಗಳು ನಗರದಲ್ಲಿ ಚಲಿಸತೊಡಗಿದವು. ಕುದುರೆಗಳ ಮೇಲೆ ಓಡಾಡುತ್ತಿದ್ದ ಬ್ರಿಟಿಷರೆಲ್ಲ ಸೈಕಲ್, ದ್ವಿಚಕ್ರ ಮತ್ತು ಮೋಟಾರು ಕಾರುಗಳಲ್ಲಿ ಓಡಾಡತೊಡಗಿದರು. ಕಾರು 500ರೂ, ದ್ವಿಚಕ್ರವಾಹನ 100ರೂ, ಸೈಕಲ್ 20ರೂ, ಗೋಡೆ ಗಡಿಯಾರ 6ರೂ, ಚಿನ್ನದ ಲೇಪವಿರುವ ವೆಸ್ಟರ್ನ್ ಕೈಗಡಿಯಾರ 6ರೂ, ಕೊಡಕ್ ಕ್ಯಾಮರಾ 6ರೂ.ಗೆ ದೊರಕುತ್ತಿದ್ದವು. ಒಂದು ಗ್ಯಾಲನ್ (4.5 ಲೀಟರ್) ಪೆಟ್ರೋಲ್ 12ಆಣೆ. ಚೀನಾ ಸಿರಾಮಿಕ್ಸ್, ಅಮೆರಿಕಾ ರೇಡಿಯೊ, ಇಟಾಲಿ ಸಂಗೀತ ಸಲಕರಣೆಗಳು, ಜರ್ಮನ್ ಎಲೆಕ್ಟ್ರಿಕ್ ಸಾಮಾನುಗಳು ಮತ್ತು ಟೈಲರಿಂಗ್ ಯಂತ್ರಗಳು ನಗರದಲ್ಲಿ ಕಡಿಮೆ ಬೆಲೆಗೆ ದೊರಕುತ್ತಿದ್ದವು. ಆದರೆ ಇವುಗಳೆಲ್ಲವನ್ನು ಹಣವಂತರಾದ ಬ್ರಿಟಿಷರು ಮತ್ತು ಐರೋಪ್ ದೇಶಗಳಿಂದ ಬಂದವರು ಮಾತ್ರ ಉಪಯೋಗಿಸುತ್ತಿದ್ದರು. ಯುದ್ಧದಿಂದ ಹಿಂದಿರುಗಿ ಬಂದಿದ್ದವರು ಮತ್ತು ಕೆಲವು ಹಣವಂತರು ಮಾತ್ರ ಕೆಲವು ದುಬಾರಿ ವಸ್ತುಗಳನ್ನು ಬಳಸುತ್ತಿದ್ದರು.

1920-1940ರ ನಡುವೆ ಸ್ಥಳೀಯರಲ್ಲಿ ರಾಜಕೀಯ ಪ್ರಜ್ಞೆ ಮತ್ತು ವಿದ್ಯಾಭ್ಯಾಸದ ಬಗ್ಗೆ ಸ್ವಲ್ಪ ಆಸಕ್ತಿ ಕಾಣಿಸಿಕೊಂಡಿತು. ಕ್ರಿ.ಶ.1900-1920ರ ನಡುವೆ ರಾಬರ್ಟ್‌ಸನ್‌ಪೇಟೆಯಲ್ಲಿ ಹೊಸ ರಸ್ತೆಗಳು, ಆಸ್ಪತ್ರೆಗಳು, ಶಾಲೆಗಳು, ಯಾತ್ರಿಕರ ಬಂಗಲೆ, ಲೋಕೋಪಯೋಗಿ ಇಲಾಖೆಯ ಅತಿಥಿಗೃಹ, ಮಾರ್ಕೆಟ್ ಕಾಂಪ್ಲೆಕ್ಸ್ ಇನ್ನಿತರ ಸೌಲಭ್ಯಗಳನ್ನು ಮಾಡಲಾಯಿತು. ಲಕ್ಷ್ಮೀಪತಿ ಹಾಲ್ (ಈಗಿನ ಒಲಂಪಿಕ್ ಸಿನಿಮಾ ಹಾಲ್) ನಲ್ಲಿ ಲ್ಯಾಂಟೀನ್ ಬೆಳಕಿನಲ್ಲಿ ಸ್ಲೈಡ್‌ಗಳನ್ನು ತೋರಿಸಲಾಗುತ್ತಿತ್ತು. ಆಗ ಸಿನಿಮಾ ಬಂದಿರಲಿಲ್ಲ. ಅದೇ ಬೆಳಕಿನಲ್ಲಿ ಸಂಗೀತ ಕಚೇರಿಗಳು ಮತ್ತು ನಾಟಕಗಳು ನಡೆಯುತ್ತಿದ್ದವು.

ಈ ಬಡಾವಣೆಗಳಲ್ಲಿ ಕೆಲಸ ಮಾಡುವವರು, ಗಣಿ ಅಧಿಕಾರಿಗಳ ಬಂಗಲೆಗಳಲ್ಲಿ ಮತ್ತು ಬ್ರಿಟಿಷರ ಜೊತೆಗೆ ಕೆಲಸ ಮಾಡುವವರು ಇಂಗ್ಲಿಷ್ ಕಲಿತುಕೊಂಡರು. ಬಟ್ಲರ್ ಕೆಲಸದಲ್ಲಿ ಹೆಚ್ಚು ತಮಿಳರಿದ್ದು ಇವರು ಬ್ರಿಟಿಷರಿಗೆ ತಮಿಳು ಮಾತನಾಡುವುದನ್ನು ಕಲಿಸಿಕೊಟ್ಟರು. ಇವರು ಬ್ರಿಟಿಷ್ ಮತ್ತು ಇಟಾಲಿಯನ್ ಶೈಲಿಯ ಉಪಹಾರ, ಇತರ ತಿನಿಸುಗಳನ್ನು ತಯಾರಿಸುವುದನ್ನು ಕಲಿತುಕೊಂಡಿದ್ದರು. ಚೇಕರಿಯವರು, ಶೂ ಹೊಲಿಯುವವರು, ಫೋಟೋಗ್ರಾಫರ್ಸ್ ಧೋಬಿ, ತರಕಾರಿ ಮಾರುವವರು, ಮಾಲಿಗಳು, ಟೀಬಾಯ್ಸ್, ಕಾವಲುಗಾರರು ಇನ್ನಿತರರು ಬಿಳಿಯರ ಸಂಪರ್ಕದಲ್ಲಿದ್ದರು.

ಬಿಇಎಮ್ಎಲ್ ಕಾರ್ಖಾನೆ ಮತ್ತು ಭಾರತ್‌ನಗರ :

ಕ್ರಿ.ಶ.1967ರಲ್ಲಿ 10 ಕೋಟಿ ರೂಪಾಯಿಗಳ ಶೇರು ಹಣದೊಂದಿಗೆ ಬಿಇಎಂಎಲ್ ಕಂಪನಿ ಪ್ರಾರಂಭಗೊಂಡಿತು. ಎಚ್‌ಎಎಲ್ ಕಂಪನಿಯ ರೈಲ್‌ಕೋಚ್ ವಿಭಾಗದಲ್ಲಿನ ತಾಂತ್ರಿಕತೆ ಮತ್ತು ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವಂತೆ ಸರಕಾರ ಆದೇಶ ನೀಡಿತು. ಎಚ್‌ಎಎಲ್ ಒಂದು ಯೋಜನೆಯನ್ನು ರೂಪಿಸಿ 1963ರಲ್ಲಿ ಸರಕಾರಕ್ಕೆ ನೀಡಿದ ಮೇಲೆ ಸರಕಾರ ಅಮೆರಿಕದ ಮೆ। ವೆಸ್ಟಿಂಗ್ ಹೌಸ್ ಏರ್‌ಬ್ರೈಕ್ ಕಂಪನಿಯ ಜೊತೆಗೆ ಒಪ್ಪಂದ ಮಾಡಿಕೊಂಡಿತು.

ಬಿಇಎಂಎಲ್ ಕಾರ್ಖಾನೆ, ಭಾರತ ಸರಕಾರದ ಸಂಯೋಗದೊಂದಿಗೆ ಮೆ। ವೆಸ್ಟಿಂಗ್ ಹೌಸ್ ಏರ್‌ಬ್ರೈಕ್ ಕಂಪನಿಯ ತಾಂತ್ರಿಕ ಸಹಾಯದಿಂದ ಪ್ರಾರಂಭಗೊಂಡಿತು. ಈ ಕಂಪನಿಯನ್ನು ಇಂಡಿಯನ್ ಕಂಪನಿ ಆ್ಯಕ್ಟ್ 1956ರಂತೆ 1964ರ ಮೇ 11 ರಂದು ನೋಂದಣಿ ಮಾಡಲಾಯಿತು. ಭಾರತ ಸರಕಾರದ ರಕ್ಷಣಾ ಮಂತ್ರಾಲಯದ ಕೆಳಗೆ ಎಚ್‌ಎಎಲ್‌ನ ಉಸ್ತುವಾರಿಯಲ್ಲಿ ಈ ಕಂಪನಿ ದೇಶದಲ್ಲಿಯೆ ಪ್ರಥಮ ಬಾರಿಗೆ ದೊಡ್ಡ ಗಾತ್ರದ ಯಂತ್ರಗಳನ್ನು ತಯಾರಿಸಲು ಪಾರಂಭಿಸಿತು.

ಕೇಂದ್ರ ಸರಕಾರ ಮೊದಲಿಗೆ 19.56 ಕೋಟಿ ರೂ. ಬಿಡುಗಡೆ ಮಾಡಿ 7.65 ಕೋಟಿ ರೂ.ಗಳ ವಿದೇಶಿ ಕರೆನ್ಸಿಯನ್ನು ದೊರಕಿಸಿ ಕೊಟ್ಟಿತು. 1965ರಲ್ಲಿ ಕಾರ್ಖಾನೆಯ ಕಟ್ಟಡಗಳನ್ನು ಕಟ್ಟಲು ಪ್ರಾರಂಭಮಾಡಲಾಯಿತು. ಅದೇ ವರ್ಷದ ಕೊನೆಯಲ್ಲಿ ಹತ್ತಿರದಲ್ಲಿಯೆ ಕಾರ್ಮಿಕರಿಗಾಗಿ ಬಿಇಎಮ್ಎಲ್ ನಗರ ಬಡಾವಣೆಯನ್ನು ಪ್ರಾರಂಭಿಸಲು ಮೈಸೂರು ಸರಕಾರ 1641.5 ಎಕರೆ ಭೂಮಿಯನ್ನು ಉಚಿತವಾಗಿ ನೀಡಿತು. 1966–67ರಲ್ಲಿ ಕಾರ್ಖಾನೆ ಮೊಟ್ಟ ಮೊದಲಿಗೆ 20 ಎಲ್.ಡಬ್ಲ್ಯೂ.ಸ್ಕ್ರಾಪರ್ಸ್ ಮತ್ತು 11 ರಿಯರ್ ಡಂಪರ್ಸ್ ತಯಾರಿಸಿ ಬಿಡುಗಡೆ ಮಾಡಿತು. ಅಲ್ಲಿಂದ ಮುಂದೆ ಮೊಟರೈಸ್ಡ್ ಸ್ಕ್ರಾಪರ್ಸ್, ಮೊಟರೈಸ್ಡ್ ರಿಯರ್ ಡಂಪರ್ಸ್, ಹಾಲ್ಫಾಕ್ ಟ್ರಕ್ ಡಂಪರ್ಸ್, ಭಾಟಮ್

ಡಂಪರ್ಸ್, ಮೋಟಾರ್ ಗ್ರೇಡರ್ಸ್, ಕ್ರಾವ್ಲಲರ್ ಟ್ರ್ಯಾಕ್ಟರ್ಸ್, ಡಿ–120, ಡಿ–80 ಮತ್ತು ಡಿ–40 ರೀತಿಯ ಕ್ರಾವ್ಲರ್ ಟ್ರ್ಯಾಕ್ಟರ್ಸ್ ಇತ್ಯಾದಿ ಯಂತ್ರಗಳನ್ನು ತಯಾರು ಮಾಡುತ್ತಿದೆ.

ಕ್ರಿ.ಶ.1965ರಲ್ಲಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಕಾರ್ಖಾನೆಯ ಹತ್ತಿರವೆ ಸ್ಥಾಪಿಸಿ ವಿಧ್ಯಾರ್ಥಿಗಳಿಗೆ ತರಬೇತಿ ನೀಡಿ ಅವರನ್ನು ಕಾರ್ಖಾನೆಗೆ ಸೇರಿಸಿಕೊಳ್ಳಲಾರಂಭಿಸಿತು. ಗಣಿ ಕಾರ್ಮಿಕರ ಮಕ್ಕಳಿಗೆ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಬಿಇಎಂಎಲ್ ಕಾರ್ಖಾನೆಯಲ್ಲಿ ಅವಕಾಶಗಳು ದೊರಕಿದವು. ಸುಮಾರು 20 ವರ್ಷಗಳು ಕಾಲ ತರಬೇತಿ ಪಡೆದ ವಿದ್ಯಾರ್ಥಿಗಳು ನಿರಂತರವಾಗಿ ಇದೇ ಕಾರ್ಖಾನೆಯಲ್ಲಿ ಸೇರಿಕೊಂಡರು. ಅನಂತರ ಕರ್ನಾಟಕದ ಮೂಲೆ ಮೂಲೆಗಳಿಂದಲೂ ಮತ್ತು ಪಕ್ಕದ ರಾಜ್ಯಗಳಿಂದ ಇಲ್ಲಿಗೆ ಬಂದ ವಿದ್ಯಾರ್ಥಿಗಳು ಕಾರ್ಖಾನೆಯಲ್ಲಿ ಸೇರಿಕೊಳ್ಳತೊಡಗಿದರು. 1990ರ ನಂತರ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಆ ಅದೃಷ್ಟ ಇಲ್ಲದೆ ಹೋಯಿತು, ಏಕೆಂದರೆ ಹೊಸ ಕಾರ್ಮಿಕರನ್ನು ನೇಮಿಸಿಕೊಳ್ಳುವುದನ್ನು ಕಾರ್ಖಾನೆ ನಿಲ್ಲಿಸಿತು. ಪ್ರಸ್ತುತ ಬಿಇಎಂಎಲ್ ಕಾರ್ಖಾನೆ ಚನ್ನಾಗಿ ನಡೆಯುತ್ತಿದ್ದು ಸುಮಾರು 10,000 ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ.

✦

1. History of the KGF Hospital from its inception - Dr. A.M.S. Gowda & B.V. Shenoi :Centenary souvenir 1980, BGML, KGF 1/1.History of the KGF Hospital from its inception - Dr. A.M.S. Gowda & B.V. Shenoi Centenary souvenir 1980, BGML, KGF
2. Resume in Mines - M.H.R. Rao : Centenary souvenir 1980, BGML, KGF
3. Electricity supply to KGF - A brief Review from the beginings to the present to the present day - A.M. Menon:Centenary souvenir 1980, BGML, KGF.
4. R.Krishnamurthy,BGML, A review of rock mechanism research on the problems of stability of underground workings in KGF,Vol.2, Centenary souvenir 1980, BGML, KGF
5. A night in nineteen forty nine - A. Satyapal :Centenary souvenir 1980, BGML,KGF.
6. Signalling equipment for use in Mines - B.V. Krinshnaji Rao : Centenary souvenir 1980, BGML, KGF.
7. The workshops of Bharat Gold Mines Lmt - G.V. Raghavan :Centenary souvenir, BGML, KGF, 1980.
8. Centenary souvenir, BGML, KGF, 1980.

ಅಧ್ಯಾಯ–10

ಕಂಪನಿ ನಷ್ಟದ ಹಾದಿಯಲ್ಲಿ

ಗಣಿ ಕಂಪನಿಗಳು ನಷ್ಟ ಅನುಭವಿಸಿದ ವಿವರಗಳನ್ನು ನೀಡಲಾಗಿದೆ. ಕೇಂದ್ರ ಸರಕಾರ ನೇಮಿಸಿದ ಕೆ.ಎಸ್.ಆರ್.ಚಾರಿ ಅವರು ನೀಡಿದ ವರದಿಯ ವಿವರಗಳನ್ನು ಕೊಡಲಾಗಿದೆ. ಜೊತೆಗೆ ಪುನರ್ವಸತಿ:ಕೆಲವು ಯೋಜನೆಗಳು, ಸ್ವಯಂ ನಿವೃತ್ತಿ–ಪರಿಹಾರ ಮತ್ತು ಉಳಿದ ಸಮಸ್ಯೆಗಳ ಬಗ್ಗೆ ವಿಶ್ಲೇಷಣೆಯನ್ನು ದಾಖಲಿಸಲಾಗಿದೆ.

ವಿಶ್ವ ಮಹಾಯುದ್ಧಗಳ ನಂತರ ಗಣಿಗಳು ಹಿನ್ನೋಟದ ದಾರಿ ಹಿಡಿದಿದ್ದವು. ಗಣಿಗಳು ಆಳಕ್ಕೆ ಇಳಿದಂತೆ 1960 ರಿಂದ ಸಣ್ಣ ಪ್ರಮಾಣದಲ್ಲಿ ನಷ್ಟ ಪ್ರಾರಂಭವಾಯಿತು. ಗುತ್ತಿಗೆ ಕೆಲಸಗಾರರನ್ನು ಕಡಿಮೆ ಮಾಡುತ್ತ ಖಾಯಂ ಕೆಲಸಗಾರರನ್ನು ನೇಮಕ ಮಾಡಿಕೊಳ್ಳುತ್ತಿದ್ದಂತೆ ಚಿನ್ನದ ಉತ್ಪಾದನೆಯೂ ಕಡಿಮೆಯಾಗತೊಡಗಿತು. 1947ರ ನಂತರ ಗುತ್ತಿಗೆ ಕಾರ್ಮಿಕರಿಲ್ಲದ ಕಂಪನಿಗಳು ನಷ್ಟ ಅನುಭವಿಸತೊಡಗಿದವು. ಗುತ್ತಿಗೆ ಕಾರ್ಮಿಕರನ್ನು ಹಿಂಡಿ ಹಿಪ್ಪೆ ಮಾಡಿದ್ದ ಕಂಪನಿಗಳು ಅನಂತರ ಎಂದಿಗೂ ಚೇತರಿಸಿಕೊಳ್ಳಲೇ ಇಲ್ಲ. ಮೇಲಿನ ಕಾರಣಗಳ ಜೊತೆಗೆ ನಷ್ಟಕ್ಕೆ ಇನ್ನೊಂದು ಮುಖ್ಯ ಕಾರಣ ಆಡಳಿತದ ಒಳಗಿದ್ದ ಭ್ರಷ್ಟತೆ. ಅಧಿಕಾರಿಗಳ ಭ್ರಷ್ಟತೆಯ ಬಗ್ಗೆ ಪ್ರಶ್ನಿಸಿದಾಗಲೆಲ್ಲ ಆಡಳಿತ ಮಂಡಳಿ ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸುವ ನಿರ್ಧಾರವನ್ನು ತೆಗೆದುಕೊಂಡುಬಿಡುತ್ತಿತ್ತು. ಆಡಳಿತದ ನಿರ್ದೇಶಕರೆಲ್ಲಾ ಸೇರಿ ಒಂದು ಸಲಹಾ ವಿಭಾಗವನ್ನು ತೆರೆದು ಉತ್ತರವನ್ನು ಅವರಿಂದಲೇ ಪಡೆಯಿರಿ ಎಂದು

ಕೈತೊಳೆದುಕೊಂಡುಬಿಟ್ಟರು. ಅಂದರೆ ಬ್ರಿಟಿಷರ ಕೈಯಿಂದ ಆಡಳಿತವನ್ನು ಪಡೆದುಕೊಂಡ ಇಂಡಿಯನ್ ಅಧಿಕಾರಿಗಳು ಗಣಿಗಳು ಅನುಭವಿಸುತ್ತಿದ್ದ ನಷ್ಟವನ್ನು ನಿವಾರಿಸಲು ಯಾವ ರೀತಿಯ ಪ್ರಯತ್ನಗಳನ್ನೂ ಮಾಡಲಿಲ್ಲ.

ಕೆ.ಎಸ್.ಆರ್. ಚಾರಿಯವರ ವರದಿ :

ನಿರಂತರವಾಗಿ ನಷ್ಟವಾಗುತ್ತಿದ್ದ ಕಂಪನಿಯ ಬಗ್ಗೆ ವರದಿಯನ್ನು ಒಪ್ಪಿಸುವಂತೆ ಸರಕಾರ 1984ರಲ್ಲಿ ಕೆ.ಎಸ್.ಆರ್.ಚಾರಿ ಅವರನ್ನು ನೇಮಿಸಿತು. ಅದಕ್ಕೆ ಮುಂಚೆಯೆ 1981 ರಿಂದಲೇ ಕಂಪನಿ ಅಪರಿಣಿತ ಕಾರ್ಮಿಕರ ನೇಮಕವನ್ನು ಪೂರ್ಣವಾಗಿ ನಿಲ್ಲಿಸಿತ್ತು. ಹೆಚ್ಚಿದ ಸಂಬಳ ಮತ್ತು ತುಟ್ಟಿಭತ್ಯ, ವಿದ್ಯುತ್ ವೆಚ್ಚ, ಗಣಿಗಳಲ್ಲಿ ಉತ್ಪತ್ತಿಯಾಗುತ್ತಿದ್ದ ಕಡಿಮೆ ಚಿನ್ನದಿಂದ ಕಂಪನಿ ನಷ್ಟ ಅನುಭವಿಸಿತ್ತು. ಚಾರಿಯವರು 17.4.1985 ರಂದು ಮೊದಲಿಗೆ ಚಾಂಪಿಯನ್ ಮತ್ತು ನಂದಿದುರ್ಗ ಗಣಿಗಳು, ಅನಂತರ ಮಿಲ್ಲುಗಳು, ಯಾಪಮಾನ ಮತ್ತು ಚಿಗುರುಗುಂಟ ಗಣಿಗಳ ಆಡಳಿತ ಕಚೇರಿಗಳು, ಸಮೀಕ್ಷೆ ಕಚೇರಿ, ಶಿಲಾಸ್ಫೋಟ ಸಂಶೋಧನಾ ಕೇಂದ್ರ, ಗೋದಾಮುಗಳು, ಆಸ್ಪತ್ರೆ ಎಲ್ಲವನ್ನೂ ವೀಕ್ಷಿಸಿದರು. ಕರಪತ್ರಗಳ ಮೂಲಕ ಕಾರ್ಮಿಕರು ಮತ್ತು ಸಾರ್ವಜನಿಕರಿಂದ ವಿವರಗಳನ್ನು ಕೇಳಲಾಯಿತು. ಕಾರ್ಮಿಕ ಸಂಘಟನೆಗಳು ಮತ್ತು ಅಧಿಕಾರಿಗಳಿಂದಲೂ ಗಣಿಗಳನ್ನು ಲಾಭದಾಯಕವಾಗಿ ನಡೆಸುವುದರ ಬಗ್ಗೆ ಸಲಹೆಗಳನ್ನು ಕೇಳಲಾಯಿತು. ಅನಂತರ ಎಲ್ಲವನ್ನೂ ದೆಹಲಿಯಲ್ಲಿ ಚರ್ಚಿಸಲಾಯಿತು.

ಕೇಂದ್ರ ಸರಕಾರ ಕೆಜಿಎಫ್ ಗಣಿಗಳ ಬೆಳವಣಿಗೆಗೆ ಮಾರಕವಾಗಿ ಕಲಸ ಮಾಡಿತು ಎನ್ನುವುದು ಇತಿಹಾಸದ ವ್ಯಂಗ್ಯ. 1980–1981ರಲ್ಲಿ ಚಿನ್ನದ ಬೆಲೆ ಶಿಖರಕ್ಕೆ ಏರಿದಾಗಲೂ ಬಿಜಿಎಮ್ಎಲ್ ಕಂಪನಿ ಎಚ್ಚೆತ್ತುಕೊಳ್ಳಲಿಲ್ಲ. ಆಗ ಅದು ತನ್ನ ತಪ್ಪುಗಳನ್ನು ತಿದ್ದಿಕೊಂಡು ಗಣಿಗಳನ್ನು ಆಧುನೀಕರಣ ಮಾಡಬೇಕಾಗಿತ್ತು. 'ಹಾವು ಸಾಯಬಾರದು ಕೋಲೂ ಮುರಿಯಬಾರದು' ಎಂಬ ಕೇಂದ್ರ ಸರಕಾರದ ನೀತಿಯಿಂದಾಗಿ ಕಂಪನಿಗಳು ನಷ್ಟದಲ್ಲೇ ಸಾಗುತ್ತಿದ್ದವು. ವರ್ಷ ವರ್ಷವೂ ನಷ್ಟವನ್ನು ಅನುಭವಿಸುತ್ತಿದ್ದುದರಿಂದ ಕಂಪನಿಗಳು, ಸರಕಾರ ಮತ್ತು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನಿಂದ ದೊರಕುತ್ತಿದ್ದ ಸಹಕಾರ ಮತ್ತು ಸಹಾಯವನ್ನು ಕಳೆದುಕೊಳ್ಳಬೇಕಾಯಿತು. ಇದರಿಂದ ಮುಜುಗರ ಅನುಭವಿಸುತ್ತಿದ್ದ ಕಂಪನಿ, ಸರಕಾರ ಮತ್ತು ಮ್ಯಾನೇಜ್‌ಮೆಂಟನ್ನು ಯಾವುದೇ ಒತ್ತಾಯ ಮಾಡದೇ ಸುಮ್ಮನೆ ನೋಡುತ್ತಾ ಕುಳಿತುಕೊಂಡಿತು.

ಇದರ ಜೊತೆಗೆ ಗಣಿಗಳಿಂದ ಚಿನ್ನದ ಕಳ್ಳತನ ಹೆಚ್ಚಾಗಿ, ಸರಕಾರವು ಕೊನೆಗೆ ನಷ್ಟದಿಂದ ರೋಸಿಹೋಯಿತು. ಆದರೂ ಕೆಜಿಎಫ್‌ನಲ್ಲಿ ಉತ್ಪತ್ತಿಯಾಗುತ್ತಿದ್ದ ಚಿನ್ನವನ್ನು ಮಾರುಕಟ್ಟೆಯ ಬೆಲೆಗೆ ಮಾರಲು ಕೇಂದ್ರ ಸರಕಾರ ಎಂದಿಗೂ ಅವಕಾಶ ನೀಡಲೇ

ಇಲ್ಲ. ಜೊತೆಗೆ ವರ್ಷ ವರ್ಷವೂ ನಷ್ಟವನ್ನು ತುಂಬುತ್ತಲೆ, ಶಪಿಸುತ್ತಲೆ ಇತ್ತು. ಕರ್ನಾಟಕದ ಇನ್ನೊಂದು ಮೂಲೆಯಲ್ಲಿದ್ದ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಗಳು ಕೇಂದ್ರ ಸರಕಾರದ ಈ ದ್ವಂದ್ವ ನೀತಿಯಿಂದ ತಪ್ಪಿಸಿಕೊಂಡು ಉತ್ಪಾದಿಸಿದ ಚಿನ್ನವನ್ನು ಮಾರುಕಟ್ಟೆಯ ಬೆಲೆಗೆ ಮಾರಿಕೊಳ್ಳುತ್ತಿದ್ದವು. ಈ ಗಣಿಗಳು ಇಂದಿಗೂ ಲಾಭದಾಯಕವಾಗಿ ನಡೆಯುತ್ತಿರುವ ದೇಶದ ಏಕೈಕ ಚಿನ್ನದ ಗಣಿಗಳಾಗಿವೆ. ಈ ಗಣಿಗಳು ವಿದ್ಯುತ್ ಸಂಪರ್ಕ ಪಡೆದಿದ್ದು ಕೆಜಿಎಫ್ ಗಣಿಗಳಿಗೆ ಬಂದ ಎಷ್ಟೋ ದಶಕಗಳ ನಂತರ. ಈ ಕಾರಣದಿಂದ ಹಟ್ಟಿ ಗಣಿಗಳು ಇನ್ನೂ 50 ವರ್ಷಗಳಾದರೂ ನಡೆಯುತ್ತವೆ. ಕೆಜಿಎಫ್ ಗಣಿಗಳಿಗೆ 1902ರಲ್ಲಿಯೆ ವಿದ್ಯುತ್ ಬಂದು ಆಧುನಿಕರಣಗೊಂಡಿದ್ದರ ಪರಿಣಾಮ ಸಾವಿರಾರು ಕಾರ್ಮಿಕರು ಹಗಲೂ ರಾತ್ರಿ ದುಡಿದು ಚಿನ್ನದ ನಿಕ್ಷೇಪವನ್ನು ಬಹುಬೇಗನೇ ಬರಿದು ಮಾಡಿದ್ದರು.

1985ರ ಹೊತ್ತಿಗೆ 1 ಟನ್ನು ಅದಿರನ್ನು ಸಂಸ್ಕರಿಸಲು 921ರೂ. ಖರ್ಚು ತಗಲುತ್ತಿತ್ತು. ಅಂದರೆ ಉತ್ಪಾದನೆಯಾಗುತ್ತಿದ್ದ ಚಿನ್ನದ ಬೆಲೆಗಿಂತ ಎರಡು ಪಟ್ಟು ಹಣ ಖರ್ಚಾಗುತ್ತಿತ್ತು. 80ರ ದಶಕದಲ್ಲಿ ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸಿ ಹೊಸ ನೇಮಕಾತಿಗಳನ್ನು ಪೂರ್ಣವಾಗಿ ನಿಲ್ಲಿಸಲಾಯಿತು. 1984–85ರಲ್ಲಿ ಸುಮಾರು 3500–4000 ಕಾರ್ಮಿಕರು ಅಗತ್ಯಕ್ಕಿಂತ ಹೆಚ್ಚಾಗಿದ್ದರು ಎಂದು ಲೆಕ್ಕಹಾಕಲಾಯಿತು. ಪ್ರತಿ ವರ್ಷ ನಿವೃತ್ತಿ ಹೊಂದುವವರು ಮತ್ತು ಸಾಯುವವರ ಸಂಖ್ಯೆ ವರ್ಷಕ್ಕೆ ಸರಾಸರಿ 700 ಇರುತ್ತಿತ್ತು. ಸ್ವಯಂ ನಿವೃತ್ತಿಯನ್ನು ಘೋಷಿಸಿದ 3–4 ವರ್ಷಗಳಲ್ಲಿ 1000 ಕಾರ್ಮಿಕರನ್ನು ಹೊರಕ್ಕೆ ಕಳುಹಿಸುವ ಲೆಕ್ಕ ಹಾಕಲಾಯಿತು. ಇದೇ ಸಮಯದಲ್ಲಿ ಮೈಸೂರು ಗಣಿಗಳನ್ನು ಮುಚ್ಚಿದ್ದರಿಂದ ಎಲ್ಲಾ ಲೆಕ್ಕಾಚಾರವು ತಲೆಕೆಳಗಾಯಿತು. ಆ ಗಣಿಗಳಲ್ಲಿದ್ದ 1400 ಕಾರ್ಮಿಕರು ಮತ್ತು ಅಧಿಕಾರಿಗಳನ್ನು ಉಳಿದ ಎರಡು ಗಣಿಗಳಲ್ಲಿ ಸೇರಿಸಿಕೊಳ್ಳಲಾಯಿತು. ನಿವೃತ್ತಿ ಪಡೆಯುವವರಿಗೂ ಸರಕಾರ ಹಣ ನೀಡಬೇಕಾಗಿತ್ತು.

ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಕಾರ್ಮಿಕರನ್ನು, ಅವರ ಕುಟುಂಬ ಸದಸ್ಯರ ಆರೋಗ್ಯವನ್ನು ಕಾಪಾಡಿಕೊಂಡುಬಂದಿದ್ದ ಗಣಿ ಆಸ್ಪತ್ರೆಯನ್ನು ಇಎಸ್ಐ ಕೆಳಗೆ ಸೇರಿಸುವುದರಿಂದ ನಷ್ಟದ ಸ್ವಲ್ಪ ಭಾಗವನ್ನು ತಪ್ಪಿಸಿಕೊಳ್ಳಬಹುದು ಎನ್ನುವ ಕಂಪನಿ ಲೆಕ್ಕಾಚಾರ ಕೈಗೂಡಲಿಲ್ಲ. ಮೈಸೂರು ಗಣಿಗಳನ್ನು ಮುಚ್ಚಿದ್ದರಿಂದ ಉಳಿದ ಎರಡು ಗಣಿಗಳ ಆಡಳಿತ ಮೈಸೂರು ಗಣಿ ಕಾಲೋನಿಗಳ ಉಸ್ತುವಾರಿಯನ್ನು ನೋಡಿಕೊಳ್ಳುವಂತೆ ಕೇಳಿಕೊಳ್ಳಲಾಯಿತು. ನಗರಾಭಿವೃದ್ಧಿ ಆಡಳಿತ, ಮುದ್ರಣ ವಿಭಾಗ, ಶಾಲೆಗಳು, ಕ್ಯಾಂಟೀನ್, ಹಾಲಿನ ಡೈರಿ, ನ್ಯಾಯಬೆಲೆ ಅಂಗಡಿಗಳು ಎಲ್ಲವನ್ನೂ ಅವರವರೆ ನಡೆಸಬೇಕು, ಗಣಿ ಕೋ–ಆಪರೇಟಿವ್ ಸಂಸ್ಥೆಗಳು ನಡೆಸಿದರೆ ನಷ್ಟ ಕಡಿಮೆಯಾಗುತ್ತದೆ ಎಂದು ಚಾರಿಯವರು ತಮ್ಮ ವರದಿಯಲ್ಲಿ ಹೇಳಿದರು. ಹಾಗೆ

ಕೆಲವು ಅಧಿಕಾರಿಗಳನ್ನು ಬೇರೆ ಕಂಪನಿಗಳಿಗೆ ಕಳುಹಿಸಿದರೆ ಹೇಗೆ ಎಂಬುದನ್ನೂ ವರದಿಯಲ್ಲಿ ಪ್ರಸ್ತಾಪಿಸಿದ್ದರು.

ಚಾಂಪಿಯನ್ ಗಣಿಗಳಲ್ಲಿ ಆಳವಾದ ಡ್ರಿಲ್ಲಿಂಗ್ ಮಾಡಿ ಹೊಸ ಅದಿರನ್ನು ಕಂಡುಹಿಡಿಯಲು ಪ್ರಯತ್ನಿಸಲಾಯಿತು. ಹೆಚ್ಚು ಚಿನ್ನ ಉತ್ಪತ್ತಿಯಾಗುತ್ತಿದ್ದ ಕಾಲದಲ್ಲಿ ಕಡಿಮೆ ಚಿನ್ನ ಇದೆ ಎಂದು ಬಿಟ್ಟಿದ್ದ ಮತ್ತು ಹೆಚ್ಚು ಆಳದಲ್ಲಿದ್ದ ಚಿನ್ನದ ರೀಫುಗಳನ್ನು ತೆಗೆಯಲು ಪ್ರಯತ್ನಿಸಲಾಯಿತು. ಚಿನ್ನದ ಉತ್ಪಾದನೆಯನ್ನು ಹೆಚ್ಚಿಸಿ ನಷ್ಟವನ್ನು ಕಡಿಮೆ ಮಾಡಬೇಕಾಗಿತ್ತು. ನಂದಿದುರ್ಗದ ಗೊಲ್ಕೊಂಡ ಮತ್ತು ಹೆನ್ರಿ ಶ್ಯಾಫ್ಟ್ ಗಣಿಗಳಲ್ಲಿ ದಿನಕ್ಕೆ 500 ಟನ್ನು ಉತ್ಪಾದನೆ ಇದ್ದುದ್ದನ್ನು 1500 ಟನ್ನುಗಳಿಗೆ ಏರಿಸಲು ಯೋಚಿಸಲಾಯಿತು. ಆದರೆ ಅದಕ್ಕೆ ಗಣಿಗಳನ್ನು ಇನ್ನಷ್ಟು ಆಳ ಮಾಡಬೇಕಾಗಿತ್ತು. ಈ ಯೋಜನೆಗೆ 2ಕೋಟಿ ಹಣ ಬೇಕೆಂದು ಕಂಪನಿ ಬೇಡಿಕೆ ಇಟ್ಟಿತು. ಆದರೆ ಸರಕಾರ ಈ ಯೋಜನೆಗೆ ಹಣ ಬಿಡುಗಡೆ ಮಾಡಲಿಲ್ಲ.

1972ರಲ್ಲಿ ಇಂಡಿಯನ್ ಸ್ಕೂಲ್ ಆಫ್ ಮೈನ್ಸ್‌ನಿಂದ ಬಂದ ಪ್ರೊ.ಕೆ.ವಿ. ಸುಬ್ರಮಣ್ಯಂ ಮೇನೆಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡ ಮೇಲೆ ಮೊದಲ ಬಾರಿಗೆ ಗಣಿ ಕಾರ್ಮಿಕರಿಗೆ ಸಂಬಳ ಎಂದರೆ ಏನು ಎನ್ನುವುದು ತಿಳಿಯಿತು. ಕೇಂದ್ರ ಸರಕಾರದ ಸಹಾಯದಿಂದ ಹೊಸದಾಗಿ ಸಂಬಳ ನಿಗದಿಪಡಿಸಲಾಯಿತು. ಕಾರ್ಮಿಕರಿಗೆ ಕ್ಯಾಂಟೀನ್ ಸೌಕರ್ಯ ನೀಡಲಾಯಿತು. 1981–1994ರ ಮಧ್ಯೆ ವಿಶ್ವಬ್ಯಾಂಕ್ ನೀಡಿದ 93 ಕೋಟಿ ರೂ. ಸಹಾಯದಿಂದ ಗಣಿಗಳನ್ನು ಅಭಿವೃದ್ಧಿಗೊಳಿಸಲಾಯಿತು. ಇದೇ ಸಮಯದಲ್ಲಿ ಹತ್ತಿರದ ಚಿಗುರುಕುಂಟ ಮತ್ತು ಮಲ್ಲಪ್ಪಕೊಂಡ ಗಣಿಗಳನ್ನು ತೆರೆಯಲಾಯಿತು.

❖❖❖

ಫೆಬ್ರವರಿ 21, 2004 ರಂದು ದಕ್ಷಿಣ ಭಾರತ ಮಾನವ ಶಿಕ್ಷಣ ಮತ್ತು ಹಕ್ಕುಗಳ ಸೆಲ್‌ನಿಂದ ಕೆಜಿಎಫ್‌ನಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಕೇಳಲು ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಎಚ್.ಸುರೇಶ್ ನ್ಯಾಯಾಧೀಶರು (ನಿವೃತ್ತ), ಡಾ.ಜೀವನ್ ಕುಮಾರ್, ಶ್ರೀಮತಿ ಗೀತಾ ಮೆನನ್ ಮತ್ತು ನ್ಯಾಯವಾದಿ ಮನೋಹರ್ ವಸಿಯಾ ಅವರಿದ್ದರು. ಈ ಸಭೆ ಜಿಲ್ಲೆಯ ಮಾನವ ಹಕ್ಕುಗಳ ಕೇಂದ್ರ ಸಮಿತಿಯ ಆಹ್ವಾನದ ಮೇರೆಗೆ 40 ಜನರಿಂದ ವರದಿಯನ್ನು ಸಂಗ್ರಮಿಸಿತ್ತು.

ವರದಿಯಲ್ಲಿನ ಕೆಲವು ಅಂಶಗಳಿಂದ ಸರಕಾರ ಮತ್ತು ಕಂಪನಿ ಮಾನವ ಹಕ್ಕುಗಳನ್ನು ಪೂರ್ಣವಾಗಿ ನಿರಾಕರಿಸಿದ್ದ ನಿರ್ದೇಶನಗಳು ಕಂಡುಬಂದಿದ್ದವು. ವರದಿಯ ಸಾರಾಂಶ ಹೀಗಿದೆ: ಗಣಿಗಳನ್ನು ಏಕಾಏಕಿ ಮುಚ್ಚಿದಾಗ 3814 ಕಾರ್ಮಿಕರು ಮತ್ತು ಅವರ ಕುಟುಂಬಗಳು ದಿನ ಬೆಳಗಾಗುವುದರೊಳಗೆ ಎಲ್ಲವನ್ನೂ ಕಳೆದುಕೊಂಡು ಬೀದಿಗೆ

ಬಿದ್ದಿದ್ದವು. ಸಂಬಳ ನಿಂತುಹೋಯಿತು. ಅಷ್ಟು ವರ್ಷಗಳು ಕೆಲಸ ಮಾಡಿದ್ದರೂ ಅವರಿಗೆ ಯಾವುದೇ ಪರಿಹಾರ, ಹಣ ನೀಡಲಿಲ್ಲ. ಜೀವನ ನಿರ್ವಹಣೆಗೆ ಯಾವುದೇ ವ್ಯವಸ್ಥೆಯನ್ನು ಮಾಡಿರಲಿಲ್ಲ. ಕಾಲೋನಿಗಳಿಗೆ ನೀರಿನ ಪೂರೈಕೆಯನ್ನು ನಿಲ್ಲಿಸಲಾಯಿತು. ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಯಿತು. ಪಡಿತರ ಅಂಗಡಿಗಳನ್ನು ಮುಚ್ಚಲಾಯಿತು. 248 ಸಾರ್ವಜನಿಕ ಟಾಯ್‌ಲೆಟ್‌ಗಳು ನೀರಿಲ್ಲದೆ ನಾತ ಹೊಡೆಯತೊಡಗಿದವು. ಗಣಿಗಳು ಮುಚ್ಚುವವರೆಗೆ ಆಂಧ್ರ ಮೂಲದ ಮಾದಿಗ ಜನಾಂಗದವರು ಕೈಯಿಗಳಲ್ಲಿ ಕಕ್ಕಸ್ಸನ್ನು ಬಾಚಿ ಹೊರಗೆ ಹಾಕುತ್ತಿದ್ದ ಪದ್ಧತಿ ಕೊನೆಗಾದರೂ ಹೀಗೆ ನಿಂತುಹೋಗಿತ್ತು.

ಕೆಜಿಎಫ್ ನಗರದ ಶೇಕಡ 10ರಷ್ಟು ಪ್ರದೇಶದಲ್ಲಿ ಗುಡ್ಡೆಗಳಾಗಿ ಬಿದ್ದಿರುವ ಸಯನೈಡ್ ಮಣ್ಣು ಗಾಳಿಯಲ್ಲಿ ತೂರಿ, ನೀರಿನಲ್ಲಿ ಹರಿದು ಜನರು ಇನ್ನಷ್ಟು ಕಾಯಿಲೆಗಳಿಗೆ ಈಡಾದರು. 121 ವರ್ಷಗಳ ಚರಿತ್ರೆಯುಳ್ಳ ಏಕೈಕ ಗಣಿ ಆಸ್ಪತ್ರೆಯನ್ನು ಮುಚ್ಚಲಾಯಿತು. ಗಣಿಗಳನ್ನು ಮುಚ್ಚಿದ ಮೇಲೆ 4 ವರ್ಷಗಳಲ್ಲಿ 60 ಕಾರ್ಮಿಕರು ಗಣಿ ರೋಗಗಳು, ಪರಿಸರ ಮಾಲಿನ್ಯ ಮತ್ತು ತೀವ್ರ ಒತ್ತಡಗಳಿಂದ ನರಳಿ ಆಸು ನೀಗಿದ್ದರು. ಈಗಲೂ ಮುರುಕಲು ಗುಡಿಸಿಲುಗಳಲ್ಲಿ ಜೀವನ ನಡೆಸುವ ಜನರಲ್ಲಿ ಸುಮಾರು 6000 ಯುವಕ ಮತ್ತು ಯವತಿಯರು ದಿನಾ 'ಸ್ವರ್ಣ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಗಳೂರಿಗೆ ಬಂದು ಸಣ್ಣ ಪುಟ್ಟ ಕೆಲಸಗಳನ್ನು ಮಾಡಿ ರಾತ್ರಿಗೆ ಹಿಂದಿರುಗುತ್ತಾರೆ. ಅವರಿಗೆ 1000–4000ರೂ ಮಾತ್ರ ಸಂಬಳ ದೊರಕುತ್ತದೆ. ಅಲ್ಲೇ ಇರುವ ಮಹಿಳೆಯರು, ಮುದುಕರು ಹತ್ತಿರದ ಕಾಡು ಮೇಡುಗಳಿಗೆ ಹೋಗಿ ಸೌದೆ ತರುತ್ತಾರೆ. ಅದರಲ್ಲಿ ಸ್ವಲ್ಪ ಒಲೆ ಉರಿಸಿ ಉಳಿದಿದ್ದನ್ನು ಮಾರಿಕೊಂಡು ಬರುತ್ತಾರೆ.

ಗಣಿಗಳು ನಡೆಯುತ್ತಿದ್ದ ಕಾಲದವರೆಗೆ ಕಾರ್ಮಿಕರ ಮಕ್ಕಳು ಶಾಲೆಗಳಲ್ಲಿ ಉಚಿತ ಶಿಕ್ಷಣ ಪಡೆಯುತ್ತಿದ್ದರು. ಈಗ ಎಲ್ಲವೂ ಖಾಸಗಿಯವರ ಪಾಲಾದ ಕಾರಣ ಮಕ್ಕಳು ಹಣವಿಲ್ಲದೆ ಶಾಲೆಗೆ ಹೋಗದೆ ಪೋಲಿಗಳಾಗಿ, ಬಾಲ ಕಾರ್ಮಿಕರಾಗಿದ್ದಾರೆ. ಮಿಕ್ಕವರು ಮನೆಗಳಲ್ಲೇ ಉಳಿದುಕೊಳ್ಳಬೇಕಾಗಿದೆ. ಗಣಿಗಳು ಮುಚ್ಚಿದಾಗಲೂ ಕಾರ್ಮಿಕರಿಗೆ 5000ಕ್ಕಿಂತ ಹೆಚ್ಚು ಸಂಬಳ ಬರಲಿಲ್ಲ. ಹಾಗಾಗಿ ಅವರು ನಿವೃತ್ತಿ ಪರಿಹಾರದ ಕಡಿಮೆ ಹಣವನ್ನು ಪಡೆಯಲು ನಿರಾಕರಿಸಿದ್ದರು. ಸರಕಾರಗಳ ಮಲತಾಯಿ ಧೋರಣೆ, ರಾಜಕಾರಣಿಗಳ ಹೇಳಿಕೆಗಳು, ನ್ಯಾಯಾಲಯಗಳ ಮೊಂಡುತನದಿಂದ ಜೀವನ ನಿರ್ವಹಣೆಗೆ ಯಾವುದೇ ಆಶಾಭಾವನೆಗಳು ಕಾರ್ಮಿಕರಲ್ಲಿ ಉಳಿದುಕೊಳ್ಳಲಿಲ್ಲ. ಹಣವಿಲ್ಲದೆ ಎಷ್ಟೋ ಹೆಣ್ಣು ಗಂಡುಗಳಿಗೆ ಮದುವೆ ಆಗಿಲ್ಲ. ಸಾಲ ತೆಗೆದುಕೊಂಡವರ ಹೊರೆ ಹೇಳಲಾಗದ ಪರಿಸ್ಥಿತಿಯನ್ನು ತಲುಪಿದೆ. ಕೆಲವು ಪತ್ರಿಕೆಗಳು ಕೆಜಿಎಫ್‌ನಲ್ಲಿ ರೌಡಿತನ

ನಡೆಯುತ್ತಿದೆ, ನಗರ ತಲ್ಲಣಿಸಿದೆ ಎಂದು ಸಾರ್ವಜನಿಕರನ್ನು ತಪ್ಪು ಹಾದಿಗೆ ಎಳೆಯುವ ಕೆಲಸ ಮಾಡಿದವು.

ನಗರದ ಮುನಿಸಿಪಲ್ ಕಾರ್ಪೋರೇಶನ್ ಗಣಿ ಕಾಲೋನಿಗಳ ನೀರಿನ ವ್ಯವಸ್ಥೆಯನ್ನು ತಾನೇ ವಹಿಸಿಕೊಳ್ಳುವುದಾಗಿ ಮುಂದೆ ಬಂದರೂ ಕರ್ನಾಟಕ ಸರಕಾರ 29.10.2002 ರಂದು ಒಂದು ಆದೇಶ ಹೊರಡಿಸಿ ನಿರಾಕರಿಸಿತ್ತು. ಎಲ್ಲಾ ಮಾನವ ಹಕ್ಕುಗಳ ಉಲ್ಲಂಘನೆಯನ್ನು 15 ದಿನಗಳ ಒಳಗೆ ಮರು ಸ್ಥಾಪಿಸುವಂತೆ ಸಭೆ ವರದಿಯಲ್ಲಿ ಕೇಳಿಕೊಂಡಿತ್ತು. ಗಣಿಗಳು ಮುಚ್ಚಿದ 6 ವರ್ಷಗಳ ನಂತರ 2007ರಲ್ಲಿ ನ್ಯಾಯಾಲಯ ನೀಡಿದ ತೀರ್ಪಿನ ಆಧಾರದ ಮೇಲೆ ರಾಜಿನಾಮೆ ನೀಡದೆ ಉಳಿದುಕೊಂಡಿದ್ದ ಸುಮಾರು 3500 ಕಾರ್ಮಿಕರು ಸರಕಾರ ನೀಡಿದ ಅಲ್ಪಸ್ವಲ್ಪ ಹಣವನ್ನು ಪಡೆದುಕೊಂಡಿದ್ದರು. ಆ ಹಣದಲ್ಲಿ ಅವರು ಉಳಿದುಕೊಂಡಿದ್ದ ಗುಡಿಸಿಲುಗಳನ್ನು ಅವರಿಗೆ ನೀಡಿದಂತೆ ತಿಳಿಸಿ 7 ವರ್ಷಗಳ ಬಾಡಿಗೆ ಮತ್ತು ಅದರ ಅಂದಿನ ಬೆಲೆಯನ್ನು ಮುರಿದುಕೊಂಡು ಉಳಿದ ಹಣ ನೀಡಿದ್ದರು. ಆ ಹೊತ್ತಿಗೆ ಅವರಲ್ಲಿ ಬಹಳಷ್ಟು ಕಾರ್ಮಿಕರು ಸತ್ತುಹೋಗಿದ್ದು, ಉಳಿದವರ ಹಣ ಸಾಲುಗಾರರ ಪಾಲಾಗಿತ್ತು.

ಗೌರವ ಧನ :

ಕ್ರಿ.ಶ.1910 ರಿಂದಲೂ ಗಣಿಗಳು ಉತ್ಪಾದನೆ ಮಾಡುತ್ತಿದ್ದ ಚಿನ್ನದ ಲಾಭದಲ್ಲಿ ಶೇಕಡ 5 ರಷ್ಟು ಗೌರವ ಧನವನ್ನು ಮೈಸೂರು ಸರಕಾರ ಪಡೆಯುತ್ತಿತ್ತು. ಇದರ ಜೊತೆಗೆ ಶೇಕಡ 2.5 ಲಾಭಾಂಶವನ್ನು ಕೂಡ ಅದಕ್ಕೆ ನೀಡಲಾಗುತ್ತಿತ್ತು. 1930ಕ್ಕೆ 3.8 ಮಿಲಿಯನ್ ಪೌಂಡ್ಸ್ ಗೌರವಧನ ಮತ್ತು 22.5 ಮಿಲಿಯನ್ ಪೌಂಡ್ಸ್ ಲಾಭಾಂಶವನ್ನು ಮೈಸೂರು ಸರಕಾರಕ್ಕೆ ನೀಡಲಾಗಿತ್ತು. ಇದೇ ಸಮಯದಲ್ಲಿ ಜಾನ್ ಟೇಲರ್ ಮತ್ತು ಆತನ ಮಕ್ಕಳು 5 ಗಣಿ ಕಂಪನಿಗಳ ಒಟ್ಟಾರೆ ಆಡಳಿತವನ್ನು ವಹಿಸಿಕೊಂಡಿದ್ದರು. ಅವರು ಯಾವುದೇ ಗುತ್ತಿಗೆಯನ್ನು ನಿರಾಕರಿಸುವ ಅಥವಾ ಹೊಸದಾಗಿ ನೀಡುವ ಅಧಿಕಾರವನ್ನು ಪಡೆದಿದ್ದರು. ಕಾರ್ಮಿಕರನ್ನು ಹೊಸದಾಗಿ ಸೇರಿಸಿಕೊಳ್ಳುವ ಅಥವಾ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಪಡೆದಿದ್ದರು. ಹಾಗೆಯೇ ಸಂಬಳ ಮತ್ತು ಲಾಭಾಂಶದ ಬೆಲೆಯನ್ನು ನಿಗದಿಪಡಿಸುವ ಪೂರ್ಣ ಅಧಿಕಾರವನ್ನು ಪಡೆದಿದ್ದರು. ಲಂಡನ್‌ನ ಒಂದು ಸಣ್ಣ ಕಚೇರಿಯಿಂದ ಸಾವಿರಾರು ಮೈಲಿಗಳ ದೂರದಲ್ಲಿ ಸಾವಿರಾರು ಅಡಿಗಳ ಆಳದಲ್ಲಿರುವ ಚಿನ್ನದ ನಿಕ್ಷೇಪಗಳ ಮೇಲಿನ ಅಧಿಕಾರವನ್ನು ಅವರು ಚಲಾಯಿಸುತ್ತಿದ್ದರು. ಈ ಕಚೇರಿ ಲಂಡನ್‌ನ ಕ್ವೀನ್ ಸ್ಟ್ರೀಟ್ ಅರಮನೆಯಲ್ಲಿತ್ತು.

ಬ್ರಿಟಿಷರು ಭಾರತದ ಕೆಲವು ಭಾಗಗಳನ್ನು ಇಬ್ಭಾಗ ಮಾಡಿ ಆಳುತ್ತಿದ್ದ ಪ್ರದೇಶಗಳಲ್ಲಿ

ಮೈಸೂರು ಸಂಸ್ಥಾನ 5ನೇ ದೊಡ್ಡ ಪ್ರದೇಶವಾಗಿದ್ದು 29475 ಚ.ಕಿ.ಮೀ. ವಿಸ್ತೀರ್ಣ ಹೊಂದಿತ್ತು. ಜನಸಂಖ್ಯೆಯ ಆಧಾರದ ಮೇಲೆ ಈ ಸಂಸ್ಥಾನ 19 ಗನ್ ಸೆಲ್ಯೂಟ್‌ಗಳ ಅರ್ಹತೆ ಪಡೆದುಕೊಂಡಿತ್ತು.[1] ಆ ಕಾಲಕ್ಕೆ ಕೇಂದ್ರ ಸರಕಾರಕ್ಕೆ ದೇಶದ ಎಲ್ಲಾ ರಾಜ್ಯಗಳು ಕೊಡುತ್ತಿದ್ದ ಒಟ್ಟು ಹಣದಲ್ಲಿ ಮೈಸೂರು ಸರಕಾರ ಒಂದೇ ಶೇಕಡ 40 ಪಾಲು ಕೊಡುತ್ತಿತ್ತು.[2]

ಇಷ್ಟೆಲ್ಲ ನೀಡುತ್ತಿದ್ದ ಮೈಸೂರು ಸರಕಾರಕ್ಕೆ ಕೇಂದ್ರ ಸರಕಾರದಿಂದ ಯಾವುದೇ ರೀತಿಯ ಆದ್ಯತೆ ದೊರಕುತ್ತಿರಲಿಲ್ಲ. 1881–1947ರ ಮಧ್ಯೆ ಮೈಸೂರು ರಾಜ್ಯದಲ್ಲಿ ಮುಖ್ಯವಾಗಿ ರೈಲು ರಸ್ತೆಗಳು ಮತ್ತು ಯಾವುದೇ ಕಾರ್ಖಾನೆಗಳು ತಲೆ ಎತ್ತಲಿಲ್ಲ.[3] ಆಗಿನ ಮೈಸೂರು ಸಂಸ್ಥಾನಕ್ಕೆ ಕೇಂದ್ರ ಸರಕಾರದ ಮೂಲಕ ನೇಮಕಗೊಂಡ ದಿವಾನರೆಲ್ಲ ಪಶ್ಚಿಮ ದೇಶಗಳ ಪ್ರಭಾವ ಪಡೆದವರಾಗಿದ್ದು, ಇವರೆಲ್ಲ ಐರೋಪ್ ಮಾದರಿ ಕಾರ್ಖಾನೆಗಳು ಮತ್ತು ಆರ್ಥಿಕ ಸುಧಾರಣೆಗಳನ್ನು ತರುವಲ್ಲಿ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದ್ದರು. ಇದರ ಫಲದಿಂದ ಮೈಸೂರು ರಾಜ್ಯ ಮಾದರಿ ರಾಜ್ಯವೆಂದು ಹೆಸರು ಪಡೆದಿತ್ತು. 1886 ರಿಂದ 1894 ರವರೆಗೆ ಗಣಿ ಕಂಪನಿಗಳು ಮೈಸೂರು ಸರಕಾರಕ್ಕೆ ನೀಡಿದ ಗೌರವಧನ ವರ್ಷಕ್ಕೆ 50,000 ರೂ.ಗಳಿಂದ 7.25 ಲಕ್ಷಕ್ಕೆ ಏರುತ್ತಾ ಹೋಗಿತ್ತು.[4]

ರಾಷ್ಟ್ರೀಕರಣ :

29.11.1956ರಲ್ಲಿ ಮೈಸೂರು ಸರಕಾರದ ಕಂಪನಿಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಜೂನ್ 1958ರಲ್ಲಿ ಕೇಂದ್ರ ಸರಕಾರ ಗಣಿಗಳಿಗೆ ಹೆಚ್ಚು ಸಹಾಯವನ್ನು ನೀಡುವ ಉದ್ದೇಶದಿಂದ ಐಎಮ್‌ಎಫ್ ಬೆಲೆಯಂತೆ 1 ಔನ್ಸ್ ಚಿನ್ನಕ್ಕೆ 35 ಡಾಲರ್ ನೀಡುವುದಾಗಿ ಒಪ್ಪಿಗೆ ನೀಡಿತು. ಐಎಮ್‌ಎಫ್ ಮತ್ತು ಚಿನ್ನದ ಬೆಲೆಯ ಅಂತರದ ನಷ್ಟವನ್ನು ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ ನೀಡುವುದಾಗಿ ಒಪ್ಪಿಕೊಂಡಿತು (ಆರ್ಟಿಕಲ್ 182ರ ಪ್ರಕಾರ). ರಾಜ್ಯ ಸರಕಾರಕ್ಕೆ ಮುಖಭಂಗವಾಗಬಾರದು ಎನ್ನುವ ಕಾರಣದಿಂದ ಕೇಂದ್ರ ಸರಕಾರ 1962ರಲ್ಲಿ ಗಣಿಗಳ ಒಟ್ಟು ಉಸ್ತುವಾರಿಯನ್ನು ತಾನೇ ವಹಿಸಿಕೊಂಡಿತು. ಗಣಿಗಳನ್ನು ಕೇಂದ್ರ ವಿತ್ತ ಮಂತ್ರಿಯ ಕೆಳಗೆ ಕೆಜಿಎಮ್‌ಯು ಎಂದು ಕರೆಯಲಾಯಿತು. ವಿತ್ತ ಮಂತ್ರಿ ಚೇರ್‌ಮನ್ನಾಗಿ, ಉಪ ವಿತ್ತಮಂತ್ರಿ ಉಪ ಚೇರ್‌ಮನ್ನಾಗಿ, ಜಾನ್ ಟೇಲರ್ ಮಗ ಸೇರಿದಂತೆ ಇನ್ನೂ ಕೆಲವರನ್ನು ಸದಸ್ಯರನ್ನಾಗಿ ನೇಮಿಸಲಾಯಿತು.

1968ರಲ್ಲಿ ಪೂರ್ಣ ಅವಧಿಯ ಚೇರ್‌ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕರು ಅಧಿಕಾರವನ್ನು ವಹಿಸಿಕೊಂಡರು. 1971ರಲ್ಲಿ ಚಿನ್ನದ ಗಣಿಗಳ ಆಡಳಿತವನ್ನು ಉಕ್ಕು ಮತ್ತು ಗಣಿ ಮಂತ್ರಿಗಳ ಕೆಳಗೆ ತರಲಾಯಿತು. ಇದೇ ಸಮಯದಲ್ಲಿ ಚಾಂಪಿಯನ್ ರೀಫ್ ಗಣಿಗಳಲ್ಲಿ ಹಲವು ಶಿಲಾಸ್ಫೋಟಗಳು ಮತ್ತು ಬೆಂಕಿ ಅನಾಹುತಗಳು

ಕಾಣಿಸಿಕೊಂಡವು. ಇದರಿಂದ ಚಿನ್ನದ ಒಟ್ಟು ಉತ್ಪಾದನೆಯಲ್ಲಿ ಶೇಕಡ 45 ರಷ್ಟು ಕಡಿಮೆಯಾಯಿತು. 1965–66ರಲ್ಲಿ ಚಾಂಪಿಯನ್ ರೀಫ್ ಗಣಿಗಳಲ್ಲಿ ಮತ್ತೆ ಮತ್ತೆ ಬೆಂಕಿ ಅನಾಹುತಗಳು ಕಾಣಿಸಿಕೊಂಡವು. ತೀವ್ರ ಮಳೆಯಿಂದ ಕೆಲಸ ನಡೆಯುತ್ತಿದ್ದ ಸುರಂಗಗಳು ನೀರಿನಿಂದ ತುಂಬಿಹೋದವು. ಈ ಎಲ್ಲ ಕಾರಣಗಳಿಂದ 1957–58ರಲ್ಲಿ 5,084ಕೆಜಿ ಮತ್ತು 1967–68ರಲ್ಲಿ 2345ಕೆಜಿ ಚಿನ್ನ ಮಾತ್ರ ಉತ್ಪಾದನೆಯಾಗಿತ್ತು.[5]

1962ರಲ್ಲಿ ಕೇಂದ್ರ ಸರಕಾರ ಗಣಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡ ತಕ್ಷಣ ಒಂದು ಸಮಿತಿಯನ್ನು ಮಾಡಿ ಉತ್ಪಾದನೆಯ ವೆಚ್ಚವನ್ನು ಕಡಿಮೆ ಮಾಡುವುದರ ಬಗ್ಗೆ ವರದಿ ಕೊಡುವಂತೆ ಕೇಳಿಕೊಂಡಿತು. ಈ ಸಮಿತಿ ಸಲ್ಲಿಸಿದ ವರದಿಯಲ್ಲಿ ಕಾರ್ಯಾಗಾರಗಳ ಕೇಂದ್ರೀಕರಣ, ನಗರಾಭಿವೃದ್ಧಿ ಮತ್ತು ಆಡಳಿತದ ವೆಚ್ಚ ಕಡಿತಗೊಳಿಸುವುದು ಮತ್ತಿತರ ವಿವರಗಳಿದ್ದವು. ಗಣಿ ತಂತ್ರಜ್ಞಾನದ ಮೂಲಕ ಹೆಚ್ಚು ಉತ್ಪಾದನೆ ಮಾಡುವ ವಿಧಾನಗಳನ್ನು ಅಳವಡಿಸಲಾಯಿತು. ಕಾರ್ಮಿಕರ ಸ್ವಯಂ ನಿವೃತ್ತಿಯನ್ನು ಘೋಷಿಸಿದಾಗ 670 ಕಾರ್ಮಿಕರು ನಿವೃತ್ತಿಹೊಂದಿ ಸುಮಾರು 80 ಲಕ್ಷ ರೂ. ಸಂಬಳ ಉಳಿಯಿತು. 1972ರಲ್ಲಿ ಕಂಪನಿಯನ್ನು ಕೆಜಿಎಮ್‌ನಿಂದ ಬಿಜಿಎಮ್ಎಲ್ ಎಂದು ಘೋಸಲಾಯಿತು. ಅಂದಿನಿಂದ ಕಂಪನಿ ಅನುಭವಿಸಿದ ನಷ್ಟದ ಬ್ಯಾಲನ್ಸ್ ಶೀಟಿನ ವಿವರಗಳನ್ನು ಕೆಳಗೆ ನೀಡಲಾಗಿದೆ.

ವರ್ಷ	ಲಾಭ/ನಷ್ಟ (ಲಕ್ಷ)	ಮೊತ್ತ ಲಾಭ/ನಷ್ಟ[6]
೧೯೭೨–೭೩	–೫೮.೧೫	–೫೮.೧೫
೧೯೭೩–೭೪	–೧೬೨.೧೨	–೨೨೦.೩೬
೧೯೭೪–೭೫	–೧೮೦.೨೪	–೪೦೦.೬೦
೧೯೭೫–೭೬	–೨೪೯.೮೨	–೬೫೦.೪೨
೧೯೭೬–೭೭	–೧೩೪.೩೪	–೭೮೪.೭೬
೧೯೭೭–೭೮	–೨೧೪.೧೮	–೯೯೮.೯೪
೧೯೭೮–೭೯	–೮೨.೧೨	–೧೦೮೧.೦೬
೧೯೭೯–೮೦	+೩೫೨.೧೩	–೭೨೮.೯೩
೧೯೮೦–೮೧	+೫೬೭.೮೮	–೧೬೧.೦೫
೧೯೮೧–೮೨	–೯೯.೫೬	–೨೬೦.೬೧

೧೯೮೨-೮೩	-೨೯೦.೨೧	-೫೫೦.೮೨
೧೯೮೩-೮೪	-೫೬೮.೯೩	-೧೧೧೯.೭೫
೧೯೮೪-೮೫	-೧೨೬೧.೮೪	-೨೩೮೧.೫೯

1.4.1972–1.4.1979ರವರೆಗೆ ಕಂಪನಿ ಅನುಭವಿಸಿದ ಒಟ್ಟು ನಷ್ಟ 10 ಕೋಟಿ.

(6) ಅದು 1984–85ಕ್ಕೆ 2381.59 ಕೋಟಿ ಆಗಿತ್ತು. ಪ್ರಪಂಚದಲ್ಲಿಯೆ ಗಟ್ಟಿ ಶಿಲೆಗಳುಳ್ಳ ಕೆಜಿಎಫ್ ತಾಂತ್ರಿಕವಾಗಿ ಹೆಚ್ಚು ತೊಂದರೆಗಳನ್ನು ಅನುಭವಿಸುತ್ತಲೇ ಬಂದಿತ್ತು. ಇದೆಲ್ಲಕ್ಕಿಂತ ಮಿಗಿಲಾಗಿ ಗಣಿಗಳು ಪ್ರಾರಂಭದಿಂದ ಸುಮಾರು 60 ವರ್ಷಗಳು ಕಾಲ ಅಂದರೆ 1930 ರವರೆಗೂ 1 ಗ್ರಾಂ ಚಿನ್ನಕ್ಕೆ ಕಂಪನಿ ಕೇವಲ 1.82 ರೂ. ಮಾತ್ರ ಪಡೆಯುತ್ತಿತ್ತು. 1930–1960ರವರೆಗೂ ಸರಾಸರಿ 1 ಗ್ರಾಂಗೆ 5.30ರೂ. ನಂತೆ ಐಎಮ್‌ಎಫ್ ಜೊತೆಗೆ ಒಪ್ಪಂದವಾಗಿತ್ತು. 1 ಔನ್ಸ್‌ಗೆ 35 ಡಾಲರ್ (167ರೂ.) ಅನಂತರ 1984ರ ಸುಮಾರಿಗೆ 1 ಗ್ರಾಂ ಚಿನ್ನಕ್ಕೆ 220ರೂ. 1980ರ ಜನವರಿ ಮಧ್ಯದಲ್ಲಿ ದಿಢೀರನೆ 1ಔನ್ಸ್ ಚಿನ್ನಕ್ಕೆ 820 ಡಾಲರ್ ಆಯಿತು. 1 ಔನ್ಸ್ ಚಿನ್ನಕ್ಕೆ 35 ಡಾಲರ್ ನಿಗದಿಪಡಿಸಿದ್ದ ಕಾಲದಲ್ಲಿ ಪ್ರಪಂಚದಾದ್ಯಂತ ಅನೇಕ ಗಣಿಗಳನ್ನು ಮುಚ್ಚಲಾಯಿತು. ಆದರೆ ಕೆಜಿಎಫ್ ಗಣಿಗಳು ಮಾತ್ರ ಕುಂಟುತ್ತಲೆ ಇದೆಲ್ಲವನ್ನು ಮೀರಿ ಸಾಗಿ ನಡೆದಿದ್ದವು.

ಕೊನೆ ದಶಕ (1991–2001)[7]:

ಗಣಿಗಳು ಹೊಂದಿದ್ದ ಮೂಲಭೂತ ಸೌಕರ್ಯಗಳು :

ನೆಲದ ವ್ಯಾಪ್ತಿ	12,500 ಎಕರೆ
ಕಾರ್ಯಾಗಾರಗಳು	04
ಗಣಿ ಆಸ್ಪತ್ರೆ	1 (240 ಹಾಸಿಗೆಗಳು)
ಗಣಿ ನಗರ ವ್ಯಾಪ್ತಿಯಲ್ಲಿ	11,000 ಮನೆಗಳು

(1000 ಬಂಗಲೆಗಳು ಮತ್ತು 10,000 ಕಾಲೋನಿ ಮನೆಗಳು)

ಒಟ್ಟು ನಿಗದಿತ ಬೆಲೆ	112.00 ಕೋಟಿ

ದಶಕಗಳಲ್ಲಿ ಚಿನ್ನದ ಉತ್ಪಾದನೆ[8]:

ವರ್ಷ	ಅದಿರು ಅರಿದಿದ್ದು	ಸರಾಸರಿ ಚಿನ್ನದ ಅಂಶ	ಚಿನ್ನದ ಉತ್ಪಾದನೆ (ಕೆ.ಜಿ.ಗಳಲ್ಲಿ)
೧೮೮೧-೧೮೯೦	೧೫೭೮೩೧	೪೭.೫೦	೭೪೯೬
೧೮೯೧-೧೯೦೦	೨೧೩೪೭೩೦	೪೧.೯೯	೮೯೬೨೭
೧೯೦೧-೧೯೧೦	೬೦೯೦೧೮೫	೨೮.೦೫	೧೭೦೮೧೩
೧೯೧೧-೧೯೨೦	೬೮೯೭೦೦೩	೧೮.೧೯	೧೨೫೪೮೩
೧೯೨೧-೧೯೩೦	೫೯೪೯೦೯೩	೧೯.೬೬	೧೧೬೯೮೦
೧೯೩೧-೧೯೪೦	೬೪೪೦೩೬೭	೧೫.೪೪	೯೯೪೨೩
೧೯೪೧-೧೯೫೦	೫೦೯೫೭೫೦	೧೨.೪೩	೬೩೩೪೧
೧೯೫೧-೧೯೬೦	೫೨೮೮೬೪೩	೧೦.೨೩	೫೪೧೨೬
೧೯೬೧-೧೯೭೦	೪೫೪೦೬೬೮	೭.೧೫	೩೨೪೫೧
೧೯೭೧-೧೯೮೦	೩೬೨೧೫೩೧	೫.೩೫	೧೯೩೬೨
೧೯೮೧-೧೯೯೦	೨೭೬೭೧೩೬	೩.೩೭	೯೩೨೭
೧೯೯೧-	೧೮೨೬೦೦೬	೩.೧೪	೫೭೨೮
ಮೊತ್ತ	೫೧೧೪೫೦೧೫	೧೫.೬೫	೮೦೦೩೭೮

1880 ಕ್ಕಿಂತ ಮುಂಚೆ: 336072 ಟನ್ನು ಅದಿರನ್ನು ಅರೆದು 1 ಟನ್ನು ಅದಿರಿಗೆ ಸರಾಸರಿ 18.51 ಗ್ರಾಂ ಚಿನ್ನದಂತೆ 6221 ಕೆಜಿ ಚಿನ್ನವನ್ನು ಶೋಧಿಸಿದ್ದಾರೆ ಎಂದು ನಂಬಲಾಗಿದೆ.

ಕೊನೆ ದಶಕದಲ್ಲಿ ನಷ್ಟ[9]:

ವರ್ಷ	ಹಣ ನಷ್ಟ	ಮೊತ್ತ	ಒಟ್ಟಾರೆ ನಷ್ಟ (ಕೋಟಿಗಳಲ್ಲಿ)
೧೯೯೧-೯೨	೧೬.೨೯	೪೨.೨೮	೯೪.೦೯
೧೯೯೨-೯೩	೧೫.೯೩	೩೪.೪೦	೧೨೯.೬೯
೧೯೯೩-೯೪	೧೮.೭೨	೪೨.೧೪	೧೬೯.೦೮

೧೯೯೪-೯೫	೧೮.೬೩	೩೬.೫೦	೨೦೫.೫೮
೧೯೯೫-೯೬	೧೮.೩೮	೪೩.೭೩	೨೪೯.೩೧
೧೯೯೬-೯೭	೨೨.೫೯	೫೪.೦೮	೩೦೩.೩೯
೧೯೯೭-೯೮	೨೧.೭೮	೩೯.೯೮	೩೪೩.೩೮
೧೯೯೮-೯೯	೨೪.೪೨	೬೫.೬೫	೪೦೯.೦೩
೧೯೯೯-೦೦	೩೭.೪೫	೯೨.೯೯	೫೦೨.೦೨
೨೦೦೦-೦೧	೧೧.೧೭	೫೩.೨೫	೫೫೬.೭೫

ಚಿನ್ನದ ಉತ್ಪಾದನೆ ಮತ್ತು ಅದಕ್ಕೆ ತಗುಲುತ್ತಿದ್ದ ವೆಚ್ಚ[10] :

ವರ್ಷ	೧	೨	೩	೪
೧೯೯೧-೯೨	೨೧೮೯೭೧	೨.೮೭	೬೭೧.೭೨	೭೬೨೯
೧೯೯೨-೯೩	೨೨೮೧೪೨	೨.೭೧	೬೫೮.೧೪	೮೫೮೧
೧೯೯೩-೯೪	೨೨೮೦೮೫	೨.೮೧	೬೭೨.೧೮	೯೨೭೬
೧೯೯೪-೯೫	೨೦೦೮೯೮	೩.೦೭	೬೫೦.೨೮	೮೮೧೪
೧೯೯೫-೯೬	೧೯೮೫೭೮	೩.೧೦	೬೪೯.೭೭	೧೦೨೧೮
೧೯೯೬-೯೭	೨೨೫೨೬೬	೨.೯೮	೬೯೨.೩೨	೧೧೦೮
೧೯೯೭-೯೮	೧೫೧೩೮೧	೩.೨೪	೫೧೪.೧೭	೧೧೦೧೫
೧೯೯೮-೯೯	೧೫೫೫೩೫	೩.೨೭	೫೩೧.೨೮	೧೪೨೩೧
೧೯೯೯-೦೦	೧೩೮೯೨೫	೩.೦೧	೪೩೩೫೧	೧೯೩೧೯

1. ಮಿಲ್ಲುಗಳಲ್ಲಿ ಅರೆದ ಅದಿರು,
2. 1 ಟನ್ನು ಶಿಲೆಗೆ ದೊರೆತೆ ಸರಾಸರಿ ಚಿನ್ನದ ಅಂಶ,
3. ಚಿನ್ನದ ಉತ್ಪತ್ತಿ ಕೆಜಿಗಳಲ್ಲಿ,
4. 10 ಗ್ರಾಂ ಚಿನ್ನಕ್ಕೆ ತಗುಲುತ್ತಿದ್ದ ಉತ್ಪಾದನೆಯ ವೆಚ್ಚ.

ಕೊನೆಗೆ ಉಳಿದುಕೊಂಡ ಕಾರ್ಮಿಕರ ಸಂಖ್ಯೆ[11] :

ಕೆಜಿಎಫ್	೨೭೬೦
ಚಿಗುರುಗುಂಟ	೪೩೨
ಹಳೆ ಬಿಸಾನತ್ತಂ	೧೦೭
ಯಾಪಮಾನ	೧೬೪
ಇತರ ಯೋಜನೆಗಳು	೯೩
ಒಟ್ಟು	೩೫೫೬

ಅಧಿಕಾರಿಗಳು ಮತ್ತು ಕಾರ್ಮಿಕರು[12] :

ಗಣಿಗಳ ಒಳಗೆ	೭೦	೧೭೫೯	೧೮೨೯
ಗಣಿಗಳ ಮೇಲೆ	೨೮	೧೬೯೯	೧೭೨೭
ಒಟ್ಟು	೯೮	೩೫೪೮	೩೫೫೬
ಪರಿಶಿಷ್ಟ ವರ್ಗ	೩೫	೨೦೧೭	೨೦೫೨
ಪರಿಶಿಷ್ಟ ಜಾತಿ	೦೪	೪೧	೪೫

ಮೈಸೂರು, ಚಾಂಪಿಯನ್ ಮತ್ತು ನಂದಿದುರ್ಗ ಗಣಿಗಳನ್ನು ಮುಂದಿನ 7 ವರ್ಷಗಳಲ್ಲಿ ಮುಚ್ಚುವ ನಿರ್ಧಾರನ್ನು 1987ರಲ್ಲಿ ಕೈಗೊಳ್ಳಲಾಯಿತು. ಮೈಸೂರು ಮತ್ತು ಚಾಂಪಿಯನ್ ಗಣಿಗಳಲ್ಲಿ ಕೆಲಸವನ್ನು ಮೊದಲಿಗೆ ಸ್ಥಗಿತಗೊಳಿಸಲಾಯಿತು. ಈ ಪೈಕಿ ನಂದಿದುರ್ಗ ಗಣಿಗಳಲ್ಲಿ ಕೆಲಸ ನಡೆಯುತ್ತಿದ್ದರಿಂದ ಉಳಿದ 2 ಗಣಿಗಳಲ್ಲಿನ ನೀರನ್ನು ಹೊರಕ್ಕೆ ನಿರಂತರವಾಗಿ ಎತ್ತಲಾಗುತ್ತಿತ್ತು. ಎಲ್ಲಾ ಗಣಿ ಸಮೂಹಗಳ ನಡುವೆ ಸುರಂಗಗಳ ಸಂಪರ್ಕವಿದ್ದು ನೀರು ತುಂಬಿಕೊಳ್ಳತ್ತಿತ್ತು. ಮುಂದಿನ ದಿನಗಳಲ್ಲಿ ನಂದಿದುರ್ಗದಲ್ಲೂ 2250 ಅಡಿಗಳ ಕೆಳಗಿನ ಹಂತದವರೆಗೆ ಕೆಲಸವನ್ನು ನಿಲ್ಲಿಸಲಾಯಿತು. ಚಿನ್ನದ ಉತ್ಪಾದನೆಯನ್ನು 1.3.2001 ರಿಂದ ಸಂಪೂರ್ಣವಾಗಿ ನಿಲ್ಲಿಸಲಾಯಿತು. ವಿದ್ಯುತ್ ಸಂಪರ್ಕವನ್ನು ಅಂದೇ ಕಡಿದು ಹಾಕಲಾಯಿತು. 1.08.2002ರಂದು 2000 ಅಡಿಗಳ ಹಂತದವರೆಗೆ ನೀರು ತುಂಬಿದ್ದು, ಅನಂತರ ನಿಧಾನವಾಗಿ ಎಲ್ಲಾ ಗಣಿಗಳಲ್ಲೂ ಮೊದಲನೇ ಹಂತದವರೆಗೂ ನೀರು ಬಂದಿತ್ತು.

ವಿದ್ಯುತ್ ಬೆಲೆ ಏರಿಕೆ : ವಿದ್ಯುತ್ ಉಪಯೋಗ[13]

ವರ್ಷ	ಕಿ.ವ್ಯಾ / ಗಂಟೆಗೆ	ವರ್ಷ	1	2
೧೯೭೨	೦.೦೮	೧೯೭೨	೧೦೦೭.೪೮	೭೪.೧೫
೧೯೮೨	೦.೦೩	೧೯೮೨	೯೧೬.೯೪	೩೦೨.೫೪

೧೯೯೨	೧.೯೪	೧೯೯೨	೬೦೪.೭೬	೮೭೬.೦೫
೨೦೦೦	೪.೩೨	೨೦೦೦	೩೯೨.೮೧	೧೬೭೮.೨೦

1. ಲಕ್ಷ ಯುನಿಟ್‌ಗಳಲ್ಲಿ 2. ಹಣ ಲಕ್ಷಗಳಲ್ಲಿ

ಪುನರ್ವಸತಿ : ಕೆಲವು ಯೋಜನೆಗಳು

27.07.1993 ರಂದು ಬಿಐಎಫ್‌ಆರ್ ಐಸಿಐಸಿಐಗೆ ಪುನರ್ವಸತಿ ಯೋಜನೆಗಳನ್ನು ರೂಪಿಸಲು ಕೇಳಿಕೊಂಡಿತು. ಐಸಿಐಸಿಐ ಕಂಪನಿ ಚೇತರಿಸಿಕೊಳ್ಳಲು ನೀಡಿದ ಸಲಹೆಗಳು ಕೆಳಕಂಡಂತಿದ್ದವು:

1. ಸಯೆನೈಡ್ ಗುಡ್ಡಗಳಿಂದ ವರ್ಷಕ್ಕೆ 2 ಟನ್ನು ಚಿನ್ನವನ್ನು ಉತ್ಪಾದನೆ ಮಾಡುವುದು.
2. ಲಾಭದಾಯಕವಲ್ಲದ ಗಣಿಗಳನ್ನು ಹಂತಹಂತವಾಗಿ ಮುಚ್ಚುವುದು.
3. ಚಿಗುರುಗುಂಟ ಗಣಿಗಳನ್ನು ಲಾಭದಾಯಕವಾಗಿ ನಡೆಸುವುದು.
4. ಇತರ ಗಣಿಗಳನ್ನು ತೋಡುವುದು ಮತ್ತು ಇಂಜಿನಿಯರಿಂಗ್ ಕೆಲಸಗಳನ್ನು ಮಾಡಿಕೊಡುವುದು.
5. ಕಾರ್ಮಿಕರ ಸಂಖ್ಯೆಯನ್ನು ಹಂತಹಂತವಾಗಿ ಕಡಿತಗೊಳಿಸುವುದು.
6. ನಷ್ಟವನ್ನು ಕಡತಗಳಿಂದ ತೆಗೆದು ಹಾಕುವುದು.
7. ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುವುದು.
8. ಸರಕಾರ ನಷ್ಟದ ಹಣವನ್ನು ತುಂಬಿಕೊಡುವುದು.

1994–1997ರ ನಡುವೆ ಗಣಿಗಳನ್ನು ಪುನಶ್ಚೇತನಗೊಳಿಸಲು ಮತ್ತು ಸಯೆನೈಡ್ ಗುಡ್ಡಗಳಲ್ಲಿ ಚಿನ್ನವನ್ನು ತೆಗೆಯಲು ಹೊರ ದೇಶಗಳ ಹಲವು ಕಂಪನಿಗಳು ಮುಂದೆ ಬಂದರೂ ಪ್ರಯೋಜನವಾಗಲಿಲ್ಲ. ಸರಕಾರ 24.06.1997ರಲ್ಲಿ ಗಣಿಗಳನ್ನು ಮುಚ್ಚಲು ತೀರ್ಮಾನಿಸಿ ಎಲ್ಲಾ ಕಾರ್ಮಿಕರಿಗೂ ಸ್ವಯಂ ನಿವೃತ್ತಿ ನೀಡುವುದಾಗಿ ಘೋಷಿಸಿತು. 31.12.1999ರಲ್ಲಿ ಬಿಐಎಫ್‌ಆರ್ ತನ್ನ ಹೇಳಿಕೆಯೊಂದರಲ್ಲಿ ಗಣಿಗಳನ್ನು ಪುನಶ್ಚೇತನಗೊಳಿಸಲು ಮಾಡಿದ ಎಲ್ಲಾ ಪ್ರಯತ್ನಗಳು ಸಫಲವಾಗದ ಕಾರಣ ಸರಕಾರ ಗಣಿಗಳನ್ನು ಮುಚ್ಚಬಹುದೆಂದು ಘೋಷಿಸಿತು. 16.06.2000: ಗಣಿಗಳನ್ನು ಮುಚ್ಚಲು ಬಿಐಎಫ್‌ಆರ್ ತನ್ನ ಅಂತಿಮ ತೀರ್ಮಾನವನ್ನು ನೀಡಿತು. 15.11.2000: ಬಿಐಎಫ್‌ಆರ್ ಆಜ್ಞೆಯ ವಿರುದ್ಧ ಕಾರ್ಮಿಕರು ಮಂಡಿಸಿದ ಮನವಿಯನ್ನು ಬಿಐಎಫ್‌ಆರ್ ತಳ್ಳಿ ಹಾಕಿತು. 29.11.2000: ಸೆಕ್ಷನ್ 25 (ಓ) ಐ.ಡಿ.ಆ್ಯಕ್ಟ್ ಪ್ರಕಾರ ಗಣಿಗಳನ್ನು ಮುಚ್ಚುವುದರ ಬಗ್ಗೆ ಕಾರ್ಮಿಕ ಮಂತ್ರಿಗಳಿಗೆ ಪತ್ರವನ್ನು ಬರೆಯಲಾಯಿತು.

11.12.2000:ಸ್ವಯಂ ನಿವೃತ್ತಿಯ ಯೋಜನೆಯಡಿಯಲ್ಲಿ ಒಂದು ತಿಂಗಳು

ಕಾಲ ಹೆಚ್ಚು ಸಾಮರ್ಥ್ಯ ಕಾರ್ಖಾನೆಗಳು ಅಥವಾ ಗುಜರಾತ್ ರೀತಿಯಲ್ಲಿ (ಗುಜರಾತ್ ಸರಕಾರ ನಿವೃತ್ತಿ ಯೋಜನೆಯಡಿಯಲ್ಲಿ ಒಂದು ಪ್ಯಾಕೇಜ್ ಮುಂದಿಟ್ಟಿತ್ತು) ಆಯ್ಕೆ ಮಾಡಿಕೊಳ್ಳಲು ಕಾರ್ಮಿಕರಿಗೆ ತಿಳಿಸಲಾಯಿತು. ಕೇವಲ ಕೆಲವರು ಮಾತ್ರ ಸ್ವಯಂ ನಿವೃತ್ತಿಯ ಯೋಜನೆಯನ್ನು ಆಯ್ಕೆ ಮಾಡಿಕೊಂಡರು. ಕಾರಣ ಮೇಲಿನ ಎರಡೂ ಯೋಜನೆಯಲ್ಲಿ ಪರಿಹಾರ ತೀರಾ ಕಡಿಮೆಯಾಗಿತ್ತು. ಆದರೂ ಎಲ್ಲರನ್ನೂ ಕೆಲಸದಿಂದ ಬಿಡುಗಡೆಗೊಳಿಸಲಾಯಿತು.

ಸ್ವಯಂ ನಿವೃತಿ ಮತ್ತು ಪರಿಹಾರ[14] :

	ಹೆಚ್ಚು ಶ್ರಮತೆ ಕಾರ್ಖಾನೆ	ಗುಜರಾತ್ ರೀತಿ	ಆಗ ಇದ್ದ	ನೋಶನಲ್ ಸಂಬಳ
ಎಕ್ಸ್-ಗ್ರೇಚಿಯ	೧೩೮೦೦೦	೧೭೮	೧೮೧೦೦೦	೨೪೦೦೦೦
ಗ್ರ್ಯಾಚ್ಯುಟಿ	೫೩೦೦೦	೬೮೦೦೦	೫೩೦೦೦	೬೮೦೦೦
ರಜೆ	೯೨೦೦	೧೭೦೦೦	೯೨೦೦	೧೭೦೦೦
ಎನ್‌ಕ್ಯಾಶ್‌ಮೆಂಟ್				
ನೋಟೀಸ್ ಪೇ	೪೬೦೦	೬೦೦೦	೪೬೦೦	೬೦೦೦
ಮೊತ್ತ	೨೦೪೮೦೦	೨೬೯೦೦೦	೨೪೭೦೦೦	೩೩೧೦೦೦

ಶೇಕಡ 60 ಕಾರ್ಮಿಕರು 35-40 ವರ್ಷದ ಮಧ್ಯದವರು. ಸರಾಸರಿ ಅನುಭವ 20 ವರ್ಷಗಳು. ಸರಾಸರಿ ತಿಂಗಳ ಸಂಬಳ ರೂ.4600

ಕಾರ್ಮಿಕರ ವಯಸ್ಸು 01.03.2001 ರಂದು[15]

ವಯಸ್ಸು	ಗಣಿ ಮೇಲೆ	ಗಣಿ ಒಳಗೆ	ಮೊತ್ತ
೨೦-೩೦	-	-	-
೩೧-೪೦	೦೫	೦೭	೧೨
೪೧-೪೫	೧೫	೧೬	೩೧
೪೬-೫೦	೨೧	೧೪	೩೫
೫೧-೫೫	೧೨	೦೩	೧೫
೫೬-೬೦	೦೨	೦೩	೦೫
ಮೊತ್ತ	೫೫	೪೩	೯೮

ಕಾ.ವಯಸ್ಸು	ಗಣಿಗಳ ಮೇಲೆ	ಗಣಿಗಳ ಒಳಗೆ	ಮೊತ್ತ
೨೦-೩೦	-	೦೫	೦೫
೩೧-೪೦	೨೦೪	೪೩೧	೬೩೫
೪೧-೪೫	೬೧೧	೭೫೭	೧೩೬೮
೪೬-೫೦	೫೯೩	೪೨೨	೧೦೧೫
೫೧-೫೫	೨೯೦	೯೭	೩೮೭
೫೬-೬೦	೩೮	೧೦	೪೮
ಮೊತ್ತ	೧೭೩೬	೧೭೨೨	೩೪೫೮

ಸ್ವಯಂ ನಿವೃತ್ತಿ ಪಡೆದವರು[16] :

ವರ್ಷ	ಅಧಿಕಾರಿಗಳು	ಕಾರ್ಮಿಕರು	ಮೊತ್ತ
೧೯೯೦-೯೧	-	೧೦೨	೧೦೨
೧೯೯೧-೯೨	೦೮	೧೦೭೨	೧೦೮೦
೧೯೯೨-೯೩	-	-	-
೧೯೯೩-೯೪	೫೧	೮೬೬	೯೧೭
೧೯೯೪-೯೫	೨೦	೩೧೧	೩೩೧
೧೯೯೫-೯೬	೦೫	೧೮೧	೧೮೬
೧೯೯೬-೯೭	೧೨	೨೯೬	೩೦೮
೧೯೯೭-೯೮	೫೮	೧೩೧೨	೧೩೭೦
೧೯೯೮-೯೯	೦೨	೨೪	೨೬
೧೯೯೯-೦೦	೦೧	೩೧	೩೨
೨೦೦೦-೦೧	೪೦	೬೩೬	೬೭
ಮೊತ್ತ	೧೮೯	೪೮೩೧	೫೦೨೮

ಕಾರ್ಯವಾಹಿ ಯೋಜನೆ :

ಕಾರ್ಯವಾಹಿಯೋಜನೆ ಕೆಳಗೆ ನೇಮಿಸಿದ ಕೆಲವು ಯೋಜನೆಗಳು

1. ಹಲವು ವಿಭಾಗಗಳ ಮುಖ್ಯಸ್ಥರು.
2. ಮೇಲ್ವಿಚಾರಣೆ ನಡೆಸುವ ವಿಭಾಗ.
3. ಗಣಿ ಪ್ರದೇಶದ ಉಸ್ತುವಾರಿಯನ್ನು ನಗರಸಭೆಗೆ ಹಸ್ತಾಂತರಿಸುವುದು.
4. ಗುತ್ತಿಗೆ ಕೊಡುವುದನ್ನು ನಿಲ್ಲಿಸುವುದು.
5. ಕಾರ್ಮಿಕರಿಗೆ ಕೊಡಬೇಕಾಗಿರುವ ಬಾಕಿ ಹಣವನ್ನು ಕ್ರೋಢೀಕರಿಸುವುದು.
6. ಕಾರ್ಮಿಕರ ಮೇಲಿನ ಎಲ್ಲಾ ಗುಪ್ತಚರ ದೂರುಗಳನ್ನು ಮತ್ತು ಶಿಸ್ತು ಕ್ರಮಗಳನ್ನು ಕೈಬಿಡುವುದು.
7. ನ್ಯಾಯಾಲಯಗಳಲ್ಲಿನ ದೂರುಗಳನ್ನು ಇತ್ಯರ್ಥ ಮಾಡುವುದು.
8. ಸಂಪರ್ಕ ಮುಂದುವರಿಸುವುದು.
9. ಹಂತಹಂತವಾಗಿ ಸಾಲ ಮತ್ತು ಹಣ ಸಂದಾಯ ಮಾಡಿ ಎಲ್ಲಾ ವ್ಯವಹಾರಗಳನ್ನು ಇತ್ಯರ್ಥ ಮಾಡುವುದು.

ಇತ್ಯರ್ಥವಾಗದೆ ಉಳಿದುಕೊಂಡಿದ್ದ ಕೆಲವು ಸಮಸ್ಯೆಗಳು :

- ಇತ್ಯರ್ಥವಾಗದೆ ಉಳಿದುಕೊಂಡಿರುವ ಕಾರ್ಮಿಕರ ಸಮಸ್ಯೆಗಳು.
- ವಿದ್ಯುತ್, ನೀರು, ರಸ್ತೆಗಳು ಮತ್ತು ಕಟ್ಟಡಗಳು.
- ಗಣಿ ಪ್ರದೇಶದಲ್ಲಿನ ನಾಗರಿಕ ಸೌಲಭ್ಯಗಳು.
- ಉಳಿದಿರುವು ಎಲ್ಲಾ ಕಾರ್ಖಾನೆ ಸಿಬ್ಬಂದಿ ಇತ್ಯಾದಿಗಳ ಪೋಷಣೆ ಮಾಡುವ ಖರ್ಚು.
- ನಡೆಯುತ್ತಿರುವ ಚಟುವಟಿಕೆಗಳ ಖರ್ಚು.
- ಸಯೆನೈಡ್ ಗುಡ್ಡಗಳು, ಶ್ಯಾಫ್ಟ್‌ಗಳು, ಗುಂಡಿಗಳು ಮತ್ತು ಗಣಿಗಳ ಸುತ್ತಲು ಬಿದ್ದಿರುವ ಇನ್ನಿತರ ಕಸದ ವಿಲೇವಾರಿ.
- ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ನಿಭಾಯಿಸುವುದು.
- ರಾಜಕೀಯ ಸಮಸ್ಯೆಗಳು, ಟ್ರೇಡ್ ಯೂನಿಯನ್‌ಗಳು, ಸರಕಾರೇತರ ವಿಭಾಗಗಳು ಮತ್ತು ರಾಜಕೀಯ ಪಕ್ಷಗಳ ಒತ್ತಡ.

- ರಾಜ್ಯ ಸರಕಾರದ ಕಾನೂನು ಮತ್ತು ಪಾಲನೆ.
- ರಕ್ಷಣೆ, ಉಳಿದ ವಸ್ತುಗಳ ವಿಲೇವಾರಿ, ಕಳ್ಳತನ ಮತ್ತು ನೆಲಗಳ್ಳತನ ತಡೆಯುವುದು.
- ಗಣಿ, ಕಾರ್ಯಗಾರ ಇತ್ಯಾದಿಗಳ ರಕ್ಷಣೆ.
- ಸರಕಾರ, ಮಾಧ್ಯಮಗಳು, ಕಾರ್ಮಿಕರು ಮತ್ತು ಯುನಿಯನ್‌ಗಳ ಜೊತೆಗೆ ಸಂಪರ್ಕ.
- ವ್ಯವಹಾರಗಳ ಇತ್ಯರ್ಥ, ಎಲ್ಲವನ್ನೂ ಕಾನೂನುಬದ್ಧವಾಗಿ ಮುಗಿಸುವುದು.

1. Vanaja Rangaswami, The story of integration: A new interpretation in the context of the Democratic movements in the Princely states of Mysore,Travancore and cochin,1990-1947 (Delhi: Manohar 1981)in Rajeshwar Ghose protest movements in south and south East Asia (Hongkong:centre for Asian studies,1987.
2. Memo on Mysore subsidy,1919,Crown representative records,KSA.
3. Idibium, p.7.
4. HayavadanaRao, Mysore, Gaze tier , voll.II, p.986.
5. Bharat Gold Mines Ltd. by K.S.R.Chari, formerly Secretary, Dept. of Mines, GOI. India, New Delhi sept 1985,p.6
6. Ibidem, p.2.
7. Mine closure planning- A case study of Kolar Gold Fields, S.D.Prasad, 22-23 jan 2003, p.8.
8. Mine closure planning- A case study of Kolar Gold Fields, S.D.Prasad, 22-23 jan 2003, p.3
9. Ibidem.
10. Ibidem.
11. Ibidem, p.4
12. Bharat Gold Mines limited- A study, K.S.R.Chari, Department of Mines, GOI, New Delhi, Sep 1985 p.7
13. Ibidem.
14. Ibidem.
15. Mine closure planning- A case study of Kolar Gold Fields, S.D.Prasad, 22-23 jan 2003,p.8
16. Ibidem.

ಅಧ್ಯಾಯ–11

ಉಳಿದ ಸಂಪತ್ತು ಮತ್ತು ಪರ್ಯಾಯ ಯೋಜನೆಗಳು

ಗಣಿಗಳ ಒಳಗೆ ಮತ್ತು ಹೊರಗೆ ಉಳಿದುಕೊಂಡ ಸಂಪತ್ತಿನ ವಿವರಗಳನ್ನು ನೀಡಲಾಗಿದೆ. ಕೆಜಿಎಫ್ ಗಣಿಗಳು, ಕೆಜಿಎಫ್ ಸುತ್ತಮುತ್ತಲ ಗಣಿಗಳು ಮತ್ತು ಸಯಿನೈಡ್ ಮಣ್ಣಿನ ಗುಡ್ಡಗಳಲ್ಲಿ ಉಳಿದುಕೊಂಡ ಚಿನ್ನದ ವಿವರಣೆಯನ್ನು ಕೊಡಲಾಗಿದೆ. ಜೊತೆಗೆ ಪರ್ಯಾಯ ಯೋಜನೆಗಳು, ಗಣಿಗಳಲ್ಲಿ ತುಂಬಿಕೊಂಡಿರುವ ಜಲರಾಶಿಯನ್ನು ವಿದ್ಯುತ್ ಅಥವಾ ಕೃಷಿಗೆ ಉಪಯೋಗಿಸಿಕೊಳ್ಳುವ ಬಗ್ಗೆ ವಿಶ್ಲೇಷಿಸಲಾಗಿದೆ.

ಚಿನ್ನದ ಗಣಿಗಳನ್ನು ಈಗ ಪೂರ್ಣವಾಗಿ ಮುಚ್ಚಲಾಗಿದೆ. 121 ವರ್ಷಗಳಿಂದ ಗಣಿಗಳ ಜೊತೆಗೆ ಎಲ್ಲಾ ರೀತಿಯ ಸಂಬಂಧಗಳನ್ನೂ ಹೊಂದಿದ್ದ ಕಾರ್ಮಿಕರು ಈಗ ಉದ್ಯೋಗವಿಲ್ಲದೆ ನಿರಾಶ್ರಿತರಾಗಿದ್ದಾರೆ. ಕಾರ್ಮಿಕರು ಮತ್ತು ಅವರ ಕುಟುಂಬಗಳ ಮುಂದಿರುವ ಭವಿಷ್ಯವಾದರೂ ಏನು? ಸರಕಾರ ಯಾವುದಾದರೂ ಪರ್ಯಾಯ ಯೋಜನೆಗಳನ್ನು ರೂಪಿಸುವುದೇ? ಅಥವಾ ಅವರ ಭವಿಷ್ಯ ಗಣಿ ಸುರಂಗಗಳಂತೆ ಕತ್ತಲಾಗಿಯೇ ಉಳಿಯುವುದೇ ಎನ್ನುವ ಪ್ರಶ್ನೆಗಳು ಎಲ್ಲರನ್ನೂ ಕಾಡುತ್ತಿವೆ.

ಕೆಜಿಎಫ್‌ನಲ್ಲಿ 1 ಟನ್ನು ಶಿಲೆಗೆ ಸರಾಸರಿ 2 ರಿಂದ 5 ಗ್ರಾಂ ಚಿನ್ನ ದೊರಕುವ ಬಹಳಷ್ಟು ಅದಿರನ್ನು ತೆಗೆಯದೇ ಹಾಗೆ ಬಿಡಲಾಯಿತು. ಕಾರಣ 1 ಟನ್ನು ಶಿಲೆಯಲ್ಲಿ ದೊರಕುವ ಸರಾಸರಿ 3 ರಿಂದ 5 ಗ್ರಾಂ ಚಿನ್ನ ಸಂಸ್ಕರಿಸುವುದಕ್ಕೆ ಅದಕ್ಕಿಂತ ಹೆಚ್ಚು

ಹಣ ಖರ್ಚಾಗುತ್ತದೆ. ಒಂದು ಅಂದಾಜಿನ ಪ್ರಕಾರ ಟನ್ನಿಗೆ ಸರಾಸರಿ ಕನಿಷ್ಠ 3ಗ್ರಾಂ ಚಿನ್ನ ದೊರಕುವ 7.6 ಮಿಲಿಯನ್ ಟನ್ನಿನಷ್ಟು ಅದಿರು ಚಾಂಪಿಯನ್ ರೀಫ್ ಒಂದರಲ್ಲಿಯೆ ಇರುವುದಾಗಿ ತಿಳಿದುಬರುತ್ತದೆ. ಪ್ರಸ್ತುತ ಉಳಿದಿರುವ ಚಾಂಪಿಯನ್ ರೀಫ್‌ನ ಆಳ 7615 ಮೀ., ನೇರವಾಗಿ 615 ಮೀ., ಇಳಿಜಾರಿನ ಉದ್ದ 700 ಮೀ., ಸರಾಸರಿ 60 ಡಿಗ್ರಿಗಳು ಬಾಗಿರುವ ಈ ಚಿನ್ನದ ರೀಫ್‌ನ ಸರಾಸರಿ ಅಗಲ 1ಮೀ.

ಒಟ್ಟು 7615 + 700 = 5,330 2 500 ಚದರ ಮೀಟರುಗಳು.

1 ಮೀಟರಿನ ಸರಾಸರಿ ವಾಲ್ಯೂಮ್ 5,33,500 3

ದೊರಕುವ ಅದಿರು 5,33, 500 =2.6

ಒಟ್ಟು ದೊರಕುವ ಅದಿರು 13,900,000 ಟನ್ನುಗಳು. ಚಿನ್ನವಿರುವ ಅದಿರನ್ನು ತೆಗೆಯುವಾಗ ಅಕ್ಕಪಕ್ಕದಲ್ಲಿ ಚಿನ್ನವಿಲ್ಲದ ಅದಿರನ್ನು ಕಳೆದ ಮೇಲೆ 7.6 ಮಿಲಿಯನ್ ಚಿನ್ನವಿರುವ ಅದಿರು ದೊರಕುವುದಾಗಿ ಕಂಡುಬರುತ್ತದೆ.

ಒಟ್ಟಿನಲ್ಲಿ ಮೇಲಿನ ಲೆಕ್ಕಾಚಾರದಂತೆ ಅಂತಿಮವಾಗಿ 7.6 ಮಿಲಿಯನ್ ಟನ್ನು ಅದಿರಿನಿಂದ ಸರಾಸರಿ ಒಂದು ಟನ್ನು ಶಿಲೆಗೆ 3ಗ್ರಾಂ ಚಿನ್ನ ದೊರಕುವ ಎಲ್ಲಾ ಸೂಚನೆಗಳು ಇವೆ. ಇದು ಚಾಂಪಿಯನ್ ರೀಫ್‌ನ ಲೆಕ್ಕಾಚಾರ ಮಾತ್ರ. ಈ ರೀಫ್ ಜೊತೆಗೆ ಹಾಸಿಕೊಂಡಿರುವ ಇನ್ನಿತರ ಸಣ್ಣ ಪುಟ್ಟ ರೀಫ್ಸ್ ಮತ್ತು ಇತರ 25 ರೀಫ್ಸ್‌ಗಳಲ್ಲಿರುವ ಸಣ್ಣ ಪ್ರಮಾಣದ ಅದಿರನ್ನು ಕೊನೆಯವರೆಗೂ ಗಣಿ ಆಡಳಿತ ಸರಿಯಾಗಿ ಲೆಕ್ಕ ಹಾಕಲೇ ಇಲ್ಲ. ಇದರ ಜೊತೆಗೆ ಕೆಜಿಎಫ್ ಹತ್ತಿರದಲ್ಲಿರುವ ಬಿಸಾನತ್ತಂ, ಮಲ್ಲಪ್ಪಕೊಂಡ ಮತ್ತು ಚಿಗುರುಗುಂಟ ಗಣಿಗಳಲ್ಲಿ ಸಾಕಷ್ಟು ಚಿನ್ನವಿದ್ದು ಈ ಗಣಿಗಳನ್ನು ಯಾವಾಗಲಾದರೂ ಪ್ರಾರಂಭಿಸಬಹುದು.

ಈ ಗಣಿಗಳು ಪ್ರಾರಂಭವಾದರೆ 350–500 ಕಾರ್ಮಿಕರಿಗೆ ಕೆಲಸ ನೀಡಬಹುದು. ಈ ಗಣಿಗಳಲ್ಲಿ 1 ಟನ್ನು ಶಿಲೆಗೆ ಸರಾಸರಿ 3–5 ಗ್ರಾಂ ಚಿನ್ನವಿರುವ ಅದಿರು ಸಾಕಷ್ಟಿದೆ. ಆದರೆ ಇಂದಿನ ತಂತ್ರಜ್ಞಾನ ಮತ್ತು ಆಳದ ಗಣಿಗಳಿಂದ ಅದು ಲಾಭದಾಯಕವಲ್ಲ. ಜೊತೆಗೆ ಅದಿರಿನ್ನು ದೂರದಿಂದ ಕೆಜಿಎಫ್ ಮಿಲ್ಲಿಗೆ ಸಾಗಿಸಿ ತರಬೇಕಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಇಂದಿನ ಜಾಗತೀಕರಣದ ಈ ಹೊತ್ತಿನಲ್ಲಿ ಎಲ್ಲದರಲ್ಲೂ ಲಾಭ ನಿರೀಕ್ಷಿಸುವ ಬಹುಮಿಲಿಯ ಕಂಪನಿಗಳು ಮುಂದಕ್ಕೆ ಬರುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಯಾವಾಗಲೋ ಕೈಎತ್ತಿ ಕುಳಿತಿವೆ.

121 ವರ್ಷಗಳಿಂದ 50 ಮಿಲಿಯನ್ ಟನ್ನುಗಳಷ್ಟು ಶಿಲೆಗಳನ್ನು ಪುಡಿಮಾಡಿ ಎಸೆದಿರುವ ಸಯೆನೈಡ್ ಮಣ್ಣಿನ ರಾಶಿಗಳು ಕೆಜಿಎಫ್ ಪ್ರದೇಶದಲ್ಲಿ ಬೆಟ್ಟಗಳಂತೆ

ಹರಡಿಕೊಂಡಿವೆ. ಚಿನ್ನವನ್ನು ಸಂಸ್ಕರಿಸುವಾಗ ಸಯನೈಡ್‌ನ್ನು ಬೆರೆಸುತ್ತಿದ್ದರಿಂದ ಈ ಮಣ್ಣಿನಲ್ಲಿ ಸಯೆನೈಡ್ ಬೆರೆತಿದ್ದು, ಸಯೆನೈಡ್ ಎಂದೇ ಕರೆಯಲಾಗುತ್ತಿದೆ. ಮೊದ ಮೊದಲಿಗೆ ಚಿನ್ನವನ್ನು ಸಂಸ್ಕರಿಸುತ್ತಿದ್ದಾಗ ತಂತ್ರಜ್ಞಾನದ ಕೊರತೆಯಿಂದ ಶಿಲೆಗಳಲ್ಲಿದ್ದ ಚಿನ್ನವನ್ನು ನೂರಕ್ಕೆ ನೂರು ಪಟ್ಟು ಬೇರ್ಪಡಿಸಲು ಸಾಧ್ಯವಾಗದ ಕಾರಣ ಸ್ವಲ್ಪ ಭಾಗ ಚಿನ್ನ ಮಣ್ಣಿನಲ್ಲಿ ಉಳಿದುಕೊಳ್ಳುತ್ತಿತ್ತು.

ಈ ಕಾರಣದಿಂದ ಸಯೆನೈಡ್ ಬೆರೆತಿರುವ ಸರಾಸರಿ 1 ಟನ್ನಿನ ಮಣ್ಣಿನಲ್ಲಿ 1.0 ನಿಂದ 0.7ಗ್ರಾಂನಷ್ಟು ಚಿನ್ನ ಇರುವುದಾಗಿ ತಿಳಿದುಬರುತ್ತದೆ. ಈ ಸಯೆನೈಡ್ ಮಣ್ಣನ್ನು ಮತ್ತೆ ಕೆದರಿ ಅದರ ಮೇಲೆ ರಾಸಾಯನಿಕಗಳನ್ನು ಚೆಲ್ಲಿ ಸಂಸ್ಕರಿಸಿದರೆ 1 ಟನ್ನಿನ ಸಯೆನೈಡ್ ಮಣ್ಣಿನಲ್ಲಿ ಕನಿಷ್ಠ 0.3 ರಿಂದ 0.7ಗ್ರಾಂನಷ್ಟು ಚಿನ್ನವನ್ನು ತೆಗೆಯಬಹುದು. ಆದರೆ ಪ್ರಸ್ತುತ ನಮ್ಮಲ್ಲಿರುವ ತಂತ್ರಜ್ಞಾದಿಂದ ಇದು ಲಾಭದಾಯಕವಲ್ಲ. ಜೊತೆಗೆ ಇದರಿಂದ ತಲೆದೋರುವ ಇನ್ನೊಂದು ಸಮಸ್ಯೆ ಎಂದರೆ ಈಗಾಗಲೆ ಪರಿಸರ ಮಾಲಿನ್ಯದಿಂದ ನರಳುತ್ತಿರುವ ಕೆಜಿಎಫ್ ಮತ್ತು ಸುತ್ತಮುತ್ತಲ ಪ್ರದೇಶಗಳು ಇನ್ನಷ್ಟು ಪರಿಸರ ಮಾಲಿನ್ಯಕ್ಕೆ ಒಳಗಾಗುತ್ತವೆ. ಸಯೆನೈಡ್ ಮಣ್ಣಿನಿಂದ ಉಂಟಾಗುವ ರೋಗಗಳು ಹೆಚ್ಚಾಗುತ್ತದೆ.

ಗಣಿಗಳಲ್ಲಿ ಉಳಿದುಕೊಂಡ ಚಿನ್ನ[1] :

ಗಣಿ ಹೆಸರು	ಅದಿರು (ಲಕ್ಷ ಟನ್ನು)	ಚಿನ್ನದ ಸರಾಸರಿ ಅಂಶ (1 ಟನ್ನಿಗೆ ಚಿನ್ನ ಗ್ರಾ0ಗಳಲ್ಲಿ)
ನಂದಿದುರ್ಗ	೮.೭೮	೪.೬೧
ಚಿಗುರುಗುಂಟ	೧೯.೯೯	೨.೩೫-೫.೮೪
ಬಿಸಾನತ್ತಂ	೦.೭೬	೫.೯೫
ಚಾಂಪಿಯನ್	೭೬.೦	೫.೦೦
ಮೈಸೂರು ಗಣಿ	–	–
ಯಾಪಮಾನ	೩-೫.೦	–

ಬಿಜಿಎಮ್‌ಎಲ್ ಕಂಪನಿ 1994ರಲ್ಲಿ ತಾನು ಬೇರೆ ಕಂಪನಿಗಳಿಗೆ ಗುತ್ತಿಗೆ ನೀಡುವ ದಾಖಲೆಯಲ್ಲಿ ಚಿನ್ನದ ನಿಕ್ಷೇಪಗಳ ಬಗ್ಗೆ ಈ ಕೆಳಗಿನ ವಿವರಗಳನ್ನು ನೀಡಿದೆ :

1) ನಂದಿದುರ್ಗ, ಮೈಸೂರು ಮೈನ್ಸ್ ಮತ್ತು ಚಾಂಪಿಯನ್ ಗಣಿಗಳಲ್ಲಿ :

ಒಟ್ಟು 1.352 ಮಿಲಿಯನ್ ಟನ್ನು ಅದಿರು, 1 ಟನ್ನು ಶಿಲೆಗೆ/ 5.04 ಗ್ರಾಂ. ಚಿನ್ನ.

2) ಹಳೆ ಬಿಸಾನತ್ತಂ:

0.101 ಮಿಲಿಯನ್ ಟನ್ನು ಅದಿರು, 1 ಟನ್ನು ಶಿಲೆಗೆ/5.0ಗ್ರಾಂ. ಚಿನ್ನ. 3) ಚಿಗುರುಗುಂಟ: 2.107 ಮಿಲಿಯನ್ ಟನ್ನು ಅದಿರು, 1 ಟನ್ನು ಶಿಲೆಗೆ/5.7 ಗ್ರಾಂ. ಚಿನ್ನ. 4) ಮಲ್ಲಪ್ಪಕೊಂಡ: 0.773 ಮಿಲಿಯನ್ ಟನ್ನು ಅದಿರು, 1 ಟನ್ನು ಶಿಲೆಗೆ/ 2.48 ಗ್ರಾಂ. ಚಿನ್ನ. 5) ಯಾಪಮಾನ (ಆಂಧ್ರಪ್ರದೇಶ) : 0.368 ಮಿಲಿಯನ್ ಟನ್ನು ಅದಿರು, 1ಟನ್ನು ಶಿಲೆಗೆ/3.7ಗ್ರಾಂ. ಚಿನ್ನ.

ಸಯೆನ್ಶೈಡ್ ಗುಡ್ಡಗಳಲ್ಲಿ ಚಿನ್ನ[2] :

	(ಸಯೆನ್ಶೈಡ್ ಮಣ್ಣು ಟನ್ನುಗಳಲ್ಲಿ)	(1 ಟನ್ನು ಶಿಲಿಗೆ ಚಿನ್ನ ಗ್ರಾಂಗಳಲ್ಲಿ)
ಮೈಸೂರು ಮೈನ್ಸ್ ದಕ್ಷಿಣ	೨೭೨೩೪೯೦	೦.೬೨
ಮೈಸೂರು ಮೈನ್ಸ್ ಉತ್ತರ	೭೦೦೩೭೮೦	೦.೫೬
ಕಾರ್ಪೆಂಟರಿ ಶ್ಯಾಫ್ಟ್ ಹತ್ತಿರ	೨೮೩೭೪೬೦	೦.೭೦
ಚಾಂಪಿಯನ್ ರೀಫ್ಸ್	೪೩೬೦೪೦೦	೦.೫೫
ಉರಿಗಾಂ	೨೩೮೨೯೧೦	೦.೭೪
ಕೆನ್ನಡೀಸ್ ಲೈನ್	೧೧೭೪೩೬೨೦	೦.೮೯
ಬಾಲ್ಘಾಟ್	೮೦೮೭೪೦	೦.೭೬
ಮೊತ್ತ/ಸರಾಸರಿ	೩೧೮೬೦೪೦೦	೦.೭೨

ಇವಲ್ಲದೆ ಇನ್ನೂ ಹತ್ತಾರು ಸಣ್ಣಪುಟ್ಟ ಸಯೆನೇಡ್ ಗುಡ್ಡಗಳು ಗಣಿಗಳ ಸುತ್ತಮುತ್ತಲೂ ಬಿದ್ದಿವೆ.

ಕೆಜಿಎಫ್ ಸುತ್ತಮುತ್ತಲ ಗಣಿಗಳು :

ಚಿಗುರುಗುಂಟ:

ಕೋಲಾರ ಶಿಷ್ಟ್ ಪಟ್ಟಿಯ ದಕ್ಷಿಣ ತುದಿಯಲ್ಲಿರುವ ಚಿಗುರುಗುಂಟ (ಆಂಧ್ರ ಪ್ರದೇಶ) ಚಿನ್ನದ ಗಣಿಗಳು ಕೆಜಿಎಫ್‌ನಿಂದ 30 ಕಿ.ಮೀ ದೂರದಲ್ಲಿವೆ. ಇಲ್ಲಿನ ಚಿನ್ನದ ನಿಕ್ಷೇಪ ಹಲವು ಪಟ್ಟಿಗಳಾಗಿ ಉದ್ದಕ್ಕೆ ಹಾಸಿಕೊಂಡಿದೆ. ಈ ಪ್ರದೇಶದಲ್ಲಿ ಪುರಾತನ ಗಣಿಗಳಿದ್ದು, ದಟ್ಟವಾದ ಕಾಡು ಆವರಿಸಿಕೊಂಡಿದ್ದರಿಂದ ಕೆಜಿಎಫ್ ಪ್ರಾರಂಭವಾದ ಎಷ್ಟೋ ವರ್ಷಗಳ ನಂತರವೂ ಈ ಗಣಿಗಳು ಮನುಷ್ಯರಿಂದ ದೂರವಾಗಿ

ಅಜ್ಞಾತವಾಗಿಯೇ ಉಳಿದುಕೊಂಡಿದ್ದವು. 1980ರ ದಶಕದಲ್ಲಿ ಪುರಾತನ ಗಣಿಗಳಿರುವುದನ್ನು ಜಿಎಸ್ಐ ಭೂವಿಜ್ಞಾನಿಗಳು ಗುರುತಿಸಿ ವ್ಯಾಪಕ ಶೋಧನೆಗಳನ್ನು ನಡೆಸಿದರು. ಜಿಎಸ್ಐ ಮತ್ತು ಎಂಇಸಿಎಲ್ ಕಂಪನಿಗಳು ಚಿಗುರುಗುಂಟ ನಿಕ್ಷೇಪದಲ್ಲಿ ಯೋಜನೆಗಳನ್ನು ಮಾಡಿದರೆ, ಬಿಜಿಎಮ್ಎಲ್ ಶ್ಯಾಫ್ಟ್‌ಗಳನ್ನು ಮಾಡಿ ಗಣಿಗಾರಿಕೆಯನ್ನು ಪ್ರಾರಂಭಿಸಿತು. 5 ರಿಂದ 6 ಅಡಿ ಅಗಲವಿರುವ ಚಿನ್ನದ ಅದಿರಿನ ಶಿಲೆಗಳು ಆಳದವರೆಗೂ ಇದ್ದು 1985ರಲ್ಲಿ ಶ್ಯಾಫ್ಟ್‌ಗಳನ್ನು ಮಾಡಲಾಯಿತು. ಮೊದಲ ಎರಡು ತಿಂಗಳಲ್ಲಿ 1275 ಟನ್ ಅದಿರಿನಲ್ಲಿ 1ಟನ್ ಶಿಲೆಗೆ 2.35 ಗ್ರಾಂ ಚಿನ್ನವನ್ನು ತೆಗೆಯಲಾಯಿತು. ಈ ಪ್ರದೇಶದಲ್ಲಿ ಒಟ್ಟು 3 ವಲಯಗಳಿದ್ದು ಒಟ್ಟು 1.99 ಮಿಲಿಯನ್ ಟನ್ನು ಅದಿರು ಇರುವುದಾಗಿ ಲೆಕ್ಕ ಹಾಕಲಾಗಿದೆ. ಇದು ಸಣ್ಣ ಪ್ರಮಾಣದ ನಿಕ್ಷೇಪವಾಗಿದ್ದು ಇಲ್ಲಿ ಮಿಲ್ಲು ಸ್ಥಾಪಿಸುವುದು ದುಬಾರಿ ವೆಚ್ಚದ ಕೆಲಸವಾಗಿದ್ದು ಅದಿರನ್ನು ಕೆಜಿಎಫ್ ಮಿಲ್ಲಿಗೆ ಸಾಗಿಸಲಾಗುತ್ತಿತ್ತು.

ಯಾಪಮಾನ :

1976–77ರ ತನಕ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ತೀರಾ ಕಡಿಮೆ ಇದ್ದುದರಿಂದ ಕೆಜಿಎಫ್ ಕಂಪನಿಗಳು ತನ್ನ ಸುತ್ತಮುತ್ತಲು ಕಡಿಮೆ ಚಿನ್ನವಿರುವ ನಿಕ್ಷೇಪಗಳ ಬಗ್ಗೆ ಒಲವು ತೋರಲಿಲ್ಲ. ತನ್ನ 5ನೇ ಯೋಜನೆಯಲ್ಲಿ ಕೆಜಿಎಫ್ ಈ ನಿಕ್ಷೇಪಗಳ ಬಗ್ಗೆ ಯೋಚಿಸತೊಡಗಿತು. ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ ಬಿಜಿಎಮ್ಎಲ್ ಕಂಪನಿ ಯಾಪಮಾನ ಗಣಿಗಳ ಹತ್ತಿರ ಮಿಲ್ಲು ಸ್ಥಾಪಿಸಿ 1984ರಲ್ಲಿ ಕೆಲಸ ಪ್ರಾರಂಭಿಸಿತು.

ರಾಮಗಿರಿ :

ಆಂಧ್ರಪ್ರದೇಶ, ಅನಂತಪುರ ಜಿಲ್ಲೆಯ ರಾಮಗಿರಿಯಲ್ಲಿ ಕೆಲವು ಪುರಾತನ ಕಾಲದ ಗುಂಡಿಗಳನ್ನು ಕಂಡುಹಿಡಿಯಲಾಯಿತು. 60–70ರ ದಶಕದಲ್ಲಿ ಇಲ್ಲಿ ಗಣಿಗಳನ್ನು ಪ್ರಾರಂಭಿಸಿದಾಗ ಚಿನ್ನದ ಬೆಲೆ ತೀವ್ರವಾಗಿ ಕುಸಿತಗೊಂಡ ಕಾರಣ ಗಣಿಗಳನ್ನು ಮುಚ್ಚಲಾಯಿತು. ಕೆಜಿಎಫ್ ಗಣಿಗಳಿಗೆ ಹೋಲಿಸಿದಾಗ ಇಲ್ಲಿ ಚಿನ್ನದ ನಿಕ್ಷೇಪಗಳು ಅಷ್ಟೇನೂ ಆಳದಲ್ಲಿರಲಿಲ್ಲ. ಮಿಲ್ಲಿಂಗ್ ವೆಚ್ಚ ಕೆಜಿಎಫ್‌ನಷ್ಟು ದುಬಾರಿಯಾಗಿರಲಿಲ್ಲ. ಆದರೆ ಚಿನ್ನದ ಅಂಶ ಕಡಿಮೆ ಇತ್ತು. 1984ರಲ್ಲಿ ಯೋಚಿಸಿದ ಲೆಕ್ಕದಂತೆ 1 ಟನ್ನು ಅದಿರನ್ನು ಸಂಸ್ಕರಿಸಲು 368ರೂ. ವೆಚ್ಚವಾಗುತ್ತಿತ್ತು. ಆದರೆ ಆಗ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಒಂದು ಗ್ರಾಂ ಚಿನ್ನಕ್ಕೆ ಕೇವಲ 90ರೂ. ಮಾತ್ರ ಇತ್ತು. 1985ರ ಏಪ್ರಿಲ್–ಜೂನ್ ಅವಧಿಯಲ್ಲಿ 5360 ಟನ್ನು ಅದಿರನ್ನು ತೆಗೆಯಲಾಯಿತು. ಇದರಲ್ಲಿ 1 ಟನ್ನಿಗೆ ಸರಾಸರಿ 2.87 ಗ್ರಾಂ ಚಿನ್ನವನ್ನು ಸಂಸ್ಕರಿಸಲಾಯಿತು. ಒಟ್ಟಿನಲ್ಲಿ 1 ಟನ್ನು ಅದಿರಿನಲ್ಲಿ

4.26 ಗ್ರಾಂ ಚಿನ್ನವಿದ್ದರೆ ಮಿಲ್ಲಿನಲ್ಲಿ ಸಂಸ್ಕರಿಸಿದ ಮೇಲೆ 1 ಟನ್ನು ಶಿಲೆಗೆ 3.83 ಗ್ರಾಂ ಚಿನ್ನ ಮಾತ್ರ ದೊರಕುತ್ತಿತ್ತು.

ಈ ಗಣಿಗಳು ಪ್ರಾರಂಭವಾದ ಮೇಲೆ ತೀವ್ರ ತೊಂದರೆಗೆ ಸಿಲುಕಿಕೊಂಡವು. ಗಣಿಗಳಿಗೆ ಬೇಕಾದ ವಿದ್ಯುತ್ ಮತ್ತು ನೀರಿನ ಸೌಕರ್ಯವೂ ಇರಲಿಲ್ಲ. ಈ ಪ್ರದೇಶ ಒಂದೇ ಸಮನೇ ಮಳೆಯಿಲ್ಲದೆ ಬಣಗುಟ್ಟಿದಾಗ ಗಣಿಗಳು ತೀವ್ರ ತೊಂದರೆಯನ್ನು ಅನುಭವಿಸಿದವು. ಕಂಪನಿ, ಗಣಿಯ ಹತ್ತಿರದಲ್ಲಿ ಒಂದು ಆಣೆಕಟ್ಟು ಕಟ್ಟಿ ನೀರನ್ನು ಸಂಗ್ರಹಿಸಿತು. 1 ಟನ್ನು ಅದಿರನ್ನು ಸಂಸ್ಕರಿಸಲು 2.5 ಟನ್ನು ನೀರು ಬೇಕಾಗಿತ್ತು. ಬಿಜಿಎಮ್‌ಎಲ್ ಪರಿಮಿತ ಆವರ್ತ (ಕ್ಲೋಜ್ಡ್ ಸರ್ಕ್ಯೂಟ್) ಪದ್ಧತಿಯ ಮೂಲಕ 1 ಟನ್ನು ಅದಿರನ್ನು 1 ಟನ್ನು ನೀರಿನಲ್ಲಿಯೆ ಸಂಸ್ಕರಿಸುವುದನ್ನು ಕಂಡುಕೊಂಡಿತು. ಆದರೂ ನೀರಿನ ಸಮಸ್ಯೆಯಿಂದಲೇ ಕೊನೆಗೂ ಈ ಗಣಿಗಳನ್ನು ಮುಚ್ಚಲಾಯಿತು.

ಕೆಜಿಎಫ್ ಒಂದು ಕಾಲದಲ್ಲಿ ಹೆಚ್ಚು ಲಾಭದಾಯಕವಾದ ಕಂಪನಿಯಾಗಿದ್ದು ದೇಶದಲ್ಲಿಯೇ ಅತ್ಯಂತ ವ್ಯವಸ್ಥಿತ ಕಾರ್ಮಿಕ ಸಂಘಟನೆಯನ್ನು ಹೊಂದಿತ್ತು. ಸರಕಾರದ ಮಲತಾಯಿ ಧೋರಣೆ, ಗಡಿನಾಡು ಉದಾಸೀನತೆ, ಸಾಮಾಜಿಕ ಅಸಮಾನತೆ ಮತ್ತು ಸ್ಥಳೀಯ ರಾಜಕಾರಣದಿಂದ ಕೆಜಿಎಫ್ ತನ್ನ ವಯಸ್ಸಿಗೆ ಮುಂಚೆಯೇ ದುಃಸ್ಥಿತಿಗೆ ತಲುಪಬೇಕಾಯಿತು. ಗಣಿ ಕಾರ್ಮಿಕರ ಮೇಸ್ತ್ರಿಯೊಬ್ಬ 1930ರಲ್ಲಿ ಐಎಎಸ್ ಅಧಿಕಾರಿಯೊಬ್ಬರಿಗೆ Enna samme, onga mysore governmentan thangathai ppoye vellekkaranukku khudutthu irumbay nondran? (Samme, why does your mysore government give away gold to the whiteman and scratch for iron?) ಎಂದು ಕೇಳಿದ್ದ.[3] ಆ ಕಾಲಕ್ಕೆ ಕೆಜಿಎಫ್ ಪ್ರದೇಶವು ಮೈಸೂರು ಸಂಸ್ಥಾನದ ಕೆಳಗೆ ಬ್ರಿಟಿಷರ ಆಡಳಿತದಲ್ಲಿತ್ತು. 1799ರಲ್ಲಿ ಮೈಸೂರು ಹುಲಿ ಟಿಪ್ಪು ಸುಲ್ತಾನ್‌ರನ್ನು ಮೋಸದಿಂದ ಸೋಲಿಸಿದ ಬ್ರಿಟಿಷರಿಗೆ ಗೋಲ್ಕೊಂಡದ ಸುಲ್ತಾನರು, ಮರಾಠರು, ಕೊಡಗಿನವರು, ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಹಲವು ಸಣ್ಣ ಪುಟ್ಟ ದೇಶದ್ರೋಹಿ ಪಾಳೇಗಾರರೆಲ್ಲ ಬ್ರಿಟಿಷರ ಸಹಾಯಕ್ಕೆ ನಿಂತಿದ್ದರು. ಟಿಪ್ಪು ಸುಲ್ತಾನ್ ಇಲ್ಲದ ಕನ್ನಡ ನಾಡಿನ ಬಗ್ಗೆ ಮಾತನಾಡುವವರು ಯಾರೂ ಇಲ್ಲದೆ ಹೋದಾಗ ಬ್ರಿಟಿಷರು ಈ ಪ್ರದೇಶವನ್ನು ಕುರಿ ಕೊಯ್ದು ಮಾಂಸ ಹಂಚುವಂತೆ ಸಹಾಯ ಮಾಡಿದವರಿಗೆಲ್ಲ ರಾಜ್ಯದ ಭಾಗಗಳನ್ನು ಬಳುವಳಿಯಾಗಿ ನೀಡಿಬಿಟ್ಟರು. ಬೀದರ್, ರಾಯಚೂರು, ಗುಲ್ಬರ್ಗಾ ಪ್ರದೇಶಗಳನ್ನು ನಿಜಾಮರಿಗೆ, ಬೆಳಗಾಂ, ಹುಬ್ಬಳ್ಳಿ-ದಾರವಾಡ ಪ್ರದೇಶಗಳನ್ನು ಮುಂಬಯಿ ಪ್ರಾಂತ್ಯಕ್ಕೆ, ದಕ್ಷಿಣ ಕರ್ನಾಟಕದ ಪ್ರದೇಶಗಳನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಕೊಟ್ಟುಬಿಟ್ಟರು. ಉಳಿದ ಪ್ರದೇಶವನ್ನು ಕೊಡಗು ಮತ್ತು ಮೈಸೂರು ಸಂಸ್ಥಾನಕ್ಕೆ ನೀಡಲಾಯಿತು. ಈ ಎಲ್ಲಾ ಪ್ರದೇಶಗಳಲ್ಲೂ ಚದುರಿಹೋಗಿದ್ದ ಕನ್ನಡಿಗರೆಲ್ಲ ಮತ್ತೇ

ಒಟ್ಟುಕೂಡಬೇಕಾದರೆ ಕರ್ನಾಟಕ ರಾಜ್ಯ ಏಕೀಕರಣ ಆಗುವವರೆಗೂ (1956) ಕಾಯಬೇಕಾಯಿತು.

❖❖❖

ಕೆಜಿಎಫ್ ವ್ಯಾಪ್ತಿಯನ್ನು ಬಿಟ್ಟರೆ ಗದಗಿನ ಹತ್ತಿರ ಮೈಸೂರು ಮತ್ತು ಹೊಸೂರು ಎಂಬ ಎರಡು ಗಣಿಗಳನ್ನು ಬಿಜಿಎಮ್‌ಎಲ್ ಕೆಲವು ವರ್ಷಗಳು ಕಾಲ ನಡೆಸಿತ್ತು. ತುಮಕೂರಿನ ಹತ್ತಿರ ಅಜ್ಜನಹಳ್ಳಿಯಲ್ಲಿ ಹಟ್ಟಿ ಚಿನ್ನದ ಗಣಿಗಳ ಆಡಳಿತ ಕೆಲವು ವರ್ಷಗಳು ಕಾಲ ಗಣಿಗಳನ್ನು ಮಾಡಿ ನಿಲ್ಲಿಸಿತು. ಹಾಸನ ಹತ್ತಿರದ ಕೆಂಪಿನಕೋಟೆ ಗಣಿಗಳನ್ನು ಬಿಜಿಎಮ್‌ಎಲ್ ಸ್ವಲ್ಪ ದಿನಗಳು ಮಾಡಿ ಕೈಬಿಟ್ಟಿತು. ರಾಯಚೂರು ಜಿಲ್ಲೆಯ ಹಟ್ಟಿಯಲ್ಲಿ ಪ್ರಸ್ತುತ ಮೂರು ಕಡೆ ಗಣಿಗಾರಿಕೆ ನಡೆಯುತ್ತಿದೆ. ಹಟ್ಟಿ, ಹೀರಾ ಬುದ್ಧಿನಿ ಮತ್ತು ಊಟಿ. ಹಟ್ಟಿ ವ್ಯಾಪ್ತಿಯಲ್ಲಿ 3.0 ರಿಂದ 7.0ಗ್ರಾಂ ಚಿನ್ನವಿರುವ ಇನ್ನೂ ಹತ್ತು ನಿಕ್ಷೇಪಗಳಿವೆ. ಇವೆಲ್ಲವನ್ನು ಸಂಶೋಧಿಸಿದ್ದು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಇಲಾಖೆ (ಜಿಎಸ್‌ಐ). ಇದಲ್ಲದೆ ಕರ್ನಾಟಕದ ಹಲವು ಪ್ರದೇಶಗಳ ಶಿಷ್ಟ್ ಪಟ್ಟಿಗಳಲ್ಲಿ ಸಣ್ಣ ಪ್ರಮಾಣದ ಚಿನ್ನವಿರುವ ಅನೇಕ ನಿಕ್ಷೇಪಗಳಿವೆ.

ಪರ್ಯಾಯ ಯೋಜನೆಗಳು :

ಪಾತಾಳ ಆಣೆಕಟ್ಟುಗಳು

ಚಿನ್ನದ ಗಣಿಗಳು ಸ್ಥಗಿತಗೊಂಡ ಮೇಲೆ ಕೆಜಿಎಫ್ ಗಣಿಗಳ ತುಂಬಾ ನೀರು ತುಂಬಿಕೊಂಡಿತು. ಗಣಿಗಳ ಆಳ 13,500 ಅಡಿಗಳಿದ್ದು, 12500 ಎಕರೆಗಳ ಉದ್ದಗಲಕ್ಕೂ ಹರಡಿವೆ. 1647 ಕಿ.ಮೀ. ಉದ್ದದ ಸುರಂಗಗಳನ್ನು ಹೊಂದಿರುವ ಗಣಿಗಳಲ್ಲಿ ಒಟ್ಟು 50 ಮಿಲಿಯನ್ ಟನ್ನು ಅದಿರು ಹೊರ ತಗೆಯಲಾಗಿದ್ದು, ಖಾಲಿಯಾದ ಸುರಂಗಗಳಲ್ಲಿ ಒಂದು ಅಂದಾಜಿನಂತೆ 17.241 ಮಿಲಿಯನ್ ಘನ ಚದರ ಮೀ. ನೀರು ತುಂಬಿದೆ. ಎಲ್ಲಾ ಗಣಿಗಳು ನಡೆಯುತ್ತಿದ್ದಾಗ ದಿನಕ್ಕೆ ಸರಾಸರಿ 91,37,460 ಲೀಟರುಗಳಷ್ಟು ನೀರನ್ನು ಪಂಪುಗಳಿಂದ ಮೇಲಕ್ಕೆ ತೆಗೆಯಲಾಗುತ್ತಿತ್ತು. ಒಂದು ಆಣೆಕಟ್ಟು ಕಟ್ಟಿ ಅದಕ್ಕೆ ಕಾಲುವೆಗಳನ್ನು ಮಾಡಬೇಕಾದರೆ ಸಾವಿರಾರು ಕೋಟಿ ವೆಚ್ಚವಾಗುತ್ತವೆ. ಆದರೆ ಇಲ್ಲಿ ಆಣೆಕಟ್ಟು ನೀರು ಎರಡೂ ಇದ್ದು ಕಾಲುವೆಗಳನ್ನು ಮಾತ್ರ ನಿರ್ಮಿಸಬೇಕಿದೆ. ಅಂತರ್ಜಲ ಮಟ್ಟ ಈಗಾಗಲೇ ಜಿಲ್ಲೆಯಲ್ಲಿ ಪಾತಾಳಕ್ಕೆ ಕುಸಿದಿದ್ದು ಮುಂದಿನ ದಿನಗಳಲ್ಲಿ ಕುಡಿಯವ ನೀರಿನ ಹಾಹಾಕಾರ ಮುಗಿಲು ಮುಟ್ಟಲಿದೆ. ರೈತರು ಕೃಷಿ ಮಾಡುವುದು ಗಗನ ಕುಸುಮವಾಗಲಿದೆ. ಈ ಹೊತ್ತಿನಲ್ಲಿ ಗಣಿಗಳಲ್ಲಿ ಸಂಗ್ರಹವಾಗಿರುವ ನೀರನ್ನು ಉಪಯೋಗಿಸಿಕೊಂಡು ಈ ಬರಡು ನೆಲದ ಕನಸನ್ನು ನನಸಾಗಿಸುವ ಕೆಲವು ಒಳ್ಳೆಯ ಯೋಜನೆಗಳು ಬೇಕಾಗಿವೆ. ಗಣಿಗಳ ಒಳಗಿರುವ ನೀರಿನ ಸರಾಸರಿ ಉಷ್ಣತೆ 30ಡಿಗ್ರಿ

ಇದ್ದು ಅದರಲ್ಲಿ ಜಲವಿದ್ಯುತ್‌ನ್ನು ಉತ್ಪಾದಿಸಬಹುದು ಎನ್ನುವ ಆಲೋಚನೆಗಳು ಕೂಡ ಕೆಲವು ವಿಜ್ಞಾನಿಗಳಿಗೆ ಬಂದಿದ್ದು, ಅದು ಶೀಘ್ರ ಕಾರ್ಯಗತವಾಗಬೇಕಿದೆ.

❖❖❖

ಗಣಿಗಳನ್ನು ಪ್ರಾರಂಭಿಸಿದಾಗ ಮೊದಲಿಗೆ ಶ್ಯಾಫ್ಟ್‌ಗಳನ್ನು ಮಾಡಲಾಗುತ್ತಿತ್ತು. ಭೂಪದರುಗಲ್ಲಿ ಶೇಖರಣೆಯಾಗಿದ್ದ ಅಂತರ್ಜಲದ ನೀರು ಶ್ಯಾಫ್ಟ್‌ಗಳ ಕಡೆಗೆ ನುಗ್ಗಿ ಬರುತ್ತಿತ್ತು. ಈ ನೀರು ಸುಮಾರು 1100 ಅಡಿಗಳ ಆಳದವರೆಗೂ ಇರುತ್ತಿತ್ತು. ಹೀಗೆ ನುಗ್ಗಿ ಬರುವ ನೀರನ್ನು ತಡೆ ಹಿಡಿಯುವುದು ಬಹಳ ಕಷ್ಟದ ಕೆಲಸವಾಗಿದ್ದು ಇದನ್ನು ತಡೆಯಲು ತಜ್ಞ ಇಂಜಿನಿಯರನ್ನು ಜಾನ್ ಟೇಲರ್ ನೇಮಿಸಿದರು. ಇವರು ವಿಶೇಷ ಯೋಜನೆಗಳನ್ನು ಮಾಡಿ ಗಣಿಗಳ ಒಳಗೆ ಆಣೆಕಟ್ಟುಗಳನ್ನು ನಿರ್ಮಿಸಿ ಗಣಿ ಕೆಲಸಕ್ಕೆ ಅಪಾಯವಾಗದಂತೆ ನೋಡಿಕೊಂಡರು. ಅನಂತರ 121 ವರ್ಷ ಕಾಲ ಶಕ್ತಿಯುತ ಪಂಪುಗಳು ಈ ನೀರನ್ನು ನಿರಂತರವಾಗಿ ಮೇಲಕ್ಕೆ ಎತ್ತುತ್ತಲೇ ಇದ್ದವು. ಇದರ ಜೊತೆಗೆ ಲಕ್ಷಾಂತರ ಗ್ಯಾಲನ್ ನೀರನ್ನು ಗಣಿಗಳ ಒಳಗೆ ಅಲ್ಲಲ್ಲಿ ಆಣೆಕಟ್ಟುಗಳ ಮೂಲಕ ಶೇಖರಣೆ ಮಾಡಲಾಯಿತು.

ಎಲ್ಲಾ ಶ್ಯಾಫ್ಟ್‌ಗಳ ಒಳಗೆ ಸಂಪರ್ಕವನ್ನು ಕಲ್ಪಿಸಿ 1100 ಅಡಿಗಳ ಕೆಳಗೆ 7 ಅಡಿಗಳ ವ್ಯಾಸದ 7000 ಅಡಿಗಳ ಉದ್ದದ ಸುರಂಗವನ್ನು ಕೊರೆಯಲಾಯಿತು. ಇದರ ಬಾಯಿಗೆ ಸಿಮೆಂಟ್ ಹಾಕಿ ಮುಚ್ಚಿ, ಇದನ್ನೇ ಗಣಿಗಳ ಒಳಗಿನ ಆಣೆಕಟ್ಟು ಎಂದು ಕರೆಯಲಾಯಿತು. ಗಣಿಗಳು ನಡೆಯುತ್ತಿದ್ದ ಕಾಲದಲ್ಲಿ ಈ ರೀತಿಯ ಆಣೆಕಟ್ಟುಗಳ ಹತ್ತಿರದಲ್ಲಿ ಅಧಿಕ ಸಾಮರ್ಥ್ಯದ ಪಂಪ್‌ಹೌಸ್‌ಗಳನ್ನು ನಿರ್ಮಿಸಿ ನೀರನ್ನು ನಿರಂತರವಾಗಿ ಮೇಲಕ್ಕೆ ತೆಗೆಯಲಾಗುತ್ತಿತ್ತು. ಆ ನೀರನ್ನು ದೊಡ್ಡ ದೊಡ್ಡ ತೊಟ್ಟಿಗಳಲ್ಲಿ ಶೇಖರಿಸಿ ಅಲ್ಲಿಂದ ನೀರನ್ನು ಪೈಪ್‌ಗಳ ಮೂಲಕ ಗಣಿ ಪ್ರದೇಶಗಳ ಎಲ್ಲಾ ಕಾಲೋನಿಗಳಿಗೂ ಸರಬರಾಜು ಮಾಡಲಾಗುತ್ತಿತ್ತು. ದಿನವೆಲ್ಲ ಪಂಪ್ ಮಾಡಿದರೂ ಆಣೆಕಟ್ಟೆಯೊಳಗೆ ಒಂದು ಅಥವಾ ಒಂದೂವರೆ ಅಡಿ ನೀರು ಕಡಿಮೆಯಾಗುತ್ತಿತ್ತು. ಗಿಫ್‌ರ್ಡ್, ಟೆನೆಂಟ್ಸ್, ಗ್ಲೆನ್ ಶ್ಯಾಫ್ಟ್‌ಗಳ ಒಳಗೂ ಇದೇ ರೀತಿಯ ಆಣೆಕಟ್ಟುಗಳಿವೆ. ಆದರೆ ಈಗ ಅವೆಲ್ಲವೂ ತುಂಬಿ ಇಡೀ ಗಣಿಗಳೆ ನೀರಿನಿಂದ ತುಂಬಿ ತುಳುಕಾಡುತ್ತಿವೆ.[4]

ಕೆರೆಗಳ ಜಿಲ್ಲೆ ಕೋಲಾರ:

ಕೋಲಾರ ಎಂದರೆ ಕೆರೆಗಳ ಜಿಲ್ಲೆ. ಇಲ್ಲಿ ಇರುವಷ್ಟು ಕೆರೆಗಳು ಯಾವ ಜಿಲ್ಲೆಯಲ್ಲೂ ಇಲ್ಲ. ಜಿಲ್ಲೆಯಲ್ಲಿ ಒಟ್ಟು 4000 ಕೆರೆಗಳು ಇರುವುದಾಗಿ ತಿಳಿದುಬರುತ್ತದೆ. ಕೆರೆಗಳ ಜಿಲ್ಲೆ ಎಂದು ಹೆಮ್ಮೆಯಿಂದ ಕರೆಯುತ್ತಿದ್ದ ಕೋಲಾರ ಜಿಲ್ಲೆಯ ಅಂತರ್ಜಲ ಮಟ್ಟ ಪಾತಾಳ ತಲುಪಿ ದಶಕಗಳೇ ಕಳೆದುಹೋಗಿವೆ. ಜಿಲ್ಲೆಯಲ್ಲಿ ಹೆಸರಿಗೆ ಐದು ನದಿಗಳು

ಹುಟ್ಟಿದರೂ ಅವು ಅನ್ಯ ರಾಜ್ಯಗಳಿಗೆ ಹರಿದುಹೋಗಿ ಜಿಲ್ಲೆಗೆ ನಿರುಪಯುಕ್ತವಾಗಿವೆ. ಜಿಲ್ಲೆಯಲ್ಲಿ ತೀರ ಕಡಿಮೆ ಮಳೆ ಬೀಳುವುದರಿಂದ ಸಹಜವಾಗಿಯೇ ನದಿಗಳು ಯಾವಾಗಲೋ ಬತ್ತಿಹೋಗಿ ಇದ್ದಬದ್ದ ಅರಣ್ಯ ನಾಶವಾಗಿ ನೆಲ ಬರಡಾಗಿದೆ. ಜಿಲ್ಲೆಯಲ್ಲಿ ಕುಡಿಯುವುದಕ್ಕೆ ಮತ್ತು ಕೃಷಿ ಮಾಡುವುದಕ್ಕೆ ನೀರಿನ ಅಗತ್ಯ ಹಿಂದೆಂದಿಗಿಂತ ಇಂದು ಹೆಚ್ಚು ಅವಶ್ಯಕತೆ ಇದೆ. ಗಣಿಗಳ ಒಳಗೆ ಸಂಗ್ರಹವಾಗಿರುವ ಹೇರಳ ಜಲರಾಶಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ಕಡಿಮೆ ಹಣದಲ್ಲಿ ಇಡೀ ಜಿಲ್ಲೆ ಹೆಚ್ಚು ಪ್ರಯೋಜನ ಪಡೆಯುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಅಂತರ್ಜಲದ ಆಣೆಕಟ್ಟುಗಳಲ್ಲಿ ಹೇರಳವಾಗಿ ಸಂಗ್ರಹವಾಗಿರುವ ನೀರನ್ನು ಮೇಲಕ್ಕೆ ತೆಗೆಯುವ ವ್ಯವಸ್ಥೆಯನ್ನು ಮಾಡಿ ಕಾಲುವೆಗಳ ಮೂಲಕ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನಾದರೂ ನೀರಾವರಿ ಕೃಷಿಗೆ ಅಣಿಮಾಡಬಹುದು. ಅಥವಾ ಜಿಲ್ಲೆಯಲ್ಲಿರುವ ಕೆರೆಗಳಿಗೆ ನೀರನ್ನು ಪೂರೈಸಿ ಅಂತರ್ಜಲ ಮಟ್ಟವನ್ನು ಕಾಪಾಡಿಕೊಂಡು ಕೃಷಿ ಮಾಡಬಹುದು. ಗಣಿ ಪ್ರದೇಶದ ವಶದಲ್ಲಿರುವ 12500 ಎಕರೆ ಭೂಮಿಯನ್ನು ಕೃಷಿಗೆ ಒಳಪಡಿಸಬಹುದು.

ಜಲ ವಿದ್ಯುತ್ ಯೋಜನೆ:

ಆಳದ ಗಣಿಗಳ ಒಳಗೆ ಸಂಗ್ರಹವಾಗಿರುವ ನೀರಿನ ಸರಾಸರಿ ಉಷ್ಣಾಂಶ 30ಡಿಗ್ರಿ ಇರುತ್ತದೆ ಎಂದು ತಿಳಿದುಬಂದಿದೆ. ಇನ್ನು 10 ಸಾವಿರ ಅಡಿಗಳ ಕೆಳಗಿರುವ ನೀರಿನ ಉಷ್ಣಾಂಶ 60 ಡಿಗ್ರಿ ಎಂದು ತಿಳಿಯುತ್ತದೆ. ಆದರೂ ಒಟ್ಟಾರೆ ನೀರಿನ ಸರಾಸರಿ ಉಷ್ಣಾಂಶ 30ಡಿಗ್ರಿ. ಈ ನೀರನ್ನು ಹೊರಗೆ ತೆಗೆದಾಗ ಉಷ್ಣಾಂಶದಲ್ಲಿ ಯಾವುದೇ ಮಾರ್ಪಾಟಲ್ಲದೆ ಅಷ್ಟೇ ಇರುವುದು ಒಂದು ವಿಶೇಷ. ಈ ನೀರಿನಿಂದ ವಿದ್ಯುತ್ ಉತ್ಪಾದಿಸಲು ಸಾಧ್ಯವೇ? ಸಾಧ್ಯ ಎನ್ನುವುದು ಕೆಲವು ತಜ್ಞರ ಅಭಿಮತ. ದೆಹಲಿಯ ವಿಜ್ಞಾನಿಗಳಿಗೆ ಇಂತಹ ಒಂದು ಉಪಾಯ ಹೊಳೆದಿದೆ. ಸರಕಾರವು ಇದರ ಬಗ್ಗೆ ಆಲೋಚನೆ ಮಾಡುತ್ತಿದೆ ಎಂದು ತಿಳಿದು ಬಂದಿದೆ. ಇಂತಹ ಅನೇಕ ಆಲೋಚನೆಗಳು ಬರುತ್ತಿರುತ್ತವೆ, ಆದರೆ ಅವು ವಿಧಾನ ಸೌಧದಲ್ಲಿ ಅಥವಾ ಜಿಲ್ಲಾ ಕಚೇರಿಗಳ ಕಡತಗಳಲ್ಲಿ ಲಾಗಾ ಹೊಡೆಯುತ್ತಲೇ ಇರುತ್ತವೆ. ಇದರಿಂದ ಜನ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಲಾಭವಾದಲ್ಲಿ ಮಾತ್ರ ಹೊರಬರುವ ಸಾಧ್ಯತೆಗಳಿರುತ್ತವೆ. ಬುದ್ಧಿಜೀವಿಗಳು, ಜನಸಾಮಾನ್ಯರು ಅಥವಾ ಸಂಘ ಸಂಸ್ಥೆಗಳು ಮನಸ್ಸು ಮಾಡಿ ಸರಕಾರದ ಜೊತೆಗೆ ಸಂಘರ್ಷಕ್ಕೆ ನಿಂತಾಗ ಮಾತ್ರ ಕಾರ್ಯರೂಪಕ್ಕೆ ಬರುವ ಸಾಧ್ಯತೆಗಳಿರುತ್ತವೆ.

ಪ್ರಸ್ತುತ ಸೌರವಿದ್ಯುತ್ ಪಡೆಯಲು ಸೂರ್ಯನ ಸರಾಸರಿ ಶಾಖ 30 ಡಿಗ್ರಿ ಇದ್ದರೆ ಸಾಕು. ಇದಕ್ಕೆ ಉಪಯೋಗಿಸುತ್ತಿರುವ ಸಲಕರಣೆಗಳ ವೆಚ್ಚವೂ ಯಾವ ರೀತಿಯಲ್ಲೂ ದುಬಾರಿಯಲ್ಲ. ಈ ನೀರಿನಿಂದ ಅತಿ ಹೆಚ್ಚು ವಿದ್ಯುತ್ ಉತ್ಪಾದನೆಯಾಗುವ

ಸಾಧ್ಯತೆಗಳಿದ್ದು, ಉತ್ಪಾದನಾ ವೆಚ್ಚವೂ ತೀರಾ ಕಡಿಮೆ ಎನ್ನುವುದು ತಜ್ಞರ ಅಭಿಪ್ರಾಯ. ಒಂದು ವೇಳೆ ಈ ಆಲೋಚನೆ ಕಾರ್ಯರೂಪಗೊಂಡಲ್ಲಿ ಸಣ್ಣ ಪ್ರಮಾಣದಲ್ಲಾದರೂ ಒಂದೆರಡು ತಾಲ್ಲೂಕುಗಳ ವಿದ್ಯುತ್ ಅವಶ್ಯಕತೆಯನ್ನು ಗಣಿಗಳ ಒಳಗಿರುವ ನೀರಿನಿಂದ ಪೂರೈಸಬಹುದು.

ಬಾರ್ಕ್:

(ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್) ಭಾಭಾ ಅಣುಶಕ್ತಿ ಸಂಶೋಧನಾ ಕೇಂದ್ರದ ಪರಮಾಣು ತ್ಯಾಜ್ಯ ಪದಾರ್ಥ ವ್ಯವಸ್ಥೆ ವಿಭಾಗವು ಗಣಿಗಳ ಆಳದಲ್ಲಿ ಒಂದು ಸಂಶೋಧನಾ ವಿಭಾಗವನ್ನು ಸ್ಥಾಪನೆ ಮಾಡಿತು. ಇಲ್ಲಿ ಪರಮಾಣು ತ್ಯಾಜ್ಯ ಪದಾರ್ಥವನ್ನು ತಂದು ಸುರಿದು, ಸುತ್ತಲೂ ಕಂಡು ಬಂದ ವ್ಯತ್ಯಾಸಗಳನ್ನು ಸಂಶೋಧನೆಗೆ ಒಳಪಡಿಸಲಾಯಿತು. ಆಗ ಸುತ್ತಮುತ್ತಲ ಶಿಲೆಗಳಲ್ಲಿ ಉಷ್ಣತೆ ಹೆಚ್ಚುವುದು, ಶಿಲೆಗಳಲ್ಲಿ ಬಿರುಕುಗಳು ಮೂಡಿ ಸುರಂಗಗಳಲ್ಲಿ ನೀರು ಹೊಮ್ಮುವುದು ಕಾಣಿಸಿತು. ಅತ್ಯಂತ ಆಳವಾಗಿ ಇಳಿದಿರುವ ಈ ಗಣಿಗಳಲ್ಲಿ ಶಿಲೆಗಳು ಉಷ್ಣದಿಂದ ಕೂಡಿದ್ದು, ಅಣು ಕಸದಿಂದ ಇನ್ನಷ್ಟು ಉಷ್ಣ ಹೆಚ್ಚಿತ್ತು. ಮೈಸೂರು ಗಣಿಯ 32ನೇ ಹಂತದಲ್ಲಿ ಮತ್ತು ನಂದಿದುರ್ಗದ 48ನೇ ಹಂತದಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲಾಗಿತ್ತು. ಇದರಿಂದ ಹೊರಹೊಮ್ಮುವ ಉಷ್ಣತೆ ಮತ್ತು ಶಿಲೆಗಳ ಪರಿವರ್ತನೆಯನ್ನು ದಾಖಲಿಸಿಕೊಳ್ಳಲಾಯಿತು. ಅನಂತರ ಉಷ್ಣ ನಕ್ಷೆಯನ್ನು ತಯಾರಿಸಲಾಯಿತು ಮತ್ತು ಶಿಲಾಬಿರುಕುಗಳನ್ನು ತಿಳಿದುಕೊಳ್ಳಲಾಯಿತು.

ಟಿಐಎಫ್‌ಆರ್ :

ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ (ಟಿಐಎಫ್‌ಆರ್) ಕೂಡ ಗಣಿಗಳಲ್ಲಿ ಸಂಶೋಧನೆ ನಡೆಸಿತ್ತು. 1955 ರಿಂದಲೇ ಹಲವು ಕಾಸ್ಮಿಕ್ ಕಿರಣಗಳು ಮತ್ತು ಮೂಲ ಕಣಗಳ ಬಗ್ಗೆ ಸಂಶೋಧನೆಗಳನ್ನು ನಡೆಸಿದ ಟಿಐಎಫ್‌ಆರ್ ಯಶಸ್ಸು ಪಡೆದಿತ್ತು. ಇದೇ ವಿಭಾಗ ಆಳದ ಸುರಂಗಗಳಲ್ಲಿ ಮೂಲಭೂತ ವಿಜ್ಞಾನದಲ್ಲಿ ಪ್ರತಿಷ್ಠೆಯ ಸಂಶೋಧನೆಗಳನ್ನು ನಡೆಸಿತ್ತು. ಭಾರತದಲ್ಲಿ ಇನ್ನೆಲ್ಲಿಯೂ ಇಂತಹ ಅವಕಾಶ ದೊರಕುತ್ತಿರಲಿಲ್ಲ. ಭೌತಶಾಸ್ತ್ರ ಮತ್ತು ಖಗೋಳಶಾಸ್ತ್ರಕ್ಕೆ ಸಂಬಂಧಪಟ್ಟ ಕೆಲವು ಸಂಶೋಧನೆಗಳನ್ನು, ಚಾಂಪಿಯನ್ ಗಣಿಗಳ ಗಿಫರ್ಡ್ ಶ್ಯಾಫ್ಟ್‌ನ 80ನೇ ಹಂತದಲ್ಲಿ ಪ್ರೊಟಾನ್. ನಶಿಸುವ ಪರೀಕ್ಷೆಯನ್ನು ನಡೆಸಲಾಯಿತು. 70ನೇ ಹಂತದಲ್ಲಿ ಇದೇ ರೀತಿಯ ಸಂಶೋಧನೆಗಳನ್ನು ಮಾಡಲಾಯಿತು.

ಈ ಹಂತದಲ್ಲಿ ಪ್ರಯೋಗಾಲಯ ನಿರ್ಮಿಸಲು 18 ತಿಂಗಳು ಕಾಲ

ತೆಗೆದುಕೊಂಡಿತ್ತು. ಈ ಕೋಣೆ 10 ಮೀ.ಅಗಲ, 25 ಮೀ. ಉದ್ದ, 8.2 ಮೀ.ಎತ್ತರ ಇತ್ತು. ಈ ಕೋಣೆಯ ಹತ್ತಿರ ತಲುಪುವುದಕ್ಕೆ 10 ಮೀ. ಉದ್ದದ 2.5 ಮೀ.x 3.5ಮೀ. ಸುರಂಗ ನಿರ್ಮಿಸಲಾಯಿತು. ಇದಕ್ಕಾಗಿ 2 ಕಿ.ಮೀ. ಆಳದಿಂದ 10,000 ಟನ್ನು ಶಿಲೆಗಳನ್ನು ಹೊರ ತೆಗೆಯಲಾಗಿತ್ತು. ಎಡ್ಗರ್ ಶ್ಯಾಫ್ಟ್‌ನ ಮೇಲೆ ಹೊಸ ಸಂಶೋಧನಾ ಲ್ಯಾಬನ್ನು ಸ್ಥಾಪಿಸಲಾಯಿತು. ಇಲ್ಲಿ ಅಲ್ಟ್ರಾ ಹೆಚ್ಚು ಸಾಮರ್ಥ್ಯದ ಕಾಸ್ಮಿಕ್ ಕಿರಣಗಳ ಬಗ್ಗೆ ಸಂಶೋಧನೆ ನಡೆಸಲಾಗಿತ್ತು. ಇದು ಪ್ರಪಂಚದಲ್ಲಿಯೇ ವಿಶೇಷ ಸಂಶೋಧನೆ ಎಂದು ಒಂದು ಕಾಲಕ್ಕೆ ಪ್ರಖ್ಯಾತಿ ಹೊಂದಿತ್ತು. ಆದರೆ ಗಣಿಗಳನ್ನು ಮುಚ್ಚಿದ ಮೇಲೆ ಈ ಪ್ರಖ್ಯಾತಿಯೂ ಗಣಿಗಳ ಜೊತೆಗೆ ಮುಚ್ಚಿಹೋಯಿತು.

ವಿದ್ಯುತ್‌ನಿಂದ ಉಂಟಾದ ಆಧುನಿಕತೆ :

ಜೂನ್ 1902ರಲ್ಲಿ ಮೊದಲ ಬಾರಿಗೆ ಗಣಿಗಳಿಗೆ ವಿದ್ಯುತ್ ಅಳವಡಿಸಿದಾಗ ಕ್ರಶರ್‌ಗಳು ಶಿಲೆಗಳನ್ನು ನುಣ್ಣಗೆ ಅರೆದು ಪುಡಿ ಮಾಡತೊಡಗಿದವು. ಕಾಂಪ್ರೆಸ್ಸರ್‌ಗಳು ವಿದ್ಯುತ್‌ನಿಂದ ಓಡತೊಡಗಿದರೆ, ಪಂಜರಗಳು ಕಾರ್ಮಿಕರನ್ನು ಸುರಂಗಗಳಿಂದ ಮೇಲಕ್ಕೆ ಕೆಳಕ್ಕೆ ಒಂದೇ ಸಮನೆ ಸಾಗಿಸತೊಡಗಿದವು. ಅಲ್ಲಿಯವರೆಗೆ ಈ ಯಂತ್ರಗಳೆಲ್ಲ ಉಗಿಶಕ್ತಿಯಿಂದ ನಡೆಯುತ್ತಿದ್ದವು. ವಿದ್ಯುತ್ ಬಂದ ಮೊದಲ ದಶಕದಲ್ಲಿ 6.1 ಮಿಲಿಯನ್ ಟನ್ ಅದಿರನ್ನು ಪುಡಿ ಮಾಡಿ ಟನ್ನಿಗೆ ಸರಾಸರಿ 28 ಗ್ರಾಂ ಚಿನ್ನವನ್ನು ಉತ್ಪಾದಿಸಲಾಯಿತು. ಈ ದಶಕದಲ್ಲಿ ಒಟ್ಟು 170.80 ಟನ್ನು ಚಿನ್ನವನ್ನು ತೆಗೆಯಲಾಯಿತು. 1907ರಲ್ಲಿ 34641 ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ಗಣಿ ಕಂಪನಿಗಳು ವರ್ಷಕ್ಕೆ 4000 ಎಚ್‌ಪಿ ವಿದ್ಯುತ್‌ನ್ನು 1 ಎಚ್‌ಪಿಗೆ 20 ಪೌಂಡ್‌ಗೆ ಖರೀದಿಸಲು ಒಪ್ಪಂದ ಮಾಡಿಕೊಂಡವು. 0.04 ಪೌಂಡ್‌ಗೆ 1 ಯುನಿಟ್ ವಿದ್ಯುತ್‌ನ್ನು ಮೊದಲ 10ವರ್ಷ ಪಡೆಯಲಾಯಿತು. 1913ರಲ್ಲಿ ಅದನ್ನು ಅರ್ಧ ಬೆಲೆಗೆ ಇಳಿಸಲಾಯಿತು. ವಿದ್ಯುತ್ ಇಲ್ಲದೆ ಕಡೆ ಕಲ್ಲಿದ್ದಿಲನ್ನು ಉಪಯೋಗಿಸಿಕೊಳ್ಳಲಾಯಿತು. 1915–16ರಲ್ಲಿ ಶಿವನಸಮುದ್ರದಲ್ಲಿ ಇನ್ನಷ್ಟು ವಿದ್ಯುತ್‌ನ್ನು ಉತ್ಪಾದಿಸಿ ಗಣಿಗಳಿಗೆ ಬಳಸಿಕೊಳ್ಳಲಾಯಿತು. ಗಣಿಗಳು 1941–1970ರವರೆಗೆ ಕಡಿಮೆ ಬೆಲೆಯ ವಿದ್ಯುತ್‌ನ್ನು ಅಂದರೆ 0.03 ಪೌಂಡ್‌ಗೆ 1 ಯುನಿಟ್‌ನ್ನು ಪಡೆದುಕೊಂಡಿದ್ದವು. 1970–72ರವರೆಗೆ ಮರು ಒಪ್ಪಂದದಂತೆ 0.046 ಪೌಂಡ್‌ಗೆ 1 ಯುನಿಟ್‌ನ್ನು ಪಡೆದುಕೊಂಡವು. ಮತ್ತೆ 1972ರ ನಂತರ (ಬಿಜಿಎಮ್‌ಎಲ್ ಆದ ಮೇಲೆ) 1 ಯುನಿಟ್‌ಗೆ 0.0225 ಪೌಂಡ್ ಪಡೆಯಲಾಯಿತು.

1980ರಲ್ಲಿ 1ಯುನಿಟ್‌ಗೆ 0.1337ಪೌಂಡ್ ಏರಿಸಲಾಯಿತು. 1972–73 ರಿಂದ 1984–85ರ ಹೊತ್ತಿಗೆ ಸರಾಸರಿ 616ರಷ್ಟು ಬೆಲೆ ಏರಿತು. 1980–81ರ ಒಂದೇ ವರ್ಷದಲ್ಲಿ 1.53 ಕೋಟಿರೂ. ವಿದ್ಯುತ್ ಬಿಲ್ಲನ್ನು ಕಂಪನಿ ಕಟ್ಟಿತು. ಚಿನ್ನದ ಒಟ್ಟು

ಉತ್ಪಾದನೆಯ ವೆಚ್ಚದಲ್ಲಿ ಅದು ಶೇಕಡ 8ರಷ್ಟಾಗಿತ್ತು. 1984–85ರಲ್ಲಿ 4.90ಕೋಟಿ ರೂ. ಬಿಲ್ಲಾಗಿತ್ತು. ಅದು ಶೇಕಡ 15 ರಷ್ಟಾಗಿತ್ತು. ಗಣಿಗಳು 1980–81 ಮತ್ತು 1984–85ರಲ್ಲಿ ಒಟ್ಟು 90 ಮತ್ತು 92.40 ಮಿಲಿಯನ್ ಯುನಿಟ್ ವಿದ್ಯುತ್‌ನ್ನು ತೆಗೆದುಕೊಂಡಿತ್ತು.

ಕರ್ನಾಟಕ ಸರಕಾರ ಕೆಜಿಎಫ್‌ಗೆ ಕೊಡುತ್ತಿದ್ದ 50ಹೆರ್ಟ್ಜ್‌ಗೆ ಬದಲಾಗಿ 25ಹೆರ್ಟ್ಜ್ ವಿದ್ಯುತ್‌ನ್ನು ಮಾತ್ರ ಕೊಡುವುದಾಗಿ ಹೇಳಿತು. ಜೊತೆಗೆ ಅದು ವಿದ್ಯುತ್ ಬೆಲೆಯನ್ನು ತೀವ್ರವಾಗಿ ಏರಿಸಿತು. ಸರಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕಂಪನಿ ಇಷ್ಟೇ ವಿದ್ಯುತ್‌ನ್ನು ಇಷ್ಟೇ ಬೆಲೆಗೆ ಕೊಡಬೇಕು ಎಂದು ಒತ್ತಾಯ ತಂದರೆ ಗಣಿಗಳಿಗೆ ವಿದ್ಯುತ್ ನಿಲ್ಲಿಸಿ ಕೋಲಾರ ಜಿಲ್ಲೆಯ ಪಟ್ಟಣಗಳಿಗೆ ವಿದ್ಯುತ್ ಮಾರಿಕೊಳ್ಳಲಾಗುತ್ತದೆ ಎಂದು ಹೇಳಿಕೆ ನೀಡಿತು. ಒಂದು ಕಾಲದಲ್ಲಿ ಕೋಟ್ಯಾಂತರ ರೂ. ಗೌರವಧನ ಪಡೆದಿದ್ದ ಸರಕಾರದ ಈ ಹೇಳಿಕೆಯಿಂದ ವಿಚಲಿತಗೊಂಡ ಕಂಪನಿ, ಸರಕಾರ ಹೇಳಿದಷ್ಟೇ ಬೆಲೆಯನ್ನು ನೀಡಿತು. 1984ರಲ್ಲಿ ಸರಕಾರಕ್ಕೆ ಕಂಪನಿಯು ಖನಿಜ ಕಾಯಿದೆಯ ಕೆಳಗೆ ಹೊಸ ತೆರಿಗೆಯನ್ನು ನೀಡಬೇಕಾಯಿತು. ಇದರಿಂದ ಸರಕಾರ ಕಂಪನಿಗೆ ಇನ್ನೊಂದು ಗೂಸಾ ನೀಡಿತ್ತು. ಹಳ್ಳಕ್ಕೆ ಬಿದ್ದ ಹುಲಿಯ ಮೇಲೆ ಎಲ್ಲಾ ಕಡೆಯಿಂದಲೂ ಕಲ್ಲುಗಳನ್ನು ಎಸೆಯುವ ಹಾಗೆ.

ಚಾರಿಯವರು ತಮ್ಮ ವರದಿಯ ಕೊನೆಯಲ್ಲಿ ಈ ಮಾತುಗಳನ್ನು ದಾಖಲಿಸಿದ್ದರು. 'ಬಿಜಿಎಮ್ಎಲ್ ಈಗ ಸ್ಥಿತ್ಯಂತರ ಪರಿಸ್ಥಿತಿಯನ್ನು ತಲುಪಿದ್ದರೂ ಇನ್ನೂ ಕೆಲವು ವರ್ಷಗಳು ನಡೆಯಬೇಕಾಗಿರುವ ಅನಿವಾರ್ಯತೆ ಇದೆ. ಈ ಘಟ್ಟದಲ್ಲಿ ಕಂಪನಿಗೆ ಸಹಾಯದ ಹಸ್ತ ಬೇಕಾಗಿದೆ. ಜೊತೆಗೆ ಕಂಪನಿ ಕೂಡ ತನ್ನ ಸಾಮರ್ಥ್ಯವನ್ನು ಕಾಯ್ದುಕೊಳ್ಳಬೇಕಾಗಿದೆ. ಕಂಪನಿ ಪ್ರಸ್ತುತ ಅನುಭವಿಸುತ್ತಿರುವ ನಷ್ಟದ 1/3 ಭಾಗವನ್ನು ಕರ್ನಾಟಕ ಸರಕಾರ ನೀಡಬೇಕು. ಅಂದು ಶಿವನಸಮುದ್ರದಲ್ಲಿ ಸ್ಥಾಪಿಸಲು ಖರ್ಚು ಮಾಡಿದ ಹಣಕ್ಕಿಂತ ಹೆಚ್ಚು ಮೌಲ್ಯವನ್ನು ಪಡೆದುಕೊಂಡಿರುವುದರಿಂದ ವಿದ್ಯುತ್ ಮೇಲಿನ ಬೆಲೆಯನ್ನು ಕಡಿಮೆ ಮಾಡಬೇಕಾಗಿದೆ. ಖನಿಜ ತೆರಿಗೆಯನ್ನು ಮನ್ನಾ ಮಾಡಬೇಕಾಗಿದೆ. ಇದರಿಂದ 1/3 ಭಾಗ ಉಳಿತಾಯವಾಗುತ್ತದೆ. ಉಳಿದ ಭಾಗವನ್ನು ಕಂಪನಿ ವರ್ಷಕ್ಕೆ 300–400 ಕೆಜಿ ಚಿನ್ನವನ್ನು ಉತ್ಪಾದಿಸುವ ಮೂಲಕ ಸರಿತೂಗಿಸಬೇಕಾಗುತ್ತದೆ. ಜೊತೆಗೆ ತನ್ನ ಖರ್ಚನ್ನು ಸಾಕಷ್ಟು ಕಡಿತಗೊಳಿಸಬೇಕಾಗುತ್ತದೆ. ಚಿಗುರುಗುಂಟ ಮತ್ತು ಯಾಪಮಾನ ಗಣಿಗಳನ್ನು ಹೆಚ್ಚು ಶಕ್ತಿ ಮತ್ತು ಸಾಮರ್ಥ್ಯದಿಂದ ಯೋಜನೆಗಳನ್ನು ಮಾಡಿ ಉಳಿಸಿಕೊಳ್ಳಬೇಕಿದೆ. ಇದೆಲ್ಲ ಆಗಲಿಲ್ಲವೆಂದರೆ 4–5 ವರ್ಷಗಳಲ್ಲಿ ಗಣಿಗಳನ್ನು ಪೂರ್ಣವಾಗಿ ನಿಲ್ಲಿಸಬೇಕು'

ಫ್ಲೋಟೇಶನ್ :

ಇದು ಚಿನ್ನವನ್ನು ತಾಂತ್ರಿಕವಾಗಿ ಪ್ರತ್ಯೇಕಿಸುವ ಒಂದು ವಿಧಾನ. ಚಾಂಪಿಯನ್ ಗಣಿಗಳಲ್ಲಿ ಚಿನ್ನ ದೊರಕುವುದು ಕಡಿಮೆಯಾಗುತ್ತಿದ್ದಂತೆ, ನಂದಿದುರ್ಗ ಗಣಿಗಳಲ್ಲಿ ಅದಿರನ್ನು ತೆಗೆಯಲು ಪ್ರಾರಂಭಿಸಲಾಯಿತು. ಈ ಲೋಡ್‌ನಲ್ಲಿರುವ ಚಿನ್ನ ಸಲ್ಫೈಡ್ ಮತ್ತು ಆರ್ಸಿನೊಪೈರೈಟ್ ಧಾತುಗಳಲ್ಲಿ ಸಿಕ್ಕಿಕೊಂಡಿದ್ದು ಮಾಮೂಲಿ ರೀತಿಯ ಸಂಸ್ಕರಣೆಯಿಂದ ಚಿನ್ನ ಬಿಡುಗಡೆಯಾಗುತ್ತಿರಲಿಲ್ಲ. ಈ ಅದಿರನ್ನು ವಿಶೇಷ ಸಂಸ್ಕರಣೆಗೆ ಒಳಪಡಿಸಲಾಗುತ್ತಿತ್ತು. ಇದಕ್ಕೆ ಹೆಚ್ಚು ವೆಚ್ಚ ತಗಲುತ್ತಿತ್ತು. ಚಾಂಪಿಯನ್ ಮತ್ತು ನಂದಿದುರ್ಗ ಗಣಿಗಳ ಅದಿರನ್ನು ಒಂದೇ ಮಿಲ್ಲಿನಲ್ಲಿ ಸಂಸ್ಕರಿಸುವುದರಿಂದ ಚಾಂಪಿಯನ್ ಗಣಿಗಳ ಅದಿರಲ್ಲಿ 1 ಟನ್ನು ಶಿಲೆಗೆ 0.4 ಗ್ರಾಂ ಮತ್ತು ನಂದಿದುರ್ಗದ ಅದಿರಲ್ಲಿ 0.8 ಗ್ರಾಂ ಚಿನ್ನ ಸಯೆನೈಡ್ ಮಣ್ಣಿನಲ್ಲಿ ಹೋಗುತ್ತಿತ್ತು. ಇದರಿಂದ ಸಾಕಷ್ಟು ಚಿನ್ನ ನಷ್ಟವಾಗುತ್ತಿತ್ತು. ಎರಡೂ ಗಣಿಗಳ ಚಿನ್ನವನ್ನು ಬೇರೆ ಬೇರೆ ಮಿಲ್ಲುಗಳಲ್ಲಿ ಸಂಸ್ಕರಿಸಿದ್ದರೆ ಇನ್ನಷ್ಟು ಚಿನ್ನವನ್ನು ಪಡೆಯಬಹುದಾಗಿತ್ತು, ಆದರೆ ಗಣಿ ಆಡಳಿತ ಈ ಬಗ್ಗೆ ಕಣ್ಣು ಮುಚ್ಚಿ ಕುಳಿತುಕೊಂಡಿತ್ತು.

ಚಿನ್ನ ಹೆಚ್ಚಾಗಿ ದೊರಕುತ್ತಿದ್ದ ಕಾಲದಲ್ಲಿ (1960ರವರೆಗೂ) ಸ್ವಲ್ಪ ಪ್ರಮಾಣದ ಚಿನ್ನ ಮಣ್ಣಿನಲ್ಲಿ ಹೋದರೂ ನಷ್ಟವಾಗುತ್ತಿರಲಿಲ್ಲ. ಆದರೆ 1980ರ ದಶಕದಲ್ಲಿ 1ಟನ್ನಿಗೆ ಕೇವಲ 2.8 ರಿಂದ 3.0 ಗ್ರಾಂ ಚಿನ್ನ ಪಡೆಯುವ ಸಮಯದಲ್ಲಿ ಗಣಿಗಳು ಕಣ್ಣು ಮುಚ್ಚಿ ಕುಳಿತಿದ್ದನ್ನು ಚಾರಿಯವರ ವರದಿಯಲ್ಲಿ ಪ್ರಶ್ನಿಸಲಾಗಿತ್ತು. ಸಯನಾಡೇಷನ್ ಮತ್ತು ಗುರುತ್ವಾಕರ್ಷಣೆಯಿಂದ ಚಿನ್ನವನ್ನು ಸಂಸ್ಕರಿಸುವ ವೇಳೆಯಲ್ಲಿ ಕಂಪನಿ ಈ ರೀತಿಯ ಹಳೆ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕುಳಿತಿದ್ದನ್ನು ಪ್ರಶ್ನಿಸಲಾಗಿತ್ತು. ಕಂಪನಿಗಳು ಫ್ಲೋಟ್ ತಂತ್ರಜ್ಞಾನ ಅಳವಡಿಸಲು ಒಂದು ಯೋಜನೆ ರೂಪಿಸಿ ಅದಕ್ಕೆ 2ಕೋಟಿ ರೂ. ನೀಡುವಂತೆ ಸರಕಾರವನ್ನು ಕೇಳಿಕೊಂಡಿದ್ದವು. ಈ ಫ್ಲೋಟ್ ತಂತ್ರಜ್ಞಾನದಿಂದ 1 ಟನ್ನಿನ ಶಿಲೆಯಲ್ಲಿ 0.4 ರಿಂದ 0.3 ಗ್ರಾಂ ಚಿನ್ನವನ್ನು ಉಳಿಸಿಕೊಳ್ಳುವ ಲೆಕ್ಕಾಚಾರವಿತ್ತು. ಇದರಿಂದ 1 ವರ್ಷಕ್ಕೆ ಸರಾಸರಿ 1 ಕೋಟಿ ರೂ. ಲಾಭವಾಗುತ್ತಿತ್ತು. ಎರಡೇ ವರ್ಷಗಳಲ್ಲಿ ಯೋಜನೆಯ ಹಣವನ್ನು ಹಿಂದಕ್ಕೆ ಪಡೆಯುವ ಲೆಕ್ಕ ಕಂಪನಿಗಿದ್ದರೂ ಸರಕಾರ ಹಣ ಬಿಡುಗಡೆ ಮಾಡಲಿಲ್ಲ.

ಅದಿರು ಆಯ್ಕೆ :

ಗಣಿಗಳಲ್ಲಿದ್ದ ಇನ್ನೊಂದು ಸಮಸ್ಯೆ ಎಂದರೆ ಚಿನ್ನವಿರುವ ಅದಿರಿನ ಜೊತೆಗೆ ಅಕ್ಕಪಕ್ಕದ ಚಿನ್ನರಹಿತ ಶಿಲೆಗಳನ್ನು ಸೇರಿಸಿ ಸಂಸ್ಕರಿಸುವುದು ಅನಿವಾರ್ಯವಾಗಿ, ಇದರಿಂದ ನಷ್ಟವಾಗುತ್ತಿತ್ತು. ಕೆಜಿಎಫ್‌ನ ಚಿನ್ನದ ರೀಫುಗಳು ಒಂದೆರಡು ಮೀ. ಅಗಲ,

ಹೆಚ್ಚೆಂದರೆ 30ಮೀ.ಅಗಲ ಕೆಲವು ಒಂದೆರೆಡು ಕಿ.ಮೀ.ಉದ್ದ ಕೆಲವು ಸಾವಿರ ಮೀ. ಆಳವಿದ್ದವು. ಮೊದಲಿಗೆ ನೆಲದ ಮೇಲಿಂದ ಡ್ರಿಲ್ಲಿಂಗ್ ಮಾಡಿ ಇವುಗಳ ವ್ಯಾಪ್ತಿಯನ್ನು ಕಂಡುಕೊಳ್ಳಲಾಗುತ್ತಿತ್ತು. ಅನಂತರ ಆಳದ ಶ್ಯಾಫ್ಟ್‌ಗಳನ್ನು ಮಾಡಿ ಸುರಂಗಗಳ ಮೂಲಕ ಕೆಳ ಹಂತದಲ್ಲಿ ರೀಫುಗಳನ್ನು ತಲುಪಲಾಗುತ್ತಿತ್ತು. ರೀಫುಗಳನ್ನು ಸ್ಯಾಂಪಲ್ ಮಾಡಿ ಎಲ್ಲೆಲ್ಲಿ ಎಷ್ಟು ಚಿನ್ನವಿದೆ ಎಂದು ತಿಳಿದುಕೊಂಡು ಅಲ್ಲಲ್ಲಿ ಸ್ತಂಭಗಳನ್ನು ಬಿಟ್ಟು ಜಂಪರ್ ಡ್ರಿಲ್ ಮಾಡಿ, ಸಿಡಿಮದ್ದನ್ನು ಇಟ್ಟು ಶಿಲೆಗಳನ್ನು ಮೇಲಿನಿಂದ ಕೆಳಕ್ಕೆ ಉರುಳಿಸಬೇಕು. ಹಾಗೆ ಉರುಳಿಸಿದ ದೊಡ್ಡ ಬಂಡೆಗಳನ್ನು ಟ್ರ್ಯಾಲಿಗಳಿಗೆ ತುಂಬುವ ಆಕಾರಕ್ಕೆ ಒಡೆದು ಹೊರಕ್ಕೆ ಸಾಗಿಸಲಾಗುತ್ತಿತ್ತು. ಇವುಗಳ ಜೊತೆಯಲ್ಲಿ ಸ್ವಲ್ಪ ಮಟ್ಟಿಗೆ ಚಿನ್ನರಹಿತ ಶಿಲೆಗಳೂ ಸೇರಿಕೊಳ್ಳುತ್ತಿದ್ದವು. ಈ ಅದಿರನ್ನು ಸಂಸ್ಕರಣೆ ಮಾಡುವುದರಿಂದ ವಿದ್ಯುತ್ ಮತ್ತು ನೀರು ಪೋಲಾಗುತ್ತಿತ್ತು. ಈ ಪ್ರಕ್ರಿಯೆಯನ್ನು ಎಷ್ಟು ಜಾಗ್ರತೆಯಿಂದ ಮಾಡಿದರೂ ಸ್ವಲ್ಪ ನಷ್ಟವಾಗುತ್ತಿತ್ತು.

ಇದು 1980ರವರೆಗೂ ನಡೆಯುತ್ತಿತ್ತು. ಅನಂತರ ಒಂದು ವಿಶೇಷ ಯಂತ್ರವನ್ನು ತರಿಸಿ ಚಿನ್ನರಹಿತ ಶಿಲೆಗಳನ್ನು ಪ್ರತ್ಯೇಕಿಸಲಾಯಿತು. ಇದರಿಂದ ಸಾಕಷ್ಟು ನಷ್ಟವನ್ನು ಕಡಿತಗೊಳಿಸುವುದರ ಜೊತೆಗೆ ಶೇಕಡ 36 ರಷ್ಟು ಚಿನ್ನದ ಉತ್ಪಾದನೆ ಹೆಚ್ಚಿತು. ಶಿಲೆಗಳಿಂದ ಶೇಕಡ 95.8ರಷ್ಟು ಚಿನ್ನವನ್ನು ಪಡೆದುಕೊಳ್ಳಲಾಗುತ್ತಿತ್ತು. ಈ ಪದ್ಧತಿಯನ್ನು ಮೊದಲಿಂದಲೂ ಅಳವಡಿಸಿಕೊಂಡಿದ್ದರೆ ಇನ್ನೂ ಹೆಚ್ಚು ಚಿನ್ನವನ್ನು ಪಡೆದುಕೊಳ್ಳುವುದರ ಜೊತೆಗೆ ಕೋಟ್ಯಾಂತರ ಹಣ ಉಳಿಸಬಹುದಿತ್ತು.

ಕ್ಷಾಲನ :

ಕಂಪನಿ ಮೊದಲಿಗೆ ಕೆನ್ನಡೀಸ್ ಪ್ರದೇಶದಲ್ಲಿರುವ ಸಯೆನೈಡ್ ಗುಡ್ಡಗಳನ್ನು ಗುಡ್ಡೆ ಮಾಡಿ ಕ್ಷಾಲನ ಮಾಡತೊಡಗಿತು. ಈ ವಿಧಾನವನ್ನು ಅಮೆರಿಕಾದ ಮೌಂಟನ್ ಸ್ಟೇಟ್ಸ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಅಳವಡಿಸಿತ್ತು. ಈ ವಿಧಾನದಲ್ಲಿ ಸಯೆನೈಡ್ ಮಣ್ಣನ್ನು ಗುಡ್ಡೆಹಾಕಿ ಅದಕ್ಕೆ ಮರಳು (1 ಟನ್ನಿಗೆ 15 ಕೆಜಿ) ಮತ್ತು ಸಿಮೆಂಟ್ ಮಿಶ್ರಣ ಮಾಡಿ ಅದಕ್ಕೆ ಆಕ್ಟೇಟೆಡ್ ಇಂಗಾಲ ಬೆರೆಸಿ ಸಯೆನೈಡ್ ಕ್ಷಾಲನ ಮಾಡಲಾಗುತ್ತಿತ್ತು. ದಿನಕ್ಕೆ 350–500 ಟನ್ನು ಸಯೆನೈಡ್ ಮಣ್ಣನ್ನು ಕ್ಷಾಲನ ಮಾಡಲಾಗುತ್ತಿತ್ತು. ಅಂದರೆ ಸಯೆನೈಡ್ ಮಣ್ಣಿಗೆ ಮತ್ತೆ ಸಯೆನೈಡ್ ದ್ರಾವಣವನ್ನು ಮಿಶ್ರಣ ಮಾಡಿದಾಗ ಚಿನ್ನ ಮಣ್ಣಿನ ಕೆಳಗಡೆ ಇಳಿಯುತ್ತಿತ್ತು. ಇದರಿಂದ 1 ಟನ್ನಿಗೆ 0.57 ಗ್ರಾಂ ಚಿನ್ನ ಸಂಗ್ರಹವಾಗುತ್ತಿದ್ದು ವರ್ಷಕ್ಕೆ ಕೇವಲ 40 ಕೆಜಿ ಚಿನ್ನ ಉತ್ಪಾದನೆಯಾಗುತ್ತಿತ್ತು. ಇದು ಲಾಭವಲ್ಲದ ಕಾರಣ ಇದನ್ನು ಮಧ್ಯದಲ್ಲಿಯೆ ನಿಲ್ಲಿಸಲಾಯಿತು. ನಂತರ ಬ್ಯಾಕ್ಟೀರಿಯಾ ಕ್ಷಾಲನ ವಿಧಾನವನ್ನು ಅಳವಡಿಸಿದರೂ ಅದನ್ನೂ ಮುಂದುವರಿಸಲಾಗಲಿಲ್ಲ.

ಶೀಲೈಟ್ ಸಂಗ್ರಹ :

ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಇಲಾಖೆ (ಜಿಎಸ್ಐ) 1960ರ ದಶಕದಲ್ಲಿ ಸಯನೈಡ್ ಗುಡ್ಡಗಳ ಸಮೀಕ್ಷೆ ನಡೆಸಿ ಕೆಲವು ಹಳೆ ಸಯೆನೈಡ್ ಗುಡ್ಡಗಳಲ್ಲಿ ಶೀಲೈಟ್ ಖನಿಜ ಇರುವುದಾಗಿ ದೃಢಪಡಿಸಿತ್ತು. ಶೀಲೈಟ್ ಸಂಗ್ರಹ ಸ್ಥಾವರವನ್ನು 1980ರಲ್ಲಿ ಅಳವಡಿಸಿ ವರ್ಷಕ್ಕೆ 16ಟನ್ನು ಶೀಲೈಟ್‌ನ್ನು ಉತ್ಪಾದನೆ ಮಾಡಲಾಯಿತು. ಇದೂ ನಷ್ಟ ಅನುಭವಿಸಿ ಕೈಬಿಡಲಾಯಿತು. ಶೀಲೈಟ್ ಖನಿಜ (ಕ್ಯಾಲ್ಶಿಯಂ ಟಂಗ್‌ಸ್ಟನ್) ಯುದ್ಧ ಸಾಮಗ್ರಿಗಳ ತಯಾರಿಕೆಯಲ್ಲಿ, ಇಲೆಕ್ಟ್ರಿಕಲ್ಸ್ ಮತ್ತು ರಾಸಾಯನಿಕ ಕಂಪನಿಗಳಲ್ಲಿ ಉಪಯೋಗಕ್ಕೆ ಬರುತ್ತದೆ. ಉಕ್ಕು ಮತ್ತು ಟಂಗ್‌ಸ್ಟನ್ ಕಾರ್ಬೈಡ್ ಉತ್ಪಾದನೆಯಲ್ಲಿ ಬೇಕಾಗುತ್ತದೆ.

✦

1. Mine closure panning- A case study of Kolar Gold Fields, S.D.Prasad, 22-23 jan 2003, p.3.
2. Ibedium p.4.
3. Kolar gold mines: An unfinished Biography of Colonialism by Vinodhkumar C.P, Revathi P.G and R.mohan, K.T.Economic and political weekly, June 13,1998.p.14.
4. ಎನ್.ಆರ್.ಪುರುಷೋತ್ತಮ, ಸಂಯುಕ್ತ ಕರ್ನಾಟಕ, 2002
5. Bharat gold mines Ltd by K.S.R.Chari, formerly Secretary, Dept. of Mines, Govt. of India, New Delhi sept 1985 P59
6. Ibedium p.60.
7. Ibedium p.50.
8. Ibedium p.26.

ಅಧ್ಯಾಯ–12

ಅನ್ನಕ್ಕಾಗಿ ಚಿನ್ನ ಮಾರುವ ಜಲಗಾರರು

> ಚಿನ್ನವನ್ನು ಸಂಗ್ರಹಿಸುವ ಜಲಗಾರರು, ಗಣಿಗಾರಿಕೆಯ ದುಷ್ಪರಿಣಾಮಗಳಾದ ವಿಷ ಸಯೆನೈಡ್ ಮಣ್ಣು ಮತ್ತು ಜಲಮಾಲಿನ್ಯವನ್ನು ವಿವರಿಸಲಾಗಿದೆ. ಜೊತೆಗೆ ಕೆಜಿಎಫ್‌ನ ಇಂದಿನ ಚಿತ್ರಣ ಮತ್ತು ಗಣಿಗಳ ಬಗೆಗಿನ ಒಂದು ಅಪರೂಪ ನೆನಪನ್ನು ದಾಖಲಿಸಲಾಗಿದೆ.

ಭೂಮಿ ನೂರಾರು ಧಾತುಗಳ ಒಂದು ಮುದ್ದೆ. ಭೂಮಿಯಲ್ಲಿ ನೂರು ಕೋಟಿ ಕಣಗಳಲ್ಲಿ 2 ಕಣ ಚಿನ್ನವಿದ್ದರೆ, ಭೂಮಿಯ ಹೊರಚಿಪ್ಪಿನಲ್ಲಿ (20 ರಿಂದ 70ಕಿ.ಮೀ.) ಕೋಟಿ ಕಣಗಳಲ್ಲಿ 4 ಕಣ ಚಿನ್ನವಿರುತ್ತದೆ. ಮೂಲವಾಗಿ ಚಿನ್ನ ಭೂಮಿಯಲ್ಲಿನ ಎಲ್ಲಾ ರೀತಿಯ ಶಿಲೆಗಳಲ್ಲೂ ಹಂಚಿಹೋಗಿದ್ದರೂ ಹೆಚ್ಚಾಗಿ ಎರಡು ರೀತಿಯ ಶಿಲೆಗಳಲ್ಲಿ ದೊರಕುತ್ತದೆ. ಒಂದು ಮೂಲ ಶಿಲೆಗಳಲ್ಲಿ, ಎರಡು ಭೂಮಿಯ ಮೇಲಿನ ಮೆಕ್ಕಲು ಮಣ್ಣು ಮತ್ತು ಹರಿಯುವ ನದಿಗಳ ಜಾಡಲ್ಲಿ. ಭೂಮಿಯ ಹೊರಮೈ ಶಿಲೆಗಳು ಕಾಲಾಂತರದಲ್ಲಿ ಬಿಸಿಲು, ಚಳಿ, ಮಳೆ ಮತ್ತು ಗಾಳಿಗೆ ಶಿಥಿಲೀಕರಣಗೊಂಡು ಮಣ್ಣಾಗಿ ಪರಿವರ್ತನೆಗೊಳ್ಳುತ್ತವೆ. ಚಿನ್ನ ಮೊದಲಿಗೆ ಶಿಲೆಗಳಿಂದ ಬೇರ್ಪಟ್ಟು ಅನಂತರ ನೀರಿನ ಜೊತೆಗೆ ಹರಿಯುವ ಮಣ್ಣು, ಹಳ್ಳ ಕೊಳ್ಳಗಳ ಮೂಲಕ ಹರಿದು ಅಲ್ಲಲ್ಲಿ ಕ್ರೋಡೀಕರಣಗೊಳ್ಳುತ್ತದೆ. ಚಿನ್ನಕ್ಕೆ ಹೆಚ್ಚು ಸಾಂದ್ರತೆ ಇರುವುದರಿಂದ ಅದು ಬೇರೆ ಖನಿಜಗಳಿಗಿಂತ ನಿಧಾನವಾಗಿ ಹರಿಯುತ್ತದೆ. ಸೂರ್ಯನ ಕಿರಣಗಳು ಚಿನ್ನದ ಕಣಗಳ ಮೇಲೆ ಬಿದ್ದಾಗ, ಅದು ಪಳಪಳನೆ ಹೊಳೆಯುತ್ತ ಮನುಷ್ಯನ ಕಣ್ಣಿಗೆ ಕಾಣಿಸಿಕೊಳ್ಳುತ್ತದೆ.

ಮನುಷ್ಯ ಅದನ್ನು ಬೆರಗು ಕಣ್ಣುಗಳಿಂದ ನೋಡಿ ಕಾಲಾಂತರದಲ್ಲಿ ಆಭರಣಗಳನ್ನಾಗಿ ಪರಿವರ್ತಿಸಿಕೊಂಡು ಧರಿಸಲು ಪ್ರಾರಂಭಿಸಿದ.

ಆದಿಮಾನವ ಕಾಡು-ಮೇಡು ಅಲೆಯುತ್ತ ಗುಹೆಗಳಲ್ಲಿ ವಾಸಿಸುತ್ತಿದ್ದಾಗ ಭೂಕಂಪ-ಸುನಾಮಿ, ಜ್ವಾಲಾಮುಖಿ, ಗುಡುಗು-ಸಿಡಿಲು, ಮಳೆ-ನೆರೆ, ಇತ್ಯಾದಿ ನೈಸರ್ಗಿಕ ಪ್ರಕ್ರಿಯೆಗಳನ್ನು ನೋಡಿ, ಯಾವುದೋ ಕಾಣದ ಶಕ್ತಿಯಿಂದ ಇದೆಲ್ಲ ನಡೆಯುತ್ತಿದೆ ಎಂದು ಭೀತಿಗೊಳಗಾಗಿದ್ದ. ಈ ವಿಪತ್ತುಗಳಿಂದ ತಪ್ಪಿಸಿಕೊಳ್ಳಲು ಮೊದಲಿಗೆ ವಿವಿಧ ರೀತಿಯ ಪದ್ಧತಿಗಳು ಮತ್ತು ನಂಬಿಕೆಗಳಿಗೆ ಆತ ಮಾರುಹೋದ. ಯಾವುದೇ ಮುಕ್ಕಿಲ್ಲದ ಮನುಷ್ಯನ ದೇಹವನ್ನು ಮಾತ್ರ ಈ ಕಾಣದ ಶಕ್ತಿ ಅಥವಾ ದೇವತೆಗಳು ಆಹುತಿ ತೆಗೆದುಕೊಳ್ಳುತ್ತವೆ ಎನ್ನುವ ನಂಬಿಕೆ ಅವನಲ್ಲಿ ಹೇಗೊ ಹುಟ್ಟಿಕೊಂಡಿತು. ಅನಂತರ ಮನುಷ್ಯ ತನ್ನ ಕಿವಿ, ಮೂಗು, ತುಟಿ ಇತ್ಯಾದಿ ಅಂಗಗಳನ್ನು ಚುಚ್ಚಿಕೊಂಡು ಊನ ಮಾಡಿಕೊಳ್ಳತೊಡಗಿದ. ಹಾಗೆ ಚುಚ್ಚಿಕೊಂಡ ತೂತುಗಳು ಮತ್ತೆ ಮುಚ್ಚಿಹೋಗುತ್ತಿದ್ದವು. ಇದಕ್ಕಾಗಿ ಆ ತೂತುಗಳಲ್ಲಿ ಯಾವುದೋ ಗಿಡದ ಕಡ್ಡಿ, ಜೊಂಡು, ಪ್ರಾಣಿ ಪಕ್ಷಿಗಳ ಎಲುಬು, ರೆಕ್ಕೆ ಇತ್ಯಾದಿಗಳನ್ನು ಇಟ್ಟುಕೊಳ್ಳಲು ಪ್ರಾರಂಭಿಸಿದ. ಮುಂದಿನ ದಿನಗಳಲ್ಲಿ ಆ ಸ್ಥಾನದಲ್ಲಿ ಚಿನ್ನ, ಬೆಳ್ಳಿ, ವಜ್ರಗಳು ಕಾಣಿಸಿಕೊಂಡವು. ಮನುಷ್ಯನು ಆಭರಣಗಳನ್ನು ಧರಿಸಲು ಮುಂದೆ ಇದೇ ಕಾರಣವಾಯಿತು.

ಅನಂತರ ಮನುಷ್ಯ ಚಿನ್ನದ ಮೂಲವನ್ನು ಜಾಲಾಡಿಸುತ್ತ ಭೂಮಿಯ ನೂರಾರು ಅಡಿಗಳ ಆಳಕ್ಕೆ ಇಳಿದಿದ್ದು ತೀರ ಇತ್ತೀಚೆಗೆ ಕೇವಲ ನಾಲ್ಕಾರು ಸಾವಿರ ವರ್ಷಗಳಿಂದ. ಇನ್ನು ಆಧುನಿಕ ಚಿನ್ನದ ಗಣಿಗಳ ಚರಿತ್ರೆ ಕೇವಲ ಕೆಲವು ನೂರು ವರ್ಷಗಳ ಹಿಂದಿನದು. ಇವುಗಳಲ್ಲಿ ಆಫ್ರಿಕಾ, ಇಂಡಿಯಾ, ಆಸ್ಟ್ರೇಲಿಯಾ, ಅಮೆರಿಕಾ ಮತ್ತು ಚೀನಾದ ಚಿನ್ನದ ಗಣಿಗಳನ್ನು ಹೆಸರಿಸಬಹುದು.

❖❖❖

ತಮಿಳುನಾಡಿನ ನೀಲಗಿರಿ, ಆಂಧ್ರಪ್ರದೇಶದ ರಾಮಗಿರಿ, ಬಿಹಾರ ಮತ್ತು ಉತ್ತರಪ್ರದೇಶದ ಗಂಗಾ ಬಯಲುಗಳಲ್ಲಿ ಚಿನ್ನ ಶೋಧಿಸುವ ಜಲಗಾರರ ನೂರಾರು ಕುಟುಂಬಗಳನ್ನು ಇಂದಿಗೂ ನೋಡಬಹುದಾಗಿದೆ. ಚಿನ್ನ ದೊರಕುವ ಪ್ರಪಂಚದ ಇತರ ಪ್ರದೇಶಗಳಲ್ಲೂ ಹೀಗೆ ಚಿನ್ನದ ಧೂಳನ್ನು ದಿನನಿತ್ಯ ಶೋಧಿಸಿ ಮಾರಿಕೊಂಡು ಹೊಟ್ಟೆ ತುಂಬಿಸಿಕೊಳ್ಳುವ ಅನೇಕ ಕುಟುಂಬಗಳನ್ನು ಪ್ರಪಂಚದಾದ್ಯಂತ ನೋಡಬಹುದು. ಕರ್ನಾಟಕ ಹಸಿರು ಶಿಲಾ ಶಿಷ್ಟ್ ಪಟ್ಟಿಗಳಾದ ಕೋಲಾರ, ಹಟ್ಟಿ, ಗದಗ್, ಚಿತ್ರದುರ್ಗ, ಕೆಂಪಿನಕೋಟೆ ಇನ್ನಿತರ ಪ್ರದೇಶಗಳಲ್ಲಿ ಚಿನ್ನವನ್ನು ಜಾಲಿಸುವ ಹತ್ತಾರು ಜಲಗಾರರ ಕುಂಟುಂಬಗಳನ್ನು ಇಂದಿಗೂ ನೋಡಬಹುದು. ಚಿನ್ನವನ್ನು ಜಾಲಿಸುವುದರ ಬಗ್ಗೆ

ಇಡೀ ಭಾರತದಲ್ಲಿ ಒಂದೇ ಒಂದು ಶಿಲಾಶಾಸನವನ್ನು (ಗದಗಿನ ಲಕ್ಷ್ಮೇಶ್ವರದ ಹತ್ತಿರ) ನೋಡಬಹುದಾಗಿದೆ. ಪ್ರಪಂಚದಲ್ಲಿ ಇಂತಹ ಒಂದು ಶಿಲಾಶಾಸನ ಬೇರೆಲ್ಲೂ ಇದುವರೆಗೂ ಕಾಣುಬಂದಿಲ್ಲ.

ಶಿಥಿಲೀಕರಣದಿಂದ ಶಿಲೆಗಳಲ್ಲಿನ ಚಿನ್ನ ಬೇರ್ಪಟ್ಟು ಮಣ್ಣು ಮತ್ತು ನೀರಿನ ಮೂಲಕ ಹಳ್ಳ ಕೊಳ್ಳಗಳಿಗೆ ಹರಿಯುವುದು ಒಂದು ನೈಸರ್ಗಿಕ ಪ್ರಕ್ರಿಯೆಯಾದರೆ, ಚಿನ್ನದ ಅದಿರಿರುವ ಶಿಲೆಗಳಿಂದ ಚಿನ್ನವನ್ನು ಶೋಧಿಸಿದ ಮೇಲೆ ಸಯೆನೈಡ್ ಮಿಶ್ರಿತ ಮಣ್ಣನ್ನು ಗಣಿಗಳ ಸುತ್ತಮುತ್ತಲು ಬೆಟ್ಟ ಗುಡ್ಡಗಳಂತೆ ಎಸೆಯಲಾಗಿ, ಈ ಮಣ್ಣಿನಲ್ಲಿ ನೂರಕ್ಕೆ ನೂರು ಪಟ್ಟು ಚಿನ್ನ ಸಂಸ್ಕರಣೆಯಾಗದೆ ಚಿನ್ನದ ಸ್ವಲ್ಪ ಭಾಗ ಹಾಗೆ ಉಳಿದುಕೊಂಡಿತು. ಹೀಗಾಗಿ ಈ ಪ್ರದೇಶಗಳಲ್ಲಿ ಚಿನ್ನ ಶೋಧಿಸುವ ಜಲಗಾರರನ್ನು ನೋಡಬಹುದು. ಜಲಗಾರರು ಚಿನ್ನದ ಧೂಳಿರುವ ಪ್ರದೇಶಗಳ ಮಧ್ಯದಲ್ಲಿ ನೀರು ಹರಿಯವ ಸಣ್ಣ ಹಳ್ಳಗಳನ್ನು ಮತ್ತು ನದಿ ಜಾಡುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಗಲವಾದ ಮರದ ಪುಟ್ಟಿಗಳಲ್ಲಿ ಚಿನ್ನವಿರುವ ಮಣ್ಣನ್ನು ತುಂಬಿಕೊಂಡು ಅದರ ಮೇಲೆ ನೀರನ್ನು ನಿಧಾನವಾಗಿ ಹಾಯಿಸಿ ಮಣ್ಣನ್ನು ಜಾಲಾಡುತ್ತ ಹೋಗುತ್ತಾರೆ. ಮಣ್ಣನ್ನು ಹತ್ತಾರು ಸಲ ನೀರಿನಲ್ಲಿ ಜಾಲಾಡಿಸುತ್ತ ಹೋದಂತೆ ಸಾಂದ್ರತೆ ಹೆಚ್ಚಿರುವ ಖನಿಜ ಚೂರುಗಳು ಮಾತ್ರ ಕೊನೆಗೆ ಉಳಿದುಕೊಳ್ಳತ್ತವೆ. ಅದರಲ್ಲೂ ಚಿನ್ನದ ಧೂಳು ಎಲ್ಲಾ ಖನಿಜಗಳಿಗಿಂತ ಹಿಂದೆ ಉಳಿಯುತ್ತದೆ. ಹೀಗೆ ಹಿಂದೆ ಉಳಿದ ಚಿನ್ನದ ಧೂಳನ್ನು ಸೂಕ್ಷ್ಮವಾಗಿ ಬೇರ್ಪಡಿಸಿ ತೆಗೆದುಕೊಳ್ಳಲಾಗುತ್ತದೆ. ಬೇರೆ ಖನಿಜಗಳಿಂದ ಚಿನ್ನದ ಧೂಳನ್ನು ಪೂರ್ಣವಾಗಿ ಬೇರ್ಪಡಿಸಲು ಪಾದರಸವನ್ನು ಬೆರೆಸಲಾಗುತ್ತದೆ. ಪಾದರಸವು ಚಿನ್ನವನ್ನು ಮಾತ್ರ ಸೆಳೆದುಕೊಳ್ಳುವುದು. ಅನಂತರ ಚಿನ್ನವನ್ನು ಪಾದರಸದಿಂದ ಸಂಪೂರ್ಣವಾಗಿ ಬೇರ್ಪಡಿಸಲಾಗುತ್ತದೆ.

ಜಲಗಾರರು ಕುಟುಂಬಗಳ ಸಮೇತ ದಿನನಿತ್ಯ ಮಣ್ಣು ನೀರಿನಿಂದ ಜಾಲಾಡಿ ಬೇರ್ಪಡಿಸುವ ಚಿನ್ನದ ಧೂಳನ್ನು ಸಾಯಂಕಾಲ ಚಿನ್ನದ ವ್ಯಾಪಾರಿಗಳಿಗೆ ಅಥವಾ ಚಿನ್ನದ ದಳ್ಳಾಳಿಗಳಿಗೆ ಮಾರಿಬಿಡುತ್ತಾರೆ. ಅದು ಅವರವರ ಅದೃಷ್ಟ, ಆಗ ಅವರಿಗೆ ಹತ್ತಾರು ರೂ.ನಿಂದ ಕೆಲವು ನೂರು ರೂ.ವರೆಗೂ ದೊರಕಬಹುದು. ಒಟ್ಟಿನಲ್ಲಿ ಅವರ ಕೈಗೆ ಬರುವುದು ನಿಜವಾದ ಚಿನ್ನದ ಬೆಲೆಯ ಕಾಲು ಭಾಗ ಮಾತ್ರ. ಮಿಕ್ಕಿದ್ದು ವ್ಯಾಪಾರಿ ಮತ್ತು ದಳ್ಳಾಳಿಗಳ ಪಾಲಾಗುತ್ತದೆ. ಆಯಾ ದಿನ ದುಡಿದ ಶ್ರಮ ಆ ಕುಟುಂಬಗಳ ದಿನನಿತ್ಯ ಖರ್ಚಿಗೆ ಆಗುತ್ತದೆ. ಜೀವನವಿಡೀ ಹೀಗೆ ಚಿನ್ನವನ್ನು ಶೋಧಿಸುವ ಜಲಗಾರ ಹೆಣ್ಣು ಮಕ್ಕಳ ಮೈಮೇಲೆ ಒಂದೇ ಒಂದು ಎಳೆ ಚಿನ್ನ ಕೂಡ ಇರುವುದಿಲ್ಲ. ಇದು ಮನುಷ್ಯನ ನಾಗರಿಕತೆಯ ಮೂಲ ಲೋಪವೇನೊ?[1]

ಗಣಿಗಾರಿಕೆಯ ದುಷ್ಪರಿಣಾಮಗಳು :

ಚಿನ್ನ, ಬೆಳ್ಳಿ, ತಾಮ್ರ, ವಜ್ರ, ಕಲ್ಲಿದ್ದಲು, ಕಬ್ಬಿಣ, ಸುಣ್ಣ, ಗ್ರಾನೈಟ್ ಶಿಲೆಗಳು ಹೀಗೆ ಎಲ್ಲವನ್ನು ಗಣಿಗಳಿಂದಲೆ ತೆಗೆಯುವುದು. ಗಣಿಗಳಲ್ಲಿ ಮುಖ್ಯವಾಗಿ ಎರಡು ವಿಧ. ಒಂದು: ಸುರಂಗಗಳಿಂದ ಕೂಡಿದ ಆಳವಾದ ಒಳಗಣಿಗಳು, ಎರಡು: ತೆರೆದ ಗಣಿಗಳು. ಎರಡರಿಂದಲೂ ಸಾಕಷ್ಟು ಅರಣ್ಯ ಸಂಪತ್ತು ನಾಶವಾಗುವುದರ ಜೊತೆಗೆ ವನ್ಯಪ್ರಾಣಿಗಳ ಸಂಖ್ಯೆ ನಶಿಸುತ್ತವೆ. ಸುತ್ತಲಿನ ಜಲ, ವಾಯು, ನೆಲ ಮತ್ತು ಶಬ್ದಮಾಲಿನ್ಯವಾಗುವುದರ ಜೊತೆಗೆ ಮನುಷ್ಯನ ಆರೋಗ್ಯದ ಮೇಲೂ ಅಗಾಧವಾದ ದುಷ್ಪರಿಣಾಮ ಬೀರುತ್ತವೆ. ಉದಾ: ಕರ್ನಾಟಕದ ಚಿನ್ನದ ಗಣಿಗಳು, ಮಧ್ಯಪ್ರದೇಶದ ಬೈಲ್‌ದಲಾ, ಕರ್ನಾಟಕದ ಕುದುರೆಮುಖ, ಸಂಡೂರ್ ಕಬ್ಬಿಣ ಮತ್ತು ಮ್ಯಾಂಗನೀಸ್ ತೆರೆದ ಗಣಿಗಳು, ರಾಜಸ್ಥಾನದ ಸೀಸ ಮತ್ತು ಸತು ಗಣಿಗಳು, ಬಿಹಾರ್ ಮತ್ತು ಒರಿಸ್ಸಾದ ಕಲ್ಲಿದ್ದಲು ಗಣಿಗಳು ಮತ್ತು ದೇಶದಾದ್ಯಂತ ಇರುವ ಗ್ರಾನೈಟ್ ಕ್ವಾರಿಗಳು.

ಗಣಿ ಮಾಲಿನ್ಯವನ್ನು ಮುಖ್ಯವಾಗಿ ಎರಡು ರೀತಿಯಾಗಿ ವಿಂಗಡಿಸಬಹುದು. ಒಂದು:ನಮ್ಮ ಸುತ್ತಮುತ್ತಲಿನ ಅರಣ್ಯ, ನೀರು, ಗಾಳಿ, ನೆಲ ಮತ್ತು ಶಬ್ದ ಮಾಲಿನ್ಯ. ಎರಡು: ಮನುಷ್ಯನ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮಗಳು ಮತ್ತು ನಶಿಸುತ್ತಿರುವ ವನ್ಯಮೃಗಗಳು. ಆಮ್ಲಜನಕ, ಇಂಗಾಲ, ಜಲಜನಕ, ನೀರು ಮತ್ತು ಗಾಳಿಯ ಚಕ್ರ ನಿಸರ್ಗದಲ್ಲಿ ಸಮವಾಗಿ ಉಳಿಯಬೇಕೆಂದರೆ ಅರಣ್ಯಗಳನ್ನು ಉಳಿಸಿಕೊಳ್ಳಬೇಕಿದೆ. ಅರಣ್ಯಗಳು ಜಗತ್ತಿನ ಶ್ವಾಸ-ನಿಶ್ವಾಸವನ್ನೇ ನಿರ್ಧರಿಸುತ್ತವೆ.

ಅರಣ್ಯ ನಾಶದಿಂದ ಆಮ್ಲಜನಕ ಉತ್ಪತ್ತಿ ಕಡಿಮೆಯಾಗಿ ಇಂಗಾಲದ ಡೈಯಾಕ್ಸೈಡ್ ಹೆಚ್ಚಾಗಿ ಜಗತ್ತಿನ ಪರಿಸರದ ಸಮತೋಲನವೇ ಏರುಪೇರಾಗುತ್ತದೆ. ಸುಂದರ ಅರಣ್ಯ ಮತ್ತು ಫಲವತ್ತಾದ ನೆಲ, ಗಣಿಗಳಿಂದಾಗಿ ಹತ್ತಾರು ವರ್ಷಗಳಲ್ಲೇ ಬರಡು ಭೂಮಿಯಾಗಿ ಮಾರ್ಪಡುತ್ತದೆ. ಹೊಲ-ಗದ್ದೆಗಳು ನಾಶವಾಗಿ, ದವಸ-ಧಾನ್ಯಗಳ ಉತ್ಪತ್ತಿ ಕಡಿಮೆಯಾಗುತ್ತದೆ. ಆಳವಾದ ಸುರಂಗಗಳ ಗಣಿಗಳಿಂದ ಸುತ್ತಮುತ್ತಲಿನ ನೀರೆಲ್ಲ ಸೋರಿಹೋಗಿ ಬಾವಿ, ಕರೆ, ನದಿ, ಸರೋವರಗಳೆಲ್ಲ ಬತ್ತಿಹೋಗುತ್ತವೆ. ಸುಂದರ ಬೆಟ್ಟ-ಗುಡ್ಡ ಕಣಿವೆಗಳೆಲ್ಲ ನೆಲಸಮವಾಗಿ, ಸುತ್ತಮುತ್ತಲೂ ಕಲ್ಲು-ಮಣ್ಣು ರಾಶಿ ರಾಶಿಯಾಗಿ ಬೀಳುತ್ತದೆ. 1284 ಮೀ. ಎತ್ತರವಿದ್ದ ಕುದುರೆಮುಖದ ಅರೋಲಿ ಶಿಖರಗಳು ಈಗ ನೆಲಸಮವಾಗಿ ಕೆಲವು ನೂರು ಮೀ. ಎತ್ತರಕ್ಕೆ ಬಂದು ನಿಂತಿವೆ. ಕಾಡು ನಾಶವಾಗಿ, ಬೆಟ್ಟಗಳೆ ನೆಲಸಮವಾದರೆ, ಮೋಡಗಳನ್ನು ತಡೆದು ನಿಲ್ಲಿಸಿ ಮಳೆ ಸುರಿಸುವ ನೈಸರ್ಗಿಕ ಪ್ರಕ್ರಿಯೆ ಏರುಪಾರಾಗಿ, ಆ ಪ್ರದೇಶ ಮಳೆ ಇಲ್ಲದೆ ಬರಗಾಲದ ಬರಡು ನೆಲವಾಗುತ್ತದೆ.

ಚಿನ್ನದ ಅದಿರಿನಿಂದ ಚಿನ್ನವನ್ನು ಬೇರ್ಪಡಿಸುವಾಗ ಉಪಯೋಗಿಸುವ ಸಯೆನೈಡ್

ರಾಸಾಯನಿಕ ವಸ್ತು, ಮನುಷ್ಯನ ಆರೋಗ್ಯದ ಮೇಲೆ ಅಗಾಧ ಹಾನಿ ಉಂಟುಮಾಡುತ್ತದೆ. ಫಲವತ್ತಾದ ನೆಲ ತನ್ನ ನೈಸರ್ಗಿಕ ಶಕ್ತಿಯನ್ನು ಕಳೆದುಕೊಂಡು ಯಾವುದೇ ರೀತಿಯ ಬೆಳೆಯೂ ಬೆಳೆಯದೆ ಬಂಜರು ಭೂಮಿಯಾಗಿ ಮಾರ್ಪಡುತ್ತದೆ. ಕೆಜಿಎಫ್ ಸುತ್ತಮುತ್ತಲು ಮತ್ತು ಆಗ್ನೇಯಕ್ಕೆ ಸುಮಾರು 25 ಕಿ.ಮೀ. ದೂರದವರೆಗೆ ಅನೇಕ ಕೆರೆಗಳು ಸಯೆನೈಡ್ ಮಣ್ಣಿನ ಹೂಳಿನಿಂದ ತುಂಬಿಹೋಗಿವೆ. ಕೆಜಿಎಫ್ ಪ್ರದೇಶದಿಂದ ನೀರು ದಕ್ಷಿಣ ಪೂರ್ವಕ್ಕೆ ಹರಿದು ಪೆನ್ನಾರ್ ನದಿಯ ಮೂಲಕ ಅಂತಿಮವಾಗಿ ಕಾವೇರಿ ನದಿಯನ್ನು ಸೇರುತ್ತದೆ. ಇಲ್ಲಿ ಸಾವಿರಾರು ಎಕರೆ ಹೊಲ-ಗದ್ದೆಗಳು ಬಂಜರು ನೆಲವಾಗಿ ಮಾರ್ಪಟ್ಟಿವೆ.

ಗಣಿ ಮಾಲಿನ್ಯದ ಮುಖ್ಯ ರೋಗಗಳೆಂದರೆ ಕೆಮ್ಮು, ಅಸ್ತಮಾ, ಸಿಲಿಕೋಸಿಸ್, ಕ್ಯಾನ್ಸರ್ ಇತ್ಯಾದಿ. ಗಾಳಿ, ನೀರು ಮತ್ತು ಆಹಾರ ಪದಾರ್ಥಗಳ ಮೂಲಕ ಸಿಲಿಕಾ ಕಣಗಳು ಮನುಷ್ಯನ ದೇಹ ಸೇರಿಕೊಳ್ಳುತ್ತವೆ. ಇದರಿಂದ ಗಣಿ ಪ್ರಾಂತ್ಯಗಳಲ್ಲಿ ಕಣ್ಣು, ಮೂಗು, ಗಂಟಲು ಬೇನೆಗಳು ಜನರನ್ನು ಹೆಚ್ಚಾಗಿ ಕಾಡುತ್ತವೆ. ಚಿನ್ನದ ಗಣಿಗಳು ಮುಚ್ಚಿ ಇಲ್ಲಿನ ಗಣಿ ಬಡಾವಣೆಗಳು ಚೆಲ್ಲಾಪಿಲ್ಲಿಯಾದ ಮೇಲೆ, ಪ್ರಸ್ತುತ ಕೆಜಿಎಫ್ ಪ್ರದೇಶ ಸಯೆನೈಡ್ ಮಣ್ಣಿನಿಂದ ಸುತ್ತುವರಿದಿದ್ದು ಒಂದು ದೆವ್ವದ ನಗರದಂತೆ ತೋರುತ್ತಿದೆ.

ನಮ್ಮ ಆಧುನಿಕ ಜೀವನಕ್ಕೆ ಚಿನ್ನ, ಬೆಳ್ಳಿ, ವಜ್ರ, ಕಬ್ಬಿಣ, ಪೆಟ್ರೋಲು ಹೀಗೆ ಎಲ್ಲವೂ ಬೇಕೆ, ಬೇಕು. ಆದ್ದರಿಂದ ಗಣಿಗಳನ್ನು ಮಾಡದೆ ಇರುವುದಕ್ಕೂ ಆಗುವುದಿಲ್ಲ. ಹೀಗಾಗಿ ಗಣಿಗಳ ಮುಖಾಂತರ ಈ ಅಮೂಲ್ಯ ಖನಿಜಗಳನ್ನು ಭೂಮಿಯಿಂದ ಹೊರ ತೆಗೆಯುವಾಗ ಹಲವು ಕಟ್ಟೆಚ್ಚರಗಳನ್ನು ಪಾಲಿಸುವ ಮೂಲಕ ಭೂಮಿಯ ಮೇಲಾಗುವ ಬರ್ಬರ ಕೃತ್ಯಗಳನ್ನು ಆದಷ್ಟು ತಡೆಗಟ್ಟಬೇಕಾಗಿದೆ. ಮುಖ್ಯವಾಗಿ ಯಾವುದೇ ಗಣಿ ಪ್ರಾರಂಭವಾಗುವ ಮುನ್ನ ಎಲ್ಲಾ ರೀತಿಯ ಮಾಹಿತಿಯನ್ನು ಪಡೆದುಕೊಂಡು ಸಾಕಷ್ಟು ಮುನ್ನೆಚ್ಚರಿಕೆಗಳನ್ನು ವಹಿಸಬೇಕು. ಗಣಿಗಳಿಗೆ ಮೀಸಲಿರುವಷ್ಟು ಸ್ಥಳವನ್ನು ಮಾತ್ರ ಉಪಯೋಗಿಸಬೇಕು, ಗಣಿ ಉದ್ದಿಮೆ ಮಾಡುವವರೆ ಸುತ್ತಲಿನ ವಾತಾವರಣವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಮಾಲಿನ್ಯ ನಿಯಂತ್ರಿಸಲು ಸಾಕಷ್ಟು ಹಣ ತೊಡಗಿಸುವಂತೆ ನೋಡಿಕೊಳ್ಳಬೇಕು. ಖನಿಜಗಳು ಬೇರ್ಪಡಿಸಿದ ಮಣ್ಣನ್ನು ಸುತ್ತಲು ಹರಡದಂತೆ ನೋಡಿಕೊಳ್ಳಬೇಕು. ಗಣಿ ಉದ್ದಿಮೆ ಆಯಾ ಪ್ರದೇಶದಲ್ಲಿ ಕೇವಲ ಕೆಲವು ವರ್ಷಗಳ ಉದ್ದಿಮೆ ಮಾತ್ರ. ಆದರೆ ಸುತ್ತಮುತ್ತಲಿನ ಸುಂದರ ಅರಣ್ಯ, ಫಲವತ್ತಾದ ನೆಲ, ನದಿ, ಸರೋವರಗಳು ಹಾಳಾಗದಂತೆ ನೋಡಿಕೊಳ್ಳಬೇಕು. ಮುಂದುವರೆದ ದೇಶಗಳು ತಂತ್ರಜ್ಞಾನ, ಹಣ ಎರಡೂ ಇದ್ದರೂ ವಾತಾವರಣವನ್ನು ಹದಗೆಡಿಸಿ ಸರಿಪಡಿಸಲಾಗದೆ ಪರಿತಪಿಸುತ್ತಿವೆ. ಅಭಿವೃದ್ಧಿ ಹೊಂದುತ್ತಿರುವ ನಮ್ಮ ದೇಶದಲ್ಲೂ ಗಣಿಗಾರಿಕೆಯಿಂದಾಗಿ ಈಗಾಗಲೆ ಸಾವಿರಾರು ಚದರ ಕಿ.ಮೀ. ಪ್ರದೇಶ ಬಂಜರು ಭೂಮಿಯಾಗಿ ಮಾರ್ಪಟ್ಟಿದೆ. ಈ ಸುಂದರ ಭೂಮಿಯ ಮೇಲಿರುವ ನಾವೆಲ್ಲರು ನಮ್ಮ ಮುಂದಿನ ಪೀಳಿಗೆಗಳಿಗೆ

ನೀಡುವ ಕೊಡುಗೆಯೆಂದರೆ ಆದಷ್ಟು ಸ್ವಚ್ಛ ನೀರು, ಗಾಳಿ ಮತ್ತು ಅರಣ್ಯವನ್ನು ಉಳಿಸುವುದು.[2]

ಸಯೆನೈಡ್ ಗುಡ್ಡಗಳು :

ಕೆಜಿಎಫ್ ನಗರದ ಬಡಾವಣೆಗಳಲ್ಲಿರುವ ಎಲ್ಲಾ ಮನೆಗಳ ಕಿಟಕಿ ಬಾಗಿಲುಗಳನ್ನು ಮುಚ್ಚಿಟ್ಟರೂ ಸಯೆನೈಡ್ ಮಣ್ಣು ಮನೆಗಳ ಒಳಗೆ ನುಗ್ಗಿಬರುತ್ತದೆ. ಇನ್ನು ಅಂಗಡಿಗಳು, ಶಾಲೆ–ಕಾಲೇಜುಗಳು, ಸಾರ್ವಜನಿಕ ಕಚೇರಿಗಳು ಮತ್ತು ದಟ್ಟ ಮನೆಗಳಂತೂ ಮಣ್ಣಿನಿಂದ ತುಂಬಿಹೋಗುತ್ತವೆ. ಮನೆಗಳನ್ನು ಐದು ನಿಮಿಷಗಳಿಗೆ ಒಮ್ಮೆ ಗುಡಿಸುತ್ತ, ಮನೆಯ ಒಳಗಿರುವ ವಸ್ತುಗಳ ಮೇಲಿನ ಧೂಳನ್ನು ಹೊಡೆಯತ್ತಲೆ ಇರಬೇಕಾಗುತ್ತದೆ. ತಿಂಡಿ ತಿನಿಸುಗಳನ್ನು ಪಾತ್ರೆಗಳ ಒಳಗಿಟ್ಟು ಗಟ್ಟಿಯಾಗಿ ಮುಚ್ಚಿಡಬೇಕಾಗುತ್ತದೆ. ಮಾರುಕಟ್ಟೆ, ಶಾಲೆ–ಕಾಲೇಜುಗಳು ಮತ್ತು ಸಾರ್ವಜನಿಕ ಕಚೇರಿಗಳ ತೊಂದರೆ ಹೇಳತೀರದು. ಸುಂಟರಗಾಳಿ ಎದ್ದಾಗ, ಬಿರುಗಾಳಿ ಬೀಸುವಾಗ ಅಥವಾ ಗಾಳಿ ಬೀಸುವ ದಿನಗಳಲ್ಲಿ ಕೆಜಿಎಫ್ ಯುದ್ಧ ನಡೆಯುತ್ತಿರುವ ಒಂದು ಬಯಲಿನಂತೆ ಗೋಚರಿಸುತ್ತದೆ. ಬೆಂಗಳೂರು ವಿಶ್ವವಿದ್ಯಾಲಯ ನಡೆಸಿದ ಒಂದು ಸಂಶೋಧನೆಯಲ್ಲಿ 74 ಮಿ.ಮೈಕ್ರಾನ್‌ಗಿಂತ ಸಣ್ಣಗಿನ ಧೂಳು ಬಾಯಿಯ ಮೂಲಕ ಗಂಟಲು ಸೇರಿದಾಗ ಎದೆಯಲ್ಲಿ ಉಸಿರಾಟದ ತೊಂದರೆ ಕಾಣಿಸಿಕೊಂಡ ಅನೇಕರನ್ನು ಭೇಟಿಯಾಗಿರುವುದಾಗಿ ದಾಖಲಿಸಿದೆ. ಇದಕ್ಕೆ ಕಾರಣ ಧೂಳಿನಲ್ಲಿರುವ ಅರ್ಸೆನಿಕ್ ಧಾತು ಎನ್ನಲಾಗಿದ್ದು, ಇದನ್ನು ಸ್ಥಳೀಯ ವೈದ್ಯರು ಕೂಡ ದೃಢಪಡಿಸಿದ್ದಾರೆ.[3]

ಜಲಮಾಲಿನ್ಯ :

ಕೆಜಿಎಫ್ ನಗರದ ಶೇಕಡ 10ರಷ್ಟು ಪ್ರದೇಶದಲ್ಲಿ ಸಯೆನೈಡ್ ಗುಡ್ಡಗಳು ನೆಲದಿಂದ 100 ಅಡಿಗಳ ಎತ್ತರದವರೆಗೂ ಅನೇಕ ಕಡೆ ಹರಡಿಕೊಂಡಿವೆ. ಹಲವು ಶ್ಯಾಫ್ಟ್‌ಗಳು ಮತ್ತು ಕೊಳವೆ ಬಾವಿಗಳಿಂದ ಸಂಗ್ರಹಿಸಿದ ನೀರಿನಲ್ಲಿ ನಡೆಸಿದ ಸಂಶೋಧನೆಗಳಿಂದ ಆರ್ಸೆನಿಕ್, ಸಲ್ಫೇಟ್ಸ್, ಕ್ಲೋರೈಡ್ಸ್, ಬೈಕಾರ್ಬೋನೇಟ್ಸ್, ಕ್ಯಾಲ್ಸಿಯಮ್, ಸೋಡಿಯಂ, ಫ್ಲೋರೈಡ್ ಮತ್ತು ಮ್ಯಾಗ್ನೇಶಿಯಂ ಖನಿಜಗಳು ಇರುವುದು ಕಂಡುಬಂದಿವೆ. ಚಿನ್ನದ ನಿಕ್ಷೇಪಗಳಲ್ಲಿ ಚಿನ್ನದ ಜೊತೆಗೆ ಅನೇಕ ಸಂಬಂಧಿತ ಖನಿಜಗಳಿದ್ದು ಅವೆಲ್ಲ ನೀರಿನಲ್ಲಿ ಇಂಗಿರುತ್ತವೆ. ಇವುಗಳಲ್ಲಿ ಮುಖ್ಯವಾಗಿ ಪಾದರಸ, ಸತು, ಸೀಸ, ತಾಮ್ರ, ಬೆಳ್ಳಿ, ಬಿಸ್‌ಮತ್ ಇತ್ಯಾದಿ. ಚಿನ್ನವನ್ನು ಪ್ರತ್ಯೇಕಿಸಲು ಉಪಯೋಗಿಸುತ್ತಿದ್ದ ಸಯೆನೈಡ್ ಆಮ್ಲ ಕೂಡ ಈ ಖನಿಜಗಳ ಜೊತೆಗೆ ಸೇರಿಕೊಂಡಿದೆ.

1977–78ರಲ್ಲಿ ನಡೆಸಿದ ಸಂಶೋಧನೆಗಳಿಂದ ದೃಢಪಟ್ಟ ವಿಷಯಗಳು ಹೀಗಿವೆ:

ಚಿನ್ನದ ನಿಕ್ಷೇಪಗಳನ್ನು ಹೊಂದಿರುವ ಶಿಸ್ಟ್ ಶಿಲೆಗಳ ಸುತ್ತಲ ಪ್ರದೇಶಗಳಲ್ಲಿ ಅಗ್ನಿ ಶಿಲೆಗಳು (ಗ್ರಾನೈಟ್/ನೈಸಸ್) ಹಾಸಿಕೊಂಡಿದ್ದು ಈ ಪ್ರದೇಶಗಳಲ್ಲಿ ಸಂಗ್ರಹಿಸಿದ ನೀರು ಕುಡಿಯಲು ಯೋಗ್ಯವಾಗಿತ್ತು. ಗಣಿ ಪ್ರದೇಶದ ಕೊಳವೆ ಬಾವಿಗಳ ನೀರಿನಲ್ಲಿ ಸಾಕಷ್ಟು ವಿಷದ ಧಾತುಗಳಿದ್ದರೂ, ಸಲ್ಫೇಟ್ಸ್, ಕ್ಲೋರೈಡ್ಸ್ ಮತ್ತು ಕ್ಯಾಲ್ಸಿಯಮ್ ಖನಿಜಗಳನ್ನು ಪ್ರತ್ಯೇಕಿಸಿ ಕ್ಲೋರಿನ್ ಜೊತೆಗೆ ಕುಡಿಯಬಹುದು. ಆದರೆ ಗಣಿ ಸುರಂಗಗಳು ಮತ್ತು ಶ್ಯಾಫ್ಟ್‌ಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿ ಹೇರಳ ವಿಷ ಖನಿಜಗಳಿದ್ದು ಕುಡಿಯಲು ಯೋಗ್ಯವಾಗಿರಲಿಲ್ಲ. ಈ ನೀರಿನಲ್ಲಿ ಅರ್ಸೆನಿಕ್, ಸಲ್ಫೇಟ್ಸ್, ಫ್ಲೋರಿನ್, ಪೊಟ್ಯಾಶಿಯಂ, ಕ್ಲೋರೈಡ್ಸ್, ಬೈಕಾರ್ಬೋನೇಟ್ಸ್, ಕ್ಯಾಲ್ಸಿಯಮ್, ಸೋಡಿಯಂ, ಫ್ಲೋರೈಡ್ ಮತ್ತು ಮ್ಯಾಗ್ನೇಶಿಯಂ ಖನಿಜಗಳು ಹೆಚ್ಚು ಪ್ರಮಾಣದಲ್ಲಿದ್ದವು.

ರಾಬರ್ಟ್‌ಸನ್‌ಪೇಟೆ ಸಿವಿಲ್ ಆಸ್ಪತ್ರೆಯಲ್ಲಿ 1975, 1976, 1977ನೇ ವರ್ಷಗಳಲ್ಲಿ 1,53,611; 1,58,528 ಮತ್ತು 1,61,700 ರೋಗಿಗಳು ಚಿಕಿತ್ಸೆಗಾಗಿ ನೋಂದಣಿ ಮಾಡಿರುವ ದಾಖಲೆ ಇದೆ. ಇವರಲ್ಲಿ 2006, 1640 ಮತ್ತು 1428 ಜನರಿಗೆ ಶ್ವಾಸಕೋಶ ಸಂಬಂಧಿತ ತೊಂದರೆಗಳು ಇರುವುದಾಗಿ ದೃಢಪಟ್ಟಿದೆ. ಸಯೆನೈಡ್ ಗುಡ್ಡಗಳಲ್ಲಿರುವ ಧೂಳಿನ ಕಣಗಳ ಗಾತ್ರ 2ಮಿ.ಮೈಕ್ರಾನ್ ನಿಂದ 74ಮಿ.ಮೈಕ್ರಾನ್ (ಶೇಕಡ 76ರಷ್ಟು) ಮತ್ತು ಅದಕ್ಕಿಂತ ಹೆಚ್ಚು (ಶೇಕಡ 36ರಷ್ಟು). ಈ ಧೂಳು ಕಣ್ಣು ಮೂಗು ಕಿವಿ ಮತ್ತು ಚರ್ಮದಲ್ಲೂ ತೂರಿ ಮೈ ಸೇರುತ್ತದೆ. ಕೆಲವು ಕಂಪನಿಗಳು ಈ ವಿಷ ಸಯೆನೈಡ್ ಮಣ್ಣನ್ನು ಕೆದರಿ ಚಿನ್ನ ಶೋಧಿಸುವ ಆಲೋಚನೆಯಲ್ಲಿವೆ. ಜೊತೆಗೆ ಕಾರ್ಮಿಕರು ಮತ್ತು ಅವರ ನಾಯಕರು ಇದ್ದಾರೆ. ಈ ಧೂಳನ್ನು ಮತ್ತೆ ಕೆದರಿದ್ದೆಯಾದರೆ ರಾಬರ್ಟ್‌ಸನ್‌ಪೇಟೆ, ಆಂಡ್ರಸನ್‌ಪೇಟೆ, ಉರಿಗಾಂಪೇಟೆ ಮತ್ತು ಬಿಇಎಮ್‌ಎಲ್‌ನ ಭಾರತ್ ನಗರಗಳು ಹೇಳಲು ಹೆಸರಿಲ್ಲದಂತಾಗುತ್ತವೆ.[4]

ಇಂದಿನ ಕೆಜಿಎಫ್ :

ಮಂಗನಿಂದ ಮಾನವ ರೂಪ ಪಡೆದ ಮನುಷ್ಯನು ಕಾಡಿನಿಂದ ನಾಡಿಗೆ ಬರುವುದರೊಳಗೆ ಮಿಲಿಯಾಂತರ ವರುಷಗಳು ಕಳೆದುಹೋಗಿದ್ದವು. ಮರಗಳಿಂದ ನೆಲಕ್ಕೆ ಇಳಿದು ಬಂದ ಮಾನವ ಮೊದಲಿಗೆ ಗುಹೆಗಳಲ್ಲಿ ಆಶ್ರಯ ಪಡೆದು, ಕಾಡು ಪ್ರಾಣಿಗಳನ್ನು ಭೇಟಿಯಾಡುತ್ತಲೇ ನದಿ ದಡಕ್ಕೆ ಬಂದು ನೆಲೆ ನಿಂತುಕೊಂಡ. ವೃತ್ತಾಕಾರದ ಬಂಡೆಗಳನ್ನು ನಿಲ್ಲಿಸಿ ಅದರೊಳಗೆ ಅಡಗಿ ಕುಳಿತು ಒಂದಷ್ಟು ದಿನ ಕಾಲ ಕಳೆದ. ಅನಂತರ ಭೂಮಿಯನ್ನು ಉಳುತ್ತ ಕಾಡು ಪ್ರಾಣಿಗಳನ್ನು ಸಾಕುತ್ತ ಆಶ್ರಯಸ್ಥನಾದ. ಆಶ್ರಯಗಳು ಹಳ್ಳಿಗಳಾಗಿ, ಪಟ್ಟಣಗಳಾಗಿ ಈಗ ಮಹಾನಗರಗಳಾಗಿ ಬೆಳೆದು ನಿಂತಿವೆ. ಈ ನಡುವೆ ಅವನ ತಲೆಯೊಳಕ್ಕೆ ವಿಜ್ಞಾನದ ಹುಳುಗಳು ಸೇರಿಕೊಂಡು ಒಂದೊಂದೆ

ಯಂತ್ರ ಆವಿಷ್ಕಾರಗೊಳ್ಳತೊಡಗಿತು. ತ್ರೇತಾಯುಗ, ದ್ವಾಪರಯುಗ, ಕಲಿಯುಗಗಳು ಕಳೆದು ಈಗ ಜಣಾಜಣ ಮನಿ ಯುಗ ನಮ್ಮ ಮುಂದಿದೆ. ಗ್ಲಾಸ್ ಟ್ಯೂಬಿನಲ್ಲಿ ಬೇಬಿಯನ್ನು ಸೃಷ್ಟಿಸಿದ ಮೇಲೆ ಜೀನೋಮ್ ನಕ್ಷೆ ತಯಾರಾಯಿತು.

ಇನ್ನು ಮುಂದೆ ಸುಂದರವಾದ ಮತ್ತು ಮಹಾ ಬುದ್ಧಿಶೀಲ ಮಕ್ಕಳನ್ನು ಮಾತ್ರ ಭೂಮಿಯ ಮೇಲೆ ಸೃಷ್ಟಿಸಲು ವಿಜ್ಞಾನಿಗಳು ತಂತ್ರಜ್ಞಾನ ಹೆಣೆಯುತ್ತಿದ್ದಾರೆ. ಮನುಷ್ಯನು ಭೂಮಿಯ ಮೇಲೆ ನೂರಾರು ಸ್ಮಾರಕಗಳನ್ನು ಕಾಲಕಾಲಕ್ಕೆ ಸೃಷ್ಟಿಸುತ್ತಲೇ ಬರುತ್ತಿದ್ದಾನೆ. ಜೊತೆ ಜೊತೆಗೆ ವಿಶ್ವದಲ್ಲಿರುವ ಒಂದೇ ಒಂದು ಜೀವಗ್ರಹ ಭೂಮಿಯಲ್ಲಿನ ನೈಸರ್ಗಿಕ ಸಂಪನ್ಮೂಲಗಳಾದ ಗಾಳಿ–ನೀರು, ಮಣ್ಣು, ಅರಣ್ಯ, ನದಿ ಮತ್ತು ಸಾಗರಗಳನ್ನು ನಾಶ ಮಾಡುತ್ತಿದ್ದಾನೆ. ಅದರ ಜೊತೆಗೆ ಸಾಲದೆಂಬಂತೆ ಭೂಗರ್ಭದಲ್ಲಿ ಅಡಗಿರುವ ಸಂಪತ್ತನ್ನೂ ತನ್ನ ಪಾಶವಿ ಕೈಗಳಿಂದ ತೆಗೆದು ಹೊರಕ್ಕೆ ಬಿಸಾಕುತ್ತಿದ್ದಾನೆ. ಅಂತಹದರಲ್ಲಿ ಕೆಜಿಎಫ್ ಕಪ್ಪು ನೆಲ ಹುದುಗಿಸಿಟ್ಟುಕೊಂಡಿದ್ದ ಚಿನ್ನದ ತಿಜೋರಿಯನ್ನು ಬರಿದು ಮಾಡಿದ್ದಲ್ಲದೆ, ನೂರಾರು ಮೀ. ಎತ್ತರದ ಸಯೆನೈಡ್ ವಿಷದ ಗುಡ್ಡಗಳನ್ನು ನೇರವಾಗಿ ತನ್ನ ಎದೆಯ ಮೇಲೆಯೇ ಪೇರಿಸಿ ಇಟ್ಟುಕೊಂಡುಬಿಟ್ಟ. ಮಾಡಿದ್ದುಣ್ಣೊ ಮಹರಾಯ ಎನ್ನುವಂತೆ ತಾನು ಮಾಡಿದ ಅನಾಹುತಗಳೊಂದಿಗೆ ಈಗ ಬದುಕನ್ನು ನಡೆಸದೆ ವಿಧಿ ಇಲ್ಲದಂತಾಗಿದೆ. ಇದಕ್ಕೆಲ್ಲ ಕಾರಣ ಬ್ರಹ್ಮಾಂಡದ ಏಕೈಕ ಜೀವಗ್ರಹದ ಅತಿಬುದ್ಧಿವಂತ ಪ್ರಾಣಿ ಮನುಷ್ಯನೇ ಆಗಿದ್ದಾನೆ.

ಎಲ್ಲೇ ಇರಲಿ ಹೇಗೇ ಇರಲಿ ಕೆಜಿಎಫ್ ಹೆಸರು ಕೇಳಿದ್ದೆ ನನ್ನ ಕಿವಿಗಳು ನಿಮಿರಿ ನಿಂತುಬಿಡುತ್ತವೆ. ನನ್ನ ತಾತ ಬುಡ್ಡಪ್ಪ ಮತ್ತು ಚಿಕ್ಕತಾತ ಪಟ್ಟಪ್ಪ ಇಬ್ಬರೂ ಬಿಸಾನತ್ತಂ ಗಣಿಗಳಲ್ಲಿ ಯಾವುದೇ ಸವಲತ್ತು ಮತ್ತು ಸುರಕ್ಷತೆ ಇಲ್ಲದ ದಿನಗಳಲ್ಲಿ ಕೆಲವು ದಿನಗಳ ಕಾಲ ಕೆಲಸ ಮಾಡಿದ್ದರು ಎಂಬುದಾಗಿ ನನ್ನ ತಂದೆ ಹೇಳುತ್ತಿದ್ದರು. ಅಷ್ಟುಬಿಟ್ಟರೆ ನಮ್ಮ ಕುಟುಂಬಕ್ಕೆ ಗಣಿಗಳ ಜೊತೆಗೆ ಯಾವುದೇ ರೀತಿಯ ಸಂಬಂಧವೂ ಇರಲಿಲ್ಲ. ಆದರೆ ಗಣಿಗಳಲ್ಲಿ ಶಿಲಾಸ್ಫೋಟಗಳು ಸಂಭವಿಸಿದಾಗ 7 ಕಿ.ಮೀ. ದೂರದಲ್ಲಿದ್ದ ನಮ್ಮ ಹಳ್ಳಿ ಮತ್ತು ಸುತ್ತಮುತ್ತಲ ಹಳ್ಳಿಗಳು ಕೂಡ ಗಡಗಡ ನಡುಗಿಹೋಗುತ್ತಿದ್ದವು. ತಟ್ಟೆ, ಗ್ಲಾಸು, ಮಡಿಕೆ, ಕುಡಿಕೆಗಳು ಉರುಳಾಡುತ್ತ ಭೂಮಿ ಗಡಗಡ ಕಂಪಿಸುತ್ತಿತ್ತು. ಗಣಿ ಕಾರ್ಮಿಕರ ಹೆಣ್ಣು ಮಕ್ಕಳು ತಮ್ಮ ತಾಳಿಬೊಟ್ಟುಗಳನ್ನು ತೆಗೆದು ಕಣ್ಣುಗಳಿಗೆ ಒತ್ತಿಕೊಳ್ಳುತ್ತ 'ದೇವರೇ ನನ್ನ ಗಂಡನನ್ನು ಉಳಿಸಪ್ಪ' ಎಂದು ಬೇಡಿಕೊಳ್ಳುತ್ತಿದ್ದರು.

ಗಣಿಗಳ ಮೇಲಿದ್ದ ರಾಟೆಗಳು ಹಗಲು ರಾತ್ರಿಯೆನ್ನದೇ ಕಾರ್ಮಿಕರನ್ನು ನೆಲದ ಮೇಲಿಂದ ಗಣಿಗಳ ಒಳಕ್ಕೆ, ಗಣಿಗಳ ಒಳಗಿದ ನೆಲದ ಮೇಲಕ್ಕೆ ಸಾಗಿಸುತ್ತಿದ್ದವು. ಇನ್ನೊಂದು ಕಡೆ ಚಿನ್ನದ ಅದಿರನ್ನು ರೈಲುಗಳು ಮಲ್ಲಿಗೆ ತಂದು ತಂದು ಸುರಿಯುತ್ತಿದ್ದವು. ಈ ಸದ್ದಿನ ಮಧ್ಯೆ ಬೆಳಗ್ಗೆ 7 ಗಂಟೆಗೆ, ಸಾಯಂಕಾಲ 3 ಗಂಟೆಗೆ ಮತ್ತು ರಾತ್ರಿ 11

ಗಂಟೆಗೆ ಗಣಿಗಳ ವ್ಯಾಪ್ತಿಯಲ್ಲಿ ರಾಶಿ ರಾಶಿ ಕಾರ್ಮಿಕರು ಹಳದಿ ಶರ್ಟು, ಆಕಾಶ ಬಣ್ಣದ ನೀಲಿ ಪ್ಯಾಂಟಿನ ಯುನಿಫಾರ್ಮ್ ಧರಿಸಿ, ಕಾಲಿಗೆ ಪಂಪ್ ಶೂ ಹಾಕಿ, ತಲೆಗೆ ಹೆಲ್ಮೆಟ್ ಹಾಕಿ ಒಂದೇ ಸಮನೆ ಸೈಕಲ್ ತುಳಿಯುತ್ತಾ ರಾಶಿ ರಾಶಿ ಇರುವೆಗಳಂತೆ ಸಾಗುತ್ತಿದ್ದರು. ಕೆಲಸ ಮುಗಿಸಿದ ಕಾರ್ಮಿಕರು ಮೈಯೆಲ್ಲ ಬೂದು ಮಣ್ಣು ಮೆತ್ತಿಸಿಕೊಂಡು ಬರುತ್ತಿದ್ದರೆ, ಕೆಲಸಕ್ಕೆ ಹೋಗುವವರು ಫ್ರೆಷ್ಷಾಗಿ ಕಾಣಿಸುತ್ತಿದ್ದರು. ಇಡೀ ಗಣಿ ಸಮೂಹವೇ ಚಲನಶೀಲವಾಗಿ ಹರಿದಾಡುತ್ತಿತ್ತು.

ಈಗ ಅದೆಲ್ಲ ಮುಗಿದು ಹೋಗಿದೆ. ಗಣಿಗಳ ಮೇಲಿದ್ದ ಹೆಡ್‌ಗಿಯರ್ ಒಳಗಿನ ಚಕ್ರಗಳು ಚಲಿಸುವುದನ್ನೇ ಮರೆತು ಹೋಗಿವೆ. ಕೆಲವು ಕಡೆ ಚಕ್ರಗಳೇ ಕಾಣೆಯಾಗಿವೆ. ಗಣಿ ನಗರದ ಮೂಲೆಮೂಲೆಯಲ್ಲೂ ಯಂತ್ರಗಳು ತುಕ್ಕು ಹಿಡಿದು ನಿಶಬ್ದವಾಗಿ ಕುಳಿತಿವೆ. ಕಾರ್ಮಿಕರು ನಡೆದಾಡುತ್ತಿದ್ದ ರಸ್ತೆಗಳು ಬರಿದಾಗಿ ತಮ್ಮ ಹಿಂದಿನ ಕಳೆಯನ್ನು ಕಳೆದುಕೊಂಡು ಕಂಗಾಲಾಗಿವೆ. ಗಂಟೆಗೊಂದು ಸಲ ಕೂಗುತ್ತಿದ್ದ ಸೈರನ್ ಸದ್ದು ಕೇಳಿಸುವುದೇ ಇಲ್ಲ. ಅಳಿದುಳಿದ ಕಾರ್ಮಿಕರು ಅಂತಹ ಸೈರನ್ ಸದ್ದು ಮತ್ತೆ ಕೇಳುತ್ತದೆಯೇ ಎಂದು ಪರಿತಪಿಸುತ್ತಿದ್ದಾರೆ.

ರಸ್ತೆಗಳ ಇಕ್ಕೆಲಗಳಲ್ಲಿ ಕೆಂಪು ಹೂವುಗಳನ್ನು ಮೈತುಂಬಾ ಹೊದ್ದುಕೊಂಡು ನಿಂತಿರುತ್ತಿದ್ದ ಗುಲ್ ಮೊಹರ್ ಮರಗಳು ನಗುವುದನ್ನೇ ಮರೆತು ಹೋಗಿ, ಬರುವವರನ್ನು, ಹೋಗುವವರನ್ನು ನೋಡುತ್ತಾ ಸ್ತಬ್ಧವಾಗಿ ನಿಂತುಕೊಂಡುಬಿಟ್ಟಿವೆ. ಹಳೆ ಗಣಿ ಶ್ಯಾಫ್ಟ್‌ಗಳ ಸುತ್ತಲಿರುವ ಗೋಡೆಗಳು ಈಗಲೂ ಅದೇ ನಿಷ್ಠೆಯಿಂದ ಕಾವಲು ಕಾಯುತ್ತಿವೆ. ಗಣಿ ನಗರದ ಉದ್ದಗಲಕ್ಕೂ ನಿಂತಿರುವ ಬಂಗಲೆಗಳು, ತಮ್ಮ ಕಿಟಕಿ ಬಾಗಿಲುಗಳನ್ನು ಮುಚ್ಚಿಕೊಂಡು ಇಂದಿಗೂ ಬಿಳಿಯರ ಐಶ್ವರ್ಯ, ದೌಲತ್ತುಗಳನ್ನು ಮೆಲಕು ಹಾಕುತ್ತಲೇ ಇವೆ. ಸುತ್ತಲು ಬೆಳೆದು ನಿಂತ ರಟ್ಟಾಣಿ ಗಿಡಗಳು, ಬಂಗಲೆಗಳ ಒಳಕ್ಕೆ ಯಾರನ್ನೂ ಬಿಡದೆ ಕಾವಲು ನಿಂತಿವೆ. ಸ್ಥಳೀಯರು, ಆಗಾಗ ತಮ್ಮಲ್ಲಿಗೆ ಬರುವ ಅತಿಥಿಗಳಿಗೆ ಇದು ಜಾನ್ ಟೇಲರ್ ಇದ್ದ ಬಂಗಲೆ, ಇದು ಆತನ ಮಗನಿದ್ದ ಬಂಗಲೆ, ಇದು ಸ್ಮಿತ್ ಇದ್ದ ಬಂಗಲೆ, ಲ್ಯಾವಲ್ಲೇ ಇದ್ದ ಬಂಗಲೆ... ಇದು ವಿಕ್ಟರಿ ಚರ್ಚ್, ಇದು ಜಯಮಾತಾ ಚರ್ಚ್... ಇದು ಗಣಿ ಆಸ್ಪತ್ರೆ, ಇದು ಸುವರ್ಣಭವನ, ಇದು ಬ್ರಿಟಿಷರು ಕ್ರಿಕೆಟ್ ಆಡುತ್ತಿದ್ದ ಮೈದಾನ, ಗಾಲ್ಫ್ ಆಡುತ್ತಿದ್ದ ಮೈದಾನ... ಇದು ಉರಿಗಾಂ ಕ್ಲಬ್, ಇದು ಸ್ಕೇಟಿಂಗ್ ರಿಂಕ್ ಹೀಗೆ ನೂರಾರು ಬಂಗಲೆಗಳನ್ನು, ಕ್ಲಬ್‌ಗಳನ್ನು ಮತ್ತು ಮೈದಾನಗಳನ್ನು ತೋರಿಸುತ್ತಿರುತ್ತಾರೆ.

25 ವರ್ಷಗಳ ಹಿಂದೆ ಕೆಜಿಎಫ್ ಬಿಟ್ಟ ನಾನು ಈ ಮಹಾಪ್ರಬಂಧ ಬರೆಯಲು ಪ್ರಾರಂಭ ಮಾಡಿದಾಗಿನಿಂದಲೂ ಕ್ಯಾಮರಾ ಹಿಡಿದುಕೊಂಡು ಈ ಗಣಿ ಪ್ರದೇಶಗಳಿಗೆ ಹೋಗಿ ಸುತ್ತಾಡಿ ಬರುತ್ತೇನೆ. ಪ್ರತಿ ಸಲವೂ ಯಾವುದೋ ಒಂದು ಹೊಸ ವಿಷಯ

ಯಾರಿಂದಲೋ ಕೇಳಿ ಬರುತ್ತದೆ. ಈ ಗಣಿ ನಗರದ ವ್ಯಾಪ್ತಿಯಲ್ಲಿ ಈಗಲೂ ಅಲ್ಲಲ್ಲಿ ಕೆಲವು ಕಡೆ ಗುಂಪು ಮನೆಗಳು ಕಾಣಿಸುತ್ತವೆ. ಮನೆಗಳ ಹತ್ತಿರಕ್ಕೆ ಹೋದರೆ ಯಾರೋ ಸಹಾಯಕ್ಕೆ ಬಂದಿದ್ದಾರೆ ಎನ್ನುವ ಅವರ ಕಣ್ಣುಗಳು ನಮ್ಮ ಕಡೆಗೆ ಹೊರಳುತ್ತವೆ.

ಆ ಮನೆಗಳ ಎಲ್ಲಾ ಯುವಕ ಯುವತಿಯರು ಹೊತ್ತು ಮೂಡುವ ಮುಂಚೆಯೇ ಕೆಜಿಎಫ್‌ನಿಂದ ಬೆಂಗಳೂರಿಗೆ ರೈಲಲ್ಲಿ ಯಾವುದೋ ಕೆಲಸಕ್ಕೆ ಹೋಗಿದ್ದು, ಹಿಂದಕ್ಕೆ ಬರುವುದು ರಾತ್ರಿ 9 ಗಂಟೆಗೆ. ಅಳಿದುಳಿದ ವಯಸ್ಸಾದ ವೃದ್ಧರು, ಮಕ್ಕಳು ಮತ್ತು ಮಹಿಳೆಯರು ಕೆಲವರು ಆ ಮನೆಗಳ ಮುಂದೆ ಕುಳಿತಿರುತ್ತಾರೆ. ಮನೆಯ ಒಳಕ್ಕೆ ಇಣಿಕಿ ನೋಡಲು ಹೋದಾಗ, ಏನೋ ಹೇಳಿ ಒಳಕ್ಕೆ ಇಣುಕದಂತೆ ತಡೆಯುತ್ತಾರೆ. ಅವರ ಅಸಾಯಕತೆಯನ್ನು ಯಾರಿಗೂ ತೋರಿಸಿಕೊಳ್ಳುವುದು ಅವರಿಗೆ ಇಷ್ಟವಿಲ್ಲ. ಗಣಿಗಳಲ್ಲಿ ಕೆಲಸ ಮಾಡಿದ ಮಧ್ಯ ವಯಸ್ಸಿನವರು ಎದುರಿಗೆ ಸಿಕ್ಕಿ ಮಾತಿಗೆ ಸಿಲುಕಿಕೊಂಡರೆ ಯಾವುದ್ಯಾವುದೋ ಮಾತುಗಳನ್ನು ಆಡಿ, ಕೊನೆಗೆ ರಾಜ್ಯ ಮತ್ತು ಕೇಂದ್ರ ಸರಕಾರಗಳ ಮೇಲೆ ಹರಿಹಾಯ್ದು, 'ಭ್ರಷ್ಟ ಅಧಿಕಾರಿಗಳಿಂದಲೆ ಗಣಿಗಳನ್ನು ಮುಚ್ಚಲಾಯಿತು. ಅವರೆಲ್ಲ ಗಣಿಗಳಲ್ಲಿ ಕೆಲಸ ಮಾಡುವಾಗ ಹಣ ಮಾಡಿದರು, ಕೆಲಸ ಬಿಟ್ಟು ಹೋದಾಗಲೂ ಸರಕಾರ ಅವರಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಕಳುಸಿತು. ಆದರೆ ನಮಗೆ ಕಾರ್ಮಿಕರಿಗೆ ಯಾವ ಕಾಲದಲ್ಲೂ ಸರಿಯಾದ ಸಂಬಳ ಸಿಕ್ಕಲಿಲ್ಲ. ಗಣಿಗಳು ಮುಚ್ಚಿದಾಗಲೂ ಏನೂ ಕೊಡಲಿಲ್ಲ. ಇಂತಹ ಮೋಸ ಭೂಮಿಯ ಮೇಲೆ ಎಲ್ಲಾದರೂ ಉಂಟೆ?' ಎಂದು ಪ್ರಶ್ನಿಸುತ್ತಾರೆ. ಕೊನೆಗೆ ಎಲ್ಲರೂ 'ನಮ್ಮ ಗಣಿಗಳಲ್ಲಿ ಇನ್ನೂ ಸಾಕಷ್ಟು ಚಿನ್ನ ಇದೆ' ಎಂಬ ಒಂದು ಮಾತನ್ನು ತಪ್ಪದೆ ಹೇಳುತ್ತಾರೆ. ಒಂದು ಲೆಕ್ಕಾಚಾರದಂತೆ ಕೆಜಿಎಫ್ ಮತ್ತು ಸುತ್ತಮುತ್ತಲ ಗಣಿಗಳಲ್ಲಿ ಸರಾಸರಿ 1ಟನ್ನು ಶಿಲೆಗೆ 3 ರಿಂದ 5 ಗ್ರಾಂ ಚಿನ್ನ ಇರುವ ನಿಕ್ಷೇಪಗಳಲ್ಲಿ ಸುಮಾರು 150–200 ಟನ್ನು ಚಿನ್ನ ಇರುವುದಾಗಿ ನಂಬಲಾಗಿದೆ. ಇದ್ಯಾವುದನ್ನೂ ತೋರಿಸಿಕೊಡದೆ ಈ ಕಪ್ಪು ನೆಲ ಇತ್ತೀಚೆಗೆ ಹಚ್ಚನೆ ಹಸಿರಾಗಿ ನಳಿನಳಿಸುತ್ತಾ ಎಲ್ಲರನ್ನೂ ಧೃತಿಗೆಡಿಸುವಂತೆ ಕಾಣಿಸುತ್ತಿದೆ, ದೀಪ ನಂದಿಹೋಗುವ ಮುನ್ನ ಒಮ್ಮೆಲೆ ಹೆಚ್ಚು ಬೆಳಕು ಚೆಲ್ಲುವಂತೆ.

ಒಂದು ಅಪರೂಪದ ನೆನಪು :

ಕೆಜಿಎಫ್ ಮುಚ್ಚಿ 6 ವರ್ಷಗಳಾದ ಮೇಲೆ ನೊಂದ ಕಾರ್ಮಿಕರು ಮತ್ತು ಅಭಿಮಾನಿಗಳು ಸರಕಾರದ ಅಧಿಕಾರಿಗಳನ್ನು ಮತ್ತು ರಾಜಕಾರಣಿಗಳನ್ನು ಚುಚ್ಚಿ ಎಚ್ಚರಿಸುವ ಸಲುವಾಗಿ ಕೆಜಿಎಫ್ ಬಗ್ಗೆ ಹೀಗೊಂದು ಚಿರಸ್ಮರಣೆಯನ್ನು ಕರಪತ್ರಗಳ ಮೂಲಕ ಸಲ್ಲಿಸಿದ್ದರು.

6ನೇ ವರ್ಷದ ಪುಣ್ಯಸ್ಮರಣೆ

ಹೆಸರು : ಬಿಜಿಎಮ್ಎಲ್, ಕೆಜಿಎಫ್

ನಿಧನ : 28.02, 2001.

ನೀವು ಸ್ವರ್ಗಸ್ಥರಾಗಿ 6 ವರ್ಷಗಳಾಗಿವೆ. ಸದಾ ನಿಮ್ಮ ಸ್ಮರಣೆಯಲ್ಲಿ ದಿನಗಳನ್ನು ದೂಡುತ್ತಿದ್ದೇವೆ. ನಿಮ್ಮನ್ನೇ ನಂಬಿಕೊಂಡಿದ್ದ ನಾವು ಅನಾಥರಾಗಿ ಬೀದಿ ಪಾಲಾಗಿದ್ದೇವೆ. ಕೆಲಸ ಮತ್ತು ಸಂಬಳವಿಲ್ಲದೇ, ನಿವೃತ್ತಿ ಪರಿಹಾರ ಇಲ್ಲದೇ, ನಾವು ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳಿಲ್ಲದೇ ನರಕಯಾತನೆ ಅನುಭವಿಸುತ್ತಿದ್ದೇವೆ. ನಿಮ್ಮ ಸಾವಿಗೆ ಕಾರಣರಾದ ಕೇಂದ್ರ ಸರಕಾರವಾಗಲಿ ಅಥವಾ ರಾಜ್ಯ ಸರಕಾರವಾಗಲಿ ನಮ್ಮ ಮೇಲೆ ಕನಿಕರ ತೋರಿಸಲಿಲ್ಲ. ನಮ್ಮನ್ನು ಉದ್ಧಾರ ಮಾಡುತ್ತೇವೆಂದು ಹೇಳಿ ಕೆಲವು ರಾಜಕೀಯ ಪಕ್ಷಗಳು ಉಚಿತವಾಗಿ ಅಕ್ಕಿ, ಸೀರೆ ಹಂಚಿ, ಭಿಕ್ಷುಕರ ಮಟ್ಟಕ್ಕಿಳಿಸಿ ನಮ್ಮನ್ನು ಪರೋಕ್ಷವಾಗಿ ಅವಮಾನ ಮಾಡಿದ್ದಾರೆ. ನಮ್ಮ ಬಾಳು ಬಂಗಾರ ಮಾಡುವುದಾಗಿ ಹೇಳುತ್ತಿದ್ದ ಕಾರ್ಮಿಕ ಮುಖಂಡರು ನಾಪತ್ತೆಯಾಗಿದ್ದಾರೆ.

ಈಗಲೂ ನಿಮ್ಮ ಗೋರಿಯೊಳಗೆ ನುಗ್ಗಿ ಬಂಗಾರ ತರುತ್ತಿರುವ ಮುಟಾಗಳಿವೆ. ಈ ಮುಟಾಗಳ ಮುಖಂಡರಿಂದ ಕೆಲವರಿಗೆ ಪಾಲು ಸಹ ಹೋಗುತ್ತಿದೆ. ನೀವು ಬದುಕಿದ್ದಾಗ ಲಕ್ಷಾಂತರ ಜನರನ್ನು ಸಾಕಿ ಸಲಹಿ, ಅವರ ಬಾಳು ಬಂಗಾರ ಮಾಡಿದಿರಿ. ನಿನ್ನ ಪೋಷಿಸಿದವರಿಗೆ ಹೊನ್ನಿನ ಮಳೆ ಸುರಿಸಿ ವಿಶ್ವಮನ್ನಣೆ ಪಡೆದಿರಿ. ಈಗಲೂ ಲಲನೆಯರ ಕತ್ತು, ಕಿವಿ ಮತ್ತು ಎದೆಯ ಮೇಲೆ ಪ್ರಜ್ವಲಿಸುವ ಆಭರಣಗಳ ಪ್ರಖರ ಕಾಂತಿ ಕಿರಣಗಳ ಬೆಳಕಿನಲ್ಲಿ ನೀವೇ ಜ್ಞಾಪಕಕ್ಕೆ ಬರುತ್ತೀರಿ. ನಿಮ್ಮನ್ನು ನಾವಾಗಲಿ ಅಥವಾ ನಮ್ಮ ಪೀಳಿಗೆಯಾಗಲಿ ಮರೆಯಲು ಅದು ಹೇಗೆ ತಾನೇ ಸಾಧ್ಯ? ನಿಮ್ಮನ್ನು ಮರೆಯಲಾಗದೆ, ದುಃಖ ಭರಿಸಲಾಗದೆ 60ಕ್ಕೂ ಹೆಚ್ಚು ಕಾರ್ಮಿಕರು ಸಾವು ಕಂಡಿದ್ದಾರೆ, ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸದಾ ನಿಮ್ಮನ್ನೇ ಸ್ಮರಿಸುತ್ತಾ, ಅತ್ತ ಬದುಕಲೂ ಆಗದೇ ಇತ್ತ ಸಾಯಲೂ ಆಗದೇ, ಯಾತನಾಮಯ ದಿನಗಳನ್ನು ದೂಡುತ್ತಿರುವ ಮತ್ತು ಸದಾ ನಿಮ್ಮ ಸ್ಮರಣೆಯಲ್ಲೇ ಮುಳುಗಿರುವ 3800 ಗಣಿ ಕಾರ್ಮಿಕರು, ಅವರ ಕುಟುಂಬಗಳು, ಅಭಿಮಾನಿಗಳು ಹಾಗೂ ಇತರರು.

✦

1. ಎಂ. ವೆಂಕಟಸ್ವಾಮಿ ಮತ್ತು ಡಾ. ಪ್ರಭಾಕರ್ ಸಂಗೂರ್ ಮಠ, ಕನ್ನಡ ಪ್ರಭ, ಬೆಂಗಳೂರು, 13.11.2001.
2. ಎಂ. ವೆಂಕಟಸ್ವಾಮಿ, ಗಣಿಗಾರಿಕೆಯ ದುಷ್ಪರಿಣಾಮಗಳು, ವಿಜ್ಞಾನ ಸಂಗಾತಿ, ಹಂಪಿ ಕನ್ನಡ ವಿಶ್ವವಿದ್ಯಾಲಯ.
3. Indian express,13.8.2001.
4. P. Ramakrishna Reddy, Environmental geological studies in the KGF area, p-423-482 ;Kolar gold Mines Centenary celebrations, Seminar on Recent trends in Gold mines practice, vol-2

ಅಧ್ಯಾಯ–13

ಉಪಸಂಹಾರ

ಕೋಲಾರ ಜಿಲ್ಲೆಯ ಒಟ್ಟು ಭೂವಿಸ್ತೀರ್ಣ 8,236 ಚ.ಕಿ.ಮೀ. ಜಿಲ್ಲೆಯ ಭೂಭಾಗ ಸಮುದ್ರ ಮಟ್ಟದಿಂದ 300–1000ಮೀ. ನಡುವಿನ ಏರಿಳಿತಗಳಿಂದ ರೂಪುಗೊಂಡಿದ್ದು, ಉತ್ತರ ಭಾಗದಲ್ಲಿ ಹಲವಾರು ಪರ್ವತ ಸಾಲುಗಳು ಕಂಡುಬರುತ್ತವೆ. ಉಳಿದ ಜಿಲ್ಲೆಯ ಮೇಲ್ಮೈ ಲಕ್ಷಣಗಳು ಬಹಳವಾಗಿ ಅಂಕುಡೊಂಕಾಗಿವೆ. ಪಾಲಾರ್, ಪೆನ್ನಾರ್, ಪಿನಾಕಿನ ಮತ್ತು ಅವುಗಳ ಉಪನದಿಗಳು ಜಿಲ್ಲೆಯ ಅಲ್ಪಕಾಲಿಕ ನದಿಗಳು. ಜಿಲ್ಲೆಯಲ್ಲಿ ವರ್ಷಕ್ಕೆ ಸರಾಸರಿ 730 ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆಯಲ್ಲಿ ಸಾಮಾನ್ಯವಾಗಿ ಸರಾಸರಿ ಮಧ್ಯಮ ಉಷ್ಣತೆ 35 ಡಿಗ್ರಿ ಸೆಂಟಿಗ್ರೇಡ್ ಇದ್ದು, ಚಳಿಗಾಲದಲ್ಲಿ 16 ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ.

ಮಿಲಿಯಾಂತರ ವರ್ಷಗಳ ಭೂಸವೆತದಿಂದ ರೂಪುಗೊಂಡಿರುವ ಬೆಟ್ಟಗಳು ರೇಖೀಯವಾಗಿ ಉತ್ತರ–ದಕ್ಷಿಣ ದಿಕ್ಕಿನಲ್ಲಿ ಸಾಲು ಸಾಲಾಗಿ ಹಾಸಿಕೊಂಡಿರುವುದನ್ನು ಕಾಣಬಹುದು. ಜಿಲ್ಲೆಯ ಬಹುತೇಕ ಭಾಗಗಳು ಸಮತಟ್ಟಾದ ಬಯಲು ಪ್ರದೇಶಗಳಾಗಿವೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ.25ರಷ್ಟು ಭೂಪ್ರದೇಶ ವ್ಯವಸಾಯ ಯೋಗ್ಯವಾಗಿದೆ. ಜಿಲ್ಲೆಯ ಅರಣ್ಯ ಪ್ರದೇಶ ಶೇ.2 ಭಾಗಕ್ಕಿಂತ ಕಡಿಮೆ, ಉಳಿದ ಭಾಗ ಬೀಳುಭೂಮಿ ಮತ್ತು ಹುಲ್ಲುಗಾವಲು.

2001ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆ 25,36,000. ಇದೇ ವರ್ಷದ ಸಾಕ್ಷರತೆಯ ಪ್ರಮಾಣ ಗ್ರಾಮೀಣ ಪ್ರದೇಶಗಳಲ್ಲಿ ಶೇ.57 ಮತ್ತು ನಗರ ಪ್ರದೇಶಗಳಲ್ಲಿ

ಶೇ.80. 2004ರ ಅಂಕಿಅಂಶಗಳ ಪ್ರಕಾರ ಜಿಲ್ಲೆಯಲ್ಲಿ 2919 ನಗರ/ಪಟ್ಟಣ ಮತ್ತು ಹಳ್ಳಿಗಳು ವಿದ್ಯುತ್ ಪಡೆದುಕೊಂಡಿವೆ. 2005ರ ಅಂಕಿಅಂಶಗಳ ಪ್ರಕಾರ ರಾಷ್ಟ್ರೀಯ ಹೆದ್ದಾರಿ 129 ಕಿ.ಮೀ, ರಾಜ್ಯ ಹೆದ್ದಾರಿ 731 ಕಿ.ಮೀ. ಮತ್ತು ಪ್ರಮುಖ ಜಿಲ್ಲಾ ರಸ್ತೆಗಳ ಉದ್ದ 1658 ಕಿ.ಮೀ. ಜಿಲ್ಲೆಯಲ್ಲಿ ಪ್ರಸ್ತುತ 172 ಕಾರ್ಖಾನೆಗಳಿದ್ದು ಕೇವಲ 17,229 ಕಾರ್ಮಿಕರು ಮಾತ್ರ ಈ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಒಂದು ಕಾಲದಲ್ಲಿ ಕೆಜಿಎಫ್‌ನಲ್ಲಿಯೆ 35,400 ಕ್ಕಿಂತ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದರು.

ರಾಜ್ಯದ ಮೂಡಲ ಜಿಲ್ಲೆ ಕೋಲಾರ, ಕರ್ನಾಟಕ ರಾಜ್ಯ ಏಕೀಕರಣಗೊಂಡ ಮೇಲೆ, ಕಳೆದ 50 ವರ್ಷಗಳಲ್ಲಿ ಹಲವು ಸ್ಥಿತ್ಯಂತರಗಳನ್ನು ಕಂಡಿದೆ. ಕೆಜಿಎಫ್‌ನ ಚಿನ್ನದ ಗಣಿಗಳು ರಾಜ್ಯಕ್ಕೆ ಮತ್ತು ದೇಶಕ್ಕೆ ನೀಡಿದ ಕೊಡುಗೆ ಅಪಾರ. ಗಣಿಗಳು ಸೂರ್ಯ ಮುಳುಗದ ದೇಶ ಇಂಗ್ಲೆಂಡಿಗೆ, ಆ ದೇಶದ ರಾಜರು ಮತ್ತು ರಾಣಿಯರಿಗೆ ನೀಡಿದ ಕೊಡುಗೆ ಇನ್ನೂ ಅಪಾರ ಮತ್ತು ಅಮೂಲ್ಯ. ತಮಿಳುನಾಡು ಮತ್ತು ಆಂಧ್ರಪ್ರದೇಶಗಳಿಂದ ಆವೃತಗೊಂಡ ಕೋಲಾರ ಜಿಲ್ಲೆ ಚಿನ್ನ, ರೇಷ್ಮೆ ಮತ್ತು ಹೈನುಗಾರಿಕೆಗೆ ಹೆಸರುವಾಸಿ. ಚಿನ್ನದ ತಿಜೋರಿ ಈ ಕಪ್ಪು ನೆಲದ ಭೂಗರ್ಭದಲ್ಲಿ ಪೂರ್ಣವಾಗಿ ಬರಿದಾಗದೇ ಹೋದರೂ, ಚಿನ್ನದ ಗಣಿಗಳು ಪ್ರಸ್ತುತ ಪೂರ್ಣವಾಗಿ ಸ್ಥಗಿತಗೊಂಡಿವೆ. ರೇಷ್ಮೆ ಬೆಳೆ ದಿಕ್ಕು ತಪ್ಪಿದ್ದರೆ, ಹೈನುಗಾರಿಕೆ ಕೂಡ ಸಹಕಾರಿ ಕೈ ಜಾರಿ ಖಾಸಗಿಯವರ ಪಾಲಾಗುತ್ತ ರೈತರು ಕವಲು ದಾರಿಯಲ್ಲಿ ಸಿಲುಕಿಗೊಂಡಿದ್ದಾರೆ.

ಚಿಕ್ಕಬಳ್ಳಾಪುರ ತಾಲೂಕಿನ ಮುದ್ದೇನಹಳ್ಳಿಯಲ್ಲಿ ಹುಟ್ಟಿದ ಮೋಕ್ಷಗುಂಡಂ ವಿಶ್ವೇಶ್ವರಯ್ಯ ರಾಜ್ಯ ವಾಣಿಜ್ಯ ಉದ್ಯಮಕ್ಕೆ ಅಪಾರ ಕೊಡುಗೆ ನೀಡಿದರೂ, ಅವರಿಂದ ಕೋಲಾರ ಜಿಲ್ಲೆಗೆ ಏನೂ ಪ್ರಯೋಜನವಾಗಲಿಲ್ಲ, ಜಿಲ್ಲೆಯಲ್ಲಿ ವಾಣಿಜ್ಯ ಉದ್ಯಮವೂ ಬೆಳೆಯಲಿಲ್ಲ. ವಿಶ್ವೇಶ್ವರಯ್ಯನವರು ಕಾವೇರಿ ನದಿಗೆ ಅಡ್ಡವಾಗಿ ನಿರ್ಮಿಸಿದ ಶ್ರೀಕೃಷ್ಣರಾಜೇಂದ್ರ ಆಣೆಕಟ್ಟೆಯಿಂದ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಗೆ ಅಪಾರ ಲಾಭವಾಯಿತು. ಕೋಲಾರ ಜಿಲ್ಲೆಯಲ್ಲಿ ಕೃಷಿಗೆ ಮತ್ತು ಕುಡಿಯಲೂ ಸಹ ಇಂದಿಗೂ ನೀರಿನ ವ್ಯವಸ್ಥೆ ಇಲ್ಲ. ಜಿಲ್ಲೆಯಲ್ಲಿ 5 ನದಿಗಳು ಹುಟ್ಟಿದರೂ ಒಂದೂ ಜೀವ ನದಿಯೂ ಇಲ್ಲ. ವಿಪರ್ಯಾಸವೆಂದರೆ ಚಿತ್ರಾವತಿ ನದಿ ನಂದಿ ಬೆಟ್ಟದಲ್ಲಿ ಹುಟ್ಟಿ ಅಂತರ್ಗತವಾಗಿ ಹರಿದು ರಾಜ್ಯ ಗಡಿ ದಾಟಿದ ಮೇಲೆ ದೊಡ್ಡ ನದಿಯಾಗಿ ಆಂಧ್ರ ಪ್ರದೇಶದಲ್ಲಿ ಭೋರ್ಗರೆದು ಹರಿಯುತ್ತದೆ.

ಸ್ವಾತಂತ್ರ್ಯಾನಂತರದ ಮೈಸೂರು ರಾಜ್ಯಕ್ಕೆ ಪ್ರಥಮ ಮುಖ್ಯಮಂತ್ರಿಯನ್ನು ನೀಡಿದ ಹೆಗ್ಗಳಿಕೆ ಕೋಲಾರ ಜಿಲ್ಲೆಗೆ. ಆದರೂ ಈ ಜಿಲ್ಲೆಯಲ್ಲಿನ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದ ಯಾವುದೇ ಅಭಿವೃದ್ಧಿ ಯೋಜನೆಗಳು ಜಿಲ್ಲೆಗೆ ದಕ್ಕಲಿಲ್ಲ. ದಲಿತರು, ರೈತರು ಮತ್ತು ಭಾಷಾ ಹೋರಾಟಗಳಿಂದ ಗಟ್ಟಿಗೊಂಡ ನೆಲ ಕೋಲಾರ.

80ರ ದಶಕದಲ್ಲಿ ದಲಿತ ಚಳುವಳಿ ಜಿಲ್ಲೆಯಲ್ಲಿ ಬಲವಾಗಿ ಬೆಳೆದು ಇಡೀ ರಾಜ್ಯಕ್ಕೆ ಹಬ್ಬುವಂತಾಯಿತು. ರಾಜ್ಯದಲ್ಲಿ ಗಟ್ಟಿಯಾಗಿ ಬೇರೂರಿದ ದಲಿತರ ಶಕ್ತಿ, ಆ ವರ್ಗಕ್ಕೆ ಒಂದು ಅಂತಸ್ತನ್ನು ಕಲ್ಪಿಸುವಲ್ಲಿ ಯಶಸ್ಸು ಸಾಧಿಸಿತು.

ಗೋಕಾಕ್ ವರದಿ ಜಾರಿಗೆ ಆಗ್ರಹಿಸಿ ಸತ್ಯಾಗ್ರಹಗಳು ನಡೆದವಲ್ಲದೆ ಡಾ. ರಾಜ್‌ಕುಮಾರ್ ನೇತೃತ್ವದ ಜಾಗೃತಿ ಜಾಥಾ ಜಿಲ್ಲೆಯ ಬಂಗಾರಪೇಟೆಯಿಂದಲೇ ಪ್ರಾರಂಭಗೊಂಡಿತ್ತು. ಹೆಚ್ಚು ಜನರ ಮಾತೃಭಾಷೆ ತೆಲುಗಾದರೂ ಕನ್ನಡ ಇವರಿಗೆ ಆತ್ಮೀಯ ಭಾಷೆ. 60–70ರ ದಶಕಗಳಲ್ಲಿ ಜಿಲ್ಲೆಯಲ್ಲಿ ಹೆಚ್ಚಾಗಿ ತೆಲುಗು, ಕೆಜಿಎಫ್‌ನಲ್ಲಿ ತಮಿಳು ಚಿತ್ರಗಳೇ ಪ್ರರ್ದಶಿತವಾಗುತ್ತಿದ್ದವು. ಕನ್ನಡಪರ ಸಂಘಟನೆಗಳು ಮತ್ತು ವಿದ್ಯಾರ್ಥಿಗಳ ಹೋರಾಟದ ಫಲವಾಗಿ ಬಲವಂತವಾಗಿಯಾದರೂ ಕನ್ನಡ ಚಿತ್ರಗಳು ನಿಧಾನವಾಗಿ ಪ್ರದರ್ಶನಗೊಂಡವು.

ಖಾಯಂ ಬರದಿಂದ ಬಳಲುತ್ತಿರುವ ಕೋಲಾರ ಜಿಲ್ಲೆಯ ರೈತರು ಏಕೀಕರಣದ ಸಮಯದಲ್ಲಿ ಅವಲಂಬಿಸಿದ್ದ ಕೃಷಿ ತೊರೆದು ಇಂದು ತೋಟಗಾರಿಕೆ, ಪುಷ್ಪೋದ್ಯಮ, ಹೈನುಗಾರಿಕೆಗೆ ಶರಣಾಗಿದ್ದಾರೆ. ರಾಜ್ಯದಿಂದ ರಫ್ತಾಗುವ ತರಕಾರಿಯಲ್ಲಿ ಶೇ.40 ಕೋಲಾರ ಜಿಲ್ಲೆಯಿಂದಲೆ ಬರುತ್ತದೆ. ಪ್ರಸ್ತುತ ಇಡೀ ದೇಶದಲ್ಲೇ ಅತಿದೊಡ್ಡ ಟೊಮೆಟೋ ಮಾರುಕಟ್ಟೆ ಕೋಲಾರಿನಲ್ಲಿದೆ. ಇಲ್ಲಿಂದ ಉತ್ತರ ರಾಜ್ಯಗಳಲ್ಲದೆ ಪಾಕಿಸ್ತಾನ ಮತ್ತು ಇತರ ದೇಶಗಳಿಗೂ ಟೊಮೆಟೋ ರಫ್ತಾಗುತ್ತದೆ. ಇಷ್ಟಕ್ಕೂ ಈ ಪ್ರದೇಶ ಯಾವಾಗಲೂ ಮಳೆ ಇಲ್ಲದೆ ತತ್ತರಿಸುತ್ತಿರುತ್ತದೆ. ಒಂದು ವೇಳೆ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದರೆ, ಜೀವ ನದಿಗಳು ಹರಿಯುವ ಜಿಲ್ಲೆಯಾಗಿದ್ದರೆ ಅಥವಾ ಒಂದೋ ಎರಡೋ ಅಣೆಕಟ್ಟುಗಳಿದ್ದಿದ್ದರೆ ಈ ಜಿಲ್ಲೆ ಹೇಗಿರುತ್ತಿತ್ತೋ ಏನೋ? ಇದನ್ನೆಲ್ಲ ಸರಿತೂಗಿಸಲೆಂಬಂತೆ ಈ ಕಪ್ಪು ನೆಲ ಅಪಾರ ಚಿನ್ನವನ್ನು ತನ್ನ ಒಡಲಲ್ಲಿ ಹುದುಗಿಸಿ ಇಟ್ಟುಕೊಂಡಿತ್ತು.

ರೈತ ಕಷ್ಟ ಪಟ್ಟು ಬೆಳೆಯುವ ತರಕಾರಿಗೆ ಒಳ್ಳೆಯ ಬೆಲೆ ದೊರಕದೇ ಬಹಳಷ್ಟು ಸಲ ತೋಟದಲ್ಲಿಯೇ ಬಿಟ್ಟುಬರುವುದು, ರಸ್ತೆಗಳಿಗೆ ತಂದು ಸುರಿದು ಪ್ರತಿಭಟಿಸುವುದು ಸರ್ವೆಸಾಮಾನ್ಯವಾಗಿಬಿಟ್ಟಿದೆ. ಆದರೆ ಇದೆಲ್ಲವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದರ ಬಗ್ಗೆ ಯಾರೂ ಯೋಚನೆ ಮಾಡುತ್ತಿಲ್ಲ. ಈ ವಲಯದಲ್ಲಿ ಗುಜರಾತಿನಂತೆ ಹಾಲಿನ ಡೈರಿ, ಚಾಕೋಲೆಟ್ ಕಾರ್ಖಾನೆ, ಟೊಮೆಟೋ ಕೆಚ್‌ಪ್ ಕಾರ್ಖಾನೆ, ಆಲೂಗಡ್ಡೆ ಚಿಪ್ಸ್ ಕಾರ್ಖಾನೆ, ತರಕಾರಿ ಮತ್ತು ಹೂವುಗಳನ್ನು ಸಂಗ್ರಹಿಸುವ ತಂಪು ಗೋದಾಮುಗಳನ್ನು ನಿರ್ಮಿಸಬೇಕಿದೆ.

❖❖❖

ಜಿಲ್ಲೆಯ ಕೀರ್ತಿ ಕೆಲವು ವ್ಯಕ್ತಿಗಳು ಮತ್ತು ಕೆಲವೊಂದು ವಿಷಯಗಳಿಂದ

ಪ್ರಪಂಚದಾದ್ಯಂತ ಹರಡಿದೆ. ಕೈವಾರ ನಾರೇಯಣ ತಾತ ತೆಲುಗಿನಲ್ಲಿ ಬರೆದಿರುವ ಕಾಲಜ್ಞಾನ ಅಪರೂಪ ದಾಖಲೆಯಾಗಿದೆ. ಈ ಕಾಲಜ್ಞಾನವನ್ನು ಕನ್ನಡ ಮತ್ತಿತರ ಭಾಷೆಗಳಲ್ಲಿ ಭಾಷಾಂತರಿಸಿ ನಾರೇಂಯಣ ತಾತನವರ ಕಾಲಜ್ಞಾನವನ್ನು ಪ್ರಚಾರಮಾಡಲಾಗುತ್ತಿದೆ. ಅಮೆರಿಕದ ಜನ ಬಾಹ್ಯಾಕಾಶದ ಒಂದು ನಕ್ಷತ್ರ ಪುಂಜಕ್ಕೆ ಬಿ.ಕೆ.ಎಸ್.ಅಯ್ಯಂಗಾರ್ ನಕ್ಷತ್ರ ಪುಂಜ' ಎಂದು ನಾಮಕರಣ ಮಾಡಿದ್ದಾರೆ. ಬಿ.ಕೆ.ಸುಂದರರಾಜ್ ಯೋಗ ಶಿಕ್ಷಣದಲ್ಲಿ ಜಗದ್ವಿಖ್ಯಾತರು. ಶಿಕ್ಷಣ ಕ್ಷೇತ್ರದಲ್ಲಿ ಹಿರಿಯ ಗಾಂಧೀವಾದಿ ಎಚ್.ನರಸಿಂಹಯ್ಯ ಹಾಗೂ ಎಂ.ವಿ. ಕೃಷ್ಣಪ್ಪ ಮತ್ತು ಆರ್.ಎಲ್. ಜಾಲಪ್ಪ ಹೆಸರುಗಳು ಮುಖ್ಯವಾದವು. ಕನ್ನಡಕ್ಕೆ ಒಬ್ಬರೆ ಆಸ್ತಿ ಎನ್ನುವ ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ದೇವುಡು, ಡಿ.ವಿ. ಗುಂಡಪ್ಪ ಮತ್ತು ಜ.ಚ.ನಿ ಇದೇ ಜಿಲ್ಲೆಯವರು. ಕೆಜಿಎಫ್‌ನ ಬಿಇಎಮ್‌ಎಲ್ ಕಾರ್ಖಾನೆ, ದೇಶದ ರಕ್ಷಣಾ ಇಲಾಖೆ ಮತ್ತು ರೈಲ್ವೆ ವಿಭಾಗದಿಂದ ಜೀವ ಉಳಿಸಿಕೊಂಡಿದೆ. ಅದನ್ನು ಮೂರು ತುಂಡುಗಳಾಗಿಸಿ ಒಂದನ್ನು ಬೆಂಗಳೂರಿಗೆ ಮತ್ತೊಂದನ್ನು ಮೈಸೂರಿಗೆ ನೀಡಲಾಯಿತು. ಎಂ.ವಿ. ಕೃಷ್ಣಪ್ಪ ಜಿಲ್ಲೆಯಲ್ಲಿ ಹುಟ್ಟು ಹಾಕಿದ ಕ್ಷೀರ ಕ್ರಾಂತಿ, ಜಿಲ್ಲೆಯ ಜನತೆಗೆ ಸ್ವಲ್ಪ ನೆಮ್ಮದಿ ತಂದಿದೆ. ಜಿಲ್ಲೆ ಹಾಲು ಸಂಗ್ರಹಣೆಯಲ್ಲಿ ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದ್ದು ದೇಶದಲ್ಲಿ ಮೂರನೆ ಸ್ಥಾನ ಪಡೆದಿದೆ.

ಜಿಲ್ಲೆಯಲ್ಲಿ ದಲಿತರು ಮತ್ತು ಅಲ್ಪಸಂಖ್ಯಾತರ ಸಂಖ್ಯೆಯೇ ಹೆಚ್ಚು. ಜಿಲ್ಲೆಯ ರಾಜಕಾರಣದಲ್ಲಿ ಎಂ.ವಿ. ಕೃಷ್ಣಪ್ಪ, ಕೆ.ಸಿ.ರೆಡ್ಡಿ ಮತ್ತು ಟ.ಚನ್ನಯ್ಯ ಪ್ರಮುಖರು. ಜಿಲ್ಲೆಯ ಹೆಚ್ಚು ಹಳ್ಳಿಗಳು ವಿದ್ಯುತ್ ಪಡೆಯಲು ಕಾರಣರಾದವರು ಚನ್ನಯ್ಯನವರೆ. ಜಿಲ್ಲೆಯ ಮುಖ್ಯ ಜನಪರ ಕಲೆಗಳೆಂದರೆ ತಮಟೆ, ಕೋಲಾಟ, ಜಡೆಕೋಲಾಟ, ಗಾರುಡಿಗೊಂಬೆ, ಕೀಲುಕುದುರೆ, ಸಿಡೀರಣ್ಣನೃತ್ಯ, ವೇಣುಕುಣಿತ, ಕರಗ, ಸೋಬಾನೆ, ಕೇಳಿಕೆ, ಹರಿಕತೆ, ಬೀಸುವ ಪದಗಳು, ಕಟ್ಟುವ ಪದಗಳು, ರಾಗಿಬೀಸು, ತತ್ವಪದಗಳು ಇತ್ಯಾದಿ.

ಉಳಿದ ದಾರಿ :

ಗಣಿಗಳು ಮುಚ್ಚಿದ ನಂತರ ನಂದಿದುರ್ಗ, ಚಿಗುರುಗುಂಟ–ಮಲ್ಲಪ್ಪಕೊಂಡ, ಬಿಸಾನತ್ತಂ, ಯಾಪಮಾನ ಮತ್ತು ಮೈಸೂರು ಗಣಿಗಳಲ್ಲಿ ಉಳಿದಿರುವ ಸುಮಾರು 110.53 ಮಿಲಿಯನ್ ಟನ್ನು ಅದಿರಿನಲ್ಲಿ ಸರಾಸರಿ 4 ಗ್ರಾಂ ಚಿನ್ನ ದೊರಕಬಹುದು ಎಂದು ಅಂದಾಜು ಮಾಡಲಾಗಿದೆ. ಕೆಜಿಎಫ್‌ನಲ್ಲಿ 1 ಟನ್ನು ಶಿಲೆಗೆ ಸರಾಸರಿ 3–5 ಗ್ರಾಂ ಚಿನ್ನ ದೊರಕುವ ಅದಿರು ಹಾಗೆ ಉಳಿದುಕೊಂಡಿದೆ. ಕೆಲವು ಭಾಗಗಳಲ್ಲಿ ಇದಕ್ಕಿಂತ ಹೆಚ್ಚು ಚಿನ್ನವಿರುವ ನಿಕ್ಷೇಪಗಳು ಉಂಟು. ಒಂದು ಅಂದಾಜಿನ ಪ್ರಕಾರ ಟನ್ನಿಗೆ ಸರಾಸರಿ ಕನಿಷ್ಠ 3 ಗ್ರಾಂ ಚಿನ್ನ ದೊರಕುವ 7.6 ಮಿಲಿಯನ್ ಟನ್ನಿನಷ್ಟು

ಅದಿರು ಚಾಂಪಿಯನ್ ರೀಫ್ ಒಂದರಲ್ಲಿಯೆ ಇರುವುದಾಗಿ ತಿಳಿದುಬರುತ್ತದೆ. ಚಾಂಪಿಯನ್ ರೀಫ್ ಜೊತೆಗೆ ಹಾಸಿಕೊಂಡಿರುವ ಇನ್ನಿತರ ಸಣ್ಣ ಪುಟ್ಟ ರೀಫ್ಸ್ ಮತ್ತು ಇತರ 25 ರೀಫ್ಸ್‌ಗಳಲ್ಲಿರುವ ಸಣ್ಣ ಪ್ರಮಾಣದ ಅದಿರನ್ನು ಕೊನೆಯವರೆಗೂ ಕೆಜಿಎಫ್ ಆಡಳಿತ ಸರಿಯಾಗಿ ಲೆಕ್ಕ ಹಾಕಲೇ ಇಲ್ಲ.

ಕೆಜಿಎಫ್‌ನಿಂದ 25 ಕಿ.ಮೀ. ದೂರದಲ್ಲಿರುವ ಆಂಧ್ರದ ಚಿಗುರುಕುಂಟ ಗಣಿಗಳಲ್ಲಿ ಸಾಕಷ್ಟು ಚಿನ್ನವಿದ್ದು ಈ ಗಣಿಗಳನ್ನು ಯಾವಾಗಲಾದರೂ ಪ್ರಾರಂಭಿಸಬಹುದು. ಈ ಗಣಿಗಳು ಪ್ರಾರಂಭವಾದರೆ 350–500 ಕಾರ್ಮಿಕರಿಗೆ ಕೆಲಸವನ್ನು ನೀಡಬಹುದೆಂದು ಹೇಳಲಾಗುತ್ತದೆ. ಈ ಗಣಿಗಳಲ್ಲಿ 1 ಟನ್ನು ಶಿಲೆಗೆ ಸರಾಸರಿ ಹೆಚ್ಚೆಂದರೆ 3–5 ಗ್ರಾಂ. ಚಿನ್ನವಿರುವ ಅದಿರು ಬೇಕಾದಷ್ಟಿದೆ. ಚೀನಾ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ 2 ಗ್ರಾಂ ಚಿನ್ನ ದೊರಕಿದರೂ ಅದನ್ನು ಲಾಭದಾಯಕ ಗಣಿ ಉದ್ದಿಮೆಯಾಗಿ ನಡೆಸುತ್ತಿದ್ದಾರೆ. ಆಳದ ಗಣಿಗಳನ್ನು (ಕೆಜಿಎಫ್‌ನ ಮುಖ್ಯ ಗಣಿಗಳು) ಹೊರತುಪಡಿಸಿ ಚಿಗುರುಗುಂಟ, ಯಾಪಮಾನ, ರಾಮಗಿರಿ ಮತ್ತು ಬಿಸಾನತ್ತಂ ಗಣಿಗಳನ್ನು ಲಾಭದಾಯಕವಾಗಿ ನಡೆಸಬಹುದು. ಇದಕ್ಕೆ ಒಳ್ಳೆ ಆಡಳಿತದೊಂದಿಗೆ ನವೀನ ತಂತ್ರಜ್ಞಾನವನ್ನು ಅಳವಡಿಸಬೇಕಾಗಿದೆ.

❖❖❖

12 ದಶಕಗಳಲ್ಲಿ 50 ಮಿಲಿಯನ್ ಟನ್ನುಗಳಷ್ಟು ಶಿಲೆಗಳನ್ನು ಪುಡಿಮಾಡಿ ಎಸೆದಿರುವ ಸಯೆನ್ಯೆಡ್ ಮಣ್ಣಿನ ರಾಶಿಗಳು ಕೆಜಿಎಫ್ ಪ್ರದೇಶಗಳ ಸುತ್ತಲು ಬೆಟ್ಟಗಳಂತೆ ಹರಡಿಕೊಂಡಿವೆ. ಮೊದ ಮೊದಲಿಗೆ ಚಿನ್ನವನ್ನು ಸಂಸ್ಕರಿಸುತ್ತಿದ್ದಾಗ ತಂತ್ರಜ್ಞಾನದ ಕೊರತೆಯಿಂದ ಶಿಲೆಗಳಲ್ಲಿದ್ದ ಚಿನ್ನವನ್ನು ನೂರಕ್ಕೆ ನೂರು ಪಟ್ಟು ಬೇರ್ಪಡಿಸಲು ಸಾಧ್ಯವಾಗದ ಕಾರಣ ಶೇಕಡ 10 ರಷ್ಟು ಚಿನ್ನ ಮಣ್ಣಿನಲ್ಲಿ ಉಳಿದುಕೊಳ್ಳುತ್ತಿತ್ತು. ಸುಮಾರು 50 ಮಿಲಿಯನ್ ಟನ್ನು ಸಯೆನ್ಯೆಡ್ ಗುಡ್ಡಗಳಲ್ಲಿ 1 ಟನ್ನಿಗೆ ಸರಾಸರಿ 0.72 ಚಿನ್ನ ದೊರಕುತ್ತದೆ. ಆದರೆ ಪ್ರಸ್ತುತ ನಮ್ಮಲ್ಲಿರುವ ತಂತ್ರಜ್ಞಾನದಿಂದ ಇದು ಲಾಭದಾಯಕವಲ್ಲ. ಜೊತೆಗೆ ಇದರಿಂದ ತಲೆದೋರುವ ಸಮಸ್ಯೆ ಎಂದರೆ ಈಗಾಗಲೆ ಪರಿಸರ ಮಾಲಿನ್ಯದಿಂದ ನರಳುತ್ತಿರುವ ಕೆಜಿಎಫ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಇನ್ನಷ್ಟು ಪರಿಸರ ಮಾಲಿನ್ಯಕ್ಕೆ ಒಳಗಾಗುತ್ತವೆ. ಕೆಜಿಎಫ್ ಒಂದು ಕಾಲದಲ್ಲಿ ಹೆಚ್ಚು ಲಾಭದಾಯಕವಾದ ಕಂಪನಿಯಾಗಿದ್ದು ದೇಶದಲ್ಲಿಯೇ ಅತ್ಯಂತ ವ್ಯವಸ್ಥಿತ ಕಾರ್ಮಿಕ ಸಂಘಟನೆಯನ್ನು ಹೊಂದಿತ್ತು. ಸರಕಾರದ ಮಲತಾಯಿ ದೋರಣೆ, ಗಡಿನಾಡು ಉದಾಸೀನತೆ, ಎಲ್ಲರೂ ದಲಿತರು ಮತ್ತು ತಮಿಳರು ಎನ್ನುವ ಸಾಮಾಜಿಕ ಅಸಾಮಾನತೆ ಮತ್ತು ಸ್ಥಳೀಯ ರಾಜಕಾರಣದಿಂದ ಕೆಜಿಎಫ್ ತನ್ನ ವಯಸ್ಸಿಗೆ ಮುಂಚೆಯೇ ದುಃಸ್ಥಿತಿಗೆ ತಲುಪಬೇಕಾಯಿತು. ಸ್ವಾತಂತ್ರ್ಯ ನಂತರ ಇಲ್ಲಿ ಆಯ್ಕೆಯಾದವರೆಲ್ಲ ರಿಪಬ್ಲಿಕನ್ ಪಕ್ಷ,

ಕಮ್ಯೂನಿಸ್ಟ್ ಪಕ್ಷ, ಎಐಎಡಿಎಮ್‌ಕೆ ಇತ್ಯಾದಿ ಪಕ್ಷಗಳಾಗಿದ್ದು ಇವರಿಂದ ಕೆಜಿಎಫ್‌ಗೆ ಯಾವುದೇ ಸಹಾಯ ಆಗಲಿಲ್ಲ.

13,230 ಅಡಿಗಳ ಆಳದ ಗಣಿಗಳಲ್ಲಿ ಪಾತಾಳ ಆಣೆಕಟ್ಟುಗಳಲ್ಲಿ ಹೇರಳ ನೀರು ಶೇಖರಣೆಯಾಗಿದೆ. ಚಿನ್ನದ ಗಣಿಗಳು ಸ್ಥಗಿತಗೊಂಡ ಮೇಲೆ ಗಣಿಗಳ ತುಂಬಾ ನೀರು ತುಂಬಿಕೊಂಡಿತು. ಸುರಂಗಗಳಲ್ಲಿ ಒಟ್ಟು 17.241 ಮಿಲಿಯನ್ ಘನ ಚ.ಮೀ. ನೀರು ತುಂಬಿದೆ ಎನ್ನಲಾಗಿದೆ. ಕುಡಿಯಲು ಯೋಗ್ಯವಲ್ಲದ ಈ ನೀರನ್ನು ಕೃಷಿಗಂತೂ ಯಾವುದೇ ತೊಂದರೆ ಇಲ್ಲದೆ ಉಪಯೋಗಿಸಬಹುದಾಗಿದೆ. ಈ ನಿಟ್ಟಿನಲ್ಲಿ ಕೆಲವು ಪ್ರಯತ್ನಗಳು ನಡೆದರೂ ಇದುವರೆಗೂ ಯಾವ ರೀತಿಯ ಯೋಜನೆಗಳೂ ಕಾರ್ಯರೂಪಕ್ಕೆ ಬಂದಿಲ್ಲ. ಜಿಲ್ಲಾಡಳಿತ ಮತ್ತು ಸ್ಥಳೀಯರು ಇದರ ಬಗ್ಗೆ ರಾಜ್ಯ ಸರಕಾರದ ಮೇಲೆ ಒತ್ತಡವನ್ನು ಹೇರಬೇಕಾಗಿದೆ.

ಸಮಾಜ ಕವಲು ದಾರಿಯಲ್ಲಿ :

121 ವರ್ಷಗಳ ಹಿಂದೆ ಇಂದಿನ ಗಣಿ ಕಾಲೋನಿಗಳು ಮತ್ತು ಯಾವುದೇ ಬಡಾವಣೆಗಳು ಇರಲಿಲ್ಲ. ಇವೆಲ್ಲ ಚಿನ್ನದ ಗಣಿಗಳು ಪ್ರಾರಂಭವಾದ ಮೇಲೆಯೆ ಹುಟ್ಟಿಕೊಂಡವು. ಈಸ್ಟ್ ಇಂಡಿಯಾ ಕಂಪನಿ 1600ರಲ್ಲಿ ಭಾರತ ಪ್ರವೇಶಿಸಿದ 280 ವರ್ಷಗಳ ನಂತರ 1880ರಲ್ಲಿ ಆಧುನಿಕ ಚಿನ್ನದ ಗಣಿಗಳನ್ನು ಈ ಪ್ರದೇಶದಲ್ಲಿ ಸ್ಥಾಪಿಸಿತ್ತು. ಗಣಿ ಆಡಳಿತ ಮತ್ತು ಉಸ್ತುವಾರಿಯನ್ನು ನೋಡಿಕೊಳ್ಳಲು ಜಾನ್ ಟೇಲರ್ ಅವರು ಬ್ರಿಟನ್, ಇಟಲಿ, ಜರ್ಮನಿ ಮತ್ತು ಇನ್ನಿತರ ಐರೋಪ್ಯ ದೇಶಗಳಿಂದ ಆಡಳಿತಗಾರರು, ಇಂಜಿನಿಯರರು ಮತ್ತು ತಂತ್ರಜ್ಞರನ್ನು ಕರೆತಂದರು. ಇವರೆಲ್ಲ ಮೊದಲೆರಡು ದಶಕಗಳಲ್ಲಿ ಸ್ಥಳೀಯರ ಸಹಾಯದಿಂದ 500 ಬಂಗಲೆಗಳನ್ನು ನಿರ್ಮಿಸಿ ವಾಸಿಸತೊಡಗಿದರು. ಇದರ ಜೊತೆಜೊತೆಗೆ ಸುಮಾರು 500 ಬಹುಮಹಡಿ (ಮೂರು ಅಂತಸ್ತು) ಕಟ್ಟಡಗಳನ್ನು ನಿರ್ಮಿಸಿ ಇಟಲಿ ದೇಶದವರು, ಓವರ್‌ಸೀರ್ಸ್ ಮತ್ತು ಸೂಪರ್‌ವೈಸರ್ಸ್ ತರಗತಿಯ ಆಂಗ್ಲೋ-ಇಂಡಿಯನ್ನರಿಗೆ ನೀಡಲಾಯಿತು.

ಸ್ಥಳೀಯರು ಕಪ್ಪು ಸುರಂಗಗಳಲ್ಲಿ ಇಳಿಯಲು ನಿರಾಕರಿಸಿದಾಗ, ಹತ್ತಿರದ ತಮಿಳುನಾಡಿನಿಂದ ವಲಸೆ ಬಂದ ದಲಿತರು ಮತ್ತು ಹಿಂದುಳಿದ ಜನಾಂಗಗಳು ಕಪ್ಪು ಸುರಂಗಗಳಲ್ಲಿ ಕೆಲಸ ಮಾಡಲು ತೊಡಗಿಕೊಂಡರು. ಮೊದಲಿಗೆ ಇವರು ಆಯಾ ಗಣಿಗಳ ಹತ್ತಿರದಲ್ಲೇ ತಾವೇ ಗುಡಿಸಿಲುಗಳನ್ನು ಹಾಕಿಕೊಂಡರು. ಅನಂತರ ಕಾರ್ಮಿಕರ ಅಹವಾಲು ಮತ್ತು ಪ್ರತಿಭಟನೆಗಳಿಂದ ಸಣ್ಣ ಸಣ್ಣ ದಟ್ಟ ಗುಡಿಸಿಲುಗಳನ್ನು ಗಣಿ ಆಡಳಿತ ನಿರ್ಮಿಸಿತು. ಅವುಗಳ ಮೇಲೆ ತಗಡು ರೇಖು ಮತ್ತು ಹೆಂಚುಗಳನ್ನು ಹಾಕಿ ಮುಚ್ಚಲಾಯಿತು. ಇವು ವಿದ್ಯುತ್ ಕಂಡಿದ್ದು ಗಣಿಗಳು ಪ್ರಾರಂಭವಾದ 50 ವರ್ಷಗಳ ನಂತರ.

ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶವೆಂದರೆ ಈ ಪ್ರದೇಶದಲ್ಲಿ ಒಂದು ಕಡೆ ಪಶ್ಚಿಮ ದೇಶಗಳಿಂದ ಬಂದ ವಸಾಹತು ಆಡಳಿತ, ಇನ್ನೊಂದು ಕಡೆ ಪಕ್ಕದ ರಾಜ್ಯಗಳಿಂದ ವಲಸೆ ಬಂದ ದಲಿತ ಮತ್ತು ಹಿಂದುಳಿದ ಜನಾಂಗಗಳು ಎರಡೂ ಬೇರೆ ಬೇರೆ ವಲಯಗಳಲ್ಲಿ ನೆಲೆ ನಿಂತು ಬೆಳೆಯುತ್ತಾ ಹೋಗಿದ್ದು. ಆಡಳಿತ ನಡೆಸುವವರು ಐರೋಪ್ಯ ದೇಶಗಳವರಾದರೆ, ಶ್ರಮಜೀವಿಗಳ ಕಾರ್ಮಿಕ ವರ್ಗ ಈ ಮಹಾನ್ ದೇಶದ ಹಿಂದೂ ಧರ್ಮ ಕಡೆಗಣಿಸಿ ತಮ್ಮ ನೆಲದಲ್ಲಿಯೇ ಇದ್ದೂ ಇಲ್ಲದಂತಾಗಿದ್ದ ದಲಿತ, ಹಿಂದುಳಿದ ಜನಾಂಗಗಳು.

ಐರೋಪ್ಯ ಜನರು ಒಂದಲ್ಲ ಒಂದು ದಿನ ಈ ನೆಲವನ್ನು ಬಿಟ್ಟುಹೋಗಲೇಬೇಕು ಎನ್ನುವ ಎಚ್ಚರವಿದ್ದು, ಸಿಕ್ಕಿದಷ್ಟು ಸಂಪತ್ತನ್ನು ದೋಚುತ್ತ, ಕ್ರೂರ ಹಿಡಿತದಿಂದ ಕಾರ್ಮಿಕ ಜನಾಂಗಗಳನ್ನು ತಮ್ಮ ಕಠಿಣ ಕಾನೂನು ಮತ್ತು ದೌವಲತ್ತಿನಿಂದ ಶೋಷಣೆಗೆ ಒಳಪಡಿಸಿದ್ದರು. ಇದು ಭಾರತ ಸ್ವಾತಂತ್ರ್ಯ ಪಡೆಯುವವರೆಗೂ ನಿರಂತರವಾಗಿ ಮುಂದುವರೆದಿತ್ತು. ಮಹಾತ್ಮ ಗಾಂಧೀಜಿಯವರು ದೇಶದಾದ್ಯಂತ ಸೃಷ್ಟಿಸಿದ ಅಹಿಂಸಾ ಆಂದೋಲನ ಮತ್ತು ಅದಕ್ಕೂ ಮುಂಚೆ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ಪಣವಾಗಿಟ್ಟ ಧೀರೋದ್ದಾತ್ತರ ಆಶಾಕಿರಣಗಳಿಂದ ಇಡೀ ದೇಶ ಸ್ವಾತಂತ್ರ್ಯದ ಕನಸು ಕಾಣುತ್ತಿತ್ತು. ಸರಿಸುಮಾರು ಅದೇ ಕಾಲಕ್ಕೆ ಅಂದರೆ 1930–1942 ಮಧ್ಯೆ ಕೆಜಿಎಫ್ ಕಾರ್ಮಿಕರು ಬ್ರಿಟಿಷ್ ಆಡಳಿತದ ವಿರುದ್ಧ ಬಂಡಾಯ ಎದ್ದಿದ್ದರು. ಈ ನಡುವೆ ಅನೇಕ ಸವಲತ್ತುಗಳನ್ನು ಪಡೆಯಲು ಮೊದಲಿಗೆ ಕಾರ್ಮಿಕರು ಅನಂತರ ಕಾರ್ಮಿಕ ಸಂಘಟನೆಗಳ ನಾಯಕರು ಪ್ರತಿಭಟನೆಗಳನ್ನು ಸಂಘಟಿಸತೊಡಗಿದ್ದರು ಮತ್ತು ಸ್ವಲ್ಪಮಟ್ಟಿಗೆ ಜಯವನ್ನೂ ಸಾಧಿಸಿದ್ದರು.

ವಿಪರ್ಯಾಸವೆಂದರೆ ಹೆಚ್ಚೂ ಕಡಿಮೆ ಇದೇ ಕಾಲಘಟ್ಟದವರೆಗೂ ಕೆಜಿಎಫ್ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸ ಅವಕಾಶ ಒದಗಿಸಲು ಬ್ರಿಟಿಷರಾಗಲಿ ಮೈಸೂರು ಸರಕಾರವಾಗಲಿ ಶಾಲೆಗಳನ್ನು ಪ್ರಾರಂಭಿಸಲು ಮುಂದೆ ಬರಲಿಲ್ಲ. ಮೊದಲಿಗೆ ಕೆಲವು ಕ್ರಿಶ್ಚಿಯನ್ ಮಿಶನರಿಗಳು ಮತ್ತು ಕೆಲವು ಗುತ್ತಿಗೆದಾರರು ಸ್ವಯಂ ಪ್ರೇರಿತವಾಗಿ ಚರ್ಚ್‌ಗಳು, ಮನೆಗಳು ಮತ್ತಿತರ ಸ್ಥಳಗಳಲ್ಲಿ ಪ್ರೈಮರಿ ಶಾಲೆಗಳನ್ನು ಸ್ಥಾಪಿಸಿದರು. 1940ರ ಸುಮಾರಿಗೆ ಕೆಜಿಎಫ್ ಪ್ರದೇಶದಲ್ಲಿ ಅನೇಕ ಪ್ರೈಮರಿ ಶಾಲೆಗಳು ಪ್ರಾರಂಭಗೊಂಡವು.

ಮುಂದಿನ ದಿನಗಳಲ್ಲಿ ಮುಖ್ಯವಾಗಿ ಇಂಗ್ಲಿಷ್ ಕಲಿಸುವ ಪ್ರೌಢಶಾಲೆಗಳು ಪ್ರಾರಂಭಗೊಂಡವು. ಈ ಶಾಲೆಗಳಲ್ಲಿ ಮುಖ್ಯವಾಗಿ ಆಂಗ್ಲೋ–ಇಂಡಿಯನ್ ಅಧ್ಯಾಪಕರು ವಿದ್ಯಾಭ್ಯಾಸ ನೀಡುವ ಕಾರ್ಯದಲ್ಲಿ ತಮ್ಮನ್ನು ಆಳವಾಗಿ ತೊಡಗಿಸಿಕೊಂಡರು. ಇಲ್ಲಿಂದ ಹಿಂದೆ ನೋಡದ ಶಾಲೆಗಳು 1980ರವರೆಗೂ ರಾಜ್ಯದಲ್ಲಿಯೇ ಅತಿ ಉತ್ತಮ ಮತ್ತು ಶಿಸ್ತಿನ ಶಾಲೆಗಳಾಗಿ ಹೆಸರುಗಳಿಸಿದ್ದವು. 1955ರಲ್ಲಿ ಪ್ರಾರಂಭಿಸಿದ ಸ್ಕೂಲ್ ಆಫ್

ಮೈನ್ಸ್ ದೇಶದಲ್ಲಿಯೇ ಎರಡನೇ ಮೈನಿಂಗ್ ಕಾಲೇಜ್ ಆಗಿತ್ತು. (ಧನ್‌ಬಾದ್‌ನ ಇದ್ದಿಲು ಗಣಿಗಳ ಮಧ್ಯೆ ಮೊದಲನೇ ಮೈನಿಂಗ್ ಕಾಲೇಜು ಸ್ಥಾಪನೆಯಾಗಿತ್ತು) 1962ರಲ್ಲಿ ಪ್ರಾರಂಭವಾದ ಕೆಜಿಎಫ್ ಪ್ರಥಮ ದರ್ಜೆ ಕಾಲೇಜು ರಾಜ್ಯದ ಕೆಲವೇ ಉತ್ತಮ ಕಾಲೇಜುಗಳಲ್ಲಿ ಒಂದಾಗಿತ್ತು.

1960ರಲ್ಲಿ ಬಿಇಎಮ್‌ಎಲ್ ಪ್ರಾರಂಭವಾದ ಹಿನ್ನೆಲೆಯಲ್ಲಿ ಕೈಗಾರಿಕಾ ತರಬೇತಿ ಕೇಂದ್ರವೂ ಸ್ಥಾಪನೆಯಾಗಿತ್ತು. ಈ ತರಬೇತಿ ಕೇಂದ್ರ ಪಾರಂಭವಾದ ಕಾಲದಲ್ಲಿ ಇಲ್ಲಿನ ಅಧ್ಯಾಪಕರು ಗಣಿ ಕಾಲೋನಿಗಳ ಪ್ರತಿ ಗುಡಿಸಿಲಿಗೂ ಹೋಗಿ ವಿದ್ಯಾರ್ಥಿಗಳನ್ನು ತರಬೇತಿ ಕೇಂದ್ರಕ್ಕೆ ಕಳುಹಿಸುವಂತೆ ಪೋಷಕರನ್ನು ಒತ್ತಾಯಿಸಿ ಸೇರಿಸಿಕೊಂಡಿದ್ದರು. ಮೊದಲ 25–30 ವರ್ಷಗಳ ಕಾಲ ತರಬೇತಿಗೆ ಸೇರಿದವರೆಲ್ಲ ಇದೇ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಮುಂದಿನ ದಿನಗಳಲ್ಲಿ ತರಬೇತಿ ಪಡೆದವರಿಗೆ ಆ ಅದೃಷ್ಟ ದೊರಕಲಿಲ್ಲ.

ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ರಾಜ್ಯ, ಕೇಂದ್ರ ಸರಕಾರ ಮತ್ತು ದೇಶದ ಎಲ್ಲಾ ಕಂಪನಿಗಳಲ್ಲಿ ಇಂದಿಗೂ ಕಾಣಬರುತ್ತಾರೆ. ಮೈನಿಂಗ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ದೇಶದ ಎಲ್ಲಾ ಮೂಲೆಗಳಲ್ಲಿರುವ ಗಣಿಗಳಲ್ಲಿ ದುಡಿಯುತ್ತಿದ್ದಾರೆ. ಕೆಜಿಎಫ್‌ನಲ್ಲಿ ಉದ್ಯೋಗ ನಿರ್ವಹಿಸಿದ ಇಂಜಿನಿಯರುಗಳು, ತಂತ್ರಜ್ಞರು ಮತ್ತು ಅವರ ಪೀಳಿಗೆಗಳು ಪ್ರಪಂಚದ ಇತರ ಗಣಿಗಳಲ್ಲೂ ದುಡಿಯುತ್ತಿದ್ದಾರೆ. ಕೆಜಿಎಫ್ ಗಣಿಗಳನ್ನು ದೇಶದ 'ತಾಯಿ ಗಣಿಗಳು' ಎಂದು ಕರೆಯಲಾಗುತ್ತದೆ. ಎರಡು ವಿಶ್ವ ಮಹಾಯುದ್ಧಗಳ ಕಾಲದಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾದ ಕಾರ್ಖಾನೆಗಳಲ್ಲಿ ಕೆಲಸ ಮಾಡಿದವರು ಹೆಚ್ಚಾಗಿ ಕೆಜಿಎಫ್‌ನಲ್ಲಿ ದುಡಿದ ಕಾರ್ಮಿಕರು ಮತ್ತು ಅವರ ಜನಾಂಗಗಳೇ. ಕೆಜಿಎಫ್ ನಗರ ಕರ್ನಾಟಕದಲ್ಲಿಯೇ ಮೊದಲು ಮತ್ತು ಬೆಂಗಳೂರಿಗಿಂತ ಮುಂಚೆ ಕಾಸ್ಮೋಪಾಲಿಟನ್ ನಗರವಾಗಿತ್ತು. ಒಂದು ರೀತಿಯಲ್ಲಿ ಬೆಂಗಳೂರು ನಗರ ಬೆಳೆಯಲು ಮೊದಮೊದಲಿಗೆ ಕಾರಣವಾಗಿದ್ದೇ ಕೆಜಿಎಫ್ ಎಂದರೆ ಅತಿಶಯೋಕ್ತಿಯ ಮಾತಾಗಲಾರದು. ಕರ್ನಾಟಕ ರಾಜ್ಯ ಬೆಳೆಯಲು ಕಾರಣವಾದ ಕೆಜಿಎಫ್ ಗಣಿ ನಗರ ಕೊನೆಗೆ ಯಾರ ಮಗುವೂ ಆಗದೇ ಅನಾಥವಾಗಿದ್ದು ಚರಿತ್ರೆಯ ವ್ಯಂಗ್ಯವಾಗಿದೆ. ಚಿನ್ನದ ಗಣಿಗಳನ್ನು ಕೇಂದ್ರ ಸರಕಾರ ಅಂತಾರಾಷ್ಟ್ರೀಯ ಗಣಿ ಸಂಗ್ರಹಾಲಯವಾಗಿ ಅಭಿವೃದ್ಧಿ ಪಡಿಸಬಹುದಿತ್ತು. ಜೊತೆಗೆ ಅಂತರಾಷ್ಟ್ರೀಯ ಗಣಿ ಇನ್‌ಸ್ಟಿಟ್ಯೂಟ್ ಕೂಡ ಇಲ್ಲಿ ಸ್ಥಾಪನೆಯಾಗಬೇಕಿತ್ತು. ಇವೆಲ್ಲವೂ ಹೇಳ ಹೆಸರಿಲ್ಲದೆ ನೀರು ಪಾಲಾದವು.

❖❖❖

ಗಣಿ ಪ್ರದೇಶದ ಕಾಲೋನಿಗಳಲ್ಲಿ ಒಟ್ಟಾಗಿ ವಾಸಿಸತೊಡಗಿದ ದಲಿತ ಮತ್ತು

ಹಿಂದುಳಿದ ಜನಾಂಗಗಳು ಕೆಲವು ದಶಕಗಳ ಕಾಲ ದೂರ ನಿಂತಿದ್ದರೂ ವಸಾಹತು ಕಾಲಘಟ್ಟದ ಕೈಗಾರೀಕರಣದಿಂದ ಇವುಗಳ ನಡುವೆ ಒಂದು ಸ್ಪರ್ಶ ಏರ್ಪಟ್ಟಿತ್ತು. ಆದರೆ ಉನ್ನತ ಜಾತಿಗಳ ಕಾರ್ಮಿಕರು ಗಣಿ ಕಾಲೋನಿಗಳಿಂದ ಹೊರಗೆಯೇ ನೆಲೆ ನಿಂತಿದ್ದರು. ಪೆರಿಯಾರ್ ಮತ್ತು ಅಂಬೇಡ್ಕರ್ ಅವರ ಸಾಮಾಜಿಕ ಎಚ್ಚರಿಕೆ ಮತ್ತು ಅಕ್ಷರ ಜ್ಞಾನದಿಂದ ಕಾರ್ಮಿಕರಲ್ಲಿ ಒಳಗೊಳಗೆ ಒಂದು ಸಾಮಾಜಿಕ ಎಚ್ಚರಿಕೆ ಗಟ್ಟಿಗೊಳ್ಳುತ್ತಿತ್ತು. 20ನೇ ಶತಮಾನದ ಮೊದಲೆರಡು ದಶಕಗಳಲ್ಲಿ ಕೆಲವು ಸಾಮಾಜಿಕ ಪರಿವರ್ತನೆಕಾರರು ತಮಿಳುನಾಡಿನಿಂದ ಶೈವ ಮತ್ತು ವೈಷ್ಣವ ಗುರುಗಳನ್ನು ಕರೆದು ತಂದು ಕೆಲವರಿಗೆ ಧರ್ಮದೀಕ್ಷೆಯನ್ನು ಕೊಡಿಸುವಲ್ಲಿ ಸಫಲರಾಗಿದ್ದರು. ಕೆಲವರು ರಾಮಾನುಜಾಚಾರ್ಯರ ಅನುಯಾಯಿಗಳಾಗಿ ಪರಿವರ್ತನೆಯಾಗಿದ್ದರು. ಇದೇ ಕಾಲದಲ್ಲಿ ಕೆಜಿಎಫ್‌ನಲ್ಲಿ ಬೌದ್ಧ ಧರ್ಮದ ಕಡೆಗೆ ಒಲವು ಹುಟ್ಟಿಕೊಂಡು ಕೆಜಿಎಫ್ ದಕ್ಷಿಣ ಭಾರತದ ಮುಖ್ಯ ಬೌದ್ಧ ಕೇಂದ್ರವಾಗಿತ್ತು. ಸಿಂಹಳಿ, ಥಾಯ್‌ಲ್ಯಾಂಡ್, ಬರ್ಮಾ ಇನ್ನಿತರ ದೇಶಗಳಿಂದ ಬಂದ ಬೌದ್ಧ ಭಿಕ್ಷುಗಳು ಬೌದ್ಧ ಧರ್ಮದ ಪ್ರಚಾರವನ್ನು ಇಲ್ಲಿ ಕೈಗೊಂಡಿದ್ದರು.

ಈ ನಡುವೆ ಕೆಜಿಎಫ್‌ನ ಅನೇಕ ಪ್ರದೇಶಗಳಲ್ಲಿ ಚರ್ಚ್‌ಗಳು ಎದ್ದು ನಿಂತಿದ್ದವು. ಕೆಲವು ಮಿಶನರಿಗಳು ಮತ್ತು ಆಂಗ್ಲೋ-ಇಂಡಿಯನ್ನರಿಂದ ಕಾರ್ಮಿಕರು ಕೆಲವರು ಕ್ರಿಶ್ಚಿಯನರಾಗಿ ಮಾರ್ಪಟ್ಟರು. ಆದರೆ ಇವರ ಪರಿವರ್ತನೆ ನೂರಕ್ಕೆ ನೂರು ಪಟ್ಟು ಆತ್ಮಸಾಕ್ಷಿಯಾಗಿರದೆ ಎರಡೂ ಧರ್ಮಗಳಲ್ಲಿ ಒಂದೊಂದು ಕಾಲಿಟ್ಟು ಸಾಗುತ್ತಿದ್ದರು. ಮೂಲವಾಗಿ ದಲಿತರಾದ ಇವರು ಕ್ರೈಸ್ತರಾಗಿದ್ದು ಅನುಕೂಲತೆ ಪಡೆಯಲು ಎನ್ನುವ ಆರೋಪ ಕೂಡ ಇವರ ಕೊರಳಿಗೆ ಸುತ್ತಿಕೊಂಡಿತು. ಆದರೆ ಆಂಗ್ಲೋ-ಇಂಡಿಯನ್ನರು ಮಾತ್ರ ಎಂದಿಗೂ ಈ ಜಂಜಾಟಕ್ಕೆ ಕೈಹಾಕಲಿಲ್ಲ. ಒಂದು ರೀತಿಯಲ್ಲಿ ಹಿಂದೂ ಧರ್ಮದ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಮೇಲು ನೋಟಕ್ಕೆ ಗಣಿ ಕಾಲೋನಿಗಳಲ್ಲಿ ಪೂರ್ಣವಾಗಿ ಸಡಿಲಗೊಂಡಂತೆ ಕಂಡರೂ ಒಡಲಲ್ಲಿ ಅದರ ಅಗ್ನಿ ಮಾತ್ರ ಲಾವಾದಂತೆ ಕುದಿಯುತ್ತಲೆ ಇತ್ತು. ಹಿಂದೂ ಧರ್ಮಕ್ಕೆ ಅನೇಕ ರೂಪಗಳಿದ್ದು ಅದು ನೋಡುವವರಿಗೆ ಹುಲಿಯಾಗಿ, ಆನೆಯಾಗಿ, ಒಂಟೆಯಾಗಿ, ಇಲಿಯಾಗಿ ಕೊನೆಗೆ ನರಿಯಾಗಿಯೂ ತೋರುತ್ತದೆ. ಹಿಂದೂ ಧರ್ಮಕ್ಕೆ ಕೆಳ ಜಾತಿಯವರು ಮಾತ್ರ ಚಪ್ಪಲಿಯಾಗಿಯೇ ಕಾಣಿಸುತ್ತಾರೆ. ಈ ಕಾಲಘಟ್ಟದಲ್ಲಿ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ ಎನ್ನುವ ದಗಲ್ಬಾಜಿ ಮಿತ್ರರು ಕೆಜಿಎಫ್‌ನ ಗಣಿ ಕಾಲೋನಿಗಳಲ್ಲಿ ಕೈ ಕೈ ಹಿಡಿದುಕೊಂಡು ನಡೆಯಲಾಗದೆ ಭೀತಿಯಿಂದ ಹೊರಗಿನಿಂದ ಇಣಿಕಿ ನೋಡುತ್ತಿದ್ದರು ಎನ್ನುವುದು ಮಾತ್ರ ಸತ್ಯವಾಗಿತ್ತು.

ಒಟ್ಟಿನಲ್ಲಿ ವಸಾಹತು ಮತ್ತು ವಸಾಹತೋತ್ತರ ಕಾಲಘಟ್ಟದಲ್ಲಿ ಸಾಮಾಜಿಕವಾಗಿ ಯಾವುದೇ ದೊಡ್ಡ ರೀತಿಯ ಮಾರ್ಪಾಟುಗಳು ಇಲ್ಲಿ ನಡೆಯಲಿಲ್ಲ ಎಂದೇ

ಹೇಳಬಹುದು. ಆದರೆ ಈ ಕಾಲಘಟ್ಟಗಳಲ್ಲಿ ಗಣಿಗಳ ಹುಟ್ಟಿನಿಂದ ವಿದ್ಯಾಭ್ಯಾಸದ ಸ್ಪರ್ಶ ಕಂಡ ಕಾರ್ಮಿಕರ ಮಕ್ಕಳು ಮತ್ತು ಅವರ ಮುಂದಿನ ಪೀಳಿಗೆಗಳು, ಹಿಂದೂ ಧರ್ಮದ ನರಕದಿಂದ ತಪ್ಪಿಸಿಕೊಂಡು ತಮ್ಮ ಬೇರುಗಳನ್ನು ಹೊಕ್ಕಳು ಬಳ್ಳಿಯಿಂದ ಕತ್ತರಿಸಿಕೊಂಡು ದೇಶದ ಇತರ ಭಾಗಗಳಲ್ಲಿ ಲೀನವಾಗಿಹೋಗಿವೆ.

ಆದರೆ ಕತ್ತರಿಸಿಕೊಂಡ ಕರಳು ಬಳ್ಳಿಗಳು ಮಾತ್ರ ಇಲ್ಲಿಯೇ ಉಳಿದುಕೊಂಡು ಅದೇ ಹರಕುಮುರುಕು ಗುಡಿಸಿಲುಗಳಲ್ಲಿ ರೋದಿಸುತ್ತಿವೆ. ಇದಕ್ಕೆ ಮುಕ್ತಿ ಎನ್ನುವುದು ಯಾವ ರೂಪದಲ್ಲಿ ಬರುವುದೊ ತಿಳಿಯದು? ಇಂತಹ ಜನಾಂಗಗಳು ಪ್ರತಿಯೊಂದು ಕಾಲಘಟ್ಟದಲ್ಲಿಯೂ ಮುಖ್ಯ ಸಮಾಜವಾಹಿನಿಗೆ ವಿಮುಖವಾಗಿ ಸರಿಯುತ್ತಿರುವುದು ಮಾನವನ ನಾಗರಿಕತೆಯ ಮೂಲ ಲೋಪವಾಗಿದೆ. ಇದರಿಂದ ತಿಳಿಯುವ ಒಂದು ಅಂಶವೆಂದರೆ ವಿದ್ಯಾಭ್ಯಾಸ ಎನ್ನುವುದು ಒಂದು ಶಕ್ತಿ. ಇದು ಬಂದಿದ್ದು ಪಶ್ಚಿಮ ದೇಶಗಳ ವಸಾಹತು ಕಾಲಘಟ್ಟದಿಂದ ಎಂದು ಧೈರ್ಯವಾಗಿಯೆ ಸಾರಿ ಹೇಳಬಹುದು. ಶೂದ್ರರನ್ನು ವಿದ್ಯಾಭ್ಯಾಸದಿಂದ ವಂಚಿಸಿದ ಹಿಂದೂ ಧರ್ಮದ ಸಾವಿರಾರು ವರ್ಷಗಳ ಹುನ್ನಾರ ಎಷ್ಟು ಮುಂದಾಲೋಚನೆಯಿಂದ ಕೂಡಿದ ಮೋಸ ಎನ್ನುವುದು ಜಗಜ್ಜಾಹೀರಾಗುತ್ತದೆ.

ಆದರೆ ಪ್ರಸ್ತುತ ಪ್ರಪಂಚವನ್ನೆಲ್ಲ ಸುತ್ತಿಕೊಳ್ಳುತ್ತಿರುವ ಜಾಗತೀಕರಣವೆಂಬ ಭೂತದಿಂದ ವಿದ್ಯಾಭ್ಯಾಸ ಎನ್ನುವುದು ದಲಿತರು, ಹಿಂದುಳಿದವರು ಮತ್ತು ಬಡವರಿಗೆ ಒಂದು ಶಕ್ತಿಯಾಗಿ ದೊರಕುವ ಯಾವುದೇ ಸೂಚನೆಗಳು ಕಾಣಿಸುತ್ತಿಲ್ಲ. ಕಾರಣ ಇದು ಹಿಂದೂ ಧರ್ಮದ ಹಳೆ ಬೇರಿನ ಹೊಸ ರೂಪದಂತೆ ತೋರುತ್ತಿದೆ. ಜೊತೆಗೆ ಜಾಗತೀಕರಣ ಎಂಬ ಭೂತವು ಇದಕ್ಕೆ ಚಿನ್ನದ ಲೇಪವನ್ನು ಪೂಸಿ ಅಮೆರಿಕ/ಐರೋಪ್ಯ ದೇಶಗಳ ವಸಾಹತು, ಹೊಸಾಹತೋತ್ತರ ಕಾಲಘಟ್ಟಗಳ ಸೋಗಲಾಡಿತನವನ್ನೇ ಇಲ್ಲಿ ಬಿಕರಿ ಮಾಡುತ್ತಿದೆ. ಭೂಮಿಯ ಮೇಲೆ ಮನುಷ್ಯನ ನಾಗರಿಕತೆ ಸೃಷ್ಟಿಯಾದ ಕಾಲದಿಂದಲೂ ಬಹುಸಂಖ್ಯಾತ ದುಡಿಯುವವರ ಶಕ್ತಿ ಮುಖ್ಯವಲ್ಲ, ಕೆಲವರ ಯುಕ್ತಿಯೇ ಮುಖ್ಯವಾಗಿದೆ. ಒಂದು ಕಾಲದಲ್ಲಿ ಇದನ್ನು 'ಕಾಡು ನ್ಯಾಯ ಎನ್ನುತ್ತಿದ್ದರು. ಈಗ ಇದನ್ನು ಜಾಗತೀಕರಣ' ಎಂದು ಕರೆಯಲಾಗುತ್ತಿದೆ.

❖❖❖

1. ಜಿಲ್ಲಾ ಸಂಪನ್ಮೂಲ ನಕ್ಷೆ ಮತ್ತು ಪತ್ಯ ಎಂ.ವೆಂಕಟಸ್ವಾಮಿ ಮತ್ತು ಟಿ.ಆರ್.ಅನಂತರಾಮು, ವರಿಷ್ಠ ಭೂವಿಜ್ಞಾನಿಗಳು, ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಇಲಾಖೆ, ಬೆಂಗಳೂರು
2. ಸುವರ್ಣ ಕರ್ನಾಟಕ ವಿಶೇಷ ಪುರವಣಿ, ಕನ್ನಡಪ್ರಭ, 31.10.2006.
3. ಅದೇ ಪತ್ರಿಕೆ.

ಶತ ವರ್ಷಗಳ ಗತ ವೈಭವ

ಇಗೋ ಆಚರಿಸುತ್ತಿರುವೆವು
ಶತ ವರ್ಷಗಳ ಗತ ವೈಭವ...!
ಶತ ವರ್ಷಗಳಿಂದ ಮಣ್ಣು ಮುಕ್ಕಿದವರು
ನಾವು ಹತಭಾಗ್ಯರು.

ಸಾವಿರಾರು ಅಡಿಗಳ ಕೆಳಗೆ; ಆಳದೊಳಗೆ
ಪಾತಾಳದೊಳಗೆ; ನಿಮ್ಮ ಕೆಳಗೆ!
ತೆವಳಿ ತೆವಳಿ ಸವೆದವರು.

ಇಂದಿಗೂ ನಮ್ಮ ಹೊದಿಕೆ ಬಿದಿರು ದಟ್ಟಿಗಳು;
ಗರಿಗೆದರಿದ ಸಯೆನೈಡ್ ವಿಷ ಕಣಗಳು
ಮೈತೂರಿ ಉಸಿರುಗೂಡುಗಳ ಕುಕ್ಕುತ್ತಿವೆ.

ಮಳೆ ಇಲ್ಲದೆ ತೊಯ್ದವರು
ಗಾಳಿ ಇಲ್ಲದೆ ಉಸಿರಾಡುವವರು.

ಜೀವನವೆ ಕತ್ತಲ ಹೊತ್ತು ಹುಡುಕುತ್ತಿರುವೆವು
ಇನ್ನೂ ಬೆಳಕನ್ನು ಕಪ್ಪು ಸುರಂಗಗಳಲ್ಲಿ
ದೇಶದ ಪ್ರತಿಷ್ಠೆಗೆ ಪಾತ್ರರಾದ ನಾವು
ಅಂತರಾಳದ ನೋವು ಹೊತ್ತು, ಕಂದರದಲ್ಲಿರುವ
ನಮ್ಮ ರಕ್ತ ಎಲಬುಗಳೆ
ನಿಮ್ಮ ಶೃಂಗಾರ ಎರಕವಾದ ಚಿನ್ನ!
ಬತ್ತಿಹೋದ ಪಿಳಿಪಿಳಿ ಕಣ್ಣುಗಳ ಹಿಗ್ಗಿಸಿ
ಸ್ಮಶಾನ ಮೌನದಲ್ಲಿ ಹುಡುಕುತ್ತಿರುವೆವು
ತೊನ್ನ ತುಣುಕುಗಳನ್ನ.

ನಮ್ಮಾಸೆ ಈಡೇರುವುದಿಲ್ಲ
ಈ ಸೈಯೆನೈಡ್ ವಿಷದ ಮಣ್ಣಲ್ಲಿ.

ಎಲಬುಗಳನ್ನೆ ಏಣಿ ಮಾಡಿ
ಪೃಥ್ವಿಯ ಆಳವಾದ ಚಿನ್ನದ ಗಣಿಗಳಲ್ಲಿ;
ಕಗ್ಗತ್ತಲ ಸಾಗರದಲ್ಲಿ
ಚಲಿಸುವ ಪರ್ವತಮಯ ಬೆನ್ನು ಹೊತ್ತು
ನಾವ್ ಬಂದಾಗ ಮೈ ಪರಚಿ ಹುಡುಕುವರು,
ಗಟ್ಟಿಗಳ ಗುಟ್ಟಾಗಿಸುವರ ನೋಡಿ
ಸೆಲ್ಯೂಟ್ ಹೊಡೆದು ದೂರ ಸರಿಯುವರು.

ಕಪ್ಪು ಜನರ ಆಸೆಗಳು
ಬಸಿದ ರಕ್ತವು
ಪದರು ಗರ್ಭಕಿಟ್ಟ ಮಿಂಚಿನ
ಬರೆಗಳೊಂದಿಗೆ ಬತ್ತಿಹೋಗಿದೆ,
ವೆಂಟಲೇಟರುಗಳಿಂದ ಚೆಲ್ಲುವ ಹೊಗೆಯೆ
ನಾವ್ ಬಿಟ್ಟ ಬಿಸಿಯುಸಿರು.
ನಾವು ಸುರಿಸಿದ ಬೆವರ ಹನಿಗಳನೆತ್ತಲು
ಹೆಣಗುತ್ತಿವೆ ಶಕ್ತಿಯುತ ಪಂಪುಗಳು.

ಆದರೂ ಸದ್ದು ಗದ್ದಲವಿಲ್ಲದೆ
ಎಳಸು ಕಪ್ಪು ಪೀಳಿಗೆ ಖಾತೆಗಳೊಂದಿಗೆ
ಪಳಯುಳಿಕೆಗಳಾಗಲು
ಪಂಕ್ತಿಯಲ್ಲಡಗಿವೆ.

ಬಿಸಿ ಉಸಿರೊಡನೆ ಸುಜ್ಜಿಗುಜ್ಜೆಸೆದ
ಸೈಯನ್ಯೆಡ್ ಗುಡ್ಡಗಳು
ಸಹರಾ ರಾಮೇಶ್ವರಳಾಗತೊಡಿಗಿವೆ.

ಎತ್ತಲಿಂದಲೊ ಇತ್ತ ಬಂದವರು;
ಎಲ್ಲಿಯೋ ಇರುವವರು
ಕಪ್ಪು ಸುರಂಗಗಳ ಕತೆಗಳನ್ನೆ
ಅರಿಯದವರು
ಮಿಂಚುತ್ತಿರುವರು ವೈಭವದ ಹೊಸ್ತಿಲಲ್ಲಿ.

ಇಗೋ ಆಚರಿಸುತ್ತಿರುವೆವು
ಶತ ವರ್ಷಗಳ ಗತ ವೈಭವ...!

***

– ಎಂ. ವೆಂಕಟಸ್ವಾಮಿ

ಕೋಲಾರ ಚಿನ್ನದ ಗಣಿಗಳು 1980ರಲ್ಲಿ
ಶತಮಾನೋತ್ಸವ ಆಚರಿಸಿಕೊಂಡ ಸಂದರ್ಭದಲ್ಲಿ ಬರೆದ ಕವಿತೆ.
(ಕನ್ನಡ ಪ್ರತಿಭಟನೆ ಕಾವ್ಯ: ಸಂಪಾದಕರು ಪ್ರೊ. ವೀರಣ್ಣ)

ಮಹಾಪ್ರಬಂಧದ ಮೌಲ್ಯಮಾಪಕರ ವರದಿಗಳು

ವರದಿ ಒಂದು: ಡಾ. ಚಂದ್ರ ಪೂಜಾರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಉತ್ತಮ ಡಿ. ಲಿಟ್ ಪದವಿಗೆ ಇರಬೇಕಾದ ಕೆಲವೊಂದು ಗುಣಲಕ್ಷಣಗಳನ್ನು ಈ ಮಹಾಪ್ರಬಂಧ ಹೊಂದಿದೆ. ಇದಕ್ಕಾಗಿ ಮೊದಲಿಗೆ ಸಂಶೋಧಕರನ್ನು ಅಭಿನಂದಿಸಬೇಕಾಗಿದೆ. ಪ್ರಬಂಧದ ಸಕಾರಾತ್ಮಕ ಅಂಶಗಳು ಇಂತಿವೆ.

1. ಸಮಗ್ರತೆಯ ದೃಷ್ಟಿಯಿಂದ ಅಧ್ಯಯನ ವಿಷಯವನ್ನು ನೋಡಲು ಪ್ರಯತ್ನಿಸಲಾಗಿದೆ. ಪ್ರಬಂಧದ ಹೆಸರೇ ಅದರ ವಿಸ್ತೃತ ವ್ಯಾಪ್ತಿಯನ್ನು ಸೂಚಿಸುತ್ತದೆ. ಕೋಲಾರ ಚಿನ್ನದ ಗಣಿಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಚಾರಿತ್ರಿಕ ಹಾಗು ವೈಜ್ಞಾನಿಕ ಆಯಾಮಗಳನ್ನು ಒಂದೇ ಪ್ರಬಂಧದಲ್ಲಿ ಅಧ್ಯಯನ ಮಾಡಲು ಮಾಡಿರುವ ಪ್ರಯತ್ನ ಶ್ಲಾಘನೀಯ. ಯಾಕೆಂದರೆ ನಿಜ ಬದುಕು ಯಾವತ್ತು ಬಿಡಿಬಿಡಿಯಾಗಿ – ಅಂದರೆ ಇದಿಷ್ಟು ಸಾಮಾಜಿಕ, ಇದಿಷ್ಟು ರಾಜಕೀಯ, ಇದಿಷ್ಟು ಆರ್ಥಿಕ ಎನ್ನುವ ರೀತಿಯಲ್ಲಿ ಅಭಿವ್ಯಕ್ತಗೊಳ್ಳುವುದಿಲ್ಲ; ಎಲ್ಲವೂ ಪರಸ್ಪರ ಸಂಬಂಧಿಸಿವೆ. ಬಿಡಿಬಿಡಿಯನ್ನು ವಿಶ್ಲೇಷಿಸಿ ಇಡಿಯ ಬಗ್ಗೆ ತೀರ್ಮಾನಿಸುವ ವಿಜ್ಞಾನದ ವಿಧಾನವನ್ನು ಸಮಾಜ ವಿಜ್ಞಾನ ಯಥಾ ರೀತಿಯಲ್ಲಿ ತನ್ನ ಅಧ್ಯಯನಗಳಲ್ಲಿ ಅಳವಡಿಸಿಕೊಂಡಿರುವುದರಿಂದ ಸಮಾಜ ಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ ಎನ್ನುವ ವಿಂಗಡನೆಗಳು ಮತ್ತು ಆ ಮೂಲಕ ಸಾಮಾಜಿಕ ಬದುಕನ್ನು ಅರ್ಥಮಾಡಿಕೊಳ್ಳುವ ಕ್ರಮ ರೂಢಿಯಲ್ಲಿದೆ. ಸಮಾಜ ಸಂಶೋಧನೆಗಳಲ್ಲೂ ಹೆಚ್ಚು ಕಡಿಮೆ ಇದೇ ಬಿಡಿಬಿಡಿಯಾಗಿ ನೋಡುವ ಕ್ರಮ

ಮುಂದುವರಿಯುವುದರಿಂದ ಸಂಶೋಧಿತ ಸಂಗತಿಗಳ ಸಮಗ್ರತೆ ಮರೆಯಾಗುತ್ತದೆ. ಈ ದೃಷ್ಟಿಯಿಂದ ಅಧ್ಯಯನ ವಿಷಯದ ಎಲ್ಲ ಆಯಾಮಗಳನ್ನು ವಿಶ್ಲೇಸುವುದು ಒಂದು ಉತ್ತಮ ಸಂಶೋಧನೆಯ ಲಕ್ಷಣ.

2. ಸಮಗ್ರ ಚಿತ್ರಣ ನೀಡುವ ಸಂದರ್ಭದಲ್ಲಿ ಸೂಕ್ಷ್ಮ ಸಂಗತಿಗಳಿಗೂ ನೀಡಿರುವ ಆದ್ಯತೆ ಹಲವಾರು ಉದಾಹರಣೆಗಳನ್ನು ನೀಡಬಹುದು. ಕಾರ್ಮಿಕರ ಹಾಡುಗಳು, ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರನ್ನು ನೋಡುವ ದೃಷ್ಟಿ, 'ಅಪ್ಪನ ಹೆಸರು ಅಯ್ಯಾಪ್ಪಸ್ವಾಮಿಯಾದರ ಮಗನ ಹೆಸರು ಚಾರ್ಲ್ಸ್ ಇಲ್ಲ ರಾಬರ್ಟ್ ಎಂದು ಇರುತ್ತಿತ್ತು. ಇದರಿಂದ ಶಾಲಾ ಕಾಲೇಜುಗಳಲ್ಲಿ ಮತ್ತು ಆಡಳಿತ ನಡೆಸುವ ಸರಕಾರಿ ಕಣ್ಣುಗಳಲ್ಲಿ ಇವರೆಲ್ಲ ನಗೆಪಾಟಲಾಗಿದ್ದರು.' ಗಣಿಗಾರಿಕೆಯ ಆರಂಭದ ದಿನಗಳಲ್ಲಿ ಮತ್ತು ಗಣಿಗಳನ್ನು ಮುಚ್ಚಿದ ನಂತರದ ದಿನಗಳಲ್ಲಿ ಆಂಗ್ಲೋಇಂಡಿಯನ್ನರ ಬದುಕಿನಲ್ಲಿ ಆದ ಬದಾಲಾವಣೆಗಳು. 'ಅವರು (ಆಂಗ್ಲೋ ಇಂಡಿಯನ್ನರು) ಧರಿಸುವ ಬಟ್ಟೆ, ಆಡುವ ಮಾತು ಮತ್ತು ವರ್ತನೆಯಲ್ಲಿ ಬದಲಾವಣೆಗಳೇನೂ ಕಾಣಿಸದಿದ್ದರೂ ಅವರ ಮನೆಗಳನ್ನು ನೋಡಿದಾಗ ನಿಜವಾಗಿಯೂ ಅವರು ತೀರ ಸಂಕಷ್ಟದಲ್ಲಿದ್ದಾರೆ ಎನ್ನುವುದು ತಿಳಿಯುತ್ತದೆ.' ಬಿಳಿಯರ ಬಂಗಲೆಗಳು ಮತ್ತು ಸ್ಥಳೀಯರ ಗುಡಿಸಿಲುಗಳು, ಕಳ್ಳತನದ ವಿವರಗಳು ಇತ್ಯಾದಿ ಸಣ್ಣ ಪುಟ್ಟ ವಿವರಗಳನ್ನು ಗಮನಿಸುವ ಮೂಲಕ ಅಧ್ಯಯನಕಾರರು ಸಮಗ್ರತೆಯ ಸೂಕ್ಷ್ಮ ಸಂಗತಿಗಳಿಗೆ ನೀಡಬೇಕಾದ ಮಹತ್ವ ನೀಡಿದ್ದಾರೆ.

3. ವೈಜ್ಞಾನಿಕ ಮಹತ್ವ – ಕೆಲವೊಂದು ವಿಚಾರಗಳನ್ನು ಮಂಡಿಸುವಾಗ ಆ ವಿಚಾರಗಳು ಬಯಸುವ ವೈಜ್ಞಾನಿಕತೆಗೆ ಮಹತ್ವ ನೀಡಲಾಗಿದೆ. ಉದಾಹರಣೆಗೆ ಗಣಿಪ್ರಾಯ ಲೆಕ್ಕಚಾರ – ಕಾರ್ಬನ್ 12 ಡೇಟಿಂಗ್. ಚಿನ್ನದ ಉತ್ಪಾದನಾ ವೆಚ್ಚ, ಲಾಭ ನಷ್ಟ, ಕಾರ್ಮಿಕರ ಅಪರಾಧ ಮತ್ತು ಶಿಕ್ಷೆ ಇತ್ಯಾದಿಗಳನ್ನು ಅಂಕಿಅಂಶಗಳ ಮೂಲಕ ಸಾಧಿಸಲು ಪ್ರಯತ್ನಿಸಲಾಗಿದೆ.

ಪ್ರಬಂಧದ ಕೊರತೆಗಳು ಇಂತಿವೆ :

1. ಪ್ರಬಂಧದ ವ್ಯಾಪ್ತಿ ವಿಸ್ತಾರವಾಗಿದೆ – ಒಂದು ಪ್ರಬಂಧದ ಎಲ್ಲ ಆಯಾಮಗಳನ್ನು ವಿಶ್ಲೇಸುವುದು ಅಷ್ಟು ಸರಳ ಕೆಲಸವಲ್ಲ. ಇದಕ್ಕೆ ಸಾಕಷ್ಟು ವೈಜ್ಞಾನಿಕ ಹಾಗೂ ತಾತ್ವಿಕ ತಯಾರಿಯ ಅಗತ್ಯವಿರುತ್ತದೆ. ಈ ಬಗೆಯ ತಯಾರಿ ಇಲ್ಲದ ಆಯಾಮಗಳನ್ನು ವಿಶ್ಲೇಸಲು ಹೊರಟರೆ ಎಲ್ಲದರ ಬಗ್ಗೆಯೂ ಅಲ್ಪಸ್ವಲ್ಪ ವಿಶ್ಲೇಷಣೆ ಇದ್ದು ಯಾವುದರ ಬಗ್ಗೆಯೂ ಆಳವಾದ ವಿಶ್ಲೇಷಣೆ ಇಲ್ಲದೆ ಇಡೀ ಪ್ರಬಂಧ ಸೊರಗುವ ಸಾಧ್ಯತೆ. ಈ ಪ್ರಬಂಧದಲ್ಲೂ ಈ ಬಗೆಯ ಕೊರತೆಗಳಿವೆ. ಸಾಮಾಜಿಕ ಆಯಾಮವನ್ನು ವಿಶ್ಲೇಸುವಾಗ ಜಾತಿ ಧರ್ಮಗಳ ಹಿನ್ನೆಲೆ ಮತ್ತು ಉದ್ಯೋಗದ ಸ್ತರಗಳ ವಿವರಗಳನ್ನು ನೀಡಲಾಗಿದೆ.

ಕುಟುಂಬ ಮತ್ತು ಸಮುದಾಯ ಬದುಕುಗಳು ಸಾಮಾಜಿಕ ವಿಶ್ಲೇಷಣೆಯಲ್ಲಿ ವಿಶೇಷ ಮಹತ್ವ ಪಡೆದಿಲ್ಲ. ಆದುದರಿಂದ ಮಹಿಳೆ, ಕೌಟಂಬಿಕ ಸಂಬಂಧಗಳು, ಸಮುದಾಯ ಸಂಬಂಧಗಳ ಬಗ್ಗೆ ವಿಶ್ಲೇಷಣೆಯ ಕೊರತೆ ಇದೆ. ಇದೇ ರೀತಿಯಲ್ಲಿ ಆರ್ಥಿಕ ಆಯಾಮದ ವಿಶ್ಲೇಷಣೆಯಲ್ಲಿ ಚಿನ್ನದ ಉತ್ಪಾದನೆ, ಉತ್ಪಾದನೆಯ ವೆಚ್ಚ, ಲಾಭ ನಷ್ಟ ಇತ್ಯಾದಿಗಳ ಮಹತ್ವ ಪಡೆದು ಗಣಿ ಕಾರ್ಮಿಕರ ಆರ್ಥಿಕ ಬದುಕು, ಅವುಗಳಲ್ಲಿನ ಏರುಪೇರು ಮತ್ತು ಸಾಮಾಜಿಕ ಹಾಗು ಸಾಂಸ್ಕೃತಿಕ ಬದುಕಿನಲ್ಲಾಗುವ ಏರುಪೇರು ಕುರಿತು ಗಮನ ಹರಿಸಲು ಸಂಶೋಧಕರಿಗೆ ಸಾಧ್ಯವಾಗಿಲ್ಲ.

2. ಚಾರಿತ್ರಿಕ ವಿಶ್ಲೇಷಣೆಯ ಕೊರತೆಗಳು–ಚರಿತ್ರೆಯ ನಿರಂತತೆಯ ಬಗ್ಗೆ, ಕಾಲಘಟ್ಟಗಳ ಬಗ್ಗೆ, ಚರಿತ್ರೆ ಪ್ರತಿನಿಧೀಕರಿಸುವ ವರ್ಗ ಆಸಕ್ತಿಗಳ ಬಗ್ಗೆ ವಿಮರ್ಶಿತ ದೃಷ್ಟಿಕೋನಗಳ ಬಗ್ಗೆ ಸಂಶೋಧಕರು ಗಮನ ಹರಿಸಿದಂತಿಲ್ಲ. ಉದಾಹರಣೆಗೆ ಚಿನ್ನದ ಉತ್ಪಾದನೆಯ ಹಿನ್ನೆಲೆಯನ್ನು ವೇದ ಪುರಾಣಗಳ ಕಾಲದಿಂದ ಆರಂಭಿಸಿ ಇಂದಿನ ಕೋಲಾರದ ಚಿನ್ನದ ಗಣಿ ತನಕ ಬರುವುದು, ಪುರಾಣ ಹಾಗು ಧಾರ್ಮಿಕ ಗ್ರಂಥಗಳಲ್ಲಿನ ಹೇಳಿಕೆಗಳ ನೆಲೆಯಲ್ಲಿ ಅಧ್ಯಯನ ವಿಷಯದ ಬಗ್ಗೆ ತೀರ್ಮಾನಕ್ಕೆ ಬರುವುದು ಇತ್ಯಾದಿಗಳು ಚರಿತ್ರೆಯ ವಿಮರ್ಶಿತ ದೃಕೋನಕ್ಕೆ ಪೂರಕವಾಗಿಲ್ಲ.

3. ರಾಜಕೀಯ ಮತ್ತು ಜ್ಞಾನದ ಉತ್ಪಾದನೆ – ಕೋಲಾರದ ಚಿನ್ನದ ಗಣಿಯ ಕಥನದ ಮೂಲಕ ಕಟ್ಟಿಕೊಡಲು ಹೊರಟಿರುವ ಚಿನ್ನದ ಉತ್ಪಾದನೆಯ ಕತೆ ಮಾಡಬಹುದಾದ ರಾಜಕೀಯದ ಬಗ್ಗೆ ಸಂಶೋಧಕರಿಗೆ ಅರಿವಿದ್ದಂತಿಲ್ಲ. ಕೋಲಾರದ ಚಿನ್ನದ ಗಣಿಗಾರಿಕೆ ನಿಲುಗಡೆಯಾಗಿದೆ. ಸಾಕಷ್ಟು ಸಂಖ್ಯೆಯಲ್ಲಿ ಕಾರ್ಮಿಕರು ಜೀವನದ ನೆಲೆಗಳನ್ನು ಕಳೆದುಕೊಂಡಿದ್ದಾರೆ. ಒಂದು ವೇಳೆ ಅಧ್ಯಯನಕಾರರು ಅಂತಹ ಜೀವನದ ನೆಲೆ ಕಳೆದುಕೊಂಡಿದ್ದ ಕಾರ್ಮಿಕರ ಬದುಕನ್ನೇ ಬಿಡಿಬಿಡಿಯಾಗಿ ಕಟ್ಟಿಕೊಡುವುದನ್ನು ತಮ್ಮ ಪ್ರಬಂಧವನ್ನು ಮುಖ್ಯ ವಿಷಯವನ್ನಾಗಿಸಿದ್ದರೆ ಬೇರೆಯದೇ ಕ್ರಮದ ರಾಜಕೀಯಕ್ಕೆ ಬೇಕಾಗುವ ಮಾಹಿತಿಯನ್ನು (ಡಾಟ) ಅಧ್ಯಯನ ಒದಗಿಸಬಹುದಿತ್ತು. ಆದರೆ ಪ್ರಬಂಧದಲ್ಲಿ ಎಲ್ಲದರ ಜತೆಗೆ ಕಾರ್ಮಿಕ ಬದುಕು ಬಂದಿರುವುದರಿಂದ ಕಾರ್ಮಿಕರ ಸಮಸ್ಯೆಗಳು ಮತ್ತು ಅವುಗಳ ಪರಿಹಾರಗಳು ಮುಖ್ಯವಾಗಿಲ್ಲ. ಅಷ್ಟು ಮಾತ್ರವಲ್ಲದೆ ವೇದ ಪುರಾಣಗಳ ಕಾಲದಿಂದಲೇ ಚಿನ್ನದ ಉತ್ಪಾದನೆ ಇತ್ತೆಂದು ಹೇಳುವ ಮೂಲಕ ಈಗಾಗಲೇ ನಮ್ಮಲ್ಲಿ ಎಲ್ಲವನ್ನು ವೇದ ಪುರಾಣಗಳ ಕಾಲದಿಂದಲೇ ಇತ್ತೆಂದು ವಾದಿಸುವ ಜ್ಞಾನಶಾಖೆಗೆ ಮತ್ತು ಆ ಬಗೆಯ ಜ್ಞಾನವನ್ನು ಬಳಸಿಕೊಂಡು ನಡೆಯುವ ರಾಜಕೀಯ ಪ್ರಕ್ರಿಯೆಗೆ ಇಲ್ಲಿನ ಮಾಹಿತಿಗಳು ಆಹಾರವಾಗಬಹುದು.

ಈ ಎಲ್ಲ ದೋಷಗಳ ನಡುವೆಯೂ ಇದೊಂದು ಉತ್ತಮ ಡಿ. ಲಿಟ್ ಪ್ರಬಂಧವೆನ್ನುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಈ ಮಹಾಪ್ರಬಂಧಕ್ಕೆ ಡಿ. ಲಿಟ್

ಪದವಿ ನೀಡಬಹುದು. ಈ ಪ್ರಬಂಧವನ್ನು ಪ್ರಕಟಿಸುವುದಾದರೆ ನಾನು ಮೇಲೆ ಎತ್ತಿದ ಕೆಲವೊಂದು ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಅಗತ್ಯವಿದೆ.

✦

ವರದಿ ಎರಡು : ಪ್ರೊ. ನಿಜಗುಣಪ್ಪ, ಗುಲ್ಬರ್ಗ ವಿಶ್ವವಿದ್ಯಾಲಯ

ಡಿ. ಲಿಟ್ ಪದವಿಗಾಗಿ ಸಲ್ಲಿಸಲಾದ ಮಹಾಪ್ರಬಂಧವು ಉತ್ತಮ ಗುಣಮಟ್ಟದ ಪ್ರೌಢ ಪ್ರಬಂಧವಾಗಿದ್ದು, ಡಿ. ಲಿಟ್ಟ ಪದವಿ ಪ್ರಧಾನ ಮಾಡಲು ಯೋಗ್ಯವಾದ ವಿಷಯಸಾರವನ್ನು ಒಳಗೊಂಡಿದೆ.

ಆಕರ ಸಾಮಗ್ರಿಗಳ ಸಂಗ್ರಹ ಉತ್ತಮವಾಗಿದೆ. ಭಾರತ ದೇಶದ ಭೂಪಟದಲ್ಲಿ ಕರ್ನಾಟಕ ರಾಜ್ಯ ಚಿನ್ನದ ನಾಡು ಎಂಬ ಹಿರಿಮೆಯನ್ನು ಪಡೆದಿರುವುದು ಹೆಮ್ಮೆಯ ವಿಷಯ. ಈ ಹಿರಿಮೆಗೆ ಮುಖ್ಯ ಕಾರಣ ಕೋಲಾರದ ಚಿನ್ನದ ಗಣಿಗಳಾಗಿದ್ದು, ಈ ಗಣಿಗಳು ಈಗ ಅನೇಕ ಕಾರಣಗಳಿಂದ ಮುಚ್ಚಿದ್ದು, ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಗಳು ಲಾಭದಾಯಕ ಉದ್ಯಮದಲ್ಲಿ ತೊಡಗಿದ್ದು, ರಾಜ್ಯದ ಹಿಂದಿನ ಹಿರಿಮೆಯನ್ನು ಈಗಲೂ ಉಳಿಸಿಕೊಂಡಿವೆ.

ಕೋಲಾರ ಚಿನ್ನದ ಗಣಿಗಳು ಮುಚ್ಚಿರುವುದರಿಂದ, ಇವುಗಳ ರೋಚಕ ಏಳು ಬೀಳುಗಳ ಚರಿತ್ರೆಯು ಇತಿಹಾಸ ಪುಟಗಳಲ್ಲಿ ಸೇರಿಹೋಗಿತ್ತಿದ್ದು, ದಿನ ಕಳೆದಂತೆ ಇವುಗಳ ಚಾರಿತ್ರಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ಆರ್ಥಿಕ ಅಂಶಗಳ ನೈಜ ಮಾಹಿತಿ ಮಸಕಾಗುವ ಮೊದಲೇ ಲಭ್ಯವಿರುವ ಕಡತಗಳ ಅಂಕಿ ಅಂಶಗಳನ್ನು ಸಂಗ್ರಹಿಸಿ, ಸಮಗ್ರವಾದ ಪ್ರಬಂಧವೊಂದನ್ನು ತಯಾರಿಸಿ ಮಂಡಿಸಿರುವ ಲೇಖಕರ ಶ್ರಮ ಶ್ಲಾಘನೀಯ.

ಪ್ರಬಂಧ ಮಂಡನೆ ಉತ್ತಮವಾಗಿದ್ದು ಓದುವಂತಿದೆ. ಪ್ರಬಂಧದಲ್ಲಿ ವ್ಯಾಕರಣ, ಕಾಗುಣಿತ ಇತ್ಯಾದಿ ಭಾಷೆಗೆ ಸಂಬಂಧಿತ ತಪ್ಪುಗಳು ಕನಿಷ್ಠ ಪ್ರಮಾಣದಲ್ಲಿವೆ.

***

ಕೋಲಾರ ಚಿನ್ನದ ಗಣಿಗಳ ಚಾರಿತ್ರಿಕ, ಸಾಂಸ್ಕೃತಿಕ, ವೈಜ್ಞಾನಿಕ, ಸಾಮಾಜಿಕ ಮತ್ತು ಆರ್ಥಿಕ ವಿಷಯಗಳನ್ನು ಮಂಡಿಸುವಾಗ, ಕೋಲಾರದ ಚಿನ್ನದ ಗಣಿಗಳು ಎಲ್ಲಿವೆ? ಎಂಬುದನ್ನು ತಿಳಿಯಲು ಬೇಕಾದ ನಕ್ಷೆಗಳ ಕೊರತೆ ಎದ್ದು ಕಾಣುತ್ತಿದೆ. ಪುಟ 326ರಲ್ಲಿ (ಮೊದಲಿಗೆ ಸಲ್ಲಿಸಿದ ಪ್ರಬಂಧ) ಕೊಟ್ಟಿರುವ ಅರ್ಧ ಪುಟದ ನಕ್ಷೆ, ಅರ್ಧ ಮನಸ್ಸಿನ ಉಪಯೋಗಕ್ಕೆ ಬಾರದ ನಕ್ಷೆ; ಉತ್ತರದ ದಿಕ್ಕು ತೋರಿಸಿಲ್ಲ, ಅಕ್ಷರಗಳು ಕಾಣಿಸುವುದಿಲ್ಲ, ನಕ್ಷೆಗೆ ಕ್ರಮ ಸಂಖ್ಯೆ ಇಲ್ಲ ಇತ್ಯಾದಿ. ವೈಜ್ಞಾನಿಕ ವಿಷಯಗಳನ್ನೂ ಒಳಗೊಂಡಿರುವ ಪ್ರಬಂಧದಲ್ಲಿ ಅಂಕಿ ಅಂಶಗಳ ಮಾಹಿತಿಗಳನ್ನು ವಿವಿಧ ವಿನ್ಯಾಸದ ಪಟ್ಟಿಗಳಲ್ಲಿ ಕೊಡವುದರಿಂದ ಹೋಲಿಕೆಗಳು ಸುಲಭವಾಗಿ ಗ್ರಹಿಸಲು ಅನಕೂಲವಾಗಬಹುದು. ಕೆಲವು ದೊಡ್ಡ ಪಟ್ಟಿಗಳನ್ನು ಅನುಬಂಧದಲ್ಲಿ ಸೇರಿಸಬೇಕಿತ್ತು. ಪ್ರಬಂಧದಲ್ಲಿ ಮಾಹಿತಿಗಳನ್ನು ವಿವಿಧ ಬಗೆಯ ಗ್ರಾಫ್‌ಗಳಲ್ಲಿ ತೋರಿಸದಿರುವುದು ಮತ್ತೊಂದು ಕೊರತೆ.

ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಇವರು ಭಾರತೀಯ ಭೂಸರ್ವೇಕ್ಷಣ ಸಮೀಕ್ಷೆ ಸಂಸ್ಥೆಯಲ್ಲಿ ಭೂವಿಜ್ಞಾನಿಯಾಗಿ ಎರಡು ದಶಕಗಳು ಕ್ಷೇತ್ರ ಸಂಶೋಧನೆಯಲ್ಲಿ ತೊಡಗಿರುವುದರಿಂದ, ಸಂಸ್ಥೆಯ ಅನುಮತಿ ಪಡೆದು, ಕೋಲಾರ ಚಿನ್ನದ ಗಣಿಗಳ ಮುಖ್ಯವಾದ ನಕ್ಷೆಗಳನ್ನು ಪ್ರಬಂಧದಲ್ಲಿ ಸೇರಿಸಿ, ಕನ್ನಡ ಓದುಗರಿಗೆ ಉಪಕಾರವನ್ನು ಮಾಡಬಹುದಿತ್ತು. ಈ ಕೆಲಸವನ್ನು ಮುಂದುವರೆಸಿ, ಅವರ ಮುಂದಿನ ಕೃತಿಗಳಲ್ಲಾದರೂ, ಉತ್ತಮ ನಕ್ಷೆಗಳನ್ನು ನೀಡುವರೆಂದು ಆಶಿಸಬಹುದು.

***

ಕೋಲಾರದ ಚಿನ್ನದ ಗಣಿಗಳ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನ ಸಮೀಕ್ಷೆ ಸವಿಸ್ತಾರವಾಗಿದ್ದು, ಇತ್ತೀಚಿನ ಆಧಾರಗ್ರಂಥಗಳನ್ನು ಮತ್ತು ಪರಾಮರ್ಶನ ಗ್ರಂಥಗಳನ್ನು ಸಮೀಕ್ಷೆಗೆ ಒಳಪಡಿಸಿರುವುದು ಕಂಡುಬರುತ್ತದೆ. ಆದರೆ, ಸಣ್ಣ ಪುಟ್ಟ ತಪ್ಪುಗಳು ಅಲ್ಲಲ್ಲಿ ಕಂಡುಬರುತ್ತವೆ. ಆಧಾರಗ್ರಂಥಗಳ ಪಟ್ಟಿಯಲ್ಲಾಗಲೀ ಗ್ರಂಥ ಸೂಚಿಯನ್ನು ಓದುಗರ ಅನುಕೂಲಕ್ಕಾಗಿ ಒದಗಿಸುವಾಗ ಅವಶ್ಯಕವಾದ ಎಲ್ಲ ಮಾಹಿತಿಗಳಾದ ಲೇಖಕರ ಹೆಸರು, ಪ್ರಕಟವಾದ ವರ್ಷ, ಪ್ರಕಾಶಕರ ಹೆಸರು ಮತ್ತು ಪ್ರಕಟವಾದ ನಗರ, ಪುಟ ಸಂಖ್ಯೆ ಇತ್ಯಾದಿ ವಿವರಗಳನ್ನು ನೀಡುವುದು ಪದ್ಧತಿ. ಓದುಗರಿಗೆ ಅವಶ್ಯಕವೆನಿಸಿದಾಗ ಮೂಲಪ್ರಬಂಧವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವಾಗ ಗಮನದಲ್ಲಿರಿಸಿಕೊಂಡು ನಿವಾರಿಸಬೇಕು.

ಈ ಪ್ರಬಂಧದಲ್ಲಿನ ಅಧ್ಯಯನಗಳು ಕೋಲಾರ ಚಿನ್ನದ ಗಣಿಗಳ ಬಗ್ಗೆ ಒಳನೋಟಗಳನ್ನು ನೀಡಲು ಯಶಸ್ವಿಯಾಗಿದ್ದು, ಈ ಅಧ್ಯಯನದ ಒಟ್ಟಾರೆ ವಿಶ್ಲೇಷಣೆ ಇನ್ನೂ ಹೆಚ್ಚಿನ ಒಳನೋಟಗಳ ಸುಲಭ ಗ್ರಹಿಕೆಗೆ ನೆರವಾಗಿದೆ.

ಒಟ್ಟಾರೆ ಪ್ರಬಂಧವು ಡಿ.ಲಿಟ್ ಪದವಿಗೆ ಅರ್ಹವಾಗಿದೆ ಮತ್ತು ಪದ"ಯನ್ನು ಪ್ರಧಾನ ಮಾಡಬಹುದೆಂದು ಶಿಫಾರಸ್ಸು ಮಾಡುತ್ತೇನೆ.

ಸಂಶೋಧಕರ ವಿವರಣೆ :

ಇಬ್ಬರು ಮೌಲ್ಯಮಾಪಕರು ಎತ್ತಿದ ಪ್ರಶ್ನೆಗಳನ್ನು ಪರಿಶೀಲನೆ ಮಾಡಿ ಮಹಾಪ್ರಬಂಧವನ್ನು ಮತ್ತೆ ಒಪ್ಪಿಸುವಂತೆ ವಿಶ್ವವಿದ್ಯಾಲಯ ನನಗೆ ಆರು ತಿಂಗಳು ಗಡುವು ನೀಡಿತ್ತು. ಆರು ತಿಂಗಳಲ್ಲಿ ಮೌಲ್ಯಮಾಪಕರು ಎತ್ತಿದ ಎಲ್ಲಾ ಪ್ರಶ್ನೆಗಳನ್ನೂ ಮರು ಪರಿಶೀಲನೆ ಮಾಡದೇಹೋದರೂ ಪ್ರಬಂಧದ ಚೌಕಟ್ಟಿನಲ್ಲಿ ನನ್ನಿಂದ ಸಾಧ್ಯವಾದಷ್ಟು ರೀತಿಯಲ್ಲಿ ಪರಿಶೀಲನೆಗೆ ಒಳಪಡಿಸಿದ್ದೇನೆ ಎಂದು ಹೇಳಲು ಆಶಿಸುತ್ತೇನೆ.

– ಡಾ. ಎಂ. ವೆಂಕಟಸ್ವಾಮಿ

ಅನುಬಂಧಗಳು

ಕರ್ನಾಟಕ ಪುರಾತನ ಚಿನ್ನದ ಗಣಿಗಳು :

ಬಿಜಾಪುರ	:	ಇಕ್ಕಹಾಳ
ತುಮಕೂರು	:	ಅಜ್ಜನಹಳ್ಳಿ, ಜವನಹಳ್ಳಿ ಮತ್ತು ಜೆಳ್ಳಾರ
ಹಾಸನ	:	ಹಾರನಹಳ್ಳಿ, ಕೆಂಪಿನಕೋಟೆ ಮತ್ತು ಗೊಲ್ಲಹಳ್ಳಿ
ಬಳ್ಳಾರಿ	:	ಚಿಗಟೇರಿ, ಬಾವಿಹಳ್ಳಿ ಮತ್ತು ಕೊಂಗನಹೊಸೂರು
ಶಿವಮೊಗ್ಗ	:	ಪಲವನಹಳ್ಳಿ, ಹೊನ್ನೇಹಟ್ಟಿ ಮತ್ತು ಹೊನ್ನಾಳಿ
ಮೈಸೂರು	:	ಅಂಬಳೆ, ಒಳಗೆರೆ, ಮೊರ್ಸೆಗೊಂಡನಪಾಳ್ಯ ಮತ್ತು ಕೌದಳ್ಳಿ
ಗುಲ್ಬರ್ಗ	:	ಮೂಕನಗವಿ, ಹೆಗ್ಗನದೊಡ್ಡಿ, ಗೋಡಿಗಿರಿ, ನಾಗನೂರು ಮತ್ತು ಮಂಗ್ಳೂರು
ಮಂಡ್ಯ	:	ಹೊನ್ನೆಬೆಟ್ಟ, ಹಾಲ್ತಿಬೆಟ್ಟ, ಕಾಳಿಂಗನಹಳ್ಳಿ, ಬೆಳ್ಳಿಬೆಟ್ಟ ಮತ್ತು ಹುಂಜನಕೆರೆ
ಗದಗ್	:	ಕಬುಲಿಯಟ್‌ಕಟ್ಟಿ, ಅತಿಕಟ್ಟಿ, ಮೈಸೂರ್ ಮೈನ್, ಸಾಂಗ್ಲಿ ಮತ್ತು ಹೊಸೂರು ಮೈನ್

ಚಿಕ್ಕಮಗಳೂರು : ಜಲಗಾರನಗುಂಡಿ, ಸಿದ್ಧರಹಳ್ಳಿ, ನಂದಿ, ದೇವರಕ್ಲು ಮತ್ತು ಅಜ್ಜಂಪುರ

ರಾಯಚೂರು : ಹಟ್ಟಿ, ಕದೋಣಿ, ವಂದಲಿ, ಚಿಂಚರಿಕಿ, ಊಟಿ, ಉದ್ವಾಲ್, ಸನ್‌ಬಾಲ್, ಮಸ್ಕಿ, ರಾಮಲದಿನ್ನಿ, ಹೊನ್ನಕುಣಿ ಮತ್ತು ಹೀರಾಬುದ್ಧಿನಿ.

ಚಿತ್ರದುರ್ಗ : ಹಳೆಕಲ್ಲುಗುಡ್ಡ, ಹೊನ್ನೇಮರಡಿ, ಗೋಣೂರು, ಬೋದಿಮರಡಿ, ನೆಲಬಾವಿಗುಡ್ಡ, ಮಲೆಬೆನ್ನೂರು ಮತ್ತು ದಿಂಡಾವರ.

ಕೆಲವು ಚಾರಿತ್ರಿಕ ಘಟನೆಗಳು :

ಕ್ರಿ.ಪೂ.4000 : ಆದಿಮಾನವ ಮೊದಲ ಬಾರಿಗೆ ನದಿಯ ಮೆಕ್ಕಲು ಮಣ್ಣಿನಲ್ಲಿ ಚಿನ್ನವನ್ನು ನೋಡಿ ಆಶ್ಚರ್ಯಪಟ್ಟದ್ದು.

ಕ್ರಿ.ಪೂ.2000 : ಚಿನ್ನ ಹೆಚ್ಚಾಗಿ ಕ್ವಾರ್ಟ್ಸ್‌ರೆಝ್ ಶಿಲೆಗಳಲ್ಲಿ ದೊರಕುತ್ತದೆ ಎನ್ನುವ ಅರಿವು ಮೂಡಿದ್ದು.

ಕ್ರಿ.ಶ.300–650: ಅಶೋಕ ಚಕ್ರವರ್ತಿ ಮತ್ತು ಮೌರ್ಯರ ಕಾಲ, ಚಿನ್ನದ ಯುಗ.

1500–1700 : ಈ ಕಾಲದಲ್ಲಿ ಚಿನ್ನದ ಗಣಿಗಳ ಬಗ್ಗೆ ನಿರ್ಲಕ್ಷ ತೋರಲಾಯಿತು ಎಂದು ತಿಳಿದುಬರುತ್ತದೆ.

1832 : ಮಣಿಪುರದ ನಿಂಗ್ತು ನದಿಯಲ್ಲಿ ಚಿನ್ನದ ಪುಡಿಯನ್ನು ನೋಡಲಾಯಿತು.

1833 : ಗದಗ್ ಚಿನ್ನದ ಗಣಿಗಳ ಬಗ್ಗೆ ನ್ಯೂಬೋಲ್ಡ್ ಪ್ರಸ್ತಾಪಿಸಿದ್ದರು.

1834 : ಮಲ್‌ಬಾರ್ ಚಿನ್ನದ ಗಣಿಗಳ ಬಗ್ಗೆ ಜೆ.ಪ್ರಿನ್ಸ್‌ಸ್ ಪ್ರಸ್ತಾಪಿಸಿದ್ದರು.

1851 : ಭಾರತ ಭೂವೈಜ್ಞಾನಿಕ ಸರ್ವೇಕ್ಷಣ (ಜಿಎಸ್‌ಐ) ಇಲಾಖೆ ಕಲಕತ್ತಾದಲ್ಲಿ ಪ್ರಾರಂಭವಾಯಿತು.

1874 : ಕೆಜಿಎಫ್ ಬಗ್ಗೆ ಲೆಫ್ಟಿನೆಂಟ್. ಜಾನ್ ವಾರೆನ್ ಪ್ರಸ್ತಾಪಿಸಿದ್ದು.

1879 : ಕೆಜಿಎಫ್ ಪ್ರದೇಶದ ಕೆಲವು ಭಾಗಗಳಲ್ಲಿ ಚಿನ್ನ ತೆಗೆಯಲು ಅಂದಿನ ಮೈಸೂರು ಸರಕಾರದಿಂದ ಮೈಕೇಲ್ ಲ್ಯಾವಲ್ಲೇ ಅಪ್ಪಣೆ ಪಡೆದು ಉರಿಗಾಂ ಮೈನಿಂಗ್ ಕಂಪನಿ ಸ್ಥಾಪಿಸಿದ್ದು.

1880 : ಮೆ। ಜಾನ್ ಟೇಲರ್ ಕಂಪನಿ ಕೆಜಿಎಫ್ ಪ್ರದೇಶಗಳಲ್ಲಿ ಆಧುನಿಕ ಚಿನ್ನದ ಗಣಿಗಳಿಗೆ ನಾಂದಿ ಹಾಡಿತು.

1885	:	ಕ್ಯಾಪ್ಟನ್ ಪ್ಲೂಮರ್ ಪ್ರಖ್ಯಾತ ಚಾಂಪಿಯನ್ ಚಿನ್ನದ ಲೋಡನ್ನು ಕಂಡುಹಿಡಿದರು.
1887	:	ಆಧುನಿಕ ಹಟ್ಟಿ ಚಿನ್ನದ ಗಣಿಗಳು ಮತ್ತೆ ಪ್ರಾರಂಭವಾದವು.
1902	:	ಕಾವೇರಿ ನದಿ ಕೊಳ್ಳ (ಶಿವನಸಮುದ್ರ) ದಿಂದ ಕೆಜಿಎಫ್‌ಗೆ ವಿದ್ಯುತ್ ಜೋಡಿಸಲಾಯಿತು.
1914	:	ಮೊದಲನೇ ಪ್ರಪಂಚ ಮಹಾಯುದ್ಧದಿಂದ ಪ್ರಪಂಚದಾದ್ಯಂತ ಹಲವು ಚಿನ್ನದ ಗಣಿಗಳು ಸ್ಥಗಿತಗೊಂಡವು.
1931	:	ಚಿನ್ನದ ನಿಗದಿತ ಬೆಲೆಯನ್ನು ನಿಷೇಧಿಸಿದ್ದರಿಂದ ಚಿನ್ನದ ಬೆಲೆ ಏರಿತು.
1956	:	ಕೆಜಿಎಫ್ ರಾಷ್ಟ್ರೀಕರಣಗೊಂಡು ಚಿನ್ನದ ಗಣಿಗಳನ್ನು ಮೈಸೂರು ಸರಕಾರ ತನ್ನ ವಶಕ್ಕೆ ತೆಗೆದುಕೊಂಡಿತು.
1962	:	ಭಾರತ ಸರಕಾರ ಕೆಜಿಎಫ್ ಗಣಿಗಳನ್ನು ತನ್ನ ಆಡಳಿತಕ್ಕೆ ತೆಗೆದು ಕೊಂಡಿತು.
1968	:	ಸರಕಾರ ನಿಗದಿಪಡಿಸಿದ್ದ ಚಿನ್ನದ ಬೆಲೆಯನ್ನು ಹಿಂದಕ್ಕೆ ತೆಗೆದು ಕೊಂಡಿತು.
1972	:	ಭಾರತ್ ಗೋಲ್ಡ್ ಮೈನಿಂಗ್ ಲಿಮಿಟೆಡ್ (ಬಿಜಿಎಮ್‌ಎಲ್) ಸ್ಥಾಪನೆಗೊಂಡಿತು.
1992	:	ಚಿನ್ನದ ಗಣಿಗಳನ್ನು ತೆಗೆಯಲು ಖಾಸಗಿ ಉದ್ದಿಮೆಗಳಿಗೆ ಅನುಮತಿ ನೀಡಲಾಯಿತು.
1998	:	ಚಿನ್ನದ ಆಮದಿಗೆ ಸರಳೀಕೃತ ಕಾನೂನು ಮಾಡಲಾಯಿತು.
28:02:2001	:	ಕೆಜಿಎಫ್ ಗಣಿಗಳನ್ನು ಅಂತಿಮವಾಗಿ ಮುಚ್ಚಲಾಯಿತು.

ಕೆಲವು ವಿಶೇಷ ಉಲ್ಲೇಖಗಳು :

1. ರಾಜರ ಲೋಹ ಲೋಹಗಳ ರಾಜ: ಟಿ.ಆರ್.ಅನಂತರಾಮು, ನವಕರ್ನಾಟಕ ಪಬ್ಲಿಕೇಶನ್ಸ್ ಬೆಂಗಳೂರು, 1999.

1. Gold in India by B.P.Radhakrishna, L.C.Curtis, Geological society of India, Bangalore, (1999).
2. Gold resources of India, Geological Survey of India (GSI), series A, Economic geology, no. 38, part-1: text by M.Ziauddin and S.Narayanaswamy (1974).
3. Ancient and post medieval mining sites in the Khetri copper belt and Kolar gold fields, India-Lynn willies bulletin, peak district mines, Historical society voll- 11, Nov 6, winter 1992.
4. Oldways of mining in the Kolar gold fields-P.T.Eraddock, gold bulletin, 1991.
5. Historical notes on the Kolar gold fields-T.Williams, KGF Mining and metallargical Society, bulletin.
6. Report prepared in 1985 by Sri.K.S.R.Charry, former Secretary, Dept. of Mines, Govt. of India,
7. Gold exploration and development, Bangalore-1985, India, united nations inter regional seminar volume.
8. Kolar district gazetteer (1968),Vidhana veedhi, Bangalore-1.
9. Review of literature on effects of breaking dusts with special reference to silicosis (1937) by Harrington, USA Govt, Wasington.
10. Centenary souvenir 1980, BGML,KGF.
11. K.G.F Mining journals consulted in BGML library.
12. K.G.F Mining magazines,consulted in BGML library.
13. Anon, 1971,GSI News vol-2,no-3 march 1921.
14. Gold resources of India, GSI bulletin no. 38,1974.
15. Treatment of gold bearing quartz of the KGF by R.H.Kendal and A.F.Hosking trans. of the Institute of Mining and Metal,1925.

16. Kavnaugh, P.M. 1968, have 6000 years of Gold Mining Exhausted the world's Gold Reserves? Can.Min.Metal.Bull. vol.61.p.672.
17. King,W.1878, Note on the Progress of the Gold Industry in the Wynad, Nilgiri District, Madras Presidency Rec. G.S.I, vol.11.
18. Satya Prakash Mishra, 1987, Rock Edicts of Ashoka and Golz -Gold minralisation.Rec.G.S.I, 113 (7).
19. Williams,T.1936 Historical Notes on the Kolar Gold Field, Min.Metal,Soc. KGF. vol. VIII,part II,Bull No.41-44.
20. K.S.Seetharaman, Kolar Thanagavail Oralaru (Tamil).
21. Deshpande,Report on the Gold Mining Industry,
22. Kolar Gold Miners speak (pamplet) Delegates from the KGF in 22nd session, AIIUC,Calcatta,10 Feb10,1947.
23. Ketta Pengal Kummi, Ladykalpatham (Tamil).
24. Srinivasan, Labour in India.
25. Jodikalpatham (Tamil).
26. Jackspalding mine ventilation with conditioned Air,KGF,Bulletins.
27. Simmons "The case of KGF" Srininvasan, Labour in India.
28. J.T.Hudson "some Features of South African Mining Pracrtice" KGF Mining and Metallurgical Society, Quarterly bulletin (KGF Bulletins).
29. For instance Mukherjee, Crime and Criminals: also Janaki Nair, "Prohibited Marriage:State protection and Child Wife in the Mysore, 1894-1930".
30. The words of J.A.Pringle, "...the Indian can be... and is...fined a rupee when an anna would fit his earnings and his offence much better..." Efficiency and Economy in the Underground Department" KGF Bulletins.
31. Anthony Caplan, Heat Exhaustion in KGF" KGF Bulletin.

32. A Jumper cooly moving in underground without a light fell from the 340ft. level to 540ft. and died instantly, Reports of Chief Inspectors of Mysore, 1899.
33. Foreign Department Internal Branch, section A 1905, IPC of Mysore, January 17, 1908 (emphasis added).
34. Miners and Millhands-work, culture and politics in princely Mysore-Janaki Nair, sage publication, New Delhi.
35. Gold the Indian scene by B.P.Radhakrishna, L.C.Curtis, Geological society of India, Bangalore, (1991).

++++++

ಲೇಖಕರ ಪರಿಚಯ

ಡಾ.ಎಂ.ವೆಂಕಟಸ್ವಾಮಿ ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲೂಕಿನ ಬ್ಯಾಟರಾಯನಹಳ್ಳಿಯಲ್ಲಿ 06.11.1955 ರಲ್ಲಿ ಜನಿಸಿದರು. ಇವರು ಪ್ರಪಂಚ ಪ್ರಖ್ಯಾತ ಕೋಲಾರ ಚಿನ್ನದ ಗಣಿಗಳ 'ಲಿಟ್ಲ್ ಇಂಗ್ಲೆಂಡ್, ಖ್ಯಾತಿ ಮತ್ತು ಚಿನ್ನದ ಗಣಿಗಳ ಕಾರ್ಮಿಕರ ಭವಣೆಗಳನ್ನು ಹತ್ತಿರದಿಂದ ನೋಡಿದವರು. ಕೆ.ಜಿ.ಎಫ್ ಪ್ರ.ದ.ಕಾ.ನಲ್ಲಿ ಬಿಎಸ್ಸಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ (ಭೂವಿಜ್ಞಾನದಲ್ಲಿ) ಎಂಎಸ್ಸಿ ಮುಗಿಸಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆಗೆ (ಜಿ.ಎಸ್.ಐ) ಸೇರಿ ಭಾರತದಾದ್ಯಂತ ಓಡಾಡಿ ಅಪಾರ ಅನುಭವ ಪಡೆದಿದ್ದಾರೆ.

ಈಶಾನ್ಯ ಭಾರತದಿಂದ ಪಾಕಿಸ್ತಾನದ ಹಿಮಾಲಯಗಳು-ಗುಲ್‌ಮಾರ್ಗ್-ಸೋನಾಮಾರ್ಗ್ ಹಿಮ ಪರ್ವತಗಳ ಉದ್ದಕ್ಕೂ ಓಡಾಡಿದ್ದಾರೆ. ರಾಜಸ್ತಾನದ ಅರಾವಳಿ ಬೆಟ್ಟಗಳು-ಜಾವರ್ ಲೆಡ್ ಜಿಂಕ್ ಗಣಿಗಳು, ಉತ್ತರ ಪ್ರದೇಶದ ಗಂಗಾ-ಯಮುನಾ ಬಯಲುಗಳು, ಬಿಹಾರ್ ಕಲ್ಲಿದ್ದಲು ಗಣಿಗಳು, ಕೋಲಾರ ಚಿನ್ನದ ಗಣಿಗಳು-ಹಟ್ಟಿ ಚಿನ್ನದ ಗಣಿಗಳ ಸುತ್ತಮುತ್ತಲೂ ಚಿನ್ನದ ಬಗ್ಗೆ ಸಂಶೋಧನೆಗಳನ್ನು ಮತ್ತು ಉತ್ತರ ಕರ್ನಾಟಕದಲ್ಲಿ 76 ಧಾತುಗಳ ಬಗ್ಗೆ ವಿಶೇಷ ಸಂಶೋಧನೆ ನಡೆಸಿದ್ದಾರೆ. 1988-1992ರವರೆಗೆ ನಾಗಾಲ್ಯಾಂಡ್‌ನಲ್ಲಿ ಅನಂತರ 2007-2009ರವರೆಗೂ ಮೇಘಾಲಯ ರಾಜ್ಯಗಳಲ್ಲಿ ಭೂವಿಜ್ಞಾನ ಸಂಶೋಧನೆಯಲ್ಲಿ ನಿರತರಾಗಿದ್ದರು.

ಚೀನಾ ದೇಶದಲ್ಲಿ ಒಂದು ತಿಂಗಳು ಕಾಲ (2004 ರಲ್ಲಿ) ಭೂರಾಸಾಯನಿಕ ತಂತ್ರಜ್ಞಾನದಲ್ಲಿ ತರಬೇತಿ ಪಡೆದು ಬಂದಿದ್ದಾರೆ. ಚೀನಾ ಪ್ರವಾಸದಲ್ಲಿ ಚೀನಾ ಮಹಾಗೋಡೆ, ಸ್ವರ್ಗ ದೇವಾಲಯ, ಫರ್‌ಬಿಡನ್ ಸಿಟಿ, ಪೆಕ್ಕಿಂಗ್ ಮ್ಯಾನ್ ಗುಹೆಗಳು, ಮಂಗೋಲಿಯಾದ ಗೋಬಿ ಮರಳುಗಾಡನ್ನು ನೋಡಿ ಬಂದಿದ್ದಾರೆ. ಇದೇ ಹಿನ್ನಲೆಯಲ್ಲಿ ಡ್ರ್ಯಾಗನ್ಸ್ ಮಹಾಗೋಡೆಯೊಳಗೆ (ಪ್ರವಾಸ ಕಥನ) ಕೃತಿಯನ್ನು ಜಾಗೃತಿ ಪ್ರಿಂಟರ್ಸ್ ಪ್ರಕಟಿಸಿದೆ. ಒಂದು ದಶಕಕ್ಕಿಂತ ಹೆಚ್ಚು ಕಾಲ ಉತ್ತರ ಮತ್ತು ಈಶಾನ್ಯ ಭಾರತದಲ್ಲಿ ಕೆಲಸ ನಿರ್ವಹಿಸಿದ ಅನುಭವಗಳ ಆಧಾರದ ಮೇಲೆ 'ಅಲೆಮಾರಿಯ ಹೆಜ್ಜೆಗಳು ಪ್ರವಾಸ ಕಥನವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿ ಅಪಾರ ಮೆಚ್ಚಿಗೆ ಪಡೆದಿದೆ.

ನವಕರ್ನಾಟಕ ಪಬ್ಲಿಕೇಷನ್ ಅಸ್ಪೃಶ್ಯರು (ಒಂದು ವಿಶ್ಲೇಷಣೆ) ಎಂಬ ಸಂಶೋಧನಾ ಕೃತಿಯನ್ನು ಪ್ರಕಟಿಸಿದೆ. ಇದೇ ಪಬ್ಲಿಕೇಶನ್‌ನಿಂದ ಏಳು ಪರ್ವತಗಳು, ಒಂದು ನದಿ (ಅನುಭವನ ಕಥಫ) ಪ್ರಕಟವಾಗಲಿದೆ.

ಕನ್ನಡದ ಹೆಸರಾಂತ ಪತ್ರಿಕೆಗಳಲ್ಲಿ ಇವರ ಹಲವಾರು ಕತೆ, ಕವನ, ಕಾದಂಬರಿ, ವೈಚಾರಿಕ, ವಿಮರ್ಶೆ ಮತ್ತು ವಿಜ್ಞಾನ ಲೇಖನಗಳು ಪ್ರಕಟವಾಗಿವೆ. ಕೆಲವು ಟಿ.ವಿ. ಧಾರಾವಾಹಿಗಳಿಗೆ ಚಿತ್ರಕತೆ ಸಂಭಾಷಣೆ ಬರೆದಿದ್ದಾರೆ. ರೇಡಿಯೊ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡ, ತೆಲುಗು, ತಮಿಳು, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಇದೇ ಕೃತಿಯ ಸಂಶೋಧನೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಡಿ.ಲಿಟ್. ಪದವಿ ನೀಡಿದೆ.

ಸಾಹಿತ್ಯ ಚಟುವಟಿಕೆಗಳು

ಕವನ ಸಂಕಲನ :

1. ಬೆಟ್ಟಗುಡ್ಡಗಳ ಬೋಗುಣಿಯಲ್ಲಿ

ವಿಮರ್ಶೆ :

2. ಓದುವ ಹಾದಿಯಲ್ಲಿ

ಪ್ರವಾಸ ಕಥನ :

3. ಅಲೆಮಾರಿಯ ಹೆಜ್ಜೆಗಳು (ಕ.ಪು.ಪ್ರಾ.)
4. ಡ್ರ್ಯಾಗನ್ಸ್ ಮಹಾಗೋಡೆಯೊಳಗೆ (ಚೀನಾ ಪ್ರವಾಸ ಕಥನ)

ವೈಚಾರಿಕ :

5. ಅಸ್ಪೃಶ್ಯರು (ಒಂದು ಪರಿಶೀಲನೆ), ನವಕರ್ನಾಟಕ ಪಬ್ಲಿಕೇಷನ್ಸ್

ಕಾದಂಬರಿಗಳು :

6. ಚಂದ್ರನಿಲ್ಲದ ಆಕಾಶ
7. ಇನ್ನಿಲ್ಲದ ಪ್ರೀತಿ
8. ಭೂಮಿ ತೂಕದ ಹುಡುಗ

ವಿಜ್ಞಾನ :

9. ಸರ್. ಚಾರ್ಲ್ಸ್ ಲಯಲ್ (ಕ.ಪು.ಪ್ರಾ)
10. ಭೂಮಿ ಗುಡುಗಿದಾಗ (ಭೂಕಂಪನಗಳು)
11. ನಮ್ಮ ಹಿಮಾಲಯ
12. ಚಂಡಮಾರುತ

13. ಮಾನವ ಮೆದುಳೆಂಬ ಮಹಾ ಅದ್ಭುತ
14. ಸುನಾಮಿ ಸುತ್ತ (ಕ.ಸಾ.ಪ)
15. ಪೃಥ್ವಿಯ ಯಶೋಗಾಥೆ

* ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಖನಿಜ ನಕ್ಷೆಗಳನ್ನು ಅದಕ್ಕೆ ಸಂಬಂಧಪಟ್ಟ ಪಠ್ಯವನ್ನು ತಯಾರಿಸಿದ್ದಾರೆ.

ಪತ್ರಿಕೆಗಳಲ್ಲಿ ಧಾರಾವಾಹಿಗಳಾಗಿ ಪ್ರಕಟಗೊಂಡ ಕಾದಂಬರಿಗಳು ಮತ್ತು ಪ್ರವಾಸ ಕಥನಗಳು

16. ರೂಪರಾಶಿಯರು (ಕನ್ನಡಪ್ರಭ)
17. ಮೂಡಲ ಮರೆಯಲ್ಲಿ (ಕನ್ನಡಪ್ರಭ)
18. ಬೆಂಗಳೂರು-ವೈ2ಕೆ50 (ವೈಜ್ಞಾನಿಕ ಕಾದಂಬರಿ) (ಕನ್ನಡಪ್ರಭ)
19. ನೀ ನಡೆವ ದಾರಿಯಲ್ಲಿ (ಉದಯವಾಣಿ)
20. ಅಲೆಮಾರಿಯ ಹೆಜ್ಜೆಗಳು, ಕೆಲವು ಭಾಗಗಳು (ಹೊಸತು ಮಾಸ ಪತ್ರಿಕೆ)
21. ಡ್ರ್ಯಾಗನ್ಸ್ ಮಹಾಗೋಡೆಯೊಳಗೆ (ಅಗ್ನಿ ವಾರಪತ್ರಿಕೆ)/ ಕೆಲವು ಭಾಗಗಳು (ಸುಧಾ ವಾರ ಪತ್ರಿಕೆ)

ಬರಲಿರುವ ಕೃತಿಗಳು :

22. ಏಳು ಪರ್ವತಗಳು ಒಂದು (ಈಶಾನ್ಯ ಭಾರತ ಅನುಭವ ಕಥನ)
23. ಸಪ್ತ ಸಹೋದರಿಯರು ಒಬ್ಬ ಪುಟ್ಟ ತಮ್ಮ (ಈಶಾನ್ಯ ಭಾರತದ ಕಾವ್ಯ)
24. ಮಣ್ಣಿಗೆ ಮೈತುಂಬಾ ಕೆಲಸ (ಕಾವ್ಯ)
25. ಈಶಾನ್ಯ ಭಾರತದ ಕಥೆಗಳು

Address :
Dr. M. Venkataswamy
519, 39th Block, Type-V,
CPWD Qtrs, HSR Layout,
Bangalore-560 102.
Ph : 080-22584525
E-mail : alemarimvs@gmail.com



ಪ್ರೊ. ಜಿ.ಎಚ್. ಸಾಹುಕಾರ್ ಮತ್ತು ಶ್ರೀಮತಿ ಲೀಲಾ ಸಾಹುಕಾರ್



ತಾಯಿ–ತಂದೆ




ಶ್ರೀಮತಿ ಪಾಪಮ್ಮ ಮತ್ತು ಶ್ರೀ ಪಿ. ನಾಗಭೂಷಣಂ



ಪತ್ನಿ ಶ್ರೀಮತಿ ಸುಶೀಲಾ ಮಗ ಎಂ.ವಿ. ಕ್ರಾಂತಿ

ಚಿನ್ನವನ್ನು ತನ್ನ ಗರ್ಭದಲ್ಲಿ ಅಡಗಿಸಿಟ್ಟುಕೊಂಡಿರುವ
ಕೋಲಾರ ಹಸಿರು ಶಿಲಾ ಶಿಷ್ಟ್ ಪಟ್ಟಿ





ಗಣಿಯ ಮೇಲಿರುವ ವಿದ್ಯುತ್ ಷೆಡ್ ಗಿಯರ್



ಜಾನ್ ಟೇಲರ್: 1880ರಲ್ಲಿ ಆಧುನಿಕ ಚಿನ್ನದ ಗಣಿಗಳನ್ನು ಪ್ರಾರಂಭಿಸಿದ ಗಣಿಗಳ ಪಿತಾಮಹ



ಲೆ. ಜಾನ್ ವಾರನ್ 1802ರಲ್ಲಿ ಮದ್ರಾಸ್ ಪ್ರೆಸಿಡೆನ್ಸ್ ಮತ್ತು ಮೈಸೂರು ಗಡಿಗಳ ಸಮೀಕ್ಷೆ ಪ್ರಾರಂಭಿಸಿದ್ದು ಈ ಯರ್ರಕೊಂಡ (ಬೆಟ್ಟ) ದಿಂದಲೇ



1880 ಮತ್ತು 1980ರ ವ್ಯತ್ಯಾಸ :
ಗಣಿಗಳ ಒಳಗೆ ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವುದು



ಮೈಸೂರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್
ಗಣಿಗಳನ್ನು ವೀಕ್ಷಿಸಲು ಬಂದಿರುವುದು



ಗಣಿಯ ಮೇಲಿರುವ ವಿದ್ಯುತ್ ಹೆಡ್ ಗಿಯರ್



ಮೊದಮೊದಲು ಮಾಡುತ್ತಿದ್ದ ಇನ್‌ಕ್ಲೈನ್ಡ್(ಓರೆ) ಶ್ಯಾಫ್ಟ್ :
ಹೆಡ್ ಗಿಯರ್, ಏಣಿ ಮತ್ತಿತರ ಸಲಕರಣೆಗಳನ್ನು ತೆಗೆದು ಹಾಕಲಾಗಿದೆ



ಪ್ರಪಂಚ ಮಹಾಯುದ್ಧಗಳು ನಡೆಯುತ್ತಿದ್ದ ಕಾಲದಲ್ಲಿ ಜನರ ರಕ್ಷಣೆಗಾಗಿ ನಿರ್ಮಿಸಿದ್ದ ಬಂಕರ್‌ನ ಬಾಗಿಲು : ಇದರಲ್ಲಿ ನೂರಾರು ಜನರು ಅವಿತುಕೊಳ್ಳಬಹುದಿತ್ತು



ಸಯೆನೈಡ್ ಗುಡ್ಡಗಳ ಮೇಲೆ ಮಣ್ಣು ಹರಿದುಹೋಗದಂತೆ ತಡೆಹಿಡಿಯಲು ಗಿಡಗಳನ್ನು ಬೆಳೆಸಿರುವುದು



ಪ್ರಪಂಚ ಮಹಾಯುದ್ಧಗಳಲ್ಲಿ ಪ್ರಾಣ ತೆತ್ತ
ಕೆಜಿಎಫ್‌ನ ವೀರಯೋಧರ ಸ್ಮಾರಕ



ರಾಬರ್ಟ್‌ಸನ್‌ಪೇಟೆಯ ಹೃದಯ ಭಾಗದಲ್ಲಿರುವ ಕಿಂಗ್ ಜಾರ್ಜ್ ಹಾಲ್:
ಕಿಂಗ್ ಜಾರ್ಜ್ ಕೆಜಿಎಫ್‌ಗೆ ಬಂದಿದ್ದರ ನೆನಪಿಗಾಗಿ 1915ರಲ್ಲಿ ಕಟ್ಟಿದ ಭವನ



ಸೆಂಟ್ ಮೆಥಾಡಿಸ್ಟ್ ಚರ್ಚ್



ಮದರ್ ಆಫ್ ಮೈನ್ಸ್ ವಿಗ್ರಹ



ಜಾನ್ ಟೇಲರ್ ಮಗನು ವಾಸಿಸುತ್ತಿದ್ದ ಬಂಗಲೆ



ಬಿಕೋ ಎನ್ನುತ್ತಿರುವ ಮುಖ್ಯ ಮೈನಿಂಗ್ ಕ್ಲಬ್



ಕೆಜಿಎಫ್‌ನ ಪ್ರಖ್ಯಾತ ವಿಕ್ಟರಿ ಚರ್ಚ್



ಭಾನುವಾರ ವಿಕ್ಟರಿ ಚರ್ಚ್‌ಗೆ ಬಂದಿರುವ ಪರಿವಾರಗಳು



ಕೆಜಿಎಫ್‌ನ ಪ್ರಥಮ ದರ್ಜೆ ಕಾಲೇಜು



ಚಾಂಪಿಯನ್‌ನಲ್ಲಿರುವ ಮಾರಿಯಮ್ಮ / ಉದ್ದಂಡಮ್ಮಾಲ್ ದೇವಾಲಯ



ಲಕ್ಷಾಂತರ ಟನ್ನುಗಳ ಅದಿರನ್ನು ಪುಡಿ ಪುಡಿ ಮಾಡಿ
ಕೊನೆಗೂ ಮೌನವಾಗಿರುವ ನಂದಿದುರ್ಗ ಮಿಲ್ಲು



ಚಿನ್ನದ ಅದಿರನ್ನು (ಶಿಲೆಗಳನ್ನು) ನುಜ್ಜಿ ಗುಜ್ಜೆಸೆದಿರುವ
ವಿಷಪೂರಿತ ಸಯೆನೈಡ್ ಮಣ್ಣು ಗುಡ್ಡೆಗಳು



ಮಳೆಗಾಲದಲ್ಲಿ ಸಯೆನೈಡ್ ಗುಡ್ಡಗಳ ಮಧ್ಯ
ಕುಸಿದಿರುವ ಹಳೆ (ಗಣಿ) ಶ್ಯಾಫ್ಟ್‌ಗಳು





ಸಯೆನೈಡ್ ಗುಡ್ಡಗಳ ಮೇಲಿನಿಂದ ಕಾಣಿಸುವ ರಾಬರ್ಟ್‌ಸನ್‌ಪೇಟೆ



ಬಾಗಿಲುಗಳನ್ನು ಮುಚ್ಚಿಕೊಂಡು ಮೌನವಾಗಿರುವ ಉರಿಗಾಂ ಗಣಿ ಆಸ್ಪತ್ರೆ



ಗಣಿ ಕಾಲೋನಿಗಳ ಮಧ್ಯ ಉಳಿದುಕೊಂಡಿರುವ ಒಂದು ಚಿಲ್ಲರೆ ಅಂಗಡಿ



ಉರಿಗಾಂ ಹತ್ತಿರ ಇರುವ ಗಣಿ ಕಾಲೋನಿ ಮನೆಗಳು



ರಾಬರ್ಟ್‌ಸನ್‌ಪೇಟೆ ಹೊಸ ಬಸ್‌ನಿಲ್ದಾಣದ ಮುಂಭಾಗ



ಬ್ರಾಡ್‌ಗೇಜ್ ರಸ್ತೆಯ ಉರಿಗಾಂ ರೈಲು ನಿಲ್ದಾಣ



ರಾಬರ್ಟ್‌ಸನ್‌ಪೇಟೆಯಲ್ಲಿರುವ ಮುನಸಿಪಲ್ ಆಸ್ಪತ್ರೆ



ಕೆಜಿಎಫ್‌ನ ಮೊದಲ ಮುನಸಿಪಲ್ ಬಾಯ್ಸ್ ಹೈಸ್ಕೂಲ್

ರಾಬರ್ಟ್‌ಸನ್‌ಪೇಟೆ





ಡಾ. ಎಂ. ವೆಂಕಟಸ್ವಾಮಿ ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕಿನ ಬ್ಯಾಟರಾಯನಹಳ್ಳಿಯಲ್ಲಿ ಜನಿಸಿದರು. ಇವರು ಪ್ರಪಂಚ ಪ್ರಖ್ಯಾತ ಕೋಲಾರ ಚಿನ್ನದ ಗಣಿಗಳ 'ಲಿಟ್ಲ್ ಇಂಗ್ಲೆಂಡ್' ಕಾರ್ಮಿಕರ ಬವಣೆಗಳನ್ನು ಹತ್ತಿರದಿಂದ ನೋಡಿದವರು. ಇವರು ಚಿನ್ನದ ಗಣಿಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ, ಈ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ಚಿನ್ನದ ಗಣಿಗಳ ಚಾರಿತ್ರಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ಸಾಮಾಜಿಕ-ಆರ್ಥಿಕತೆಯ ಬಗ್ಗೆ ಸಂಶೋಧನೆ ನಡೆಸಿದ್ದಾರೆ.

ಈ ಕೃತಿ ಒಂದು ವಿಶೇಷ ಅಧ್ಯಯನವಾಗಿದ್ದು ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ಸಾಹಿತ್ಯಸಕ್ತರಿಗೆ ಒಂದು ಉತ್ತಮ ಕೃತಿಯಾಗಿ ರೂಪುಗೊಂಡಿದೆ. ಈ ಆಧುನಿಕ ಚಿನ್ನದ ಗಣಿಗಳು 1880ರಲ್ಲಿ ಪ್ರಾರಂಭವಾಗಿ 2001ರಲ್ಲಿ ಮುಚ್ಚಲ್ಪಟ್ಟವು. ಈ ಗಣಿಗಳನ್ನು ತಾಯಿ ಗಣಿಗಳೆಂದು ಹೇಳಲಾಗುತ್ತದೆ. ಕಾರಣ ಈ ಗಣಿಗಳ ತಂತ್ರಜ್ಞಾನ ಮತ್ತು ತಂತ್ರಜ್ಞತೆಯಿಂದ ದೇಶದ ಅನೇಕ ಗಣಿಗಳು ಮತ್ತು ಕಾರ್ಖಾನೆಗಳು ಪ್ರಾರಂಭವಾಗಲು ಪ್ರೇರಣೆಯಾಗಿವೆ. ಈ ಗಣಿಗಳು ಈಗ ಗತವೈಭವದ ನೆನಪುಗಳು ಮಾತ್ರ.

ಭೂವಿಜ್ಞಾನದ ವಿದ್ಯಾರ್ಥಿಯಾದ ಡಾ. ಎಂ. ವೆಂಕಟಸ್ವಾಮಿ ಅವರು ಈ ಗಣಿಗಳ ಬಗ್ಗೆ ಸಮಗ್ರ ಅಧ್ಯಯನ ಮಾಡಿ ಕನ್ನಡದಲ್ಲಿ ರಚಿಸಿರುವ ಈ ಕೃತಿ ಅಪರೂಪ ಮತ್ತು ಶ್ಲಾಘನೀಯ.

– ನಿಡಸಾಲೆ ಪುಟ್ಟಸ್ವಾಮಯ್ಯ